ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಎರಡನೆಯ ಭಾಗ

(ಸಂಸ್ಕೃತಮೂಲ ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಸಾರಕಾಂಡ (೧೦—೧೩ ಸರ್ಗಗಳು)

ಯಾತ್ರಾಕಾಂಡ (೧—೯ ಸರ್ಗಗಳು)

ಅನುವಾದಕ:
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ
ಸಾಹಿತ್ಯ ವಿದ್ವಾನ್
ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

ಶ್ರೀ [illegible] ಪವರ್ ಪ್ರೆಸ್, ಮೈಸೂರು.

೧೯೪೭

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ

ಆನಂದರಾಮಾಯಣಂ

ಎರಡನೆಯ ಭಾಗ

(ಸಂಸ್ಕೃತಮೂಲ ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಸಾರಕಾಂಡ
(೧೦–೧೩ ಸರ್ಗಗಳು)

ಯಾತ್ರಾಕಾಂಡ
(೧–೯ ಸರ್ಗಗಳು)

ಅನುವಾದಕ:

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸು)

೧೯೪೭

॥ ಶ್ರೀರಸ್ತು ॥

ಪೀ ರಿ ಕೆ

ಶ್ರೀಮದಾನಂದರಾಮಾಯಣವನ್ನು ವಾಚಕರ ಅನುಕೂಲಕ್ಕೋಸ್ಕರ ಭಾಗಗಳನ್ನಾಗಿ ಮಾಡಿ ಅಚ್ಚುಹಾಕಿಸಬೇಕೆಂದು ಉದ್ದೇಶಿಸಿ ಸಾರಕಾಂಡದಲ್ಲಿ ಒಂದರಿಂದ ಒಂಭತ್ತನೆಯ ಸರ್ಗದವರೆಗೆ ಪೂರ್ತಿಯಾಗಿ ಸೇರಿಸಿ ಮೊದಲನೆಯ ಭಾಗವನ್ನು ಪ್ರಕಟಿಸಲಾಯಿತು.

ಈಗ ಸಾರಕಾಂಡದ ಉಳಿದ ನಾಲ್ಕು ಸರ್ಗಗಳನ್ನು ಮುಂದಿನದಾದ ಯಾತ್ರಾಕಾಂಡವನ್ನೂ ಸೇರಿಸಿ ಎರಡನೆಯ ಭಾಗವನ್ನು ಪ್ರಕಟಿಸಲಾಗಿದೆ.

ಇದರಲ್ಲಿ ಲಂಕೆಯ ವರ್ಣನೆಯೂ ಸುಗ್ರೀವಾದಿಗಳ ಪರಾಕ್ರಮವೂ ಪ್ರಕಟವಾಗಿ ವಿಭೀಷಣನ ವಿವೇಕವು ತಲೆದೂಗುವಂತಿರುತ್ತದೆ. ಆಂಜನೇಯ ವಾಲಿ ಸುಗ್ರೀವಾದಿಗಳ ಜನ್ಮ ವೃತ್ತಾಂತವು ಬಹು ಮನೋಹರವಾಗಿಯೂ ಆಶ್ಚರ್ಯಭರಿತವಾಗಿಯೂ ವರ್ಣಿತವಾಗಿದೆ.

ಶ್ರೀರಾಮನು ಲಂಕಾರಾಜ್ಯವನ್ನು ಶರಣಾಗತನಾದ ವಿಭೀಷಣನಿಗೆ ಕೊಟ್ಟು ತನ್ನ ಔದಾರ್ಯವನ್ನು ವ್ಯಕ್ತಪಡಿಸಿರುವನು. ಸಮುದ್ರರಾಜನು ಶ್ರೀರಾಮನನ್ನು ಮರೆಹೊಕ್ಕುದನ್ನು ನೋಡಿದರೆ ರಾಮನ ಮನುಷ್ಯತ್ವವು ಕೊಂಚಮಟ್ಟಿಗೆ ಮರೆಯಾಗುವುದು.

ಅಂಗದ ಸುಗ್ರೀವಾದಿಗಳು ರಾವಣನಿಗೆ ಮಾಡಿದ ಅವಮಾನವನ್ನು ನೋಡಿದರೆ ಅವರೊಬ್ಬೊಬ್ಬರೇ ಆ ರಾವಣನನ್ನು ಕೊಲ್ಲಲು ಸಮರ್ಥರು ಎಂಬುದು ತೋರಿ ಮಾಲ್ಯವಂತನ ಬುದ್ಧಿವಾದವನ್ನು ರಾವಣನು ತಿರಸ್ಕರಿಸುವುದರಿಂದ ಅವನ ಮೂರ್ಖತನವು ಎಲ್ಲೆ ಮೀರಿದುದೆಂದೂ ಕಾಣುವುದು.

ಶ್ರೀರಾಮನನ್ನು ಸಂಹರಿಸಲು ರಾವಣನು ಬಹುವಾಗಿ ಪ್ರಯತ್ನಿಸಿದರೂ ಅವನ ಪ್ರಯತ್ನಗಳು ವಿಫಲವಾಗಿ ಕೊನೆಗೆ ಐರಾವಣ ಮೈರಾವಣರ ಸಹಾಯವೂ ಫಲಕಾರಿಯಾಗಲಿಲ್ಲವೆಂದಮೇಲೆ ಕಾರ್ಯಸಾಧನಕ್ಕೂ ಒಂದು ಅದೃಷ್ಟ ಕಾಲವಿಶೇಷಗಳು ಬೇಕೆಂಬುದು ಮನಸ್ಸಿಗೆ ಬಾರದಿರಲಾರದು.

ಶ್ರೀರಾಮನು ರಾವಣನನ್ನು ಕೊಂದು ಮತ್ತೆ ಅಯೋಧ್ಯೆಗೆ ಪರಿವಾರದೊಡನೆ ಬಂದು ಪಟ್ಟಾಭಿಷಿಕ್ತನಾಗುವನು. ಶಿವನೇ ಮುಂತಾದವರು ಅವನನ್ನು ಸ್ತುತಿಸುವರು. ಅನಂತರ ರಾಮನು ಎಲ್ಲರೊಡನೆಯೂ ಸುಖದಿಂದಿರುವನು.

ರಾವಣನನ್ನು ಕೊಂದುದು ಬಹು ಸಾಮರ್ಥ್ಯದ ಕೆಲಸವಲ್ಲವೆಂದೂ ಅವನಿಗಿಂತಲೂ ಅವನ ಮಗನಾದ ಮೇಘನಾದನು ಬಹು ಸಮರ್ಥನೆಂದೂ ಅಗಸ್ತ್ಯನ ವಾಕ್ಯದಿಂದ ದೃಢೀಕೃತವಾಗುತ್ತದೆ.

ವಾಲಿ ಸುಗ್ರೀವ ಹನುಮಂತರ ಉತ್ಪತ್ತಿಯು ಬಹು ಆಶ್ಚರ್ಯಕರವಾಗಿ ಪರಿಣಮಿಸಿ ಹನುಮಂತನು ರಾಮ ಲಕ್ಷ್ಮಣ ಭರತ ಶತ್ರುಘ್ನರ ಜೊತೆಯಲ್ಲಿರಲು ಆ ಪಾಯಸದ ಭಾಗವೇ ಕಾರಣವೆಂಬುದು ತೋರಿ "ಅಣ್ಣತಮ್ಮಂದಿರು ಎಲ್ಲಿದ್ದರೂ ಒಂದಾಗುವರು" ಎಂಬ ನಾಣ್ಣುಡಿಯನ್ನು ಭದ್ರಪಡಿಸುತ್ತದೆ.

ಶ್ರೀರಾಮನು ಅಗಸ್ತ್ಯನ ಮಾತಿನಂತೆ ಯಾತ್ರೆಗಳನ್ನು ಮಾಡುತ್ತ ತಾನು ರಾವಣನ ವಧೆಯಿಂದ ಬಂದ ಪಾಪವನ್ನು ಕಳೆದುಕೊಳ್ಳುವುದಂತಿರಲಿ, ಆ ಕ್ಷೇತ್ರಗಳಿಗೆ ತನ್ನಿಂದ ಪವಿತ್ರತೆಯೂ ಕೀರ್ತಿಯೂ ಬರುವಂತೆ ಮಾಡಿರುವನು. ಹೀಗೆ ಮಾಡಿದುದು ಲೋಕೋಪಕಾರವಾಯಿತಲ್ಲದೆ ಈತನು ಸಂಚರಿಸಿದ ಪುಣ್ಯ ಕ್ಷೇತ್ರಗಳ ಮಹಾತ್ಮ್ಯೆಯು ಈಗಲೂ ಅಚ್ಚಳಿಯದಂತಿದೆ.

ಆ ರಾಮನು ತೀರ್ಥಯಾತ್ರೆಗೋಸ್ಕರ ಬಂದ ಶ್ರೀರಂಗಪಟ್ಟಣ ಸಾಲಿಗ್ರಾಮ ಮುಂತಾದ ತೀರ್ಥಪ್ರದೇಶಗಳು ನಮ್ಮ ದೇಶದಲ್ಲಿವೆ. ಅವು ಈಗಲೂ ಬೆಳಗುತ್ತಿರುತ್ತವೆ, ಎಂಬುದೊಂದು ನಮ್ಮ ಹೆಮ್ಮೆಯ ಮಾತು.

ಧರ್ಮವನ್ನು ಮಾಡಬೇಕೆಂಬುದು ಹುಟ್ಟಿದ ಪ್ರತಿಯೊಂದು ಪ್ರಾಣಿಗೂ ಇಷ್ಟವಾದುದು. ಆದರೆ ತಾನು ಮಾಡಿದ ಆ ಧರ್ಮವನ್ನು ಎಲ್ಲರೊಡನೆಯೂ ಹೇಳಿ ಪ್ರಸಿದ್ಧನಾಗಲು ಪ್ರಯತ್ನಿಸುವುದೂ ಸ್ವಭಾವವಾಗಿ ಬಂದುದು.

ಆದರೆ ಇದರಿಂದ ಕೀರ್ತಿಯು ಒಂದುವೇಳೆ ಹೆಚ್ಚುವುದಾದರೂ ಹಾಗೆ ಹೇಳುವುದರಿಂದ ಧರ್ಮವು ನಾಶವಾಗುವುದು ಎಂಬ ಧರ್ಮಸೂಕ್ಷ್ಮವನ್ನು ಶ್ರೀರಾಮನು ತಾನು ಆಚರಿಸಿ ಪ್ರಚಾರಕ್ಕೆ ತಂದಿರುವನು.

ಶ್ರೀರಾಮನು ತೀರ್ಥಯಾತ್ರೆಗಳನ್ನು ಮಾಡುತ್ತಿರುವಾಗ ಕರತೋಯಾ ನದಿಯು ಸಿಕ್ಕುವುದು. ಆಗ

ಕರ್ಮನಾಶನದೀಸ್ಪರ್ಶಾತ್ ಕರತೋಯಾವಿಲಂಘನಾತ್ ।
ಗಂಡಕೀಬಾಹುತರಣಾತ್ ಧರ್ಮಸ್ಸ್ಖಲತಿ ಕೀರ್ತನಾತ್ ॥

" ಕರ್ಮನಾಶನದಿಯ ನೀರನ್ನು ಮುಟ್ಟುವುದರಿಂದಲೂ ಕರತೋಯಾ ನದಿಯನ್ನು ಕಾಲಿನಿಂದ ದಾಟುವುದರಿಂದಲೂ ಗಂಡಕೀನದಿಯನ್ನು ಈಜಿಕೊಂಡು ದಾಟುವುದರಿಂದಲೂ ತಾನು ಮಾಡಿದ ಧರ್ಮವನ್ನು ಬಾಯಲ್ಲಿ ಹೇಳಿಕೊಳ್ಳುವುದರಿಂದಲೂ ತಾನು ಮಾಡಿದ ಧರ್ಮವು ನಾಶವಾಗುತ್ತದೆ. " ಎಂಬ ಶಾಸ್ತ್ರವು ಜ್ಞಾಪಕಕ್ಕೆ ಬಂದು ಅದನ್ನು ದಾಟದೆ ಹಿಂದಿರುಗುವನು.

ಸರ್ವಶಕ್ತನಾದ ಆ ಸ್ವಾಮಿಯೇ ಈ ರೀತಿಯಾಗಿ ನುಡಿದು ನಡೆದು ತೋರಿಸಿರುವಲ್ಲಿ ಅಂತೆಯೇ ನಾವೂ ಆಚರಿಸುವುದು ಶ್ರೇಯಸ್ಸಾಧನವಲ್ಲವೆ! ಅಂತೆಯೇ ನಾವು ಆಚರಿಸಿ ಕೃತಾರ್ಥರಾಗಬೇಕಾದುದು ನಮ್ಮ ಕರ್ತವ್ಯವೆಂದು ಅರಿತು ಹಾಗೆ ಮಾಡಲು ಪ್ರಯತ್ನಿಸುವುದು ನಮ್ಮ ಧರ್ಮ.

ವಿಷಯುಗಳು ಬೇರೆಯ ಭಾಷೆಗಳಲ್ಲಿ ಅನೇಕವಾಗಿದ್ದು ಅವು ಹಳೆಯ ವಾಗಿದ್ದರೂ ನಮಗೆ ತಿಳಿಯದವಗಳಾಗಿವೆ. ಇಂತಹವುಗಳನ್ನು ಕನ್ನಡದಲ್ಲಿ ತಿಳಿಯುವಂತೆ ಮಾಡಿ ಕನ್ನಡಕ್ಕೆ ಪ್ರೋತ್ಸಾಹವನ್ನು ಕೊಡುತ್ತಿರುವ ನಮ್ಮನ್ನಾಳುವ

ಶ್ರೀಮನ್ಮಹಾರಾಜರಾಗಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರದೇವನು ಪುತ್ರಪೌತ್ರಾಭಿವೃದ್ಧಿಯನ್ನೂ ಇತರ ಸನ್ಮಂಗಳಗಳನ್ನೂ ದಯಪಾಲಿಸಿ ಕಾಪಾಡಲೆಂದು ಅನನ್ಯಮನಸ್ಕನಾಗಿ ಪ್ರಾರ್ಥಿಸುತ್ತೇನೆ.

ಮೈಸೂರು,
8—7—1947

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.



|| ಶ್ರೀರಸ್ತು ||

ಶ್ರೀ ಮ ದಾ ನಂ ದ ರಾ ಮಾ ಯ ಣ ದ ಲ್ಲಿ ಸಾ ರ ಕಾಂ ಡ ದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಹನ್ನೆರಡನೆಯ ಸರ್ಗವು

ಹದಿಮೂರನೆಯ ಸರ್ಗವು

॥ ಶ್ರೀರಸ್ತು ॥

ಶ್ರೀ ಮ ದಾ ನ ೦ ದ ರಾ ಮಾ ಯ ಣ ದ ಲ್ಲಿ ಯಾ ತ್ರಾ ಕಾ ೦ ಡ ದ
ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಪುಟಸಂಖ್ಯೆ

ಆರನೆಯ ಸರ್ಗವು

ಏಳನೆಯ ಸರ್ಗವು



ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ
ಪ್ರೊಪ್ರೈಟರ್ ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. ತಾ॥ 8-7-47

॥ ಶ್ರೀರಸ್ತು ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

॥ ಸಾರಕಾಂಡೇ ದಶಮಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥಾಹ ಮಾರುತಿಂ ರಾಮೋ ಮಾಂ ವದಸ್ವ ಸವಿಸ್ತರಂ ।
ಲಂಕಾಸ್ವರೂಪಂ ತತ್ ಜ್ಞಾತ್ವಾ ಪ್ರತೀಕಾರಂ ಕರೋಮ್ಯಹಂ ॥ ೧ ॥

ತದ್ರಾಮವಚನಂ ಶ್ರುತ್ವಾ ಕಥಯಾಮಾಸ ಮಾರುತಿಃ ।
ಲಂಕಾ ದಿವ್ಯಪುರೀ ದೇವ ತ್ರಿಕೂಟಶಿಖರೇ ಸ್ಥಿತಾ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

ಹತ್ತನೆಯ ಸರ್ಗವು

೧. ಶ್ರೀ ಶಿವನು ಹೇಳಿದನು—ಅನಂತರ ಶ್ರೀರಾಮನು ಎಲೈ ಮಾರುತಿಯೆ! ನನಗೆ ಲಂಕೆಯ ಸ್ವರೂಪವನ್ನು ವಿಸ್ತಾರವಾಗಿ ಹೇಳು. ಅದನ್ನು ಕೇಳಿ ಅನಂತರ ಅದಕ್ಕೆ ಸರಿಯಾದ ಪ್ರತೀಕಾರವನ್ನು ಮಾಡುತ್ತೇನೆ ಎಂದು ಮಾರುತಿಯನ್ನು ಕೇಳಿದನು.

೨. ರಾಮನ ಆ ಮಾತುಗಳನ್ನು ಕೇಳಿ ಮಾರುತಿಯು ಇಂತೆಂದು ಹೇಳಿದನು. ದೇವ! ಲಂಕೆಯು ದಿವ್ಯವಾದ ಪಟ್ಟಣವು. ತ್ರಿಕೂಟಾಚಲದ ಮೇಲಿದೆ.

ಸ್ವರ್ಣಪ್ರಾಕಾರಸಹಿತಾ ಸ್ವರ್ಣಹಟ್ಟಾಲ ಸಂಯುತಾ ।
ಪರಿಖಾಭಿಃ ಪರಿವೃತಾ ಪೂರ್ಣಾಭಿರ್ನಿರ್ಮಲೋದಕೈಃ ॥ ೩ ॥

ನಾನೋಪವನ ಶೋಭಾಢ್ಯಾ ದಿವ್ಯವಾಪೀಭಿರಾವೃತ ।
ಗೃಹೈರ್ವಿಚಿತ್ರ ಶೋಭಾಢ್ಯೈರ್ಮಣಿಸ್ತಂಭ ಮಯೈಶ್ಶುಭೈಃ ॥ ೪ ॥

ಪಶ್ಚಿಮದ್ವಾರಮಾಸಾದ್ಯ ರಾಜವಾಹಸ್ಸಹಸ್ರಶಃ ।
ಉತ್ತರದ್ವಾರಿ ತಿಷ್ಠಂತಿ ವಾಜಿವಾಹಾಸ್ಸಪತ್ತಯಃ ॥ ೫ ॥

ತಿಷ್ಠಂತ್ಯರ್ಬುದಸಂಖ್ಯಾತಾಃ ಪ್ರಾಚ್ಯಾಮಪಿ ತಥೈವ ಚ ।
ರಥಿನೋ ರಾಕ್ಷಸಾ ವೀರಾ ದ್ವಾರಂ ದಕ್ಷಿಣಮಾಶ್ರಿತಾಃ ॥ ೬ ॥

---

೩. ಚಿನ್ನದ ಕೋಟೆಗಳಿಂದ ಕೂಡಿಕೊಂಡು ಚಿನ್ನದ ಕುರುಜುಳಿಂದ ಕೂಡಿದೆ. ಸುತ್ತಲೂ ಕಂದಕಗಳಿವೆ. ಆ ಕಂದುಕಗಳನ್ನು ನೀರಿನಿಂದ ತುಂಬಿದ್ದಾರೆ.

೪. ಅನೇಕವಾದ ಉಪವನಗಳಿವೆ ಉತ್ತಮವಾದ ಬಾವಿಗಳಿವೆ. ವಿಚಿತ್ರವಾದ ಮನೆಗಳಿವೆ. ಅವುಗಳಲ್ಲಿ ಮಣಿಯಿಂದ ಕೆತ್ತಿದ ಕಂಬಗಳಿವೆ.

೫. ಆ ಪಟ್ಟಣದ ಪಶ್ಚಿಮದ ಬಾಗಿಲಿನಲ್ಲಿ ಸಾವಿರಾರು ಜನರು ಆನೆಯಮೇಲೆ ಕುಳಿತು ಕಾಯುತ್ತಿರುವರು. ಉತ್ತರದ ಬಾಗಿಲಿನಲ್ಲಿ ಸಾವಿರಾರು ಜನರು ಕುದುರೆಗಳಮೇಲೆ ಕುಳಿತು ಕಾಯುತ್ತಿರುವರು.

೬. ಪೂರ್ವದಿಕ್ಕಿನ ಬಾಗಿಲಿನಲ್ಲಿಯೂ ಅರ್ಬುದ ಸಂಖ್ಯೆಯ ಕುದುರೆಗಳೂ ಕಾಲಾಳುಗಳೂ ಇದ್ದಾರೆ. ದಕ್ಷಿಣದ ಬಾಗಿಲಿನಲ್ಲಿ ರಥವನ್ನಿಟ್ಟುಕೊಂಡು ವೀರರಾದ ರಾಕ್ಷಸರು ಅರ್ಬುದ ಸಂಖ್ಯೆಯಲ್ಲಿ ಕಾಯುತ್ತಿರುವರು.

ಮಧ್ಯಕಕ್ಷ್ಯೇಽಪ್ಯಸಂಖ್ಯಾತಾ ಗಜಾಶ್ವರಥಪತ್ತಯಃ ।
ರಕ್ಷಯಂತಿ ಸದಾ ಲಂಕಾಂ ನಾನಾಸ್ತ್ರ ಕುಶಲಾಃ ಪ್ರಭೋ ॥ ೭ ॥

ಸಂಕ್ರಮೈರ್ವಿವಿಧೈರ್ಲಂಕಾ ಶತಘ್ನೀಭಿಶ್ಚ ಸಂಯುತಾ ।
ಏವಂ ಸ್ಥಿತಾಯಾಂ ದೇವೇಶ ಶ್ರುಣು ತ್ವದ್ದಾಸಚೇಷ್ಟಿತಂ ॥ ೮ ॥

ದಶಾನನಬಲೌಘಸ್ಯ ಚತುರ್ಥಾಂಶೋ ಮಯಾ ಹತಃ ।
ದಗ್ಧಾ ಲಂಕಾಪುರೀ ಸ್ವರ್ಣಪ್ರಾಕಾರೋ ಧರ್ಷಿತೋ ಮಯಾ ॥ ೯ ॥

ಶತಘ್ನ್ಯಸ್ಸಂಕ್ರಮಾಶ್ಚೈವ ನಾಶಿತಾ ಮೇ ರಘೂದ್ವಹ ।
ದೇವ ತ್ವದ್ದರ್ಶನಾದೇವ ಲಂಕಾ ಭಸ್ಮೀಭವೇತ್ಪುನಃ ॥ ೧೦ ॥

---

೭. ಮಧ್ಯಭಾಗದಲ್ಲಿಯೂ ಅಸಂಖ್ಯೆಯಾದ ಆನೆ, ಕುದುರೆ, ರಥ, ಕಾಲಾಳುಗಳಿದ್ದಾರೆ. ಬಗೆಬಗೆಯ ಅಸ್ತ್ರಗಳಲ್ಲಿ ಕುಶಲರಾದವರು ಆ ಲಂಕೆಯನ್ನು ಯಾವಾಗಲೂ ಕಾಯುತ್ತಿದ್ದಾರೆ.

೮. ಆ ದುರ್ಗದ ಮಾರ್ಗದಲ್ಲಿ ಅನೇಕವಾದ ಫಿರಂಗಿಗಳನ್ನಿಟ್ಟಿರುವರು ಮತ್ತು ಕಂದಕಗಳಿಗೆ ಬಗೆಬಗೆಯಾದ ಕೈಸೇತುವೆಗಳಿರುವುವು. ಈ ರೀತಿಯಾಗಿರುವ ಆ ಲಂಕೆಯಲ್ಲಿ ನಿನ್ನ ದಾಸನು ಮಾಡಿದ ಕೆಲಸವನ್ನು ಕೇಳು.

೯. ದಶಾನನನ ಸೈನ್ಯದಲ್ಲಿ ನಾಲ್ಕನೆಯ ಒಂದು ಪಾಲನ್ನು ನಾನೇ ಕೊಂದುಹಾಕಿದೆನು. ಲಂಕಾಪಟ್ಟಣವನ್ನೆಲ್ಲಾ ಸುಟ್ಟೆನು ಆ ಚಿನ್ನದ ಕೋಟೆಯನ್ನು ಒಡೆದೆನು.

೧೦. ಫಿರಂಗಿಗಳನ್ನೂ ಸೇತುವೆಗಳನ್ನೂ ನಾಶಮಾಡಿದೆನು. ಎಲೈ ದೇವನೆ ! ನಿನ್ನ ದರ್ಶನಮಾತ್ರದಿಂದಲೇ ಆ ಲಂಕೆಯು ಮತ್ತೆ ಭಸ್ಮವಾಗುತ್ತದೆ.

ಸುವೇಲಾದ್ರಿಶ್ಚೋತ್ತರೇಸ್ತಿ ಪರಲಂಕಾಸ್ತಿ ಪಶ್ಚಿಮೇ ।
ನಿಕುಂಭಿಲಾ ದಕ್ಷಿಣೇಸ್ತಿ ತತ್ರೈವ ಯೋಗಿನೀವಟಃ ॥ ೧೧ ॥

ಪೂರ್ವೇ ಚ ಲಘುಲಂಕಾಸ್ತಿ ಸಾ ಮಧ್ಯೇ ಕಾಂತಿಮಂಡಿತಾ ।
ತ್ರಿಕೂಟಶಿಖರೇ ರಮ್ಯಾ ಮತ್ಪುಚ್ಛಾನಲಧರ್ಷಿತಾ ॥ ೧೨ ॥

ಪ್ರಸ್ಥಾನಂ ಕುರು ದೇವೇಶ ಗಚ್ಛಾವೋ ಲವಣಾರ್ಣವಂ ।
ತನ್ಮಾರುತೇರ್ವಚಶ್ಶ್ರುತ್ವಾ ಸುಗ್ರೀವಂ ಪ್ರಾಹ ರಾಘವಃ ॥ ೧೩ ॥

ಸುಗ್ರೀವ ಸೈನಿಕಾನ್ಸರ್ವಾನ್ ಪ್ರಸ್ಥಾನಾಯಾಭಿಚೋದಯ ।
ಇದಾನೀಮೇವ ವಿಜಯೋ ಮುಹೂರ್ತಸ್ತ್ವದ್ಯ ವರ್ತತೇ ॥ ೧೪ ॥

---

೧೧. ಆ ಲಂಕೆಯ ಉತ್ತರದಲ್ಲಿ ಸುವೇಲಪರ್ವತವೂ ಪಶ್ಚಿಮದಲ್ಲಿ ಪರಲಂಕೆಯೂ ದಕ್ಷಿಣದಲ್ಲಿ ನಿಕುಂಭಿಲೆಯೂ ಯೋಗಿನೀವಟವೆಂಬ ಆಲದಮರವೂ ಇವೆ.

೧೨. ಪೂರ್ವದಿಕ್ಕಿನಲ್ಲಿ ಲಘುಲಂಕೆಯಿದೆ. ಈ ಮಧ್ಯದಲ್ಲಿ ಕಾಂತಿಯಿಂದ ಕೂಡಿದ ಲಂಕೆಯಿರುವುದು. ಅದು ತ್ರಿಕೂಟಾಚಲದ ಮೇಲಿದೆ. ಅದನ್ನೇ ನಾನು ನನ್ನ ಬಾಲದ ಬೆಂಕಿಯಿಂದ ಸುಟ್ಟಿರುವೆನು.

೧೩. ದೇವನೆ! ಪ್ರಯಾಣವನ್ನು ಬೆಳೆಸು. ಲವಣಸಮುದ್ರದ ದಡಕ್ಕೆ ಹೋಗೋಣ. ಎಂದು ಹೇಳಲು ಮಾರುತಿಯ ಈ ಮಾತನ್ನು ಕೇಳಿ ರಾಮನು ಸುಗ್ರೀವನನ್ನು ಕುರಿತು ಇಂತೆಂದನು.

೧೪. ಎಲೈ ಸುಗ್ರೀವನೆ! ಎಲ್ಲಾ ಸೈನ್ಯವನ್ನೂ ಪ್ರಯಾಣಕ್ಕೆ ಸಿದ್ಧಪಡಿಸು. ಈ ದಿನದಲ್ಲಿ ಈ ಗಳಿಗೆಯಲ್ಲಿಯೇ ವಿಜಯವೆಂಬ ಮೂಹೂರ್ತವಿರುವುದು.

ಆಶ್ವಿನೀ ಶುಕ್ಲದಶಮೀ ಶ್ರವಣರ್ಕ್ಷಸಮನ್ವಿತಾ |
ಶುಭಾದ್ಯ ವಾನರಶ್ರೇಷ್ಠ ಗಚ್ಛಾಮೋ ಲವಣಾರ್ಣವಂ || ೧೫ ||

ರಕ್ಷಂತು ಯೂಥಪಾಸ್ಸೇನಾಮಗ್ರೇ ಪೃಷ್ಠೇ ಚ ಪಾರ್ಶ್ವಯೋಃ |
ನಲೋ ಭವತ್ವಗ್ರಸರಃ ಪೃಷ್ಠೇ ನೀಲೋದ್ಯ ರಕ್ಷತು || ೧೬ ||

ಸುಷೇಣಸ್ಸವ್ಯಪಾರ್ಶ್ವೇ ಮೇ ಜಾಂಬವಾನಿತರೇ ಮಮ |
ಗಜೋ ಗವಾಕ್ಷೋ ಗವಯೋ ಮೈಂದಶ್ಚೇತೋದ್ಯ ವಾನರಾಃ || ೧೭ ||

ವಹ್ನಿ ನೈರುತವಾಯ್ವೀಶ ಚತುರ್ದಿಕ್ಷು ಸಮಂತತಃ |
ರಕ್ಷಂತು ವಾನರೀಂ ಸೇನಾಂ ದ್ವಿವಿದಾದ್ಯಾಸ್ತಥಾಪರೇ || ೧೮ ||

ಸರ್ವೇ ಗಚ್ಛಂತು ಸರ್ವತ್ರ ಸೇನಾಯಾಶ್ಶತ್ರುಘಾತಿನಃ |
ಆರುಹ್ಯ ಮಾರುತಿಂ ಚಾಹಂ ಗಚ್ಛಾಮ್ಯಗ್ರೇಂಗದಂ ತತಃ || ೧೯ ||

---

೧೫. ಈ ದಿನವು ಆಶ್ವಯುಜ ಶುದ್ಧ ದಶಮಿಯು ಶ್ರವಣನಕ್ಷತ್ರವು ಬಂದಿರುವುದು. ಈ ದಿನವು ಬಹು ಶುಭವಾದುದು. ಈಗಲೇ ಲವಣಸಮುದ್ರದ ಬಳಿಗೆ ಹೋಗೋಣ.

೧೬. ಸೇನಾಪತಿಗಳು ಸೇನೆಯನ್ನು ಹಿಂದೆಯೂ ಮುಂದೆಯೂ ಎಡಬಲಗಳಲ್ಲಿಯೂ ಕಾಪಾಡಿಕೊಂಡು ಬರಲಿ ನಳನು ಮುಂದೆ ಹೋಗಲಿ ಹಿಂದೆ ನೀಲನು ಕಾಪಾಡಿಕೊಂಡು ಬರಲಿ.

೧೭–೧೮. ಸುಷೇಣನು ಬಲಗಡೆಯಲ್ಲಿ ಬರಲಿ. ಜಾಂಬವನು ಎಡಗಡೆಯಲ್ಲಿ ಬರಲಿ. ಗಜ, ಗವಾಕ್ಷ, ಗವಯ, ಮೈಂದರುಗಳು ಆಗ್ನೇಯ ನೈರುತ್ಯ ವಾಯವ್ಯ ಈಶಾನ್ಯ ಈ ನಾಲ್ಕು ದಿಕ್ಕುಗಳಲ್ಲಿಯೂ ಬರಲಿ. ದ್ವಿವಿದನೇ ಮುಂತಾದವರು ಈ ಕಪಿಸೈನ್ಯವನ್ನು ಕಾಪಾಡುತ್ತ ಬರಲಿ. ಇವರು ಸೇನೆಯನ್ನು ಎಲ್ಲಾ ಕಡೆಯಲ್ಲಿಯೂ ನೋಡಿಕೊಂಡು ಬರಲಿ.

೧೯–. ನಾನು ಹನುಮಂತನ ಮೇಲೆ ಕುಳಿತುಕೊಂಡು ಮುಂದೆ ಹೊರಡುತ್ತೇನೆ. ಅಂಗದನಮೇಲೆ ಲಕ್ಷ್ಮಣನು ಕುಳಿತು ನನ್ನ ಹಿಂದೆಬರಲಿ.

ಆರುಹ್ಯ ಲಕ್ಷ್ಮಣೋ ಯಾತು ಸುಗ್ರೀವ ತ್ವಂ ಮಯಾ ಸಹ ।
ಆಗಚ್ಛಸ್ವೇತಿ ಚಾಜ್ಞಾಪ್ಯ ಹರೀನ್ ರಾಮಸ್ಸಲಕ್ಷ್ಮಣಃ ॥ ೨೦ ॥

ಪ್ರತಸ್ಥೇ ದಕ್ಷಿಣಾಶಾಯಾಂ ಸೇನಾಮಧ್ಯಗತೋ ವಿಭುಃ ।
ತದಾ ತೇ ಕಪಯಶ್ಚಕ್ರುರ್ಬುಭುಃ ಕಾರಾನ್ ಭಯಾನಕಾನ್ ॥ ೨೧ ॥

ವಾದಯಾಮಾಸುರ್ವಾದ್ಯಾನಿ ಪಣವಾನಕಗೋಮುಖೈಃ ।
ವಾರಣೇಂದ್ರ ನಿಭಾಸ್ಸರ್ವೇ ವಾನರಾಃ ಕಾಮರೂಪಿಣಃ ॥ ೨೨ ॥

ಗತಾಸ್ತದಾ ದಿವಾರಾತ್ರಂ ಕ್ವಚಿತ್ತಸ್ಥುರ್ನ ತೇ ಕ್ಷಣಂ ।
ಅಭವಚ್ಛಕುನಾ ಲಂಕಾಂ ಗಚ್ಛತೋ ರಾಘವಸ್ಯ ಹಿ ॥ ೨೩ ॥

---

೨೦. ಎಲೈ ಸುಗ್ರೀವನೆ! ನೀನು ನನ್ನ ಜೊತೆಯಲ್ಲಿ ಬಾ. ಎಂಬುದಾಗಿ ರಾಮನು ಆ ಕಪಿಗಳಿಗೆ ಅಜ್ಞೆ ಮಾಡಿದನು.

೨೧. ಈ ರೀತಿಯಾಗಿ ವ್ಯವಸ್ಥೆಮಾಡಿ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದನು. ಆ ರಾಮನು ಈ ಕಪಿಸೈನ್ಯದ ಮಧ್ಯದಲ್ಲಿದ್ದನು. ಆಗ ಆ ಕಪಿಗಳು ಭು ಭು ಎಂದು ಭಯಂಕರವಾಗಿ ಗರ್ಜಿಸಿದುವು.

೨೨. ಅನೇಕವಿಧವಾದ ವಾದ್ಯಗಳನ್ನು ಬಾಜಿಸಿದುವು. ಆನಕ ದುಂದುಭಿ ಗೋಮುಖಗಳನ್ನು ಬಾರಿಸಿದರು. ಈ ಕಪಿಗಳೆಲ್ಲರೂ ಮದ್ದಾನೆಗಳಂತಿದ್ದರು. ಎಲ್ಲರೂ ಕಾಮರೂಪಿಗಳು.

೨೩. ಹೀಗೆ ಇವರೆಲ್ಲರೂ ಹೊರಟು ಹಗಲೂ ರಾತ್ರಿಯೂ ಪ್ರಯಾಣ ಮಾಡಿದರು. ಒಂದು ಜಾಗದಲ್ಲಿಯೂ ಒಂದು ಕ್ಷಣವೂ ಕುಳಿತುಕೊಳ್ಳಲಿಲ್ಲ ಲಂಕೆಗೆ ಹೋಗುತ್ತಿರುವ ಆ ರಾಘವನಿಗೆ ಆಗ ಶುಭ ಶಕುನಗಳಾದುವು.

ತೇ ಸಹ್ಯಂ ಸಮತಿಕ್ರಮ್ಯ ಮಲಯಂ ಚ ತಥಾ ಗಿರಿಂ ।
ಆಯಯುಶ್ಚಾನುಪೂರ್ವ್ಯೇಣ ತೇ ಸರ್ವೇ ದಕ್ಷಿಣಾರ್ಣವಂ ॥ ೨೪ ॥

ಕೃತಸ್ಸೇನಾನಿವಾಸಶ್ಚ ರಾಘವೇಣಾಬ್ಧಿಸೈಕತೇ ।
ಚಕ್ರುರ್ಮಂತ್ರಂ ಸಾಗರಸ್ಯ ತರಣಾರ್ಥಂ ಪ್ಲವಂಗಮಾಃ ॥ ೨೫ ॥

ಲಂಕಾಯಾಂ ವಾಯುಪುತ್ರೇಣ ಕೃತಂ ದೃಷ್ಟ್ವಾ ಸ ರಾವಣಃ ।
ಪ್ರಹಸ್ತಾದೀಂಸ್ತದಾ ಪ್ರಾಹ ಕಥಮಗ್ರೇ ಭವಿಷ್ಯತಿ ॥ ೨೬ ॥

ಏಕೇನೈಕಕಪಿನಾಸ್ಮಾಕಂ ಪುರತೋ ಜ್ವಾಲಿತಾ ಪುರೀ ।
ದೃಷ್ಟಾ ಸೀತಾ ವನಂ ಭಗ್ನಂ ರಾಕ್ಷಸಾ ನಿಹತಾ ರಣೇ ॥ ೨೭ ॥

---

೨೪. ಅವರು ಹಾಗೆ ಪ್ರಯಾಣಮಾಡುತ್ತ ಸಹ್ಯ ಮಲಯ ಪರ್ವತಗಳನ್ನು ದಾಟಿದರು. ಕೊನೆಗೆ ಕ್ರಮವಾಗಿ ಹೊರಟು ದಕ್ಷಿಣಸಮುದ್ರದ ತೀರಕ್ಕೆ ಬಂದರು.

೨೫. ರಾಘವನು ಆ ಸಮುದ್ರದ ಮರಳಿನಮೇಲೆ ಸೇನೆಯ ಶಿಬಿರವನ್ನು ಬಿಡಿಸಿದನು ಆಗ ಕಪಿಗಳೆಲ್ಲರೂ ಸೇರಿ ಆ ಸಮುದ್ರವನ್ನು ದಾಟಲು ಉಪಾಯವನ್ನು ಯೋಚಿಸುವುದಕ್ಕೆ ಮೊದಲು ಮಾಡಿದರು.

೨೬. ಇತ್ತ ಲಂಕೆಯಲ್ಲಿ ಮಾರುತಿಯು ಮಾಡಿದ ಅಗಾಧವಾದ ಕೆಲಸಗಳನ್ನು ನೋಡಿ ರಾವಣನು ಪ್ರಹಸ್ತನೇ ಮೊದಲಾದ ಮಂತ್ರಿಗಳನ್ನು ಕರೆಸಿ ಮುಂದೇನಾಗುತ್ತದೆ ? ಏನುಮಾಡಬೇಕು ? ಎಂಬುದಾಗಿ ಕೇಳಿದನು.

೨೭. ಒಂದೇ ಒಂದು ಕಪಿಯು ನಮ್ಮ ಕಣ್ಣೆದುರಿಗೇ ಪಟ್ಟಣವನ್ನೇ ಸುಟ್ಟುಬಿಟ್ಟಿತು. ಸೀತೆಯನ್ನು ನೋಡಿಕೊಂಡಿತು. ವನವೆಲ್ಲವನ್ನೂ ನಾಶ ಮಾಡಿತು. ಅನೇಕ ರಾಕ್ಷಸರನ್ನೂ ಯುದ್ಧದಲ್ಲಿ ಕೊಂದಿತು.

ಮಮಾತಿಲಾಲಿತಃ ಪುತ್ರಃ ಕನೀಯರ್ಾ ನಿಹತೋ ರಣೇ ।
ತದಾ ತೇ ಮಂತ್ರಿಣಸ್ಸರ್ವೇ ದದುರ್ಧೈರ್ಯಂ ದಶಾನನಂ ॥ ೨೮ ॥

ರಾಜನ್ನು ಪೇಕ್ಷಿತೋಽಸ್ಮಾಭಿರ್ಮರ್ಕಟೋಽಯಮಿತಿ ಸ್ಫುಟಂ ।
ವಯಂ ಶವಾಜ್ಞಯಾ ಕುರ್ಮೋ ಜಗತ್ಕೃತಚ್ಛ್ರಮವಾನರಂ ॥ ೨೯ ॥

ಕುಂಭಕರ್ಣಸ್ತದಾ ಪ್ರಾಹ ರಾವಣಂ ರಾಕ್ಷಸೇಶ್ವರಂ ।
ತ್ವಯಾಽಯೋಗ್ಯಂ ಕೃತಂ ನೈತದ್ಯದ್ಗತ್ವಾ ಜಾನಕೀ ಹೃತಾ ॥ ೩೦ ॥

ಯುದ್ಧ್ಯಸ್ಯನುಚಿತಂ ಕರ್ಮ ತ್ವಯಾ ಕೃತಮಜಾನತಾ ।
ಸರ್ವಂ ಸಮಂ ಕರಿಷ್ಯಾಮಿ ಸ್ವಸ್ಥಚಿತ್ತೋ ಭವ ಪ್ರಭೋ ॥ ೩೧ ॥

---

೨೮. ನನಗೆ ಬಹು ಪ್ರೀತಿಪಾತ್ರನಾದ ಅಕ್ಷಯಕುಮಾರನನ್ನು ಯುದ್ಧದಲ್ಲಿ ಕೊಂದಿತು ಎಂದನು. ಈ ರೀತಿಯಾಗಿ ದಶಾನನನು ದುಃಖಿಸುತ್ತಿರಲು ಮಂತ್ರಿಗಳು ಧೈರ್ಯದ ಮಾತುಗಳನ್ನು ಆಡಿ ಧೈರ್ಯವನ್ನು ಉಂಟುಮಾಡುತ್ತಿದ್ದರು.

೨೯. ಎಲೈ ರಾಜನೆ ! ನಾವು ಆ ಕಪಿಯನ್ನು ಉಪೇಕ್ಷಿಸಿದೆವು. ಎಂಬುದು ಇದರಿಂದ ಸ್ಪಷ್ಟವಾಗಿದೆ. ನೀನು ನಮಗೆ ಅಪ್ಪಣೆಮಾಡಿದರೆ ಪ್ರಪಂಚದಲ್ಲಿಯೇ ಒಂದು ಕಪಿಯೂ ಇಲ್ಲದಂತೆ ಮಾಡುತ್ತೇವೆ ಎಂದರು.

೩೦. ಆಗ ಕುಂಭಕರ್ಣನು ರಾಕ್ಷಸೇಶ್ವರನಾದ ರಾವಣನನ್ನು ಕುರಿತು ಎಲೈ ಅಗ್ರಜನೆ ! ನೀನು ಜಾನಕಿಯನ್ನು ಕದ್ದುತಂದುದು ಅನುಚಿತವಾದ ಕೆಲಸವು.

೩೧. ನೀನೇನೋ ತಿಳುವಳಿಕೆಯಿಲ್ಲದೆ ಅನುಚಿತವಾದ ಕೆಲಸವನ್ನು ಮಾಡಿದೆ. ನಾನು ಎಲ್ಲವನ್ನೂ ಸರಿಮಾಡುತ್ತೇನೆ. ನೀನು ಸುಮ್ಮನೆ ಸುಖವಾಗಿರು ದುಃಖಿಸಬೇಡ.

ದೇಹಿ ದೇವ ಮಮಾನುಜ್ಞಾಂ ಹತ್ವಾ ರಾಮಂ ಸ ಲಕ್ಷ್ಮಣಂ ।
ಸುಗ್ರೀವಂ ವಾನ ರಾಂಶ್ಚೈವ ಗಮಿಷ್ಯಾಮಿ ಪುನಃ ಕ್ಷಣಾತ್ ॥ ೩೨ ॥

ಕುಂಭಕರ್ಣವಚಶ್ಶ್ರುತ್ವಾ ತದಾ ಪ್ರಾಹ ವಿಭೀಷಣಃ ।
ಮಹಾಭಾಗವತಶ್ರೀಮಾ ರಾಮಭಕ್ತ್ಯೈಕ ತತ್ಪರಃ ॥ ೩೩ ॥

ವಿಲೋಕ್ಯ ಕುಂಭ ಶ್ರವಣಾದಿ ದೈತ್ಯಾ
ಮತ್ತಪ್ರಮತ್ತಾನತಿವಿಸ್ಮಯೇನ ।
ವಿಲೋಕ್ಯ ಕಾಮಾತುರ ಮಪ್ರಮತ್ತೋ
ದಶಾನನಂ ಪ್ರಾಹ ವಿಶುದ್ಧ ಬುದ್ಧಿಃ ॥ ೩೪ ॥

ನ ಕುಂಭ ಕರ್ಣೇಂದ್ರಜಿತೌ ಚ ರಾಜ
ತಥಾ ಮಹಾಪಾರ್ಶ್ವ ಮಹೋದರೌ ತೌ ।
ನಿಕುಂಭಕುಂಭೌ ಚ ತಥಾತಿಕಾಯಃ
ಸ್ಥಾತುಂ ನ ಶಕ್ತಾ ಯುಧಿ ರಾಘವಾಗ್ರೇ ॥ ೩೫ ॥

---

೩೨. ದೇವನೆ! ನನಗೆ ಅಪ್ಪಣೆಯನ್ನು ಕೊಡು. ರಾಮಲಕ್ಷ್ಮಣರನ್ನು ಕೊಂದು ಸುಗ್ರೀವನನ್ನೂ ಅವನ ಕಡೆಯ ಕಪಿಗಳನ್ನೂ ಕೊಂದು ಮತ್ತೆ ಕ್ಷಣಕಾಲದಲ್ಲಿಯೇ ಹಿಂದಿರುಗಿ ಬರುತ್ತೇನೆ.

೩೩. ಕುಂಭಕರ್ಣನು ಹೇಳಿದ ಈ ಮಾತನ್ನು ಕೇಳಿ ಮಹಾಭಾಗವತನೂ ರಾಮಭಕ್ತಿಯುನ್ನುಳ್ಳವನೂ ಆದ ವಿಭೀಷಣನು ಇಂತೆಂದನು.

೩೪. ಶುದ್ಧಬುದ್ಧಿಯುಳ್ಳ ವಿಭೀಷಣನು, ಬಹುವಾಗಿ ಮದಿಸಿರುವ ಕುಂಭಕರ್ಣನೇ ಮುಂತಾದ ರಾಕ್ಷಸರನ್ನು ಆಶ್ಚರ್ಯಪಟ್ಟು ನೋಡುತ್ತ, ಕಾಮಾತುರನಾದ ದಶಾನನನನ್ನೂ ನೋಡಿ ಇಂತೆಂದು ಹೇಳಿದನು.

೩೫. ಎಲೈ ರಾಜನೆ! ಕುಂಭಕರ್ಣನಾಗಲಿ ಇಂದ್ರಜಿತುವೇ ಆಗಲಿ ಮಹಾಪಾರ್ಶ್ವ ಮಹೋದರರೇ ಆಗಲಿ ಕುಂಭನಿಕುಂಭರಾಗಲೀ ಕೊನೆಗೆ ಅತಿಕಾಯನೇ ಆಗಲಿ ಯುದ್ಧದಲ್ಲಿ ರಾಮನ ಎದುರಿಗೆ ನಿಲ್ಲಲಾರರು.

ಸೀತಾಂ ಚ ಸತ್ಕೃತ್ಯ ಮಹಾಧನೇನ
ದತ್ವಾಭಿರಾಮಾಯ ಸುಖೀಭವ ತ್ವಂ ।
ನೋ ಚೇನ್ನ ರಾಮೇಣ ವಿಮೋಕ್ಷ್ಯಸೇ ತ್ವಂ
ಗುಪ್ತಸ್ಸುರೇಂದ್ರೈರಪಿ ಶಂಕರೇಣ ॥ ೩೬ ॥

ಏವಂ ಶುಭಂ ರಾವಣಸ್ಯ ವಿಭೀಷಣವಚೋ ಹಿತಂ ।
ಆತ್ಮನಃ ಪ್ರತಿಜಗ್ರಾಹ ನೈವಾಸೌ ಸೌಖ್ಯಕಾರಕಂ ॥ ೩೭ ॥

ಕಾಲೇನ ನೋದಿತೋ ದೈತ್ಯೋ ವಿಭೀಷಣಮಥಾಬ್ರವೀತ್ ।
ಬಂಧುರೂಪೇಣ ಶತ್ರುಃ ತ್ವಂ ಜಾತೋ ನಾಸ್ತ್ಯತ್ರ ಸಂಶಯಃ ॥ ೩೮ ॥

ಯೋಽನ್ಯಸ್ತ್ವೇವಂವಿಧಂ ಬ್ರೂಯಾದ್ವಾಕ್ಯಂ ಹನ್ಮಿ ತದೈವ ತಂ ।
ಉತ್ತಿಷ್ಠ ಗಚ್ಛ ದುರ್ಬುದ್ಧೇ ಧಿಕ್ತ್ವಾಂ ರಕ್ಷಃ ಕುಲಾಧಮಂ ॥ ೩೯ ॥

---

೩೬. ಸೀತೆಗೆ ಬಹುವಾದ ಧನವನ್ನೂ ಅಲಂಕಾರಗಳನ್ನೂ ಕೊಟ್ಟು ಸತ್ಕರಿಸಿ ರಾಮನಿಗೆ ಒಪ್ಪಿಸಿ ನೀನು ಸುಖವಾಗಿರು. ಈ ರೀತಿಯಾಗಿ ಒಪ್ಪಿಸದಿದ್ದರೆ ಇಂದ್ರನನ್ನೇ ಆಗಲಿ ಶಂಕರನನ್ನೇ ಆಗಲಿ ಮರೆಹೊಕ್ಕರೂ ಆ ರಾಮನು ನಿನ್ನನ್ನು ಬಿಡುವುದಿಲ್ಲ.

೩೭. ವಿಭೀಷಣನು ಈ ರೀತಿಯಾಗಿ ಹೇಳಿದ ಸುಖಕರವಾದ ಶುಭವಾದ ಮಾತನ್ನು ರಾವಣನು ಅಂಗೀಕರಿಸಲಿಲ್ಲ.

೩೮. ಕಾಲನಿಂದ ಪ್ರೇರೇಪಿಸಲ್ಪಟ್ಟವನಾದ ಆ ರಾವಣನು ಇಂತೆಂದನು. ಎಲೈ ವಿಭೀಷಣನೆ! ನೀನು ನನಗೆ ಬಂಧುರೂಪವಾಗಿ ಹುಟ್ಟಿದ ಶತ್ರುವು ಇದರಲ್ಲಿ ಸಂಶಯವಿಲ್ಲ.

೩೯. ಮತ್ತಾವನಾದರೂ ಈ ರೀತಿಯಾದ ಮಾತನ್ನಾಡಿದ್ದರೆ ಆಗಲೇ ಅವನನ್ನು ಕೊಂದುಹಾಕುತ್ತಿದ್ದೆನು. ಎಲೈ ದುರ್ಬುದ್ಧಿಯೆ! ಏಳು. ಹೊರಡು! ರಾಕ್ಷಸಕುಲಾಧಮನಾದ ನಿನಗೆ ಧಿಕ್ಕಾರವಿರಲಿ.

ರಾವಣೇನೈವಮುಕ್ತಸ್ಸ ಪುರುಷೇಣ ವಿಭೀಷಣಃ ।
ಚತುರ್ಭಿರ್ಮಂತ್ರಿಭಿರ್ಯುಕ್ತೋ ಯಯೌ ಶ್ರೀರಾಘವಾಂತಿಕಂ ॥ ೪೦ ॥

ರಾಘವಶ್ಚಾಪಿ ತಂ ಜ್ಞಾತ್ವಾ ತೇನ ಸಖ್ಯಂ ಚಕಾರ ಸಃ ।
ಹನೂಮಶೋದಧೇಸ್ತೀರೇ ಲಂಕಾಂ ಚ ಸಿಕತೋದ್ಭವಾಂ ॥ ೪೧ ॥

ಕಾರಯಿತ್ವಾ ರಘುಶ್ರೇಷ್ಠ ಸ್ತತ್ರ ಮಿತ್ರಂ ವಿಭೀಷಣಂ ।
ಲಂಕಾಯಾಶ್ಚೈವ ರಾಜ್ಯಾರ್ಥಂ ವಾನರೈರಭ್ಯಷೇಚಯತ್ ॥ ೪೨ ॥

ತದಾ ವಿಭೀಷಣಂ ಪ್ರಾಹ ರಾಮಚಂದ್ರೋ ವಿಹಸ್ಯ ಚ ।
ನ್ಯಾಸ ಭೂತಾ ಸ್ತ್ವಿಯಂ ಲಂಕಾ ತಾವತ್ಕಾಲಂ ತದಾಸ್ತಿ ಮೇ ॥ ೪೩ ॥

ಯಾವತ್ತಂ ರಾವಣಂ ಹತ್ವಾ ತವ ದಾಸ್ಯಾಮ್ಯಹಂ ಶುಭಾಂ ।
ಹನೂಮತಸ್ತ್ವಿಯಂ ನಾಮ್ನಾ ಲಂಕಾ ಖ್ಯಾತಿಂ ಗಮಿಷ್ಯತಿ ॥ ೪೪ ॥

---

೪೦. ರಾವಣನು ವಿಭೀಷಣನಿಗೆ ಈ ರೀತಿಯಾದ ಕ್ರೂರವಾದ ಮಾತುಗಳನ್ನಾಡಲು ಆಗ ಆ ವಿಭೀಷಣನು ನಾಲ್ಕುಜನ ಮಂತ್ರಿಗಳನ್ನೂ ಕರೆದುಕೊಂಡು ರಾಘವನ ಬಳಿಗೆ ಹೋದನು.

೪೧. ರಾಮನು ಇದೆಲ್ಲವನ್ನೂ ತಿಳಿದುಕೊಂಡು ವಿಭೀಷಣನೊಡನೆ ಸ್ನೇಹವನ್ನು ಮಾಡಿಕೊಂಡನು. ಹನುಮಂತನ ಕೈಯ್ಯಲ್ಲಿ ಆ ಸಮುದ್ರದ ತೀರದಲ್ಲಿ ಮರಳಿನಲ್ಲಿ ಲಂಕೆಯನ್ನು ಮಾಡಿಸಿದನು.

೪೨. ಅದರಲ್ಲಿ ಮಿತ್ರನಾದ ವಿಭೀಷಣನಿಗೆ ಲಂಕಾರಾಜ್ಯಕ್ಕೋಸ್ಕರವಾಗಿ ಕಪಿಗಳಿಂದ ಪಟ್ಟಾಭಿಷೇಕವನ್ನು ಮಾಡಿಸಿದನು.

೪೩–೪೪. ಅನಂತರ ವಿಭೀಷಣನನ್ನು ಕುರಿತು ರಾಮಚಂದ್ರನು ಇಂತೆಂದನು. ಎಲೈ ವಿಭೀಷಣನೆ! ನಾನು ಯಾವಾಗ ರಾವಣನನ್ನು ಕೊಂದು ನಿನಗೆ ಈ ಲಂಕಾಪಟ್ಟಣವನ್ನು ಕೊಡುತ್ತೇನೆಯೋ ಅಲ್ಲಿಯವರೆಗೂ ಈ ಲಂಕೆಯು ನನ್ನಲ್ಲಿ ನ್ಯಾಸಭೂತವಾಗಿರಲಿ ಹನುಮಂತನು ಮಾಡಿರುವ ಈ ಮರಳಿನ ಲಂಕೆಯು ಅವನ ಹೆಸರಿನಿಂದಲೇ ಹನೂಮಲ್ಲಂಕೆಯೆಂದು ಪ್ರಸಿದ್ಧವಾಗಲಿ. ಎಂದು ಹೇಳಿದನು.

ಹನುಮಲ್ಲಂಕಾಬ್ಧಿಸ್ತೀರೇ ವರ್ತತೇದ್ಯಾಪಿ ಪಾರ್ವತಿ ।
ವಿಭೀಷಣಾದ್ರಾವಣಾಂತೇ ರಾಮಸ್ತಾಂ ಮೋಚಯಿಷ್ಯತಿ ॥ ೪೫ ॥

ಏತಸ್ಮಿನ್ನಂತರೇ ತತ್ರ ಗಗನಸ್ಥಃ ಶುಕೋಽಬ್ರವೀತ್ ।
ಪ್ರೇಷಿತೋ ರಾವಣೇನೈವ ಸುಗ್ರೀವಂ ಪ್ರಾಹ ವೇಗತಃ ॥ ೪೬ ॥

ತ್ವಾಮಾಹಾ ರಾವಣೋ ರಾಜಾ ತವ ನಾಸ್ತ್ಯರ್ಥ ವಿಪ್ಲವಃ ।
ಅಹಂ ಯದ್ಯಹರಂ ಭಾರ್ಯಾಂ ರಾಜಪುತ್ರಸ್ಯ ಕಿಂ ತವ ॥ ೪೭ ॥

ಕಿಷ್ಕಿಂಧಾಂ ಯಾಹಿ ಹರಿಭಿಸ್ತ್ವಂ ವೈರಂ ಕುರು ಮಾ ಮಯಾ ।
ತಂ ಧೃತ್ವಾ ವಾನರಾಶ್ಶೀಘ್ರಂ ಬಬಂಧುರ್ಲೋಹಬಂಧನೈಃ ॥ ೪೮ ॥

---

೪೫. ಎಲೈ ಪಾರ್ವತಿಯೆ! ಹನೂಮಲ್ಲಂಕೆಯು ಸಮುದ್ರತೀರದಲ್ಲಿ ಈಗಲೂ ಇರುವುದು ರಾವಣನು ಸತ್ತಮೇಲೆ ವಿಭೀಷಣನಿಂದ ಅದನ್ನು ಬಿಡುಗಡೆ ಮಾಡುತ್ತಾನೆ.

೪೬. ಇಷ್ಟು ನಡೆಯುವುದರೊಳಗೆ ಆಕಾಶದಲ್ಲಿ ಶುಕನು ನಿಂತುಕೊಂಡಿದ್ದು ಇಂತೆಂದು ಸುಗ್ರೀವನಿಗೆ ಹೇಳಿದನು. ರಾವಣನು ಅವನನ್ನು ಸುಗ್ರೀವನಿಗೆ ತನ್ನ ವಿಷಯವನ್ನು ಹೇಳಬೇಕೆಂದು ಕಳುಹಿಸಿದ್ದನು.

೪೭-೪೮. ಎಲೈ ಸುಗ್ರೀವನೆ! ರಾವಣನು ನಿನ್ನನ್ನು ಕುರಿತು ಇಂತೆಂದು ಹೇಳು. ಎಂದನು. ಈ ರಾಮನಿಂದ ನಿನಗೆ ಹಣದ ಪ್ರಯೋಜನವೇನೂ ಇಲ್ಲವೇ ಇಲ್ಲ. ನಾನು ಆ ರಾಜಪುತ್ರನಾದ ರಾಮನ ಹೆಂಡತಿಯನ್ನು ಅಪಹರಿಸಿದರೆ ಆದರಿಂದ ನೀನಗೇನು ನಷ್ಟವಾದುದು? ನೀನು ಕಪಿಗಳನ್ನು ಕರೆದುಕೊಂಡು ಕಿಷ್ಕಿಂಥೆಗೆ ಹೋಗು. ನನ್ನೊಡನೆ ವೈರವನ್ನು ಮಾಡಬೇಡ. ಹೀಗೆ ಹೇಳುತ್ತಿರುವ ಆ ಶುಕನನ್ನು ಕಪಿಗಳು ಹಿಡಿದು ಸರಪಣಿಗಳಿಂದ ಕಟ್ಟಿದರು.

ಶಾರ್ದೂಲಶ್ಚಾಪಿ ಸೇನಾಂ ತಾಂ ದೃಷ್ಟ್ವಾಧಿಪಮುಭಾಷತ |
ತಚ್ಛ್ರುತ್ವಾ ರಾವಣಶ್ಚಾಪಿ ದೀರ್ಘಚಿಂತಾಪರೋಽಭವತ್ || ೪೯ ||

ರಾಮಸ್ಸಂಮಂತ್ರಯಾಮಾಸ ತದ್ವೈಕಾಂತೇ ಸ್ಥಿತಃ ಕ್ಷಣಾತ್ |
ವಿಭೀಷಣೇನ ಸುಗ್ರೀವಮಾರುತಿಭ್ಯಾಂ ಸಮನ್ವಿತಃ || ೫೦ ||

ತೀರ್ತ್ವಾಘಂ ಜಲಧೇರಲ್ಪಂ ಸಂಸ್ಥಿತೋಽ ಬಂಧುನಾ ಯುತಃ |
ಸರ್ವೇಷಾಂ ವಚನಂ ಶ್ರೋತುಂ ರಾಘವೇಣಾಥ ಸಾಗರಃ || ೫೧ ||

ಮೇಘವದ್ಗರ್ಜನಾಂ ಕುರ್ವನ್ ವಾಮಹಸ್ತೇನ ಧಿಕ್ಕೃತಃ |
ಅದ್ಯಾಪಿ ಸಾಗರಸ್ತತ್ರ ತೂಷ್ಣೀಮೇವ ಸ ವಿದ್ಯತೇ || ೫೨ ||

ತತಸ್ಸಮಂತ್ರ್ಯ ರಾಮಸ್ತು ತದಾ ಸಾಗರ ರೋಧಸಿ |
ಪ್ರಾಯೋಪವೇಶನಂ ಚಕ್ರೇ ದರ್ಭಾನಾಸ್ತೀರ್ಯ ವೇಗತಃ || ೫೩ ||

---

೪೯. ಶುಕನ ಜೊತೆಯಲ್ಲಿ ಬಂದಿದ್ದ ಶಾರ್ದೂಲನೆಂಬುವನು ಈ ವಾನರ ಸೇನೆಯನ್ನು ನೋಡಿಕೊಂಡು ಹೋಗಿ ರಾವಣನಿಗೆ ಹೇಳಿದನು. ಅದನ್ನು ಕೇಳಿ ರಾವಣನು ಚಿಂತಾಪರನಾದನು.

೫೦. ಇತ್ತ ರಾಮನು ಏಕಾಂತದಲ್ಲಿ ಕುಳಿತು ವಿಭೀಷಣ ಸುಗ್ರೀವ ಮಾರುತಿಯರೊಂದಿಗೆ ಮಂತ್ರಾಲೋಚನೆಯನ್ನು ಮಾಡಲು ಇಚ್ಛಿಸಿದನು.

೫೧–೫೨. ಅದಕ್ಕೋಸ್ಕರ ಸಮುದ್ರದಲ್ಲಿ ಸ್ವಲ್ಪದೂರ ಹೋಗಿ ಲಕ್ಷ್ಮಣನೊಡನೆಯೂ ಇತರರೊಡನೆಯೂ ಮಂತ್ರಾಲೋಚನೆ ಮಾಡಿದನು. ಆಗ ಸಮುದ್ರವು ಮೇಘದಂತೆ ಗರ್ಜಿಸುತ್ತಿರಲು ರಾಮನು ಎಡಗೈಯ್ಯಿಂದ ಅದನ್ನು ಶಬ್ದಮಾಡದಂತೆ ತಿರಸ್ಕರಿಸಲು ಈಗಲೂ ಕೂಡ ಅದು ಅಲ್ಲಿ ಶಬ್ದಮಾಡದೆ ಸುಮ್ಮನೆ ಇರುವುದು.

೫೩. ರಾಮನು ಎಲ್ಲರ ಸಂಗಡಲೂ ಮಂತ್ರಾಲೋಚನೆಯನ್ನು ಮಾಡಿ ಆ ಸಮುದ್ರದ ದಡದಲ್ಲಿ ದರ್ಭೆಯನ್ನು ಹರಡಿಕೊಂಡು ಪ್ರಾಯೋಪವೇಶವನ್ನು ಮಾಡಿದನು.

ದಿನತ್ರಯಮತಿಕ್ರಮ್ಯ ತೃತೀಯದಿವಸೇ ತದಾ |
ಉತ್ಥಾಯ ದರ್ಭಶಯನಾತ್ಪುನರ್ಲಕ್ಷ್ಮಣಮಬ್ರವೀತ್ || ೫೪ ||

ಪಶ್ಯ ಲಕ್ಷ್ಮಣ ದುಷ್ಟೋಽಸೌ ವಾರಿಧಿರ್ಮಾಮುಪಾಗತಂ |
ನಾಭಿನಂದತಿ ದುಷ್ಟಾತ್ಮಾ ದರ್ಶನಾರ್ಥಂ ಮಮಾನಘ || ೫೫ ||

ಜಾನಾತಿ ಮಾನುಷೋಽಯಂ ಮಾಂ ಕಿಂ ಕರಿಷ್ಯತಿ ವಾನರೈಃ |
ಅದ್ಯ ಪಶ್ಯ ಮಹಾಬಾಹೋ ಶೋಷಯಿಷ್ಯಾಮಿ ವಾರಿಧಿಂ || ೫೬ ||

ಪದ್ಭ್ಯಾಮೇವಾದ್ಯ ಗಚ್ಛಂತು ವಾನರಾ ವಿಗತಜ್ವರಾಃ |
ಇತ್ಯುಕ್ತ್ವಾ ಚಾಪಮಾಕೃಷ್ಯ ಸಂದಧೇ ಬಾಣಮುತ್ತಮಂ || ೫೭ ||

ತದಾ ಚಚಾಲ ವಸುಧಾ ದಿಶೌಘಾಸ್ತಮಸಾ ವೃತಾಃ |
ಚುಕ್ಷುಭೇ ಸಾಗರೋ ವೇಲಾಂ ಭಯಾದ್ಯೋಜನಮತ್ಯಗಾತ್ || ೫೮ ||

---

೫೪. ಹೀಗೆ ಮಲಗಿರಲು ಎರಡುದಿನಗಳು ಕಳೆದುವು. ಆಮೇಲೆ ಮೂರನೆಯ ದಿನದಲ್ಲಿ ದರ್ಭೆಯಶಯನದಿಂದ ಎದ್ದು ಲಕ್ಷ್ಮಣನನ್ನು ಕುರಿತು ಮತ್ತೆ ಇಂತೆಂದನು.

೫೫–೫೬. ಎಲೈ ಲಕ್ಷ್ಮಣನೆ! ನೋಡು. ನಾನು ಇಲ್ಲಿಗೆ ಬಂದಿದ್ದರೂ ಈ ಸಮುದ್ರನು ನನ್ನನ್ನು ಗೌರವಿಸುವುದಿಲ್ಲ ಈ ದುಷ್ಟನು ನನಗೆ ದರ್ಶನವನ್ನು ಕೊಡುತ್ತಿಲ್ಲ. ಈ ರಾಮನು ಮನುಷ್ಯನು ಕಪಿಗಳನ್ನು ಕಟ್ಟಿಕೊಂಡು ಏನುಮಾಡಿಯಾನು ? ಎಂದು ಈ ಸಮುದ್ರರಾಜನು ತಿಳಿದಿರುವನು. ಎಲೈ ಮಹಾಬಾಹುವೆ ! ಇಗೋ ನೋಡು. ಈ ಸಮುದ್ರವನ್ನು ಒಣಗಿಹೋಗುವಂತೆ ಮಾಡುತ್ತೇನೆ.

೫೭. ಈ ಕಪಿಗಳು ಸುಖವಾಗಿ ಕಾಲಿನಿಂದಲೇ ನಡೆದುಕೊಂಡು ಹೋಗಲಿ. ಎಂಬುದಾಗಿ ಹೇಳಿ ರಾಮನು ಬಿಲ್ಲನ್ನು ಎಳೆದು ಬಾಣವನ್ನು ಹೂಡಿದನು.

೫೮. ಆಗ ಭೂಮಿಯು ನಡುಗಿತು. ದಿಕ್ಕುಗಳೆಲ್ಲವೂ ಕತ್ತಲೆಯಿಂದ ಕವಿದುಕೊಂಡುವು ಸಾಗರವು ತನ್ನ ಎಲ್ಲೆಯನ್ನು ಮೀರಿ ಉಕ್ಕಿತು. ಉಕ್ಕಿಬಂದು ಭಯದಿಂದ ಯೋಜನ ದೂರದವರೆಗೂ ಹೋಯಿತು.

ತಿಮಿನಕ್ರಝುಷಾ ಮೀನಾಃ ಪ್ರತಪ್ತಾಃ ಪರಿತತ್ರಸುಃ ।
ಏತಸ್ಮಿನ್ನಂತರೇ ಸಾಕ್ಷಾತ್ಸಾಗರೋ ದಿವ್ಯರೂಪಧೃತ್ ॥ ೫೯ ॥

ರತ್ನೈರುಪಾಯನಂ ರಾಮಂ ಸಮರ್ಪ್ಯ ಪ್ರಣನಾಮ ಸಃ ।
ಅಥ ತುಷ್ಟಾವ ದೀನಾತ್ಮಾ ಪ್ರಾರ್ಥಯಾಮಾಸ ರಾಘವಂ ॥ ೬೦ ॥

ಅಭಯಂ ದೇಹಿ ಮೇ ರಾಮ ಲಂಕಾಮಾರ್ಗಂ ದದಾಮಿ ತೇ ।
ಇತಿ ತದ್ವಚನಂ ಶ್ರುತ್ವಾ ರಾಘವಃ ಪ್ರಾಹ ಸಾಗರಂ ॥ ೬೧ ॥

ಅಮೋಘೋಽಯಂ ಮಹಾಬಾಣಃ ಕಸ್ಮಿನ್ ದೇಶೇ ನಿಪಾತ್ಯತಾಂ ।
ಲಕ್ಷ್ಯಂ ದರ್ಶಯ ಮೇ ಶೀಘ್ರಂ ಬಾಣಸ್ಯಾಸ್ಯ ಪಯೋನಿಧೇ ॥ ೬೨ ॥

॥ ಸಾಗರ ಉವಾಚ ॥

ರಾಮೋತ್ತರಪ್ರದೇಶೇಽಸ್ತಿ ದ್ರುಮಕಲ್ಪ ಇತಿ ಶ್ರುತಃ ।
ಪ್ರದೇಶಸ್ತತ್ರ ಬಹವಃ ಪಾಪಾತ್ಮಾನೋ ದಿವಾನಿಶಂ ॥ ೬೩ ॥

೫೯–೬೦. ಮೀನು, ಮೊಸಳೆ, ತಿಮಿಂಗಿಲಗಳು ತೊಂದರೆಗೊಂಡು ಹೆದರಿದುವು. ಈ ಸಮಯದಲ್ಲಿ ಆ ಸಾಗರನು ದಿವ್ಯರೂಪವನ್ನು ಹೊಂದಿ ರತ್ನಗಳನ್ನೇ ತಂದು ರಾಮನಿಗೆ ಕಾಣಿಕೆಯನ್ನು ಕೊಟ್ಟು ನಮಸ್ಕರಿಸಿದನು. ಮತ್ತು ದೀನತೆಯಿಂದ ರಾಘವನನ್ನು ಸ್ತುತಿಸಿ ಪ್ರಾರ್ಥಿಸಿದನು.

೬೧. ಎಲೈ ರಾಮನೆ! ನನಗೆ ಅಭಯವನ್ನು ಕೊಡು. ಲಂಕೆಗೆ ಮಾರ್ಗವನ್ನು ಕೊಡುತ್ತೇನೆ. ಎಂದನು. ಸಾಗರನ ಈ ಮಾತನ್ನು ಕೇಳಿ ರಾಘವನು ಅವನನ್ನು ಕುರಿತು ಇಂತೆಂದನು.

೬೨. ಎಲೈ ಸಮುದ್ರರಾಜನೆ! ಈ ಬಾಣವು ಅಮೋಘವಾದುದು ಇದನ್ನು ಎಲ್ಲಿ ಬಿಡಲಿ? ಎಲೈ ಪಯೋನಿಧಿಯೆ! ಇದಕ್ಕೆ ಲಕ್ಷ್ಯವನ್ನು ಬೇಗನೆ ತೋರಿಸು.

೬೩. ಸಾಗರನು ಹೇಳಿದನು—ಎಲೈ ರಾಮನೆ! ಉತ್ತರದೇಶದಲ್ಲಿ ದ್ರುಮಕಲ್ಪವೆಂಬ ಪ್ರದೇಶವಿರುವುದು. ಅಲ್ಲಿ ಅನೇಕಜನ ಪಾಪಾತ್ಮರಿರುವರು. ಅವರು ಹಗಲೂ ರಾತ್ರಿಯೂ ನನ್ನನ್ನು ಬಾಧಿಸುತ್ತಿರುವರು.

ಬಾಧಂತೇ ಮಾಂ ರಘುಶ್ರೇಷ್ಠ ತತ್ರ ತೇ ಪಾತ್ಯತಾಂ ಶರಃ ।
ರಾಮೇಣ ಮುಕ್ತೋ ಬಾಣೋಽಸೌ ಕ್ಷಣಾದಾಭೀರ ಮಂಡಲಂ || ೬೪ ||

ಹತ್ವಾ ಪುನಸ್ಸಮಾಗತ್ಯ ತೂಣೀರೇ ಪೂರ್ವವತ್ ಸ್ಥಿತಃ ।
ತತೋಽಬ್ರವೀದ್ರಘುಶ್ರೇಷ್ಠಂ ಸಾಗರೋ ವಿನಯಾನ್ವಿತಃ || ೬೫ ||

ಮಯಿ ಸೇತುಂ ಕಾರಯಸ್ವ ನಲೇನೋಪಲನಿರ್ಮಿತಂ ।
ವಿಶ್ವಕರ್ಮಸುತಶ್ಚಾಯಂ ವರೋ ಲಬ್ಧೋಽಸ್ತ್ಯನೇನ ಹಿ || ೬೬ ||

ದ್ವಿಜಸ್ಯ ಜಾಹ್ನವೀತೋಯೇ ಸಾಲಿಗ್ರಾಮ ಸ್ತ್ವನೇನ ಹಿ ।
ತ್ಯಕ್ತಸ್ತದಾ ತೇನ ಶಪ್ತಃ ಪಾಷಾಣಾದಿ ತರಿಷ್ಯತಿ || ೬೭ ||

ತ್ವದ್ಧಸ್ತಾದಿತಿ ಶಾಪೋಽಯಂ ವರ ಏವಾತ್ರ ಸ ಸ್ಮೃತಃ ।
ಇತ್ಯುಕ್ತ್ವಾ ರಾಘವಂ ನತ್ವಾ ಯಯೌ ಸಿಂಧುರದೃಶ್ಯತಾಂ || ೬೮ ||

೬೪–೬೫. ಅವರ ಬಾಧೆಯನ್ನು ನಾನು ತಡೆಯಲಾರೆ. ಆ ಪ್ರದೇಶಕ್ಕೆ ನಿನ್ನ ಬಾಣವನ್ನು ಬಿಡು. ಎನ್ನಲು ಒಡನೆಯೇ ರಾಮನು ಆ ಬಾಣವನ್ನು ಬಿಡಲು ಅದು ಆ ಉತ್ತರಪ್ರದೇಶದಲ್ಲಿದ್ದ ಬೇಡರನ್ನು ಕೊಂದು ಮತ್ತೆ ಹಿಂತಿರುಗಿ ಬಂದು ಮೊದಲಿನಂತೆಯೇ ಬತ್ತಳಿಕೆಯಲ್ಲಿ ಸೇರಿಕೊಂಡಿತು. ಆಗ ಸಮುದ್ರನು ಮತ್ತೆ ವಿನಯದಿಂದ ರಾಮನಿಗೆ ಇಂತೆಂದನು.

೬೬. ಎಲೈ ರಾಮನೆ ! ನಲನ ಕೈಯ್ಯ ಕಲ್ಲಿನಿಂದ ನನ್ನಲ್ಲಿ ಸೇತುವೆಯನ್ನು ಕಟ್ಟಿಸು. ಅವನು ವಿಶ್ವಕರ್ಮನ ಮಗನು. ಅಲ್ಲದೆ ಅವನಿಗೆ ವರವು ಬೇರೆ ಇರುವುದು.

೬೭. ಒಂದುಸಾರಿ ಇವನು ಜಾಹ್ನವಿಯ ದಡದಲ್ಲಿದ್ದುಕೊಂಡಿದ್ದಾಗ ಒಬ್ಬ ಬ್ರಾಹ್ಮಣನ ಸಾಲಿಗ್ರಾಮಗಳನ್ನು ನೀರಿನಲ್ಲಿ ಎಸೆಯುತ್ತಿದ್ದನು. ಆಗ ಆ ಬ್ರಾಹ್ಮಣನು ಇವನನ್ನು ಕುರಿತು ನಿನ್ನ ಕೈಯ್ಯಿಂದ ಎಸೆದ ಕಲ್ಲುಗಳೂ ಕೂಡ ತೇಲಲಿ. ಎಂದು ಶಪಿಸಿದನು.

೬೮. ಆ ಶಾಪವು ಈಗ ವರವಾಗಿ ಪರಿಣಮಿಸಿದೆ. ಹೀಗೆಂದು ಹೇಳಿ ಸಮುದ್ರನು ರಾಘವನಿಗೆ ನಮಸ್ಕರಿಸಿ ಹೊರಟು ಹೋದನು.

ನಲಮಾಜ್ಞಾಪಯಾಮಾಸ ಸೇತ್ವರ್ಥಂ ರಘುನಂದನಃ ।
ಸೇತುಮಾರಭಮಾಣಸ್ತು ವಿಘ್ನೇಶಂ ಸ್ಥಾಪ್ಯ ರಾಘವಃ ॥ ೬೯ ॥

ನವಗ್ರಹಾಣಾಂ ಪೂಜಾರ್ಥಂ ಪಾಷಾಣಾನ್ನವ ಸಾದರಂ ।
ನಲಹಸ್ತೇನ ಸಂಸ್ಥಾಪ್ಯ ಪೂರ್ವಂ ತತ್ರ ಮಹೋದಧೌ ॥ ೭೦ ॥

ತತಸ್ಸಾಗರಸಂಯೋಗೇ ಸ್ವನಾಮ್ನಾ ಲಿಂಗಮುತ್ತಮಂ ।
ಸ್ಥಾಪಯಾಮೀತಿ ನಿಶ್ಚಿತ್ಯ ಮಾರುತಿಂ ವಾಕ್ಯಮಬ್ರವೀತ್ ॥ ೭೧ ॥

ಕಾಶೀಂ ಗತ್ವಾ ಶಿವಾಲ್ಲಿಂಗದ್ವಯಮಾನಯ ಮಾರುತೇ ।
ಮುಹೂರ್ತಮಧ್ಯೇ ನೋ ಚೇನ್ಮೇ ಮುಹೂರ್ತಾತಿಕ್ರಮೋ ಭವೇತ್ ॥ ೭೨ ॥

---

೬೯. ಆಗ ರಾಮನು ನಲನನ್ನು ಸೇತುವೆಯನ್ನು ಕಟ್ಟುವುದಕ್ಕೆ ಅಪ್ಪಣೆ ಮಾಡಿದನು. ಸೇತುವೆಯನ್ನು ಕಟ್ಟಲುದ್ದೇಶಿಸಿದ ರಾಘವನು ಗಣಪತಿಯ ಪೂಜೆಯನ್ನು ಮಾಡಲು ಗಣಪತಿಯನ್ನು ಅಲ್ಲಿ ಪ್ರತಿಷ್ಠಿಸಿದನು.

೭೦. ನವಗ್ರಹಗಳನ್ನು ಪೂಜಿಸಲು ಅವುಗಳೊಂದೊಂದಕ್ಕೂ ಒಂದೊಂದರಂತೆ ಅವನ್ನೂ ಕೂಡ ಆ ಸಮುದ್ರದಲ್ಲಿ ಕಲ್ಲಿನಿಂದ ನಳನಕೈಯ್ಯಿಂದಲೇ ನೆಡಿಸಿದನು.

೭೧. ಅನಂತರ ಆ ಸಾಗರದ ಸಂಗಮದಲ್ಲಿ ರಾಮನು ತನ್ನ ಹೆಸರಿನಿಂದ ಒಂದು ಉತ್ತಮವಾದ ಲಿಂಗವನ್ನು ಸ್ಥಾಪಿಸಬೇಕೆಂದುದ್ದೇಶಿಸಿ ಮಾರುತಿಯನ್ನು ಕುರಿತು ಇಂತೆಂದನು.

೭೨. ಎಲೈ ಮಾರುತಿಯೆ ! ಕಾಶಿಗೆ ಹೋಗಿ ಶಿವನಿಂದ ಎರಡು ಲಿಂಗಗಳನ್ನು ತೆಗೆದುಕೊಂಡು ಬಾ. ಇದನ್ನು ಒಂದು ಮುಹೂರ್ತದೊಳಗೆ ತರಬೇಕು. ಆರೀತಿ ಮಾಡದಿದ್ದರೆ ಮುಹೂರ್ತವು ಮೀರಿಹೋಗುತ್ತದೆ.

ತದಾ ರಾಮವಚನಂ ಶ್ರುತ್ವಾ ತಥೇತ್ಯುಕ್ತ್ವಾ ಸ ಮಾರುತಿಃ ।
ಯಯಾವಾಕಾಶಮಾರ್ಗೇಣ ಕ್ಷಣಾದ್ವಾರಾಣಸೀಂ ಮಮ ॥ ೭೩ ॥

ತತ್ರಾಗತ್ಯಾಥ ಮಾಂ ನತ್ವಾ ರಾಮಕಾರ್ಯಂ ನ್ಯವೇದಯತ್ ।
ತಚ್ಛ್ರುತ್ವಾಥ ಮಯಾ ದೇವಿ ರಾಘವಾಯ ಹನೂಮತೇ ॥ ೭೪ ॥

ದ್ವೇ ಲಿಂಗೇ ಹ್ಯರ್ಪಿತೇ ಶ್ರೇಷ್ಠೇ ತತೋಽಹಂ ಕಪಿಮಬ್ರುವಮ್ ।
ಮಯಾಪಿ ದಕ್ಷಿಣೇ ಗಂತುಂ ಪೂರ್ವಮೇವ ವಿನಿಶ್ಚಿತಂ ॥ ೭೫ ॥

ಅಗಸ್ತಿನಾ ವಿಶೇಷೇಣ ಯಾಸ್ಯಾಮಿ ರಾಘವಾಜ್ಞಯಾ ।
ಏವಂ ಮದ್ವಚನಂ ಶ್ರುತ್ವಾ ಮಾರುತಿಃ ಪ್ರಾಹ ಮಾಂ ಪುನಃ ॥ ೭೬ ॥

ಕದಾ ವಿನಿಶ್ಚಿತಂ ಪೂರ್ವಂ ತ್ವಯಾತ್ರ ಕುಂಭಜನ್ಮನಾ ।
ತತ್ಸರ್ವಂ ಮಾಂ ವದಸ್ವಾದ್ಯ ಕೃಪಾಂ ಕೃತ್ವಾ ಮಮೋಪರಿ ॥ ೭೭ ॥

---

೭೩. ರಾಮನ ಈ ಮಾತನ್ನು ಕೇಳಿ ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಆಕಾಶಮಾರ್ಗದಿಂದಲೇ ಕ್ಷಣಕಾಲದಲ್ಲಿ ವಾರಾಣಸಿಗೆ ಹೋದನು.

೭೪–೭೫. ಅಲ್ಲಿಗೆ ಬಂದು ಶಿವನಾದ ನನ್ನನ್ನು ನಮಸ್ಕರಿಸಿ ರಾಮಕಾರ್ಯ ವನ್ನು ವಿಜ್ಞಾಪಿಸಿದನು. ಅದನ್ನು ಕೇಳಿ ರಾಮನಿಗೋಸ್ಕರ ಹನುಮಂತನ ಕೈಗೆ ಎರಡು ಲಿಂಗಗಳನ್ನು ಕೊಟ್ಟೆನು. ಮತ್ತು ಆ ಕಪಿಯನ್ನು ಕುರಿತು ಇಂತೆಂದು ಹೇಳಿದೆನು. ಎಲೈ ಹನುಮಂತನೆ! ದಕ್ಷಿಣದಿಕ್ಕಿಗೆ ಹೋಗಬೇಕೆಂದು ಮೊದಲೇ ನಿಶ್ಚಯಿಸಿಕೊಂಡಿದ್ದೆನು.

೭೬. ಅಗಸ್ತ್ಯ ಮುನಿಯೊಡನೆಯೇ ನಿಶ್ಚಯಿಸಿಕೊಂಡಿದ್ದೆನು. ಈಗ ರಾಘವನ ಅಪ್ಪಣೆಯಿಂದ ಹೋಗಿಯೇ ಹೋಗುತ್ತೇನೆ. ಈ ರೀತಿಯಾಗಿ ನಾನು ಹೇಳಲು ಮಾರುತಿಯು ಮತ್ತೆ ನನ್ನನ್ನು ಕುರಿತು ಇಂತೆಂದನು.

೭೭. ಎಲೈ ಶಿವನೆ! ನೀನು ಯಾವಾಗ ಇಲ್ಲಿಗೆ ಬರಬೇಕೆಂದು ಅಗಸ್ತ್ಯ ನೊಡನೆ ನಿಶ್ಚಯಿಸಿಕೊಂಡಿದ್ದೆ? ನನ್ನ ಮೇಲೆ ಕೃಪೆಯಿಟ್ಟು ಅದೆಲ್ಲವನ್ನೂ ಹೇಳು.

ತನ್ಮಾರುತಿವಚಶ್ಶ್ರುತ್ವಾ ತತೋಹನುಬ್ರುವಂ ಕಪಿಂ ।
ಮಾರುತೇದ್ಯ ಶ್ರುಣುಷ್ವ ತ್ವಂ ಪೂರ್ವವೃತ್ತಂ ವದಾಮಿ ತೇ ॥ ೭೮ ॥

ಕದಾಚಿನ್ನಾರದಶ್ಶ್ರೀಮಾನ್ ಸ್ನಾತ್ವಾ ಶ್ರೀನರ್ಮದಾಂಭಸಿ ।
ಶ್ರೀಮದೋಂಕಾರಮಭ್ಯರ್ಚ್ಯ ಸರ್ವದಂ ಸರ್ವದೇಹಿನಾಂ ॥ ೭೯ ॥

ವ್ರಜನ್ವಿಲೋಕಯಾಂಚಕ್ರೇ ಪುರೋ ವಿಂಧ್ಯಂ ಧರಾಧರಂ ।
ಸಂಸಾರತಾಪಸಂಹಾರಿರೇವಾವಾರಿಪರಿಷ್ಕೃತಂ ॥ ೮೦ ॥

ದ್ವೈರೂಪೇಣಾಪಿ ಕುರ್ವಂತಂ ಸ್ಥಾವರೇಣ ಚರೇಣ ಚ ।
ಸಾಭಿಖ್ಯೇನ ಯಥಾರ್ಥಾಖ್ಯಾಮುಚ್ಚೈರ್ವಸುಮತೀಮಿಮಾಂ ॥ ೮೧ ॥

ಅಥ ತಂ ನಾರದಂ ದೃಷ್ಟ್ವಾ ವಿಂಧ್ಯಃ ಪ್ರತ್ಯುಜ್ಜಗಾಮ ಸಃ ।
ಗೃಹಮಾನೀಯ ವಿಧಿವತ್ ಪೂಜಯಾಮಾಸ ಸಾದರಂ ॥ ೮೨ ॥

---

೭೮. ಮಾರುತಿಯ ಈ ಮಾತನ್ನು ಕೇಳಿ, ಅವನಿಗೆ ಇಂತೆಂದು ಹೇಳಿದೆನು. ಎಲೈ ಮಾರುತಿಯೆ ! ಪೂರ್ವದ ಸಮಾಚಾರವನ್ನು ಕೇಳು. ಹೇಳುತ್ತೇನೆ.

೭೯. ಒಂದುಸಾರಿ ನಾರದನು ನರ್ಮದಾನದಿಯಲ್ಲಿ ಸ್ನಾನಮಾಡಿ ಪ್ರಾಣಿಗಳಿಗೆ ಕೇಳಿದುದನ್ನು ಕೊಡುವ ಓಂಕಾರೇಶ್ವರನನ್ನು ಪೂಜಿಸಿದನು.

೮೦. ಅನಂತರ ಮುಂದಕ್ಕೆ ಹೋಗುತ್ತ ಎದುರಿನಲ್ಲಿದ್ದ ವಿಂಧ್ಯಪರ್ವತವನ್ನು ನೋಡಿದನು. ಸಂಸಾರದ ತಾಪವನ್ನು ನಾಶಮಾಡುವ ರೇವಾನದಿಯು ಅದರ ಸುತ್ತಲೂ ಹರಿಯುತ್ತದೆ.

೮೧. ಸ್ಥಾವರಜಂಗಮರೂಪವಾದ ಪದಾರ್ಥಗಳನ್ನು ಹೊಂದಿ ಈ ವಸುಮತಿಯನ್ನು ದೊಡ್ಡಸ್ತಿಕೆಯಲ್ಲಿ ಅರ್ಥವತ್ತಾಗಿ ಮಾಡುತ್ತ ಈ ಪರ್ವತವು ಪ್ರಕಾಶಿಸುತ್ತಿರುವುದು.

೮೨. ನಾರದನು ಬಂದುದನ್ನು ನೋಡಿ ವಿಂಧ್ಯವು ಅವನನ್ನು ಎದುರುಗೊಂಡು ಮನೆಗೆ ಕರೆದುಕೊಂಡು ಹೋಗಿ ಆದರದಿಂದ ಪೂಜೆಮಾಡಿದನು.

ಗತಶ್ರಮಮಥಾಲೋಕ್ಯ ಬಭಾಷೇಽವನತೋ ಗಿರಿಃ ।
ಅಘಸಂಘಃ ಪರಿಹೃತಸ್ತ್ವದಂಘ್ರಿರಜಸಾ ಮಮ ॥ ೮೩ ॥

ತ್ವದಂಗಸಂಗಿಮಹಸಾ ಸಹಸಾಪ್ಯಾಂತರಂ ತಮಃ ।
ಸಕಲಾಘಹರಂ ಚಾದ್ಯ ಸುದಿನಂ ಚಾದ್ಯ ಮೇ ಮುನೇ ॥ ೮೪ ॥

ಪ್ರಾಕೃತೈಃ ಸುಕೃತೈರದ್ಯ ಫಲಿತಂ ನೋ ಚಿರಾರ್ಜಿತೈಃ ।
ಧರಾಧರತ್ವಂ ಕುಲಿಷು ಮಾನ್ಯಂ ಮೇದ್ಯ ಭವಿಷ್ಯತಿ ॥ ೮೫ ॥

ಇತಿ ಶ್ರುತ್ವಾ ತದಾ ಕಿಂಚಿದುಚ್ಛ್ವಸ್ಯ ಸ್ಥಿತರ್ವಾ ಮುನಿಃ ।
ಪುನರೂಚೇ ಕುಲಿವರಸ್ಸಂಭ್ರಮಾಪನ್ನಮಾನಸಃ ॥ ೮೬ ॥

---

೮೩. ಆ ನಾರದನಿಗೆ ಶ್ರಮಪರಿಹಾರವಾಗುತ್ತಲೂ ನಮ್ರತೆಯಿಂದ ವಿಂಧ್ಯನು ಇಂತೆಂದನು. ಎಲೈ ನಾರದನೆ! ನಿನ್ನ ಪಾದದ ಧೂಳಿಯಿಂದ ನನ್ನ ಪಾಪಗಳೆಲ್ಲವೂ ಹೋದುವು.

೮೪. ನಿನ್ನ ಅಂಗದಲ್ಲಿರುವ ತೇಜಸ್ಸಿನಿಂದ ನನ್ನ ಅಜ್ಞಾನವೆಂಬ ತಮಸ್ಸೂ ಹೋಯಿತು. ಎಲ್ಲಾ ಪಾಪಗಳೂ ಹೋದುದರಿಂದ ಈ ದಿನವು ನನಗೆ ಸುದಿನವಾಗಿದೆ.

೮೫. ನಾನು ಪೂರ್ವಜನ್ಮದಲ್ಲಿ ಮಾಡಿದ ಸುಕೃತಗಳೆಲ್ಲವೂ ಈಗ ಫಲಿಸಿದುವು. ಪರ್ವತಗಳಲ್ಲಿ ನಾನು ಈಗ ಮಾನ್ಯನಾದೆನು.

೮೬. ಈ ರೀತಿ ಆ ವಿಂಧ್ಯವು ಹೇಳಿದುದನ್ನು ಕೇಳಿ ಆ ನಾರದನು ಸ್ವಲ್ಪ ನಿಟ್ಟುಸಿರು ಬಿಟ್ಟು ಸುಮ್ಮನೆ ಕುಳಿತನು. ಆಗ ವಿಂಧ್ಯನು ಮನಸ್ಸಿನಲ್ಲಿ ಗಾಬರಿಯನ್ನು ಹೊಂದಿ ಮತ್ತೆ ಇಂತೆಂದನು.

ಉಚ್ಛ್ವಾಸಕಾರಣಂ ಬ್ರಹ್ಮನ್ ಬ್ರೂಹಿ ಸರ್ವಾರ್ಥಕೋವಿದ ।
ತವಾಹಂ ಮಾರ್ಜಯಾಮ್ಯದ್ಯ ಹೃತ್ಖೇದಂ ಕ್ಷಣಮಾತ್ರತಃ ॥ ೮೭ ॥

ಧರಾಧರಣಸಾಮರ್ಥ್ಯಂ ಮೇರ್ವಾದೌ ಪೂರ್ವಪೂರುಷೈಃ ।
ವರ್ಣ್ಯತೇ ಸಮುದಾಯಾತ್ತದಹಮೇಕೋ ದಧೇ ಧರಾಂ ॥ ೮೮ ॥

ಗೌರೀಗುರುತ್ವಾದ್ಧಿಮವಾನಾಧಿಪತ್ಯಾಚ್ಚ ಭೂಭೃತಾಂ ।
ಸಂಬಂಧಿತ್ವಾತ್ಪಶುಪತೇಸ್ಸ ಏಕೋ ಮಾನ್ಯಭೃತ್ಸತಾಂ ॥ ೮೯ ॥

ನ ಮೇರುಃ ಸ್ವರ್ಣಪೂರ್ಣತ್ವಾದ್ರತ್ನಸಾನುತಯಾಥವಾ ।
ಸುರಸದ್ಮತಯಾ ವಾಪಿ ಕ್ವಾಪಿ ಮಾನ್ಯೋ ಮತೋ ಮಮ ॥ ೯೦ ॥

---

೮೭. ಸಮಸ್ತ ವಿಷಯಗಳನ್ನೂ ಬಲ್ಲ ನಾರದನೆ! ನೀನು ಟ್ಟುಸಿರನ್ನು ಬಿಡಲು ಕಾರಣವೇನು? ಹೇಳು. ನಿನ್ನ ಹೃದಯದಲ್ಲಿರುವ ಖೇದವನ್ನು ಕ್ಷಣಮಾತ್ರದಲ್ಲಿ ನಾಶಮಾಡುತ್ತೇನೆ.

೮೮. ಮೇರುವೇ ಮುಂತಾದ ಪರ್ವತಗಳೆಲ್ಲವೂ ಭೂಮಿಯನ್ನು ಹೊತ್ತಿವೆ. ಎಂದು ತಿಳಿದು ಅವೆಲ್ಲವನ್ನೂ ಧರಾಧರಗಳೆಂದೆನ್ನುತ್ತಾರೆ. ಆದರೆ ಆ ಭೂಮಿಯನ್ನು ಹೊತ್ತಿರುವವನು ನಾನೊಬ್ಬನೇ.

೮೯. ಹಿಮವಂತನು ಗೌರಿಗೆ ತಂದೆಯಾದುದರಿಂದಲೂ ಬೆಟ್ಟಗಳಿಗೆಲ್ಲಾ ರಾಜನಾಗಿರುವುದರಿಂದಲೂ ಈಶ್ವರನಿಗೆ ಮಾವನಾದುದರಿಂದಲೂ ಆ ಸಂಬಂಧದಿಂದ ಅವನೊಬ್ಬನು ಎಲ್ಲರಲ್ಲಿಯೂ ಗೌರವಸ್ಥನಾಗಿದ್ದಾನೆ.

೯೦. ಮೇರುವು ಚಿನ್ನದಿಂದ ಕೂಡಿದ್ದರೂ ರತ್ನಸಾನುವಾಗಿದ್ದರೂ ದೇವತೆಗಳಿಗೆಲ್ಲಾ ಮನೆಯಾಗಿದ್ದರೂ ತಾನೆ ಏನು? ಅವನು ಯಾವ ರೀತಿಯಲ್ಲಿಯೂ ಮಾನ್ಯನಲ್ಲ. ಇದನ್ನು ನಾನು ಖಂಡಿತವಾಗಿ ಹೇಳುತ್ತೇನೆ.

ಪರಂ ಶತಂ ಸ ಕಿಂ ಶೈಲಾ ಇಲಾಕಲನಕೇಲಯಃ ।
ಇಹ ಸಂತಿ ಸತಾಂ ಮಾನ್ಯಾ ಮಾನ್ಯಾಸ್ತೇ ತು ಸ್ವಭೂಮಿಷು ॥ ೯೧ ॥

ಮಂದೇಹದೇಹಸಂದೋಹಾ ಉದಯೈಕದಯಾ ಶ್ರಿತಾಃ ।
ನಿಷಧೋ ನೌಷಧಿಧರೋಽಪ್ಯಸ್ತೋಽಪ್ಯಸ್ತಮಿತಪ್ರಭಃ ॥ ೯೨ ॥

ನೀಲಶ್ಚ ನೀಲನಿಜಯೋ ಮಂದರೋ ಮಂದಲೋಚನಃ ।
ಸರ್ಪಾಲಯಸ್ಸ ಮಲಯೋ ರಾಯಂ ನಾವಾಪ ರೈವತಃ ॥ ೯೩ ॥

ಹೇಮಕೂಟತ್ರಿಕೂಟಾದ್ಯಾಃ ಕೂಟೋತ್ತರಪದಾಸ್ತು ತೇ ।
ಕಿಷ್ಕಿಂಧಕ್ರೌಂಚಸಹ್ಯಾದ್ಯಾ ಭಾರಸಹ್ಯಾ ನ ತೇ ಭುವಃ ॥ ೯೪ ॥

---

೯೧. ಭೂಮಿಯನ್ನು ಹೊತ್ತಿರುತ್ತವೆಂದು ಪ್ರಸಿದ್ಧವಾಗಿರುವ ಸಾವಿರಾರು ಪರ್ವತಗಳಿಲ್ಲವೆ? ಅವುಗಳೂ ಕೂಡ ಸತ್ಪುರುಷರಿಗೆ ಮಾನ್ಯಗಳೇ. ಆದರೆ ಅವುಗಳಿಗೆ ಅವುಗಳ ದೇಶದಲ್ಲಿ ಮಾತ್ರ ಗೌರವವಿರುತ್ತದೆ.

೯೨. ಮಂದೇಹಪರ್ವತವು ಆಕಾರದಲ್ಲಿ ಮಾತ್ರ ಪುಷ್ಟಿಯಾಗಿದೆ. ಉದಯಪರ್ವತವು ದಯೆಗೆ ಪಾತ್ರವಾಗಿದೆ. ನಿಷಧಪರ್ವತದಲ್ಲಿ ಔಷಧಿಗಳೇ ಇಲ್ಲ. ಅಸ್ತಪರ್ವತಕ್ಕೆ ಕಾಂತಿಯೇ ಇಲ್ಲವು.

೯೩. ನೀಲಪರ್ವತವು ಕಪ್ಪಾಗಿದೆ. ಮಂದರಪರ್ವತಕ್ಕೆ ಕಣ್ಣುಗಳೇ ಕಾಣದೆ ಮಂದವಾಗಿದೆ. ಮಲಯಪರ್ವತವು ಹಾವುಗಳಿಗೆ ಮನೆಯಾಗಿದೆ. ರೈವತಪರ್ವತದಲ್ಲಿ ಧನವೇ ಇರುವುದಿಲ್ಲ.

೯೪. ಹೇಮಕೂಟ ತ್ರಿಕೂಟಗಳು ಕೂಟವೇ (ಸುಳ್ಳು ಮುಂತಾದುವುಗಳನ್ನು ಹೇಳುವುದೇ) ಉತ್ತರಪದವಾಗಿದೆ. ಕಿಷ್ಕಿಂಧ ಕ್ರೌಂಚ ಸಹ್ಯ ಅವು ಭೂಮಿಯಭಾರವನ್ನೇ ಸಹಿಸಲಾರವು.

ಇತಿ ವಿಂಧ್ಯವಚಶ್ಶ್ರುತ್ವಾ ನಾರದೋ ಹೃದ್ಯಚಿಂತಯತ್ ।
ಅಖರ್ವಗರ್ವಸಂಸರ್ಗೋ ಮಹತ್ವಾಯ ನ ಕಲ್ಪತೇ ॥ ೯೫ ॥

ಶ್ರೀಶೈಲಮುಖ್ಯಾಃ ಕಿಂ ಶೈಲಾ ನೇಹ ಸಂತ್ಯಮಲಶ್ರಿಯಃ ।
ಯೇಷಾಂ ಶಿಖರಮಾತ್ರಾದಿದರ್ಶನಂ ಮುಕ್ತಯೇ ಸತಾಂ ॥ ೯೬ ॥

ಅದ್ಯಾಸ್ಯ ಬಲಮಾಲೋಚ್ಯಮಿತಿ ಧ್ಯಾತ್ವಾಬ್ರವೀನ್ಮುನಿಃ ।
ಸತ್ಯಮುಕ್ತಂ ಹಿ ಭವತಾ ಗಿರಿಸಾರಂ ವಿವೃಣ್ವತಾ ॥ ೯೭ ॥

ಪರಂ ಶೈಲೇಷು ಶೈಲೇಂದ್ರ ಮೇರುಸ್ತ್ವಾಮವಮನ್ಯತೇ ।
ಮಯಾ ನಿಶ್ಶ್ವಸಿತಂ ಚೈತತ್ತ್ವಯಿ ಚಾಪಿ ನಿವೇದಿತಂ ॥ ೯೮ ॥

---

೯೫. ವಿಂಧ್ಯಪರ್ವತವು ಹೇಗೆ ಹೇಳಿದುದನ್ನು ಕೇಳಿ ನಾರದನು ಇಂತೆಂದು ಮನಸ್ಸಿನಲ್ಲಿಯೇ ಯೋಚಿಸಿದನು. ಪೂರ್ಣವಾದ ಗರ್ವವನ್ನು ಹೊಂದಿರುವುದು ದೊಡ್ಡತನಕ್ಕೆ ಯೋಗ್ಯವಲ್ಲ.

೯೬. ಶ್ರೀಶೈಲವೇ ಮುಂತಾದ ಪರ್ವತಗಳಿಷ್ಟಿಲ್ಲ! ಅವುಗಳಲ್ಲೆಲ್ಲಾ ಬಹುವಾಗಿ ಸಂಪತ್ತಿರುವುದು. ಆದರೆ ಅವಕ್ಕೆ ಗರ್ವವಿಲ್ಲ. ಅವುಗಳ ಶಿಖರವನು ನೋಡಿದರೇನೇ ಜನಗಳಿಗೆ ಮುಕ್ತಿಯು ಬರುವುದು.

೯೭. ಈ ವಿಂಧ್ಯಪರ್ವತದ ಬಲವನ್ನು ಪರೀಕ್ಷಿಸಬೇಕು. ಎಂದು ಯೋಚಿಸಿ ಅವನನ್ನು ಕುರಿತು ಇಂತೆಂದನು. ಎಲೈ ವಿಂಧ್ಯನೆ! ಪರ್ವತಗಳ. ಬಲವನ್ನು ಕುರಿತು ವಿವರಿಸುತ್ತ ನೀನು ಹೇಳಿದುದೆಲ್ಲವೂ ಸತ್ಯವೇ ಆಗಿರುವುದು.

೯೮. ಎಲೈ ಶೈಲೇಂದ್ರನೆ! ಪರ್ವತಗಳೊಳಗೆ ಮೇರುವು ಮಾತ್ರ ನನ್ನನ್ನು ಬಹುವಾಗಿ ತಿರಸ್ಕರಿಸುತ್ತಾನೆ. ಅದಕ್ಕೋಸ್ಕರವೇ ನಾನು ನಿಟ್ಟುಸಿರು ಬಿಟ್ಟೆನ್ನು ಅದನ್ನು ನಿನಗೆ ಹೇಳಿದ್ದೇನೆ.

ಅಥವಾ ಮದ್ವಿಧಾನಾಂ ಹಿ ಕೇಯಂ ಚಿಂತಾ ಮಹಾತ್ಮನಾಂ ।
ಸ್ವಸ್ತ್ಯಸ್ತು ತುಭ್ಯಮಿತ್ಯುಕ್ತ್ವಾ ಯಯೌ ಸ ವ್ಯೋಮವರ್ತ್ಮನಾ ॥ ೯೯ ॥

ಗತೇ ಮುನೌ ನಿನಿಂದ ಸ್ವಮತೀವೋದ್ವಿಗ್ನಮಾನಸಃ ।
ಚಿತ್ತೇ ವಿಚಾರಯಾಮಾಸ ಮೇರೋಃ ಶ್ರೈಷ್ಠ್ಯಂ ಕಥಂ ತ್ವಿತಿ ॥ ೧೦೦ ॥

ಮೇರೋಃ ಪ್ರದಕ್ಷಿಣಂ ಕುರ್ಯಾನ್ನಿತ್ಯಮೇಷ ದಿವಾಕರಃ ।
ಸಗ್ರಹರ್ಕ್ಷಗಣೋ ನೂನಂ ಮನ್ಯಮಾನೋ ಬಲಾಧಿಕಂ ॥ ೧೦೧ ॥

ಇತಿ ನಿಶ್ಚಿತ್ಯ ವಿಂಧ್ಯಾದ್ರಿರ್ವವೃಧೇ ಸಮೃಧೇಕ್ಷಣಃ ।
ನಿರುಧ್ಯ ಚಾರ್ಕಮಧ್ವಾನಂ ಸ್ವಸ್ಥೋಭೂದ್ಗಗನಾಂಗಣೇ ॥ ೧೦೨ ॥

೯೯-೧೦೦. ಇದು ಹಾಗಿರಲಿ! ನನ್ನಂತಹ ಮಹಾತ್ಮರಿಗೆ ಇದರ ಚಿಂತೆಯೇತಕ್ಕೆ? ನಿನಗೆ ಒಳ್ಳೆಯದಾಗಲಿ! ಎಂದು ಹೇಳಿ ನಾರದನು ಅಂತರಿಕ್ಷಮಾರ್ಗದಿಂದ ಹೊರಟು ಹೋದನು. ಆ ಋಷಿಯು ಅತ್ತಹೋದ ಮೇಲೆ ವಿಂಧ್ಯನು ಈರ್ಷ್ಯೆಯನ್ನು ಹೊಂದಿ ಬಹುವಾಗಿ ನಿಂದಿಸಿಕೊಂಡನು. ಮೇರುವು ಹೇಗೆ ಶ್ರೇಷ್ಠನಾಗಿರುವನು? ಎಂದು ಮನಸ್ಸಿನಲ್ಲಿಯೇ ಯೋಚಿಸಿದನು.

೧೦೧. ಓಹೊ! ತಿಳಿಯಿತು ಸೂರ್ಯನೂ ಗ್ರಹಗಳೂ ಈ ಮೇರುವನ್ನೇ ನಿತ್ಯವೂ ಪ್ರದಕ್ಷಿಣೆಮಾಡುತ್ತಿರುವರು. ಇದನ್ನೇ ನೋಡಿ ತಾನು ಬಲಿಷ್ಠನೆಂದು ತಿಳಿದುಕೊಂಡಿರುವನು. ಲವನಿಗೆ ತೊಂದರೆಯನ್ನು ಮಾಡಬೇಕು.

೧೦೨. ಎಂಬುದಾಗಿ ನಿಶ್ಚಯಿಸಿಕೊಂಡು ಆ ವಿಂಧ್ಯನು ಹೊಟ್ಟೆಯ ಕಿಚ್ಚಿನಿಂದ ಆಕಾಶದವರೆಗೂ ಬೆಳೆದು ಸೂರ್ಯನ ಮಾರ್ಗವನ್ನು ತಡೆದು ಸಂತೋಷದಿಂದ ಗಗನದಲ್ಲಿದ್ದನು.

ತತಃ ಪ್ರಭಾತೇ ಸೂರ್ಯೋಽಸೌ ದಿಶಂ ಯಾಮ್ಯಾಂ ಸಮುದ್ಯತಃ ।
ಗಂತುಂ ರುದ್ಧಂ ಸ್ವಪಂಥಾನಂ ದೃಷ್ಟ್ವಾ ಸ್ವಸ್ಥೋಽಭವಚ್ಚಿರಂ ॥ ೧೦೩ ॥

ಯೋಜನಾನಾಂ ಸಹಸ್ರೇ ದ್ವೇ ಶತೇ ದ್ವೇ ದ್ವೇ ಚ ಯೋಜನೇ ।
ಯೋಜನಸ್ಯ ನಿಮೇಷಾರ್ಧಾರ್ದ್ಯಾತಿ ಸೋಽಪಿ ಚಿರಂ ಸ್ಥಿತಃ ॥ ೧೦೪ ॥

ಗತೇ ಬಹುತಿಥೇ ಕಾಲೇ ಪ್ರಾಚ್ಯೋದೀಚ್ಯಾ ಭೃಶಾರ್ದಿತಾಃ ।
ಚಂಡರಶ್ಮೇಃ ಕರವ್ರಾತಪಾತಸಂತಾಪತಾಪಿತಾಃ ॥ ೧೦೫ ॥

ಪಾಶ್ಚಾತ್ಯಾ ದಾಕ್ಷಿಣಾತ್ಯಾಶ್ಚ ನಿದ್ರಾಮುದ್ರಿತಲೋಚನಾಃ ।
ಶಮಿತಾ ಏವ ದೃಶ್ಯಂತೇ ಸತಾರಗ್ರಹಮಂಬರಂ ॥ ೧೦೬ ॥

---

೧೦೩. ಅನಂತರ ಸೂರ್ಯನು ಬೆಳಗಾಗುತ್ತಲೂ ದಕ್ಷಿಣದಿಕ್ಕಿನ ಕಡೆಯಿಂದ ಪ್ರದಕ್ಷಿಣೆಯಾಗಿ ಹೋಗಲು ಪ್ರಯಾಣಮಾಡಿ ಹೊರಟನು. ಅಲ್ಲಿ ದಾರಿಯು ತಡೆಯಲ್ಪಟ್ಟಿರುವುದನ್ನು ನೋಡಿ ಬಹುಕಾಲ ಅಲ್ಲಿಯೇ ನಿಂತುಬಿಟ್ಟನು.

೧೦೪. ಆ ಸೂರ್ಯನು ಒಂದು ನಿಮಿಷಾರ್ಧಕ್ಕೆ ಒಂದು ಯೋಜನವನ್ನು ಹೋಗುವನು. ಅವನು ಹೋಗಬೇಕಾದುದು ಎರಡುಸಾವಿರದ ಇನ್ನೂರ ಎರಡು ಯೋಜನಗಳು. ಈ ದಾರಿಯನ್ನು ಹೋಗಲು ಸಾಧ್ಯವಾಗದೆ ಬಹುಕಾಲ ಅಲ್ಲಿಯೇ ನಿಂತುಬಿಟ್ಟನು.

೧೦೫. ಈ ಸೂರ್ಯನು ಹೋಗದೆ ಅಲ್ಲಿಯೇ ಬಹುಕಾಲದವರೆಗೂ ನಿಲ್ಲಲು ಪೂರ್ವ ಮತ್ತು ಉತ್ತರದಿಕ್ಕಿನವರು ಆ ಸೂರ್ಯನ ಕಿರಣಗಳಿಂದ ಬಹುವಾಗಿ ತೊಂದರೆಪಟ್ಟರು.

೧೦೬. ಪಶ್ಚಿಮದಿಕ್ಕಿನವರೂ ದಕ್ಷಿಣದಿಕ್ಕಿನವರೂ ಯಾವಾಗಲೂ ರಾತ್ರಿಯೇ ಇರುವುದರಿಂದ ನಿದ್ರೆಯನ್ನೇ ಮಾಡುತ್ತಿದ್ದರು. ಆಕಾಶದಲ್ಲಿ ನಕ್ಷತ್ರಗಳೂ ಗ್ರಹಗಳೂ ಕಾಣದೆ ಆಕಾಶವೇ ನಾಶವಾದಂತಿದ್ದಿತು.

ಸ್ವಾಹಾಸ್ವಧಾವಷಟ್ಕಾರವರ್ಜಿತೇ ಜಗತೀತಲೇ ।
ಪಂಚಯಜ್ಞಕ್ರಿಯಾಲೋಪಾಚ್ಚಕಂಪೇ ಭುವನತ್ರಯಂ ॥ ೧೦೭ ॥

ತತಸ್ಸುರಾ ವಿಧೇರ್ವಾಕ್ಯಾದಗಸ್ತಿಂ ತದ್ಗಿರೇರ್ಗುರುಂ ।
ಪ್ರಾರ್ಥಯಾಮಾಸುಶ್ಚಾತ್ರೈತ್ಯ ಸ ಮುನಿರ್ವಿಹ್ವಲೋಽಭವತ್ ॥ ೧೦೮ ॥

ತದಾಗಸ್ತಿರ್ಮಯೋಕ್ತಶ್ಚ ಗಚ್ಛ ತ್ವಂ ದಕ್ಷಿಣಾಂ ದಿಶಂ ।
ವಾಕ್ಪಾಶೇನ ಗಿರಿಂ ಬಧ್ವಾ ಮಾ ಖಿದ ತ್ವಂ ಭಜಸ್ವ ಮಾಂ ॥ ೧೦೯ ॥

ಅಹಮಪ್ಯಚಿರೇಣೈವ ತವ ಖೇದಾಪನುತ್ತಯೇ ।
ಸೇತೌ ಶ್ರೀರಾಮಪೂಜಾರ್ಥಂ ಯಾಸ್ಯಾಮಿ ದಕ್ಷಿಣಾಂ ದಿಶಂ ॥ ೧೧೦ ॥

---

೧೦೭. ಸೂರ್ಯನು ಕಾಣದೆ ಕಾಲವೇ ತಿಳಿಯದಿದ್ದುದರಿಂದ ಹವ್ಯಕವ್ಯಗಳೊಂದೂ ಪ್ರಪಂಚದಲ್ಲಿ ನಡೆಯದೆ ಹೋಯಿತು. ಸೂರ್ಯನಿರುವಲ್ಲಿ ಹೊತ್ತು ಒಂದೇ ಸಮನಾಗಿದ್ದುದರಿಂದ ಕಾಲವು ತಿಳಿಯದೆಯೂ ರಾತ್ರಿಯಾಗಿರುವಲ್ಲಿ ಸೂರ್ಯನಿಲ್ಲದೆಯೂ ಹವ್ಯಕವ್ಯಗಳು ನಿಂತುಹೋದುವು ಪ್ರಪಂಚವು ಕಷ್ಟಸ್ಥಿತಿಗೆ ಬಂದಿತು. ಯಜ್ಞಗಳನ್ನು ಮಾಡದೆ ಕ್ರಿಯಾಲೋಪವಾದುದರಿಂದ ಮೂರು ಲೋಕವೂ ನಡುಗಲು ಮೊದಲಿಟ್ಟಿತು.

೧೦೮. ಆಗ ದೇವತೆಗಳು ಬ್ರಹ್ಮನ ಮಾತಿನಂತೆ ಆ ವಿಂಧ್ಯಪರ್ವತಕ್ಕೆ ಗುರುವಾದ ಮತ್ತು ಈ ಕಾಶಿಯಲ್ಲಿಯೇ ಇರುವ ಅಗಸ್ತ್ಯನ ಬಳಿಗೆ ಬಂದು ವಿಷಯಗಳೆಲ್ಲವನ್ನೂ ತಿಳಿಸಿ ಪ್ರಾರ್ಥಿಸಿಕೊಳ್ಳಲು ಆ ಮುನಿಯು ಇದನ್ನು ಕೇಳಿ ಕಳವಳಗೊಂಡನು.

೧೦೯. ಆಗ ನಾನು ಅಗಸ್ತ್ಯನನ್ನು ಕುರಿತು ಎಲೈ ಋಷಿಯೆ! ನೀನು ಇಲ್ಲಿಂದ ದಕ್ಷಿಣದಿಕ್ಕಿಗೆ ಹೋಗು. ಮಾತಿನ ಸರಣಿಯಿಂದ ಆ ವಿಂಧ್ಯಪರ್ವತವನ್ನು ಕಟ್ಟಿಹಾಕು. ನೀನು ದುಃಖಿಸಬೇಡ. ನನ್ನನ್ನು ಧ್ಯಾನಿಸು.

೧೧೦. ನಾನೂ ಕೂಡ ಸ್ವಲ್ಪಕಾಲದಲ್ಲಿಯೇ ನಿನ್ನ ಖೇದವನ್ನು ನಾಶಮಾಡಲು ಸೇತುವಿನಲ್ಲಿ ರಾಮನ ಪೂಜೆಗೋಸ್ಕರ ದಕ್ಷಿಣದಿಕ್ಕಿಗೆ ಬರುತ್ತೇನೆ. ಎಂದು ಹೇಳಿದೆನು.

ಇತಿ ಮದ್ವಚಂ ಶ್ರುತ್ವಾಗಸ್ತಿಸ್ತುಷ್ಟಮನಾಸ್ತದಾ ।
ಮುಕ್ತ್ವಾ ಕಾಶೀಂ ಯಯೌ ವಿಂಧ್ಯಂ ಲೋಪಾಮುದ್ರಾಸಮನ್ವಿತಃ॥೧೧೧॥

ತಮಗಸ್ತ್ಯಂ ಸಪತ್ನೀಕಂ ದೃಷ್ಟ್ವಾ ವಿಂಧ್ಯೋತಿಕಂಪಿತಃ ।
ಅತಿಖರ್ವತರೋ ಭೂತ್ವಾ ವಿವಕ್ಷುರವನೀಮಿವ ॥ ೧೧೨ ॥

ಆಜ್ಞಾಪ್ರಸಾದಃ ಕ್ರಿಯತಾಂ ಕಿಂಕರೋಸ್ಮೀತಿ ಚಾಬ್ರವೀತ್ ।
ತದ್ವಿಂಧ್ಯವಚನಂ ಶ್ರುತ್ವಾಗಸ್ತಿಃ ಪ್ರಾಹ ಚ ಸಾದರಂ ॥ ೧೧೩ ॥

ವಿಂಧ್ಯ ಸಾಧುರಸಿ ಪ್ರಾಜ್ಞಃ ಮಾಂ ಚ ಜಾನಾಸಿ ತತ್ತ್ವತಃ ।
ಪುನರಾಗಮನಂ ಚೇನ್ಮೇ ತಾವತ್ಪರ್ವತರೋ ಭವ ॥ ೧೧೪ ॥

---

೧೧೧. ನಾನು ಹೀಗೆ ಹೇಳಿದುದನ್ನು ಆ ಅಗಸ್ತ್ಯನು ಕೇಳಿ ಸಂತೋಷಗೊಂಡು ಈ ಉತ್ತಮೋತ್ತಮವಾದ ಕಾಶಿಯನ್ನು ಬಿಟ್ಟು ಹೆಂಡತಿಯಾದ ಲೋಪಾಮುದ್ರೆಯೊಡನೆ ದಕ್ಷಿಣದಿಕ್ಕಿಗೆ ಹೋದನು.

೧೧೨. ಅಗಸ್ತ್ಯನು ಹೆಂಡತಿಯೊಡನೆ ಬಂದುದನ್ನು ನೋಡಿ ವಿಂಧ್ಯನು ಬಹುವಾಗಿ ಹೆದರಿ ನಡುಗಿದನು. ಭೂಮಿಯ ಒಳಗೆ ಹೊರಟು ಹೋಗುವನೋ ಎಂಬಂತೆ ಬಹು ಸಣ್ಣನಾದನು.

೧೧೩. ಆಗ ವಿಂಧ್ಯನು ಎಲೈ ಗುರುವೆ ! ಏನಾಗಬೇಕು ? ನಿನಗೆ ನಾನು ಆಳಾಗಿದ್ದೇನೆ. ಆಜ್ಞೆಯೆಂಬ ಅನುಗ್ರಹವನ್ನು ಮಾಡು. ಎನ್ನಲು ಆ ವಿಂಧ್ಯನ ಮಾತನ್ನು ಕೇಳಿ ಅಗಸ್ತ್ಯನು ಆದರದಿಂದ ಇಂತೆಂದನು.

೧೧೪. ಎಲೈ ವಿಂಧ್ಯನೆ ! ನೀನು ಬುದ್ಧಿವಂತನು. ಯೋಗ್ಯನಾಗಿದ್ದೀಯೆ. ನನ್ನ ವಿಷಯವನ್ನು ಚೆನ್ನಾಗಿ ಬಲ್ಲೆ. ನಾನು ಮತ್ತೆ ಹಿಂದಿರುಗಿ ಬರುವವರೆಗೂ ಹೀಗೆಯೇ ಕುಳ್ಳನಾಗಿಯೇ ಇರು.

ಇತ್ಯುಕ್ತ್ವಾ ದಕ್ಷಿಣಾಮಾಶಾಮಗಸ್ತಿಸ್ಸ ಯಯೌ ತದಾ ।
ವೇಪಮಾನೋ ಗಿರಿಃ ಪ್ರಾಪ ಪುನರ್ಜನ್ಮಾದ್ಯ ಮೇಽಭವತ್ ॥ ೧೧೫ ॥

ಉಚ್ಛಿರಾ ದ್ವಾದಶಾಬ್ದೈಸ್ಸ ಮುನಿಂ ಪಶ್ಯತಿ ದಕ್ಷಿಣೇ ।
ನಾಗತಂ ತಂ ಮುನಿಂ ದೃಷ್ಟ್ವಾ ಪುನಃ ಖರ್ವೋಽವತಿಷ್ಠತೇ ॥ ೧೧೬ ॥

ಅದ್ಯ ಶ್ವೋ ವಾ ಪರಶ್ವೋ ವಾಽಽಗಮಿಷ್ಯತಿ ವೈ ಮುನಿಃ ।
ಇತಿ ಚಿಂತಾಮಹಾಭಾರೈರ್ಗಿರಿರಾಕ್ರಾಂತವತ್ ಸ್ಥಿತಃ ॥ ೧೧೭ ॥

ನಾದ್ಯಾಪಿ ಮುನಿರಾಯಾತಿ ನಾದ್ಯಾಪಿ ಗಿರಿರೇಧತೇ ।
ಅರುಣೋಽಪಿ ಚ ತತ್ಕಾಲೇ ಕಾಲಜ್ಞೋಽಶ್ವಾನಕಾಲಯತ್ ॥ ೧೧೮ ॥

---

೧೧೫. ಆ ವಿಂಧ್ಯನಿಗೆ ಹೀಗೆಂದು ಹೇಳಿ ಅಗಸ್ತ್ಯನು ದಕ್ಷಿಣದಿಕ್ಕಿಗೆ ಬಂದನು. ಗಿರಿಯೂ ಕೂಡ ಅವನು ಹೋದುದನ್ನು ನೋಡಿ ನನಗೆ ಪುನರ್ಜನ್ಮವಾಯಿತು ಎಂದುಕೊಂಡನು.

೧೧೬. ಹೀಗೆ ಹನ್ನೆರಡು ವರ್ಷಗಳು ಕಳೆದಮೇಲೆ ಆ ಪರ್ವತವು ತಲೆಯನ್ನು ಮೇಲಕ್ಕೆತ್ತಿ ಆ ಮುನಿಯು ದಕ್ಷಿಣದಿಕ್ಕಿನಲ್ಲಿರುವುದನ್ನು ನೋಡಿತು. ಆ ಮುನಿಯು ಬರುವುದಿಲ್ಲವೆಂದು ತಿಳಿದು ಮತ್ತೆ ಗಿಡ್ಡವಾಗಿಯೇ ಆಗಿದೆ.

೧೧೭. ಈಗಲೂ ಕೂಡ ಆ ಗಿರಿಯು ಇಂದು ಬಂದಾನು? ನಾಳೆ ಬಂದಾನು? ನಾಡಿದ್ದು ಬಂದಾನು? ಎಂಬತಕ್ಕ ಚಿಂತೆಯ ಭಾರದಿಂದಲೇ ಕೂಡಿಕೊಂಡಿರುವಂತೆ ಕಾಣುತ್ತದೆ.

೧೧೮. ಇದುವರೆಗೂ ಆ ಮುನಿಯು ಬರಲೇ ಇಲ್ಲ. ಇದುವರೆಗೂ ಆ ಬೆಟ್ಟವು ಬೆಳೆಯಲೂ ಇಲ್ಲ. ಒಡನೆಯೇ ಕಾಲವನ್ನು ಬಲ್ಲ ಅರುಣನು ತನ್ನ ಕುದುರೆಗಳನ್ನು ಮುಂದಕ್ಕೆ ಬಿಟ್ಟನು.

ಜಗತ್ ಸ್ವಾಸ್ಥ್ಯಮವಾಪ್ನೋಚ್ಚೈಃ ಪೂರ್ವವದ್ಭಾನುಸಂಚರೈಃ ।
ಸ ಮುನಿರ್ದಂಡಕಂ ಗತ್ವಾ ಮದ್ವಾಕ್ಯಂ ಸಂಸ್ಮರನ್ ಹೃದಿ ॥ ೧೧೯ ॥

ಕರೋತಿ ಮತ್ಪ್ರತೀಕ್ಷಾಂ ಚ ತಸ್ಮಾದ್ಯಾಸ್ಯಾಮ್ಯಹಂ ಕಪೇ ।
ಇತ್ಯುಕ್ತೋ ಮಾರುತಿಃ ಕಾಶ್ಯಾಂ ಮಯಾ ದೇವಿ ವಿಸರ್ಜಿತಃ ॥ ೧೨೦ ॥

ಜಗಾಮಾಕಾಶಮಾರ್ಗೇಣ ಶೀಘ್ರಂ ರಾಮಂ ಸ ಮಾರುತಿಃ ।
ಕಿಂಚಿದ್ಗರ್ವಸಮಾವಿಷ್ಟೋ ಲಿಂಗದ್ವಯಸಮನ್ವಿತಃ ॥ ೧೨೧ ॥

ತದ್ಗರ್ವಂ ರಾಘವೋ ಜ್ಞಾತ್ವಾ ಸುಗ್ರೀವಾದೀನ್ ವಚೋಽಬ್ರವೀತ್ ।
ಮುಹೂರ್ತಾತಿಕ್ರಮೋ ಮೇಽದ್ಯ ಭವಿಷ್ಯತಿ ತತಸ್ತ್ವಹಂ ॥ ೧೨೨ ॥

---

೧೧೯. ಸೂರ್ಯನು ಹಿಂದಿನಂತೆ ಸಂಚಾರಮಾಡುತ್ತ ಬಂದುದರಿಂದ ಜಗತ್ತು ಸ್ವಸ್ಥವಾಯಿತು. ಆ ಮುನಿಯು ದಂಡಕಾರಣ್ಯಕ್ಕೆ ಹೋಗಿ ನಾನು ಹೇಳಿದುದನ್ನೇ ಯೋಚಿಸುತ್ತ ನನ್ನನ್ನೇ ಎದುರು ನೋಡುತ್ತಿರುವನು.

೧೨೦. ಎಲೈ ಕಪಿಯೆ ! ಅಗಸ್ತ್ಯನು ನನ್ನನ್ನು ನೋಡುತ್ತಿರುವುದರಿಂದ ನಾನು ಹೊರಡುತ್ತೇನೆ. ಎಂದು ಮಾರುತಿಗೆ ಕಾಶಿಯಲ್ಲಿ ಹೇಳಿ ಕಳುಹಿಸಿದೆನು.

೧೨೧. ಮಾರುತಿಯು ರಾಮನ ಬಳಿಗೆ ಬೇಗನೆ ಹೋಗಬೇಕೆಂದು ಆಕಾಶಮಾರ್ಗದಿಂದ ಹೊರಟನು. ಆ ಶಿವನು ಕೊಟ್ಟ ಎರಡು ಲಿಂಗಗಳನ್ನೂ ಕೈಯ್ಯಲ್ಲಿ ಹಿಡಿದಿದ್ದನು. ಸ್ವಲ್ಪಮಟ್ಟಿನ ಗರ್ವವೂ ಅವನನ್ನು ಆವರಿಸಿತು.

೧೨೨. ಈ ಗರ್ವವನ್ನು ರಾಮನು ತಿಳಿದುಕೊಂಡನು. ಆಗ ಸುಗ್ರೀವನೇ ಮುಂತಾದವರನ್ನು ಕುರಿತು ಇಂತೆಂದನು. ಎಲೈ ಸುಗ್ರೀವನೆ ! ಹನುಮಂತನು ಇನ್ನೂ ಬರಲಿಲ್ಲ. ಮುಹೂರ್ತವು ಮೀರಿಹೋಗುತ್ತಿದೆ.

ಕೃತ್ವಾ ಲಿಂಗಂ ಸೈಕತಂ ಚ ಸೇತ್ವಾದೌ ಸ್ಥಾಪಯಾಮಿ ವೈ ।
ಇತ್ಯುಕ್ತ್ವಾ ವಾನರಾನ್ ಸರ್ವಾನ್ ಮುನಿಭಿಃ ಪರಿವೇಷ್ಟಿತಃ ॥ ೧೨೩ ॥

ಸೈಕತಂ ಸ್ಥಾಪಯಾಮಾಸ ಲಿಂಗಂ ರಾಮೋ ವಿಧಾನತಃ ।
ತದಾ ಸಸ್ಮಾರ ಮನಸಿ ಕೌಸ್ತುಭಂ ರಘುನಂದನಃ ॥ ೧೨೪ ॥

ತಾವದ್ವ್ಯಯೌ ಮಣಿಶ್ಶೀಘ್ರಂ ಖಾತ್ಕೋಟಿತಪನೋಪಮಃ ।
ತಂ ಬಬಂಧ ಮಣಿಂ ಕಂಠೇ ಕೌಸ್ತುಭಂ ರಘುನಂದನಃ ॥ ೧೨೫ ॥

ಮಣ್ಯುದ್ಭವೈರ್ಧನೈರ್ವಸ್ತ್ರೈರಶ್ವಾಭರಣಧೇನುಭಿಃ ।
ದಿವ್ಯಾನ್ನೈಃ ಪಾಯಸಾದ್ಯೈಶ್ಚ ಪೂಜಯಾಮಾಸ ತಾನ್ ಮುನೀನ್ ॥ ೧೨೬ ॥

---

೧೨೩. ಆದುದರಿಂದ ನಾನು ಮರಳಿನ ಲಿಂಗವನ್ನು ಮಾಡಿ ಈ ಸೇತುವಿನ ಆರಂಭದಲ್ಲಿ ಇಡುತ್ತೇನೆ. ಹೀಗೆಂದು ಹೇಳಿ ಕಪಿಗಳೆಲ್ಲರನ್ನೂ ಕರೆಸಿದನು. ಮುನಿಗಳೂ ಕೂಡ ಬಂದರು.

೧೨೪. ರಾಮನು ಮರಳಿನಲ್ಲಿ ಲಿಂಗವನ್ನು ಮಾಡಿ ಅಲ್ಲಿ ಸ್ಥಾಪಿಸಿದನು. ಆಗ ಕೇಳಿದುದನ್ನು ಕೊಡುವ ಕೌಸ್ತುಭಮಣಿಯನ್ನು ಆ ಶ್ರೀರಾಮನು ಸ್ಮರಿಸಿದನು.

೧೨೫. ಆಗ ಕೌಸ್ತುಭಮಣಿಯು ಕೋಟಿಸೂರ್ಯರಂತೆ ಪ್ರಕಾಶಿಸುತ್ತ ಅಂತರಿಕ್ಷದಿಂದ ಬಂದಿತು. ಆ ಮಣಿಯನ್ನು ತೆಗೆದು ಆ ದೇವರ ಕತ್ತಿಗೆ ಕಟ್ಟಿದನು.

೧೨೬. ಆ ಮಣಿಯು ಕೊಟ್ಟಂಥ ಹಣದಿಂದಲೂ ವಸ್ತ್ರದಿಂದಲೂ ಆಭರಣದಿಂದಲೂ ಧೇನುಗಳಿಂದಲೂ ರಾಮನು ಮುನಿಗಳನ್ನು ತೃಪ್ತಿಪಡಿಸಿದನು. ಮತ್ತು ಅದರಿಂದಲೇ ಉತ್ಪನ್ನವಾದ ಅನ್ನದಿಂದಲೂ ಪಾಯಸದಿಂದಲೂ ಕೂಡ ಎಲ್ಲರನ್ನೂ ತೃಪ್ತಿಪಡಿಸಿದನು.

ತತಸ್ತೇ ಮುನಯಸ್ತುಷ್ಟಾ ರಾಘವೇಣಾತಿಪೂಜಿತಾಃ ।
ಯಯುಃ ಸ್ವೀಯಾಶ್ರಮಾನ್ ಮಾರ್ಗೇ ತಾನ್ ದದರ್ಶ ಸ ಮಾರುತಿಃ॥೧೨೭॥

ಪಪ್ರಚ್ಛ ಮಾರುತಿರ್ವಿಪ್ರಾನ್ ಯೂಯಂ ಕೇನ ಪ್ರಪೂಜಿತಾಃ ।
ತೇ ಪ್ರೊಚುರ್ಲಿಂಗಮಾರಾಧ್ಯ ರಾಘವೇಣೈವ ಪೂಜಿತಾಃ ॥ ೧೨೮ ॥

ತತ್ತೇಷಾಂ ವಚನಂ ಶ್ರುತ್ವಾ ಕ್ರೋಧಾವಿಷ್ಟೋ ವ್ಯಚಿಂತಯತ್ ।
ವೃಥಾಹಂ ಶ್ರಮಿತಸ್ತೇನ ರಾಮೇಣಾದ್ಯ ಪ್ರತಾರಿತಃ ॥ ೧೨೯ ॥

ಇತ್ಥಂ ವದನ್ ಯಯೌ ರಾಮಂ ಕ್ರೋಧಾತ್ ಸ್ವೀಯಂ ಪದದ್ವಯಂ ।
ಭುವಿ ಸಂತಾಡ್ಯ ಪತಿತಸ್ತದಾ ಭೂಮ್ಯಾಂ ಪದದ್ವಯಂ ॥ ೧೩೦ ॥

---

೧೨೭. ರಾಘವನಿಂದ ಸನ್ಮಾನಿಸಲ್ಪಟ್ಟ ಋಷಿಗಳೆಲ್ಲರೂ ತೃಪ್ತರಾದರು. ಆವನು ಕೊಟ್ಟದಾನಗಳನ್ನು ತೆಗೆದುಕೊಂಡು ಅವರೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ಹೋದರು. ಮಾರುತಿಯು ದಾರಿಯಲ್ಲಿ ಬರುತ್ತಿದ್ದಾಗ ಅವರು ಎದುರಿಗೆ ಹೋಗುತ್ತಿರಲು ಅವರನ್ನು ಕಂಡನು.

೧೨೮. ಆಗ ಆ ಮಾರುತಿಯು ಎಲೈ ಋಷಿಗಳಿರಾ! ನಿಮಗೆ ಈ ಪದಾರ್ಥಗಳೆಲ್ಲವನ್ನೂ ಕೊಟ್ಟು ಗೌರವಿಸಿದವರಾರು? ಎನ್ನಲು ಅವರು ಶ್ರೀರಾಮನು ಶಿವಲಿಂಗವನ್ನು ಪ್ರತಿಷ್ಠೆಮಾಡಿ ನಮ್ಮನ್ನೆಲ್ಲಾ ಗೌರವಿಸಿದನು. ಎಂದರು.

೧೨೯. ಅವರು ಹೀಗೆ ಹೇಳಲು ಹನುಮಂತನಿಗೆ ಬಹುವಾಗಿ ಕೋಪಬಂದಿತು. ಆಗ ಈ ರಾಮನು ನನ್ನನ್ನು ವ್ಯರ್ಥವಾಗಿ ಶ್ರಮಪಡಿಸಿ ಮೋಸಪಡಿಸಿದನು. ಎಂದು ಯೋಚಿಸಿಕೊಂಡನು.

೧೩೦. ಹೀಗೆಂದೆನ್ನುತ್ತಾ ಕೋಪದಿಂದ ತನ್ನ ಎರಡು ಕಾಲುಗಳನ್ನೂ ನೆಲದಮೇಲೆ ಅಂತರಿಕ್ಷದಿಂದ ಧುಮುಕಿ ಬಡಿಯಲು ಆ ರೀತಿಯಾಗಿ ಬಡಿದ ಎರಡು ಜಾಗಗಳಲ್ಲಿಯೂ ಎರಡು ಹಳ್ಳಗಳಾದುವು.

ಗತಂ ಕಪಿಸ್ತದಾ ರಾಮಮಬ್ರವೀತ್ಕಿಂ ನ ಮೇ ಸ್ಮೃತಿಃ ।
ಸೀತಾಶುದ್ಧಿರ್ಮಯಾ ಲಂಕಾಂ ಗತ್ವಾನೀತೇತಿ ಸಾಧ್ಯ ಹಿ ॥ ೧೩೧ ॥

ತಸ್ಯ ಮೇದ್ಯೋಪಹಾಸೋತ್ರ ಕಾಶೀಂ ಪ್ರೇಷ್ಯ ತ್ವಯಾ ಕೃತಃ ।
ಕಿಮರ್ಥಂ ಶ್ರಮಿತಶ್ಚಾಹಂ ಯದೀತ್ಥಂ ತೇ ಹೃದಿ ಸ್ಥಿತಂ ॥ ೧೩೨ ॥

ಅಭವಿಷ್ಯತ್ ಮಯಾ ಜ್ಞಾತಂ ಚೇತ್ಪೂರ್ವಂ ಹೃದ್ಗತಂ ತವ ।
ಕಾಶೀಮಹಂ ತರ್ಹಿ ಗತ್ವಾ ಕಿಮರ್ಥಂ ಲಿಂಗಮಾನಯೇ ॥ ೧೩೩ ॥

ಏಕಂ ತ್ವದರ್ಥಮಾನೀತಮಪರಂ ಲಿಂಗಮುತ್ತಮಂ ।
ಮಯಾತ್ಮಾರ್ಥಂ ಸಮಾನೀತಂ ತವಾಗ್ರೇ ಕಿಂ ಕರೋಮ್ಯಹಂ ॥ ೧೩೪ ॥

೧೩೧–೧೩೨. ಅನಂತರ ರಾಮನ ಬಳಿಗೆ ಬಂದು ರಾಮನನ್ನು ಕುರಿತು ಎಲೈ ರಾಮನೆ ! ಈಗ ತಾನೆ ಲಂಕೆಗೆ ಹೋಗಿ ಅಲ್ಲಿಂದ ಹಾರಿಬಂದು ಸೀತೆಯ ಸಮಾಚಾರವನ್ನು ತಂದಿರುವೆನು. ಅದು ನಿನಗೆ ಜ್ಞಾಪಕದಲ್ಲಿಲ್ಲವೆ ಮರೆತು ಹೋಯಿತೆ ! ಅಂತಹ ನನ್ನನ್ನು ಈಗ ನೀನು ಕಾಶಿಗೆ ಕಳುಹಿಸಿ ಹಾಸ್ಯಮಾಡಿ ಅವಮಾನ ಮಾಡಬಹುದೆ ? ನಿನ್ನ ಮನಸ್ಸಿನಲ್ಲಿ ಮರಳಿನ ಲಿಂಗವನ್ನೇ ಸ್ಥಾಪಿಸಬೇಕೆಂದಿದ್ದರೆ ನನ್ನನ್ನೇಕೆ ಕಾಶಿಗೆ ಕಳುಹಿಸಿ ಅವಮಾನಮಾಡಬೇಕಾಗಿದ್ದಿತು ?

೧೩೩. ನಿನ್ನ ಮನಸ್ಸಿನಲ್ಲಿ ಹೀಗಿರುವುದನ್ನು ನಾನು ತಿಳಿದಿದ್ದರೆ ನಾನೇಕೆ ಕಾಶಿಗೆ ಹೋಗಿ ಈ ರೀತಿಯಾಗಿ ಕಷ್ಟಪಟ್ಟು ಲಿಂಗವನ್ನು ತರುತ್ತಿದ್ದೆನು ?

೧೩೪. ನೀನು ಸ್ಥಾಪಿಸಬೇಕೆಂದು ಒಂದು ಲಿಂಗವನ್ನೂ ನಾನು ಸ್ಥಾಪಿಸಬೇಕೆಂದು ಮತ್ತೊಂದು ಲಿಂಗವನ್ನೂ ತಂದೆನು. ಈಗ ಇವನ್ನು ನಿನ್ನೆದುರಿನಲ್ಲಿ ಏನುಮಾಡಲಿ ? ಹೇಳು.

ಏವಂ ಕ್ರೋಧಯುತಂ ವಾಕ್ಯಂ ಕಿಂಚಿದ್ಗರ್ವಸಮನ್ವಿತಂ ।
ರಾಮಶ್ಶ್ರುತ್ವಾ ಕಪಿಂ ಪ್ರಾಹ ಕಪೇ ತ್ವಂ ಸತ್ಯವಾಗಸಿ ॥ ೧೩೫ ॥

ಮಯೈತತ್ ಸ್ಥಾಪಿತಂ ಲಿಂಗಂ ಸಮುತ್ಪಾಟಯ ತ್ವಂ ಬಲಾತ್ ।
ಸ್ಥಾಪಯಾಮಿ ತ್ವಯಾನೀತಂ ಕಾಶ್ಯಾ ವಿಶ್ವೇಶ್ವರಾಭಿದಂ ॥ ೧೩೬ ॥

ತಥೇತ್ಯುಕ್ತ್ವಾ ಮಾರುತಿಸ್ಸೈಕತಸ್ಯೇಶ್ವರಸ್ಯ ಚ ।
ಸಂವೇಷ್ಟ್ಯ ಮಸ್ತಕೇ ಪುಚ್ಛಂ ಬಲೇನಾಂದೋಲಯನ್ ಮುಹುಃ ॥ ೧೩೭ ॥

ತ್ರುಟಿತಂ ತತ್ಕಪೇಃ ಪುಚ್ಛಂ ಪಪಾತ ಭುವಿ ಮೂರ್ಛಿತಃ ।
ಜಹಸುರ್ವಾನರಾಸ್ಸರ್ವೇ ನ ಚಚಾಲೇಶ್ವರಸ್ತದಾ ॥ ೧೩೮ ॥

---

೧೩೫. ಈ ರೀತಿಯಾಗಿ ಹನುಮಂತನು ಗರ್ವದಿಂದಲೂ ಕೋಪದಿಂದಲೂ ಹೇಳಲು ರಾಮನು ಇದನ್ನು ಕೇಳಿ ಕಪಿಯನ್ನು ಕುರಿತು ಎಲೈ ಕಪಿಯೆ! ನೀನು ಹೇಳಿದುದು ಸತ್ಯವಾದ ಮಾತು.

೧೩೬. ಎಲೈ ಹನುಮನೆ! ನಾನು ಸ್ಥಾಪಿಸಿರುವ ಈ ಲಿಂಗವನ್ನು ನಿನ್ನ ಬಾಲದಿಂದ ಕಿತ್ತೆಸೆದು ಬಿಡು. ನೀನು ಕಾಶಿಯಿಂದ ತಂದಿರುವ ವಿಶ್ವೇಶ್ವರನೆಂಬ ಲಿಂಗವನ್ನು ಇಲ್ಲಿ ಸ್ಥಾಪಿಸುತ್ತೇನೆ. ಎಂದು ಹೇಳಿದನು.

೧೩೭ ಹನುಮಂತನು ಹಾಗೆಯೇ ಆಗಲೆಂದು ಮರಳಿನ ಲಿಂಗದ ತಲೆಗೆ ತನ್ನ ಬಾಲವನ್ನು ಸುತ್ತಿ ಬಲದಿಂದ ಹಿಂದಕ್ಕೂ ಮುಂದಕ್ಕೂ ಅಲ್ಲಾಡಿಸಿದನು.

೧೩೮. ಆಗ ಕಪಿಯಬಾಲವು ಕಿತ್ತುಹೋಗಲು ಅವನು ಮೂರ್ಛೆಗೊಂಡು ನೆಲದಮೇಲೆ ಬಿದ್ದನು. ಆ ಲಿಂಗವು ಮಾತ್ರ ಅಲ್ಲಾಡಲೇ ಇಲ್ಲ. ಇದನ್ನು ನೋಡಿ ಕಪಿಗಳು ನಕ್ಕವು.

ಸ್ವಸ್ಥೋ ಭೂತ್ವಾ ಮಾರುತಿಸ್ಸ ಗತಗರ್ವಸ್ತದಾಭವತ್ ।
ಸನಾಮ ರಾಘವಂ ಭಕ್ತ್ಯಾ ಪ್ರಾರ್ಥಯಾಮಾಸ ತಂ ಮುಹುಃ ॥ ೧೩೯ ॥

ಮಯಾಪರಾಧಿತಂ ರಾಮ ತತ್ ಕ್ಷಮಸ್ವ ಕೃಪಾನಿಧೇ ।
ತದಾಹ ಮಾರುತಿಂ ರಾಮಸ್ತ್ವಮಲ್ಲಿಂಗೋತ್ತರೇ ತ್ವಿದಂ ॥ ೧೪೦ ॥

ವಿಶ್ವನಾಥಾಭಿದಂ ಲಿಂಗಂ ಸ್ವೀಯಂ ಸಂಸ್ಥಾಪಯಾಧುನಾ ।
ತಥೇತಿ ಮಾರುತಿರ್ಲಿಂಗಂ ಸ್ಥಾಪಯಾಮಾಸ ಸಾದರಂ ॥ ೧೪೧ ॥

ಮಾರುತೇಶ್ಚೈವ ಲಿಂಗಾಯ ದದೌ ರಾಮೋ ವರಂ ತದಾ ।
ಅಸಂಪೂಜ್ಯ ವಿಶ್ವನಾಥಂ ಮಾರುತೇ ತ್ವತ್ಪ್ರತಿಷ್ಠಿತಂ ॥ ೧೪೨ ॥

---

೧೩೯. ಮಾರುತಿಯು ಮೂರ್ಛೆಯಿಂದ ಎಚ್ಚೆತ್ತಮೇಲೆ ಯೋಚಿಸಿಕೊಂಡು ಗರ್ವವನ್ನು ಬಿಟ್ಟು ಬಿಟ್ಟನು. ಆಗ ರಾಮನಿಗೆ ನಮಸ್ಕರಿಸುತ್ತ ಪ್ರಾರ್ಥಿಸಿಕೊಂಡನು.

೧೪೦. ಎಲೈ ರಾಮನೆ ! ನಾನು ಅಪರಾಧಮಾಡಿದೆನು. ಅದನ್ನು ಕ್ಷಮಿಸು. ನೀನು ಕೃಪಾನಿಧಿಯು ಎನ್ನಲು ಅದನ್ನು ಕೇಳಿ ರಾಮನು ಎಲೈ ಹನುಮಂತನೆ ! ನೀನು ತಂದಿರುವ ಈ ಲಿಂಗವನ್ನು ನಾನು ಸ್ಥಾಪಿಸಿರುವ ಮರಳಿನ ಲಿಂಗದ ಉತ್ತರದಲ್ಲಿ ಸ್ಥಾಪಿಸು.

೧೪೧. ಅದು ವಿಶ್ವಾನಾಥನೆಂಬ ಹೆಸರಿನಿಂದ ಪ್ರಸಿದ್ಧವಾಗುವುದು ಎನ್ನಲು ಮಾರುತಿಯು ಹಾಗೆಯೇ ಆಗಲೆಂದು ಸಂತೋಷದಿಂದ ಅಲ್ಲಿ ಆ ಲಿಂಗವನ್ನು ಸ್ಥಾಪಿಸಿದನು.

೧೪೨–೧೪೩. ಆಗ ರಾಮನು ಮಾರುತಿಯಿಂದ ಪ್ರತಿಷ್ಠಿತವಾದ ವಿಸ್ವನಾಥನನ್ನು ಪೂಜಿಸದೆ ನಾನು ಸ್ಥಾಪಿಸಿರುವ ಲಿಂಗವನ್ನು ಯಾರು ಆದಿಯಲ್ಲಿ

ಮಮಾದೌ ಪೂಜಯಂತ್ಯತ್ರ ಯೇ ನರಾ ಲಿಂಗಮುತ್ತಮಂ ।
ರಾಮೇಶ್ವರಾಭಿದಂ ಸೇತೌ ತೇಷಾಂ ಪೂಜಾ ವೃಥಾ ಭವೇತ್ ॥ ೧೪೩ ॥

ಇತ್ಯುಕ್ತ್ವಾ ತಂ ಪುನಃ ಪ್ರಾಹ ರಾಮೋ ರಾಜೀವಲೋಚನಃ ।
ಮದರ್ಥಂ ಯತ್ನಮಾನೀತಂ ತ್ವಯಾ ಲಿಂಗಂ ಮಹತ್ತಮಂ ॥ ೧೪೪ ॥

ವಿಶ್ವನಾಥಸ್ಯ ತತ್ತೂಷ್ಣೀಮಸ್ತು ದೇವಾಲಯೇ ಚಿರಂ ।
ಅನರ್ಚಿತಮವನ್ಯಾಂ ತದಪ್ರತಿಷ್ಠಿತಮುತ್ತಮಂ ॥ ೧೪೫ ॥

ಅಗ್ರೇ ಕಾಲಾಂತರೇಣಾಹಂ ತಚ್ಚಾಪಿ ಸ್ಥಾಪಯಾಮಿ ವೈ ।
ತತ್ತತ್ರ ವರ್ತತೇದ್ಯಾಪಿ ಲಿಂಗಂ ವಿಶ್ವೇಶ್ವರಾಂತಿಕೇ ॥ ೧೪೬ ॥

ಅಪ್ರತಿಷ್ಠಾಪಿತಂ ಭೂಮ್ಯಾಂ ನ ಕೇನಾಪಿ ಪ್ರಪೂಜಿತಂ ।
ಪುನಃ ಪ್ರಾಹ ಕಪಿಂ ರಾಮಸ್ತ್ವಮತ್ರ ಚ್ಛಿನ್ನಲಾಂಗುಲಃ ॥ ೧೪೭ ॥

ಪೂಜಿಸುತ್ತಾರೆಯೋ ಅವರಿಗೆ ಈ ಸೇತುವಿನಲ್ಲಿ ಮಾಡಿದ ಪೂಜೆಯು ವ್ಯರ್ಥವಾಗಲಿ ! ಎಂದು ಮಾರುತಿಯ ಲಿಂಗಕ್ಕೆ ವರವನ್ನು ಕೊಟ್ಟನು.

೧೪೪–೧೪೫. ಇಂತೆಂದು ಹೇಳಿ ಅವನನ್ನು ಕುರಿತು ಮತ್ತೆಯೂ ಇಂತೆಂದನು. ನೀನು ನನಗೋಸ್ಕರ ಒಂದು ಲಿಂಗವನ್ನು ತಂದಿರುವೆಯಷ್ಟೆ ! ಆ ಲಿಂಗವು ವಿಶ್ವನಾಥನ ದೇವಾಲಯದಲ್ಲಿ ಹಾಗೆಯೇ ಇರಲಿ ! ಅದಕ್ಕೆ ಪೂಜೆಯೂ ಬೇಡ. ಭೂಮಿಯಲ್ಲಿ ಪ್ರತಿಷ್ಠಿಸುವುದೂ ಬೇಡ.

೧೪೬. ನಾನು ಕಲಾಂತರದಲ್ಲಿ ಮುಂದೆ ಅದನ್ನು ಸ್ಥಾಪಿಸುತ್ತೇನೆ. ಎಂದನು. ಆ ಲಿಂಗವು ಈಗಲೂ ಪೂಜೆಯನ್ನು ಹೊಂದದೆ ಹಾಗೆಯೇ ಆ ವಿಶ್ವೇಶ್ವರನ ಬಳಿಯಲ್ಲಿದ್ದುಕೊಂಡಿದೆ.

೧೪೭. ಅದನ್ನು ಪ್ರತಿಷ್ಠಿಸಿಯೂ ಇಲ್ಲ. ಅದನ್ನು ಯಾರೂ ಪೂಜೆ ಮಾಡುತ್ತಲೂ ಇಲ್ಲ. ಎಲೈ ಕಪಿಯೆ ! ನೀನು ಇಲ್ಲಿ ಬಾಲವನ್ನು ಕತ್ತರಿಸಿಕೊಂಡಿದ್ದಂತೆಯೇ ಮೋಟು ಬಾಲವುಳ್ಳವನಾಗಿ ವಾಸಮಾಡು.

ವಸ ಭೂಮ್ಯಾಂ ಗುಪ್ತಪಾದಃ ಸ್ಮರ್ನ್ ಸ್ವಂ ಗರ್ವಿತಂ ತ್ವಿದಂ ।
ತತಃ ಕಪಿಃ ಸ್ವೀಯಮೂರ್ತಿಂ ಸ್ಥಾಪಯಾಮಾಸ ಸ್ವಾಂಶತಃ ॥ ೧೪೮ ॥

ಛಿನ್ನಪುಚ್ಛಾ ಗುಪ್ತಪಾದಾ ಸಾ ತತ್ರಾದ್ಯಾಪಿ ವರ್ತತೇ ।
ಪತಿತೋ ಮೂರ್ಛಿತೋ ಯತ್ರ ಮಾರುತಿಸ್ತತ್ರ ತದ್ವರಂ ॥ ೧೪೯ ॥

ಬಭೂವ ಮಾರುತೇರ್ನಾಮ್ನಾ ತೀರ್ಥಂ ಪಾಪ ಪ್ರಣಾಶನಂ ।
ರಾಮಸ್ತತ್ರಾಕರೋತ್ಪುಣ್ಯಂ ಸ್ವನಾಮ್ನಾ ತೀರ್ಥಮುತ್ತಮಂ ॥ ೧೫೦ ॥

ಸ್ವಾಂಶೇನ ಸ್ಥಾಪಯಾಮಾಸ ಮೂರ್ತಿಂ ತತ್ರ ರಘೂದ್ವಹಃ ।
ಸೇತುಮಾಧವನಾಮ್ನೀ ಸಾ ವರ್ತತೇಽದ್ಯಾಪಿ ಪಾರ್ವತಿ ॥ ೧೫೧ ॥

---

೧೪೮. ಮತ್ತು ನೀನು ನಿನ್ನ ಗರ್ವವನ್ನು ಸ್ಮರಿಸಿಕೊಂಡು ಕಾಲುಗಳು ಹೂಳಿಕೊಂಡಂತಿರತಕ್ಕವನಾಗಿಯೂ ಇರು. ಎನ್ನಲು ಆ ಕಪಿಯು ತನ್ನ ಮೂರ್ತಿಯನ್ನು ತನ್ನ ಅಂಶದಿಂದ ಸ್ಥಾಪಿಸಿದನು.

೧೪೯. ಈ ಮಾರುತಿ ಮೂರ್ತಿಯು ಬಾಲವನ್ನು ಕತ್ತರಿಸಿಕೊಂಡಂತಿರುವುದಾಗಿಯೂ ಕಾಲನ್ನು ಹೂತುಕೊಂಡಂತಿರುವುದಾಗಿಯೂ ಈಗಲೂ ಅಲ್ಲಿರುವುದು. ಅದೂ ಕೂಡ ಆ ಮಾರುತಿಯು ಮೂರ್ಛೆಗೊಂಡು ಬಿದ್ದ ಜಾಗದಲ್ಲಿಯೇ ಹಾಗಿರುತ್ತದೆ. ಅದೇ ಮಾರುತಿಗೆ ವರವಾಯಿತು.

೧೫೦. ಅಲ್ಲಿಯೇ ಮಾರುತಿ ತೀರ್ಥವೆಂಬ ಒಂದು ತೀರ್ಥವೂ ಆಯಿತು. ಅದು ಪಾಪನಾಶಕವು. ರಾಮನೂ ಕೂಡ ತನ್ನ ಹೆಸರಿನಿಂದ ಅಲ್ಲಿ ಒಂದು ತೀರ್ಥವನ್ನು ಸ್ಥಾಪಿಸಿದನು. ಅದೂ ಪವಿತ್ರವಾದುದು.

೧೫೧. ಅಲ್ಲಿ ರಾಮನು ತನ್ನ ಅಂಶವನ್ನಿಟ್ಟು ತನ್ನ ಮೂರ್ತಿಯನ್ನು ಸೇತುಮಾಧವನೆಂಬ ಹೆಸರಿನಿಂದ ಸ್ಥಾಪಿಸಿದನು. ಅದೂ ಕೂಡ ಈಗಲೂ ಸೇತುಮಾಧವನೆಂಬ ಹೆಸರಿನಿಂದಲೇ ಇದ್ದುಕೊಂಡಿರುವುದು.

ಸ್ವನಾಮ್ನಾ ಲಕ್ಷ್ಮಣಶ್ಚಾಪಿ ಚಕಾರ ತೀರ್ಥಮುತ್ತಮಂ ।
ತತೋ ರಾಮಸ್ಸ್ವಹಸ್ತೇನ ಸ್ಪೃಷ್ಟ್ವಾ ಮಾರುತಿಲಾಂಗುಲಂ ॥ ೧೫೨ ॥

ಚಕಾರ ಪೂರ್ವವದ್ರಮ್ಯಂ ದೃಢಸಂಧಿಂ ಪ್ರಸಾದಿತಃ ।
ತತ್ಪುಚ್ಛವೇಷ್ಟನಾಜ್ಜಾತಃ ಕೃಶೋ ರಾಮೇಶಮಸ್ತಕಃ ॥ ೧೫೩ ॥

ಸ ತಥೈವ ಕೃಶೋದ್ಯಾಪಿ ತತ್ರಾಸ್ತಿ ಶಿವಮಸ್ತಕಃ ।
ತದಾರಭ್ಯ ತ್ಯಕ್ತ ಗರ್ವಶ್ಚಾಭೂದ್ರಾಮೇ ಸ ಮಾರುತಿಃ ॥ ೧೫೪ ॥

ತತೋಽಹಂ ಸೈಕತಾಲ್ಲಿಂಗಾದಾವಿರ್ಭೂಯ ರಘೂದ್ವಹಂ ।
ಅಬ್ರುವಂ ದೇವಿ ತತ್ಸರ್ವಂ ಶೃಣುಷ್ವ ತೇ ವದಾಮ್ಯಹಂ ॥ ೧೫೫ ॥

೧೫೨-೧೫೩. ಅಲ್ಲಿ ಲಕ್ಷ್ಮಣನೂ ಕೂಡ ತನ್ನ ಹೆಸರಿನಿಂದ ಒಂದು ಉತ್ತಮವಾದ ತೀರ್ಥವನ್ನು ಮಾಡಿದನು. ಅನಂತರ ರಾಮನು ಕನಿಕರಗೊಂಡು ಆ ಮಾರುತಿಯ ಬಾಲವನ್ನು ತನ್ನ ಕೈಯಿಂದ ಮುಟ್ಟಿ ಮೊದಲಿನಂತೆಯೇ ಚೆನ್ನಾಗಿರುವಂತೆ ಮಾಡಿದನು. ಬಿಗಿಯಾಗಿ ಸೇರಿಕೊಳ್ಳುವಂತೆಯೂ ಮಾಡಿದನು. ಆ ಕಪಿಯು ರಾಮೇಶ್ವರನ ತಲೆಯನ್ನು ಬಾಲದಿಂದ ಕಟ್ಟಿ ಎಳೆದುದರಿಂದ ಆ ಜಾಗವು ಸಣ್ಣದಾಗಿದೆ.

೧೫೪. ಈಗಲೂ ಕೂಡ ಆ ಶಿವನ ತಲೆಯು ಸಣ್ಣನಾಗಿಯೇ ಇರುವುದು. ಇದು ಮೊದಲುಗೊಂಡು ಮಾರುತಿಯು ರಾಮನ ವಿಷಯದಲ್ಲಿ ಗರ್ವವನ್ನು ಬಿಟ್ಟು ಬಿಟ್ಟನು.

೧೫೫. ಆಗ ನಾನು ಆ ಸೈಕತಲಿಂಗದಿಂದ ಹೊರಗೆ ಬಂದು ರಾಮನನ್ನು ಕುರಿತು ಇಂತೆಂದು ಹೇಳಿದೆನು. ಎಲೈ ದೇವಿಯೇ! ಅದೆಲ್ಲವನೂ ಹೇಳುತ್ತೇನೆ. ಕೇಳು.

ರಾಘವೇಂದ್ರ ರಘುಶ್ರೇಷ್ಠ ಶ್ರುಣು ವೃತ್ತಂ ಪುರಾತನಂ ।
ಏಕದಾಹಂ ಪುರಾ ಭೂಮ್ಯಾಂ ಮಲಿನಾಂಬರ ಸಂಯುತಃ ॥ ೧೫೬ ॥

ಭಿಕ್ಷಾರ್ಥಂ ಕೌತುಕಾದ್ವಿಪ್ರರೂಪೇಣ ವಿಚರನ್ ಸುಖಂ ।
ಋಷೀಣಾಮಾಶ್ರಮಾದ್ಯೇಷು ಹ್ಯಟಂತಂ ಮಾಂ ವಿಲೋಕ್ಯ ಚ ॥ ೧೫೭ ॥

ಮದ್ರೂಪಮೋಹಿತಾಸ್ಸರ್ವಾ ಋಷಿಪತ್ನ್ಯಸ್ಸಹಸ್ರಶಃ ।
ಮತ್ಪೃಷ್ಠೇ ತಾಸ್ಸಮಾಜಗ್ಮುರ್ಭರ್ತೃಭಿರ್ವಾರಿತಾ ಅಪಿ ॥ ೧೫೮ ॥

ತದಾ ತೇ ಚುಕ್ಷುಭುಸ್ಸರ್ವೇ ಮಾಮಜ್ಞಾತ್ವಾ ಮುನೀಶ್ವರಾಃ ।
ದದುಶ್ಶಾಪಂ ಮಹಾಘೋರಂ ಕ್ರೋಧಸಂವಿಗ್ನಮಾನಸಾಃ ॥ ೧೫೯ ॥

ರತ್ಯರ್ಥಂ ಮೋಹಿತಾ ನಾರ್ಯಃ ತ್ವಯಾ ತಸ್ಮಾದ್ದ್ವಿಜಾಧಮಃ ।
ಪತತ್ವದ್ಯ ರತೇಸಂಗಂ ತೇ ಲಿಂಗಂ ಭುವಿ ನೋ ಗಿರಾ ॥ ೧೬೦ ॥

೧೫೬-೧೫೭. ಎಲೈ ರಘುಶ್ರೇಷ್ಠನಾದ ರಾಘವನೆ! ಪೂರ್ವದ ವಿಷಯು ವನ್ನು ಹೇಳುತ್ತೇನೆ. ಕೇಳು. ಒಂದುಸಾರಿ ನಾನು ಕೊಳಕುಬಟ್ಟೆಯನ್ನು ಹಾಕಿಕೊಂಡು ಬ್ರಾಹ್ಮಣವೇಷದಿಂದ ಭಿಕ್ಷೆಯನ್ನು ಮಾಡುತ್ತ ಎಲ್ಲಾ ಕಡೆಯಲ್ಲಿಯೂ ಸುಖವಾಗಿ ತಿರುಗುತ್ತಿದ್ದೆನು.

೧೫೮. ಅದೇ ರೀತಿಯಲ್ಲಿ ಋಷಿಗಳ ಆಶ್ರಮದಲ್ಲಿಯೂ ಸುತ್ತುತ್ತಿದ್ದೆನು. ಅಲ್ಲಿ ಸುತ್ತುತ್ತಿರುವ ನನ್ನನ್ನು ನೋಡಿದ ಋಷಿಪತ್ನಿಯರು ನನ್ನ ರೂಪಿಗೆ ಮೋಹಗೊಂಡು ಅವರೆಲ್ಲರೂ ನನ್ನ ಹಿಂದೆಯೇ ಬಂದರು. ಗಂಡಂದಿರು ತಡೆಯುತ್ತಿದ್ದರೂ ನಿಲ್ಲುತ್ತಿರಲಿಲ್ಲ.

೧೫೯. ಆಗ ಋಷಿಗಳೆಲ್ಲರೂ ನಾನಾರೆಂಬುದನ್ನು ತಿಳಿಯದೆ ಕೋಪ ಗೊಂಡರು. ಮತ್ತು ಆ ಕೋಪದಿಂದ ಘೋರವಾದ ಶಾಪವನ್ನೂ ಕೊಟ್ಟರು.

೧೬೦. ಎಲೈ ದ್ವಿಜಾಧಮನೆ! ನೀನು ಈ ನಾರಿಯರನ್ನು ರತಿಗೋಸ್ಕರ ಮೋಹಗೊಳಿಸಿದುದರಿಂದ ರತಿಗೆ ಪ್ರಧಾನಭೂತವಾದ ನಿನ್ನ ಲಿಂಗವು ನಮ್ಮ ಮಾತಿನಿಂದ ಕೆಳಗೆ ಬಿದ್ದುಹೋಗಲಿ.

ಏವಂ ದ್ವಿಜೈಸ್ತದಾ ಶಪ್ತಃ ಪತಲ್ಲಿಂಗಂ ತದಾ ಭುವಿ ।
ದ್ವಿಜಚ್ಛದ್ಮಸ್ಯ ಮೇ ರಾಮ ತತೋಽಹಂ ಗುಪ್ತತಾಂ ತದಾ ॥ ೧೬೧ ॥

ದ್ವಿಜನಾರ್ಯೋಽಪ್ಯದೃಷ್ಟ್ವಾ ಮಾಂ ಜಗ್ಮುಃ ಸ್ವಂ ಸ್ವಂ ಗೃಹಂ ಪ್ರತಿ ।
ತಲ್ಲಿಂಗಂ ವವೃಧೇ ಭೂಮ್ಯಾಂ ಗಗನಂ ವ್ಯಾಪ್ಯ ಸಂಸ್ಥಿತಂ ॥ ೧೬೨ ॥

ತದ್ದೃಷ್ಟ್ವಾ ಚಕಿತೋ ವೇಧಾಸ್ತಸ್ಯಾಂತಂ ದ್ರಷ್ಟುಮುದ್ಯತಃ ।
ಪಶ್ಯತಸ್ತಸ್ಯ ಕೋಟ್ಯಬ್ದೈರ್ನಾಂತಮಾಸೀಚ್ಚ ವೇಧಸಃ ॥ ೧೬೩ ॥

ತದಾ ಮಾಮೇತ್ಯ ಸ ವಿಧಿರ್ಭಯಾದ್ವೃತ್ತಂ ನ್ಯವೇದಯತ್ ।
ಅಕಾಲೇ ಪ್ರಲಯಸ್ತ್ವದ್ಯ ಶಂಭೋಽನೇನ ಭವಿಷ್ಯತಿ ॥ ೧೬೪ ॥

---

೧೬೧. ಆ ದ್ವಿಜರು ಹೀಗೆ ಶಾಪವನ್ನು ಕೊಡುತ್ತಲೂ ನನ್ನ ಲಿಂಗವು ಕೆಳಗೆ ಬಿದ್ದು ಹೋಯಿತು. ಆ ಬ್ರಾಹ್ಮಣವೇಷದಿಂದಿದ್ದ ನನಗೆ ಹಾಗಾಗಲು ನಾನು ಯಾರಿಗೂ ಕಾಣದಂತೆ ಹೊರಟು ಹೋದೆನು.

೧೬೨. ನಾನು ಕಾಣದಂತೆ ಹೊರಟು ಹೋಗಲು ಆ ಬ್ರಾಹ್ಮಣಪತ್ನಿಯರು ನನ್ನನ್ನು ಕಾಣದೆ ತಮ್ಮ ತಮ್ಮ ಮನೆಗೆ ಹೊರಟು ಹೋದರು. ಆ ನನ್ನ ಲಿಂಗವು ಕೆಳಗೆ ಬಿದ್ದು ದಪ್ಪವಾಗುತ್ತಾ ಭೂಮ್ಯಾಕಾಶಗಳನ್ನು ಆವರಿಸಿಕೊಂಡಿತು.

೧೬೩. ಅದನ್ನು ನೋಡಿ ಆಶ್ಚರ್ಯಪಟ್ಟ ಬ್ರಹ್ಮನು ಅದರ ಕೊನೆಯನು ನೋಡಲು ಇಷ್ಟಪಟ್ಟನು. ಅದನ್ನು ನೋಡಲು ಹೊರಟು ಕೋಟಿವರ್ಷಗಳವರೆಗೆ ಪ್ರಯತ್ನಪಟ್ಟರೂ ಅದು ಕಾಣಲೇ ಇಲ್ಲ.

೧೬೪. ಆಗ ಬ್ರಹ್ಮನು ಭಯದಿಂದ ನನ್ನಬಳಿಗೆ ಬಂದು ಅದರ ವಿಷಯವನ್ನು ತಿಳಿಸಿದನು. ಎಲೈ ಶಂಭುವೆ ! ಅಕಾಲದಲ್ಲಿ ಈಗ ಇದರಿಂದ ಪ್ರಳಯವು ಆಗುತ್ತಿರುವುದು. ಎಂದನು.

ತದಾ ಮಯಾ ಪೂರ್ವವೃತ್ತಂ ವಿಧಿಂ ಸಂಶ್ರಾವ್ಯ ಸಾದರಂ ।
ತ್ರಿಶೂಲೋ ವೇಧಸೇ ದತ್ತಸ್ತಂ ಛೇತ್ತುಂ ಸೋಽಬ್ರವೀಚ್ಚ ಮಾಂ॥ ೧೬೫ ॥

ಕಥಂ ತೇಽಂಗಂ ದಾರಯೇಽಹಂ ತ್ವಮೇವ ಛೇತ್ತುಮರ್ಹಸಿ ।
ತತೋ ಮಯಾರ್ಕಖಂಡಾನಿ ಕೃತಾನಿ ತಸ್ಯ ರಾಘವ ॥ ೧೬೬ ॥

ತ್ರಿಶೂಲೇನಾಪಿ ಕ್ಷಿಪ್ತಾನಿ ಭೂಮ್ಯಾಂ ನಿಪತಿತಾನಿ ಹಿ ।
ತಜ್ಜಾತಾನ್ಯತ್ರ ಲಿಂಗಾನಿ ಜ್ಯೋತಿಸ್ಸಂಜ್ಞಾನಿ ದ್ವಾದಶ ॥ ೧೬೭ ॥

ಓಂಕಾರಸ್ಸೋಮನಾಥಶ್ಚ ತ್ರ್ಯಂಬಕೋ ಮಲ್ಲಿಕಾರ್ಜುನಃ ।
ನಾಗೇಶೋ ವೈದ್ಯನಾಥಶ್ಚ ಕಾಶೀವಿಶ್ವೇಶ್ವರಸ್ತ್ವಹಂ ॥ ೧೬೮ ॥

---

೧೬೫. ಆಗ ನಾನು ಪೂರ್ವದ ವಿಷಯವನ್ನು ಬ್ರಹ್ಮನಿಗೆ ಹೇಳಿದೆನು. ಮತ್ತು ಅದನ್ನು ಕತ್ತರಿಸೆಂದು ಹೇಳಿ ವಿಧಿಗೆ ತ್ರಿಶೂಲವನ್ನು ಕೊಟ್ಟೆನು. ಆಗ ಅವನು ನನ್ನನ್ನು ಕುರಿತು ಇಂತೆಂದನು.

೧೬೬. ಎಲೈ ಶಿವನೆ ! ಅದು ನಿನ್ನ ಅವಯವವು. ಅದನ್ನು ನಾನು ಹೇಗೆ ತಾನೇ ಕತ್ತರಿಸಲಿ ! ನೀನೇ ಕತ್ತರಿಸು. ಎನ್ನಲು ನಾನು ಅದನ್ನು ಹನ್ನೆರಡು ಭಾಗವಾಗಿ ಕತ್ತರಿಸಿದೆನು.

೧೬೭. ಹಾಗೆ ಅದನ್ನು ತ್ರಿಶೂಲದಿಂದ ಹನ್ನೆರಡುಭಾಗವಾಗಿ ಕತ್ತರಿಸಿ ನೆಲದಮೇಲೆ ಎಸೆದೆನು. ಅವೆಲ್ಲವೂ ಜ್ಯೋತಿಸ್ಸಂಜ್ಞೆಗಳಾದ ಹನ್ನೆರಡು ಲಿಂಗಗಳಾದುವು.

೧೬೮–೧೬೯. ಓಂಕಾರ, ಸೋಮನಾಥ, ತ್ರ್ಯಂಬಕ, ಮಲ್ಲಿಕಾರ್ಜುನ, ನಾಗೇಶ, ವೈದ್ಯನಾಥ, ಕಾಶೀವಿಶ್ವೇಶ್ವರ, ಕೇದಾರೇಶ, ಮಹಾಕಾಲ, ಭೀಮೇಶ, ಘುಸ್ಮಣೇಶ್ವರ, ಎಂಬುದಾಗಿ ಹನ್ನೊಂದು ಜ್ಯೋತಿರ್ಲಿಂಗಗಳಾದುವು.

ಕೇದಾರೇಶೋ ಮಹಾಕಾಲೋ ಭೀಮೇಶೋ ಘುಸೃಣೇಶ್ವರಃ ।
ಏವಮೇಕಾದಶ ಜ್ಞೇಯಾ ಜ್ಯೋತಿರ್ಲಿಂಗಮಯಾಶ್ಶುಭಾಃ ॥ ೧೯ ॥

ಗಂಧಮಾದನನಾಮ್ನೇಶೋ ಮೇರೋರೀಶಾನದಿಕ್ಸ್ಥಿತಃ ।
ಆಸೀಚ್ಚಿರಂ ನ ಕಸ್ಯಾಪಿ ಮಾನವಸ್ಯಾಕ್ಷಿಗೋಚರಃ ॥ ೧೨೦ ॥

ತದಾ ತೇ ಮುನಯಸ್ಸರ್ವೇ ಶಿವಂ ಬುದ್ಧ್ವಾ ತು ಲಿಂಗತಃ ।
ದದುರ್ವರಂ ಪುನರ್ಲಿಂಗಂ ತವಾಸ್ತು ಗಿರಿಜಾಪ್ರಿಯ ॥ ೧೨೧ ॥

ತತಃ ಪ್ರಲಯವಾತೇನ ಗಂಧಮಾದನನಾಮಕಂ ।
ತನ್ಮೇರೋರುತ್ತರಂ ಶೃಂಗಮೇಕದಾತ್ರಾಪತದ್ಭುವಿ ॥ ೧೨೨ ॥

ತದಿದಂ ಹ್ಯಬ್ಧಿಸಂಯೋಗೇ ದಕ್ಷಿಣೇ ಸಾಗರಾಂಭಸಿ ।
ಗಂಧಮಾದನನಾಮ್ನೇದಂ ಶೃಂಗಂ ಪಶ್ಯಾದ್ಯ ರಾಘವ ॥ ೧೨೩ ॥

---

೧೨೦. ಈ ರೀತಿಯಾಗಿ ಹನ್ನೊಂದು ಲಿಂಗಗಳು. ಇವೆಲ್ಲವೂ ಜ್ಯೋತಿರ್ಲಿಂಗಗಳು ಗಂಧಮಾದನನೆಂಬ ಮತ್ತೊಂದು ಹನ್ನೆರಡನೆಯ ಲಿಂಗವಿರುವುದು ಅದು ಮೇರುಪರ್ವತದ ಈಶಾನ್ಯದಲ್ಲಿರುವುದು. ಅದು ಬಹು ಕಾಲದವರೆಗೆ ಯಾವ ಮನುಷ್ಯನಿಗೂ ಕಣ್ಣಿಗೆ ಕಾಣಿಸುತ್ತಿರಲಿಲ್ಲ.

೧೨೧. ಆಗ ಋಷಿಗಳೆಲ್ಲರೂ ಶಿವನು ಲಿಂಗರೂಪದಲ್ಲಿರುವನು. ಎಂದು ತಿಳಿದುಕೊಂಡರು. ಎಲೈ ಗಿರಿಜಾಪ್ರಿಯನೆ! ನಿನಗೆ ಲಿಂಗವು ಮೊದಲಿನಂತೆ ಇರಲಿ! ಎಂದು ವರವನ್ನು ಕೊಟ್ಟು ಲಿಂಗವಿರುವಂತೆ ಮಾಡಿದರು.

೧೨೨. ಒಂದುಸಾರಿ ಬಲವಾದ ಗಾಳಿಯು ಬೀಸಲು ಗಂಧಮಾದನವೆಂಬ ಮೇರುವಿನ ಉತ್ತರ ಶೃಂಗವು ಇಲ್ಲಿಗೆ ಬಂದು ಬಿದ್ದಿತು.

೧೨೩. ಅದು ಈ ದಕ್ಷಿಣಸಮುದ್ರದ ಸಾಗರಸಂಗಮದಲ್ಲಿ ಬಂದು ಬಿದ್ದಿದೆ. ಅದೇ ಆ ಗಂಧಮಾದನವೆಂಬ ಶೃಂಗವು. ಇಲ್ಲಿ ಬಿದ್ದಿದೆ. ನೋಡು!

ಗಂಧಮಾದನ ಮೇ ಲಿಂಗಂ ಪಶ್ಯ ದ್ವಾದಶಮಂ ತ್ವಿದಂ ।
ತ್ವತ್ಪ್ರತಿಷ್ಠಿತಲಿಂಗಸ್ಯ ಹೀಶಾನ್ಯಾಮಂತಿಕೇ ಸ್ಥಿತಂ ॥ ೧೭೪ ॥

ಏತಾವತ್ಕಾಲಪರ್ಯಂತಂ ನೇದಂ ಕೈಶ್ಚಿದ್ವಿಲೋಕಿತಂ ।
ಅದ್ಯ ತ್ವಯಾ ವಾನರಾದ್ಯೈರ್ದೃಷ್ಟಂ ಸ್ಪಷ್ಟಂ ವಿಮೋಕ್ಷದಂ ॥ ೧೭೫ ॥

ತ್ವತ್ಪ್ರತಿಷ್ಠಿತ ಲಿಂಗಸ್ಯ ಪ್ರಸಾದಾದವನೀತಲೇ ।
ಖ್ಯಾತಿಂ ಗತಂ ತ್ವಿದಂ ಲಿಂಗಂ ಯಸ್ಮಾತ್ತಸ್ಮಾದ್ರಘೂತ್ತಮ ॥ ೧೭೬ ॥

ಅಸ್ಯ ಲಿಂಗಸ್ಯ ಯಜ್ಜ್ಯೋತಿಃ ಮದೀಯಂ ತ್ವತ್ಪ್ರತಿಷ್ಠಿತೇ ।
ಯಾಸ್ಯತ್ಯದ್ಯ ಸೈಕತೇತ್ರ ಲಿಂಗೇ ಸೇತೌ ಗಿರಾ ಮಮ ॥ ೧೭೭ ॥

ಜ್ಯೋತಿರ್ಲಿಂಗಂ ದ್ವಾದಶಮಂ ತಥಾ ರಾಮೇಶ್ವರಾಭಿದಂ ।
ವದಂತ್ಯತ್ರ ಜನಾಸ್ಸರ್ವೇ ಹ್ಯದ್ಯಾರಭ್ಯ ರಘೂತ್ತಮ ॥ ೧೭೮ ॥

---

೧೭೪. ಇದೇ ನನ್ನ ಹನ್ನೆರಡನೆಯದಾದ ಗಂಧಮಾದನವೆಂಬ ಲಿಂಗವು. ನೀನು ಪ್ರತಿಷ್ಠಿಸಿರುವ ಈ ಲಿಂಗಕ್ಕೆ ಈಶಾನ್ಯದಿಕ್ಕಿನಲ್ಲಿ ಹತ್ತಿರದಲ್ಲಿಯೇ ಇರುವುದು.

೧೭೫. ಇದು ಇದುವರೆಗೂ ಯಾರಕಣ್ಣಿಗೂ ಕಾಣಿಸುತ್ತಿರಲಿಲ್ಲ. ಈಗ ನಿನಗೂ ವಾನರರಿಗೂ ಕಾಣಿಸುತ್ತಿದೆ. ಇದನ್ನು ಮುಟ್ಟಿದರಾಗಲಿ ನೋಡಿದರಾಗಲಿ ಮೋಕ್ಷವನ್ನು ಕೊಡುತ್ತದೆ.

೧೭೬–೧೭೭. ಎಲೈ ರಾಮನೆ! ನೀನು ಪ್ರತಿಷ್ಠಿಸಿರುವ ಲಿಂಗದ ಅನುಗ್ರಹದಿಂದ ಭೂಮಿಯಲ್ಲಿ ಈ ಲಿಂಗಗಳು ಖ್ಯಾತಿಯನ್ನು ಹೊಂದಿದುವು. ಮತ್ತು ಈ ನೀನು ಪ್ರತಿಷ್ಠಿಸಿರುವ ಲಿಂಗದಲ್ಲಿರುವ ನನ್ನ ಜ್ಯೋತಿಸ್ಸು ಈ ಲಿಂಗಗಳಲ್ಲಿಯೂ ನನ್ನ ಮಾತಿನಂತೆ ನಿಲ್ಲಲಿ. ಅಲ್ಲದೆ ಈ ಗಂಧಮಾದನ ಶೃಂಗಲಿಂಗದಲ್ಲಿರುವ ನನ್ನ ಜ್ಯೋತಿಸ್ಸು ನೀನು ಪ್ರತಿಷ್ಠಿಸಿರುವ ಈ ಸೈಕತಲಿಂಗದಲ್ಲಿಯೂ ಬಂದು ಸೇರಲಿ.

೧೭೮–೧೭೯. ಈ ಹನ್ನೆರಡನೆಯದಾದ ಜ್ಯೋತಿರ್ಲಿಂಗವು ರಾಮೇಶ್ವರನೆಂಬ ಹೆಸರಿನಿಂದ ಎಲ್ಲರಿಂದಲೂ ಕರೆಯಲ್ಪಡಲಿ. ಇಲ್ಲಿ ನಡೆಯುವ ಪೂಜೆ

ಪೂಜೋತ್ಸವಾದಿಕಂ ಕರ್ಮ ಯದ್ಯತ್ಕಿಂಚಿದ್ಗಿರಾ ಮಮ |
ತನ್ಯೈವ ಲಿಂಗೇ ತತ್ಸರ್ವಮಸ್ತು ರಾಮೇಶ್ವರೇ ಸದಾ ॥ ೧೭೯ ॥

ಅಹಂ ಚಾಪಿ ಮುನೇರ್ವಾಕ್ಯಾದಗಸ್ತೇಃ ಸ್ತ್ವದ್ಗಿರಾಪಿ ಚ |
ತ್ಯಕ್ತ್ವಾ ಕಾಶೀಮಾಗತೋಸ್ಮಿತ್ವಲ್ಲಿಂಗೇಸ್ಮಿನ್ ವಸಾಮ್ಯಹಂ ॥ ೧೮೦ ॥

ಪ್ರಣಮೇತ್ಸೇತುಬಂಧೇ ಯಃ ಪುಮಾನ್ ರಾಮೇಶ್ವರಂ ಶಿವಂ |
ಬ್ರಹ್ಮಹತ್ಯಾದಿ ಪಾಪೇಭ್ಯೋ ಮುಚ್ಯತೇ ಮದನುಗ್ರಹಾತ್ ॥ ೧೮೧ ॥

ತ್ವಂ ವದಾದ್ಯ ರಘುಶ್ರೇಷ್ಠ ವರಂ ಯೇನ ಜನಾಸ್ಸದಾ |
ಸ್ನಾನಾರ್ಥಮಾನಯಿಷ್ಯಂತಿ ಮಣಿಕರ್ಣಿಜಲಂ ಮಮ ॥ ೧೮೨ ॥

ಉತ್ಸವ ಮುಂತಾದ ಸೇವೆಗಳು ನೀನು ಪ್ರತಿಷ್ಠಿಸಿರುವ ಈ ಲಿಂಗಕ್ಕೆ ನಡೆಯಲಿ. ಇದು ನನ್ನ ವರವು.

೧೮೦. ನಾನೂ ಕೂಡ ಆ ಅಗಸ್ತ್ಯಮುನಿಯ ಮಾತಿನಂತೆಯೂ ನಿನ್ನ ಮಾತಿನಂತೆಯೂ ಕಾಶಿಯನ್ನು ಬಿಟ್ಟು ಇಲ್ಲಿಗೆ ಬಂದಿದ್ದೇನೆ. ನೀನು ಪ್ರತಿಷ್ಠಿಸಿರುವ ಈ ಲಿಂಗದಲ್ಲಿಯೇ ವಾಸಿಸುತ್ತೇನೆ.

೧೮೧. ಈ ಸೇತುವೆಯಲ್ಲಿರುವ ರಾಮೇಶ್ವರಲಿಂಗವನ್ನು ಯಾವನು ನಮಸ್ಕರಿಸುವನೋ ಅವನಿಗೆ ಬ್ರಹ್ಮಹತ್ಯಾದಿ ಪಾಪಗಳೆಲ್ಲವೂ ನನ್ನ ವರದಿಂದ ಹೋಗುತ್ತವೆ.

೧೮೨. ಎಲೈ ರಘುಶ್ರೇಷ್ಠನೆ! ಯಾರು ಸ್ನಾನಕ್ಕೋಸ್ಕರ ಮಣಿಕರ್ಣಿಕೆಯ ನೀರನ್ನು ಇಲ್ಲಿ ನನಗೋಸ್ಕರ ಸ್ನಾನಕ್ಕೆ ತರುತ್ತಾರೆಯೋ ಅವರಿಗೆ ನೀನು ನಿನ್ನ ಮಾತಿನಿಂದ ವರವನ್ನು ಕೊಡು.

ತನ್ಮದ್ವಾಕ್ಯಂ ಸಮಾಕರ್ಣ್ಯ ರಾಘವಃ ಪ್ರಾಹ ಹರ್ಷಿತಃ ।
ಸೇತುಬಂಧೇ ನರಃ ಸ್ನಾತ್ವಾ ದೃಷ್ಟ್ವಾ ರಾಮೇಶ್ವರಂ ಶಿವಂ ॥ ೧೮೩ ॥

ಸಂಕಲ್ಪ್ಯ ನಿಯತೋ ಭೂತ್ವಾ ಗೃಹೀತ್ವಾ ಸೇತುವಾಲುಕಾಂ ।
ಕರಂಡಿಕಾಭಿರ್ಯತ್ನೇನ ಗತ್ವಾ ವಾರಾಣಸೀಂ ಶುಭಾಂ ॥ ೧೮೪ ॥

ಕ್ಷಿಪ್ತ್ವಾ ವೇಣ್ಯಾಂ ವಾಲುಕಾಂ ತಾಂ ತ್ಯಕ್ತ್ವಾ ವಾಲುಕರಂಡಿಕಾಂ ।
ಆನೀಯ ಗಂಗಾಸಲಿಲಂ ರಾಮೇಶಮಭಿಷಿಚ್ಯ ಚ ॥ ೧೮೫ ॥

ಸಮುದ್ರೇ ತ್ಯಕ್ತತದ್ಭಾರೋ ಬ್ರಹ್ಮ ಪ್ರಾಪ್ನೋತ್ಯಸಂಶಯಂ ।
ಸಂಕಲ್ಪೇನ ವಿನಾ ಗಂಗಾ ರಾಮೇಶಂ ನಾಗಮಿಷ್ಯತಿ ॥ ೧೮೬ ॥

---

೧೮೩. ನಾನು ಹೇಳಿದ ಈ ಮಾತನ್ನು ಕೇಳಿ ರಾಘವನು ಹರ್ಷದಿಂದ ಇಂತೆಂದನು. ಮನುಷ್ಯನು ಈ ಸೇತುಬಂಧದಲ್ಲಿ ಸ್ನಾನಮಾಡಿ ರಾಮೇಶ್ವರನೆಂಬ ಈ ಶಿವದರ್ಶನವನ್ನು ಮಾಡಬೇಕು.

೧೮೪-೧೮೫. ಆಮೇಲೆ ಸಂಕಲ್ಪಮಾಡಿ ಸೇತುವೆಯ ಮರಳನ್ನು ಭರಣಿಯಲ್ಲಿಟ್ಟುಕೊಂಡು ಕಾಶಿಗೆ ಹೋಗಬೇಕು. ಅಲ್ಲಿ ತ್ರಿವೇಣಿಯಲ್ಲಿ ಈ ಮರಳನ್ನು ಹಾಕಿ ಆ ಭರಣಿಯಲ್ಲಿ ಗಂಗೆಯ ನೀರನ್ನು ತುಂಬಿಕೊಂಡು ರಾಮೇಶ್ವರಕ್ಕೆ ಬಂದು ರಾಮೇಶ್ವರನಿಗೆ ಗಂಗೆಯ ನೀರನ್ನು ಅಭಿಷೇಕಮಾಡಬೇಕು.

೧೮೬. ಅನಂತರ ಸಮುದ್ರಕ್ಕೆ ತಾನು ತಂದಿದ್ದ ನೀರಿನ ಕಾಗಡಿ(ಅಷ್ಟೆ) ಮುಂತಾದುವನ್ನು ಬಿಸಾಡಿದರೆ ಅವನು ಬ್ರಹ್ಮನಲ್ಲಿ ಐಕ್ಯವಾಗುವನು. ಸಂಶಯವಿಲ್ಲ. ಈ ರೀತಿಯಾಗಿ ಹೋಗುವಾಗ ಸಂಕಲ್ಪವನ್ನು ಮಾಡಿಕೊಂಡು ಹೋಗದಿದ್ದರೆ ಕಾಶಿಯಿಂದ ಸೇತುವಿಗೆ ಗಂಗೆಯು ಬರುವುದಿಲ್ಲ.

ಆಗತಾ ಚೇತ್ತದಾಜ್ಞೇಯಸ್ಸಂಕಲ್ಪಃ ಪೂರ್ವಜನ್ಮನಿ ।
ಕೃತೋಽಸ್ತೀತ್ಯತ್ರ ಮದ್ವಾಕ್ಯಾನ್ನಾತ್ರ ಕಾರ್ಯಾ ವಿಚಾರಣಾ ॥ ೧೮೭ ॥

ಏವಂ ನಾನಾವರಾನ್ರಾಮೋ ಯಾವಲ್ಲಿಂಗಾಯ ಸೋಽಬ್ರವೀತ್ ।
ತಾವತ್ತತ್ರ ಸಮಾಯಾತಃ ಕುಂಭಜನ್ಮಾ ಮುನೀಶ್ವರಃ ॥ ೧೮೮ ॥

ನನಾಮ ಶಂಕರಂ ರಾಮಂ ರಾಮೋಽಪಿ ಪ್ರಣನಾಮ ತಂ ।
ತದಾ ಮುನಿಃ ಪ್ರಾಹ ರಾಮಂ ಪ್ರಸಾದಾತ್ತವ ರಾಘವ ॥ ೧೮೯ ॥

ದರ್ಶನಂ ವಿಶ್ವನಾಥಸ್ಯ ಜಾತಂ ಮೇಽದ್ಯಾತ್ರ ವೈ ಚಿರಾತ್ ।
ಅದ್ಯಾತ್ರ ತುಷ್ಟಿರ್ಜಾತಾ ಮೇ ಲಿಂಗಮತ್ರ ಕರೋಮ್ಯಹಂ ॥ ೧೯೦ ॥

---

೧೮೭. ಒಂದುವೇಳೆ ಸಂಕಲ್ಪವನ್ನು ಮಾಡದಿದ್ದರೂ ಗಂಗೆಯು ಬಂದರೆ ಆಗ ಅವನು ಪೂರ್ವಜನ್ಮದಲ್ಲಿ ಸಂಕಲ್ಪವನ್ನು ಮಾಡಿದ್ದನೆಂದು ತಿಳಿಯಬೇಕು. ಈ ರೀತಿಯಾಗಿ ನಾನು ಹೇಳಿದ್ದೇನೆ. ಇದರಮೇಲೆ ಸಂಶಯವನ್ನು ಬಿಟ್ಟು ವಿಚಾರಮಾಡದಿರಬೇಕು.

೧೮೮. ಶ್ರೀರಾಮನು ಶಿವನಮಾತಿನಂತೆ ಆ ಲಿಂಗಕ್ಕೆ ಇದೇ ರೀತಿಯಾಗಿ ಅನೇಕ ಬಗೆಯ ವರಗಳನ್ನು ಕೊಡುತ್ತಿರಲು ಅಷ್ಟರಲ್ಲಿ ಅಲ್ಲಿ ಕುಂಭಸಂಭವನಾದ ಅಗಸ್ತ್ಯನು ಬಂದನು.

೧೮೯. ಅವನು ರಾಮನನ್ನೂ ಶಿವನನ್ನೂ ನಮಸ್ಕರಿಸಿದನು. ರಾಮನೂ ಕೂಡ ಆ ಅಗಸ್ತ್ಯನಿಗೆ ನಮಸ್ಕರಿಸಿದನು. ಮತ್ತು ಮುನಿಯು ಎಲೈ ರಾಘವನೆ! ನಿನ್ನ ಪ್ರಸಾದದಿಂದ ವಿಶ್ವನಾಥನ ದರ್ಶನವಾಯಿತು.

೧೯೦. ಈ ವಿಶ್ವನಾಥನನ್ನು ನೋಡಿ ಬಹುದಿನಗಳಾಗಿದ್ದುವು. ಈಗ ಇವನ ದರ್ಶನವಾದುದರಿಂದ ಧನ್ಯನಾದೆನು. ಇಲ್ಲಿ ನನಗೆ ಮನಸ್ಸು ಬಹು ಪ್ರಸನ್ನವಾಗಿದೆ. ನಾನೂ ಕೂಡ ಇಲ್ಲಿ ಒಂದು ಲಿಂಗವನ್ನು ಸ್ಥಾಪನೆಮಾಡುತ್ತೇನೆ.

ಇತ್ಯುಕ್ತ್ವಾ ಸ್ಥಾಪಯಾಮಾಸ ತನ್ನಾಮ್ನಾ ಲಿಂಗಮುತ್ತಮಂ ।
ರಾಮೇಶ್ವರಾಗ್ನಿದಿಗ್ಭಾಗೇ ಕುಂಭಜನ್ಮಾ ಮುದಾನ್ವಿತಃ ॥ ೧೯೧ ॥

ಪೂಜಯಾಮಾಸ ತಲ್ಲಿಂಗಮಗಸ್ತೀಶ್ವರ ನಾಮಕಂ ।
ನತ್ವಾ ಸ್ತುತ್ವಾ ವಿಶ್ವನಾಥಂ ರಾಮಂ ರಾಮೇಶ್ವರಂ ತಥಾ ॥ ೧೯೨ ॥

ದೃಷ್ಟ್ವಾ ಪುರಾತನಂ ಲಿಂಗಂ ಗಂಧಮಾದನನಾಮಕಂ ।
ಯಯೌ ಸ್ವೀಯಾಶ್ರಮಂ ತುಷ್ಟಃ ಕುಂಭಜನ್ಮಾ ಮುನೀಶ್ವರಃ ॥ ೧೯೩ ॥

ಸೇತೌ ರಾಮೇಶ್ವರಸ್ಯೈವ ದೇವಿ ದೇವಾಲಯೇ ಶುಭೇ ।
ದಿಶ್ಯಾಗ್ನೇಯ್ಯಾ ಮಗಸ್ತ್ಯೇಶಮೀಶಾನ್ಯಾಂ ಗಂಧಮಾದನಂ ॥ ೧೯೪ ॥

ವರ್ತೇತೇದ್ಯಾಪಿ ದ್ವೇ ಲಿಂಗೇ ಕಶ್ಚಿಜ್ಞಾನಾತಿ ವಾ ನ ವಾ ।
ಪ್ರಸಿದ್ಧೋಽಭೂಚ್ಚ ರಾಮೇಶಃ ಸ್ವರ್ಗಮರ್ತ್ಯರಸಾತಲೇ ॥ ೧೯೫ ॥

---

೧೯೧. ಹೀಗೆಂದು ಹೇಳುತ್ತಾ ಅಗಸ್ತ್ಯನು ತನ್ನ ಹೆಸರಿನಿಂದ ರಾಮೇಶ್ವರನಿಂದ ಆಗ್ನೇಯ ದಿಕ್ಕಿನಲ್ಲಿ ಒಂದು ಲಿಂಗವನ್ನು ಸ್ಥಾಪಿಸಿದನು. ಮತ್ತು ಪೂಜಿಸಿದನು.

೧೯೨–೧೯೩. ಆ ಲಿಂಗವನ್ನು ಪೂಜಿಸಿ ವಿಶ್ವನಾಥನನ್ನು ನಮಸ್ಕರಿಸಿ ಸ್ತುತಿಸಿ ರಾಮನನ್ನೂ ರಾಮೇಶ್ವರನನ್ನೂ ನಮಸ್ಕರಿಸಿ ಸ್ತುತಿಸಿ ಪ್ರಾಚೀನವಾದ ಗಂಧಮಾದನ ಲಿಂಗವನ್ನು ದರ್ಶನಮಾಡಿ ಆ ಅಗಸ್ತ್ಯನು ಸಂತೋಷದಿಂದ ತನ್ನ ಆಶ್ರಮಕ್ಕೆ ಹೊರಟು ಹೋದನು.

೧೯೪-೧೯೫. ಎಲೈ ದೇವಿಯೆ ! ಸೇತುವಿನಲ್ಲಿ ರಾಮೇಶ್ವರ ದೇವಾಲಯದಲ್ಲಿ ಆಗ್ನೇಯದಿಕ್ಕಿನಲ್ಲಿ ಅಗಸ್ತ್ಯೇಶನೂ ಈಶಾನ್ಯದಲ್ಲಿ ಗಂಧಮಾಧನವೆಂಬ ಈಶ್ವರನೂ ಈ ರೀತಿಯಾಗಿ ಎರಡು ಲಿಂಗಗಳೂ ಇವೆ. ಅವನ್ನು ಯಾರೋ ಕೆಲವರು ತಿಳಿದಿರುವರು. ಈ ರಾಮೇಶ್ವರನು ಮಾತ್ರ ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಪ್ರಸಿದ್ಧವಾಗಿದೆ.

ತತೋ ರಾಮಾಜ್ಞಯಾ ಸೇತುಂ ನಲಃ ಕರ್ತುಂ ಮನೋ ದಧೇ ।
ಕಿಂಚಿದ್ಗರ್ವಸಮಾವಿಷ್ಟಸ್ತತ್ ಜ್ಞಾತಂ ರಾಘವೇಣ ಹಿ ॥ ೧೯೬ ॥

ಯಾವದೇಕಾಂ ಶಿಲಾಂ ತ್ಯಕ್ತ್ವಾ ನಲೋನ್ಯಾಂ ಪ್ರಾಕ್ಷಿಪಚ್ಛಿಲಾಂ ।
ತಾವತ್ತರಂಗಕಲ್ಲೋಲೈಸ್ಸಾಗರಸ್ಯ ಇತಸ್ತತಃ ॥ ೧೯೭ ॥

ಗಚ್ಛಂತಿ ಸ್ಮ ಶಿಲಾಸ್ಸರ್ವಾಸ್ತಾ ದೃಷ್ಟ್ವಾ ಖಿನ್ನಮಾನಸಃ ।
ಗತಗರ್ವಸ್ತದಾ ರಾಮಂ ನಲೋ ವೃತ್ತಂ ನ್ಯವೇದಯತ್ ॥ ೧೯೮ ॥

ರಾಮಃ ಶ್ರುತ್ವಾ ನಲಂ ಪ್ರಾಹ ರಾಮೇತಿ ದ್ವ್ಯಕ್ಷರೇ ಮಮ ।
ದೃಷದೋಸ್ಸಂಧಿಸಿದ್ಧ್ಯರ್ಥಂ ಪೃಥಗ್ವಿಲಿಖತಾಂ ದ್ವಯೋಃ ॥ ೧೯೯ ॥

---

೧೯೬. ಅನಂತರ ರಾಮನ ಅಪ್ಪಣೆಯಂತೆ ಸೇತುವೆಯನ್ನು ಕಟ್ಟಲು ನಳನು ಮನಸ್ಸುಮಾಡಿದನು. ಆಗ ಅವನಿಗೆ ಸ್ವಲ್ಪಮಟ್ಟಿಗೆ ತಾನೇ ಹೆಚ್ಚೆಂಬ ಗರ್ವವು ಬಂದಿತು. ಅದನ್ನು ರಾಮನು ತಿಳಿದುಕೊಂಡನು.

೧೯೭. ನಳನು ಸಮುದ್ರದಲ್ಲಿ ಒಂದು ಕಲ್ಲನ್ನಿಟ್ಟು ಮತ್ತೊಂದು ಕಲ್ಲನ್ನು ಇಡುವ ಹೊತ್ತಿಗೆ ಸಾಗರದ ಚಂಚಲವಾದ ಅಲೆಗಳಿಂದ ಅವು ಅತ್ತಿತ್ತ ಕೊಚ್ಚಿ ಹೋಗುತ್ತಿದ್ದುವು.

೧೯೮. ಹೀಗೆ ಅವೆಲ್ಲವೂ ಕೊಚ್ಚಿ ಹೋಗುತ್ತಿರುವುದನ್ನು ನೋಡಿ ನಳನು ದುಃಖಗೊಂಡನು. ಇದರಿಂದ ನಳನಿಗೆ ಗರ್ವವು ಮುರಿದು ರಾಮನಿಗೆ ವಿಷಯವನ್ನು ತಿಳಿಸಿದನು.

೧೯೯. ರಾಮನು ಇದನ್ನು ಕೇಳಿ ಎಲೈ ನಳನೆ! ನೀನು ಸೇರಿಸತಕ್ಕ ಕಲ್ಲುಗಳೆರಡಕ್ಕೂ ಎರಡು ಕಡೆಯಲ್ಲಿಯೂ "ರಾಮ" ಎಂಬ ಎರಡು ಅಕ್ಷರಗಳನ್ನು ಬರಿ. ಆಗ ಅವುಗಳ ಸಂಧಿಯು ಸೇರುತ್ತದೆ.

ಸರ್ವತ್ರೈವಂ ಲಿಖಿತ್ವಾ ಹಿ ದೃಢಃ ಸಂಧಿರ್ಭವಿಷ್ಯತಿ ।
ತಥೇತಿ ರಾಮವಚನಾತ್ತಥಾ ಚಕ್ರೇ ನಲಸ್ತದಾ ॥ ೨೦೦ ॥

ಕೃತಃ ಪಂಚದಿನೈಃ ಸೇತುಶ್ಶತಯೋಜನಮುತ್ತಮಃ ।
ಕೃತಾನಿ ಪ್ರಥಮೇನಾಹ್ನಾ ಯೋಜನಾನಿ ಚತುರ್ದಶ ॥ ೨೦೧ ॥

ದ್ವಿತೀಯೇನ ತಥಾ ಚಾಹ್ನಾ ಯೋಜನಾನಾಂ ಚ ವಿಂಶತಿಃ ।
ತೃತೀಯೇನ ತಥಾ ಚಾಹ್ನಾ ಯೋಜನಾನಾಂ ಚ ವಿಂಶತಿಃ ॥ ೨೦೨ ॥

ಚತುರ್ಥೇನ ತಥಾ ಚಾಹ್ನಾ ದ್ವಾವಿಂಶತಿರಿತಿಶ್ರುತಂ ।
ಪಂಚಮೇನ ತ್ರಯೋವಿಂಶದ್ಯೋಜನಾನಾಂ ಶತಂ ತ್ವಿತಿ ॥ ೨೦೩ ॥

ವಿಸ್ತೃತೌ ದ್ವಾದಶ ಪ್ರೋಕ್ತೋ ಯೋಜನಾನಿ ದೃಷನ್ಮಯಃ ।
ಏವಂ ಬಬಂಧ ಸೇತುಂ ಸ ನಲೋ ವಾನರಸತ್ತಮಃ ॥ ೨೦೪ ॥

---

೨೦೦. ಎಲ್ಲಾ ಕಡೆಯಲ್ಲಿಯೂ ಹೀಗೆಯೇ ಬರಿ. ಆಗ ಆ ಸಂಧಿಯು ದೃಢವಾಗುತ್ತದೆ. ಎಂದನು. ರಾಮನ ಮಾತನ್ನು ಕೇಳಿ ನಳನು ಹಾಗೆಯೇ ಆಗಲೆಂದು ಹೇಳಿ ಅಂತೆಯೇ ಮಾಡಿದನು.

೨೦೧–೨೦೩. ಐದುದಿನಗಳಲ್ಲಿ ನೂರುಯೋಜನದಷ್ಟು ಸೇತುವೆಯನ್ನು ಕಟ್ಟಿದನು. ಇವುಗಳಲ್ಲಿ ಮೊದಲನೆಯ ದಿನ ಹದಿನಾಲ್ಕು ಯೋಜನದಷ್ಟು ಉದ್ದವನ್ನೂ ಎರಡನೆಯ ದಿನದಲ್ಲಿ ಇಪ್ಪತ್ತು ಯೋಜನಗಳ ಉದ್ದವನ್ನೂ ಮೂರನೆಯ ದಿನದಲ್ಲಿ ಇಪ್ಪತ್ತೊಂದು ಯೋಜನಗಳ ಉದ್ದವನ್ನೂ ನಾಲ್ಕನೆಯ ದಿನದಲ್ಲಿ ಇಪ್ಪತ್ತೆರಡು ಯೋಜನಗಳ ಉದ್ದವನ್ನೂ ಐದನೆಯ ದಿನದಲ್ಲಿ ಇಪ್ಪತ್ತುಮೂರು ಯೋಜನಗಳ ಉದ್ದವನ್ನೂ ಕಟ್ಟಿದನೆಂದು ತಿಳಿದುಬಂದಿದೆ.

೨೦೪. ಅದು ಅಗಲದಲ್ಲಿ ಹನ್ನೆರಡು ಯೋಜನದಷ್ಟಿರುವುದು. ಇವೆಲ್ಲವೂ ಕಲ್ಲಿನಿಂದ ಕಟ್ಟಲ್ಪಟ್ಟವೆ. ಈ ರೀತಿಯಾಗಿ ನಳನು ಸೇತುವೆಯನ್ನು ಕಟ್ಟಿದನು.

ಯೇ ಮಜ್ಜಂತಿ ನಿಮಜ್ಜಯಂತಿ ಚ ಪರಾನ್ ತೇ ಪ್ರಸ್ತರಾ ದುಸ್ತರೇ ।
ವಾರ್ಧೌ ಯೇನ ತರಂತಿ ವಾನರಭಟಾನ್ ಸಂತಾರಯಂತೇಽಪಿ ಚ ।
ನೈತೇ ಗ್ರಾವಗುಣಾ ನ ವಾರಿಧಿಗುಣಾ ನೋ ವಾನರಾಣಾಂ ಗುಣಾಃ ।
ಶ್ರೀಮದ್ದಾಶರಥೇಃ ಪ್ರತಾಪಮಹಿಮಾ ಸೋಽಯಂ ಸಮುಜ್ಜೃಂಭತೇ ॥

ತೇನೈವ ಜಗ್ಮುಃ ಕಪಯೋ ಯೋಜನಾನಾಂ ಶತಂ ದ್ರುತಂ ।
ಆರುಹ್ಯ ಮಾರುತಿಂ ರಾಮೋ ಲಕ್ಷ್ಮಣೋಽಪ್ಯಂಗದಂ ತಥಾ ॥ ೨೦೬ ॥

ಜಗಾಮ ವಾಯುವಲ್ಲಂಕಾಸನ್ನಿಧಿಂ ಸೇನಯಾ ವೃತಃ ।
ಅಸಂಖ್ಯಾತಾಸ್ಸುವೇಲಾದ್ರಿಂ ರುರುಹುಃ ಪ್ಲವಗೋತ್ತಮಾಃ ॥ ೨೦೭ ॥

ತತಸ್ಸೈನ್ಯಯುತೋ ರಾಮಸ್ಸುವೇಲಾದ್ರಿಂ ಯಯೌ ಮುದಾ ।
ದಿದೃಕ್ಷೂ ರಾಘವೋ ಲಂಕಾಮಾರುರೋಹಾಚಲಂ ಶುಭಂ ॥ ೨೦೮ ॥

---

೨೦೫. ವಿಸ್ತಾರವಾದ ಸಮುದ್ರದಲ್ಲಿ ಕಲ್ಲುಗಳು ಮುಳುಗುವುದಕ್ಕಾಗಲೀ ತೇಲುವುದಕ್ಕಾಗಲಿ ಆ ಸಮುದ್ರದಲ್ಲಿ ವಾನರರು ದಾಟುವುದಕ್ಕಾಗಲೀ ದಾಟಿಸುವುದಕ್ಕಾಗಲೀ ಇರುವ ಗುಣವು ಕಲ್ಲಿನದೂ ಅಲ್ಲ. ಸಮುದ್ರದ ಗುಣವೂ ಅಲ್ಲ. ಕಪಿಗಳ ಗುಣವೂ ಅಲ್ಲ. ಇದು ಶ್ರೀಮದ್ದಾಶರಥಿಯ ಮಹಿಮೆಯು. ಶ್ರೀರಾಮನ ಇಂತಹ ಪ್ರತಾಪವು ಈ ರೀತಿಯಾಗಿ ಪ್ರಕಾಶಿಸುತ್ತಿರುವುದು.

೨೦೬. ಕಪಿಗಳು ನೂರು ಯೋಜನಗಳನ್ನು ಆ ಸೇತುವೆಯಮೇಲೆ ಜೇಗನೆ ಹೋದುವು. ರಾಮನು ಮಾರುತಿಯಮೇಲೆಯೂ ಲಕ್ಷ್ಮಣನು ಅಂಗದನ ಮೇಲೆಯೂ ಕುಳಿತುಕೊಂಡು ಹೋದರು.

೨೦೭. ಈ ರೀತಿಯಾಗಿ ರಾಮಲಕ್ಷ್ಮಣರೂ ಸೇನೆಯೂ ಲಂಕೆಯ ಹತ್ತಿರಕ್ಕೆ ಹೋದರು. ಅಲ್ಲಿ ಅಸಂಖ್ಯಾಕವಾಗಿ ಕಪಿಗಳು ಸುವೇಲ ಪರ್ವತವನ್ನು ಹತ್ತಿದುವು.

೨೦೮. ರಾಮನೂ ಕೂಡ ಈ ಸೈನ್ಯದೊಡನೆ ಸುವೇಲಾದ್ರಿಯನ್ನು ಹತ್ತಿದನು. ಲಂಕೆಯನ್ನು ನೋಡಲು ನಲನಮೇಲೆ ಹತ್ತಿಹೊರಟಿದ್ದನು.

ಸುವೇಲಾದ್ರಿಂ ಮಹಾರಮ್ಯಂ ತರುವಲ್ಲೀವಿರಾಜಿತಂ ।
ದದರ್ಶ ಲಂಕಾಂ ವಿಸ್ತೀರ್ಣಾಂ ರಾಮಶ್ಚಿತ್ರಧ್ವಜಾಕುಲಾಂ ॥ ೨೦೯ ॥

ಚಿತ್ರಪ್ರಾಸಾದಸಂಬಾಧಾಂ ಸ್ವರ್ಣಪ್ರಾಕಾರತೋರಣಾಂ ।
ಪರಿಖಾಭಿಶ್ಶತಘ್ನೀಭಿಸ್ಸಂಕ್ರಮೈಶ್ಚ ವಿರಾಜಿತಾಂ ॥ ೨೧೦ ॥

ಪ್ರಾಸಾದೋಪರಿ ವಿಸ್ತೀರ್ಣಪ್ರದೇಶೇ ದಶಕಂಧರಂ ।
ಪಶ್ಯಂತಂ ಕಪಿಸೈನ್ಯಂ ತಂ ಸಂದದರ್ಶ ರಘೂದ್ವಹಃ ॥ ೨೧೧॥

ತತೋ ರಾಮೇಣ ಮುಕ್ತಸ್ಸ ಶುಕೋ ಗತ್ವಾ ದಶಾನನಂ ।
ಕಪಿಸೈನ್ಯಂ ದರ್ಶಯಂಸ್ತಂ ಬೋಧಯಾಮಾಸ ರಾವಣಂ ॥ ೨೧೨ ॥

ಸೀತಾಂ ಪ್ರಯಚ್ಛ ರಾಮಾಯ ಲಂಕಾರಾಜ್ಯೇ ವಿಭೀಷಣಂ ।
ಕೃತ್ವಾ ತಂ ಶರಣಂ ಯಾಹಿ ನೋ ಚೇದ್ರಾಮಾನ್ನ ಮೋಕ್ಷ್ಯಸೇ ॥ ೨೧೩ ॥

---

೨೦೯. ಮರ ಬಳ್ಳಿಗಳಿಂದ ಕೂಡಿದ ಸುವೇಲವನ್ನು ಹತ್ತಿ ರಾಮನು ಚಿತ್ರಧ್ವಜದಿಂದ ಕೂಡಿರುವ ರಮ್ಯವಾದ ಲಂಕೆಯನ್ನು ನೋಡಿದನು.

೨೧೦. ಬಗೆ ಬಗೆಯ ಮರಗಳು ಅಲ್ಲಿದ್ದುವು. ಚಿನ್ನದ ಕೋಟೆಯೂ ಹೆಬ್ಬಾಗಿಲೂ ಇದ್ದುವು. ಸುತ್ತಲೂ ಅಗಳುಗಳಿದ್ದುವು ಶತಘ್ನೀ(ಫಿರಂಗಿ)ಗಳು ಸೇತುವೆಗಳು ಅಲ್ಲಲ್ಲಿದ್ದುವು.

೨೧೧. ಅಲ್ಲಿ ಒಂದು ದೊಡ್ಡ ವಿಸ್ತಾರವಾದ ಮಹಡಿಯಮೇಲೆ ರಾವಣನು ಕಪಿಸೈನ್ಯವನ್ನು ನೋಡುತ್ತಿದ್ದನು. ಅವನನ್ನು ಈ ರಾಘವನು ನೋಡಿದನು.

೨೧೨. ಇತ್ತ ರಾಮನಿಂದ ಬಿಡಲ್ಪಟ್ಟಿದ್ದ ಶುಕನು ಈ ಕಪಿಸೈನ್ಯಗಳನ್ನು ತೋರಿಸುತ್ತ ಈ ರೀತಿಯಾಗಿ ಎಚ್ಚರಿಸುತ್ತಿದ್ದನು.

೨೧೩. ಎಲೈ ರಾವಣನೆ! ಸೀತೆಯನ್ನು ರಾಮನಿಗೆ ಒಪ್ಪಿಸು. ಲಂಕಾರಾಜ್ಯದಲ್ಲಿ ವಿಭೀಷಣನಿಗೆ ಅಭಿಷೇಕಮಾಡು. ಹೀಗೆಮಾಡಿ ಆ ರಾಮನನ್ನು ಶರಣುಹೊಂದು. ಇಲ್ಲದಿದ್ದರೆ ಆ ರಾಮನಿಂದ ನೀನು ತಪ್ಪಿಸಿಕೊಳ್ಳಲಾರೆ.

ತಚ್ಛ್ರುತ್ವಾ ರಾವಣಃ ಕ್ರೋಧಾಚ್ಛುಕಂ ಧಿಕ್ಕೃತ್ಯ ವೈ ಮುಹುಃ |
ದೂತೈರ್ಗೃಹಾದ್ಬಹಿಃ ಕೃತ್ವಾ ರಾಮಸೇನಾಂ ವ್ಯಲೋಕಯತ್ || ೨೧೪ ||

ಶುಕೋಽಪಿ ಬ್ರಾಹ್ಮಣಃ ಪೂರ್ವಂ ವರಿಷ್ಠೋ ಬ್ರಹ್ಮವಿತ್ತಮಃ |
ಅಯಜತ್ಕ್ರತುಭಿರ್ದೇವಾನ್ ವಿರೋಧೋ ರಾಕ್ಷಸೈರಭೂತ್ || ೨೧೫ ||

ವಜ್ರದಂಷ್ಟ್ರ ಇತಿ ಖ್ಯಾತಸ್ತದೈಕೋ ರಾಕ್ಷಸೋ ಮಹಾನ್ |
ಮಾಂಸಾನ್ನಂ ಯಾಚಿತಂ ದೃಷ್ಟ್ವಾ ಮುನಿನಾ ಕುಂಭಜನ್ಮನಾ || ೨೧೬ ||

ಶುಕಭಾರ್ಯಾವಪುರ್ಧೃತ್ವಾ ನರಮಾಂಸಂ ಸಮರ್ಪಯತ್ |
ತದಾ ಶಪ್ತಃ ಶುಕಸ್ತೇನ ತ್ವಂ ರಕ್ಷೋ ಭವ ಮಾ ಚಿರಂ || ೨೧೭ ||

---

೨೧೪. ರಾವಣನು ಇದನ್ನು ಕೇಳಿ ಶುಕನನ್ನು ಬೈಯ್ಯುತ್ತಾ ತಿರಸ್ಕರಿಸುತ್ತಿದ್ದನು. ಮತ್ತು ದೂತರನ್ನು ಕರೆದು ಅವರಿಂದ ಆ ಶುಕನನ್ನು ಮನೆಯಿಂದ ಹೊರಕ್ಕೆ ತಳ್ಳಿಸಿ ಮೇಲುಗಡೆಯಲ್ಲಿ ರಾಮಸೇನೆಯನ್ನು ನೋಡುತ್ತಿದ್ದನು.

೨೧೫. ಈ ಶುಕನು ಪೂರ್ವದಲ್ಲಿ ಒಬ್ಬ ಉತ್ತಮವಾದ ಬ್ರಾಹ್ಮಣನು. ಇವನು ಯಾಗವನ್ನು ಮಾಡಿ ದೇವತೆಗಳನ್ನು ತೃಪ್ತಿಪಡಿಸಿದನು. ಆದುದರಿಂದ ರಾಕ್ಷಸರಿಗೂ ಈ ಋಷಿಗಳಿಗೂ ವಿರೋಧವುಂಟಾಯಿತು

೨೧೬. ವಜ್ರದಂಷ್ಟ್ರನೆಂಬ ಒಬ್ಬ ರಾಕ್ಷಸನಿದ್ದನು ಇವನು ಈ ವಿರೋಧದಿಂದ ಋಷಿಗಳಿಗೆ ಕೇಡನ್ನುಮಾಡಲು ನಿರೀಕ್ಷಿಸುತ್ತಿದ್ದನು. ಅಲ್ಲದೆ ಈ ಶುಕನ ಮೇಲೆ ಬಹುವಾದ ಕ್ರೋಧವನ್ನು ಹೊಂದಿದ್ದನು. ಆಗಸ್ತ್ಯನು ಒಂದುಸಾರಿ ಶುಕನ ಬಳಿಗೆ ಬಂದು ಮಾಂಸದಿಂದ ಕೂಡಿದ ಅನ್ನವನ್ನು ಯಾಚಿಸಿದನು.

೨೧೭. ಆಗ ಈ ವಜ್ರದಂಷ್ಟ್ರನು ಶುಕನ ಹೆಂಡತಿಯ ವೇಷವನ್ನು ಧರಿಸಿ ಆ ಅಗಸ್ತ್ಯನಿಗೆ ಮನುಷ್ಯ ಮಾಂಸವನ್ನು ಬಡಿಸಿದನು. ಈ ನರಮಾಂಸವನ್ನು ನೋಡಿ ಅಗಸ್ತ್ಯನು ಎಲೈ ಶುಕನೆ! ನೀನು ನನಗೆ ನರಮಾಂಸವನ್ನು ಬಡಿಸಿದುದರಿಂದ ಬೇಗನೆ ನೀನು ರಾಕ್ಷಸನಾಗು ಎಂದು ಶಪಿಸಿದನು.

ರಕ್ಷಃ ಕೃತಂ ಪುನರ್ಧ್ಯಾನಾತ್ ಜ್ಞಾತ್ವಾ ತತ್ಪ್ರಾರ್ಥಿತೋಽಬ್ರವೀತ್ ।
ರಾಮಸ್ಯ ದರ್ಶನಂ ಕೃತ್ವಾ ಬೋಧಯಿತ್ವಾ ದಶಾನನಂ ॥ ೨೧೮ ॥

ತ್ವಂ ಪ್ರಾಪ್ಸ್ಯಸಿ ನಿಜಂ ರೂಪಂ ತಸ್ಮಾಜ್ಜಾತಶ್ಶುಕೋ ದ್ವಿಜಃ ।
ಸುವೇಲಶಿಖರೇ ಸಂಸ್ಥಸ್ಸಂಮಂತ್ರ್ಯ ಕಪಿಭಿಸ್ತತಃ ॥ ೨೧೯ ॥

ಸೂಚನಾರ್ಥಂ ರಿಪುಂ ರಾಮೋಽಂಗದಂ ಲಂಕಾಮಚೋದಯತ್ ।
ಸೋಽಪಿ ರಾಮಾಜ್ಞಯಾ ಗತ್ವಾ ನಾನಾನೀತ್ಯುತ್ತರೈಸ್ತದಾ ॥ ೨೨೦ ॥

ರಾವಣಂ ಬೋಧಯಾಮಾಸ ಸಭಾಯಾಂ ಲಾಂಗುಲಾಸನೇ ।
ಸಂಸ್ಥಿತೋಽಭೀ ತವದ್ವಾಲೀತನಯಃ ಸ್ವಸ್ಥಮಾನಸಃ ॥ ೨೨೧ ॥

---

೨೧೮. ಅನಂತರ ಧ್ಯಾನದಿಂದ ಇದು ರಾಕ್ಷಸನ ಕೆಲಸವೆಂದು ತಿಳಿದನು. ಶುಕನು ತಾನು ಮಾಡಿದುದಲ್ಲವೆಂದೂ ಕ್ಷಮಿಸಬೇಕೆಂದೂ ಕೇಳುತ್ತಿದ್ದನು. ಆಗ ಅಗಸ್ತ್ಯನು ಎಲೈ ಶುಕನೆ! ನೀನು ರಾಮದರ್ಶನಾನಂತರದಲ್ಲಿ ದಶಾನನನಿಗೆ ಬುದ್ಧಿಯನ್ನು ಹೇಳಿ ನಿನ್ನ ನಿಜರೂಪವನ್ನು ನೀನು ಹೊಂದುತ್ತೀಯೆ. ಎಂದಿದ್ದನು.

೨೧೯-೨೨೦. ಆದುದರಿಂದಲೇ ಬ್ರಾಹ್ಮಣನಾದ ಈ ಶುಕನು ರಾಕ್ಷಸನಾಗಿ ಹುಟ್ಟಿದ್ದನು. ರಾಮನು ಸುವೇಲಶಿಖರದಲ್ಲಿದ್ದುಕೊಂಡು ಕಪಿಮಂತ್ರಿಗಳೊಡನೆ ಮಂತ್ರಾಲೋಚನೆಯನ್ನು ಮಾಡಿ ತಾನು ಬಂದಿದ್ದೇನೆಂದು ಸೂಚನೆಯನ್ನು ಕೊಡಲು ಅಂಗದನನ್ನು ಲಂಕೆಗೆ ಹೋಗುವಂತೆ ಹೇಳಿದನು. ಅಂಗದನು ರಾಮನ ಮಾತಿನಂತೆ ಲಂಕೆಗೆ ಹೋಗಿ ಅನೇಕ ಬಗೆಯಾಗಿ ರಾವಣನಿಗೆ ನೀತಿಯನ್ನು ಹೇಳಿದನು.

೨೨೧. ಆ ಅಂಗದನು ರಾವಣನ ಸಭೆಗೆ ಹೋಗಿ ಬಾಲದಿಂದ ಪೀಠವನ್ನು ಕಟ್ಟಿಕೊಂಡು ಅದರಮೇಲೆ ಕುಳಿತನು. ಮತ್ತು ಸ್ವಸ್ಥವಾದ ಮನಸ್ಸಿನಿಂದ ಹೆದರಿಕೆಯಿಲ್ಲದೆ ಇಂತೆಂದು ಹೇಳಿದನು.

ಶೃಣು ರಾವಣ ಮದ್ವಾಕ್ಯಂ ಹಿತಂ ತೇ ಪ್ರವದಾಮ್ಯಹಂ ।
ಸೀತಾಂ ಸತ್ಕೃತ್ಯ ಸಧನಾಂ ಪ್ರಯಚ್ಛ ರಾಘವಂ ಜವಾತ್ ॥ ೨೨೨ ॥

ರಾಮಂ ನಾರಾಯಣಂ ವಿದ್ಧಿ ವಿದ್ವೇಷಂ ತ್ಯಜ ರಾಘವೇ ।
ಯತ್ಪಾದಪೋತಮಾಶ್ರಿತ್ಯ ಜ್ಞಾನಿನೋ ಭವಸಾಗರಂ ॥ ೨೨೩ ॥

ತರಂತಿ ಭಕ್ತಿಪೂತಾಸ್ತೇ ಹ್ಯತೋ ರಾಮೋ ನ ಮಾನುಷಃ ।
ಮದ್ವಾಕ್ಯಂ ಕುರು ರಾಜೇಂದ್ರ ಕುಲಕೌಶಲ ಹೇತವೇ ॥ ೨೨೪ ॥

ಏವಂ ನಾನಾವಿಧೈರ್ವಾಕ್ಯೈರಂಗದೇನಾತಿಬೋಧಿತಃ ।
ಸೋಽಥ ನೀತ್ಯುಕ್ತರಾಣ್ಯಸ್ಯ ನಾಶೃಣೋದ್ವಾನರಸ್ಯ ಚ ॥ ೨೨೫ ॥

---

೨೨೨. ಎಲೈ ರಾವಣನೆ ! ನನ್ನ ಮಾತನ್ನು ಕೇಳು. ನಿನಗೆ ಹಿತವನ್ನು ಹೇಳುತ್ತೇನೆ. ಸೀತೆಯನ್ನು ಧನಕನಕಾದಿಗಳಿಂದ ಗೌರವಿಸಿ ರಾಮನಿಗೆ ಬೇಗನೆ ಒಪ್ಪಿಸು.

೨೨೩–೨೨೪. ರಾಮನು ನಾರಾಯಣನೆಂದು ತಿಳಿ. ಆ ರಾಮನಲ್ಲಿ ದ್ವೇಷ ಬುದ್ಧಿಯನ್ನು ಬಿಟ್ಟು ಬಿಡು. ಜ್ಞಾನಿಗಳಾದವರು ಯಾವ ರಾಮನ ಪಾದಕಮಲ ವನ್ನಾಶ್ರಯಿಸಿ ಭಕ್ತಿಯಿಂದ ಅವನನ್ನು ಭಜಿಸಿ ಆ ಪಾದಕಮಲಗಳೆಂಬ ದೋಣಿಯಿಂದ ಸಂಸಾರವೆಂಬ ಸಮುದ್ರವನ್ನು ದಾಟುವರೋ ಅಂತಹ ರಾಮನು ಮನುಷ್ಯನು ಎಂದು ತಿಳಿಯಬೇಡ. ಎಲೈ ರಾಜಶ್ರೇಷ್ಠನೆ ! ನನ್ನ ಮಾತಿನಂತೆ ನಡೆಸು. ನಿನ್ನ ಕುಲಕ್ಕೆ ಕುಶಲವಾಗುವುದು.

೨೨೫. ಇವೇ ಮುಂತಾದ ವಾಕ್ಯಗಳನ್ನು ಹೇಳಿ ರಾವಣನಿಗೆ ಅಂಗದನು ಬುದ್ಧಿಯನ್ನು ಹೇಳಿದನು. ಆ ರಾವಣನು ಮಾತ್ರ ಕಪಿಯ ಈ ನೀತಿಯ ಮಾತುಗಳನ್ನು ಕೇಳಲೇ ಇಲ್ಲ.

ಉವಾಚ ಕ್ರೋಧಸಂಯುಕ್ತೋ ವಾನರಂ ಸ ದಶಾನನಃ ।
ಕಿಂ ಮಾಂ ಭೀಷಯಸೇದ್ಯ ತ್ವಂ ರಾವಣಂ ಲೋಕರಾವಣಂ ॥ ೨೨೬ ॥

ಯೇನ ಸರ್ವೇ ಜಿತಾ ದೇವಾಃ ಕೈಲಾಸಃ ಕಂಪಿತೋ ಮಯಾ ।
ತಸ್ಯ ಮೇಗ್ರೇ ಮರ್ಕಟತ್ವಂ ಕತ್ಥಸೇ ಕಿಂ ಮುಧಾದ್ಯ ಹಿ ॥ ೨೨೭ ॥

ಕ್ಷಣೇನ ರಾಘವೌ ಹತ್ವಾ ಹತ್ವಾ ಸುಗ್ರೀವಮಾರುತೀ ।
ಹತ್ವಾ ವಿಭೀಷಣಂ ತ್ವಾಂ ಚ ವಾನರಾನ್ ಭಕ್ಷಯಾಮ್ಯಹಂ ॥ ೨೨೮ ॥

ರಾವಣಸ್ಯ ವಚಶ್ಚೇತ್ಥಂ ಶ್ರುತ್ವಾ ಪ್ರಾಹಾಂಗದಶ್ಚ ತಂ ।
ಜಾನಾಮ್ಯಹಂ ಪೌರುಷಂ ತೇ ಬಲಿಪಾಶವಿಚೂರ್ಣಿತ ॥ ೨೨೯ ॥

---

೨೨೬. ಆಗ ರಾವಣನು ಕೋಪಗೊಂಡು ಅಂಗದನನ್ನು ಕುರಿತು ಇಂತೆಂದನು. ನೀನೇನು ಈಗ ನನ್ನನ್ನು ಹೆದರಿಸುತ್ತಿರುವೆಯಾ ? ನಾನು ಲೋಕಭಯಂಕರನಾದ ರಾವಣನು. ಎಂದು ತಿಳಿ.

೨೨೭. ಯಾವ ನಾನು ದೇವತೆಗಳನ್ನೆಲ್ಲಾ ಜಯಿಸಿರುವೆನೋ ಕೈಲಾಸವನ್ನು ಹಿಡಿದು ಅಲ್ಲಾಡಿಸಿರುವೆನೋ ಅಂತಹ ನನ್ನೆದುರಿಗೆ ಕಪಿಯಾದ ನೀನು ವ್ಯರ್ಥವಾಗಿ ಏನೇನನ್ನೋ ಹರಟುತ್ತಿರುವೆಯಲ್ಲ !

೨೨೮. ನಾನು ಒಂದು ಕ್ಷಣಕಾಲದಲ್ಲಿಯೇ ರಾಮಲಕ್ಷ್ಮಣರನ್ನೂ ಸುಗ್ರೀವ ಮಾರುತಿಯರನ್ನೂ ಕೊಂದು ಅನಂತರ ನಿನ್ನನ್ನೂ ವಿಭೀಷಣನನ್ನೂ ಕೊಂದು ಆ ಮೇಲೆ ಕಪಿಗಳನ್ನೆಲ್ಲಾ ತಿಂದುಬಿಡುತ್ತೇನೆ. ಎಂದನು.

೨೨೯. ರಾವಣನು ಹೀಗೆ ಹೇಳಿದುದನ್ನು ಕೇಳಿ ಅಂಗದನು ನಿನ್ನ ಪೌರುಷವನ್ನು ಬಲ್ಲೆನೆಂದು ಹೇಳಿ ಮತ್ತೆ ಇಂತೆಂದನು. ಎಲೈ ರಾವಣನೆ ! ನೀನು ಬಲಿಯ ಕಟ್ಟಿನಿಂದ ದೇಹವನ್ನು ಜರ್ಜರಿತವನ್ನಾಗಿ ಮಾಡಿಕೊಂಡಿದ್ದುದನ್ನೂ ಬಲ್ಲೆನು.

ಶಿವಪಾದಾಂಗುಷ್ಠಭಾರನಮ್ರಕೈಲಾಸಪೀಡಿತ ।
ಸಹಸ್ರಾರ್ಜುನಪೀರಾತ್ಮ ಸಂಭವಕ್ರೀಡನಾಮೃಗ ॥ ೨೩೦ ॥

ಶ್ವೇತದ್ವೀಪಸ್ಥ ಪ್ರಮದಾಕರತಾಡಿತಸನ್ಮುಖ ।
ವಿಷ್ಣುಪುತ್ರಶ್ಚ ವೈ ಬ್ರಹ್ಮಾ ಮರೀಚಿಸ್ತತ್ಸುತಃ ಸ್ಮೃತಃ ॥ ೨೩೧ ॥

ತತ್ಸುತಃ ಕಶ್ಯಪಸ್ತಸ್ಯ ಪುತ್ರೋಽಭೂದಿಂದ್ರನಾಮಕಃ ।
ತೇನೈವ ಯುದ್ಧಕಾಲೇ ತು ಬಧ್ವಾ ಕಾರಾಗೃಹಸ್ಥಿತ ॥ ೨೩೨ ॥

ಪರ್ಯಂಕೋಪರಿ ಸಂಬದ್ಧಮನ್ಮೂತ್ರಕ್ಷಾಲಿಕಾನನ ।
ಇತಿ ವಾಕ್ಯಶರಾಘಾತತರ್ಜಿತಸ್ಸ ದಶಾನನಃ ॥ ೨೩೩ ॥

---

೨೩೦. ಶಿವನು ಪಾದಾಂಗುಷ್ಠದಿಂದ ಕೈಲಾಸವನ್ನು ಅಮುಕಲು ಅದರಡಿಯಲ್ಲಿ ಸಿಕ್ಕಿಕೊಂಡು ನೀನು ತೊಂದರೆಪಡುತ್ತಿದ್ದುದನ್ನೂ ಬಲ್ಲೆನು ಸಹಸ್ರಾರ್ಜುನನು ನಿನ್ನನ್ನು ತೆಗೆದುಕೊಂಡು ಹೋಗಿ ತನ್ನ ಅರಮನೆಯಲ್ಲಿ ಮಕ್ಕಳಿಗೆ ಆಟದ ಮೃಗವನ್ನಾಗಿ ಇಟ್ಟುಕೊಂಡಿದ್ದುದನ್ನೂ ಬಲ್ಲೆನು.

೨೩೧–೨೩೨. ಶ್ವೇತದ್ವೀಪದಲ್ಲಿ ಹೆಂಗಸರ ಕೈಯ್ಯಿಂದ ಮುಖದಮೇಲೆ ಹೊಡಿಸಿಕೊಂಡುದನ್ನೂ ಬಲ್ಲೆನು. ವಿಷ್ಣುವಿಗೆ ಬ್ರಹ್ಮನು ಮಗನು. ಬ್ರಹ್ಮನಿಗೆ ಮರೀಚಿಯು ಮಗನು. ಆ ಮರೀಚಿಗೆ ಕಶ್ಯಪನು ಮಗನು ಆ ಕಶ್ಯಪನಿಗೆ ಇಂದ್ರ ಎಂಬುವನು ಮಗನು. ಆ ಇಂದ್ರನಿಗೆ ವಾಲಿಯು ಮಗನು. ನೀನು ಆ ವಾಲಿಯೊಡನೆ ಯುದ್ಧಮಾಡಿದಾಗ ಅವನು ನಿನ್ನನ್ನು ಕಟ್ಟಿ ಸೆರೆಮನೆಯಲ್ಲಿಟ್ಟಿದ್ದನು. ಅದನ್ನೂ ನಾನು ಬಲ್ಲೆನು.

೨೩೩. ಇದೂ ಅಲ್ಲದೆ ವಾಲಿಯು ನಿನ್ನನ್ನು ಕಟ್ಟಿ ತೆಗೆದುಕೊಂಡು ಬಂದು ನಾನು ಮಲಗಿರುವ ಮಂಚದಮೇಲೆ ಕಟ್ಟಿರಲು ನಾನು ಅಂಗತರನಾಗಿ (ಮೇಲುಮುಖವಾಗಿ) ಜಲಬಾಧೆಮಾಡಲು ಅದರಿಂದ ನಿನ್ನ ಮುಖಗಳು ನೆನೆಯುತ್ತಿದ್ದುದನ್ನೂ ಬಲ್ಲೆನು. ಎಂದು ಈ ರೀತಿಯಾದ ಅನೇಕ ಮಾತುಗಳಿಂದ ಅಂಗದನು ದಶಾನನನನ್ನು ತಿರಸ್ಕರಿಸಿದನು.

ದೂತಾನಾಜ್ಞಾಪಯಾಮಾಸ ತಾಡನೀಯೋ ಮುಖೇ ತ್ವಯಂ ।
ತಥೇತ್ಯುಕ್ತ್ವಾ ರಾಕ್ಷಸಾಸ್ತೇ ಶಸ್ತ್ರಹಸ್ತಾಸ್ಸಹಸ್ರಶಃ ॥ ೨೩೪ ॥

ಅಂಗದಂ ದುದ್ರುವುಶ್ಶೀಘ್ರಂ ತಾನ್ ದೃಷ್ಟ್ವಾ ವಾನರೋತ್ತಮಃ ।
ಮರ್ದಯಾಮಾಸ ಪುಚ್ಛೇನ ತಾನ್ ಸರ್ವಾನ್ ಕ್ಷಣಮಾತ್ರತಃ ॥ ೨೩೫ ॥

ರಾವಣಾಸ್ಯೇಷು ಸಂತಾಡ್ಯ ಸ್ವಕರಾಭ್ಯಾಂ ಮುಹುರ್ಮುಹುಃ ।
ತದ್ಧಸ್ತಪಾದೌ ಪುಚ್ಛೇನ ಪೂರ್ವಂ ಬಧ್ವಾ ಸವಿಸ್ತರಂ ॥ ೨೩೬ ॥

ತತಶ್ಚೋಡ್ಡೀಯ ವೇಗೇನ ಯಯೌ ಪ್ರಾಸಾದಮಸ್ತಕಃ ।
ಸುವೇಲಾದ್ರೌ ರಾಘವೇಂದ್ರಂ ತಾರೇಯಸ್ಸ ವಿಹಾಯಸಾ ॥ ೨೩೭ ॥

---

೨೩೪. ಅಂಗದನ ಈ ಕಠಿಣವಾದ ಮಾತುಗಳಿಂದ ನೊಂದರಾವಣನು ಆಗ ದೂತರನ್ನು ಕರೆದು ಎಲೈ ದೂತರಿರಾ! ಈ ಕಪಿಯು ಮುಖದಮೇಲೆ ಹೊಡೆಯಿರಿ. ಎಂದು ಆಪ್ಪಣೆಮಾಡಿದನು. ಅವರು ಹಾಗೆಯೇ ಆಗಲೆಂದು ಕೈಯ್ಯಲ್ಲಿ ಶಸ್ತ್ರಗಳನ್ನು ತೆಗೆದುಕೊಂಡು ಸಾವಿರಗಟ್ಟಲೆಯಲ್ಲಿ ಅಂಗದನನ್ನು ಸುತ್ತಿಕೊಂಡರು.

೨೩೫. ಹೀಗೆ ಶಸ್ತ್ರಹಸ್ತರಾಗಿ ತನ್ನನ್ನು ಹೊಡೆಯಲು ಬಂದ ಅವರನ್ನು ನೋಡಿ ಅಂಗದನು ಅವರೆಲ್ಲರನ್ನೂ ಕ್ಷಣಕಾಲದಲ್ಲಿ ಬಾಲದಿಂದಲೇ ಹೊಡೆದನು.

೨೩೬. ರಾವಣನ ಕೈಕಾಲುಗಳನ್ನು ಬಾಲದಿಂದ ಬಿಗಿಯಾಗಿ ಕಟ್ಟಿ ಅಲ್ಲಾಡದಂತೆ ಮಾಡಿ ಅವನ ಮುಖಗಳಮೇಲೆ ಅನೇಕಬಾರಿ ಬಹುವಾಗಿ ಹೊಡೆದನು.

೨೩೭. ಆಮೇಲೆ ಅವನನ್ನು ಬಿಟ್ಟು ಮೇಲಕ್ಕೆ ಹಾರಿ ಆ ಪ್ರಸಾದವನು ತಲೆಯಮೇಲೆ ಹೊತ್ತುಕೊಂಡು ಅಲ್ಲಿಂದ ವೇಗವಾಗಿ ಹಾರಿ ಸುವೇಲಾದ್ರಿಗೆ ಹೋದನು. ಅಲ್ಲಿ ರಾಮುನನ್ನು ನೋಡಿದನು.

ಅಂಗದಂ ರಾಘವೋ ದೃಷ್ಟ್ವಾ ಪ್ರಾಸಾದಾನ್ವಿತಮಸ್ತಕಂ ।
ಉವಾಚ ಕಿಂ ಕೃತಂ ಬಾಲ ಪ್ರಾಸಾದೋಽಯಂ ತ್ವಯಾ ಕಥಂ ॥ ೨೩೮ ॥

ಸಮಾನೀತೋತ್ರ ಲಂಕಾಯಾ ಮಿತ್ರಾಯೇಽಯಂ ಪುರೀ ಮಯಾ ।
ಅರ್ಪಿತಾಸ್ತಿ ತತೋ ಮಿತ್ರವಸ್ತ್ವಿದಂ ನ ಸ್ಪೃಶಾಮ್ಯಹಂ ॥ ೨೩೯ ॥

ತದ್ರಾಘವವಚಶ್ಶ್ರುತ್ವಾ ಚಕಿತಸ್ಸ ತದಾಂಗದಃ ।
ಪ್ರಾಸಾದಂ ಮಸ್ತಕೇ ದೃಷ್ಟ್ವೋರ್ಧ್ವಾಕ್ಷಿಭ್ಯಾಮಾಹ ರಾಘವಂ ॥ ೨೪೦ ॥

ನ ಜ್ಞಾತೋಽಯಂ ಮಯಾ ರಾಮ ಪ್ರಾಸಾದೋ ಮಸ್ತಕೇನ ಮೇ ।
ಉತ್ಪಾಟಿತಶ್ಚ ಲಂಕಾಯಾಸ್ಸಮಾನೀತಸ್ತವಾಂತಿಕಂ ॥ ೨೪೧ ॥

---

೨೩೮. ರಾಮನು ಹೀಗೆ ಬಂದ ಅಂಗದನನ್ನು ನೋಡಿದನು. ಅವನು ತಲೆಯಮೇಲೆ ಆ ರಾವಣನ ಮಹಡಿಯನ್ನೇ ಹೊತ್ತುತಂದಿದ್ದನು. ಆಗ ರಾಮನು ಎಲೈ ಬಾಲನೆ! ಇದೇಕೆ ಈ ಪ್ರಾಸಾದವನ್ನು ಹೊತ್ತುತಂದೆ! ನೀನು ಏನು ಕೆಲಸವನ್ನು ಮಾಡಿದೆ?

೨೩೯. ನಾನು ಮಿತ್ರನಾದ ವಿಭೀಷಣನಿಗೆ ಈ ಲಂಕೆಯನ್ನು ಕೊಟ್ಟಿರುವೆನು. ಇದು ಮಿತ್ರವಸ್ತುವಾದುದರಿಂದ ನಾನು ಅದನ್ನು ಮುಟ್ಟುವುದಿಲ್ಲ. ಎಂದನು.

೨೪೦. ರಾಘವನ ಈ ಮಾತುಗಳನ್ನು ಕೇಳಿ ಅಂಗದನು ಚಕಿತನಾಗಿ ತಲೆಯಮೇಲೆ ಹೊತ್ತಿದ್ದ ಆ ಪ್ರಾಸಾದವನ್ನು ಮೇಲುಮುಖವಾಗಿ ಕಣ್ಣುಗಳನ್ನು ಮಾಡಿಕೊಂಡು ನೋಡುತ್ತ ರಾಮನನ್ನು ಕುರಿತು ಇಂತೆಂದನು.

೨೪೧-೨೪೩. ಎಲೈ ರಾಮನೆ! ಇದು ನನಗೆ ತಿಳಿಯಲಿಲ್ಲ. ಲಂಕೆಯ ಈ ಪ್ರಾಸಾದವನ್ನು ಕಿತ್ತು ತಲೆಯ ಮೇಲಿಟ್ಟುಕೊಂಡು ನಿನ್ನ ಬಳಿಗೆ ತಂದೆನು.

ಪುನರ್ನೀತ್ವಾದ್ಯ ಲಂಕಾಯಾಮೇನಂ ಸಂಸ್ಥಾಪಯಾಮ್ಯಹಂ ।
ಇತ್ಯುಕ್ತ್ವಾ ಪರಿವೃತ್ಯಾಥ ರಾಘವಸ್ಯಾಜ್ಞಯಾಂಗದಃ ॥ ೨೪೨ ॥

ಪ್ರಾಸಾದಂ ಪೂರ್ವವತ್ ಸ್ಥಾಪ್ಯ ಲಂಕಾಯಾಂ ಸ ಯಯೌ ಪುನಃ ।
ಸುವೇಲಾದ್ರೌ ರಾಘವೇಂದ್ರಂ ನತ್ವಾ ವೃತ್ತಂ ನ್ಯವೇದಯತ್ ॥ ೨೪೩ ॥

ಯದ್ಯತ್ಕೃತಂ ತು ಲಂಕಾಯಾಂ ಸಂವಾದಂ ರಾವಣಸ್ಯ ಚ ।
ರಾಮೋಽಪಿ ಶ್ರುತ್ವಾ ತತ್ಸರ್ವಂ ಸ್ಮಿತ್ವಾ ತಂ ಪರಿಷಸ್ವಜೇ ॥ ೨೪೪ ॥

ಅಥ ಶ್ರೀರಾಮಚಂದ್ರೋಽಪಿ ಸುವೇಲಾದ್ರೌ ಸ್ಥಿತಸ್ತದಾ ।
ಲೀಲಯಾ ಚಾಪಮಾದಾಯ ಮುಮೋಚ ಶರಮುತ್ತಮಂ ॥ ೨೪೫ ॥

ತೇನ ಛತ್ರಸಹಸ್ರಾಣಿ ಕಿರೀಟ ದಶಕಂ ತಥಾ ।
ಲಂಕಾಯಾಂ ರಾಕ್ಷಸೇಂದ್ರಸ್ಯ ಪ್ರಾಸಾದೇ ಸಂಸ್ಥಿತಸ್ಯ ಚ ॥ ೨೪೬ ॥

ಈಗ ಮತ್ತೆ ತೆಗೆದುಕೊಂಡು ಹೋಗಿ ಅಲ್ಲಿಯೇ ಇಟ್ಟುಬಿಡುವೆನು. ಹೀಗೆಂದು ಹೇಳಿ ರಾಮನ ಅಪ್ಪಣೆಯಂತೆ ಮತ್ತೆ ತೆಗೆದುಕೊಂಡು ಹೋಗಿ ಮೊದಲಿನಂತೆಯೇ ಆ ಲಂಕೆಯಲ್ಲಿ ಅದನ್ನು ಇಟ್ಟು ಬಿಟ್ಟನು. ಮತ್ತೆ ಹಿಂದಿರುಗಿ ಬಂದನು. ಮತ್ತು ಲಂಕೆಯಲ್ಲಿ ನಡೆದ ವಿಷಯಗಳನ್ನೆಲ್ಲಾ ಅವನಿಗೆ ನಮಸ್ಕರಿಸಿ ತಿಳಿಸಿದನು.

೨೪೪. ಲಂಕೆಯಲ್ಲಿ ತಾನು ಮಾಡಿದ ಕೆಲಸವನ್ನೂ ರಾವಣನೊಡನೆ ನಡೆಸಿದ ಸಂವಾದವನ್ನೂ ತಿಳಿಸಲು ರಾಮನು ಅದನ್ನು ಕೇಳಿ ನಕ್ಕು ಅಂಗದನನ್ನು ಆಲಿಂಗಿಸಿಕೊಂಡನು.

೨೪೫. ರಾಮಚಂದ್ರನು ಸುವೇಲಾದ್ರಿಯಲ್ಲಿರುತ್ತ ಒಂದು ಬಾಣವನ್ನು ತೆಗೆದುಕೊಂಡು ಬಿಲ್ಲಿಗೆ ಹೂಡಿ ಅದನ್ನು ಲಂಕೆಗೆ ಬಿಟ್ಟನು.

೨೪೬. ಲಂಕೆಯ ಅರಮನೆಯಲ್ಲಿ ಮಹಡಿಯ ಮೇಲಿದ್ದ ರಾವಣನ ಹತ್ತು ಕಿರೀಟಗಳನ್ನೂ ಸಾವಿರಾರು ಛತ್ರಿಗಳನ್ನೂ ಒಂದು ಕ್ಷಣದಲ್ಲಿಯೇ ಆ ಬಾಣದಿಂದ ಕತ್ತರಿಸಿದನು. ಇದನ್ನು ಕಪಿಗಳು ನೋಡುತ್ತಲೇ ಇದ್ದುವು.

ಚಿಚ್ಛೇದ ನಿಮಿಷಾರ್ಧೇನ ಕಪೀನಾಂ ಪಶ್ಯತಾಂ ಪ್ರಭುಃ ।
ಏತಸ್ಮಿನ್ನಂತರೇ ತತ್ರ ರಾಮಾಗ್ರೇ ಸಂಸ್ಥಿತೋ ಮಹಾನ್ ॥ ೨೪೭ ॥

ನ ದತ್ತಾಂ ಜಾನಕೀಂ ಶ್ರುತ್ವಾ ರಾವಣೇನಾಂಗದಾಸ್ಯತಃ ।
ಕ್ರೋಧೇನ ಮಹತಾವಿಷ್ಟಸ್ಸುಗ್ರೀವಃ ಪ್ಲವಗಾಗ್ರಣೀಃ ॥ ೨೪೮ ॥

ಯಯಾವುಡ್ಡೀಯ ಲಂಕಾಯಾಂ ದಶಾಸ್ಯಂ ರಾಕ್ಷಸೈರ್ಯುತಂ ।
ಪ್ರಾಸಾದಸಂಸ್ಥಿತಂ ಛತ್ರಹೀನಂ ಪ್ರವ್ಯಗ್ರಮಾನಸಂ ॥ ೨೪೯ ॥

ಸುಗ್ರೀವೋ ರಾವಣಂ ಗತ್ವಾ ಜಘಾನ ದೃಢಮುಷ್ಟಿನಾ ।
ಪಾತಯಾಮಾಸ ಭೂಮ್ಯಾಂ ತಂ ವರಸಿಂಹಾಸನಾತ್ತದಾ ॥ ೨೫೦ ॥

ಚಕ್ರತುಸ್ತೌ ಬಾಹುಯುದ್ಧಂ ತುಮುಲಂ ರೋಮಹರ್ಷಣಂ ।
ಊರ್ವಂಘ್ರಿಕರಹೃದ್ಘಾತೈಃ ಕಪೀಶರಾಕ್ಷಸೇಶ್ವರೌ ॥ ೨೫೧ ॥

೨೪೭-೨೪೮. ಆ ಸಮಯಕ್ಕೆ ಸರಿಯಾಗಿ ರಾವಣನಿಗೆ ಅಂಗದನು ಹೋಗಿ ಹೇಳಿದರೂ ಸೀತೆಯನ್ನು ರಾಮನಿಗೆ ತಂದು ಒಪ್ಪಿಸಲಿಲ್ಲವೆಂದು ಸುಗ್ರೀವನು ಬಹು ಕೋಪಗೊಂಡನು.

೨೪೯. ಒಡನೆಯೇ ಹಾರಿ ಲಂಕೆಗೆ ಹೋದನು. ಅಲ್ಲಿ ಪ್ರಾಸಾದದ ಮೇಲೆ ರಾವಣನು ಕುಳಿತಿದ್ದನು. ಛತ್ರಿಗಳೊಂದೂ ಇರಲಿಲ್ಲ. ಕಳವಳಗೊಂಡಿದ್ದನು.

೨೫೦. ಈ ಸುಗ್ರೀವನು ರಾವಣನ ಬಳಿಗೆ ಹೋಗಿ ದೃಢವಾದ ಮುಷ್ಟಿಯಿಂದ ತಲೆಯಮೇಲೆ ಹೊಡೆದನು. ಹೀಗೆ ಹೊಡೆದು ಸಿಂಹಾಸನದಿಂದ ಅವನನ್ನು ಕೆಳಕ್ಕೆ ಕೆಡವಿದನು.

೨೫೧. ಅನಂತರ ಅವರಿಬ್ಬರಿಗೂ ಬಾಹುಯುದ್ಧವು ನಡೆಯಿತು. ಅದು ರೋಮಾಂಚಜನಕವಾಗಿದ್ದಿತು. ಅವರಿಬ್ಬರೂ ತೊಡೆ, ಮುಂಡಿ, ಕೈಕಾಲುಗಳಿಂದ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು.

ತದಾಸೀಜ್ಜರ್ಜರಾಂಗಸ್ಸ ರಾವಣಃ ಕಪಿಘಾತತಃ ।
ದುದ್ರುವೇ ಬಾಹುಯುದ್ಧಂ ತತ್ತ್ಯಕ್ತ್ವಾ ಗೇಹಂ ವಿಲಜ್ಜಿತಃ ॥ ೨೫೨ ॥

ತದಾಚ್ಛಿದ್ಯ ತನ್ಮಕುಟಂ ಯಯೌ ರಾಮಂ ಕಪೀಶ್ವರಃ ।
ನನಾಮ ರಾಘವಂ ಭಕ್ತ್ಯಾ ವೃತ್ತಂ ಸರ್ವಂ ನ್ಯವೇದಯತ್ ॥ ೨೫೩ ॥

ತಂ ಸಮಾಲಿಂಗ್ಯ ರಾಮೋಽಪಿ ಸುಗ್ರೀವಂ ಪ್ರಾಹ ಸಾದರಂ ।
ಮಾಮಪೃಷ್ಟ್ವಾ ಕಥಂ ಬಂಧೋ ಗತಸ್ತೂಷ್ಣೀಂ ದಶಾನನಂ ॥ ೨೫೪ ॥

ತ್ವಜ್ಜೀವಿತಂ ವಿಪನ್ನಂ ಚೇತ್ತರ್ಹಿ ಕಿಂ ಸೀತಯಾ ಮಮ ।
ಭವಿಷ್ಯತಿ ನ ಸೌಖ್ಯಂ ಹಿ ಮೇದೃಶಂ ಸಾಹಸಂ ಕುರು ॥ ೨೫೫ ॥

ತತೋ ಭೇರಿಮೃದಂಗಾದ್ಯೈರ್ವಾದ್ಯೈಸ್ತೇ ವಾನರೋತ್ತಮಾಃ ।
ಲಂಕಾಂ ಸಂವೇಷ್ಟಯಾಮಾಸುಶ್ಚತುರ್ದ್ವಾರೇಷು ಸಂಸ್ಥಿತಾಃ ॥ ೨೫೬ ॥

---

೨೫೨. ಕಪಿಯ ಏಟಿನಿಂದ ರಾವಣನ ಅಂಗವೆಲ್ಲವೂ ನಜ್ಜುಗುಜ್ಜಾಯಿತು. ಒಡನೆಯೇ ಆ ರಾವಣನು ಬಾಹುಯುದ್ಧವನ್ನು ಬಿಟ್ಟು ಲಜ್ಜೆಯಿಂದ ಮನೆಯೊಳಕ್ಕೆ ಓಡಿದನು.

೨೫೩. ಆಗಲೂ ಅವನ ಕಿರೀಟವನ್ನು ಕಿತ್ತುಕೊಂಡು ಸುಗ್ರೀವನು ರಾಮನ ಬಳಿಗೆ ಬಂದನು. ರಾಮನಿಗೆ ನಮಸ್ಕರಿಸಿ ತಾನು ಮಾಡಿದ ಕೆಲಸವನ್ನೆಲ್ಲಾ ತಿಳಿಸಿದನು.

೨೫೪. ರಾಮನು ಸುಗ್ರೀವನನ್ನು ಆದರದಿಂದ ಆಲಿಂಗಿಸಿಕೊಂಡು ಇಂತೆಂದನು. ಎಲೈ ಬಂಧುವೆ ! ನನಗೆ ಹೇಳದೆ ಸುಮ್ಮನೆ ದಶಾನನನ ಬಳಿಗೆ ನೀನು ಹೋಗಬಹುದೆ ?

೨೫೫. ನಿನ್ನ ಜೀವಿತವು ವ್ಯತ್ಯಾಸವಾಗಿದ್ದರೆ ಆಗ ಸೀತೆಯಿಂದ ತಾನೆ ನನಗೆ ಪ್ರಯೋಜನವೇನು ? ನನಗೆ ಸೌಖ್ಯವಾದರೂ ಏನು ಆಗುತ್ತಿದ್ದಿತು ? ಇನ್ನುಮೇಲೆ ನೀನು ಇಂತಹ ಸಾಹಸವನ್ನು ಮಾಡಬೇಡ.

೨೫೬. ಅನಂತರ ಕಪಿಗಳು ಮೃದಂಗ, ಭೇರಿ, ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಲಂಕೆಯನ್ನು ನಾಲ್ಕು ಬಾಗಿಲುಗಳಲ್ಲಿಯೂ ಮುತ್ತಿಗೆ ಹಾಕಿದರು.

ತದಾ ತಂ ಮುಕುಟಂ ರಾಮೋಂಗದಾಯ ರಾವಣಸ್ಯ ಚ ।
ದದೌ ತುಷ್ಟೋ ದಳೇಶಾಯ ಲಂಕಾಂ ರೋದ್ಧುಂ ಪ್ರಚೋದಯತ್ ॥

ಅಂಗದಂ ದಕ್ಷಿಣದ್ವಾರಂ ವಾಯುಪುತ್ರಂ ತು ಪಶ್ಚಿಮಂ ।
ನಲಂ ಸೈನ್ಯೇನ ಪ್ರಾಗ್ದ್ವಾರಂ ಸುಷೇಣಂ ದ್ವಾರಮುತ್ತರಂ ॥ ೨೫೮ ॥

ಯಯುಸ್ತೇ ರಾಘವಂ ನತ್ವಾ ಲಂಕಾಂ ಸ್ವಸ್ವಬಲೈರ್ಯುತಾಃ ।
ತಾಂ ಲಂಕಾಂ ರುರುಧುಸ್ಸರ್ವೇ ಚತುರ್ದ್ವಾರೇಷು ವಾನರಾಃ ॥ ೨೫೯ ॥

ದಶಾಸ್ಯೋಽಪಿ ಗೃಹಂ ಗತ್ವಾ ಸುಗ್ರೀವಜರ್ಜರೀಕೃತಃ ।
ತಸ್ಥೌ ತೂಷ್ಣೀಂ ಸ ರಹಸಿ ಸ್ಮರನ್ ಸುಗ್ರೀವಪೌರುಷಂ ॥ ೨೬೦ ॥

ಮಾಲೀ ಸುಮಾಲೀ ಚ ತಥಾ ಮಾಲ್ಯವಾನ್ಬಂಧವಾಸ್ತ್ರಯಃ ।
ಮಾತಾಮಹಾ ರಾವಣಸ್ಯ ತೇ ಸಮ್ಮಂತ್ರ್ಯ ಪರಸ್ಪರಂ ॥ ೨೬೧ ॥

---

೨೫೮. ರಾಮನು ಸಂತೋಷಗೊಂಡು ರಾವಣನ ಆ ಕಿರೀಟವನ್ನು ಸೇನಾಪತಿಯಾದ ಅಂಗದನಿಗೆ ಕೊಟ್ಟನು. ಮತ್ತು ಲಂಕೆಗೆ ಮುತ್ತಿಗೆ ಹಾಕುವಂತೆ ಗೌರವಿಸಿ ಹೇಳಿದನು.

೨೫೮. ಅಂಗದನು ದಕ್ಷಿಣದ ಬಾಗಿಲನ್ನೂ ಹನುಮಂತನು ಪಶ್ಚಿಮದ ಬಾಗಿಲನ್ನೂ ನಲನು ಪೂರ್ವದ ಬಾಗಿಲನ್ನೂ ಸುಷೇಣನು ಉತ್ತರದ ಬಾಗಿಲನ್ನೂ ಸೇನೆಗಳೊಂದಿಗೆ ಮುತ್ತಿಗೆ ಹಾಕುವಂತೆ ಹೇಳಿದನು.

೨೫೯. ಆಗ ಅವರೆಲ್ಲರೂ ರಾಘವನಿಗೆ ನಮಸ್ಕರಿಸಿ ತಮ್ಮ ತಮ್ಮ ಸೈನ್ಯಗಳೊಡನೆ ಹೋಗಿ ನಾಲ್ಕು ಬಾಗಿಲುಗಳಲ್ಲಿಯೂ ಮುತ್ತಿಗೆ ಹಾಕಿಕೊಂಡರು.

೨೬೦. ದಶಾಸ್ಯನು ಸುಗ್ರೀವನಿಂದ ಪೆಟ್ಟನ್ನು ತಿಂದು ಮನೆಗೆ ಹೋಗಿ ಸುಗ್ರೀವನ ಪೌರುಷವನ್ನು ಸ್ಮರಿಸುತ್ತ ಏಕಾಂತದಲ್ಲಿ ಮೌನವಾಗಿದ್ದನು.

೨೬೧. ಆಗ ಮಾಲೀ ಸುಮಾಲೀ ಮಾಲ್ಯವಂತರೆಂಬ ಮೂವರು ರಾವಣನಿಗೆ ತಾಯಿಯ ತಂದೆಯ ಸಹೋದರರು. ಅವರು ಒಬ್ಬರಿಗೊಬ್ಬರು ಮಂತ್ರಾಲೋಚನೆಯನ್ನು ಮಾಡಿಕೊಂಡರು.

ದಶಾನನಂ ಬೋಧಯಿತುಂ ತೇಭ್ಯಸ್ತ್ವೇಕೋ ಯಯೌ ಜನಾತ್ ।
ಮಾಲ್ಯವಾನಿತಿ ನಾಮ್ನಾ ಯೋ ಬುದ್ಧಿಮಾನ್ ಸ್ನೇಹಸಂಯುತಃ ॥ ೨೬೨ ॥

ಪ್ರಾಹ ತಂ ರಾಕ್ಷಸಂ ವೀರಂ ಪ್ರಶಾಂತೇನಾಂತರಾತ್ಮನಾ ।
ಶೃಣು ರಾಜನ್ ವಚೋ ಮೇದ್ಯ ಶ್ರುತ್ವಾ ಕುರು ಯಥೇಪ್ಸಿತಂ ॥ ೨೬೩ ॥

ಯದಾ ಪ್ರವಿಷ್ಟಾ ನಗರೀಂ ಜಾನಕೀ ರಾಮವಲ್ಲಭಾ ।
ತದಾದಿ ಪುರ್ಯಾಂ ದೃಶ್ಯಂತೇಽನಿಮಿತ್ತಾನಿ ದಶಾನನ ॥ ೨೬೪ ॥

ಘೋರಾಣಿ ನಾಶಹೇತೂನಿ ತಾನಿ ಮೇ ವದತಃ ಶೃಣು ।
ಖರಾಃ ಸ್ತನಿತನಿರ್ಘೋಷಾ ಮೇಘಾಃ ಪ್ರತಿಭಯಂಕರಾಃ ॥ ೨೬೫ ॥

ಶೋಣಿತಾನ್ಯಭಿ ವರ್ಷಂತಿ ಲಂಕಾಮುಷ್ಣೇನ ಸರ್ವದಾ ।
ಸೀದಂತಿ ದೇವಲಿಂಗಾನಿ ಖಿದ್ಯಂತಿ ಪ್ರಚಲಂತಿ ಚ ॥ ೨೬೬ ॥

---

೨೬೨. ದಶಾಸ್ಯನಿಗೆ ಬುದ್ಧಿಯನ್ನು ಹೇಳಲು ಅವರಲ್ಲಿ ಒಬ್ಬನು ರಾವಣನ ಬಳಿಗೆ ಹೋದನು. ಅವನೇ ಮಾಲ್ಯವಂತನು. ಬುದ್ಧಿವಂತರಲ್ಲಿ ಅಗ್ರಗಣ್ಯನು. ರಾವಣನು ಅವನಲ್ಲಿ ಬಹು ಸ್ನೇಹದಿಂದ್ದನು.

೨೬೩. ಈ ಮಾಲ್ಯವಂತನು ಶಾಂತವಾದ ಮನಸ್ಸಿನಿಂದ ದಶಾನನನಿಗೆ ಇಂತೆಂದನು. ಎಲೈ ರಾಜನೆ! ನನ್ನ ಮಾತನ್ನು ಈಗ ಕೇಳು. ಅನಂತರ ನಿನಗೆ ಬೇಕಾದಂತೆ ಮಾಡಿಕೊ.

೨೬೪. ರಾಮವಲ್ಲಭಳಾದ ಸೀತೆಯು ಈ ಪಟ್ಟಣಕ್ಕೆ ಪ್ರವೇಶಮಾಡಿದಂದಿನಿಂದ ಈ ಪಟ್ಟಣದಲ್ಲಿ ಅನಿಮಿತ್ತಗಳು ವಿಪರೀತವಾಗಿ ಕಾಣುತ್ತಿವೆ.

೨೬೫. ಅವೆಲ್ಲವೂ ಘೋರವಾದುವು. ನಾಶಕ್ಕೆ ಹೇತುಗಳು. ಅವುಗಳನ್ನು ಹೇಳುತ್ತೇನೆ. ಕೇಳು. ಕತ್ತೆಗಳು ಗುಡಿಗಿನಂತೆ ಕೂಗುತ್ತಿವೆ. ಮೇಘವೆಲ್ಲವೂ ಭಯಂಕರವಾಗಿ ಗರ್ಜಿಸುತ್ತಿವೆ.

೨೬೬. ಆ ಮೇಘಗಳು ರಕ್ತದ ಮಳೆಯನ್ನು ಸುರಿಸುತ್ತಿವೆ. ಉಷ್ಣವಾಗಿ ಯಾವಾಗಲೂ ಲಂಕೆಯಮೇಲೆ ಬೀಳುತ್ತಿರುತ್ತವೆ. ದೇವತಾಪ್ರತಿಮೆಗಳು ದುಃಖಿಸುವಂತೆಯೂ ಖೇದಗೊಂಡಿರುವಂತೆಯೂ ಕಾಣುತ್ತ ಅಲ್ಲಾಡುತ್ತಿರುತ್ತವೆ.

ಕಾಲಿಕಾ ಪಾಂಡುರೈರ್ದಂತೈಃ ಪ್ರಹಸಂತ್ಯಗ್ರತಃ ಸ್ಥಿತಾ ।
ಖರಾ ಗೋಷು ಪ್ರಜಾಯಂತೇ ಮೂಷಕಾ ನಕುಲೈಸ್ಸಹ ॥ ೨೬೭ ॥

ಮಾರ್ಜಾರೇಣ ತು ಯುಧ್ಯಂತೇ ಪನ್ನಗಾ ಗರುಡೇ ನ ಚ ।
ಕರಾಲೋ ವಿಕಲೋ ಮುಂಡಃ ಪುರುಷಃ ಕೃಷ್ಣಪಿಂಗಲಃ ॥ ೨೬೮ ॥

ಕಾಲೋ ಗೃಹಾಣಿ ಸರ್ವೇಷಾಂ ಕಾಲೇ ಕಾಲೇ ತ್ವವೇಕ್ಷತೇ ।
ಏತಾನ್ಯನ್ಯಾನಿ ದೃಷ್ಟಾನಿ ನಿಮಿತ್ತಾನ್ಯುದ್ಭವಂತಿ ಚ ॥ ೨೬೯ ॥

ಅತಃ ಕುಲಸ್ಯ ರಕ್ಷಾರ್ಥಂ ಶಾಂತಿಂ ಕುರು ದಶಾನನ ।
ಸೀತಾಂ ಸತ್ಕೃತ್ಯ ಸಧನಾಂ ರಾಮಾಯಾಶು ಪ್ರಯಚ್ಛ ಭೋಃ ॥ ೨೭೦ ॥

---

೨೬೭. ಕಾಳಿಕೆಯು ಬೆಳ್ಳಗೆ ಹಲ್ಲನ್ನು ಬಿಟ್ಟುಕೊಂಡು ಎದುರಿಗೆ ನಿಂತುಕೊಂಡು ನಗುತ್ತಿರುವಳು. ಗೋವುಗಳಲ್ಲಿ ಕತ್ತೆಯ ಮರಿಗಳು ಹುಟ್ಟುತ್ತಿವೆ. ಇಲಿಗಳು ಮುಂಗಸಿಗಳೊಡನೆಯೂ ಬೆಕ್ಕುಗಳೊಡನೆಯೂ ಕಾದಾಡುತ್ತಿವೆ. ಸರ್ಪಗಳು ಗರುಡಗಳೊಡನೆ ಜಗಳವಾಡುತ್ತಿವೆ.

೨೬೮–೨೬೯. ಕಾಲಪುರುಷನು ಭಯಂಕರವಾಗಿ ಕೋರೆದಾಡೆಗಳನ್ನು ಬಿಟ್ಟುಕೊಂಡು ಕೆಂಚಗಿದ್ದುಕೊಂಡು ಎಲ್ಲರ ಮನೆಗೂ ನಗುತ್ತ ಪದೇ ಪದೇ ಇಣಿಕಿ ನೋಡುತ್ತಿರುವನು. ಇವೇ ಮುಂತಾದುವನ್ನು ನೋಡುತ್ತಿದ್ದೇವೆ. ಇನ್ನೂ ಹೊಸ ಹೊಸದೂ ಉಂಟಾಗುತ್ತಿರುವುದು.

೨೭೦. ಎಲೈ ದಶಾನನನೇ! ಆದುದರಿಂದ ಕುಲದ ಕ್ಷೇಮಕ್ಕೋಸ್ಕರ ಶಾಂತಿಯನ್ನು ಮಾಡಿಸು. ಸೀತೆಯನ್ನು ಬಟ್ಟೆ ಧನ ಮುಂತಾದುವುಗಳಿಂದ ಸತ್ಕರಿಸಿ ರಾಮನಿಗೆ ಒಪ್ಪಿಸಿಬಿಡು.

ಮಾತಾಮಹವಚಶ್ಚೇತ್ಥಂ ಶ್ರುತ್ವಾ ತಂ ರಾವಣೋಽಬ್ರವೀತ್ ।
ರಾಮೇಣ ಪ್ರೇಷಿತೋ ನೂನಂ ಭಾಷಸೇ ತ್ವಮನರ್ಗಳಂ ॥ ೨೭೧ ॥

ಗಚ್ಛ ವೃದ್ಧೋಽಸಿ ಬಂಧುಸ್ತ್ವಂ ಸೋಢಂ ಸರ್ವಂ ತ್ವಯೋದಿತಂ ।
ಇತೋ ವಾ ಕರ್ಣಪದವೀಂ ದಹತ್ಯೇತದ್ವಚಸ್ತವ ॥ ೨೭೨ ॥

ಇತ್ಯುಕ್ತಸ್ಸ ರಾವಣೇನ ಮಾಲ್ಯವಾನ್ ಸ್ವಗೃಹಂ ಯಯೌ ।
ರಾವಣೋಽಪಿ ಸಭಾಂ ಗತ್ವಾ ಚೋದಯಾಮಾಸ ರಾಕ್ಷಸಾನ್ ॥ ೨೭೩ ॥

ಪೂರ್ವದ್ವಾರಂ ತು ಧೂಮ್ರಾಕ್ಷಂ ವಜ್ರದಂಷ್ಟ್ರಂ ತು ಪಶ್ಚಿಮಂ ।
ನರಾಂತಕಂ ದಕ್ಷಿಣಂ ತಮುತ್ತರಂ ಚ ಮಹೋದರಂ ॥ ೨೭೪ ॥

---

೨೭೧. ಮಾತಾಮಹನಾದ ಮಾಲ್ಯವಂತನ ಈ ಮಾತನ್ನು ಕೇಳಿ ದಶಾನನನು ಇಂತೆಂದನು. ಎಲೈ ಮಾಲ್ಯವಂತನೆ! ನಿನ್ನನ್ನು ರಾಮನು ಕಳುಹಿಸಿರಬಹುದು. ಆದುದರಿಂದಲೇ ಈ ರೀತಿಯಾಗಿ ತಡೆಯಿಲ್ಲದೆ ನನ್ನನ್ನು ಕುರಿತು ಹೇಳುತ್ತಿದ್ದೀಯೆ.

೨೭೨. ನೀನು ಮುದುಕನು. ಬಂಧುವು. ಹೋಗು. ನೀನು ಹೇಳಿದುದೆಲ್ಲವನ್ನೂ ಕ್ಷಮಿಸಿದ್ದೇನೆ. ನಿನ್ನ ಮಾತು ನನ್ನ ಕಿವಿಗಳನ್ನು ಹೊಕ್ಕು ಸುಡುತ್ತಿರುವುದು.

೨೭೩. ರಾವಣನು ಹೀಗೆಂದು ಹೇಳುತ್ತಲೂ ಮಾಲ್ಯವಂತನು ಮನೆಗೆ ಹೊರಟು ಹೋದನು. ಇತ್ತ ರಾವಣನು ಸಭೆಗೆ ಹೋಗಿ ರಾಕ್ಷಸರೆಲ್ಲರನ್ನೂ ಯುದ್ಧಕ್ಕೆ ಪ್ರೇರಿಸುತ್ತಿದ್ದನು.

೨೭೪-೨೭೫. ಪೂರ್ವದ ಬಾಗಿಲಿಗೆ ಧೂಮ್ರಾಕ್ಷನನ್ನೂ ಪಶ್ಚಿಮದ ಬಾಗಿಲಿಗೆ ವಜ್ರದಂಷ್ಟ್ರನನ್ನೂ ದಕ್ಷಿಣದ ಬಾಗಿಲಿಗೆ ನರಕಾಂತಕನನ್ನೂ ಉತ್ತರದ ಬಾಗಿಲಿಗೆ ಮಹೋದರನನ್ನೂ ನಿಯಮಿಸಿ ಅವರಿಗೆ ಬಹುವಾದ

ಪ್ರೇಷಯಾಮಾಸ ಸೈನ್ಯೇನ ವಸ್ತ್ರಾದ್ಯೈಸ್ತೋಷಿತಾ೯ ಜವಾತ್ ।
ಚತ್ವಾರಸ್ತೇಪಿ ನತ್ವಾ ತಂ ರಾವಣಂ ಸಂಗರಂ ಯಯುಃ ॥ ೨೭೫ ॥

ರಾಮರಾವಣಯೋರೇವಂ ಸೈನ್ಯಾನಿ ಚ ಪರಸ್ಪರಂ ।
ಯಯುಸ್ತಾನಿ ಸಮ್ಮುಖಾನಿ ಸಂಗರಾರ್ಥಂ ಮಹಾಸ್ವನೈಃ ॥ ೨೭೬ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಸಾರಕಾಂಡೇ ಯುದ್ಧ ಚರಿತೇ
ರಾಮೇಶ್ವರಾಖ್ಯಾನೇ ದಶಮಸ್ಸರ್ಗಸ್ಸಮಾಪ್ತಃ

ವಸ್ತ್ರಧನಗಳನ್ನು ಕೊಟ್ಟು ಸೈನ್ಯದೊಡನೆ ಬೇಗನೆ ಕಳುಹಿಸಿದನು. ಆ ನಾಲ್ಕು ಜನರೂ ರಾವಣನಿಗೆ ನಮಸ್ಕರಿಸಿ ಬಾಗಿಲುಗಳನ್ನು ರಕ್ಷಿಸಲು ಹೊರಟರು.

೨೭೬. ಈ ರೀತಿಯಾಗಿ ರಾಮ ರಾವಣರ ಸೈನ್ಯಗಳು ಗರ್ಜಿಸುತ್ತ ಯುದ್ಧಕ್ಕೋಸ್ಕರ ಎದುರುಬದಿರಿಗೆ ನುಗ್ಗಿದುವು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಆನಂದರಾಮಾಯಣದ ಸಾರಕಾಂಡದ ಯುದ್ಧಚರಿತ್ರೆಯಲ್ಲಿ ರಾಮೇಶ್ವ
ರಾಖ್ಯಾನವೆಂಬ ಹತ್ತನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
॥ ಹತ್ತನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಲಂಕೆಯ ಸ್ಥಿತಿಯನ್ನು ಕೇಳಲು ಅದರ ನಿರ್ಮಾಣದ ರೀತಿಯನ್ನೂ ಅದನ್ನು ಎಲ್ಲೆಲ್ಲಿ ಯಾರು ಯಾರು ರಕ್ಷಿಸುತ್ತಿರುವರು ಎಂಬುದನ್ನೂ ಹನುಮಂತನು ವಿವರಿಸುವನು. ಮತ್ತು ಆ ಪಟ್ಟಣದಲ್ಲಿರುವ ಮುಖ್ಯ ಮುಖ್ಯ ಸ್ಥಳಗಳನ್ನು ವಿವರಿಸುವನು. ಮತ್ತು ನಾನು ಮೊದಲೇ ನನ್ನ ಬಾಲದ ಬೆಂಕಿಯಿಂದ ಸುಟ್ಟಿರುವೆನು. ನೀನು ಅದನ್ನು ನೋಡಿದರೇನೇ ನಿರ್ಮೂಲ ವಾಗುವುದೆಂದೂ ಹೇಳಿದನು.

ಇದನ್ನು ಕೇಳಿ ರಾಮನು ಸುಗ್ರೀವನಿಗೆ ಹೇಳಿ ಒಡನೆಯೇ ಕಪಿಗಳೊಡನೆ ಪ್ರಯಾಣಮಾಡುವನು. ಸೈನ್ಯವನ್ನು ಸರಿಯಾಗಿ ನಡೆಸಿಕೊಂಟು ಹೋಗಲು ಸರಿಯಾದ ಭಾಗಗಳಲ್ಲಿ ಸೇನಾಪತಿಗಳನ್ನು ನಿಯಮಿಸುವನು. ರಾಮನು ಹುನಮಂತನ ಹೆಗಲಿನಮೇಲೆ ಕುಳಿತುಕೊಂಡೂ ಲಕ್ಷ್ಮಣನು ಅಂಗದನಮೇಲೆ ಕುಳಿತುಕೊಂಡು ಹೋಗುವ ಹಾಗೆ ಪ್ರಯಾಣಮಾಡಿ ಎಲ್ಲರೂ ದಕ್ಷಿಣಸಮುದ್ರದ ದಡಕ್ಕೆ ಬಂದು ಸೇರುವರು. ಅಲ್ಲಿ ಶ್ರೀರಾಮನು ಕಪೀಶ್ವರರುಗಳನ್ನು ಸೇರಿಸಿಕೊಂಡು ಸಮುದ್ರವನ್ನು ದಾಟುವ ಉಪಾಯವನ್ನು ಯೋಚಿಸುವನು.

ಇತ್ತ ಲಂಕೆಯಲ್ಲಿ ಹನುಮಂತನು ಮಾಡಿದ ತೊಂದರೆಗಳನ್ನು ದಶಾನನನು ನೋಡಿ ಪ್ರಹಸ್ತನೇ ಮುಂತಾದ ಮಂತ್ರಿಗಳಲ್ಲಿ ಆಲೋಚಿಸುವನು. ಆಗ ಮಂತ್ರಿಗಳು "ಹನುಮಂತನು ಕಪಿಯೆಂದು ಉದಾಸೀನಮಾಡಿದೆವು. ನೀನು ಅಪ್ಪಣೆಮಾಡಿದಲ್ಲಿ ಪ್ರಪಂಚವನ್ನೇ ಅಲ್ಲೋಲಕಲ್ಲೋಲವನ್ನು ಮಾಡುತ್ತೇವೆ" ಎಂದು ಧೈರ್ಯವನ್ನು ಕೊಟ್ಟರು. ಕುಂಭಕರ್ಣನು "ಎಲೈ ಅಗ್ರಜನೇ! ನೀನು ಮಾಡಿದ ಕೆಲಸವು ಯೋಗ್ಯವಲ್ಲ. ನೀನು ಅನುಚಿತವಾದ ಕೆಲಸವನ್ನು ಮಾಡಿದರೂ ನಾನು ಸರಿಮಾಡುತ್ತೇನೆ. ನನಗೆ ಅಪ್ಪಣೆಯನ್ನು ಕೊಡು. ಆ ರಾಮಲಕ್ಷ್ಮಣ ರನ್ನು ಕೊಂದು ಸುಗ್ರೀವನೇ ಮುಂತಾದ ವಾನರರನ್ನು ಸಂಹರಿಸಿ ಬರುತ್ತೇನೆ"

ಎಂದೆನ್ನುವನು. ಅದನ್ನು ಕೇಳಿ ವಿಭೀಷಣನು "ಎಲೈ ಅಣ್ಣನಾದ ರಾವಣನೆ! ಈ ಕುಂಭಕರ್ಣನಾಗಲಿ ಆ ಇಂದ್ರಜಿತುವಾಗಲಿ ಕುಂಭನಿಕುಂಭರೇ ಆಗಲಿ ಇಂತಹವರು ಇನ್ನೂ ನೂರಾರು ಜನರೇ ಆಗಲಿ ಆ ರಾಮನ ಎದುರಿಗೆ ನಿಲ್ಲಲಾರರು. ಆ ಸೀತೆಯನ್ನು ಧನಕನಕಗಳಿಂದ ಸತ್ಕರಿಸಿ ರಾಮನ ಬಳಿಗೆ ಕರೆದುಕೊಂಡು ಹೋಗಿ ಒಪ್ಪಿಸು. ಹಾಗೆ ಒಪ್ಪಿಸದಿದ್ದರೆ ನೀನು ಇಂದ್ರ ಮಹೇಂದ್ರ ಬ್ರಹ್ಮರಾದಿಯಾಗಿ ಯಾರ ಮರೆಯನ್ನು ಹೊಕ್ಕರೂ ಬದುಕುವಂತಿಲ್ಲ. ಎಂದನು.

ವಿಭೀಷಣನ ಈ ಮಾತು ರಾವಣನಿಗೆ ರುಚಿಸಲಿಲ್ಲ. ಅದಕ್ಕೆ ರಾವಣನು "ಎಲೈ ವಿಭೀಷಣನೇ! ನೀನು ಬಂಧುರೂಪನಾದ ಶತ್ರುವು ಮತ್ತಾವನಾದರೂ ಈ ಮಾತನ್ನು ಆಡಿದ್ದರೆ ಒಡನೆಯೇ ಆತನನ್ನು ಕೊಂದು ಹಾಕುತ್ತಿದ್ದೆನು. ಏಳು. ಹೊರಡು" ಎಂದನು. ಒಡನೆಯೇ ಆ ವಿಭೀಷಣನು ತನ್ನ ನಾಲ್ಕುಜನ ಮಂತ್ರಿಗಳನ್ನು ಕರೆದುಕೊಂಡು ರಾಮನ ಬಳಿಗೆ ಹೋದನು. ರಾಮನೊಡನೆ ಸಖ್ಯವನ್ನು ಮಾಡಿಕೊಂಡನು ಆಗ ಆ ಸಮುದ್ರತೀರದಲ್ಲಿ ಹನುಮಂತನಿಂದ ಮರಳಿನಲ್ಲಿ ಒಂದು ಲಂಕೆಯನ್ನು ಬರೆಸಿ ಅದರಲ್ಲಿ ಆ ವಿಭೀಷಣನಿಗೆ ರಾಮನು ರಾಜ್ಯಾಭಿಷೇಕವನ್ನು ಮಾಡಿದನು.

ರಾವಣನು ಸುಗ್ರೀವನ ಬಳಿಗೆ ಶುಕನೆಂಬ ಚಾರನನ್ನು ಕಳುಹಿಸಿದ್ದನು. ಆ ಶುಕನು ಈ ಸಮಯದಲ್ಲಿ ಅಂತರಿಕ್ಷದಲ್ಲಿ ನಿಂತುಕೊಂಡು ಸುಗ್ರೀವನನ್ನು ಕುರಿತು ಇಂತೆಂದನು. "ಎಲೈ ಸುಗ್ರೀವನೆ! ರಾವಣನು ಹೇಳಿಕಳುಹಿಸಿರುವುದನ್ನು ಹೇಳುತ್ತೇನೆ. ಕೇಳು. ಈ ರಾಮನಿಂದ ನಿನಗೆ ಹಣದ ಅನುಕೂಲವೇನೂ ಇರುವುದಿಲ್ಲ. ಮತ್ತಾವ ಪ್ರಯೋಜನವೂ ಕೂಡ ಕಂಡುಬರುವುದಿಲ್ಲ. ಆ ರಾಜಪುತ್ರನ ಹೆಂಡತಿಯನ್ನು ನಾನು ಅಪಹರಿಸಿದ್ದರೆ ಅದರಿಂದ ನಿನಗೇನು ಬಾಧಕವಾಯಿತು ? ನೀನು ಕಪಿಗಳೊಡನೆ ಕಿಷ್ಕಿಂಧೆಗೆ ಹೋಗು. ಅವನೊಡನೆ ವೈರವನ್ನು ಕಟ್ಟಿಕೊಳ್ಳಬೇಡ" ಹೀಗೆಂದು ಶುಕನು ಹೇಳುತ್ತಿರಲು ವಾನರರು ಒಡನೆಯೇ ಅವನನ್ನು ಹಿಡಿದು ಕಟ್ಟಿ ರಾಮನ ಬಳಿಗೆ ತಂದರು. ಗೂಢಚಾರನಾಗಿ ಇಲ್ಲಿಗೆ ಬಂದಿದ್ದ ಶಾರ್ದೂಲನು ಇಲ್ಲಿನ ಸ್ಥಿತಿಯನ್ನು ನೋಡಿಕೊಂಡು ಹೋಗಿ ರಾವಣನಿಗೆ ವಿವರಿಸಿದನು. ಇದರಿಂದ ರಾವಣನು ದೀರ್ಘಚಿಂತೆಗೊಳಗಾದನು.

ಇಲ್ಲಿ ರಾಮನೂ ಸುಗ್ರೀವನೂ ಮಾರುತಿ ವಿಭೀಷಣರೂ ಕುಳಿತುಕೊಂಡು ಮಂತ್ರಾಲೋಚನೆ ಮಾಡಿದರು. ಜೊತೆಯಲ್ಲಿ ಲಕ್ಷ್ಮಣನೂ ಇದ್ದನು. ಇವರು ಮಂತ್ರಾಲೋಚನೆ ಮಾಡುತ್ತಿರುವಾಗ ಸಮುದ್ರವು ಅತಿಯಾಗಿ ಗರ್ಜಿಸಲು

ರಾಮನು ಧಿಕ್ಕರಿಸಿ ನಿಲ್ಲಿಸಿದನು. ಈಗಲೂ ಕೂಡ ಆ ಜಾಗದಲ್ಲಿ ಸಮುದ್ರವು ಸದ್ದುಮಾಡದೆ ಇರುವುದು. ಮಂತ್ರಾಲೋಚನೆಯು ಮುಗಿದಮೇಲೆ ರಾಮನು ಸಮುದ್ರರಾಜನ ದರ್ಶನವನ್ನು ಅಪೇಕ್ಷಿಸಿ ಆ ಸಮುದ್ರತೀರದಲ್ಲಿ ದರ್ಭೆಯನ್ನು ಹಾಸಿಕೊಂಡು ಪ್ರಾಯೋಪವೇಶವನ್ನು ಮಾಡಿದನು. ಹೀಗೆ ಎರಡು ದಿನಗಳು ಕಳೆದುವು. ಇದು ಸರಿಯಲ್ಲವೆಂದು ತಿಳಿದು ಮೂರನೆಯ ದಿನದಲ್ಲಿ ಮೇಲಕ್ಕೆದ್ದು "ಎಲೈ ಲಕ್ಷ್ಮಣನೇ! ದುಷ್ಟನಾದ ಈ ಸಮುದ್ರರಾಜನು ನನಗೆ ದರ್ಶನವನ್ನು ಕೊಡುತ್ತಿಲ್ಲ. 'ಇವನು ಮನುಷ್ಯನು. ಜೊತೆಯಲ್ಲಿರುವವರು ಕಪಿಗಳು. ಇವನೇನು ಮಾಡಿಯಾನು?' ಎಂದು ತಿಳಿದಿರುವನು. ನನ್ನ ಬಿಲ್ಲು ಬಾಣಗಳನ್ನು ಕೊಡು. ಬಾಣವನ್ನು ಬಿಟ್ಟು ಈ ಸಮುದ್ರವು ಒಣಗಿಹೋಗುವಂತೆ ಮಾಡುತ್ತೇನೆ. ಕಪಿಗಳು ಲಂಕೆಗೆ ಕಾಲು ನಡಿಗೆಯಲ್ಲಿಯೇ ಹೋಗಲಿ" ಎಂಬುದಾಗಿ ಹೇಳಿ ಬಾಣವನ್ನು ಹೂಡಿದನು. ಇದನ್ನು ನೋಡಿ ಆ ಸಮುದ್ರವು ಭಯದಿಂದ ಒಂದು ಯೋಜನದಷ್ಟು ದೂರ ಒಳಕ್ಕೆ ಹೊರಟುಹೋಯಿತು. ಒಡನೆಯೇ ಆ ಸಾಗರನು ದಿವ್ಯರೂಪವನ್ನು ಹೊಂದಿ ರತ್ನಗಳ ಉಪಾಯನವನ್ನು ತೆಗೆದುಕೊಂಡು ರಾಮನ ಬಳಿಗೆ ಬಂದು ಸ್ತುತಿಸಿದನು. ಮತ್ತು "ಎಲೈ ರಾಮನೇ! ನನಗೆ ಅಭಯವನ್ನು ಕೊಡು. ಲಂಕೆಗೆ ಹೋಗಲು ಮಾರ್ಗವನ್ನು ಕೊಡುತ್ತೇನೆ" ಎಂದನು.

ಅದಕ್ಕೆ ಶ್ರೀರಾಮನು "ಹಾಗೆಯೇ ಆಗಲಿ. ನಾನು ಹೂಡಿರುವ ಬಾಣವು ಅಮೋಘವಾದುದು. ಇದಕ್ಕೆ ಲಕ್ಷ್ಯವನ್ನು ತೋರಿಸು" ಎಂದನು. ಅದಕ್ಕೆ ಸಮುದ್ರರಾಜನು ಉತ್ತರ ದಿಕ್ಕಿನಲ್ಲಿರುವ ಶತ್ರುಗಳನ್ನು ತೋರಿಸಲು ಆ ಬಾಣವು ಅವರನ್ನು ನಾಶಪಡಿಸಿ ಮತ್ತೆ ರಾಮನ ಬಳಿಗೆ ಬಂದಿತು. ಅನಂತರ ಸಮುದ್ರ ರಾಜನು ನಳನ ಕೈಯಲ್ಲಿ ಸೇತುವೆಯನ್ನು ಮಾಡಿಸು. ಅವನು ವಿಶ್ವಕರ್ಮನ ಮಗನು. ಅವನು ನೀರಿನಲ್ಲಿ ಕಲ್ಲನ್ನು ಹಾಕಿದರೂ ಅದು ತೇಲುವಂತೆ ಅವನಿಗೆ ಶಾಪವಿದೆ. ಆ ಶಾಪವು ಈಗ ವರವಾಗಿ ಪರಿಣಮಿಸಿದೆ" ಎಂದು ಹೇಳಿ ಹೊರಟುಹೋದನು.

ಅನಂತರ ರಾಮನು ನಳನಿಗೆ ಸೇತುವೆಯನ್ನು ಕಟ್ಟಲು ಅಪ್ಪಣೆಮಾಡಿದನು. ಸೇತುವೆಯನ್ನು ಕಟ್ಟಲು ಪ್ರಾರಂಭಮಾಡುವಾಗ ಗಣಪತಿಯನ್ನೂ ನವಗ್ರಹ ಗಳನ್ನೂ ಅಲ್ಲಿ ಪ್ರತಿಷ್ಠೆಮಾಡಿ ಪೂಜಿಸಿದರು. ಮತ್ತು ಈ ಸ್ಥಳದಲ್ಲಿ ನನ್ನ ಹೆಸರಿ ನಿಂದ ಒಂದು ಈಶ್ವರಲಿಂಗವನ್ನು ಪ್ರತಿಷ್ಠಿಸಬೇಕೆಂದು ಯೋಚಿಸಿ ಮಾರುತಿ ಯನ್ನು ಕುರಿತು "ಎಲೈ ಮಾರುತಿಯೇ! ನೀನು ಕಾಶಿಗೆ ಹೋಗಿ ಒಂದು ಮುಹೂ ರ್ತದೊಳಗೆ ಶಿವನನ್ನು ಕೇಳಿ ಒಂದು ಲಿಂಗವನ್ನು ತೆಗೆದುಕೊಂಡು ಬಾ" ಎಂನದು.

ಮಾರುತಿಯು "ಹಾಗೆಯೇ ಆಗಲೆಂದು ಹೇಳಿ ಕಾಶಿಗೆ ಹೋಗಿ, ಶಿವನಿಗೆ ರಾಮನ ಮಾತನ್ನು ವಿಜ್ಞಾಪಿಸಿದನು. ಅದನ್ನು ಕೇಳಿ ಶಿವನು ರಾಮನಿಗೆ ಒಂದು ಲಿಂಗವನ್ನೂ ಹನುಮಂತನಿಗೆ ಒಂದು ಲಿಂಗವನ್ನೂ ಕೊಟ್ಟನು. ಮತ್ತು ತಾನೂ ದಕ್ಷಿಣದಿಕ್ಕಿಗೆ ಬರಬೇಕೆಂದು ನಿಶ್ಚಯಮಾಡಿಕೊಂಡಿರುವುದಾಗಿಯೂ ಹೇಳಿದನು. ಅದಕ್ಕೆ ಮಾರುತಿಯು "ಎಲೈ ಶಿವನೆ! ನೀನು ಯಾವಾಗ ಆ ನಿಶ್ಚಯವನ್ನು ಮಾಡಿಕೊಂಡೆ?" ಎನ್ನಲು ಶಿವನು ಇಂತೆಂದನು.

"ಒಂದುಸಾರಿ ನಾರದನು ನರ್ಮದೆಯಲ್ಲಿ ಸ್ನಾನಮಾಡಿ ಶಿವಪೂಜೆಯನ್ನು ಮಾಡಿಕೊಂಡು ಎದುರಿಗಿರುವ ವಿಂಧ್ಯಪರ್ವತವನ್ನು ನೋಡಿದನು. ವಿಂಧ್ಯನು ಆ ಋಷಿಗೆ ಸತ್ಕಾರಮಾಡಿದನು. ಋಷಿಯು ಶ್ರಮಪರಿಹಾರವನ್ನು ಮಾಡಿಕೊಂಡ ಮೇಲೆ ಅವನನ್ನು ಕುರಿತು ಅನೇಕ ಉಪಚಾರದ ಮಾತುಗಳನ್ನಾಡಿದನು. ಮತ್ತು ಈಗ ನಾನು ಪರ್ವತಗಳಿಗೆಲ್ಲಾ ಮಾನ್ಯನಾದೆನೆಂದೂ ಹೇಳಿದನು. ಇದನ್ನು ಕೇಳಿ ಆ ನಾರದನು ನಿಟ್ಟುಸಿರನ್ನು ಬಿಟ್ಟನು. ಇದರಿಂದ ಖೇದಗೊಂಡ 'ಪರ್ವತರಾಜನು ಅವನ ನಿಟ್ಟುಸಿರಿಗೆ ಕಾರಣವನ್ನು ಕೇಳಿದನು. ಮತ್ತು ಮೇರುಪರ್ವತವು ಭೂಮಿಯನ್ನು ಹೊತ್ತಿರುವುದೆಂದು ಹೇಳುವ ಮಾತೂ ಹಿಮಾಚಲವು ಪರ್ವತರಾಜನೆಂದು ಹೇಳುವ ಮಾತೂ ಉಪಚಾರಕ್ಕಾಗಿ ಏರ್ಪಟ್ಟಿವೆ. ಆ ಕೆಲಸವು ನನ್ನದಾಗಿರುವುದೆಂದು ಹೇಳಿದನು. ಮತ್ತು ಅವೆಲ್ಲವೂ ದೋಷಿಗಳೆಂಬುದನ್ನೂ ಸಕಾರಣವಾಗಿ ತೋರಿಸಿದನು.' ಇದನ್ನು ಕೇಳಿದ ನಾರದನು 'ಇದಕ್ಕಿಂತಲೂ ಶ್ರೇಷ್ಠವಾದ ಪರ್ವತಗಳಿವೆ. ಇದಕ್ಕೆ ಬಹುವಾದ ಜಂಭ ಬಂದಿರುವುದು. ಇದು ಒಳ್ಳೆಯದನ್ನು ಉಂಟುಮಾಡುವುದಿಲ್ಲ' ಎಂದು ಯೋಚಿಸಿ ಎಲೈ ಪರ್ವತನೆ? ನೀನು ಹೇಳುವ ಮಾತು ನಿಶ್ಚಯವಾದುದು. ಆದರೆ ಪರ್ವತಗಳಲ್ಲಿ ಮೇರುವು ಮಾತ್ರ ನಿನ್ನನ್ನು ಅವಮಾನಪಡಿಸುವನಲ್ಲ! 'ಎಂದು ನಾನು ನಿಟ್ಟುಸಿರು ಬಿಟ್ಟೆನು" ಎಂದು ಹೇಳಿ ಹೊರಟು ಹೋದನು.

ಅನಂತರ ವಿಂಧ್ಯನು ಮೇರುವಿನ ಶ್ರೇಷ್ಠತ್ವವನ್ನು ಯೋಚಿಸಿ ತಿಳಿದು ತಾನು ಆ ಮೇರುವಿಗಿಂತಲೂ ಎತ್ತರವಾಗಿ ಬೆಳೆದು ಭೂವ್ಯಾಕಾಶಗಳನ್ನು ಆವರಿಸಿ ನಿಂತನು. ಮೇರುವನ್ನು ಸುತ್ತಿ ಉದಯಾಸ್ತಕಾಲಗಳನ್ನು ತೋರಿಸುವ ಸೂರ್ಯನು ನಿಂತಲ್ಲಿಯೇ ನಿಲ್ಲಬೇಕಾಯಿತು. ಇದರಿಂದ ಒಂದು ಕಡೆಯವರಿಗೆ ಹಗಲೂ ಒಂದು ಕಡೆಯವರಿಗೆ ರಾತ್ರಿಯೂ ಯಾವಾಗಲೂ ಇರುವುದಾಯಿತು. ಯಜನ ಯಾಗಾದಿಗಳಿಲ್ಲದೆ ದೇವತೆಗಳಿಗೆ ಆಹಾರವು ಸಿಕ್ಕದಾಯಿತು. ಜನಗಳು ಪಂಚಯಜ್ಞಗಳನ್ನು ಬಿಟ್ಟವರಾದರು.

ಅನಂತರ ದೇವತೆಗಳು ಬ್ರಹ್ಮನನ್ನು ಮರೆಹೊಗಲು ಆ ಬ್ರಹ್ಮನು ಅಗಸ್ತ್ಯನನ್ನು ಶರಣು ಹೊಂದುವಂತೆ ಹೇಳಿದನು. ಅವರೆಲ್ಲರೂ ಆ ಮುನಿಯ ಬಳಿಗೆ ಬಂದು ಪ್ರಾರ್ಥಿಸಿದರು. ಅಗಸ್ತ್ಯನು ನಾನಿರುವ ಕಾಶಿಯನ್ನು ಬಿಟ್ಟುಹೋಗಲಾರದೆ ನನ್ನನ್ನು ಕೇಳಿ ನನ್ನ ಒಪ್ಪಿಗೆಯಿಂದ ದಕ್ಷಿಣದಿಕ್ಕಿಗೆ ಹೊರಟನು. ನಾನೂ ಬರುವಂತೆ ಹೇಳಿದೆನು ಅನಂತರ ಅಗಸ್ತ್ಯನು ಕಾಶಿಯಿಂದ ಹೊರಟು ವಿಂಧ್ಯದ ಬಳಿಗೆ ಹೋದನು. ವಿಂಧ್ಯನು ಗುರುವು ಬಂದುದನ್ನು ನೋಡಿ ಹೆದರಿ ಬಹು ಚಿಕ್ಕವನಾದನು. ಅಲ್ಲದೆ ನನ್ನಿಂದ ತಮಗೇನಾಗಬೇಕೆಂಬುದನ್ನು ಅಪ್ಪಣೆ ಕೊಡಿಸಬೇಕೆಂದು ಕೇಳಿಕೊಂಡನು. ಆದಕ್ಕೆ ಋಷಿಯು 'ಅಯ್ಯಾ! ನೀನು ಯೋಗ್ಯನು. ನನ್ನ ವಿಷಯವು ನಿನಗೆ ಚೆನ್ನಾಗಿ ಗೊತ್ತಿದೆ. ನಾನು ಮತ್ತೆ ಬರುವವರೆಗೂ ನೀನು ಈಗಾಗಿರುವಂತೆಯೇ ಇರು' ಎಂದನು. ಆ ಪರ್ವತನು ಹೆದರಿ ಹಾಗೆಯೇ ಇರುವನು. ಈಗಲೂ ಕೂಡ ಹನ್ನೆರಡು ವರ್ಷಗಳಿಗೊಮ್ಮೆ ಆ ಋಷಿಯು ಬಂದಾನೆಂದು ತಲೆಯೆತ್ತಿಕೊಂಡು ನೋಡಿ ಮತ್ತೆ ಕುಳ್ಳಗಾಗುವನು. ಈಗಲೂ ಕೂಡ ಇವತ್ತೋ ನಾಳೆಯೋ ಬರುವನು. ಎಂದು ಚಿಂತಿಸುತ್ತಲೇ ಇರುವನು. ಅನಂತರ ಅರುಣನು ಸೂರ್ಯನ ರಥವನ್ನು ಮುಂದಕ್ಕೆ ಬಿಟ್ಟು ಉದಯಾಸ್ತಮಯಗಳಾಗುವಂತೆ ಮಾಡಿದನು. ಜಗತ್ತೆಲ್ಲವೂ ಒಂದು ಸ್ತಿಮಿತಕ್ಕೆ ಬಂದಿತು. ಆ ಅಗಸ್ತ್ಯನು ಡಕ್ಷಿಣದಲ್ಲಿರುವ ದಂಡಕಾರಣ್ಯಕ್ಕೆ ಹೋಗಿ ನಾನು ಬರುವೆನೆಂದು ನಿರೀಕ್ಷಿಸುತ್ತಿರುವನು" ಎಂದು ಹೇಳಿದನು.

ಮಾರುತಿಯು ಶಿವನಿಂದ ಎರಡು ಲಿಂಗಗಳನ್ನು ತೆಗೆದುಕೊಂಡು ಆಕಾಶ ಮಾರ್ಗದಿಂದ ಹೊರಟು ಬೇಗನೆ ಬಂದನು. ಆಗ ತಾನು ಬಹು ಬೇಗನೆ ಇಷ್ಟು ದೂರವನ್ನು ಪ್ರಯಾಣ ಮಾಡಿದನೆಂಬ ಗರ್ವವು ಆವನಿಗೆ ಬಂದಿತು. ಇದು ರಾಮನಿಗೆ ತಿಳಿಯಿತು. ಆಗ ರಾಮನು ಸುಗ್ರೀವನೇ ಮುಂತಾದವರನ್ನು ಕುರಿತು "ನನಗೆ ಮುಹೂರ್ತವು ಮೀರುವುದು. ಆದ್ದರಿಂದ ಮರಳಿನಲ್ಲಿಯೇ ಲಿಂಗವನ್ನು ಮಾಡಿ ಈ ಸೇತುವೆಯ ಮುಂಭಾಗದಲ್ಲಿ ಸ್ಥಾಪಿಸುತ್ತೇನೆ"ಎಂದು ಹೇಳಿ ಎಲ್ಲರೊಡನೆಯೂ ಸೈಕತಲಿಂಗವನ್ನು ವಿಧಿವತ್ತಾಗಿ ಸ್ಥಾಪಿಸಿದನು. ಅನಂತರ ಕೌಸ್ತುಭ ಮಣಿಯನ್ನು ಧ್ಯಾನಮಾಡಲು ಅದು ಅಲ್ಲಿಗೆ ಬಂದಿತು. ಅದನ್ನೇ ಆ ಶಿವನ ಕೊರಳಿಗೆ ಕಟ್ಟಿ ಅದರ ಮಹಿಮೆಯಿಂದ ಬಂದವರೆಲ್ಲರಿಗೂ ಭಕ್ಷ್ಯಭೋಜ್ಯಗಳನ್ನು ಬಡಿಸಿ ಧನವನ್ನೂ ಕೊಟ್ಟನು. ಈ ಋಷಿಗಳು ಸಂತೋಷಗೊಂಡು ದಾರಿಯಲ್ಲಿ ಹೋಗುತ್ತಿರುವಾಗ ಆಂಜನೇಯನಿಗೆ ಸಿಕ್ಕಿದರು. ಅವರನ್ನು ಕುರಿತು ಆಂಜನೇಯನು "ಈ ಸನ್ಮಾನಗಳನ್ನು ಯಾರಿಂದ ಹೊಂದಿದಿರಿ?" ಎಂದೆನ್ನಲು

ಅವರು"ರಾಮನು ರಾಮಲಿಂಗೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ನಮಗೆ ಈ ಬಹು ಮಾನಗಳನ್ನು ಕೊಟ್ಟನು" ಎಂದರು ಇದರಿಂದ ಮಾರುತಿಗೆ ಕೋಪವು ಬಂದಿತು. ಆಗ ರಾಮನು ನನಗೆ ವ್ಯರ್ಥವಾಗಿ ಶ್ರಮವನ್ನು ಕೊಟ್ಟನೆಂದು ಕೋಪದಿಂದ ಎರಡು ಕಾಲಿನಿಂದಲೂ ಧುಮ್ಮಿಕ್ಕಿ ಇಳಿದನು. ಅವೆರಡು ಸ್ಥಳವೂ ಎರಡು ಹಳ್ಳ ಗಳಾದುವು. ರಾಮನ ಬಳಿಗೆ ಹೋಗಿ "ಎಲೈ ರಾಮನೆ! ನನ್ನ ಜ್ಞಾಪಕವು ನಿನಗೆ ಬರಲೇ ಇಲ್ಲವೆ? ನಾನು ಅಂತಹ ಅಗಾಧವಾದ ಶತ್ರುಗಳ ಲಂಕೆಗೆ ಹೋಗಿ ಸೀತೆಯ ಸುದ್ದಿಯನ್ನು ತಂದಿದ್ದೇನೆ. ಈಗ ನನ್ನನ್ನು ಕಾಶಿಗೆ ಕಳುಹಿಸಿ ನಾನು ಬರುವುದರೊಳಗೇ ಈ ದೇವರನ್ನು ಪ್ರತಿಷ್ಠೆಮಾಡಿ ನನ್ನನ್ನು ಪರಿಹಾಸ್ಯ ಮಾಡಿದೆಯಲ್ಲ! ನಿನ್ನ ಮನಸ್ಸಿನಲ್ಲಿ ಬೇರೆ ಲಿಂಗವನ್ನು ಪ್ರತಿಷ್ಠೆಮಾಡಬೇಕೆಂದಿ ದ್ದರೆ ನನ್ನನ್ನು ಕಳುಹಿಸಿ ಏಕೆ ಶ್ರಮಪಡಿಸಿದೆ? ಇದು ನನಗೆ ತಿಳಿದಿದ್ದರೆ ನಾನು ಕಾಶಿಗೆ ಹೋಗುತ್ತಲೇ ಇರಲಿಲ್ಲ. ಈ ಉತ್ತಮವಾದ ಲಿಂಗವನ್ನು ಕಾಶಿಗೆ ಹೋಗಿ ತಂದಿರುವೆನೆಲ್ಲ! ಇದನ್ನು ನಿನ್ನೆದುರಿಗೆ ಏನು ಮಾಡಬೇಕು? ಹೇಳು" ಎಂದು ಕೋಪದಿಂದಲೂ ಗರ್ವದಿಂದಲೂ ಕೇಳಿದನು.

ಹನುಮಂತನ ಗರ್ವ ಮತ್ತು ಕೋಪದಿಂದ ಕೂಡಿದ ಈ ಮಾತನ್ನು ಕೇಳಿ "ಎಲೈ ಕಪಿಯೆ! ನೀನು ಹೇಳಿದುದೆಲ್ಲವೂ ಸತ್ಯವಾದ ಮಾತು. ಈಗ ನಾನು ಸ್ಥಾಪಿಸಿರುವ ಈ ಲಿಂಗವನ್ನು ಕಿತ್ತೆಸೆದುಬಿಡು. ಅದೇ ಜಾಗದಲ್ಲಿ ನೀನು ತಂದಿರುವ ಲಿಂಗವನ್ನು ಪ್ರತಿಷ್ಠೆ ಮಾಡುತ್ತೇನೆ"ಎಂದನು. ಮಾರುತಿಯು ಹಾಗೆಯೇ ಆಗಲೆಂದು ಆ ಸೈಕತೇಶ್ವರನಿಗೆ ತನ್ನ ಬಾಲವನ್ನು ಸುತ್ತಿ ಅಲ್ಲಾಡಿಸುತ್ತ ಬಲವಾಗಿ ಎಳೆದನು. ಇದರಿಂದ ಆ ಕಪಿಯ ಬಾಲವೇ ಕಿತ್ತುಹೋಗಿ ತಾನು ದೂರದಲ್ಲಿ ಬಿದ್ದು ಮೂರ್ಛೆ ಗೊಂಡನು. ಇದರಿಂದ ಕಪಿಗಳು ನಕ್ಕುವೇ ಹೊರತು ಈಶ್ವರನು ಅಲ್ಲಾಡಲೇ ಇಲ್ಲ ಅನಂತರ ಆ ಮಾರುತಿಗೆ ಗರ್ವವು ಹೋಯಿತು. ರಾಮನಿಗೆ ತಪ್ಪಾಯಿತೆಂದು ನಮಸ್ಕರಿಸಿದನು. ಮತ್ತು "ಎಲೈ ರಾಮನೆ! ನಾನು ಮಾಡಿದುದು ತಪ್ಪಾಯಿತು. ಕ್ಷಮಿಸು" ಎಂದು ಕೇಳಿಕೊಂಡನು. ಆಗ ರಾಮನು ನೀನು ತಂದಿರುವ ವಿಶ್ವನಾಥ ಲಿಂಗವನ್ನು ನಾನು ಸ್ಥಾಪಿಸಿರುವ ಈ ಲಿಂಗದ ಉತ್ತರಭಾಗದಲ್ಲಿ ಸ್ಥಾಪಿಸೆಂದು ಹೇಳಿ ಸ್ಥಾಪಿಸಿಸಿದನು. ಅನಂತರ ರಾಮನು "ತಾನು ಸ್ಥಾಪಿಸಿರುವ ಲಿಂಗಕ್ಕಿಂತಲೂ ಮೊದಲೇನೇ ನೀನು ಸ್ಥಾಪಿಸಿರುವ ಲಿಂಗಕ್ಕೆ ಪೂಜೆಯು ನಡೆ ಯಲಿ" ಎಂದು ವರವನ್ನು ಕೊಟ್ಟನು. "ನೀನು ತಂದಿರುವ ಮತ್ತೊಂದು ಲಿಂಗವು ಸ್ಥಾಪಿಸದೆ ಹಾಗೆಯೇ ಇರಲಿ" ಎಂದನು. ಅದು ಈಗಲೂ ಹಾಗೆಯೇ ಇರುವುದು. ಮತ್ತು ಬಾಲವನ್ನು ಕತ್ತರಿಸಿಕೊಂಡ ಹನುಮನು ರಾಮನ ಮಾತಿನಂತೆ ತನ್ನ

ಮೂರ್ತಿಯನ್ನು ಅಲ್ಲಿ ಸ್ಥಾಪಿಸಿಕೊಂಡನು. ಅನಂತರ ರಾಮನೂ ಹನುಮನೂ ಒಂದೊಂದು ತೀರ್ಥವನ್ನು ಮಾಡಿಕೊಂಡರು. ರಾಮನು ಸೇತುಮಾಧವನೆಂಬ ತೀರ್ಥವನ್ನು ಸ್ಥಾಪಿಸಿಕೊಂಡನು. ಅನಂತರ ರಾಮನು ಮಾರುತಿಯ ಬಾಲವನ್ನು ಸೇರಿಸಿ ಅದನ್ನು ಮೊದಲಿನಂತೆ ಆಗುವ ಹಾಗೆ ಮಾಡಿದನು. ಈ ಬಾಲವನ್ನು ಕಟ್ಟಿ ಎಳೆದುದರಿಂದ ಆ ಲಿಂಗವು ಆ ಸ್ಥಳದಲ್ಲಿ ಸಣ್ಣಗಾಗಿಬಿಟ್ಟಿರುವುದು. ಇದು ಮೊದಲುಗೊಂಡು ಹನುಮನು ಗರ್ವವನ್ನು ಬಿಟ್ಟುಬಿಟ್ಟನು.

ಶಿವನು ಆ ಸೈಕತಲಿಂಗದಲ್ಲಿಯೇ ನೆಲಸಿದನು. ಅದರಿಂದ ಹೊರಹೊಮ್ಮಿ ರಾಮನನ್ನು ಕುರಿತು ಇಂತೆಂದನು. "ಎಲೈ ರಾಮನೆ! ಒಂದುಸಾರಿ ನಾನು ಕೊಳಕು ಬಟ್ಟೆಯನ್ನು ಹಾಕಿಕೊಂಡು ಬ್ರಾಹ್ಮಣರ ಮನೆಗಳಲ್ಲಿ ಭಿಕ್ಷೆ ಬೇಡಲು ಹೋದೆನು. ಋಷ್ಯಾಶ್ರಮಗಳಲ್ಲಿ ನಾನು ಭಿಕ್ಷೆ ಬೇಡುತ್ತಿದ್ದಾಗ ಅಲ್ಲಿನ ಋಷಿಪತ್ನಿಯರು ಸಾವಿರಾರು ಜನರು ನನ್ನನ್ನು ಮೋಹಿಸಿ ಬಂದರು. ಬ್ರಾಹ್ಮಣ ರೂಪದಿಂದಿರುವ ನನ್ನ ವಿಷಯವನ್ನು ತಿಳಿಯದೆ ಆ ಋಷಿಗಳು ರತ್ಯಂಗವಾದ ನನ್ನ ಲಿಂಗವು ಬಿದ್ದುಹೋಗುವಂತೆ ಶಪಿಸಿದರು. ಬ್ರಾಹ್ಮಣರ ಆ ಶಾಪದಿಂದ ಲಿಂಗವು ಬಿದ್ದುಬಿಟ್ಟಿತು. ಆಗ ಆ ಲಿಂಗವು ಭೂವ್ಯಾಕಾಶಗಳನ್ನು ಆವರಿಸಿಕೊಂಡು ಬೆಳೆಯಿತು. ಆಗ ಬ್ರಹ್ಮನು ಅದರ ತುದಿಮೊದಲನ್ನು ನೋಡಲು ಪ್ರಯತ್ನಪಟ್ಟು ಕೋಟಿ ವರ್ಷಗಳು ನೋಡಿದರೂ ಸಾಧ್ಯವಾಗಲಿಲ್ಲ. ಆಗ ಅವನು ನನ್ನ ಬಳಿಗೆ ಬಂದು 'ಶಂಭುವೆ! ಅಕಾಲದಲ್ಲಿ ಇದರಿಂದ ಈಗ ಪ್ರಳಯವು ಆಗುತ್ತಿರುವುದು' ಎಂದೆನಲು, ನಾನು ಅವನಿಗೆ ಪೂರ್ವದ ವಿಷಯವನ್ನು ಹೇಳಿ ತ್ರಿಶೂಲವನ್ನು ಕೊಡಲು ಅವನು ಅದನ್ನು ಕತ್ತರಿಸಲಾರದೆ ಹೋದನು. ಆಗ ನಾನೇ ಅದನ್ನು ಹನ್ನೆರಡು ಭಾಗಗಳಾಗಿ ಕತ್ತರಿಸಿದೆನು. ಮತ್ತು ತ್ರಿಶೂಲದಿಂದ ಅವನ್ನು ಎಸೆದುಬಿಟ್ಟೆನು ಇದರಿಂದ ಜ್ಯೋತಿರ್ಲಿಂಗಗಳು ಹನ್ನೆರಡು ಉಂಟಾದುವು. (೧) ಓಂಕಾರ, (೨) ಸೋಮನಾಥ, (೩) ತ್ರ್ಯಂಬಕ, (೪) ಮಲ್ಲಿಕಾರ್ಜುನ, (೫) ನಾಗೇಶ್ವರ, (೬) ವೈದ್ಯನಾಥ, (೭) ಕಾಶಿ ವಿಶ್ವೇಶ್ವರ, (೮) ಕೇದಾರೇಶ, (೯) ಮಹಾಕಾಲ, (೧೦) ಭೀಮೇಶ, (೧೧) ಘುಸೃಣೇಶ್ವರ, (೧೨) ಗಂಧಮಾದನೇಶ್ವರ ಎಂಬುದಾಗಿ ಅವು ಹೆಸರನ್ನು ಹೊಂದಿದುವು. ಅನಂತರ ಋಷಿಗಳಿಗೆ ಈ ವಿಷಯವು ತಿಳಿದು ನನಗೆ ಮತ್ತೆ ಲಿಂಗವನ್ನು ಉಂಟುಮಾಡಿದರು. ಈ ಗಂಧಮಾದನಲಿಂಗವು ನೀನು ಪ್ರತಿಷ್ಠಿಸಿರುವ ಲಿಂಗದ ಈಶಾನ್ಯದಲ್ಲಿರುವುದು. ಈಗ ಎಲ್ಲರಿಗೂ ಕಾಣಿಸುತ್ತಿರುವುದು. ಆದರಲ್ಲಿರುವ ಜ್ಯೋತಿಸ್ಸೆಲ್ಲವೂ ಈಗ ನೀನು ಪ್ರತಿಷ್ಠಿಸಿರುವ ಲಿಂಗಕ್ಕೆ ಬರುವುದು. ಈಗ ಈ ರಾಮೇಶ್ವರ

ಲಿಂಗವೇ ಆ ಹನ್ನೆರಡನೆಯ ಲಿಂಗವಾಗುವುದು. ಪೂಜೆ ಮುಂತಾದುವೆಲ್ಲವೂ ನೀನು ಪ್ರತಿಷ್ಠಿಸಿರುವ ಲಿಂಗಕ್ಕೇನೆ ನಡೆಯಲಿ ಅಗಸ್ತ್ಯನಿಗೆ ಕೊಟ್ಟ ಮಾತಿನಂತೆಯೂ ನಿನ್ನ ಮಾತಿನಂತೆಯೂ ಈ ಲಿಂಗದಲ್ಲಿಯೇ ಇದ್ದುಬಿಡುತ್ತೇನೆ. ಜನಗಳು ಈ ಸೇತುಬಂಧದಲ್ಲಿ ಬಂದು ಸ್ನಾನಸಂಕಲ್ಪಗಳನ್ನು ಮಾಡಿ ರಾಮೇಶ್ವರನ ದರ್ಶನವನ್ನು ಮಾಡಿ ಸೇತುವಿನ ಮರಳನ್ನು ತೆಗೆದುಕೊಂಡು ಕಾಶಿಗೆ ಹೋಗಿ ಅಲ್ಲಿ ನದಿಯಲ್ಲಿ ಹಾಕಿ ಅಲ್ಲಿಂದ ಗಂಗಾಜಲವನ್ನು ತಂದು ರಾಮೇಶ್ವರನಿಗೆ ಅಭಿಷೇಕ ಮಾಡಬೇಕು. ಅವನು ಬ್ರಹ್ಮಸಾಯುಜ್ಯವನ್ನು ಹೊಂದುವನು. ಎಂಬುದಾಗಿ ವರವನ್ನು ಕೊಟ್ಟಿದ್ದೇನೆ" ಎಂದನು. ಅಷ್ಟರಲ್ಲಿ ಆಗಸ್ತ್ಯನೂ ಅಲ್ಲಿಗೆ ಬಂದನು. ಅವನೂ ಕೂಡ ತನ್ನ ಹೆಸರಿನಿಂದ ಒಂದು ಲಿಂಗವನ್ನು ಅಲ್ಲಿ ಸ್ಥಾಪಿಸಿದನು.

ಅನಂತರ ರಾಮನ ಅಪ್ಪಣೆಯಂತೆ ನಳನು ಸೇತುವೆಯನ್ನು ಕಟ್ಟಲು ಮೊದಲುಮಾಡಿದನು. ಆವನು ಸಮುದ್ರದಲ್ಲಿ ಒಂದು ಕಲ್ಲನ್ನು ಇಟ್ಟು ಮತ್ತೊಂದನ್ನು ಅಲ್ಲಿಗಿಡುವ ವೇಳೆಗೆ ಸಮುದ್ರವು ಅದನ್ನು ಕೊಚ್ಚಿಕೊಂಡು ಹೋಗುವಂತೆ ಮಾಡುತ್ತಿದ್ದಿತು. ಇದರಿಂದ ಖಿನ್ನಗೊಂಡು ತನ್ನ ಹೆಮ್ಮೆಯನ್ನು ಬಿಟ್ಟು ರಾಮನ ಬಳಿಗೆ ಬಂದು ಈ ವಿಷಯವನ್ನು ಹೇಳಿದನು. ಆಗ ರಾಮನು "ಎಲೈ ನಳನೇ! ನೀನು ಸೇರಿಸುವ ಆ ಕಲ್ಲುಗಳ ಎರಡು ಭಾಗದಲ್ಲಿಯೂ 'ರಾಮ' ಎಂದು ಬರೆದು ಸೇರಿಸು. ಸೇರಿಕೊಳ್ಳುವುದು." ಎಂದನು. ನಳನು ಅಂತೆಯೇ ಮಾಡಿದನು. ಅನಂತರ ನಳನು ಮೊದಲನೆಯ ದಿವಸ ಹದಿನಾಲ್ಕು ಯೋಜನವನ್ನೂ ಎರಡನೆಯ ದಿವಸ ಇಪ್ಪತ್ತು ಯೋಜನವನ್ನೂ ಮೂರನೆಯ ದಿವಸ ಇಪ್ಪತ್ತೊಂದು ಯೋಜನವನ್ನೂ ನಾಲ್ಕನೆಯ ದಿವಸ ಇಪ್ಪತ್ತೆರಡು ಯೋಜನವನ್ನೂ ಐದನೆಯ ದಿವಸ ಇಪ್ಪತ್ತಮೂರು ಯೋಜನವನ್ನೂ ಕಟ್ಟಿ ಐದು ದಿವಸಗಳಲ್ಲಿ ನೂರು ಯೋಜನಗಳನ್ನು ಕಟ್ಟಿದನು. ಅನಂತರ ಕಪಿಗಳು ಆ ಸೇತುವೆಯ ಮೇಲೆ ಕ್ಷಣಕಾಲದಲ್ಲಿ ಹೊರಟುಹೋದವು. ಅಲ್ಲಿದ್ದ ಸುವೇಲಾಚಲದಲ್ಲಿ ಬೀಡನ್ನು ಬಿಟ್ಟು ಅಲ್ಲಿಂದ ಲಂಕೆಯನ್ನು ನೋಡಿದುವು.

ರಾವಣನು ಉಪ್ಪರಿಗೆಯ ಮೇಲೆ ನಿಂತುಕೊಂಡು ಈ ಕಪಿಸೈನ್ಯವನ್ನು ನೋಡುತ್ತಿದ್ದನು. ಅಷ್ಟರೊಳಗೆ ರಾಮನು ಬಿಟ್ಟುಬಿಟ್ಟಿದ್ದ ಶುಕನು ರಾವಣನ ಬಳಿಗೆ ಬಂದನು. ರಾವಣನನ್ನು ಕುರಿತು, "ಎಲೈ ದಶಾನನೇ! ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ಲಂಕೆಯಲ್ಲಿ ವಿಭೀಷಣನಿಗೆ ಪಟ್ಟವನ್ನು ಕಟ್ಟು. ರಾಮನನ್ನು ಶರಣುಹೊಂದು" ಎಂದನು. ಇದರಿಂದ ರಾವಣನು ಕೋಪಗೊಂಡು ಅವನನ್ನು ಬೈದು ಮನೆಯಿಂದ ಹೊರಗೋಡಿಸಿ ರಾಮನ ಸೈನ್ಯವನ್ನು ನೋಡುತ್ತ ನಿಂತನು.

ಈ ಶುಕನು ಪೂರ್ವದಲ್ಲಿ ಒಬ್ಬ ಉತ್ತಮನಾದ ಬ್ರಾಹ್ಮಣನು. ಬ್ರಹ್ಮ ಜ್ಞಾನಿಯು. ಈತನು ಯಾಗವನ್ನು ಮಾಡಿ ದೇವತೆಗಳನ್ನು ಸಂತೋಷಪಡಿಸು ತ್ತಿರಲು ರಾಕ್ಷಸರು ಇವನನ್ನು ದ್ವೇಷಿಸುತ್ತಿದ್ದರು. ರಾಕ್ಷಸರಲ್ಲಿ ವಜ್ರದಂಷ್ಟ್ರನೆಂಬ ಒಬ್ಬ ಶೂರನಿದ್ದನು. ಒಂದು ಸಾರಿ ಅಗಸ್ತ್ಯನು ಶುಕನ ಬಳಿಗೆ ಬಂದು ಮಾಂಸಾ ನ್ನವನ್ನು ಯಾಚಿಸಿದನು. ಸಮಯವನ್ನು ನಿರೀಕ್ಷಿಸುತ್ತಿದ್ದ ಈ ವಜ್ರದಂಷ್ಟ್ರನು ಶುಕನ ಹೆಂಡತಿಯ ರೂಪದಿಂದ ಆತನಿಗೆ ನರಮಾಂಸಾನ್ನವನ್ನು ಬಡಿಸಿದನು. ಇದರಿಂದ ಕೋಪಗೊಂಡ ಅಗಸ್ತ್ಯನು ಶುಕನಿಗೆ ರಾಕ್ಷಸನಾಗೆಂದು ಶಾಪವನ್ನು ಕೊಟ್ಟನು. ಅನಂತರ ಅವನ ಪ್ರಾರ್ಥನೆಯಂತೆ ಧ್ಯಾನಿಸಿನೋಡಿ ಇದೆಲ್ಲವೂ ರಾಕ್ಷಸನ ಕೆಲಸವೆಂದು ತಿಳಿದು, ಎಲೈ ಶುಕನೇ! ನೀನು ರಾಮನ ದರ್ಶನವನ್ನು ಮಾಡಿ ದಶಾನನಿಗೆ ಬುದ್ಧಿಯನ್ನು ಹೇಳಿದ ನಂತರ ನಿಜರೂಪವನ್ನು ಹೊಂದು ತ್ತೀಯೆ ಎಂದನು.

ಇತ್ತ ಸುವೇಲ ಪರ್ವತದಲ್ಲಿದ್ದ ರಾಮನು ಕಪಿಗಳೊಡನೆ ಆಲೋಚಿಸಿ ರಾವಣನ ಬಳಿಗೆ ದೂತನಾಗಿ ಅಂಗದನನ್ನು ಕಳುಹಿಸಿದನು. ಅಂಗದನು ಅಲ್ಲಿಗೆ ಹೋಗಿ ರಾವಣನ ಮುಂದೆ ಬಾಲವನ್ನು ಸುತ್ತಿಟ್ಟುಕೊಂಡು ಅದರ ಮೇಲೆ ಕುಳಿತು ಎಲೈ ರಾವಣನೆ! ಸೀತೆಯೇ ಲಕ್ಷ್ಮಿಯು. ರಾಮನೇ ನಾರಾಯಣನು. ಎಂದು ತಿಳಿ. ಅವನೊಡನೆ ದ್ವೇಷಮಾಡಬೇಡ. ಸೀತೆಯನ್ನೊಪ್ಪಿಸು. ಎಂದನು.

ಅದಕ್ಕೆ ದಶಾನನನು ಎಲೈ ಕಪಿಯೇ! ನನ್ನನ್ನೇಕೆ ಹೆದರಿಸುತ್ತೀಯೆ? ನಾನು ದೇವತೆಗಳೆಲ್ಲರನ್ನೂ ಜಯಿಸಿರುವೆನು. ಕೈಲಾಸಪರ್ವತವನ್ನು ಅಲ್ಲಾಡಿಸಿ ತೂಗಾ ಡಿಸಿರುವೆನು. ಅಂತಹ ನನ್ನೆದುರಿಗೆ ನೀನು ನಿನ್ನ ಕಪಿಬುದ್ಧಿಯನ್ನು ತೋರಿಸು ತ್ತಿರುವೆಯಲ್ಲ! ಕ್ಷಣಕಾಲದಲ್ಲಿ ಆ ರಾಮಲಕ್ಷ್ಮಣರನ್ನು ಕೊಂದು ಕಪಿಗಳನ್ನು ತಿಂದುಬಿಡುತ್ತೇನೆ ಎಂದನು.

ಇದನ್ನು ಕೇಳಿ ಅಂಗದನು "ಎಲೈ ರಾವಣನೇ! ನಿನ್ನ ಪೌರುಷವನ್ನು ಬಲ್ಲೆನು. ಬಲಿಯ ಪಾಶದಿಂದ ಕಟ್ಟಿಸಿಕೊಂಡುದನ್ನೂ ಕೈಲಾಸ ಪರ್ವತದಡಿ ಯಲ್ಲಿ ಸಿಕ್ಕಿ ತೊಂದರೆಪಡುತ್ತಿದ್ದುದನ್ನೂ, ಕಾರ್ತವೀರ್ಯಾರ್ಜುನನ ಮನೆಯಲ್ಲಿ ಕ್ರೀಡಾಮೃಗವಾಗಿದ್ದುದನ್ನೂ, ಶ್ವೇತದ್ವೀಪದಲ್ಲಿ ನಿನಗೆ ಹೆಂಗಸರು ಕಪಾಲಕ್ಕೆ ಹೊಡೆದುದನ್ನೂ, ವಾಲಿಯು ನಿನ್ನನ್ನು ತನ್ನ ಮಗನ ತೊಟ್ಟಿಲಿನ ಮೇಲೆ ಕಟ್ಟಿ ಆ ಮಗನ ಮೂತ್ರವು ಮೇಲುಮುಖವಾಗಿ ಬಂದಾಗ ಅದರಿಂದ ನಿನ್ನ ಮುಖವು ಒದ್ದೆಯಾಗುತ್ತಿದ್ದುದನ್ನೂ ಬಲ್ಲೆನು" ಎಂದನು. ಈ ಮಾತಿನಿಂದ ಅವಮಾನಿತ

ನಾದ ರಾವಣನು ಈ ಕಪಿಯನ್ನು ಹೊಡೆದೋಡಿಸಿರಿ ಎಂದನು. ಅದರಿಂದ ಅವನ ಬಳಿಗೆ ರಾಕ್ಷಸರು ಬರಲು ಅವರೆಲ್ಲರನ್ನೂ ಕೊಂದನು. ಮತ್ತು ರಾವಣನ ಕೈಕಾಲುಗಳನ್ನು ಬಾಲದಿಂದ ಕಟ್ಟಿ ಅವನ ಕಪಾಲಕ್ಕೆ ಅನೇಕ ಬಾರಿ ಹೊಡೆದನು. ಅನಂತರ ಎದ್ದು ಮಹಡಿಯನ್ನು ತಲೆಯಮೇಲೆ ಹೊತ್ತುಕೊಂಡು ರಾಮನ ಬಳಿಗೆ ಹೋದನು. ಅವನನ್ನು ನೋಡಿ ರಾಮನು ಇದನ್ನೇಕೆ ತಂದೆ? ಎನಲು ಇದು ಗೊತ್ತಾಗಲಿಲ್ಲವೆಂದು ಹೇಳಿ ಮತ್ತೆ ತೆಗೆದಕೊಂಡುಹೋಗಿ ಅಂತೆಯೇ ಇಟ್ಟು ಬಿಟ್ಟನು. ಅನಂತರ ಮತ್ತೆ ಬಂದು ರಾವಣನ ಬಳಿಯಲ್ಲಿ ನಡೆದ ವಿಷಯವನ್ನು ತಿಳಿಸಿದನು. ಇದನ್ನು ಕೇಳಿ ರಾಮನು ನಕ್ಕು ಅವನನ್ನು ಆಲಿಂಗಿಸಿಕೊಂಡನು.

ಅನಂತರ ಶ್ರೀರಾಮನು ಸುವೇಲಾದ್ರಿಯಲ್ಲಿರುತ್ತಾ ಧನುಸ್ಸನ್ನು ತೆಗೆದು ಕೊಂಡು ರಾವಣನನ್ನು ನೋಡಿ ಲಂಕೆಗೆ ಒಂದು ಬಾಣವನ್ನು ಬಿಟ್ಟನು. ಇದರಿಂದ ರಾವಣನ ಛತ್ರಿಗಳೂ, ಕಿರೀಟಗಳೂ ಕತ್ತರಿಸಲ್ಪಟ್ಟವು. ಈ ಮಧ್ಯದಲ್ಲಿ ಅಂಗದ ನಿಂದ "ರಾವಣನು ಸೀತೆಯನ್ನು ಒಪ್ಪಿಸುವುದಿಲ್ಲವೆಂದು ಹೇಳಿದನು ಎಂದು ಕೇಳಿದ ಸುಗ್ರೀವನು" ತಾನೂ ಲಂಕೆಗೆ ಹಾರಿಹೋದನು. ಅಲ್ಲಿ ರಾವಣನಿಗೆ ವಜ್ರಮುಷ್ಟಿಯಿಂದ ಒಂದು ಹೊಡೆತವನ್ನು ಕೊಟ್ಟು ಸಿಂಹಾಸನದಿಂದ ಕೆಳಗೆ ತಳ್ಳಿದನು. ಆಗ ಅವರಿಬ್ಬರಿಗೂ ಬಲವಾದ ಯುದ್ಧವು ನಡೆದು ರಾವಣನಿಗೆ ಬಹು ನೋವಾಗಿ ಯುದ್ಧವನ್ನು ಬಿಟ್ಟು ಲಜ್ಜೆಯಿಂದ ಮನೆಗೆ ಹೋದನು. ಆಗ ಅವನ ಕಿರೀಟಗಳನ್ನು ಈ ಸುಗ್ರೀವನು ಕಿತ್ತುಕೊಂಡು ರಾಮನ ಬಳಿಗೆ ಬಂದನು. ಈ ವಿಷಯವನ್ನು ತಿಳಿದು ರಾಮನು ಎಲೈ ಸುಗ್ರೀವನೇ! ನಿನಗೇನಾದರೂ ತೊಂದರೆಯಾಗಿದ್ದಲ್ಲಿ ನನಗೆ ಆ ಸೀತೆಯಿಂದ ಪ್ರಯೋಜನವೇನಾಗುತ್ತಿದ್ದಿತು? ಇನ್ನುಮೇಲೆ ಈ ರೀತಿಯಾದ ಸಾಹಸಕಾರ್ಯವನ್ನು ಮಾಡಬೇಡ ಎಂದನು.

ಬಳಿಕ ರಾಮನು ಕಪಿಗಳಿಗೆ ಹೇಳಿ ಲಂಕೆಯನ್ನು ನಾಲ್ಕುದಿಕ್ಕುಗಳಲ್ಲಿಯೂ ಮುತ್ತಿಗೆ ಹಾಕಿದನು. ಆಗ ರಾವಣನ ಸೋದರಮಾವಂದಿರು ತಾವು ಆಲೋಚಿಸಿ ಕೊಂಡರು. ಅವರಲ್ಲಿ ಒಬ್ಬನಾದ ಮಾಲ್ಯವಂತನು ರಾವಣನ ಬಳಿಗೆ ಬಂದನು. ರಾವಣನನ್ನು ಕುರಿತು ಎಲೈ ರಾವಣನೆ! ಈ ಸೀತೆಯು ಲಂಕೆಗೆ ಬಂದಾಗಿನಿಂದ ನಮ್ಮ ಪಟ್ಟಣದಲ್ಲಿ ದುರ್ನಿಮಿತ್ತಗಳೇ ಅಧಿಕವಾಗಿವೆ. ಆದುದರಿಂದ ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು ಎನ್ನಲು ರಾವಣನು ತಿರಸ್ಕರಿಸಿ ಪಟ್ಟಣವನ್ನು ರಕ್ಷಿಸಲು ಶೂರರಾದ ತನ್ನ ಮಕ್ಕಳನ್ನು ಎಲ್ಲಾ ಕಡೆಗೂ ಕಳುಹಿಸಿದನು. ಅನಂತರ ಆ ರಾಮ ರಾವಣರ ಸೈನ್ಯಗಳು ಯುದ್ಧಕ್ಕೋಸ್ಕರ ಎದುರು ಬದರಾದುವು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ಏಕಾದಶಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥ ತೇ ರಾಕ್ಷಸಾಸ್ಸರ್ವೇ ದ್ವಾರೇಭ್ಯಃ ಕ್ರೋಧಮೂರ್ಛಿತಾಃ ।
ನಿರ್ಗತ್ಯ ಭಿಂಡಿವಾಲೈಶ್ಚ ಖಡ್ಗೈಶ್ಶೂಲೈಃ ಪರಶ್ವಧೈಃ ॥ ೧ ॥

ಬಾಣೈಃ ಕುಂತೈಶ್ಶತಘ್ನೀಭಿಃ ಸ್ಸಂಕ್ರಮೈಶ್ಶಕ್ತಿಭಿರ್ದೃಢಂ ।
ನಿರ್ಜಘ್ನುರ್ವಾನರಾನೀಕಂ ಮಹಾಕಾಯಾ ಮಹಾಬಲಾಃ ॥ ೨ ॥

ರಾಕ್ಷಸಾಂಶ್ಚ ತಥಾ ಜಘ್ನುರ್ವಾನರಾ ಜಿತಕಾಶಿನಃ ।
ವೃಕ್ಷೈರ್ಗ್ರಾವೈಃ ಪರ್ವತೈಶ್ಚ ಮುಷ್ಟಿಭಿಃ ಕರತಾಡನೈಃ ॥ ೩ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

ಹನ್ನೊಂದನೆಯ ಸರ್ಗವು

೧–೨. ಶ್ರೀ ಶಿವನು ಹೇಳಿದನು–ದೊಡ್ಡದಾದ ದೇಹವನ್ನೂ ದೇಹಕ್ಕೆ ತಕ್ಕಂತೆ ಬಲವನ್ನೂ ಹೊಂದಿರುವ ರಾಕ್ಷಸರು ಕೋಪಗೊಂಡು ಬಾಗಿಲುಗಳಿಂದ ಹೊರಗೆ ಹೋಗಿ ಭಿಂಡಿವಾಲ, ಖಡ್ಗ, ಶೂಲ, ಪರಶ್ವಧ, ಬಾಣ, ಕುಂತ ಶತಘ್ನಿ ಸಂಕ್ರಮ, ಶಕ್ತಿ, ಮೊದಲಾದ ಆಯುಧಗಳಿಂದ ಕಪಿಗಳ ಸೈನ್ಯವನ್ನು ಬಲವಾಗಿ ಹೊಡೆದರು.

೩. ಗೆಲ್ಲಬೇಕೆಂಬಾಸೆಯುಳ್ಳ ಕಪಿಗಳು ಮರ ಕಲ್ಲು ಪರ್ವತ ಮುಷ್ಟಿ ಹಸ್ತ ಇವುಗಳಿಂದ ರಾಕ್ಷಸ ಸೈನ್ಯವನ್ನು ತಾವೂ ಹೊಡೆದರು.

ತೇ ಹಯೈಶ್ಚ ಗಜೈಶ್ಚೈವ ರಥೈಃ ಕಾಂಚನಸನ್ನಿಭೈಃ ।
ರಕ್ಷೋವ್ಯಾಘ್ರಾ ಯುಯುಧಿರೇ ನಾದಯಂತೋ ದಿಶೋ ದಶ ॥ ೪ ॥

ಏವಂ ಪರಸ್ಪರಂ ಚಕ್ರುರ್ಯುದ್ಧಂ ವಾನರರಾಕ್ಷಸಾಃ ।
ನಲೋ ಜಘಾನ ಧೂಮ್ರಾಕ್ಷಂ ವಜ್ರದಂಷ್ಟ್ರಂ ಸ ಮಾರುತಿಃ ॥ ೫ ॥

ನರಾಂತಕಂ ಸ ತಾರೇಯಸ್ಸುಷೇಣಸ್ತಂ ಮಹೋದರಂ ।
ಚತುರ್ಥಾಂಶಾವಶೇಷೇಣ ನಿಹತಂ ರಾಕ್ಷಸಂ ಬಲಂ ॥ ೬ ॥

ತದಾಂಗದಾದ್ಯಾಶ್ಚತ್ವಾರೋ ಮಹಾವಾದ್ಯಮಹೋತ್ಸವೈಃ ।
ಪ್ರಣೇಮೂ ರಾಮಮಾಗತ್ಯ ಜಯಘೋಷಪ್ರಪೂರಿತಾಃ ॥ ೭ ॥

ಸ್ವಸೈನ್ಯಂ ನಿಹತಂ ದೃಷ್ಟ್ವಾ ಮೇಘನಾದೋ ಯಯೌ ತದಾ ।
ಸರ್ಪಾಸ್ತ್ರಾದ್ವ್ಯಾಕುಲಂ ರಾಮಂ ಚಕಾರ ಬಂಧುವಾನರೈಃ ॥ ೮ ॥

---

೪. ಆ ರಾಕ್ಷಸಶ್ರೇಷ್ಠರು ಕುದುರೆಗಳನ್ನು ಹತ್ತಿಕೊಂಡೂ ಆನೆಯಮೇಲೆ ಕುಳಿತುಕೊಂಡೂ ಚಿನ್ನದಂತೆ ಹೊಳೆಯುವ ರಥಗಳಮೇಲೆ ಕುಳಿತುಕೊಂಡೂ ಎಲ್ಲೆಡೆಯಲ್ಲಿಯೂ ಕೂಗಿಯಾಡುತ್ತ ಯುದ್ಧಮಾಡಿದರು.

೫–೬. ಕಪಿಗಳೂ ರಾಕ್ಷಸರೂ ಈ ರೀತಿಯಾಗಿ ಘೋರವಾದ ಯುದ್ಧವನ್ನು ಮಾಡಲು ಉಪಕ್ರಮಿಸಿದರು. ನಳನು ದೂಮ್ರಾಕ್ಷನನ್ನೂ ಮಾರುತಿಯು ವಜ್ರದಂಷ್ಟ್ರನನ್ನೂ ಅಂಗದನು ನರಾಂತಕನನ್ನೂ ಸುಷೇಣನು ಮಹೋದರನನ್ನೂ ಎದುರಿಸಿ ಕೊಂದರು. ಈ ರೀತಿಯಾಗಿ ಕಪಿಗಳು ಮುಕ್ಕಾಲು ಪಾಲು ರಾಕ್ಷಸರನ್ನೆಲ್ಲಾ ಕೊಂದರು.

೭. ಆಮೇಲೆ ಅಂಗದ ನಳ ಮಾರುತಿ ಸುಷೇಣ ಈ ನಾಲ್ವರೂ ರಾಮನ ಬಳಿಗೆ ಮಹೋತ್ಸವದಿಂದ ಬಂದು ನಮಸ್ಕರಿಸಿ ಜಯವನ್ನು ಹೊಂದಿದ ವಿಷಯವನ್ನು ತಿಳಿಸಿದರು.

೮. ತನ್ನ ಸೈನ್ಯವೆಲ್ಲವೂ ನಷ್ಟವಾಗಲು ಅದನ್ನು ನೋಡಿ ಮೇಘನಾದನು ಯುದ್ಧಕ್ಕೆ ಹೊರಟು ರಾಮನನ್ನೂ ಲಕ್ಷ್ಮಣನನ್ನೂ ಕಪಿಗಳನ್ನೂ ಸರ್ಪಾಸ್ತ್ರದಿಂದ ಕಟ್ಟಿಹಾಕಿ ತೊಂದರೆಪಡಿಸಿದನು.

ರಾಮಸ್ಸಸ್ಮಾರ ತಾರ್ಕ್ಷ್ಯಂ ಸ ತಾರ್ಕ್ಷ್ಯಸ್ಸಾರ್ಪಂ ನ್ಯವಾರಯತ್ ।
ತತಃ ಪುನರ್ಬ್ರಹ್ಮವರಾದಂತರ್ಧಾನಂ ಗತೋಽಸುರಃ ॥ ೯ ॥

ಸರ್ವಾಸ್ತ್ರಕುಶಲೀ ವ್ಯೋಮ್ನಿ ಬ್ರಹ್ಮಾಸ್ತ್ರೇಣ ಸಮಂತತಃ ।
ವವರ್ಷ ಶರಜಾಲಾನಿ ಬ್ರಹ್ಮಾಸ್ತ್ರಂ ಮಾನಯಂಸ್ತದಾ ॥ ೧೦ ॥

ಕ್ಷಣಂ ತೂಷ್ಣೀಮುವಾಸಾಥ ರಾಮಸ್ಸಬಂಧುವಾನರೈಃ ।
ತತಃ ಸ್ವಸ್ಥೋ ರಘುಶ್ರೇಷ್ಠೋ ದದರ್ಶ ಪತಿತಂ ಬಲಂ ॥ ೧೧ ॥

ಮೂರ್ಛಾಗತಂ ಬ್ರಹ್ಮಪಾಶೈಸ್ತದಾ ಲಕ್ಷ್ಮಣಮಬ್ರವೀತ್ ।
ಚಾಪಮಾನಯ ಸೌಮಿತ್ರೇ ಬ್ರಹ್ಮಾಸ್ತ್ರೇಣಾಸುರಾನ್ ಕ್ಷಣಾತ್ ॥ ೧೨ ॥

---

೯. ಆಗ ರಾಮನು ಗರುಡನನ್ನು ಸ್ಮರಿಸಲು ಗರುಡನು ಬಂದು ಸರ್ಪಾಸ್ತ್ರದಿಂದ ಬಿಡಿಸಿದನು. ಆನಂತರ ಬ್ರಹ್ಮನ ವರಬಲದಿಂದ ಆ ಇಂದ್ರಜಿತುವು ಅಂತರ್ಧಾನನಾದನು.

೧೦-೧೧. ಎಲ್ಲಾ ಅಸ್ತ್ರಗಳಲ್ಲಿಯೂ ಪ್ರವೀಣನಾದ ಆ ಮೇಘನಾದನು ಅಂತರಿಕ್ಷದಲ್ಲಿದ್ದುಕೊಂಡು ಬ್ರಹ್ಮಾಸ್ತ್ರದ ಬಲದಿಂದ ಎಲ್ಲೆಡೆಯಲ್ಲಿಯೂ ಬಾಣಗಳನ್ನು ಬಿಡುತ್ತ ಆ ಬ್ರಹ್ಮಾಸ್ತ್ರದಿಂದ ರಾಮ, ಲಕ್ಷ್ಮಣ, ಕಪಿಗಳೆಲ್ಲವನ್ನೂ ಕಟ್ಟಿಹಾಕಿದನು. ರಾಮನು ಬ್ರಹ್ಮಾಸ್ತ್ರಕ್ಕೆ ಗೌರವವನ್ನು ಕೊಟ್ಟು ಕ್ಷಣಕಾಲ ಸುಮ್ಮನಿದ್ದನು. ಬ್ರಹ್ಮಾಸ್ತ್ರವನ್ನು ಬಿಡಿಸಿಕೊಂಡನಂತರ ನೋಡಲು ರಾಮನಿಗೆ ತನ್ನ ಸೈನ್ಯವೆಲ್ಲವೂ ಮೂರ್ಛೆಬಿದ್ದು ನಾಶವಾಗಿರುವುದು ತಿಳಿಯಿತು.

೧೨. ಆಗ ಲಕ್ಷ್ಮಣನನ್ನು ಕುರಿತು ಎಲೌ ಸೌಮಿತ್ರಿಯೆ ! ಧನುಸ್ಸನ್ನು ತೆಗೆದುಕೊಂಡು ಬಾ. ಬ್ರಹ್ಮಾಸ್ತ್ರದಿಂದ ಈ ರಾಕ್ಷಸರೆಲ್ಲರನ್ನೂ ಕ್ಷಣಕಾಲದಲ್ಲಿ ಬೂದಿಯನ್ನಾಗಿ ಮಾಡುತ್ತೇನೆ. ಎನ್ನಲು ಅದನ್ನು ಕೇಳಿ ಇಂದ್ರಜಿತುವು ಲಂಕೆಗೆ ಹೊರಟು ಹೋದನು.

ಭಸ್ಮೀಕರೋಮಿ ತಚ್ಛ್ರುತ್ವಾ ಲಂಕಾಮಿಂದ್ರಜಿತೋ ಯಯೌ ।
ವಿಲಪಂತೌ ಸ್ವಸಾನ್ನಿಧ್ಯೇ ತತ್ರ ವಾಯುಜರಾಕ್ಷಸೌ ॥ ೧೩ ॥

ವರದಾನಾದ್ಬ್ರಹ್ಮಣಸ್ತೌ ದೃಷ್ಟ್ವಾ ರಾಮಸ್ಸ ಜೀವಿತೌ ।
ತಾವುವಾಚ ರಘುಶ್ರೇಷ್ಠೋ ಯುವಾಭ್ಯಾಂ ಜಾಂಬವಾನ್ ರಣೇ ॥ ೧೪ ॥

ಗತ್ವಾಸ್ತಿ ಜೀವಿತಶ್ಚೇದ್ಧಿ ವಾಚ್ಯಂ ತರ್ಹಿ ಗಿರಾ ಮಮ ।
ಉಪಾಯಂ ಚಿಂತಯಸ್ವಾದ್ಯ ವಾನರಾಣಾಂ ಸುಜೀವನೇ ॥ ೧೫ ॥

ತದ್ರಾಮವಚನಂ ಶ್ರುತ್ವಾ ತೌ ವಿಭೀಷಣಮಾರುತೀ ।
ನಿಶೀಥೇ ತೌ ವಿಚಿನ್ವಂತೌ ಜಾಂಬವಂತಂ ಪ್ರಜಗ್ಮತುಃ ॥ ೧೬ ॥

ಉಲ್ಮೂಕಹಸ್ತೌ ತಂ ದೃಷ್ಟ್ವಾ ಪ್ರೋಚತೂ ರಾಘವೇರಿತಂ ।
ಜಾಂಬವಾನಪಿ ತಾಂ ರಾಮಗಿರಂ ಶ್ರುತ್ವಾತಿಹರ್ಷಿತಃ ॥ ೧೭ ॥

೧೩–೧೫. ಮಾರುತಿ ವಿಭೀಷಣರು ಆ ಬ್ರಹ್ಮಾಸ್ತ್ರಕ್ಕೆ ಸಿಕ್ಕದೆ ರಾಮನ ಬಳಿಗೆ ಬಂದು ಸೈನ್ಯಕ್ಕಾದ ಸ್ಥಿತಿಯನ್ನು ನೋಡಿ ದುಃಖಿಸಲು ಮೊದಲಿಟ್ಟರು. ರಾಮನೂ ಕೂಡ ಆ ಮಾರುತಿ ವಿಭೀಷಣರು ವರದಾನದಿಂದ ಜೀವಂತರಾಗಿರುವುದನ್ನು ನೋಡಿ ಅವರನ್ನು ಕುರಿತು ನೀವಿಬ್ಬರೂ ಹೋಗಿ ಜಾಂಬವಂತನು ಜೀವಿಸಿರುವನೆ? ನೋಡಿರಿ. ಅವನು ಜೀವದಿಂದಿದ್ದರೆ ಕಪಿಗಳು ಜೀವಿಸಿ ಮೇಲಕ್ಕೇಳುವುದಕ್ಕೆ ಯಾವುದಾದರೂ ಉಪಾಯವನ್ನು ಯೋಚಿಸಬೆಂಕೆಂದು ನಾನು ಹೇಳಿದೆನೆಂದು ಹೇಳಿರಿ ಎಂದನು.

೧೬. ರಾಮನ ಈ ಮಾತನ್ನು ಕೇಳಿ ವಿಭೀಷಣ ಹನುಮಂತರು ಪಂಜನ್ನು ಹಿಡಿದುಕೊಂಡು ರಾತ್ರಿಯಲ್ಲಿ ಅಲ್ಲೆಲ್ಲವೂ ಸುತ್ತುತ್ತ ಹುಡುಕುತ್ತ ಜಾಂಬವಂತನ ಬಳಿಗೆ ಹೋದರು.

೧೭. ಅವನನ್ನು ಕಂಡು ರಾಮನು ಹೇಳಿದುದನ್ನು ಹೇಳಿದರು. ಜಾಂಬವಂತನು ರಾಮನ ಈ ಮಾತನ್ನು ಕೇಳಿ ಬಹು ಸಂತೋಷಗೊಂಡನು.

ನಿಮೀಲಿತಾಕ್ಷಃ ಪ್ರೋವಾಚ ಕೌ ಯುವಾಂ ವಾಯುಜೋ ರಣೇ ।
ಚೇದಸ್ತಿ ಜೀವಿತಸ್ತರ್ಹಿ ಜೀವಯಿಷ್ಯತಿ ವಾನರಾ೯ ॥ ೧೮ ॥

ತದಾ ವಿಭೀಷಣಃ ಪ್ರಾಹ ತ್ವಯಾ ತ್ಯಕ್ತ್ವಾಂಗದಾದಿಕಾ೯ ।
ಪೃಚ್ಛತೇದ್ಯ ಕಥಂ ವಾಯುಪುತ್ರಸ್ಸ ಪರಮಾದರಾತ್ ॥ ೧೯ ॥

ತದಾ ವಿಭೀಷಣಂ ಪ್ರಾಹ ಜಾಂಬವಾ೯ ಋಕ್ಷಸತ್ತಮಃ ।
ರುದ್ರಾವತಾರಸ್ಸಂಜಜ್ಞೇ ವಾಯುಪುತ್ರಃ ಪ್ರತಾಪವಾ೯ ॥ ೨೦ ॥

ನ ಜ್ಞೇಯಃ ಕಪಿವಚ್ಚಾತ್ರ ತಸ್ಮಾತ್ತಂ ತ್ವಂ ವಿಲೋಕಯ ।
ತದಾಬ್ರವೀಜ್ಜಾಂಬವಂತಂ ನತ್ವಾ ಸ ವಾಯುನಂದನಃ ॥ ೨೧ ॥

ಯಂ ತ್ವಂ ಪೃಚ್ಛಸಿ ಸೋದ್ಯಾಹಂ ಜೀವಿತೋಽಸ್ಮ್ಯದ್ಯ ಮಾರುತಿಃ ।
ವಿಭೀಷಣೋ ದ್ವಿತೀಯೋಽಯಂ ಯಸ್ತ್ವಯಾ ಪರಿಭಾಷತೇ ॥ ೨೨ ॥

---

೧೮. ಆ ಜಾಂಬವಂತನು ಕಣ್ಣನ್ನು ಮಿಟಿಕಿಸಿನೋಡುತ್ತ ನೀವಿಬ್ಬರೂ ಯಾರು? ಎಂದು ಕೇಳಿ ರಣರಂಗದಲ್ಲಿ ವಾಯುಪುತ್ರನಾದ ಹನುಮಂತನು ಬದುಕಿದ್ದರೆ ಕಪಿಗಳೆಲ್ಲವನ್ನೂ ಬದುಕಿಸುತ್ತಾನೆ ಎಂದನು.

೧೯. ಆಗ ವಿಭೀಷಣನು ಎಲೈ ಜಾಂಬವನೆ! ಅಂಗದನೇ ಮೊದಲಾದವರನ್ನು ಬಿಟ್ಟು ವಾಯುಪುತ್ರನನ್ನು ಮಾತ್ರ ಆದರದಿಂದ ಕೇಳುತ್ತಿರುವೆಯಲ್ಲ! ಕಾರಣವೇನು? ಎಂದನು.

೨೦-೨೧. ಆಗ ಜಾಂಬುವಂತನು ವಿಭೀಷಣನನ್ನು ಕುರಿತು ಇಂತೆಂದನು ಈ ವಾಯುಪುತ್ರನು ಪ್ರತಾಪಶಾಲಿಯು. ಅವನು ರುದ್ರನ ಅವತಾರಿಯು. ಅವನು ಕಪಿಸಾಮಾನ್ಯನೆಂದು ತಿಳಿಯಕೂಡದು. ಆದುದರಿಂದ ಅವನನ್ನು ನೋಡು. ಹೀಗೆ ಹೇಳುತ್ತಿರಲು ಜಾಂಬುವಂತನನ್ನು ಕುರಿತು ಮಾರುತಿಯು ನಮುಸ್ಕರಿಸುತ್ತ ಇಂತೆಂದನು.

೨೨ ಎಲೈ ಜಾಂಬುವಂತನೆ! ನೀನು ಯಾರನ್ನು ಕೇಳುತ್ತಿಯೋ ಆ ಮಾರುತಿಯಾದ ನಾನು ಬದುಕಿದ್ದೇನೆ. ನೀನು ಯಾರೊಡನೆ ಮಾತನಾಡುತ್ತಿದ್ದೀಯೋ ಅವನೇ ಎರಡನೆಯುವನಾದ ಈ ವಿಭೀಷಣನು.

ತದಾ ಸ ಜಾಂಬವಾಂಸ್ತುಷ್ಟೋ ಮಾರುತಿಂ ವಾಕ್ಯಮಬ್ರವೀತ್ ।
ಗತ್ವಾ ಕ್ಷೀರನಿಧಿಂ ವೇಗಾದ್ದ್ರೋಣಾದ್ರಿಂ ತ್ವಂ ಸಮಾನಯ ॥ ೨೩ ॥

ತಥೇತ್ಯುಕ್ತ್ವಾ ತ್ವರನ್ ಗತ್ವಾ ಗಂಧರ್ವೈರ್ಗೋಪಿತಂ ನಗಂ ।
ಕಾಮಧೇನ್ವಾ ಸ್ವೀಯಘರ್ಮನೇತ್ರಲೇಪಾತ್ಪ್ರದರ್ಶಿತಂ ॥ ೨೪ ॥

ಉತ್ಪಾಟ್ಯ ಪುಷ್ಪವದ್ಧೃತ್ವಾ ಽಽನಯಾಮಾಸ ಕಪಿರ್ಜವಾತ್ ।
ಪರ್ವತೋದ್ಭವವಲ್ಲೀನಾಮುಪಘ್ರಾಯಾಮೃತೋಪಮಂ ॥ ೨೫ ॥

ಸುಗಂಧಂ ಜೀವಯಿಷ್ಯಂತಿ ರಾಕ್ಷಸಾಶ್ಚೇತಿ ಶಂಕಯಾ ।
ನಿಹತಾನ್ ರಾಕ್ಷಸಾನ್ ಸರ್ವಾನ್ ತದಾ ತಾರ್ಕ್ಷ್ಯವಿಭೀಷಣೌ ॥ ೨೬ ॥

---

೨೩. ಇದನ್ನು ಕೇಳಿ ಜಾಂಬವನಿಗೆ ಬಹು ಸಂತೋಷವಾಯಿತು. ಆಗ ಮಾರುತಿಯನ್ನು ಕುರಿತು ಎಲೈ ಮಾರುತಿಯೆ ! ನೀನು ಬೇಗನೆ ಕ್ಷೀರಸಮುದ್ರಕ್ಕೆ ಹೋಗು. ಅಲ್ಲಿರುವ ದ್ರೋಣಾದ್ರಿಯನ್ನು ಇಲ್ಲಿಗೆ ತೆಗೆದುಕೊಂಡು ಬಾ. ಎಂದನು.

೨೪. ಆ ಮಾರುತಿಯು ಹಾಗೇ ಆಗಲೆಂದು ಹೇಳಿ ಬೇಗನೆ ಹೋಗಿ ಗಂಧರ್ವರು ಜಾಗರೂಕತೆಯಿಂದ ಕಾಪಾಡಿಕೊಂಡಿರುವ ಆ ಪರ್ವತವು ತನ್ನ ಕಣ್ಣಿಗೆ ಕಾಣದಿರಲು ತನ್ನೆದುರಿಗಿದ್ದ ಕಾಮಧೇನುವು ತನ್ನ ಗಂಜಲವನ್ನು ಕಣ್ಣಿಗ ಸವರಿಕೊಂಡರೆ ಕಾಣುತ್ತದೆಂದು ಹೇಳಿ ಹಾಗೆಮಾಡಿಸಲು ಅದು ಕಣ್ಣಿಗೆ ಕಂಡಿತು.

೨೫-೨೬. ಆಗ ಅದನ್ನು ಕಿತ್ತು ಹೂವಿನಂತೆ ಹಿಡಿದುಕೊಂಡು ಬೇಗನೆ ತಂದನು. ಈ ಪರ್ವತದ ಅಮೃತದಂತಿರುವ ಬಳ್ಳಿರೂಪವಾದ ಔಷಧಗಳ ವಾಸನೆಯನ್ನು ಆಘ್ರಾಣಿಸಿ ರಾಕ್ಷಸರು ಬದುಕಿಕೊಂಡಾರು ? ಎಂಬ ಶಂಕೆಯಿಂದ ರಾಮನು ಗರುಡನಿಗೂ ವಿಭಿಷಣನಿಗೂ ಹೇಳಿ ಅವರ ಶವಗಳನ್ನು ಸಮುದ್ರದಲ್ಲಿ ಬಿಸಾಡಿಸಿಬಿಟ್ಟನು.

ಕ್ಷಿಪತುಸ್ಸಾಗರೇ ತೌ ತಂ ರಾಘವಸ್ಯಾಜ್ಞಯಾ ಕ್ಷಣಾತ್ ।
ತದಾನೀಂ ತಂ ಗಿರಿಂ ದೃಷ್ಟ್ವಾ ಸುಷೇಣಃ ಸ ಭಿಷಗ್ವರಃ ॥ ೨೭ ॥

ಪರ್ವತೋದ್ಭವವಲ್ಲೀಭಿರ್ಜೀವಯಾಮಾಸ ತಂ ಕಪೀನ್ ।
ತತಃ ಶಾಖಾಮೃಗಾಸ್ಸರ್ವೇ ಸಮುತ್ತಸ್ಥುರ್ವಿಜೃಂಭಿತಾಃ ॥ ೨೮ ॥

ದ್ರೋಣಾಚಲಂ ಯಥಾಸ್ಥಾನೇ ಸ್ಥಾಪಯಾಮಾಸ ಮಾರುತಿಃ ।
ಕುಬೇರಾರ್ಪಿತದಿವ್ಯಾಂಭಃ ಪ್ರಮೃಜ್ಯ ನಯನೇಷು ಚ ॥ ೨೯ ॥

ಅಂತರ್ಹಿತಾನಾಂ ರಾಮಾದ್ಯಾ ದರ್ಶನಂ ಪ್ರಾಪುರಾಹವೇ ।
ತತಸ್ಸಂಪ್ರೇಷಯಾಮಾಸ ರಾವಣಸ್ಸ್ವೀಯ ಮಂತ್ರಿಣಃ ॥ ೩೦ ॥

ಅತಿನಾದಃ ಪ್ರಹಸ್ತಶ್ಚ ಮಹಾನಾದದರೀಮುಖೌ ।
ದೇವಶತ್ರುರ್ನಿಕುಂಭಶ್ಚ ದೇವಾಂತಕನರಾಂತಕೌ ॥ ೩೧ ॥

೨೭–೨೮. ಆಗ ಪರ್ವತವು ಬಂದುದನ್ನು ನೋಡಿ ಪಂಡಿತಶ್ರೇಷ್ಠನಾದ ಸುಷೇಣನು ಆ ಪರ್ವತದ ಔಷಧಿಗಳಿಂದ ಕಪಿಗಳನ್ನು ಬದುಕಿಸಿದನು. ಆಗ ಆ ಕಪಿಗಳೆಲ್ಲವೂ ಸಡಗರದಿಂದ ಮೇಲಕ್ಕೆದ್ದುವು.

೨೯–೩೦. ಅನಂತರ ದ್ರೋಣಾಚಲವನ್ನು ತೆಗೆದುಕೊಂಡು ಹೋಗಿ ಅದರ ಸ್ಥಾನದಲ್ಲಿ ಮಾರುತಿಯು ಇಟ್ಟುಬಿಟ್ಟನು. ಅನಂತರ ಕುಬೇರನು ಬಂದು ದಿವ್ಯವಾದ ನೀರನ್ನು ರಾಮನಿಗೆ ಕೊಟ್ಟನು. ಆ ನೀರನ್ನು ಕಣ್ಣಿಗೆ ಸವರಿಕೊಳ್ಳುವುದರಿಂದ ರಾಮನೇ ಮುಂತಾದವರೆಲ್ಲರೂ ಯುದ್ಧದಲ್ಲಿ ಅದೃಶ್ಯರಾಗಿ ಯುದ್ಧ ಮಾಡುವವರೆಲ್ಲರನ್ನೂ ಕಾಣಬಲ್ಲವರಾದರು. ಅನಂತರ ರಾವಣನು ತನ್ನ ಮಂತ್ರಿಗಳನ್ನು ಯುದ್ಧಕ್ಕೆ ಕಳುಹಿಸಿದನು.

೩೧–೩೨. ಅತಿನಾದ ಪ್ರಹಸ್ತ ಮಹಾನಾದ ದರೀಮುಖ ದೇವಶತ್ರು ನಿಕುಂಭ ದೇವಾಂತಕ ನರಾಂತಕ ಸಾರಣ ಇವರೇ ಮುಂತಾದವರೆಲ್ಲರೂ ಬಂದು

ಸಾರಣಾದ್ಯಾ ಬಲೈರನ್ಯೈ ಯುಯುಧುರ್ವಾನರೈಸ್ಸಹ ।
ತಾನ್ಸರ್ವಾನಂಗದಾದ್ಯಾಸ್ತೇ ಹತ್ವಾ ತಸ್ಥುರ್ವಿಗರ್ಜಿತಾಃ ॥ ೩೨ ॥

ತದಾ ಕುಂಭನಿಕುಂಭೌ ದ್ವೌ ಕುಂಭಕರ್ಣಸುತೋತ್ತಮೌ ।
ರಾವಣಃ ಪ್ರೇಷಯಾಮಾಸ ಯುದ್ಧಾರ್ಥಂ ತೌ ಪ್ರಜಗ್ಮತುಃ ॥ ೩೩ ॥

ತದಾ ಕುಂಭೋ ಜಾಂಬವತಾ ನಿಹತಶ್ಚ ರಣಾಜಿರೇ ।
ಅಂಗದೇನ ನಿಕುಂಭಶ್ಚ ಹತಶ್ಶ್ರುತ್ವಾ ದಶಾನನಃ ॥ ೩೪ ॥

ಅತಿಕಾಯಂ ಸ್ವೀಯಪುತ್ರಂ ಪ್ರೇಷಯಾಮಾಸ ಸಂಗರಂ ।
ಅತಿಕಾಯೇನ ಸೌಮಿತ್ರಿಃ ಕೃತ್ವಾ ಸಂಗರಮುಲ್ಬಣಂ ॥ ೩೫ ॥

ಶರೇಣ ಪಾತಯಾಮಾಸ ಲಂಕಾಯಾಂ ತಚ್ಛಿರೋ ಮಹತ್ ।
ತದಾ ಯಯೌ ರಾವಣಸ್ಸಃ ಸ್ವಯಂ ಯುದ್ಧಾಯ ವೇಗತಃ ॥ ೩೬ ॥

ವಾನರರೊಡನೆ ಯುದ್ಧಮಾಡಿದರು. ಅಂಗದಾದಿಗಳು ಅವರೆಲ್ಲರನ್ನೂ ಕೊಂದು ಗರ್ಜಿಸಿದರು.

೩೩. ಅನಂತರ ರಾವಣನು ಕುಂಭಕರ್ಣನ ಮಕ್ಕಳಾದ ಕುಂಭ ನಿಕುಂಭರನ್ನೇ ಯುದ್ಧಕ್ಕೆ ಕಳುಹಿಸಿದನು. ಅವರಿಬ್ಬರೂ ಗರ್ಜಿಸುತ್ತಾ ಬಂದರು.

೩೪. ಅವರು ಬಂದು ಯುದ್ಧಮಾಡುತ್ತಿರಲು ಜಾಂಬುವಂತನು ಕುಂಭನನ್ನೂ ಅಂಗದನು ನಿಕುಂಭನನ್ನೂ ಕೊಂದರು ಇದು ರಾವಣನಿಗೆ ತಿಳಿಯಿತು.

೩೫. ಅನಂತರ ರಾವಣನು ತನ್ನ ಮಗನಾದ ಅತಿಕಾಯನನ್ನು ಯುದ್ಧಕ್ಕೆ ಕಳುಹಿಸಿದನು. ಈ ಅತಿಕಾಯನೊಡನೆ ಲಕ್ಷ್ಮಣನು ಘೋರವಾದ ಯುದ್ಧವನ್ನು ಮಾಡಿದನು.

೩೬. ಸೌಮಿತ್ರಿಯು ಬಾಣವನ್ನು ಬಿಟ್ಟು ಆ ಅತಿಕಾಯನ ತಲೆಯನ್ನು ಹಾರಿಸಿ ಆ ತಲೆಯನ್ನು ಲಂಕೆಯಲ್ಲಿ ಬೀಳುವಂತೆ ಮಾಡಿದನು. ಅನಂತರ ರಾವಣನು ತಾನೇ ಯುದ್ಧಕ್ಕೆ ಬೇಗನೆ ಹೊರಟನು.

ಸುಹೃನ್ಮಿತ್ರಜನೈರ್ಯುಕ್ತೋ ವೇಷ್ಟಿತಃ ಪುರವಾಸಿಭಿಃ ।
ರಣೇ ವಿಭೀಷಣಂ ದೃಷ್ಟ್ವಾ ಕೋಪಾಚ್ಛಕ್ತಿಂ ಮುಮೋಚ ಸಃ ॥ ೩೭ ॥

ಪೃಷ್ಠೇ ವಿಭೀಷಣಂ ಕೃತ್ವಾ ಯಯಾವಗ್ರೇ ಸ ಲಕ್ಷ್ಮಣಃ ।
ಹೃದಿ ಸಂತಾಡಿತಶ್ಶಕ್ತ್ಯಾ ಪಪಾತ ಭುವಿ ಲಕ್ಷ್ಮಣಃ ॥ ೩೮ ॥

ಲಕ್ಷ್ಮಣಂ ನಗರೀಂ ನೇತುಂ ತಂ ಯಯೌ ಸ ದಶಾನನಃ ।
ನ ಚಚಾಲ ಭುಜಸ್ತಸ್ಯ ಸೌಮಿತ್ರೇಶ್ಶೇಷರೂಪಿಣಃ ॥ ೩೯ ॥

ತಂ ನೇತುಕಾಮಂ ಹನುಮಾನ್ ಹೃದಿ ಮುಷ್ಟ್ಯಾ ವ್ಯತಾಡಯತ್ ।
ತೇನ ಮುಷ್ಟಿಪ್ರಹಾರೇಣ ಪಪಾತ ರುಧಿರಂ ವಮನ್ ॥ ೪೦ ॥

---

೩೭. ಅವನ ಜೊತೆಯಲ್ಲಿ ಮಿತ್ರರೂ ಇಷ್ಟರೂ ಪಟ್ಟಣಿಗರೂ ಹೊರಟರು. ರಾವಣನು ಯುದ್ಧಮಾಡುತ್ತಿರಲು ಯುದ್ಧರಂಗದಲ್ಲಿ ವಿಭೀಷಣನನ್ನು ಕಂಡು ಬಂದನು. ಒಡನೆಯೇ ಅವನಮೇಲೆ ರಾವಣನು ಕ್ರೂರವಾದ ಶಕ್ತ್ಯಾಯುಧವನ್ನು ಬಿಟ್ಟನು.

೩೮. ಇದನ್ನು ನೋಡಿ ಲಕ್ಷ್ಮಣನು ವಿಭೀಷಣನನ್ನು ಹಿಂದೆಹಾಕಿಕೊಂಡು ತಾನು ಮುಂದೆಬಂದು ನಿಂತನು. ಆ ಶಕ್ತಿಯು ಬಂದು ಲಕ್ಷ್ಮಣನ ಎದೆಯಲ್ಲಿಯೇ ಬಡೆಯಿತು. ಇದರಿಂದ ಲಕ್ಷ್ಮಣನು ಕೆಳಗೆ ಬಿದ್ದನು.

೩೯. ಹೀಗೆ ಬಿದ್ದ ಲಕ್ಷ್ಮಣನನ್ನು ಲಂಕೆಗೆ ತೆಗೆದುಕೊಂಡು ಹೋಗಲು ರಾವಣನು ಅವನ ಬಳಿಗೆ ಬಂದನು. ಶೇಷನ ಅವತಾರಿಯಾದ ಲಕ್ಷ್ಮಣನ ಬಂದು ಭುಜವನ್ನೂ ಅಲ್ಲಾಡಿಸಲು ರಾವಣನ ಕೈಯಲ್ಲಾಗಲಿಲ್ಲ.

೪೦. ಲಕ್ಷ್ಮಣನನ್ನು ಕೊಂಡು ಹೋಗಲು ಹವಣಿಸುತ್ತಿರುವ ರಾವಣನ ಎದೆಯಮೇಲೆ ಮಾರುತಿಯು ಮುಷ್ಟಿಯಿಂದ ಹೊಡೆದನು. ಆಗ ಏಟಿನಿಂದ ರಾವಣನು ರಕ್ತವನ್ನು ಕಾರುತ್ತ ಬಿದ್ದನು.

ಆನಯಾಮಾಸ ಸೌಮಿತ್ರಿಂ ಮಾರುತಿಃ ಕಪಿವಾಹಿನೀಂ ।
ರಥಾರೂಢೋ ರಾವಣೋಽಪಿ ವಿವ್ಯಾಧ ಮಾರುತಿಂ ಶರೈಃ ॥ ೪೧ ॥

ತತಃ ಕ್ರುದ್ಧೇನ ರಾಮೇಣ ಬಾಣೇನ ಹೃದಿ ತಾಡಿತಃ ।
ಸಾಶ್ವಧ್ವಜಂ ರಥಂ ಸೂತಂ ರಾಘವೋ ಧನು ರೋಜಸಾ ॥ ೪೨ ॥

ಛತ್ರಂ ಪತಾಕಾಂ ತರಸಾ ಚಿಚ್ಛೇದ ಶಿತಸಾಯಕೈಃ ।
ಅರ್ಧಚಂದ್ರೇಣ ಚಿಚ್ಛೇದ ತತ್ಕಿರೀಟಂ ರವಿಪ್ರಭಂ ॥ ೪೩ ॥

ತತಸ್ತಂ ವ್ಯಾಕುಲಂ ದೃಷ್ಟ್ವಾ ರಾಮೋ ರಾವಣಮಬ್ರವೀತ್ ।
ಗಚ್ಛಾದ್ಯ ಲಂಕಾಮಾಶ್ವಾಸ್ಯ ಶ್ವಸ್ತ್ವಂ ಪಶ್ಯಸಿ ಮೇ ಬಲಂ ॥ ೪೪ ॥

---

೪೧. ಮಾರುತಿಯು ಲಕ್ಷ್ಮಣನನ್ನು ತನ್ನ ಶಿಬಿರಕ್ಕೆ ಕರೆದುಕೊಂಡು ಹೋದನು. ರಾವಣನು ಮೇಲಕ್ಕೆದ್ದು ಆ ಕಪಿವಾಹಿನಿಯನ್ನೂ ಮಾರುತಿಯನ್ನೂ ಬಾಣಗಳಿಂದ ಹೊಡೆದನು.

೪೨–೪೩. ಇದನ್ನು ನೋಡಿ ರಾಮನು ಕೋಪಗೊಂಡು ರಥವನ್ನು ಹತ್ತಿ ಯುದ್ಧಕ್ಕೆ ಬಂದು ಆ ರಾವಣನೊಡನೆ ಯುದ್ಧಮಾಡುತ್ತ ಬಾಣದಿಂದ ಎದೆಗೆ ಹೊಡೆದನು. ಮತ್ತು ರಾವಣನ ಕುದುರೆ ರಥ, ಧ್ವಜ, ಸೂತ ಧನಸ್ಸು ಇವೆಲ್ಲವನ್ನೂ ಕತ್ತರಿಸಿದನು. ಛತ್ರಿ ಪತಾಕೆಗಳನ್ನು ಮುರಿದು ಬಿಟ್ಟನು. ಮತ್ತು ಅರ್ಧಚಂದ್ರಾಕಾರವಾದ ಬಾಣವನ್ನು ಬಿಟ್ಟು ಆ ರಾವಣನ ಕಿರೀಟವನ್ನೂ ಕತ್ತರಿಸಿದನು.

೪೪. ಇದರಿಂದ ರಾವಣನು ದುಃಖಿತನಾಗಲು ಅವನನ್ನು ನೋಡಿ ರಾಮನು ಇಂತೆಂದನು. ಎಲೈ ರಾವಣನೆ! ಈಗ ಲಂಕೆಗೆ ಹೋಗು. ಸುದಾರಿಕೊ. ನಾಳೆ ನನ್ನ ಬಲವನ್ನು ತೋರಿಸುತ್ತೇನೆ. ನೋಡುತ್ತೀಯಂತೆ.

ತತೋ ಲಜ್ಜಾನತಶಿರಾ ಯಯೌ ಲಂಕಾಂ ದಶಾನನಃ ।
ರಾಮೋಽಪಿ ಲಕ್ಷ್ಮಣಂ ದೃಷ್ಟ್ವಾ ಮೂರ್ಛಿತಂ ಪ್ರಾಹ ಮಾರುತಿಂ ॥ ೪೫ ॥

ದ್ರೋಣಾಚಲಂ ಸಮಾನೀಯ ಜೀವಯೈನಂ ತಥಾ ಕಪೀನ್ ।
ತಥೇತಿ ಸ ಯಯೌ ವೇಗಾತ್ ತಜ್ಜ್ಞಾತ್ವಾ ಸ ದಶಾನನಃ ॥ ೪೬ ॥

ಪ್ರಾರ್ಥಯಿತ್ವಾ ಕಾಲನೇಮಿಂ ತದ್ವಿಘ್ನಾರ್ಥಮಚೋದಯತ್ ।
ಸ ಗತ್ವಾ ಹಿಮವತ್ಪಾರ್ಶ್ವಂ ತಪೋವನಮಕಲ್ಪಯತ್ ॥ ೪೭ ॥

ತತ್ರ ಶಿಷ್ಯೈಃಪರಿವೃತೋ ಮುನಿವೇಷಧರಃ ಸ್ಥಿತಃ ।
ಮಾರುತಿಶ್ಚಾಶ್ರಮಂ ದೃಷ್ಟ್ವಾ ಜಲಂ ಪಾತುಂ ವಿವೇಶ ತಂ ॥ ೪೮ ॥

---

೪೫. ಇದನ್ನು ಕೇಳಿ ದಶಾನನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಲಂಕೆಗೆ ಹೊರಟು ಹೋದನು. ರಾಮನು ಶಿಬಿರಕ್ಕೆ ಬಂದು ಲಕ್ಷ್ಮಣನು ಮೂರ್ಛಿತನಾಗಿರುವುದನ್ನು ನೋಡಿ ಮಾರುತಿಗೆ ಇಂತೆಂದನು.

೪೬. ಎಲೈ ಮಾರುತಿಯೆ ! ದ್ರೋಣಾಚಲವನ್ನು ತೆಗೆದುಕೊಂಡು ಬಂದು ಈ ಲಕ್ಷ್ಮಣನನ್ನೂ ಕಪಿಗಳನ್ನೂ ಬದುಕಿಸು. ಇದನ್ನು ಕೇಳಿ ಹಾಗೆಯೇ ಆಗಲೆಂದು ಮಾರುತಿಯು ಹೊರಟನು. ಇದು ದಶಾನನನಿಗೆ ತಿಳಿಯಿತು.

೪೭. ಆಗ ಕಾಲನೇಮಿಯನ್ನು ಪ್ರಾರ್ಥಿಸಿ ಆ ಮಾರುತಿಗೆ ವಿಘ್ನವನ್ನು ಮಾಡುವಂತೆ ರಾವಣನು ಕಳುಹಿಸಿದನು. ಆ ಕಾಲನೇಮಿಯು ಹಿಮವತ್ಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಋಷಿಯ ವೇಷವನ್ನು ಹಾಕಿಕೊಂಡು ಒಂದು ತಪೋವನವನ್ನು ಮಾಡಿಕೊಂಡನು.

೪೮. ತಪೋವನದಲ್ಲಿ ಅವನು ತನಗೆ ಶಿಷ್ಯರೂ ಪ್ರಶಿಷ್ಯರೂ ಇರುವಂತೆ ಮಾಡಿಕೊಂಡನು. ಆ ಆಶ್ರಮದಲ್ಲಿ ಆಶ್ರಮಧರ್ಮಗಳೆಲ್ಲವೂ ಪೂರ್ಣವಾಗಿದ್ದುವು. ಮಾರುತಿಯು ಮಾರ್ಗದಲ್ಲಿ ಹೋಗುತ್ತ ಈ ಆಶ್ರಮವನ್ನು ನೋಡಿ ನೀರನ್ನು ಕುಡಿಯಲು ಅಲ್ಲಿಗೆ ಹೋದನು.

ಮುನಿನಾ ಮಾನಿತಶ್ಚಾಪಿ ಜಲಕುಂಭಃ ಪ್ರದರ್ಶಿತಃ ।
ಮಾರುತಿಃ ಪ್ರಾಹ ತೃಪ್ತಿರ್ಮೇ ನೈವಾನೇನ ಭವಿಷ್ಯತಿ ॥ ೪೯ ॥

ತಂ ಪುನಃ ಪ್ರಾಹ ಸ ಮುನಿಸ್ತಟಾಕಂ ನಿಕಟಸ್ಥಿತಂ ।
ಗಚ್ಛಾಕ್ಷಿಣೀ ಪಿಧಾಯ ತ್ವಂ ಜಲಂ ಪಿಬ ಯಥಾಸುಖಂ ॥ ೫೦ ॥

ಆಗಚ್ಛೇಸ್ತ್ವ ಪುನಶ್ಚಾತ್ರ ಸುಖಂ ತಿಷ್ಠ ಮಮಾಂತಿಕಂ ।
ಜಾನಾಮಿ ಜ್ಞಾನದೃಷ್ಟ್ಯಾಹಂ ಲಕ್ಷ್ಮಣಶ್ಚೋತ್ಥಿತಸ್ತ್ವಿತಿ ॥ ೫೧ ॥

ಗೃಹಾಣ ಮಂತ್ರಾನ್ ಮತ್ತಸ್ತ್ವಂ ಯೇನ ಪಶ್ಯಸಿ ತಂ ಗಿರಿಂ ।
ಗೋಪಿತಂ ತ್ವದ್ಯಗಂಧರ್ವೈರ್ಯಂ ತಂ ತ್ವಂ ನೇತುಮಿಚ್ಛಸಿ ॥ ೫೨ ॥

---

೪೯. ಅಲ್ಲಿ ಆ ಋಷಿಯು ಮಾರುತಿಯನ್ನು ಗೌರವಿಸಿದನು. ಆ ಮಾರುತಿಯು ನೀರನ್ನು ಕೇಳಲು ಋಷಿಯು ಜಲಕುಂಭವನ್ನು ತೋರಿಸಿದನು. ಅದಕ್ಕೆ ಮಾರುತಿಯು ಇದರಿಂದ ನನಗೆ ತೃಪ್ತಿಯಾಗುವುದಿಲ್ಲ. ಎಂದು ಹೇಳಿದನು.

೫೦. ಅನಂತರ ಋಷಿಯು ಹತ್ತಿರದಲ್ಲಿದ್ದ ಒಂದು ಕೆರೆಯನ್ನು ತೋರಿಸಿದನು. ಅಲ್ಲಿಗೆ ಹೋಗಿ ಕಣ್ಣುಗಳನ್ನು ಮುಚ್ಚಿಕೊಂಡು ನೀರನ್ನು ಯಥೇಚ್ಛವಾಗಿ ಕುಡಿಯುವಂತೆಯೂ ಹೇಳಿದನು.

೫೧. ನೀರನ್ನು ಕುಡಿದು ಬಂದು ಅನಂತರ ತನ್ನ ಹತ್ತಿರ ಕುಳಿತುಕೊಳ್ಳುವಂತೆ ಹೇಳಿದನು. ಮತ್ತು ತಾನು ಜ್ಞಾನದೃಷ್ಟಿಯಿಂದ ಲಕ್ಷ್ಮಣನು ಆಗಲೇ ಎದ್ದಿರುವಂತೆ ತಿಳಿದಿರುವಂತೆಯೂ ಹೇಳಿದನು.

೫೨. ಎಲೈ ಹನುಮಂತನೆ! ನನ್ನಿಂದ ಈ ಮಂತ್ರಗಳನ್ನು ತೆಗೆದುಕೊ. ಇದರಿಂದ ಆ ಬೆಟ್ಟವನ್ನು ಸುಖವಾಗಿ ನೋಡಬಹುದು. ನೀನು ತೆಗೆದುಕೊಳ್ಳಲು ಅಪೇಕ್ಷಿಸಿರುವ ಆ ಪರ್ವತವನ್ನು ಗಂಧರ್ವರು ಮುಚ್ಚಿರಿಸಿಕೊಂಡಿದ್ದಾರೆ. ಆದುದರಿಂದ ಈ ಮಂತ್ರವು ಆವಶ್ಯಕವೆಂದನು.

ಪ್ಲವಂಗಾನಾಂ ಜೀವನಾರ್ಥಂ ಲಂಕಾಯಾಂ ವೇಗತಃ ಕಪೇ ।
ಮತ್ತಸ್ತ್ವಂ ಲಬ್ಧವಿದ್ಯಸ್ಸನ್ ದದಸ್ವ ಗುರುದಕ್ಷಿಣಾಃ ॥ ೫೩ ॥

ತಥೇತಿ ಮಾರುತಿರ್ಗತ್ವಾ ಕಾಸಾರಮಪಿಬಜ್ಜಲಂ ।
ಪಿಧಾಯ ನೇತ್ರೇ ತಾವತ್ತಮುಗ್ರಸನ್ಮಕರೀ ತದಾ ॥ ೫೪ ॥

ಸೋಽಪಿ ತಾಂ ದಾರಯಾಮಾಸ ಧೃತಾಸ್ಯೇ ಸಾ ಮಮಾರ ಹ ।
ತತೋಽಂತರಿಕ್ಷೇ ಸಾ ಪ್ರಾಹ ದಿವ್ಯರೂಪಾ ತು ಮಾರುತಿಂ ॥ ೫೫ ॥

ಪುರಾಹಂ ಮುನಿನಾ ಸ್ಪೃಶ್ಯಾ ಪ್ರಾರ್ಥಿತಾ ನ ರತಿರ್ಮಯಾ ।
ದತ್ತಾ ಶಪ್ತೋಽಸ್ಮಿ ತ್ವತ್ತೋ ಮೇ ನಿಷ್ಕೃತಿಸ್ತೇನ ಕೀರ್ತಿತಾ ॥ ೫೬ ॥

---

೫೩. ಇದರಿಂದ ಲಂಕೆಯಲ್ಲಿ ಸತ್ತುಬಿದ್ದಿರುವ ಕಪಿಗಳು ಬೇಗನೆ ಜೀವವನ್ನು ಹೊಂದಿ ಏಳುತ್ತವೆ. ನನ್ನಿಂದ ನೀನು ವಿದ್ಯೆಯನ್ನು ಹೊಂದಿದ ಮೇಲೆ ನನಗೆ ಗುರುದಕ್ಷಿಣೆಯನ್ನು ಕೊಡಬೇಕು. ಎಂದನು.

೫೪. ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಕೆರೆಗೆಹೋಗಿ ನೀರನ್ನು ಕುಡಿದನು. ಕಣ್ಣುಗಳನ್ನು ಮುಚ್ಚಿಕೊಂಡು ನೀರನ್ನು ಕುಡಿಯುತ್ತಿರಲು ಒಂದು ಮೊಸಳೆಯು ಬಂದು ಅವನ ಕಾಲನ್ನು ಹಿಡಿದುಕೊಂಡಿತು.

೫೫. ಒಡನೆಯೇ ಹನುಮಂತನು ಆ ಮೊಸಳೆಯನ್ನು ಹಿಡಿದುಕೊಂಡು ದವಡೆಗಳನ್ನು ಸೀಳಲು ಅದು ಸತ್ತುಹೋಯಿತು. ಆಗ ಮೊಸಳೆಯು ದಿವ್ಯರೂಪವನ್ನು ಹೊಂದಿ ಅಂತರಿಕ್ಷದಲ್ಲಿದ್ದುಕೊಂಡು ಇಂತೆಂದಿತು.

೫೬. ಪೂರ್ವದಲ್ಲಿ ಒಬ್ಬ ಮುನಿಯು ನನ್ನನ್ನು ರತಿಗೆ ಪ್ರಾರ್ಥಿಸಿದನು. ಆಗ ರಜಸ್ವಲೆಯಾಗಿದ್ದುದರಿಂದ ನಾನು ಆತನಿಗೆ ರತಿಯನ್ನು ಕೊಡಲಿಲ್ಲ. ಆಗ ಅವನು ನನಗೆ ಶಾಪವನ್ನು ಕೊಟ್ಟನು. ಅವನು ನಿನ್ನಿಂದ ಶಾಪವಿಮೋಚನೆಯನ್ನು ಹೇಳಿದ್ದನು.

ಧಾನ್ಯಮಾಲೀತಿ ವಿಖ್ಯಾತಾಪ್ಸರಾಃ ಪೂರ್ವಭವಾಂತರೇ ।
ಆಶ್ರಮೋಽಯಂ ತ್ವಯಾ ದೃಷ್ಟಃ ಕಾಲನೇಮಿರ್ಮಹಾಸುರಃ ॥ ೫೭ ॥

ರಾವಣಪ್ರೇಷಿತೋ ಮಾರ್ಗೇ ಸ್ಥಿತಸ್ತಂ ಜಹಿ ವೇಗತಃ ।
ತಥೇತಿ ಮಾರುತಿರ್ಗತ್ವಾ ಮುನಿಂ ಪ್ರಾಹ ತ್ವರಾನ್ವಿತಃ ॥ ೫೮ ॥

ಮುಷ್ಟಿಂ ಬಧ್ವಾ ದೃಢಾಂ ಘೋರಾಂ ಗೃಹಾಣ ಗುರುದಕ್ಷಿಣಾಃ ।
ಇತ್ಯುಕ್ತ್ವಾ ತಾಡಯಾಮಾಸ ಹೃದಿ ತಂ ಮುಷ್ಟಿನಾ ತದಾ ॥ ೫೯ ॥

ಪಪಾತ ಭುವಿ ರಕ್ತಂ ಸ ವಮನ್ ಪ್ರಾಣಾನ್ ಜಹೌ ಕ್ಷಣಾತ್ ।
ತತಃ ಕ್ಷೀರನಿಧಿಂ ಗತ್ವಾ ಜಿತ್ವಾ ಗಂಧರ್ವಸತ್ತಮಾನ್ ॥ ೬೦ ॥

---

೫೭. ನಾನು ಹಿಂದಿನ ಜನ್ಮದಲ್ಲಿ ಒಬ್ಬ ಅಪ್ಸರಸ್ತ್ರೀಯು. ನನ್ನ ಹೆಸರನ್ನು ಧಾನ್ಯಮಾಲಿನಿ ಎಂದೆನ್ನುತ್ತಿದ್ದರು. ಈಗ ನೀನು ಇಲ್ಲಿ ಈ ಆಶ್ರಮವನ್ನು ನೋಡಿದೆಯಷ್ಟೆ!

೫೮. ಇದು ಕಾಲನೇಮಿಯ ಆಶ್ರಮವು. ಅವನೇ ಕಾಲನೇಮಿಯು. ಅವನು ದುಷ್ಟರಾಕ್ಷಸನು. ರಾವಣನು ನಿನ್ನನ್ನು ಮೋಸಪಡಿಸುವುದಕ್ಕೆ ನೀನು ಹೋಗುವ ಮಾರ್ಗದಮಧ್ಯಕ್ಕೆ ಕಳುಹಿಸಿದ್ದಾನೆ. ಅವನ ಮೋಸಕ್ಕೆ ಸಿಕ್ಕಬೇಡ. ಅವನನ್ನು ಕೊಂದುಹಾಕು ಎಂದು ಹೇಳಿದಳು. ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಮುನಿಯು ಬಳಿಗೆ ಹೋಗಿ ತ್ವರೆಯಿಂದ ಇಂತೆಂದನು.

೫೯-೬೦. ಎಲೈ ಮುನಿಯೆ! ಇದೇ ನಾನು ಕೊಡುವ ಗುರುದಕ್ಷಿಣೆಯು. ತೆಗೆದುಕೊ! ಎಂದು ವಜ್ರಮುಷ್ಟಿಯನ್ನು ಹಿಡಿದು ಬಲವಾದ ಒಂದು ಗುದ್ದನ್ನು ಕೊಟ್ಟನು. ಹಾಗೆಂದು ಹೇಳಿ ಎದೆಯಮೇಲೆ ಹೊಡೆಯಲು ಅವನು ರಕ್ತವನ್ನು ಕಾರುತ್ತಾ ಆ ಕ್ಷಣದಲ್ಲಿಯೇ ಪ್ರಾಣವನ್ನು ಬಿಟ್ಟನು. ಅನಂತರ ಅಲ್ಲಿಂದ ಹೊರಟು ಕ್ಷೀರಸಮುದ್ರಕ್ಕೆ ಹೋಗಿ ದ್ರೋಣಪರ್ವತವನ್ನು ತರಲು ಪ್ರಯತ್ನಪಡಲು ಗಂಧರ್ವರು ಯುದ್ಧಕ್ಕೆ ಬಂದರು. ಆಗ ಅವರೆಲ್ಲರನ್ನೂ ಜಯಿಸಿದನು.

ದ್ರೋಣಾಚಲಂ ಗೃಹೀತ್ವಾ ಸ ಯಾವದ್ಗಚ್ಛತಿ ಮಾರುತಿಃ ।
ವಿಹಾಯಸಾತಿವೇಗೇನ ಲಂಕಾಂ ತಾವಚ್ಚ ವೈ ಪಥಿ ॥ ೬೧ ॥

ಭರತೇನ ಶರಂ ಮುಕ್ತ್ವಾ ಪರ್ವತೋ ಭುವಿ ಪಾತಿತಃ ।
ಭರತಂ ಮಾರುತಿರ್ದೃಷ್ಟ್ವಾ ರಾಮೋಽಯಮಿತಿ ವಿಹ್ವಲಃ ॥ ೬೨ ॥

ಉವಾಚ ಮಧುರಂ ವಾಕ್ಯಂ ಕಥಮತ್ರ ಸಮಾಗತಃ ।
ಜಿತಃ ಕಿಂ ರಾವಣೇನ ತ್ವಂ ರಣಂ ತ್ಯಕ್ತ್ವಾ ಪಲಾಯಿತಃ ॥ ೬೩ ॥

ಏವಮುಕ್ತೋಽಪಿ ಭರತಃ ಪುನಸ್ತಂ ಮಾರುತಿಂ ಶರಂ ।
ಮತ್ವಾಯಂ ರಾಕ್ಷಸಶ್ಚೇತಿ ಸಂದಧೇ ನಿಶಿ ಸಾದರಾತ್ ॥ ೬೪ ॥

ಬಾಣಹಸ್ತಂ ತಮಾಲೋಕ್ಯ ಭುಭುಕ್ಕಾರಂ ವಿಧಾಯ ಸಃ ।
ನೈವಾಯಂ ರಾಘವಶ್ಚೇತಿ ಮತ್ವಾ ಧ್ಯಾತ್ವಾ ಕ್ಷಣಂ ಹೃದಿ ॥ ೬೫ ॥

೬೧–೬೨. ಅನಂತರ ದ್ರೋಣಾಚಲವನ್ನು ತೆಗೆದುಕೊಂಡು ಅಲ್ಲಿಂದ ಆಕಾಶಮಾರ್ಗವಾಗಿ ಲಂಕೆಗೆ ಬರುತ್ತಿರಲು ಭರತನು ಇದನ್ನು ನೋಡಿ ಬಾಣವನ್ನು ಬಿಟ್ಟು ಆ ಪರ್ವತವನ್ನು ಕೆಳಕ್ಕೆ ಕೆಡವಿದನು. ಆಗ ಮಾರುತಿಯು ಭರತನನ್ನು ನೋಡಿ ಇವನು ರಾಮನೆಂದು ತಿಳಿದು ಬಹುವಾಗಿ ಗಾಬರಿಗೊಂಡನು.

೬೩. ಆಗ ಮಾರುತಿಯು ಭರತನನ್ನು ಕುರಿತು ರಾಮನೆಂಬ ಬುದ್ಧಿಯಿಂದ ಮಧುರವಾಗಿ ಎಲೈ ರಾಮನೆ ! ನೀನೇಕೆ ಇಲ್ಲಿಗೆ ಬಂದೆ ? ರಾವಣನಿಂದ ನೀನೇನಾದರೂ ಸೋತುಹೋಗಿ ಇಲ್ಲಿಗೆ ಓಡಿ ಬಂದಿರುವೆಯಾ ? ಎಂದು ಕೇಳಿದನು.

೬೪. ಮಾರುತಿಯು ಹೀಗೆ ಹೇಳುತ್ತಿದ್ದರೂ ಭರತನು ಆತನನ್ನು ರಾಕ್ಷಸನೆಂದೇ ತಿಳಿದು ಮತ್ತೊಂದು ಬಾಣವನ್ನು ಧನುಸ್ಸಿನಲ್ಲಿ ಹೂಡಿದನು.

೬೫. ಅವನು ಬಾಣವನ್ನು ಬಿಡಲು ಉದ್ಯುಕ್ತನಾಗಿರುವುದನ್ನು ನೋಡಿ ಹನುಮಂತನು “ ಭು, ಭು, ” ಎಂದೆನ್ನುತ್ತಾ ಇವನು ರಾಮನಲ್ಲವೆಂದು ತಿಳಿದು ಕ್ಷಣಕಾಲ ಮನಸ್ಸಿನಲ್ಲಿ ಯೋಚಿಸಿದನು.

ಭರತಂ ಮಾರುತಿಃ ಪ್ರಾಹ ರಾಮದೂತೋದ್ಯ ಮೇ ಬಲಂ ।
ಪಶ್ಯಸಿ ತ್ವಂ ತದ್ಗಿರಂ ತಾಂ ಶ್ರುತ್ವಾ ತಂ ಭರತೋಽಬ್ರವೀತ್ ॥ ೬೬ ॥

ಬಂಧುನಾ ಮಮ ರಾಮೇಣ ಕುತೋ ವದ ಸಮಾಗಮಃ ।
ತವ ಜಾತಸ್ಸವಿಸ್ತಾರಂ ದಂಡಕಾರಣ್ಯವಾಸಿನಾ ॥ ೬೭ ॥

ತತಸ್ತಂ ಮಾರುತಿರ್ವೃತ್ತಂ ಸಂಶ್ರಾವ್ಯ ರಾಘವಸ್ಯ ತು ।
ಭರತೇನೇಷುಣಾ ದತ್ತಂ ಗಿರಿಂ ಧೃತ್ವಾ ಯಯೌ ಪುನಃ ॥ ೬೮ ॥

ಲಂಕಾಂ ಗತ್ವಾ ಸ ವಲ್ಲೀಭಿರ್ಜೀವಯಾಮಾಸ ಲಕ್ಷ್ಮಣಂ ।
ವಾನರಾಂಶ್ಚ ಭರತಸ್ಯ ರಾಮಂ ವೃತ್ತಂ ನ್ಯವೇದಯತ್ ॥ ೬೯ ॥

---

೬೬. ಅನಂತರ ನಾನು ರಾಮದೂತನು ನನ್ನ ಬಲವನ್ನು ನೋಡು. ತೋರಿಸುತ್ತೇನೆ. ಎಂದು ಭರತನಿಗೆ ಮಾರುತಿಯು ಹೇಳಲು ಆ ಮಾತನ್ನು ಭರತನು ಕೇಳಿ ಮಾರುತಿಯನ್ನು ಕುರಿತು ಇಂತೆಂದನು.

೬೭. ಎಲೈ ಮಹಾನುಭಾವನೆ! ನನ್ನ ಸಹೋದರನಾದ ರಾಮನೊಡನೆ ನಿನಗೆ ಎಲ್ಲಿ ಸಮಾಗಮಯವಾಯಿತು? ಅವನು ದಂಡಕಾರಣ್ಯದಲ್ಲಿರುವನು. ಅವನ ಸ್ನೇಹವು ಆದ ಬಗೆಯನ್ನು ವಿಸ್ತಾರವಾಗಿ ಹೇಳು.

೬೮. ಆಮೇಲೆ ಮಾರುತಿಯು ರಾಮನ ವಿಷಯವನ್ನು ಭರತನಿಗೆ ಹೇಳಿ ಭರತನು ಬಾಣದಿಂದ ಎತ್ತಿ ಆ ಬೆಟ್ಟವನ್ನು ಮಾರುತಿಗೆ ಕೊಡಲು ಅದನ್ನು ತೆಗೆದುಕೊಂಡು ಹೊರಟನು.

೬೯. ಅನಂತರ ಲಂಕೆಗೆ ಹೋಗಿ ಔಷಧಿಗಳಿಂದ ಲಕ್ಷ್ಮಣನನ್ನು ಬದುಕಿಸಿದನು. ಮತ್ತು ಸತ್ತಿರುವ ವಾನರರೆಲ್ಲರನ್ನೂ ಬದುಕಿಸಿದನು. ಅಲ್ಲದೆ ಭರತನ ವಿಷಯವನ್ನೂ ರಾಮನಿಗೆ ತಿಳಿಸಿದನು.

ಪುನರ್ನೀತ್ವಾ ಯಥಾಸ್ಥಾನಂ ತಂ ಸಂಸ್ಥಾಪ್ಯ ಮಹಾಚಲಂ ।
ಲಕ್ಷ್ಮಣೋ ಜೀವಿತಶ್ಚೇತಿ ಸಂಶ್ರಾವ್ಯ ಭರತಂ ಪುನಃ ॥ ೨೦ ॥

ಯಯಾವಾಕಾಶಮಾರ್ಗೇಣ ಲಂಕಾಂ ಸ ಮಾರುತಿರ್ಜವಾತ್ ।
ನೃಪಾನಾಕಾರಯಾಮಾಸ ಸಾಕೇತಂ ಭರತೋಽಪಿ ಸಃ ॥ ೨೧ ॥

ಸಾಹಾಯ್ಯಾರ್ಥಂ ರಾಘವಸ್ಯ ಲಂಕಾಂ ಗಂತುಂ ಮನೋ ದಧೇ ।
ತತಸ್ಸಭಾಯಾಮಾಸೀನೋ ರಾವಣಃ ಪ್ರಾಹ ರಾಕ್ಷಸಾನ್ ॥ ೨೨ ॥

ಗಚ್ಛಧ್ವಂ ತ್ವರಿತಂ ದೂತಾಃ ಪಾತಾಲೇ ತೌ ಮಹಾಬಲೌ ।
ಐರಾವಣೋ ಮಹಾದೈತ್ಯಸ್ತಥಾ ಮೈರಾವಣೋ ಮಹಾನ್ ॥ ೨೩ ॥

ತಯೋರ್ಮೇ ಕಥನೀಯಂ ಹಿ ಯುದ್ಧವೃತ್ತಂ ವಯಸ್ಯಯೋಃ ।
ತಥೇತಿ ತೇ ಗತಾ ದೂತಾಸ್ತೌ ತದ್ವೃತ್ತಂ ನ್ಯವೇದಯನ್ ॥ ೨೪ ॥

---

೨೦. ಮತ್ತೆ ಆ ಬೆಟ್ಟವನ್ನು ತೆಗೆದುಕೊಂಡು ಅದರ ಸ್ಥಾನದಲ್ಲಿಟ್ಟನು. ಹಾಗೆಯೇ ಮತ್ತೆ ಭರತನ ಬಳಿಗೆ ಹೋಗಿ ಲಕ್ಷ್ಮಣನು ಬದುಕಿದನೆಂದೂ ಹೇಳಿದನು.

೨೧. ಆಕಾಶಮಾರ್ಗದಿಂದ ಮತ್ತೆ ಲಂಕೆಗೆ ಬಂದನು. ಇತ್ತ ಭರತನು ರಾಜರೆಲ್ಲರನ್ನೂ ಅಯೋಧ್ಯೆಗೆ ಕರಸಿದನು.

೨೨. ರಾಘವನಿಗೆ ಸಹಾಯಮಾಡಲು ಭರತನು ಅವರೊಡನೆ ಆಲೋಚಿಸಿದನು. ಮತ್ತು ಲಂಕೆಗೆ ಹೋಗಲು ಮನಸ್ಸು ಮಾಡಿದನು. ಅತ್ತ ಲಂಕೆಯಲ್ಲಿ ಸಭೆಯಲ್ಲಿ ಕುಳಿತಿದ್ದ ರಾವಣನು ರಾಕ್ಷಸರನ್ನು ಕುರಿತು ಇಂತೆಂದನು.

೨೩–೨೪. ಎಲೈ ದೂತರಿರಾ! ನೀವು ಬೇಗನೆ ಪಾತಾಳಕ್ಕೆ ಹೋಗಿರಿ. ಅಲ್ಲಿ ಬಲಿಷ್ಠರಾದ ಐರಾವಣ ಮೈರಾವಣರೆಂಬ ದೈತ್ಯರು ಇರುವರು. ಅವರಿಗೆ ನನ್ನ ಯುದ್ಧದ ವಿಷಯಗಳನ್ನು ಹೇಳಿರಿ. ಅವರು ನನ್ನ ಸ್ನೇಹಿತರು ಎಂದೆನಲು ದೂತರು ಅಂತೆಯೇ ಹೋಗಿ ಅವರಿಗೆ ರಾವಣನ ಯುದ್ಧದ ವಿಷಯವನ್ನು ತಿಳಿಸಿದರು.

ತೌ ಶ್ರುತ್ವಾ ವಿಹ್ವಲಾತ್ಮಾನೌ ಲಂಕಾಯಾಂ ಸಮುಪಸ್ಥಿತೌ |
ರಾಮಂ ಚ ಲಕ್ಷ್ಮಣಂ ಹರ್ತುಂ ನಿಶಾಯಾಂ ತೌ ಸಮಾಗತೌ || ೭೫ ||

ದದರ್ಶತುಸ್ತೌ ಪುಚ್ಛಸ್ಯ ಪರಿಘಂ ಹಿ ಹನೂಮತಃ |
ಕಪೀನಾಂ ತತ್ರ ಸೇನಾಯಾಸ್ತದಾಕಾಶಾನ್ಮಹಾಬಲೌ || ೭೬ ||

ನಿಪೇತತುಃ ಕಪೀನಾಂ ತು ಸೇನಾಯಾಂ ರಾಮಲಕ್ಷ್ಮಣೌ |
ಕಿಂಚಿದ್ವಿನಿದ್ರಿತೌ ದೃಷ್ಟ್ವಾ ಶಿಲಾಯಾಂ ಸಂಗರಶ್ರಮಾತ್ || ೭೭ ||

ನಿನ್ಯತುಸ್ತೌ ಶಿಲಾಂ ಶೀಘ್ರಂ ಪಾತಾಲಂ ನಿಜಮಂದಿರಂ |
ಏತಸ್ಮಿನ್ನಂತರೇ ದೃಷ್ಟ್ವಾ ಸೇನಾಯಾಂ ರಾಮಲಕ್ಷ್ಮಣೌ || ೭೮ ||

---

೭೫. ರಾವಣನ ಈ ವಿಷಯವನ್ನು ಕೇಳಿದ ಐರಾವಣ ಮೈರಾವಣರು ಲಂಕೆಗೆ ಬಂದರು. ಅವರಿಬ್ಬರೂ ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋಗಬೇಕೆಂದೆಣಿಸಿ ರಾತ್ರಿಯಲ್ಲಿ ಅವರಿದ್ದಲ್ಲಿಗೆ ಬಂದರು.

೭೬. ಅವರಿಬ್ಬರೂ ಈ ಹನುಮನ ಬಾಲವು ಪರಿಘಾಯುಧದಂತೆ ಇರುವುದನ್ನು ನೋಡಿದರು. ಮತ್ತು ಅದು ಕಪಿಸೇನೆಯನ್ನು ಸುತ್ತಿಕೊಂಡಿರುವುದನ್ನು ಆಕಾಶದಿಂದಲೇ ನೋಡಿದರು.

೭೭. ಅವರು ಅಂತರಿಕ್ಷದಿಂದಲೇ ಆ ಕಪಿಸೇನೆಯ ಮಧ್ಯದಲ್ಲಿ ಬಂದು ಇಳಿದರು. ರಾಮಲಕ್ಷ್ಮಣರು ಯುದ್ಧದಿಂದ ಶ್ರಮಪಟ್ಟು ಒಂದು ಚಪ್ಪಡಿಕಲ್ಲಿನ ಮೇಲೆ ಮಲಗಿ ನಿದ್ರಿಸುತ್ತಿರುವುದನ್ನೂ ನೋಡಿದರು.

೭೮. ಅವರಿಬ್ಬರೂ ರಾಮಲಕ್ಷ್ಮಣರು ಮಲಗಿದ್ದ ಆ ಚಪ್ಪಡಿಯನ್ನೇ ಅವರೊಡನೆ ಹೊತ್ತುಕೊಂಡು ಪಾತಾಳಕ್ಕೆ ತೆಗೆದುಕೊಂಡು ಹೋದರು. ಇಷ್ಟರೊಳಗೆ ಸೇನೆಯಲ್ಲಿ ರಾಮಲಕ್ಷ್ಮಣರಿಲ್ಲದಿರುವುದನ್ನು ಮಾರುತಿಯು ನೋಡಿದನು.

ಮಾರುತಿಃ ಪಾದಮಾರ್ಗೇಣ ತಯೋಃ ಪಾತಾಲಮಾಯಯೌ ।
ಏತಸ್ಮಿನ್ನಂತರೇ ಮಾರ್ಗೇ ಲಂಕಾದಕ್ಷಿಣದಿಕ್ತಟೇ ॥ ೭೯ ॥

ನಿಕುಂಭಿಲಾಯಾಂ ಸ್ವಪತಿಂ ಕಪೋತೀ ಪ್ರಾಹ ಗುರ್ವಿಣೀ ।
ನಾಥಾದ್ಯ ನರಮಾಂಸಂ ಮೇ ಭೋಕ್ತುಂ ಸ್ಪೃಹಯತೇ ಮನಃ ॥ ೮೦ ॥

ಸ ಪ್ರಾಹಾದ್ಯ ಸಮಾನೀತೌ ವರ್ತತೇ ರಾಮಲಕ್ಷ್ಮಣೌ ।
ರಸಾತಲಂ ಹಿ ದೈತ್ಯಾಭ್ಯಾಂ ದೇವ್ಯಗ್ರೇ ತೌ ವಧಿಷ್ಯತಃ ॥ ೮೧ ॥

ಏವಂ ತಯೋರ್ವಧೇ ಜಾತೇ ಮಾಂಸಮಾನೀಯ ತೇರ್ಪಯೇ ।
ತದ್ವಾಕ್ಯಂ ಮಾರುತಿಃ ಶ್ರುತ್ವಾ ಕಿಂಚಿತ್ತೋಷಯುತೋ ಯಯೌ ॥ ೮೨ ॥

---

೭೯. ಒಡನೆಯೇ ಅವರ ಹೆಜ್ಜೆಯನ್ನು ಅನುಸರಿಸಿ ತಾನೂ ಪಾತಾಳಕ್ಕೆ ಹೋದನು. ಆ ಸಮಯದಲ್ಲಿ ಹನುಮನು ಲಂಕೆಯ ದಕ್ಷಿಣಸಮುದ್ರದ ದಡದಲ್ಲಿಯೇ ಹೋಗುತ್ತಿದ್ದನು.

೮೦. ಆ ರಸಾತಳದ ಸಮುದ್ರದ ದಡದಲ್ಲಿ ಎರಡು ಪಾರಿವಾಳದ ಹಕ್ಕಿಗಳಿದ್ದುವು. ಹೆಣ್ಣುಹಕ್ಕಿಯು ಗರ್ಭಿಣಿಯಾಗಿದ್ದಿತು. ಆ ಬಸುರಿಯಾಗಿರುವ ಪಾರಿವಾಳದ ಹಕ್ಕಿಯು ಗಂಡನನ್ನು ಕುರಿತು ಎಲೈ ನಾಥನೆ! ನನಗೆ ಈಗ ನರಮಾಂಸವನ್ನು ತಿನ್ನಲು ಆಸೆಯಾಗುತ್ತದೆ. ಎಂದಿತು.

೮೧. ಅದಕ್ಕೆ ಗಂಡುಹಕ್ಕಿಯು ಎಲೈ ಪ್ರಿಯಳೆ! ಐರಾವಣ ಮೈರಾವಣರು ರಾಮಲಕ್ಷ್ಮಣರನ್ನು ಈ ರಸಾತಳಕ್ಕೆ ತಂದಿದ್ದಾರೆ. ಅವರಿಬ್ಬರನ್ನೂ ದೇವಿಯಾದ ದುರ್ಗೆಯ ಎದುರಿಗೆ ಬಲಿಯನ್ನು ಕೊಡುತ್ತಾರೆ.

೮೨. ಅವರನ್ನು ಕಾಳಿಯ ಎದುರಿಗೆ ನಾಳೆಯದಿನ ಕೊಂದಮೇಲೆ ಆ ಮಾಂಸವನ್ನು ತಂದು ನಿನಗೆ ಕೊಡುತ್ತೇನೆ. ಎಂದಿತು. ಈ ಮಾತನ್ನು ಮಾರುತಿಯು ದಾರಿಯಲ್ಲಿ ಕೇಳುತ್ತ ಅವನಿಗೆ ಸಮಾಚಾರವು ಸಿಕ್ಕಿದುದರಿಂದ ಸ್ವಲ್ಪಸಂತೋಷವಾಯಿತು. ಮತ್ತೆ ಮುಂದೆ ಹೊರಟನು.

ತಾವದ್ದದರ್ಶ ತದ್ದ್ವಾರಿ ಸಂಸ್ಥಿತಂ ಮಕರಧ್ವಜಂ ।
ಸ ಧೃತ್ವಾ ತಂ ಹನೂಮಂತಂ ಪಪ್ರಚ್ಛ ಮಕರಧ್ವಜಃ ॥ ೮೩ ॥

ಕಸ್ತ್ವಂ ಕುತಸ್ತ್ವಮಾಯಾತಃ ಸ್ವವೃತ್ತಂ ಪ್ರಾಹ ಮಾರುತಿಃ ।
ರಾಮದೂತಸ್ತು ಲಂಕಾಯಾಶ್ಚಾನೀತೌ ರಾಮಲಕ್ಷ್ಮಣೌ ॥ ೮೪ ॥

ನಿದ್ರಿತೌ ನಿಶಿ ದೈತ್ಯಾಭ್ಯಾಮತ್ರ ಪಾತಾಲಮದ್ಯ ಹಿ ।
ತಯೋಃಶ್ಶೋಧಾರ್ಥಮಾಯಾತಶ್ಚೇತ್ತ್ವಂ ವೇತ್ಸಿ ವದಸ್ವ ತೌ ॥ ೮೫ ॥

ತನ್ಮಾರುತಿ ವಚಶ್ಶ್ರುತ್ವಾ ತಂ ಪ್ರಾಹ ಮಕರಧ್ವಜಃ ।
ಪಿತಾ ಮೇ ವರ್ತತೇ ತತ್ರ ಕ್ಷೇಮೇಣಾಂಜನಿನಂದನಃ ॥ ೮೬ ॥

---

೮೩. ಅಷ್ಟರಲ್ಲಿ ಆ ಪಟ್ಟಣದ ಬಾಗಿಲಿನಲ್ಲಿ ಮಕರಧ್ವಜನು ಇರುವುದನ್ನು ಹನುಮಂತನು ನೋಡಿದನು. ಅವನು ಹನುಮಂತನನ್ನು ಹಿಡಿದುಕೊಂಡು ಇಂತೆಂದು ಕೇಳಿದನು.

೮೪. ಅಯ್ಯಾ ನೀನಾರು ? ಎಲ್ಲಿಂದ ಬಂದೆ ? ಎಂದೆನ್ನಲು ಮಾರುತಿಯು ತನ್ನ ವೃತ್ತಾಂತವನ್ನು ಹೇಳುತ್ತ ಇಂತೆಂದನು. ನಾನು ರಾಮನ ದೂತನು. ರಾಮಲಕ್ಷ್ಮಣರನ್ನು ಅವರು ಲಂಕೆಯಿಂದ ಇಲ್ಲಿಗೆ ತಂದಿದ್ದಾರೆ.

೮೫. ಅವರಿಬ್ಬರೂ ರಾತ್ರಿಯಲ್ಲಿ ನಿದ್ದೆಮಾಡುತ್ತಿದ್ದಾಗ ಆ ದೈತ್ಯರು ಪಾತಾಳಕ್ಕೆ ತಂದಿರುವರು. ಅವರನ್ನು ಹುಡುಕಲು ಬಂದಿದ್ದೇನೆ. ನಿನಗೆ ತಿಳಿದಿದ್ದರೆ ಅವರೆಲ್ಲಿರುವರೆಂದು ಹೇಳು.

೮೬. ಮಾರುತಿಯು ಈ ಮಾತನ್ನು ಕೇಳಿ ಮಕರಧ್ವಜನು ಎಲೈ ಕಪಿಶ್ರೇಷ್ಠನೆ ! ಅಲ್ಲಿ ಅಂಜನಿಯ ಮಗನಾದ ನನ್ನ ತಂದೆಯು ಕ್ಷೇಮವಾಗಿರುವನೆ ? ಎಂದನು.

ತಚ್ಛ್ರುತ್ವಾ ಚ ತತಃ ಪ್ರಾಹ ಹನೂವಾನ್ ಮಕರಧ್ವಜಂ ।
ಹನೂಮತಃ ಕುತಃ ಪತ್ನೀ ಸೋಬ್ರವೀನ್ಮಾರುತಿಂ ಪುನಃ ॥ ೮೭ ॥

ಲಂಕಾದಾಹಂ ಪುರಾ ಕೃತ್ವಾ ಸಾಗರೇ ಶೀತಲಂ ಕೃತಂ ॥
ಯದಾ ಪುಚ್ಛಂ ಮಾರುತಿನಾ ತದಾ ತದ್ಧೂಮಪೂರಿತಾತ್ ॥ ೮೮ ॥

ಕಂಠಾಚ್ಛ್ಲೇಷ್ಮಾ ಬಹಿಸ್ತ್ಯಕ್ತಸ್ಸಾಗರೇ ಸೋಽಪತತ್ತದಾ ।
ಮಕರ್ಯಾ ಭಕ್ಷಿತಸ್ಸೋಽಪಿ ತಸ್ಯಾಂ ಜಾತಸ್ಸುತೋಽಸ್ಮ್ಯಹಂ ॥ ೮೯ ॥

ತಚ್ಛ್ರುತ್ವಾ ಮಾರುತಿಃ ಪ್ರಾಹ ಸೋಽಹಮೇವ ನ ಸಂಶಯಃ ।
ತದಾ ನನಾಮ ಪಿತರಂ ತಥಾ ವೃತ್ತಂ ನ್ಯವೇದಯತ್ ॥ ೯೦ ॥

---

೮೭. ಇದನ್ನು ಕೇಳಿ ಹನುಮಂತನು ಮಕರಧ್ವಜನನ್ನು ಕುರಿತು ಹನುಮಂತನಿಗೆ ಹೆಂಡತಿಯೇ ಇಲ್ಲವಲ್ಲಾ ! ಮಗನೆಲ್ಲಿಂದ ಬರಬೇಕು ? ಎಂದನು. ಆಗ ಮಕರಧ್ವಜನು ಮಾರುತಿಯನ್ನು ಕುರಿತು ಮತ್ತೆ ಇಂತೆಂದನು.

೮೮. ಮಾರುತಿಯು ಪೂರ್ವದಲ್ಲಿ ಲಂಕಾಪಟ್ಟಣವನ್ನು ಸುಟ್ಟು ಬಾಲವನ್ನು ತಣ್ಣಗೆ ಮಾಡಿಕೊಳ್ಳಲು ಅದನ್ನು ಸಮುದ್ರದಲ್ಲಿ ಅದ್ದಿದನು. ಆಗ ಅದರಿಂದ ಬಂದ ಹೊಗೆಯು ಬಾಯಿಮೂಗುಗಳಲ್ಲಿ ಅವನ ದೇಹಕ್ಕೆ ಹೋಯಿತು.

೮೯. ಆಗ ಮಾರುತಿಯು ಗಂಟಲಿನಿಂದ ಶ್ಲೇಷ್ಮವನ್ನು ಹೊರಕ್ಕೆ ತೆಗೆದು ಸಾಗರಕ್ಕೆ ಬಿಸಾಡಿದನು. ಅದನ್ನು ಒಂದು ಮೀನು ತಿಂದಿತು. ಅದರ ಹೊಟ್ಟೆಯಲ್ಲಿ ಅದರಿಂದ ನಾನು ಹುಟ್ಟಿದೆನು. ಆದುದರಿಂದ ನಾನು ಅವನ ಮಗನಾಗಬೇಕು.

೯೦. ಇದನ್ನು ಕೇಳಿ ಆ ಮಾರುತಿಯು ಅವನೇ ನಾನು. ಸಂಶಯವಿಲ್ಲ. ಎನ್ನಲು ಆ ಮಕರಧ್ವಜನು ತಂದೆಗೆ ನಮಸ್ಕರಿಸಿದನು. ಅನಂತರ ರಾಮ ಲಕ್ಷ್ಮಣರ ವಿಷಯವನ್ನೂ ತಿಳಿಸಿದನು.

ಕಾಮಾಕ್ಷ್ಯೈಸ್ತೌ ಬಲಿಂ ಕರ್ತುಂ ನಿಶ್ಚಿತೌ ಪೂರ್ವಮೇವ ಹಿ ।
ತಾವಾನೇತುಂ ಯುದೋದ್ಯುಕ್ತೌ ಲಂಕಾಂ ಗತ್ವಾಸುರೋತ್ತಮೌ ॥ ೯೧ ॥

ಶ್ವಃ ಕಾಮಾಕ್ಷ್ಯಾಃ ಪುರಃ ಕರ್ತುಂ ತಯೋರ್ದಾನಂ ವಿನಿಶ್ಚಿತಂ ।
ಗಚ್ಛ ದೇವಾಲಯೇ ಗತ್ವಾ ತತ್ರ ಸ್ಥಿತ್ವಾ ಹರಸ್ವ ತೌ ॥ ೯೨ ॥

ತತಸ್ಸಮಾರುತಿರ್ಗತ್ವಾ ತ್ರಸರೇಣುಸ್ವರೂಪಧೃಕ್ ।
ದೇವಾಲಯೇ ಪ್ರವಿಶ್ಯಾಥ ಕಪಾಟಾನಿ ಬಬಂಧ ಸಃ ॥ ೯೩ ॥

ತಾವದ್ದೈತ್ಯೌ ಸಮಾಯಾತೌ ಪೂಜಾರ್ಥಂ ದ್ವಾರಿ ಸಂಸ್ಥಿತೌ ।
ಶನೈರ್ದೇವ್ಯಾಃ ಸ್ವರೇಣೈವ ಮಾರುತಿಸ್ತೌ ವಚೋಬ್ರವೀತ್ ॥ ೯೪ ॥

---

೯೧. ಈ ಐರಾವಣ ಮೈರಾವಣರು ರಾಮಲಕ್ಷ್ಮಣರನ್ನು ಕಾಮಾಕ್ಷಿಗೆ ಬಲಿಕೊಡಲು ಮೊದಲೇ ನಿಶ್ಚಯಿಸಿಕೊಂಡಿರುವರು. ಲಂಕೆಗೆ ಹೋಗಿ ತರುವಾಗಲೇ ಅವರು ಈ ರೀತಿಯಾಗಿ ಹೇಳಿಕೊಂಡು ಹೋದರು.

೯೨. ನಾಳೆಯದಿವಸ ಆ ಕಾಮಾಕ್ಷಿಗೆ ಬಲಿಯನ್ನು ಕೊಡಲು ನಿಶ್ಚಯ ಮಾಡಿಕೊಂಡಿರುವುದರಿಂದ ಮೊದಲೇ ನೀನು ಅದೇ ಸ್ಥಾನಕ್ಕೆ ಹೋಗಿದ್ದು ಕೊಂಡು ಅವರಿಬ್ಬರನ್ನೂ ಕದ್ದುಕೊಂಡು ಹೋಗು.

೯೩. ಆಗ ಮಾರುತಿಯು ತ್ರಸರೇಣುವೆಂಬ ಅಣುವಂತಾದನು. (ತ್ರಸರೇಣುವೆಂದರೆ ಮನೆಯಲ್ಲಿ ಬಿಸಿಲು ಕೋಲುಗಳಲ್ಲಿ ಓಡಾಡುವಂತೆ ಕಾಣುತ್ತ ಹಾರಾಡುವ ಸೂಕ್ಷ್ಮ ಅಣುಗಳಿಗೆ ಹೆಸರು) ಮತ್ತು ಆ ದೇವಾಲಯಕ್ಕೆ ಹೋಗಿ ಬಾಗಿಲುಗಳನ್ನು ಹಾಕಿಕೊಂಡು ಅಗುಳಿಯನ್ನೂ ಹಾಕಿದನು.

೯೪. ಆಗ ದೈತ್ಯರು ಪೂಜೆಗೋಸ್ಕರ ಬಂದು ಬಾಗಿಲಿನಲ್ಲಿ ನಿಂತು ಕೊಂಡರು. ಆಗ ಮಾರುತಿಯು ದೇವಿಯು ಮಾತನಾಡುವಂತೆಯೇ ನಿಧಾನವಾದ ಸ್ವರದಿಂದ ಮಾತನಾಡಲು ಮೊದಲುಮಾಡಿದನು.

ಪೂಜಾ ಕಾರ್ಯಾ ಗವಾಕ್ಷೇಣ ಸಜೀವೌ ರಾಮಲಕ್ಷ್ಮಣೌ ।
ವನೋದ್ಭವೈಃ ಫಲೈಃ ಪುಷ್ಪಾದಿಭಿಸ್ಸಮ್ಯಕ್ಪ್ರಪೂಜಿತೌ ॥ ೯೫ ॥

ಧೃತಕೋದಂಡತೂಣೀರೌ ವನ್ಯಪುಷ್ಪೈಶ್ಚ ಶೋಭಿತೌ ।
ದೇವಾಲಯಸ್ಯ ಕಿಂಚಿದ್ಧಿ ದ್ವಾರಮುದ್ಘಾಟ್ಯ ವೈ ಶನೈಃ ॥ ೯೬ ॥

ಮತ್ತುಷ್ಟ್ಯರ್ಥಂ ಪ್ರೇಷಣೀಯಾವತ್ರ ಮಮಾದ್ಯ ಮಾನವೌ ।
ಯೇನ ಕೇನ ಪ್ರಕಾರೇಣ ಯೋ ಮಾಮದ್ಯ ಪ್ರಪಶ್ಯತಿ ॥ ೯೭ ॥

ಭವಿಷ್ಯತಿ ನಿಶ್ಚಯೇನ ಸೋಂಧೋ ನಾಸ್ತ್ಯತ್ರ ಸಂಶಯಃ ।
ತದ್ದೇವ್ಯಾ ವಚನಂ ಶ್ರುತ್ವಾ ತುಷ್ಟಾಂ ಜ್ಞಾತ್ವಾಂಬಿಕಾಂ ಮುದಾ ॥ ೯೮ ॥

---

೯೫. ಎಲೈ ದೈತ್ಯರುಗಳಿರಾ ! ರಾಮಲಕ್ಷ್ಮಣರು ಜೀವಿಸಿರುವಂತೆಯೇ ಗವಾಕ್ಷದಿಂದಲೇ ಪೂಜೆಯನ್ನು ಮಾಡಿರಿ. ಈ ಕಾಡಿನಲ್ಲಿ ಸಿಕ್ಕುವ ಹೂಗಳಿಂದ ಅವರನ್ನು ಅಲಂಕರಿಸಿ ಕಾಡಿನ ಹಣ್ಣುಗಳಿಂದ ಅವರನ್ನು ತೃಪ್ತಿಯನ್ನೂ ಪಡಿಸಿರಿ. ನನಗೂ ಕೂಡ ಗವಾಕ್ಷದಿಂದಲೇ ಹಣ್ಣು ಹೂಗಳಿಂದ ಪೂಜೆಯನ್ನು ಮಾಡಿರಿ'

೯೬. ಅನಂತರ ಆ ರಾಮಲಕ್ಷ್ಮಣರ ಬಿಲ್ಲು ಬಾಣ ಬತ್ತಳಿಕೆಯನ್ನೂ ಧರಿಸಿಕೊಳ್ಳಲಿ. ಅನಂತರ ದೇವಸ್ಥಾನದ ಬಾಗಿಲನ್ನು ಸ್ವಲ್ಪ ತೆಗೆದು ಒಳಕ್ಕೆ ಕಳುಹಿಸಿದರೆ ನನಗೆ ಸಂತೋಷವಾಗುತ್ತದೆ. ಹೊರಗಡೆಯಲ್ಲಿಯೇ ಅವರನ್ನು ಕೊಲ್ಲಬೇಡಿರಿ.

೯೭. ಯಾವನಾದರೂ ಯಾವ ಬಗೆಯಿಂದಲಾದರೂ ನನ್ನನ್ನು ನೋಡಿದುದೇ ಆದರೆ ಅವನು ಖಂಡಿತವಾಗಿಯೂ ಕುರುಡನಾಗುವನು. ಇದರಲ್ಲಿ ಸಂಶಯವಿಲ್ಲ. ಎಂದನು.

೯೮–೯೯. ದೇವಿಯ ಈ ಮಾತನ್ನು ಕೇಳಿ ದೇವಿಯು ಸಂತೋಷಗೊಂಡಿರುವಳೆಂದು ಆ ದೈತ್ಯರು ಸಂತೋಷಪಟ್ಟರು. ಮತ್ತು ಅವಳ

ತತಸ್ತೌ ಪೂಜನಂ ದೈತ್ಯೌ ಗವಾಕ್ಷೇಣೈವ ಚಕ್ರತುಃ ।
ಪಕ್ವಾನ್ನಪಾಯಸಾದೀನಾಂ ರಾಶೀಂಸ್ತೌ ಪ್ರಮುಮೋಚತುಃ ॥ ೯೯ ॥

ಪಂಚಾಮೃತಘಟಾಂಶ್ಚಾಪಿ ಕೋಟಿಶಸ್ತೌ ಮುಮೋಚತುಃ ।
ಕೋಟಿಶಃ ಫಲಭಾರಾಂಶ್ಚ ಗವಾಕ್ಷೇಣ ಮುಮೋಚತುಃ ॥ ೧೦೦ ॥

ತತ್ಸರ್ವಂ ಭಕ್ಷಯಿತ್ವಾ ಸ ಮಾರುತಿಃ ಪ್ರಾಹ ತೌ ಪುನಃ ।
ಕಿಂ ದತ್ತಂ ಗ್ರಾಸಮಾತ್ರಂ ಮೇ ಭೋಜನಂ ಕ್ಷುಧಿತಾಸ್ಮ್ಯಹಂ ॥ ೧೦೧ ॥

ತದ್ದೇವ್ಯಾ ವಚನಂ ಶ್ರುತ್ವಾ ತೌ ದೈತ್ಯಾವತಿವಿಸ್ಮಿತೌ ।
ದೂತೈರ್ವಿಲುಂಠ್ಯ ಹಟ್ಟಾಂಶ್ಚ ತಥಾ ಸ್ವೀಯಪುರೌಕಸಃ ॥ ೧೦೨ ॥

ಪೂಜೆಯನ್ನು ಗವಾಕ್ಷದಿಂದಲೇ ಮಾಡಿದರು. ಪಕ್ವಾನ್ನಗಳ ರಾಶಿಯನ್ನೇ ಅವರು ಅಲ್ಲಿ ಹಾಕಿದರು.

೧೦೦. ಪಂಚಾಮೃತಗಳ ಬಿಂದಿಗೆಗಳನ್ನೇ ಕೋಟಿಗಟ್ಟಲೆಯಲ್ಲಿ ಆ ಕಿಟಕಿಯಿಂದ ಒಳಕ್ಕೆ ಹಾಕಿದರು. ಹಣ್ಣುಗಳನ್ನೂ ಗೂಡೆಯಲ್ಲಿ ತುಂಬಿ ಕೋಟಿಗಟ್ಟಲೆಯಲ್ಲಿ ಒಳಕ್ಕೆ ಹಾಕಿದರು.

೧೦೧. ಅವೆಲ್ಲವನ್ನೂ ಆ ಮಾರುತಿಯು ತಿಂದನು. ಅವರನ್ನು ಕುರಿತು ಮತ್ತೆ ಇಂತೆಂದನು. ಎಲೈ ದೈತ್ಯರಿರಾ ! ನನಗೆ ಇದೆಷ್ಟು ಆಹಾರವನ್ನು ಕೊಟ್ಟಿರಿ ? ನನಗೆ ಬಹುವಾಗಿ ಹಸಿವಾಗಿರುವುದು. ಈ ಆಹಾರವು ನನಗೆ ಒಂದು ತುತ್ತಿನಷ್ಟಾಗಿರುವುದು.

೧೦೨. ದೇವಿಯ ಈ ಮಾತನ್ನು ಕೇಳಿ ಆ ದೈತ್ಯರು ಆಶ್ಚರ್ಯಗೊಂಡರು. ದೂತರನ್ನು ಕರೆಸಿ ಅಂಗಡಿಗಳನ್ನೂ ತಮ್ಮ ಊರನ್ನೂ ಲೂಟಿಹೊಡಿಸಿ ತಿನ್ನತಕ್ಕ ಪದಾರ್ಥಗಳನ್ನು ತರಿಸಿ ಬೆಟ್ಟದಂತೆ ಹಾಕಿದರು.

ಭಕ್ಷಣೀಯಪದಾರ್ಥಾಂಸ್ತೌ ಗಿರೀನಿವ ಮುಮೋಚತುಃ ।
ಸ್ವೀಯರಾಜಗೃಹಾದಿಷು ಯದ್ಯದ್ವಸ್ತ್ವಸ್ತಿ ಸಂಚಿತಂ ॥ ೧೦೩ ॥

ತಚ್ಚಾಪಿ ದೂತೈರಾನೀಯ ದೇವ್ಯೈ ಶೀಘ್ರಂ ಮುಮೋಚತುಃ ।
ತದಾ ಕೋಲಾಹಲಶ್ಚಾಸೀತ್ಪ್ರತಿಗೇಹೇ ಪುರೌಕಸಾಂ ॥ ೧೦೪ ॥

ನಾಸೀಚ್ಛೇಷಂ ಬಾಲಕಾನಾಂ ಭಕ್ಷ್ಯವಸ್ತ್ವಣ್ವಪಿ ಕ್ವಚಿತ್ ।
ತತಸ್ತೌ ವನ್ಯಪುಷ್ಪಾದ್ಯೈರ್ಭೂಷಿತೌ ರಾಮಲಕ್ಷ್ಮಣೌ ॥ ೧೦೫ ॥

ಧೃತಕೋದಂಡತೂಣೀರೌ ದ್ವಾರೇಣೈವಾರ್ಪಿತೌ ಶ್ರಿಯೈ ।
ತೌ ದೃಷ್ಟ್ವಾ ಮಾರುತಿರ್ನತ್ವಾ ಲಿಂಗ್ಯ ಶ್ರೀರಾಮಲಕ್ಷ್ಮಣೌ ॥ ೧೦೬ ॥

---

೧೦೩. ತಮ್ಮ ಅರಮನೆಗಳಲ್ಲಿಯೂ ಕೂಡ ಯಾವ ಯಾವ ಪದಾರ್ಥಗಳನ್ನು ತಿನ್ನುವುದಕ್ಕೆ ಕೂಡಿಹಾಕಿದ್ದರೋ ಅದನ್ನೂ ದೂತರ ಕೈಯ್ಯಲ್ಲಿ ತರಿಸಿ ದೇವಿಗೆ ಹಾಕಿಸಿದರು.

೧೦೪. ಆಗ ಪಟ್ಟಣದಲ್ಲಿ ಮನೆ ಮನೆಯಲ್ಲಿಯೂ ಬಹುವಾದ ಗಲಾಟೆಗೆ ಇಟ್ಟುಕೊಂಡಿತು. ತಿನ್ನತಕ್ಕ ಪದಾರ್ಥಗಳಲ್ಲಿ ಮಕ್ಕಳಿಗೆ ಕೂಡ ತಿನ್ನಲು ಏನೂ ಉಳಿಯಲಿಲ್ಲ.

೧೦೫. ಅನಂತರ ಆ ದೈತ್ಯರು ಆ ರಾಮಲಕ್ಷ್ಮಣರನ್ನು ಕಾಡಿನ ಹೂಗಳಿಂದ ಅಲಂಕರಿಸಿದರು. ಅವರಿಗೆ ಧನುರ್ಬಾಣ ಬತ್ತಳಿಕೆಗಳನ್ನು ಕೊಟ್ಟು ಬಾಗಿಲಿನಿಂದಲೇ ಅರ್ಪಿಸಿದರು.

೧೦೬. ಆ ರಾಮಲಕ್ಷ್ಮಣರನ್ನು ಮಾರುತಿಯು ನೋಡಿ ನಮಸ್ಕರಿಸಿ ಆಲಿಂಗಿಸಿಕೊಂಡನು. ಅನಂತರ ಬಾಗಿಲನ್ನು ತೆಗಿಸಿ ಆ ದೈತ್ಯರಿಬ್ಬರನ್ನೂ ಹೆದರಿಸಲು ಮೊದಲುಮಾಡಿದನು.

ಕಪಾಟಾನಿ ತತೋದ್ಘಾಟ್ಯ ದೈತ್ಯಯೋಸ್ಸ ವ್ಯತರ್ಜಯತ್ ।
ತತೋ ರಾಮೋ ಲಕ್ಷ್ಮಣೇನ ಬಹಿರ್ದೇವಾಲಯಾತ್ತದಾ ॥ ೧೦೭ ॥

ನಿರ್ಗತ್ಯ ಶರಜಾಲೈಸ್ತೌ ಜಘಾನ ಕ್ಷಣಮಾತ್ರತಃ ।
ಸೈನ್ಯಾನಿ ಸುಹೃದಾದೀಂಶ್ಚ ತಯೋರ್ಬಾಣೈರ್ಜಘಾನ ಸಃ ॥ ೧೦೮ ॥

ಪುನಸ್ತೌ ಜೀವಿತೌ ದೈತ್ಯೌ ಪುನಸ್ತೇನ ನಿಪಾತಿತೌ ।
ಶತವಾರಂ ಹತಾವೇವಂ ನಾಸೀನ್ಮೃತ್ಯುಸ್ತಯೋಸ್ತದಾ ॥ ೧೦೯ ॥

ತತೋತಿವಿಸ್ಮಿತೌ ಭೂತ್ವಾ ತ್ವರನ್ ಗತ್ವಾ ಸ ಮಾರುತಿಃ ।
ಇತಸ್ತತೋ ಭ್ರಮನ್ ಪುರ್ಯಾಂ ನಾರೀಂ ರಹಸಿ ಸಂಸ್ಥಿತಾಂ ॥ ೧೧೦ ॥

---

೧೦೭. ಅನಂತರ ರಾಮನೂ ಲಕ್ಷ್ಮಣನೂ ದೇವಾಲಯದಿಂದ ಹೊರಗೆ ಬಂದರು. ಎಲ್ಲರನ್ನೂ ಬಾಣಗಳಿಂದ ಕ್ಷಣಕಾಲದಲ್ಲಿಯೇ ಹೊಡೆದರು.

೧೦೮-೧೦೯. ಬಾಣಗಳನ್ನು ಬಿಡುತ್ತ, ಐರಾವಣ ಮೈರಾವಣರ ಸೈನ್ಯಗಳನ್ನೂ ಸ್ನೇಹಿತರನ್ನೂ ಕೊಂದರು. ಆ ಇಬ್ಬರು ದೈತ್ಯರನ್ನೂ ಕೊಲ್ಲಲು ಅವರು ಮತ್ತೆ ಬದುಕುತ್ತಿದ್ದರು. ಇವರು ಮತ್ತೆ ಮತ್ತೆ ಕೊಲ್ಲುತ್ತಿದ್ದರು. ಹೀಗೆ ನೂರಾರು ಬಾರಿ ಕೊಂದರೂ ಅವರು ಸಾಯುಲೇ ಇಲ್ಲ.

೧೧೦. ಇದರಿಂದ ಇವರಿಗೆ ಆಶ್ಚರ್ಯವಾಯಿತು. ಇದರಿಂದ ಆಗ ಹನುಮಂತನು ಆ ಊರಿನೊಳಕ್ಕೆ ಹೋಗಿ ಎಲ್ಲೆಡೆಯಲ್ಲಿಯೂ ಸುತ್ತಿ ನೋಡಿದನು. ಅಲ್ಲಿ ಯಾರಿಗೂ ತಿಳಿಯದಂತೆ ಗುಟ್ಟಾಗಿ ಒಬ್ಬ ಹೆಂಗಸು ಕುಳಿತಿರುವುದನ್ನು ನೋಡಿದನು.

ಐರಾವಣಭೋಗಪತ್ನೀಂ ಪಪ್ರಚ್ಛ ಮರಣಂ ತಯೋಃ ।
ಸಾ ಪ್ರಾಹ ನಾಗಕನ್ಯಾಹಂ ಬಲೇನಾನೇನ ಧರ್ಷಿತಾ ॥ ೧೧೧ ॥

ಮೈರಾವಣೋಽಪಿ ಮಾಂ ನಿತ್ಯಂ ದುಷ್ಟಬುಧ್ಯಾತ್ರ ಪಶ್ಯತಿ ।
ಉಭಾಭ್ಯಾಮಪಿ ಚ ಕ್ರೀಡಾಂ ದಾತುಂ ನಾಸ್ತಿ ಬಲಂ ಮಯಿ ॥ ೧೧೨ ॥

ಮಿತ್ರಂ ತ್ವೇಕೋ ರಿಪುಸ್ತ್ವೇಕಸ್ತ್ವಿತಿ ದುಃಖಂ ತಯೋರ್ಮಮ ।
ಅತಸ್ತಯೋರ್ವಧೇ ತುಷ್ಟಿರ್ಮಮ ಚಾಪಿ ಭವಿಷ್ಯತಿ ॥ ೧೧೩ ॥

ಮಾರುತೇ ಯದಿ ರಾಮೋ ಮಾಂ ಸ್ವಸ್ತ್ರಿಯಂ ಹಿ ಕರಿಷ್ಯತಿ ।
ತರ್ಹ್ಯಹಂ ಕಥಯಾಮ್ಯದ್ಯ ತಯೋರ್ಮೃತ್ಯುರ್ಯತೋ ಭವೇತ್ ॥ ೧೧೪ ॥

---

೧೧೧. ಅವಳು ಐರಾವಣನ ಭೋಗಪತ್ನಿಯು. ಅವಳನ್ನು ಕುರಿತು ಇವರ ಮರಣದ ವಿಷಯವನ್ನು ಮಾರುತಿಯು ಕೇಳಿದನು ಆಗ ಆಕೆಯು ಹನುಮಂತನನ್ನು ಕುರಿತು, ನಾನು ನಾಗಕನ್ನಿಕೆಯು. ಇವರು ನನ್ನನ್ನು ಬಲಾತ್ಕಾರದಿಂದ ಎಳೆದುತಂದಿರುವರು.

೧೧೨. ಮೈರಾವಣನೂ ಕೂಡ ನನ್ನನ್ನು ದುಷ್ಟವಾದ ಕಾಮಬುದ್ಧಿಯಿಂದ ನೋಡುತ್ತಿರುವನು. ಅವರಿಬ್ಬರಿಗೂ ಸುಖವನ್ನು ಕೊಡಲು ಅಷ್ಟು ಬಲವು ನನ್ನಲ್ಲಿಲ್ಲ.

೧೧೩. ಅವರಲ್ಲಿ ಒಬ್ಬನು ನನಗೆ ಮಿತ್ರನೂ, ಮತ್ತೊಬ್ಬನು ಶತ್ರುವೂ ಆಗಿರುವರಲ್ಲಾ! ಎಂಬುದೇ ನನಗಿರುವ ದುಃಖವು. ಆದುದರಿಂದ ಅವರನ್ನು ಕೊಂದರೆ ನನಗೂ ಸಂತೋಷವಾಗುತ್ತದೆ.

೧೧೪. ಎಲೈ ಮಾರುತಿಯೇ! ರಾಮನು ನನ್ನನ್ನು ಭೋಗಪತ್ನಿಯನ್ನಾಗಿ ಮಾಡಿಕೊಳ್ಳುವುದಾದರೆ ಆಗ ನಾನು ಅವರ ವಧೆಯ ಉಪಾಯವನ್ನು ಹೇಳುತ್ತೇನೆ. ಎಂದಳು.

ತಚ್ಛ್ರುತ್ವಾ ಮಾರುತಿಃ ಪ್ರಾಹ ಯದಿ ಶ್ರೀರಾಮಭಾರತಃ ।
ನ ಭವಿಷ್ಯತಿ ಭಗ್ನಸ್ತೇ ಮಂಚಕಸ್ತರ್ಹಿ ತೇ ಪತಿಃ ॥ ೧೧೫ ॥

ಭವಿಷ್ಯತಿ ರಾಮಚಂದ್ರಸ್ತಥೇತ್ಯುಕ್ತ್ವಾ ತವಾಹ ಸಾ ।
ಭ್ರಮರಾನೇಕದಾ ಪೂರ್ವಂ ಬಾಲ್ಯೈಃ ಕಂಟಕರೋಪಿತಾನ್ ॥ ೧೧೬ ॥

ಮೋಚಯಾಮಾಸತುಸ್ತೌ ಹಿ ತೇನ ತುಷ್ಟಾಶ್ಚ ಷಟ್ಪದಾಃ ।
ತಾವೂಚುಸ್ತೇ ಯುವಾಭ್ಯಾಂ ಹಿ ಮರಣಾತ್ಪ್ರಕ್ಷಿತಾ ವಯಂ ॥ ೧೧೭ ॥

ಯಥಾ ತಥಾ ಯುವಾಂ ಚಾಪಿ ರಕ್ಷಾಮೋ ಮರಣಾದ್ವಯಂ ।
ಇತ್ಯುಕ್ತ್ವಾ ತೇ ಸ್ಥಿತಾಶ್ಚಾತ್ರ ತೇ ನೀತ್ವಾಽಮೃತಮುತ್ತಮಂ ॥ ೧೧೮ ॥

ತದ್ರಕ್ತಬಿಂದೂನ್ ಸ್ಪೃಷ್ಟ್ವಾ ತೌ ಪ್ರಕುರ್ವಾತೇ ಸುಜೀವಿತೌ ।
ಭ್ರಮರಾಸ್ತೇ ತಯೋರ್ನಿದ್ರಾಸ್ಥಾನೇ ಸಂತ್ಯಧುನಾ ಕಪೇ ॥ ೧೧೯ ॥

---

೧೧೫. ಆ ಮಾತನ್ನು ಕೇಳಿ ಮಾರುತಿಯು ಶ್ರೀರಾಮನ ಭಾರಕ್ಕೆ ನಿನ್ನ ಮಂಚವು ಮುರಿದುಹೋಗದ ಪಕ್ಷದಲ್ಲಿ ಆಗ ಅವನು ನಿನ್ನ ಗಂಡನಾಗುವನು. ಇಲ್ಲದಿದ್ದರೆ ಇಲ್ಲವೆನ್ನಲು ಆಕೆಯು ಹಾಗೆಯೇ ಆಗಲೆಂದು ಹೇಳಿ ಇಂತೆಂದಳು.

೧೧೬-೧೧೭. ಒಂದುಸಾರಿ ಹುಡುಗರು ಆಟಕ್ಕೋಸ್ಕರ ಕೆಲವು ದುಂಬಿಗಳಿಗೆ ಮುಳ್ಳನ್ನು ಚುಚ್ಚಿಬಿಟ್ಟರು. ಈ ರಾಕ್ಷಸರು ಅವುಗಳ ಮುಳ್ಳನ್ನು ತೆಗೆದು ಬಿಡಿಸಿದರು. ಅದರಿಂದ ಆ ದುಂಬಿಗಳಿಗೆ ಸಂತೋಷವಾಯಿತು. ಆಗ ಅವುಗಳು ಇಂತೆಂದುವು. ನೀವಿಬ್ಬರೂ ನಮ್ಮನ್ನು ಮರಣದಿಂದ ಕಾಪಾಡಿರುವಿರಿ.

೧೧೮-೧೧೯. ಅದೇ ರೀತಿಯಾಗಿ ನಾವೂ ನಿಮ್ಮನ್ನು ಕಾಪಾಡುತ್ತೇವೆ. ಎಂದು ಹೇಳಿ ಅವು ಅಲ್ಲಿಯೇ ನಿಂತುವು. ಆ ದುಂಬಿಗಳು ಹಾರಿಹೋಗಿ ತಮ್ಮ ರೆಕ್ಕೆಯಿಂದ ಅಮೃತವನ್ನು ನೆನೆಸಿಕೊಂಡು ಬಂದು ಅವರ ರಕ್ತಬಿಂದುಗಳನ್ನು ಮುಟ್ಟುತ್ತವೆ. ಅದರಿಂದ ಅವರು ಜೀವಿಸುತ್ತಾರೆ. ಆ ಭ್ರಮರಗಳು ಈಗ ಅವರು ಮಲಗುವ ಮನೆಯಲ್ಲಿವೆ.

ಕೋಟಿಶಸ್ತಾನ್ ಮರ್ದಯಸ್ವ ಸೋಽಪಿ ತಾನ್ಮರ್ದಯತ್ ಕ್ಷಣಾತ್ ।
ತತ್ರೈಕಂ ಶರಣಂ ಪ್ರಾಪ್ತಂ ಭ್ರಮರಂ ಪ್ರಾಹ ಮಾರುತಿಃ ॥ ೧೨೦ ॥

ಕುರು ಮಂಚಕಗರ್ಭಂ ತ್ವಂ ಗಜಭುಕ್ತಕಪಿತ್ಥವತ್ ।
ಐರಾವಣಭೋಗಪತ್ನ್ಯಾಃ ಷಟ್ಪದೋಽಪಿ ತಥಾಕರೋತ್ ॥ ೧೨೧ ॥

ತತೋ ನಿಹತ್ಯ ತೌ ದೈತ್ಯೌ ಪುನರ್ಬಾಣೈರಘೂದ್ವಹಃ ।
ಅಭಿಷಿಚ್ಯ ತಯೋಃ ಸ್ಥಾನೇ ರಾಜ್ಯೇ ತಂ ಮಕರಧ್ವಜಂ ॥ ೧೨೨ ॥

ಯಾವದ್ಗಂತುಂ ಮನಶ್ಚಕ್ರೇ ತಾವನ್ಮಾರುತಿನಾರ್ಥಿತಃ ।
ನಾಗಕನ್ಯಾ ಗೃಹಂ ಗತ್ವಾ ನಾನಾಚಿತ್ರವಿಚಿತ್ರಿತಂ ॥ ೧೨೩ ॥

---

೧೨೦. ಅವು ಅಲ್ಲಿ ಕೋಟಿಗಟ್ಟಲೆಯಲ್ಲಿರುವುವು. ಅವನ್ನು ನೀನು ಕೊಂದುಹಾಕು. ಎನ್ನಲು ಮಾರುತಿಯು ಅಂತೆಯೇ ಅಲ್ಲಿಗೆ ಹೋಗಿ ಅವನ್ನು ಕೊಂದನು. ಅವುಗಳಲ್ಲಿ ಒಂದು ಭ್ರಮರವು ಮಾರುತಿಯನ್ನು ಶರಣುಹೊಂದಿತು. ಆಗ ಅದನ್ನು ಕುರಿತು ಮಾರುತಿಯು ಇಂತೆಂದನು.

೧೨೧. ಎಲೈ ದುಂಬಿಯೆ ! ನಿನ್ನನ್ನು ಬಿಟ್ಟುಬಿಡುತ್ತೇನೆ. ನೀನು ಹೋಗಿ ಆ ಐರಾವಣನ ಭೋಗಪತ್ನಿಯ ಮಂಚವನ್ನು ಕೊರೆದು ಆನೆಯು ತಿಂದ ಬೇಲದ ಹಣ್ಣು ಒಳಗೆ ಸಾರವಿಲ್ಲದಂತೆ ಹೇಗೆ ಆಗುವುದೋ ಹಾಗೆ ಸಾರವಿಲ್ಲದಂತೆ ಮಾಡಿಬಿಡು. ಎನ್ನಲು ಅದು ಹಾಗೆಯೇ ಮಂಚವನ್ನು ಕೊರೆದು ಬಲವಿಲ್ಲದ್ದನ್ನಾಗಿ ಮಾಡಿತು.

೧೨೨. ಅನಂತರ ರಾಮಲಕ್ಷ್ಮಣರು ಬಾಣವನ್ನು ಬಿಡಲು ಆ ಇಬ್ಬರು ದೈತ್ಯರೂ ಸತ್ತುಹೋದರು. ಅನಂತರ ಅವರ ರಾಜ್ಯದ ಸ್ಥಾನದಲ್ಲಿ ಮಕರಧ್ವಜನನ್ನು ಅಭಿಷೇಕಮಾಡಿದರು.

೧೨೩. ರಾಮಲಕ್ಷ್ಮಣರು ಲಂಕೆಗೆ ಹೊರಡಲು ಪ್ರಯತ್ನಪಟ್ಟಾಗ ಮಾರುತಿಯು ತಾನು ನಾಗಕನ್ನಿಕೆಗೆ ಕೊಟ್ಟಿರುವ ಭಾಷೆಯನ್ನು ಹೇಳಿದನು. ಅಂತೆಯೇ ರಾಮನು ಚಿತ್ರವಿಚಿತ್ರವಾಗಿ ಅಲಂಕರಿಸಿರುವ ನಾಗಕನ್ನಿಕೆಯ ಮನೆಗೆ ಹೋದನು.

ದೃಷ್ಟ್ವಾ ತಾಂ ಚಾರುವದನಾಂ ವಸ್ತ್ರಾಲಂಕಾರಮಂಡಿತಾಂ ।
ಧೃತ್ವಾ ಕರೇಣ ತದ್ಧಸ್ತಂ ಕಿಂಚಿತ್ಕೃತ್ವಾ ಸ್ಮಿತಾನನಂ ॥ ೧೨೪ ॥

ಚಕಾರ ಮಂಚಕಂ ಭಗ್ನಂ ಸ್ವಭಾರೇಣ ರಘೂದ್ವಹಃ ।
ತತಸ್ತಯಾಪ್ರಾರ್ಥಿತಸ್ಸ ರಾಮಸ್ತಾಂ ಪುನರಬ್ರವೀತ್ ॥ ೧೨೫ ॥

ತ್ಯಕ್ತ್ವಾ ದೇಹಂ ಭುವಂ ಗತ್ವಾ ಭೂತ್ವಾ ಬ್ರಾಹ್ಮಣಕನ್ಯಕಾ ।
ತತಸ್ತಪ್ತ್ವಾ ಚಿರಂ ಕಾಲಂ ತೃತೀಯೇ ತ್ವಂ ತು ಜನ್ಮನಿ ॥ ೧೨೬ ॥

ದ್ವಾಪರೇ ದ್ವಾರಕಾಯಾಂ ಹಿ ಮಮ ಪತ್ನೀ ಭವಿಷ್ಯಸಿ ।
ತದ್ರಾಮವಚನಂ ಶ್ರುತ್ವಾ ರಾಮಾಗ್ರೇಗ್ನಿಂ ಪ್ರವಿಶ್ಯ ಸಾ ॥ ೧೨೭ ॥

ಕನ್ಯಾಕುಮಾರೀ ನಾಮ್ನಾಸೀದ್ದ್ವಿಜಕನ್ಯಾಬ್ಧಿರೋಧಸಿ ।
ಮಾರುತೇಃ ಸ್ಕಂಧಸಂಸ್ಥೋಽಭೂತ್ತದಾ ರಾಮೋ ಮುದಾನ್ವಿತಃ ॥ ೧೨೮ ॥

೧೨೪-೨೫. ವಸ್ತ್ರಾಲಂಕಾರಗಳಿಂದ ಶೋಭಿತಳಾಗಿರುವ ಆಕೆಯನ್ನು ಅಲ್ಲಿನೋಡಿ ಆಕೆಯ ಕೈಯ್ಯನ್ನು ಹಿಡಿದುಕೊಂಡು ಸ್ವಲ್ಪನಕ್ಕು ಮಂಚದಮೇಲೆ ಕುಳಿತುಕೊಂಡು ರಾಮನು ತನ್ನ ಭಾರದಿಂದ ಆ ಮಂಚವು ಮುರಿಯುವಂತೆ ಮಾಡಿ ಮುರಿದನು. ಅನಂತರವೂ ಆಕೆಯು ಮತ್ತೆ ಪ್ರಾರ್ಥಿಸಿಕೊಳ್ಳಲು ರಾಮನು ಇಂತೆಂದನು.

೧೨೬-೧೨೭. ನೀನು ಈ ದೇಹವನ್ನು ಬಿಟ್ಟು ಭೂಲೋಕದಲ್ಲಿ ಬ್ರಾಹ್ಮಣನ ಮಗಳಾಗಿ ಹುಟ್ಟುತ್ತೀಯೆ. ಆಗ ಬಹುಕಾಲ ತಪಸ್ಸನ್ನು ಮಾಡುತ್ತೀಯೆ. ಮತ್ತೆ ಮೂರನೆಯ ಜನ್ಮದಲ್ಲಿ ದ್ವಾಪರಯುಗದಲ್ಲಿ ದ್ವಾರಕೆಯಲ್ಲಿ ನನ್ನ ಹೆಂಡತಿಯಾಗಿ ಆಗುತ್ತೀಯೆ. ರಾಮನು ಹೀಗೆ ಹೇಳಿದುದನ್ನು ಕೇಳಿ ಆಕೆಯು ರಾಮನ ಎದುರಿಗೇನೇ ಅಗ್ನಿಪ್ರವೇಶವನ್ನು ಮಾಡಿದಳು.

೧೨೮. ಆಕೆಯು ಸಮುದ್ರದ ದಡದಲ್ಲಿ ಒಬ್ಬ ಬ್ರಾಹ್ಮಣನ ಹೊಟ್ಟೆಯಲ್ಲಿ ಹುಟ್ಟಿ "ಕನ್ಯಾಕುಮಾರಿ" ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಅನಂತರ ರಾಮನು ಮಾರುತಿಯ ಹೆಗಲಮೇಲೆ ಕುಳಿತುಕೊಂಡನು.

ರಾಜ್ಯೇ ಕೃತ್ವಾ ಮಂತ್ರಿಣಂ ಸ್ವಂ ಲಕ್ಷ್ಮಣಂ ಮಕರಧ್ವಜಃ ।
ಅಕರೋತ್ತಂ ಸ್ಕಂಧಸಂಸ್ಥಂ ಶೇಷಂ ಬ್ರಹ್ಮಾಂಡಧಾರಕಂ ॥ ೧೨೯ ॥

ತತಃ ಕ್ಷಣಾಜ್ಜಗ್ಮತುಸ್ತೌ ಲಂಕಾಂ ಶ್ರೀರಾಮಲಕ್ಷ್ಮಣೌ ।
ಶ್ರೀರಾಮಲಕ್ಷ್ಮಣೌ ದೃಷ್ಟ್ವಾ ಸುಗ್ರೀವಾದ್ಯಾಶ್ಚ ವಾನರಾಃ ॥ ೧೩೦ ॥

ತಾವಾಲಿಂಗ್ಯ ಮುಹುರ್ನತ್ವಾ ಬಭೂವುಸ್ತೋಷಪೂರಿತಾಃ ।
ರಾಮೋಽಪಿ ಸಕಲಂ ವೃತ್ತಂ ಸುಗ್ರೀವಾದೀನ್ ನ್ಯವೇದಯತ್ ॥ ೧೩೧ ॥

ದೈತ್ಯೌ ರಾಮೇಣ ನಿಹತೌ ಶ್ರುತ್ವಾ ಸದಸಿ ರಾವಣಃ ।
ರಾಕ್ಷಸಾನ್ ಚಕಿತಃ ಪ್ರಾಹ ಪೂರ್ವವೃತ್ತಂ ಭಯಾನ್ವಿತಃ ॥ ೧೩೨ ॥

ಮಾನುಷೇಣೈವ ಮೃತ್ಯುರ್ಮೇ ಹ್ಯಾಹ ಪೂರ್ವಂ ಪಿತಾಮಹಃ ।
ಅತೋ ನಾರಾಯಣಸ್ಸಾಕ್ಷಾನ್ಮಾನುಷೋಽಭೂನ್ನ ಸಂಶಯಃ ॥ ೧೩೩ ॥

೧೨೯–೧೩೦. ಮಕರಧ್ವಜನು ತನ್ನ ಮಂತ್ರಿಯನ್ನು ರಾಜ್ಯದಲ್ಲಿಟ್ಟು ತಾನು ಲಕ್ಷ್ಮಣನನ್ನು ಹೆಗಲಮೇಲೆ ಕೂರಿಸಿಕೊಂಡನು. ಒಡನೆಯೇ ಲಂಕೆಗೆ ಹಾರಿಬಂದರು. ಹೀಗೆ ಬಂದ ರಾಮಲಕ್ಷ್ಮಣರನ್ನು ಸುಗ್ರೀವನೇ ಮುಂತಾದ ಕಪಿಗಳು ನೋಡಿದರು.

೧೩೧. ಮತ್ತು ಅವರಿಗೆ ನಮಸ್ಕರಿಸಿ ಆಲಿಂಗಿಸಿಕೊಂಡು ಬಹುವಾಗಿ ಸಂತೋಷಗೊಂಡರು. ರಾಮನು ಅಲ್ಲಿಯವರೆಗೂ ನಡೆದ ಸಮಾಚಾರವನ್ನು ಸುಗ್ರೀವಾದಿಗಳಿಗೆ ತಿಳಿಸಿದನು.

೧೩೨. ಐರಾವಣ ಮೈರಾವಣರನ್ನು ರಾಮನು ಕೊಂದ ವಿಷಯವನ್ನು ಸಭೆಯಲ್ಲಿ ರಾವಣನು ಚಾರರಿಂದ ಕೇಳಿದನು. ಆಗ ಆಶ್ಚರ್ಯಪಡುತ್ತ ರಾಕ್ಷಸರನ್ನು ಕುರಿತು ಹಿಂದಿನ ವಿಷಯವನ್ನು ಸ್ಮರಿಸಿಕೊಳ್ಳುತ್ತ ಇಂತೆಂದು ಹೇಳಿದನು.

೧೩೩. ಪೂರ್ವದಲ್ಲಿ ಬ್ರಹ್ಮನು ಮನುಷ್ಯನಿಂದಲೇ ನನಗೆ ಮರಣವಾಗುವುದೆಂದು ಹೇಳಿದ್ದನು. ಆದುದರಿಂದ ನಾರಾಯಣನೇ ಈ ಮನುಷ್ಯನಾದ ರಾಮನ ರೂಪವಾಗಿ ಹುಟ್ಟಿರುವನು.

ರಾಮೋ ದಾಶರಥಿರ್ಭೂತ್ವಾ ಮಾಂ ಹಂತುಂ ಸಮುಪಸ್ಥಿತಃ ।
ಯದಾ ಪೂರ್ವಮನರಣ್ಯಸ್ಸ ಹತೋ ದೀಕ್ಷಿತೋ ಮಯಾ ॥ ೧೩೪ ॥

ತದಾ ಶಪ್ತಶ್ಚ ತೇನಾಹಂ ಸೂರ್ಯವಂಶೋದ್ಭವೇನ ಹಿ ।
ಉತ್ಪತ್ಸ್ಯತೇ ಚ ಮದ್ವಂಶೇ ಪರಮಾತ್ಮಾ ಸನಾತನಃ ॥ ೧೩೫ ॥

ಸ ಏವ ತ್ವಾಂ ಪುತ್ರಪೌತ್ರೈರ್ಬಾಂಧವೈರ್ವಿಹನಿಷ್ಯತಿ ।
ಇತ್ಯುಕ್ತ್ವಾ ಸ ಯಯೌ ನಾಕಂ ಸೋಽಧುನಾ ಸಮಯೋ ಮಮ ॥ ೧೩೬ ॥

ಸಮಾಗತೋ ರಾಘವೋ ಮಾಂ ಸಮರೇ ಸ ಹನಿಷ್ಯತಿ ।
ವಿಬೋಧ್ಯ ಕುಂಭಕರ್ಣಂ ಮಾಂ ಆನಯಧ್ವಂ ತ್ವರಾನ್ವಿತಾಃ ॥ ೧೩೭ ॥

---

೧೩೪. ಆ ರಾಮನು ದಶರಥನ ಹೊಟ್ಟೆಯಲ್ಲಿ ಹುಟ್ಟಿ ನನ್ನನ್ನು ಕೊಲ್ಲಲು ಬಂದಿರುವನು. ಪೂರ್ವದಲ್ಲಿ ಯಾಗದಲ್ಲಿ ದೀಕ್ಷಿತನಾಗಿದ್ದ ಅನರಣ್ಯನನ್ನು ನಾನು ಕೊಂದೆನು.

೧೩೫. ಆಗ ಸೂರ್ಯವಂಶದಲ್ಲಿ ಹುಟ್ಟಿದ್ದ ಆ ಅನರಣ್ಯನು ಎಲೈ ರಾವಣನೆ ! ನನ್ನ ವಂಶದಲ್ಲಿ ಸನಾತನನಾದ ಪರಮಾತ್ಮನು ಹುಟ್ಟುವನು.

೧೩೬. ಅವನೇ ನಿನ್ನನ್ನು ಪುತ್ರ ಪೌತ್ರ ಬಂಧುಗಳ ಸಹಿತವಾಗಿ ಕೊಲ್ಲುವನು. ಹೀಗೆಂದು ಹೇಳಿ ಸ್ವರ್ಗಸ್ಥನಾದನು. ಈಗ ಆ ಸಮಯವು ಬಂದಿರುವುದು.

೧೩೭. ಅದೇ ರೀತಿಯಾಗಿ ರಾಮನು ಈಗ ಇಲ್ಲಿಗೆ ಬಂದಿರುವನು. ಯುದ್ಧದಲ್ಲಿ ಕೊಲ್ಲುವನು. ಕುಂಭಕರ್ಣನನ್ನೂ ಕೂಡ ಎಚ್ಚರಿಸಿ ಜಾಗ್ರತೆಯಾಗಿ ಇಲ್ಲಿಗೆ ಕರೆತನ್ನಿರಿ.

ತತಸ್ತೇ ತಾಂ ಗುಹಾಂ ಗತ್ವಾ ತಚ್ಛ್ವಾಸೇನ ವಿಕರ್ಷಿತಾಃ ।
ಯಾತಾಯಾತೇ ಪ್ರಚಕ್ರುಸ್ತೇ ಕುಂಭಕರ್ಣೋದರೇ ಮುಹುಃ ॥ ೧೩೮ ॥

ತದೈಕತ್ರ ಬಾಹುಪಾಶೈರ್ಬಲಂ ಕೃತ್ವಾಥ ರಾಕ್ಷಸಾಃ ।
ಗತ್ವಾ ತದಂತಿಕಂ ಭೀತಾ ನಿಜಘ್ನುಸ್ತಂ ದ್ರುಮೈಃ ಪದೈಃ ॥ ೧೩೯ ॥

ಶಿಲಾಭಿಸ್ತಾಡಯಾಮಾಸುಶ್ಚಾಶ್ವೈರುಷ್ಟ್ರೈರ್ವ್ಯಚೂರ್ಣಯನ್ ।
ಕಾಷ್ಠಭಾರೈರ್ಮಹಾದಾಹಂ ದೇಹೇ ಚಕ್ರುರ್ನೃಪಾಜ್ಞಯಾ ॥ ೧೪೦ ॥

ತದಾ ಪ್ರಬುದ್ಧಶ್ಚೋತ್ಥಾಯ ಸೂಕರಾನ್ ಮಹಿಷಾನ್ ವರಾನ್ ।
ಕೋಟಿಶಃ ಸ್ವಮುಖೇ ಕ್ಷಿಪ್ತ್ವಾ ಜಲವಾಪೀರ್ವಿಶೋಷ್ಯ ಸಃ ॥ ೧೪೧ ॥

---

೧೩೮. ಆಗ ಆ ದೂತರು ರಾವಣನ ಮಾತಿನಂತೆ ಕುಂಭಕರ್ಣನು ಮಲಗಿದ್ದ ಗುಹೆಗೆ ಹೋಗಿ ಅವನ ಶ್ವಾಸಕ್ಕೆ ಸಿಕ್ಕಿ ಉಸಿರನ್ನು ಎಳೆದುಕೊಂಡಾಗ ಅವನ ದೇಹದೊಳಕ್ಕೆ ಹೋಗುತ್ತಲೂ ಉಸಿರನ್ನು ಬಿಟ್ಟಾಗ ಹೊರಕ್ಕೆ ಬರುತ್ತಲೂ ಹೀಗೆ ಯಾತಾಯಾತಗಳನ್ನು ಮಾಡುತ್ತಿದ್ದರು.

೧೩೯. ಅನಂತರ ಅವರು ತಮ್ಮ ಕೈಗಳಿಂದ ಒಂದೊಂದು ಜಾಗದಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಮೆಲ್ಲಗೆ ಅವನ ಬಳಿಗೆ ಹೋಗಿ ಅವನನ್ನು ಮರಗಳಿಂದ ಹೊಡೆಯುತ್ತ ಕಾಲುಗಳಿಂದ ಒದೆಯುತ್ತಿದ್ದರು.

೧೪೦. ಕಲ್ಲುಗಳನ್ನು ತೆಗೆದುಕೊಂಡು ಹೊಡೆದರು. ಕುದುರೆ ಒಂಟೆಗಳನ್ನು ಕೊಂಡು ಹೋಗಿ ತುಳಿಸಿದರು. ರಾವಣನ ಮಾತಿನಂತೆ ಸೌದೆಯನ್ನು ಅವನ ಮೇಲೆ ಹಾಕಿ ಬೆಂಕಿಯನ್ನು ಹತ್ತಿಸಿದರು.

೧೪೧. ಅನಂತರ ಆ ಕುಂಭಕರ್ಣನು ಎಚ್ಚೆತ್ತನು. ಹಸಿವಾಗಲು ಹಂದಿಗಳನ್ನೂ ಎಮ್ಮೆಗಳನ್ನೂ ಅನೇಕವಾಗಿ ತಿಂದು ಸಿಹಿ ನೀರಿನ ಬಾವಿಗಳಿಗೆ ಹೋಗಿ ಅವುಗಳು ಶೋಷಿಸುವವರೆಗೂ ಕುಡಿದನು.

ಗತ್ವಾ ನತ್ವಾ ರಾಕ್ಷಸೇಂದ್ರಂ ಬೋಧಯಾಮಾಸ ರಾವಣಂ ।
ಏಕದಾಹಂ ವನೇ ಗತ್ವಾ ದೃಷ್ಟ್ವಾ ತಂ ನಾರದಂ ಮುನಿಂ ॥ ೧೪೨ ॥

ಪೃಷ್ಟವಾಸ್ತ್ವಂ ಕುತ್ರ ಯಾತಃ ಕುತಶ್ಚಾಗಮನಂ ಕೃತಂ ।
ಸ ಮಾಂ ಪ್ರಾಹ ದೇವಲೋಕಾದಯೋಧ್ಯಾಂ ಪ್ರತಿ ಗಮ್ಯತೇ ॥ ೧೪೩ ॥

ರಾವಣಾದೀನ್ ರಣೇ ಹಂತುಂ ವಿಷ್ಣುರ್ಜಾತೋತ್ರ ಮಾನುಷಃ ।
ದೇವವಾಕ್ಯಾತ್ತ್ವರಯಿತುಂ ರಾಮಂ ಗಚ್ಛಾಮ್ಯಹಂ ಜವಾತ್ ॥ ೧೪೪ ॥

ಇತ್ಯುಕ್ತ್ವಾ ಮಾಂ ಗತಸ್ಸೋಽಥ ಪ್ರೇಷಯಾಮಾಸ ರಾಘವಂ ।
ಇತಿಶ್ರುತಂ ಮಯಾ ಪೂರ್ವಂ ತವಾಗ್ರೇ ತನ್ನಿವೇದಿತಂ ॥ ೧೪೫ ॥

---

೧೪೨. ಅನಂತರ ರಾವಣನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿದನು. ಮತ್ತು ವಿಷಯಗಳೆಲ್ಲವನ್ನೂ ಕೇಳಿ ಇಂತೆಂದು ಬುದ್ಧಿ ಹೇಳಿದನು. ಎಲೈ ದೊರೆಯೆ! ನಾನು ಒಂದುಬಾರಿ ಕಾಡಿಗೆ ಹೋಗಿದ್ದಾಗ ಅಲ್ಲಿ ನಾರದನನ್ನು ಕಂಡೆನು.

೧೪೩. ಆಗ ನಾನು ಅವನನ್ನು ಕುರಿತು ಎಲೈ ನಾರದನೆ! ಎಲ್ಲಿಗೆ ಹೊರಟೆ? ಎಲ್ಲಿಂದ ಬಂದೆ? ಎಂದು ಕೇಳಲು ಆಗ ಅವನು ಎಲೈ ಕುಂಭ ಕರ್ಣನೆ! ನಾನು ಅಯೋಧ್ಯೆಗೆ ಹೋಗುತ್ತೇನೆ.

೧೪೪. ರಾವಣನೇ ಮುಂತಾದ ರಾಕ್ಷಸರನ್ನು ಕೊಲ್ಲಲು ಅಲ್ಲಿ ವಿಷ್ಣುವು ಮನುಷ್ಯರೂಪದಿಂದ ಹುಟ್ಟಿದ್ದಾನೆ. ದೇವತೆಗಳ ಮಾತಿನಂತೆ ಅವನನ್ನು ಆ ಕೆಲಸವನ್ನು ಬೇಗಮಾಡುವಂತೆ ಹೇಳಲು ಹೋಗುತ್ತಿದ್ದೇನೆ.

೧೪೫. ಅವನು ಹೀಗೆಂದು ನನಗೆ ಹೇಳಿ ಹೊರಟು ಹೋದನು. ಆ ರಾಮನನ್ನು ಕಳುಹಿಸಿರುವನು. ಎಂಬುದಾಗಿ ನಾನು ಹಿಂದೆ ಕೇಳಿದ್ದೆನು. ಅದನ್ನು ನಿನ್ನೆದುರಿಗೆ ಹೇಳಿದ್ದೇನೆ.

ಅತೋಽರ್ಪಯಾದ್ಯ ರಾಮಾಯ ಸೀತಾಂ ಸ್ಯಖಂ ಕುರು ಪ್ರಭೋ ।
ಇತಿ ತದ್ವಚನಂ ಶ್ರುತ್ವಾ ರಾವಣಸ್ತಂ ವಚೋಽಬ್ರವೀತ್ ॥ ೧೪೬ ॥

ನಿದ್ರಾವ್ಯಾಪ್ತೇಕ್ಷಣೇ ತೇಽದ್ಯ ಗಚ್ಛ ನಿದ್ರಾಂ ಸುಖಂ ಕುರು ।
ತದ್ಬಂಧೋಃ ಕ್ರೂರವಚನಂ ಶ್ರುತ್ವಾ ನತ್ವಾಥ ರಾವಣಂ ॥ ೧೪೭ ॥

ಜವಾದ್ಯಯೌ ಸ ಯುದ್ಧಾಯೋಲ್ಲಂಘ್ಯ ಪ್ರಾಸಾದಮುನ್ನತಂ ।
ಕುಂಭಕರ್ಣಂ ತತ್ರ ದೃಷ್ಟ್ವಾ ಕಪಯೋ ಭಯವಿಹ್ವಲಾಃ ॥ ೧೪೮ ॥

ಚಕ್ರುಃ ಪಲಾಯನಂ ಸರ್ವೇ ರಾಮಪಾರ್ಶ್ವಮುಪಾಗತಾಃ ।
ಕುಂಭಕರ್ಣಂ ತತ್ರ ದೃಷ್ಟ್ವಾ ಪ್ರಣನಾಮ ವಿಭೀಷಣಃ ॥ ೧೪೯ ॥

---

೧೪೬. ಆದುದರಿಂದ ಈಗ ನೀನು ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ಮತ್ತು ಆವನೊಡನೆ ಸ್ನೇಹವನ್ನು ಮಾಡಿಕೋ. ಎಂದೆನಲು ಅದನ್ನು ಕೇಳಿ ರಾವಣನು ಕುಂಭಕರ್ಣನನ್ನು ಕುರಿತು ಇಂತೆಂದನು.

೧೪೭. ಎಲೈ ಕುಂಭಕರ್ಣನೆ! ನಿನ್ನ ಕಣ್ಣುಗಳು ನಿದ್ದೆಯಿಂದ ಕೂಡಿಕೊಂಡಿವೆ. ಹೋಗು ಸುಖವಾಗಿ ನಿದ್ದೆಯನ್ನು ಮಾಡು. ಎಂದೆನ್ನಲು ಅಣ್ಣನ ಕ್ರೂರವಾದ ಈ ಮಾತುಗಳನ್ನು ಕೇಳಿ ರಾವಣನಿಗೆ ನಮಸ್ಕರಿಸಿದನು.

೧೪೮. ಅನಂತರ ಅಲ್ಲಿಂದ ಹೊರಟು ಬೇಗನೆ ಕೋಟೆಯನ್ನು ದಾಟಿಕೊಂಡೇ ಯುದ್ಧರಂಗಕ್ಕೆ ಹೋದನು. ಈ ಕುಂಭಕರ್ಣನನ್ನು ಕಪಿಗಳು ನೋಡಿ ಬಹುವಾಗಿ ಭಯಪಟ್ಟುವು.

೧೪೯. ಓಡಿಹೋಗಿ ಎಲ್ಲವೂ ರಾಮನ ಪಕ್ಕದಲ್ಲಿ ನಿಂತುಕೊಂಡುವು ಆ ಯುದ್ಧರಂಗದಲ್ಲಿ ವಿಭೀಷಣನು ಕುಂಭಕರ್ಣನನ್ನು ನೋಡಿ ಅವನಿಗೆ ನಮಸ್ಕರಿಸಿದನು.

ಉವಾಚ ಪ್ರಣತೋ ಭೂತ್ವಾ ಮಯಾ ರಾಜಾತಿಬೋಧಿತಃ ।
ಸೀತಾಂ ರಾಮಾಯ ದೇಹೀತಿ ತೇನ ಧಿಕ್ ಧಿಕ್ ಕೃತಸ್ತ್ವಹಂ ॥ ೧೫೦ ॥

ತಚ್ಛ್ರುತ್ವಾಹಂ ರಾಘವಸ್ಯ ಸೇವಾಂ ಕರ್ತುಮುಪಾಗತಃ ।
ತಚ್ಛ್ರುತ್ವಾ ಬಂಧುವಚನಂ ಕುಂಭಕರ್ಣಸ್ತಮಬ್ರವೀತ್ ॥ ೧೫೧ ॥

ಸಮ್ಯಕ್ಕೃತಂ ತ್ವಯಾ ವತ್ಸ ಮದಗ್ರೇ ಮಾ ಸ್ಥಿರೋ ಭವ ।
ಯುದ್ಧೇ ಸ್ವೀಯಃ ಪರೋ ವಾತ್ರ ಜ್ಞಾಯತೇ ನ ಮಯಾದ್ಯ ಹಿ ॥೧೫೨॥

ತತೋ ಬಂಧುಂ ನಮಸ್ಕೃತ್ಯ ರಾಮಪಾರ್ಶ್ವಮುಪಾಯಯೌ ।
ಕುಂಭಕರ್ಣೋಽಪಿ ಹಸ್ತಾಭ್ಯಾಂ ಪಾದಾಭ್ಯಾಂ ಪೇಷಯರ್ನ್ ಹರೀನ್॥ ೧೫೩ ॥

---

೧೫೦. ಮತ್ತು ಎಲೈ ಅಣ್ಣನೆ! ನಾನು ರಾಮನಿಗೆ ಸಿತೆಯನ್ನು ಒಪ್ಪಿಸಿ ಬಿಡು. ಎಂದು ಹೇಳಿದೆನು. ಅವನು ಅದನ್ನು ಕೇಳದೆ ನನ್ನನ್ನು ಧಿಕ್ಕಾರಮಾಡಿ ಓಡಿಸಿದನು ಎಂದನು.

೧೫೧. ಆದ್ದರಿಂದ ನಾನು ರಾಘವನ ಸೇವೆಯನ್ನು ಮಾಡಲು ಬಂದೆನು. ಎಂದು ಹೇಳಲು ತಮ್ಮನ ಆ ಮಾತನ್ನು ಕೇಳಿ ಕುಂಭಕರ್ಣನು ಇಂತೆಂದನು.

೧೫೨. ಎಲೈ ವತ್ಸನೇ! ನೀನು ಮಾಡಿದ ಕೆಲಸವು ಉತ್ತಮವಾದುದು. ನೀನು ನನ್ನೆದುರಿಗೆ ನಿಲ್ಲಬೇಡ. ನನಗೆ ಯುದ್ಧದಲ್ಲಿ ನಮ್ಮವರೆಂದಾಗಲೀ ಶತ್ರುಗಳೆಂದಾಗಲೀ ಗೊತ್ತಾಗುವುದಿಲ್ಲ.

೧೫೩. ಅನಂತರ ವಿಭೀಷಣನು ಅಣ್ಣನಿಗೆ ನಮಸ್ಕರಿಸಿ ರಾಮನ ಬಳಿಗೆ ಬಂದನು. ಕುಂಭಕರ್ಣನು ಕೈಗಳಿಂದಲೂ ಕಾಲುಗಳಿಂದಲೂ ಕಪಿಗಳನ್ನು ತಿಕ್ಕಿ ಕೊಂದನು.

ಚಚಾರ ವಾನರೀಂ ಸೇನಾಂ ತತ್ರ ದೃಷ್ಟ್ವಾ ಕಪೀಶ್ವರಂ ।
ತ್ರಿಶೂಲೇನಾಥ ತಂ ಭಿತ್ವಾನಯಾಮಾಸ ಪುರೀಂ ಮುದಾ ॥ ೧೫೪ ॥

ಮಾರ್ಗೇ ಸ್ವಸ್ಥಸ್ಸ ಸುಗ್ರೀವಃ ಕರ್ಣೌ ಘ್ರಾಣಂ ರಿಪೋರ್ನಖೈಃ ।
ಛಿತ್ವಾ ಯಯೌ ರಾಘವೇಂದ್ರಂ ಸೋಽಪಿ ಪೌರೈರ್ವಿಲಜ್ಜಿತಃ ॥ ೧೫೫ ॥

ಪುನರ್ಯಯೌ ರಣಭುವಂ ತಂ ದೃಷ್ಟ್ವಾ ರಘುನಂದನಃ ।
ವಿವ್ಯಾಧ ನಿಶಿತೈರ್ಬಾಣೈಸ್ಸೋಽಪಿ ರಾಮಂ ದ್ರುಮೈರ್ನಗೈಃ ॥ ೧೫೬ ॥

ತಾಡಯಾಮಾಸ ತಾನ್ಬಾಣೈರ್ನಿವಾರ್ಯ ರಘುನಂದನಃ ।
ವಾಯುವ್ಯಸ್ತ್ರೇಣ ಚಿಚ್ಛೇದ ತದ್ಧಸ್ತೌ ಸಾಯುಧೌ ಕ್ಷಣಾತ್ ॥ ೧೫೭ ॥

---

೧೫೪. ಹೀಗೆ ಕೊಲ್ಲುತ್ತಾ ವಾನರ ಸೇನೆಯಲ್ಲಿ ಸುತ್ತುತ್ತ ಸುಗ್ರೀವನನ್ನು ಹಿಡಿದು ತ್ರಿಶೂಲಕ್ಕೆ ಚುಚ್ಚಿಕೊಂಡು ಪಟ್ಟಣಕ್ಕೆ ತೆಗೆದುಕೊಂಡು ಹೋಗುತ್ತಿದ್ದನು.

೧೫೫. ಕುಂಭಕರ್ಣನು ತನ್ನನ್ನು ಊರಿನೊಳಕ್ಕೆ ತೆಗೆದುಕೊಂಡು ಹೋಗುವುದನ್ನು ತಿಳಿದು ಸುಗ್ರೀವನು ಸುಮ್ಮನಿದ್ದು ದಾರಿಯಲ್ಲಿ ತ್ರಿಶೂಲದಿಂದ ಬಿಡಿಸಿಕೊಂಡು ಆ ಕುಂಭಕರ್ಣನ ಕಿವಿ ಮೂಗುಗಳನ್ನು ಉಗುರುಗಳಿಂದ ಜಿಗುಟಿ ಕಿತ್ತುಕೊಂಡು ರಾಮನ ಬಳಿಗೆ ಹೋದನು. ಇತ್ತ ಕುಂಭಕರ್ಣನು ಲಜ್ಜೆಪಡುತ್ತ ಊರಿಗೆ ಹೋದನು.

೧೫೬. ಅಲ್ಲಿ ಜನರು ನಾಚಿಕೆಪಡಿಸಲು ಅನಂತರ ಕುಂಭಕರ್ಣನು ಮತ್ತೆ ಯುದ್ಧರಂಗಕ್ಕೆ ಹೋದನು. ಅವನನ್ನು ನೋಡಿ ರಾಮನು ಹರಿತವಾದ ಬಾಣಗಳಿಂದ ಹೊಡೆದನು. ಅವನೂ ಕೂಡ ರಾಮನನ್ನು ಮರಗಳಿಂದಲೂ ಕಲ್ಲುಗಳಿಂದಲೂ ಹೊಡೆದನು.

೧೫೭. ಅವೆಲ್ಲವನ್ನೂ ರಾಮನು ಬಾಣಗಳಿಂದ ತಡೆದು ವಾಯುವ್ಯಾಸ್ತ್ರವನ್ನು ಬಿಟ್ಟು ಆಯುಧಗಳೊಡನೆಯೇ ಅವನ ಕೈಗಳನ್ನು ಕ್ಷಣಕಾಲದಲ್ಲಿಯೇ ಕತ್ತರಿಸಿದನು.

ಛಿನ್ನಬಾಹುಮಥಾಯಾಂತಂ ನದಂತಂ ವೀಕ್ಷ್ಯ ರಾಘವಃ ।
ದ್ವಾವರ್ಧಚಂದ್ರೌ ನಿಶಿತಾವಾದಾಯಾಸ್ಯ ಪದದ್ವಯಂ ॥ ೧೫೮ ॥

ಚಿಚ್ಛೇದ ಪತಿತೌ ಪಾದೌ ಲಂಕಾದ್ವಾರಿ ಮಹಸ್ವನೌ ।
ನಿಕೃತ್ತಪಾಣಿಪಾದೋಽಪಿ ಕುಂಭಕರ್ಣೋಽತಿಭೀಷಣಃ ॥ ೧೫೯ ॥

ಬಡಬಾಮುಖವದ್ವಕ್ತ್ರಂ ವ್ಯಾದಾಯ ರಘುನಂದನಂ ।
ಅಭಿದುದ್ರಾವ ವಿನರ್ದ ರಾಹುಶ್ಚಂದ್ರಮಸಂ ಯಥಾ ॥ ೧೬೦ ॥

ಅಪೂರಯಚ್ಛಿತಾಗ್ರೈಶ್ಚ ಸಾಯಕೈಸ್ತದ್ರಘೂತ್ತಮಃ ।
ಶರಪೂರಿತವಕ್ತ್ರೋಽಸೌ ಚುಕ್ರೋಶಾತಿಭಯಂಕರಃ ॥ ೧೬೧ ॥

ಅಥ ಸೂರ್ಯ ಪ್ರತೀಕಾಶಮೈಂದ್ರಂ ಶರಮನುತ್ತಮಂ ।
ಮುಮೋಚ ತೇನ ಚಿಚ್ಛೇದ ಕುಂಭಕರ್ಣಶಿರೋಮಹತ್ ॥ ೧೬೨ ॥

---

೧೫೮. ಅವನು ತನ್ನ ಕೈಗಳು ಕತ್ತರಿಸಿ ಹೋದರೂ ಕೂಗುತ್ತ ಮೇಲೆ ಬೀಳಲು ಬರುತ್ತಿರುವುದನ್ನು ರಾಮನು ನೋಡಿ ಎರಡು ಅರ್ಧಚಂದ್ರಾಕಾರವಾದ ಬಾಣಗಳನ್ನು ಬಿಟ್ಟು ಎರಡು ಕಾಲುಗಳನ್ನೂ ಕತ್ತರಿಸಿದನು.

೧೫೯. ಆ ಕಾಲುಗಳು ಭೋರೆಂದು ಸದ್ದುಮಾಡುತ್ತ, ಲಂಕೆಯ ಬಾಗಿಲಲ್ಲಿ ಹೋಗಿಬಿದ್ದುವು. ಈ ರೀತಿಯಾಗಿ ಕುಂಭಕರ್ಣನು ಕೈಕಾಲುಗಳನ್ನು ಕಳೆದು ಕೊಂಡನು.

೧೬೦. ಆದರೂ ಕೂಡ ಕುಂಭಕರ್ಣನು ಬಡಬೆಯೆಂಬ ಕುದುರೆಯಂತೆ ಬಾಯನ್ನು ತೆರೆದುಕೊಂಡು ರಾಮನಮೇಲೆ ಬೀಳುವುದಕ್ಕೆ ರಾಹುವು ಚಂದ್ರನ ಮೇಲೆ ಬೀಳುವುದಕ್ಕೆ ಬರುವಂತೆ ಬಂದನು.

೧೬೧. ರಾಮನು ಅವನ ಬಾಯಿನೊಳಕ್ಕೆ ಬಾಣಗಳನ್ನು ಬಿಟ್ಟು ತುಂಬಿದನು. ಬಾಣಗಳು ಬಾಯಿತುಂಬ ತುಂಬಿಕೊಳ್ಳಲು ಬಹು ಭಯಂಕರವಾಗಿ ಕಿರಿಚಲು ಮೊದಲು ಮಾಡಿದನು.

೧೬೨. ಅನಂತರ ರಾಮನು ಸೂರ್ಯನಂತೆ ಹೊಳೆಯುವ ಇಂದ್ರಾಸ್ತ್ರವನ್ನು ತೆಗೆದು ಅದರಿಂದ ಅವನ ಕತ್ತನ್ನು ಕತ್ತರಿಸಿದನು.

ತದಾ ಖೇ ದೇವವಾದ್ಯಾನಿ ನೇದುಃ ಕುಸುಮವೃಷ್ಟಿಭಿಃ ।
ವವರ್ಷುರಮರಾ ರಾಮಂ ತುಷ್ಟುವುರ್ವಿವಿಧೈಃ ಸ್ತವೈಃ ॥ ೧೬೩ ॥

ಪಿತೃವ್ಯಂ ನಿಹತಂ ಶ್ರುತ್ವಾ ಪಿತರಂ ಚಾಪಿ ವಿಹ್ವಲಂ ।
ರಾವಣಿಸ್ಸಾಂತ್ವಯಾಮಾಸ ತ್ವಂ ಮೇ ಪಶ್ಯಾದ್ಯ ವೈ ಬಲಂ ॥ ೧೬೪ ॥

ಇತ್ಯುಕ್ತ್ವಾ ತ್ವರಿತಂ ಗತ್ವಾ ಮೇಘನಾದೋ ನಿಕುಂಭಿಲಾಂ ।
ರಕ್ತಮಾಲ್ಯಾಂಬರಧರೋ ಹವನಾಯೋಪ ಚಕ್ರಮೇ ॥ ೧೬೫ ॥

ರಥಾರ್ಥಂ ದಿವ್ಯಶಸ್ತ್ರಾರ್ಥಂ ಜಯಾರ್ಥಮಭಿಚಾರಕೈಃ ।
ಯೋಗಿನೀವಟಾಧೋ ಭೂಮ್ಯಾಂ ಗುಹಾಯಾಂ ಸಂಸ್ಥಿತೋ ರಹಃ ॥

---

೧೬೩. ಆಗ ದೇವತೆಗಳು ಅಂತರಿಕ್ಷದಲ್ಲಿ ವಾದ್ಯಗಳನ್ನು ನೊಳಗಿಸಿದರು. ರಾಮುನಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ವಿಧವಿಧವಾದ ಸ್ತೋತ್ರಗಳಿಂದ ರಾಮುನನ್ನು ಸ್ತುತಿಸಿದರು.

೧೬೪. ಚಿಕ್ಕಪ್ಪನು ಸತ್ತುದನ್ನೂ ತಂದೆಯು ಬಹುವಾಗಿ ದುಃಖಗೊಂಡಿರುವುದನ್ನೂ ಮೇಘನಾದನು ಕೇಳಿ ತಂದೆಯಬಳಿಗೆ ಹೋಗಿ ಎಲೈ ತಂದೆಯೆ! ನನ್ನ ಬಲವನ್ನು ಈಗ ನೋಡು. ನೀನು ದುಃಖಿಸಬೇಡ. ಎಂದು ಹೇಳಿ ಸಮಾಧಾನಪಡಿಸಿದನು.

೧೬೫. ಹೀಗೆಂದು ಹೇಳಿ ಒಡನೆಯೆ ಬೇಗ ಬೇಗನೆ ನಿಕುಂಭಿಳೆಗೆ ಹೋದನು. ಅಲ್ಲಿ ಕೆಂಪಾದ ಹೂಮಾಲೆಯನ್ನು ಧರಿಸಿ ಹೋಮಮಾಡಲು ಮೊದಲು ಮಾಡಿದನು.

೧೬೬. ಅಲ್ಲಿ ಯೋಗಿನೀವಟವೆಂಬ ಆಲದಮರದ ಕೆಳಗೆ ಭೂಮಿಯಲ್ಲಿರುವ ಗುಹೆಯಲ್ಲಿ ಗುಟ್ಟಾಗಿ ಕುಳಿತು ದಿವ್ಯವಾದ ರಥಕ್ಕೂ ದಿವ್ಯವಾದ ಶಸ್ತ್ರಕ್ಕೂ ಜಯುವನ್ನು ಹೊಂದುವುದಕ್ಕೂ ಅಭಿಚಾರಪ್ರಯೋಗವನ್ನು ಮಾಡಲು ಉಪಕ್ರಮಿಸಿದನು.

ತೋಯಾನಿಲಾನಲವ್ಯಾಘ್ರಸರ್ಪರಾಕ್ಷಸ ಕಂಟಕೈಃ |
ಆತ್ಮನಃ ಪರಿತಃ ಕೃತ್ವಾ ಪರಿಧೀನ್ ಸಪ್ತ ದುರ್ಗವರ್ಾ ॥ ೧೬೭ ॥

ಹೋಮ ಕುಂಡೋರ್ಧ್ವತಸ್ಸರ್ಪಂ ಬದ್ಧ್ವಾ ಕೃಷ್ಣಮಧೋಮುಖಂ |
ರಕ್ತಪುಷ್ಪಾಂಬರಧರೋ ರಕ್ತಚಂದನಲೇಪಿತಃ ॥ ೧೬೮ ॥

ರಕ್ತಪುಷ್ಪಾಕ್ಷತಾ ಗುಂಜಾ ಸರ್ಷಪೈಶ್ಚಂದನೇಕ್ಷುಭಿಃ |
ಖದಿರಾಮ್ರ ಪಲಾಶೋದುಂಬರ ಭಲ್ಲಾತಕಾಸ್ಥಿಭಿಃ ॥ ೧೬೯ ॥

ಸಮಿದ್ಭಿರ್ಮಾಷ ಮಾಂಸಾದಿ ಭಲ್ಲಾತಕಫಲೈರಪಿ |
ಅರ್ಕನಿಂಬ ಬೀಜಪೂರಕೃಷ್ಣಧುತ್ತೂರ ರೋಚನೈಃ ॥ ೧೭೦ ॥

ಅಪಾಮಾರ್ಗ ಬದರಿಕಾ ನಲದಾಲಕ ಬಂಧುಕೈಃ ।
ನರಮುಂಡೈರ್ಮರ್ತ್ಯಮಾಂಸೈರ್ಬಿಭೀತಕಫಲಾದಿಭಿಃ ॥ ೧೭೧ ॥

---

೧೬೭. ನೀರು, ಗಾಳಿ, ಬೆಂಕಿ, ಹುಲಿ, ಸರ್ಪ, ರಾಕ್ಷಸರು ಮುಳ್ಳುಗಳು ಇವುಗಳಿಂದ ಒಂದೊಂದಾಗಿ ಏಳು ಕೋಟೆಗಳನ್ನು ತನ್ನ ಸುತ್ತಲೂ ಕಟ್ಟಿಕೊಂಡಿದ್ದನು. ಅನಂತರ ದುರ್ಗಮವಾದ ಕಟ್ಟೆಗಳನ್ನು ತನ್ನ ಸೂತ್ತಲೂ ಮಾಡಿಕೊಂಡನು.

೧೬೮. ಹೋಮಕುಂಡದ ಮೇಲೆ ಕೃಷ್ಣಸರ್ಪವನ್ನು ತಲೆಕೆಳಗಾಗಿ ಕಟ್ಟಿದನು. ಕೆಂಪುಹೂವನ್ನು ಮುಡಿದುಕೊಂಡು ಕೆಂಪುಬಟ್ಟೆಯನ್ನು ಧರಿಸಿಕೊಂಡನು. ಮೈಗೆಲ್ಲವೂ ಕೆಂಪುಗಂಧವನ್ನು ಪೂಸಿಕೊಂಡನು.

೧೬೯. ಕೆಂಪುಹೂವು ಕೆಂಪುಅಕ್ಷತೆ ಕೆಂಪುಗುಲಗಂಜಿ ಸಾಸುವೆ ರಕ್ತಚಂದನ ಕೆಂಪುಕಬ್ಬು ಕಗ್ಗಲಿ, ಮಾವು, ಮುತ್ತುಗ, ಅತ್ತಿ, ಗೇರು, ಮೂಳೆ, ಇವುಗಳನ್ನು ಸಮಿತ್ತುಗಳನ್ನಾಗಿ ಮಾಡಿಕೊಂಡನು.

೧೭೦–೧೭೧. ಉದ್ದು ಮಾಂಸ ಗೇರುಹಣ್ಣು ಎಕ್ಕ ಬೇವು ಸೀಬೆ ಕಪ್ಪು ಉಮ್ಮತ್ತ ಗೋರೋಚನ ಉತ್ತರಣೆ ಯುಗಚಿ ಲಾಮಂಚ ದಾಸವಾಳ ನರಮಾಂಸ ನರರ ತಲೆಬುರುಡೆ ತಾಳೆಹಣ್ಣು ಹಾವಿನಚೂರು ಕಪ್ಪೆ ಚರ್ಮ ಹುಲ್ಲು

ಸರ್ಪಖಂಡೈಶ್ಚ ಮಂಡೂಕೈಃ ತ್ವಗ್ದಂತ ಸ್ನಾಯುಲೋಮಭಿಃ ।
ನಾನಾವದಚರಾಣಾಂ ಚ ಮಾಂಸೈರಪಿ ಸಮಂತ್ರಕಂ ॥ ೧೭೨ ॥

ಇತ್ಥಂ ಚಕಾರ ಹೋಮಂ ಸ ನಿಮೀಲ್ಯ ನಯನೇ ರಹಃ ।
ವಿಭೀಷಣೋಽಪಿ ತಂ ದೃಷ್ಟ್ವಾ ಹೋಮಧೂಮ್ರಂ ಭಯಾವಹಂ ॥ ೧೭೩ ॥

ಪ್ರಾಹ ರಾಮಾಯ ಸಕಲಂ ಹೋಮಾರಂಭಂ ದುರಾತ್ಮನಃ ।
ಸಮಾಪ್ಯತೇ ಚೇದ್ಧೋಮೋಽಯಂ ಮೇಘನಾದಸ್ಯ ದುರ್ಮತೇಃ ॥ ೧೭೪ ॥

ತದಾಜಯ್ಯೋ ಭವೇದ್ರಾಮ ಮೇಘನಾದಸ್ಸುರಾಸ್ಸುರೈಃ ।
ಅತಶ್ಶೀಘ್ರಂ ಲಕ್ಷ್ಮಣೇನ ಘಾತಯಿಷ್ಯಾಮಿ ರಾವಣಿಂ ॥ ೧೭೫ ॥

ಯಸ್ತು ದ್ವಾದಶವರ್ಷಾಣಿ ನಿದ್ರಾಹಾರವಿವರ್ಜಿತಃ ।
ತೇನೈವ ಮೃತ್ಯುರ್ನಿರ್ದಿಷ್ಟೋ ಬ್ರಹ್ಮಣಾಸ್ಯ ದುರಾತ್ಮನಃ ॥ ೧೭೬ ॥

ನರ ಕೂದಲು ಅನೇಕ ಬಗೆ ಬಗೆಯಾದ ಕಾಡುಪ್ರಾಣಿಗಳ ಮಾಂಸಗಳು ಇವೆಲ್ಲವನ್ನೂ ಇಟ್ಟುಕೊಂಡು ಮಂತ್ರದಿಂದ ಅವನ್ನು ಹೋಮ ಮಾಡಿದನು.

೧೭೩. ಕಣ್ಣುಮುಚ್ಚಿಕೊಂಡು ಗುಟ್ಟಾದ ಜಾಗದಲ್ಲಿ ಹೀಗೆ ಇವುಗಳಿಂದ ಹೋಮ ಮಾಡುತ್ತಿದ್ದನು. ವಿಭೀಷಣನು ಈ ಭಯಂಕರವಾದ ಹೋಮ ಧೂಮವನ್ನು ನೋಡಿದನು.

೧೭೪–೧೭೫. ಈ ದುರಾತ್ಮನು ಮಾಡುತ್ತಿರುವ ಹೋಮದ ವಿಷಯವನ್ನು ರಾಮನಿಗೆ ಹೇಳಿದನು. ಮೇಘನಾದನ ಈ ಹೋಮವು ಪೂರ್ತಿಗೊಂಡರೆ ಆಗ ಅವನನ್ನು ಸುರಾಸುರರಲ್ಲಿ ಯಾರೂ ಜಯಿಸಲಾರರು. ಆದುದರಿಂದ ಲಕ್ಷ್ಮಣನಿಂದ ಈ ದುಷ್ಟನಾದ ಮೇಘನಾದನನ್ನು ಕೊಲ್ಲಿಸುತ್ತೇನೆ.

೧೭೬. ಯಾವನು ಹನ್ನೆರಡು ವರ್ಷಗಳ ಕಾಲ ನಿದ್ರಾಹಾರಗಳನ್ನು ಬಿಟ್ಟಿರುವನೋ ಅವನಿಂದಲೇ ಇವನು ಸಾಯಬೇಕೆಂದು ಬ್ರಹ್ಮನು ವರವನ್ನು ಇವನಿಗೆ ಕೊಟ್ಟಿರುವನು.

ಲಕ್ಷ್ಮಣೋಯಂ ಯದಾಯೋಧ್ಯಾಪುರ್ಯಾಸ್ತ್ವಾಮನುನಿರ್ಗತಃ |
ತದಾದಿನಿದ್ರಾಹಾರಾದೀನ್ ನ ಜಾನಾತಿ ರಘೂತ್ತಮ || ೧೭೭ ||

ಸೇವಾರ್ಥಂ ತವ ರಾಜೇಂದ್ರ ಜ್ಞಾತಂ ಸರ್ವಮಿದಂ ಮಯಾ |
ತತೋ ರಾಮಾಜ್ಞಯಾ ಗತ್ವಾ ಲಕ್ಷ್ಮಣೇನ ವಿಭೀಷಣಃ || ೧೭೮ ||

ಹನುಮತ್ಪ್ರಮುಖ್ಯೈರ್ವೀರೈರ್ಯೂಥಪೈಸ್ಸರ್ವತೋ ವೃತಃ |
ಲಕ್ಷ್ಮಣಂ ದರ್ಶಯಾಮಾಸ ಹೋಮಸ್ಥಾನಂ ನಿಕುಂಭಿಲಾಂ || ೧೭೯ ||

ಅಂಗದಸ್ಕಂಧಮಾರುಹ್ಯ ವಹ್ನ್ಯಸ್ತ್ರೇಣಾಥ ಕಂಟಕಾನ್ |
ಜ್ವಾಲಯಾಮಾಸ ಸೌಮಿತ್ರಿರ್ಜಘಾನ ರಾಕ್ಷಸಾನ್ ಶರೈಃ || ೧೮೦ ||

ಗರುಡಾಸ್ತ್ರೇಣ ಸರ್ಪಾಂಶ್ಚ ಪರ್ವತಾಸ್ತ್ರೇಣ ದಂಷ್ಟ್ರಿಣಃ |
ಅನಲಂ ಶಾಂತಮಕರೋತ್ ಪರ್ಜನ್ಯಾಸ್ತ್ರೇಣ ಲಕ್ಷ್ಮಣಃ || ೧೮೧ ||

---

೧೭೭. ಈ ಲಕ್ಷ್ಮಣನು ಅಯೋಧ್ಯೆಯಿಂದ ಹೊರಟು ನಿನ್ನನ್ನು ಅನುಸರಿಸಿ ದಾಗಿನಿಂದ ನಿನ್ನಸೇವೆಯಲ್ಲಿ ಆಸಕ್ತನಾಗಿ ನಿದ್ರಾಹಾರಗಳನ್ನು ಬಿಟ್ಟಿರುವನು.

೧೭೮–೧೭೯. ಎಲೈ ರಾಘವೇಂದ್ರನೆ! ನಾನು ಇದೆಲ್ಲವನ್ನೂ ತಿಳಿದು ಕೊಂಡಿದ್ದೇನೆ. ಎಂದು ಹೇಳಿ ರಾಮನ ಅಪ್ಪಣೆಯಂತೆ ವಿಭೀಷಣನು ಲಕ್ಷ್ಮಣ ನನ್ನೂ ಹನುಮಂತನೇ ಮುಂತಾದವರನ್ನೂ ಕರೆದುಕೊಂಡು ನಿಕುಂಭಿಳೆಗೆ ಹೊರಟನು. ಅನಂತರ ಲಕ್ಷ್ಮಣನಿಗೆ ಆ ಹೋಮದ ಸ್ಥಳವಾದ ನಿಕುಂಭಿಳೆಯನ್ನು ತೋರಿಸಿದನು.

೧೮೦. ಆಗ ಲಕ್ಷ್ಮಣನು ಅಂಗದನ ಹೆಗಲಮೇಲೆ ಕುಳಿತುಕೊಂಡು ಆಗ್ನೇಯಾಸ್ತ್ರವನ್ನು ತೆಗೆದುಕೊಂಡು ಬಿಟ್ಟು ಮುಳ್ಳಿನ ಕೋಟೆಯೆಲ್ಲವನ್ನೂ ಸುಟ್ಟನು. ಅನಂತರ ರಾಕ್ಷಸರಕೋಟಿಗೆ ಶರಗಳನ್ನು ಬಿಟ್ಟು ಅವರನ್ನು ಕೊಂದನು.

೧೮೧. ಗರುಡಾಸ್ತ್ರದಿಂದ ಸರ್ಪದ ಕೋಟೆಯನ್ನೂ ಪರ್ವತಾಸ್ತ್ರದಿಂದ ವ್ಯಾಘ್ರಗಳ ಕೋಟೆಯನ್ನೂ ಪರ್ಜನ್ಯಾಸ್ತ್ರದಿಂದ ಬೆಂಕಿಯ ಕೋಟೆಯನ್ನೂ ಶಾಂತವನ್ನಾಗಿ ಮಾಡಿದನು.

ಪ್ರಾಶಯಾಮಾಸ ಹನುಮಾನನಿಲಂ ಕ್ಷಣಮಾತ್ರತಃ ।
ಜಲಂ ಸಂಶೋಷಯಾಮಾಸ ವಾಯುವ್ಯಾಸ್ತ್ರೇಣ ಲಕ್ಷ್ಮಣಃ ॥ ೧೮೨ ॥

ಪರಿಘೇಷ್ವಪಿ ನಷ್ಟೇಷು ತತ್ರಾದೃಷ್ಟ್ವಾ ರಿಪೋಃ ಸ್ಥಲಂ ।
ಯಯಾವುತ್ಪಾಟಿತಂ ಕ್ರೋಧಾದ್ಧನುಮಾನ್ಯೋಗಿನೀವಟಂ ॥ ೧೮೩ ॥

ತದಾ ತಾಂ ದರ್ಶಯಾಮಾಸ ವಟಿಸ್ಥಾ ಯೋಗಿನೀ ಗುಹಾಂ ।
ಗುಹಾಪಿಧಾನಪಾಷಾಣಂ ಹನೂಮಾನ್ಪಾದಘಟ್ಟನೈಃ ॥ ೧೮೪ ॥

ಚೂರ್ಣೀಕೃತ್ಯ ಗುಹಾಸಂಸ್ಥಂ ಮೇಘನಾದಂ ವ್ಯತರ್ಜಯತ್ ।
ತದಾ ಸ ಮೇಘನಾದೋಽಪಿ ತ್ಯಕ್ತ್ವಾ ಹೋಮಂ ತ್ವರಾನ್ವಿತಃ ॥ ೧೮೫ ॥

---

೧೮೨. ಅನಂತರ ಹನುಮಂತನು ಗಾಳಿಯನ್ನು ಕ್ಷಣಕಾಲದಲ್ಲಿ ಕುಡಿದು ಆ ಕೋಟೆಯನ್ನು ನಾಶಮಾಡಿದನು. ಅನಂತರ ಲಕ್ಷ್ಮಣನು ವಾಯುವ್ಯಾಸ್ತ್ರದಿಂದ ನೀರಿನ ಕೋಟೆಯನ್ನು ನಾಶಮಾಡಿದನು.

೧೮೩. ಕೋಟೆಗಳೆಲ್ಲವೂ ಹೋದಮೇಲೆ ಶತ್ರುವಿನ ಹೋಮದ ಜಾಗವು ಕಾಣದಿರಲು ಆಗ ಹನುಮಂತನು ಯೋಗಿನೀವಟವನ್ನು ಕಿತ್ತುಹಾಕಲು ಹೊರಟನು.

೧೮೪. ಆಗ ಆ ವೃಕ್ಷದಲ್ಲಿದ್ದ ಯೋಗಿನಿಯು ಗುಹೆಯನ್ನು ತೋರಿಸಿದಳು. ಗುಹೆಯ ಬಾಗಿಲಿಗೆ ಮುಚ್ಚಿದ್ದ ಕಲ್ಲನ್ನು ಹನುಮಂತನು ಕಾಲಿನಒತ್ತದಿಂದ ಪುಡಿಪುಡಿಮಾಡಿದನು.

೧೮೫. ಅಲ್ಲಿಂದ ಒಳಗೆ ಹೋಗಿ ಮೇಘನಾದನನ್ನು ಹೆದರಿಸಿದನು. ಆಗ ಮೇಘನಾದನೂ ಕೂಡ ಹೋಮಮಾಡುವುದನ್ನು ಬಿಟ್ಟು ಅವಸರದಿಂದ ಎಂದನು.

ಕ್ರೋಧಾವಿಷ್ಟೋ ರಥೇ ಸ್ಥಿತ್ವಾ ಯಯೌ ಲಕ್ಷ್ಮಣಸಮ್ಮುಖಂ ।
ಶಸ್ತ್ರೈರಸ್ತ್ರೈಃ ಪರ್ವತಾದ್ಯೈರ್ಮರ್ಮಭಿದ್ಭಿರ್ನಿಜೋಕ್ತಿಭಿಃ ॥ ೧೮೬ ॥

ಚಕಾರ ಲಕ್ಷ್ಮಣೇನೈವ ಯುದ್ಧಂ ತತ್ತಾರಕಾಮಯಂ ।
ಸೌಮಿತ್ರಿರಪಿ ಬಾಣೌಘೈರಥಮಶ್ವಾನ್ ಧನುರ್ಧ್ವಜಂ ॥ ೧೮೭ ॥

ತದ್ದೃಢಂ ಕವಚಂ ಸೂತಂ ಬಿಭೇದ ಕ್ಷಣಮಾತ್ರತಃ ।
ತತಸ್ಸೋಽನ್ಯೇನ ಧನುಷಾ ಮುಕ್ತ್ವಾ ಬಾಣಾನ್ ಸಹಸ್ರಶಃ ॥ ೧೮೮ ॥

ಪದ್ಭ್ಯಾಮೇವಾಸ್ಥಿತೋ ಭೂಮ್ಯಾಂ ಚಿಚ್ಛೇದ ಕವಚಂ ರಿಪೋಃ ।
ತದಾಕ್ರುದ್ಧಸ್ಸಸೌಮಿತ್ರಿರ್ಬಾಣೇನೇಂದ್ರಜಿತಸ್ಯ ಹಿ ॥ ೧೮೯ ॥

ಸಶರಂ ದಕ್ಷಿಣಭುಜಂ ಪಾತಯಾಮಾಸ ತದ್ಗೃಹೇ ।
ತದಾ ಸ ವಾಮಹಸ್ತೇನ ಮೇಘನಾದೋಽತಿವಿಹ್ವಲಃ ॥ ೧೯೦ ॥

---

೧೮೬. ಕೋಪಗೊಂಡು ಒಡನೆಯೇ ರಥವನ್ನು ತರಿಸಿ ಅದರಲ್ಲಿ ಕುಳಿತು ಲಕ್ಷ್ಮಣನ ಎದುರಿಗೆ ಹೊರಟನು. ಅಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಪರ್ವತವೇ ಮುಂತಾದುವುಗಳಿಂದಲೂ ಹೊಡೆಯುತ್ತ ಕ್ರೂರವಾದ ಮಾತುಗಳನ್ನು ಆಡುತ್ತಿದ್ದನು.

೧೮೭–೧೮೮. ಈ ರೀತಿಯಾಗಿ ಲಕ್ಷ್ಮಣನೊಡನೆ ಯುದ್ಧಮಾಡುತ್ತಿರಲು ಆ ಯುದ್ಧವು ತಾರಕಾಸುರನೊಡನೆ ನಡೆದ ಯುದ್ಧದಂತಿದ್ದಿತು. ಲಕ್ಷ್ಮಣನೂ ಕೂಡ ಬಾಣಗಳನ್ನು ಬಿಟ್ಟು ಮೇಘನಾದನ ರಥವನ್ನೂ ಕುದುರೆಯನ್ನೂ ಧನುಸ್ಸನ್ನೂ ಧ್ವಜವನ್ನೂ ಅಂಗಿಯನ್ನೂ ಸೂತನನ್ನೂ ಕತ್ತರಿಸಿದನು. ಅನಂತರ ಆ ಮೇಘನಾದನು ಬೇರೆಯ ಧನುಸ್ಸನ್ನು ತೆಗೆದುಕೊಂಡನು.

೧೮೯–೧೯೦. ನೆಲದಮೇಲೆ ಕಾಲಿನಲ್ಲಿಯೇ ನಿಂತುಕೊಂಡು ಸಾವಿರಗಟ್ಟಲೆ ಯಲ್ಲಿ ಬಾಣಗಳನ್ನು ಬಿಟ್ಟನು. ಕೊನೆಗೆ ಲಕ್ಷ್ಮಣನ ಕವಚವನ್ನು ಕತ್ತರಿಸಿದನು. ಆಗ ಸೌಮಿತ್ರಿಯು ಕೋಪಗೊಂಡು ಬಾಣವನ್ನು ಬಿಟ್ಟು ಆ ಶತ್ರುವಿನ ಬಲಭುಜ ವನ್ನು ಅಲ್ಲಿಯೇ ಕತ್ತರಿಸಿದನು. ಅದು ಇಂದ್ರಜಿತುವಿನ ಮನೆಯಲ್ಲಿ ಬೀಳುವಂತೆ ಮಾಡಿದನು. ಆದರೂ ಆ ಮೇಘನಾದನು ಎಡಗೈಯಿಂದಲೇ ಎದುರಿಸಿದನು.

ದುದ್ರಾವ ಲಕ್ಷ್ಮಣಂ ಹಂತುಂ ಧೃತ್ವಾ ಶೂಲಮನುತ್ತಮಂ ।
ತಂ ಚಾಪಿ ಮಾರ್ಗಣೇನೈವ ಸಶೂಲಂ ವಾಮಸತ್ಕರಂ ॥ ೧೯೧ ॥

ಮೇಘನಾದಸ್ಯ ಸೌಮಿತ್ರಿಃ ಛಿತ್ವಾ ರಾವಣಸನ್ನಿಧೌ ।
ಪಾತಯಾಮಾಸ ಲಂಕಾಯಾಂ ತದದ್ಭುತಮಿವಾಭವತ್ ॥ ೧೯೨ ॥

ತದಾ ವ್ಯಾದಾಯ ಸ್ವಮುಖಂ ರಾವಣಿರ್ಲಕ್ಷ್ಮಣಂ ಯಯೌ ।
ಲಕ್ಷ್ಮಣೋಽಪಿ ಶರಂ ದಿವ್ಯಂ ರಾಮನಾಮಾಂಕಿತಂ ಶುಭಂ ॥ ೧೯೩ ॥

ಮುಮೋಚ ರಘುವೀರಸ್ಯ ಕೃತ್ವಾ ಚಿಂತನಮಾದರಾತ್ ।
ಸ ಶರಸ್ಸಶ್ಶಿರಸ್ತ್ರಾಣಂ ಶ್ರೀಮಜ್ಜ್ವಲಿತಕುಂಡಲಂ ॥ ೧೯೪ ॥

ಪ್ರಮಥ್ಯೇಂದ್ರಜಿತಃ ಕಾಯಾತ್ಪಾತಯಾಮಾಸ ತಚ್ಛಿರಃ ।
ತತಃ ಪ್ರಮುದಿತಾ ದೇವಾ ಸೌಮಿತ್ರಿಂ ಪರಿತುಷ್ಟುವುಃ ॥ ೧೯೫ ॥

---

೧೯೧. ಆ ಎಡಗೈಯಲ್ಲಿಯೇ ಶೂಲವನ್ನು ತೆಗೆದುಕೊಂಡು ತಿರುಗಿಸುತ್ತಾ ಲಕ್ಷ್ಮಣನನ್ನು ಹೊಡೆಯಲು ಹೋದನು. ಲಕ್ಷ್ಮಣನು ಆ ಶೂಲದೊಡನೆಯೇ ಶತ್ರುವಿನ ಎಡಗೈಯ್ಯನ್ನೂ ಕತ್ತರಿಸಿದನು.

೧೯೨–೧೯೩. ಅದನ್ನು ಕತ್ತರಿಸಿ ಲಂಕೆಯಲ್ಲಿರುವ ರಾವಣನ ಹತ್ತಿರ ಹೋಗಿ ಬೀಳುವಂತೆ ಮಾಡಿದನು. ಇದು ಬಹು ಆಶ್ಚರ್ಯಕರವಾಗಿದ್ದಿತು. ಆದರೂ ಆ ಮೇಘನಾದನು ಬಾಯನ್ನು ತೆಗೆದುಕೊಂಡು ಲಕ್ಷ್ಮಣನಮೇಲೆ ಬೀಳಲು ಹೋದನು. ಆಗ ಲಕ್ಷ್ಮಣನು ದಿವ್ಯವಾದ ರಾಮನಾಮದಿಂದ ಗುರುತಿಸಲ್ಪಟ್ಟ ಬಾಣವನ್ನು ರಾಮನನ್ನು ಧ್ಯಾನಿಸುತ್ತ ಬಿಟ್ಟನು.

೧೯೪–೧೯೫. ರಾಮನಾಮವನ್ನು ಸ್ಮರಿಸುತ್ತಾ ಆ ರಾಮನಾಮಾಂಕಿತದ ಶರವನ್ನು ಬಿಡಲು ಅದು ಕಿರೀಟಕುಂಡಲಗಳಿಂದೊಡಗೂಡಿದ ತಲೆಯನ್ನು ಅವನ ದೇಹದಿಂದ ಬೇರೆಯಾಗಿ ಮಾಡಿ ನೆಲದಲ್ಲಿ ಕೆಡಗಿತು. ಆಗ ದೇವಗತೆಳು ಸಂತೋಷಗೊಂಡು ಸೌಮಿತ್ರಿಯನ್ನು ಸ್ತುತಿಸಿದರು.

ಪುಷ್ಪಾಣಿವಿಕಿರಂತೋ ವೈ ಚಕ್ರುರ್ನೀರಾಜನಂ ಮುಹುಃ ।
ಗತಶ್ರಮುಸ್ಸ ಸೌಮಿತ್ರಿಶ್ಶಂಖಮಾಪೂರಯದ್ರಣೇ ॥ ೧೯೬ ॥

ಶ್ರುತ್ವಾ ಸೀತಾ ಶಂಖನಾದಂ ತ್ರಿಜಟಾಂ ಪ್ರೇಷ್ಯ ಸಾದರಂ ।
ಶುಶ್ರಾವ ಸಕಲಂ ವೃತ್ತಂ ತದ್ವಾಕ್ಯಾತ್ತುತುತೋಷ ಸಾ ॥ ೧೯೭ ॥

ತತಸ್ತನ್ಮೇಘನಾದಸ್ಯ ಶಿರಸ್ಸಂಗೃಹ್ಯ ಮಾರುತಿಃ ।
ರಾಘವಾಯ ದರ್ಶಯಿತುಂ ತ್ವರಯಾಮಾಸ ಲಕ್ಷ್ಮಣಂ ॥ ೧೯೮ ॥

ತದಾ ಸ ವಾನರೈರ್ಯುಕ್ತೋಽಂಗದಸ್ಥಸ್ಸವಿಭೀಷಣಃ ।
ನಾನಾವಾದ್ಯನಿನಾದೈಶ್ಚ ಸೌಮಿತ್ರೀ ರಾಘವಂ ಯಯೌ ॥ ೧೯೯ ॥

ನತ್ವಾ ತಂ ದರ್ಶಯಾಮಾಸ ಮೇಘನಾದಸ್ಯ ತಚ್ಛಿರಃ ।
ತದ್ದೃಷ್ಟ್ವಾಽಲಿಂಗ್ಯ ಸೌಮಿತ್ರಿಂ ರಾಮಸ್ತುಷ್ಟೋಽಭವತ್ತದಾ ॥ ೨೦೦ ॥

---

೧೯೬. ಲಕ್ಷ್ಮಣನಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತ ಅನೇಕಬಾರಿ ಆರತಿಯನ್ನು ಎತ್ತಿದರು. ಇದರಿಂದ ಸೌಮಿತ್ರಿಗೆ ಶ್ರಮುಪರಿವಾರಹಾಗಲು ಯುದ್ಧರಂಗದಲ್ಲಿ ಶಂಖವನ್ನು ಊದಿದನು.

೧೯೭. ಸೀತೆಯು ಆ ಶಂಖನಾದವನ್ನು ಕೇಳಿ ತ್ರಿಜಟೆಯನ್ನು ಇದನ್ನು ತಿಳಿದು ಬರುವಂತೆ ಕಳುಹಿಸಿ ಅವಳು ಬಂದನಂತರ ವಿಷಯವೆಲ್ಲವನ್ನೂ ತಿಳಿದು ಸಂತೋಷಗೊಂಡಳು.

೧೯೮. ಅನಂತರ ಮಾರುತಿಯು ಆ ಮೇಘನಾದನ ತಲೆಯನ್ನು ತೆಗೆದುಕೊಂಡನು. ಅದನ್ನು ರಾಮನಿಗೆ ತೋರಿಸಲು ಲಕ್ಷ್ಮಣನನ್ನು ಅವಸರಪಡಿಸಿದನು.

೧೯೯. ಆಗ ಲಕ್ಷ್ಮಣನು ಅಂಗದನ ಹೆಗಲಿನಮೇಲೆ ಕುಳಿತುಕೊಂಡು ವಿಭೀಷಣನನ್ನೂ ಕರೆದುಕೊಂಡು ವಾನರರ ಜೊತೆಯಲ್ಲಿ ಜಯಜಯ ಧ್ವನಿಯನ್ನು ಮಾಡಿಸಿಕೊಳ್ಳುತ್ತ ರಾಮನ ಬಳಿಗೆ ಹೋದನು.

೨೦೦. ರಾಮನಿಗೆ ನಮಸ್ಕರಿಸಿ ಮೇಘನಾದನ ತಲೆಯನ್ನು ಅವನಿಗೆ ತೋರಿಸಿದನು. ರಾಮನು ಅದನ್ನು ನೋಡಿ ಸಂತೋಷಗೊಂಡು ಸೌಮಿತ್ರಿಯನ್ನು ಆಲಿಂಗಿಸಿಕೊಂಡನು.

ರಾವಣೋಽಪಿ ಭುಜಂ ದೃಷ್ಟ್ವಾ ಶ್ರುತ್ವಾ ಪುತ್ರವಧಂ ತಥಾ ।
ಪಪಾತ ಪುತ್ರದುಃಖೇನ ಸಭಾಯಾಂ ಮೂರ್ಛಿತೋ ಭುವಿ ॥ ೨೦೧ ॥

ಕ್ರೋಧಾತ್ಸ ಖಡ್ಗಮುದ್ಯಮ್ಯ ಯಯೌ ಹಂತುಂ ವಿದೇಹಜಾಂ ।
ಸುಪಾರ್ಶ್ವೋ ನಾಮ ಮೇಧಾವೀ ಮಂತ್ರೀ ತಂ ಸಂನ್ಯವಾರಯತ್॥೨೦೨॥

ಸಖಡ್ಗಂ ತತ್ಕರಂ ಧೃತ್ವಾ ಸ್ವಹಸ್ತೇನ ತ್ವರಾನ್ವಿತಃ ।
ಉವಾಚ ನೀತಿಸಂಯುಕ್ತಂ ವಚನಂ ರಾವಣಂ ತದಾ ॥ ೨೦೩ ॥

ಕಥಂ ನಾಮ ದಶಗ್ರೀವ ಕ್ರೋಧಾತ್ ಸ್ತ್ರೀವಧಮಿಚ್ಛಸಿ ।
ಅಸ್ಮಾಭಿಸ್ಸಹಿತೋ ಯುದ್ಧೇ ಹತ್ವಾ ರಾಮಂ ಸಲಕ್ಷ್ಮಣಂ ॥ ೨೦೪ ॥

ಪ್ರಾಪ್ಸ್ಯಸೇ ಜಾನಕೀಂ ಶೀಘ್ರಮಿತ್ಯುಕ್ತಸ್ಸ ನ್ಯವರ್ತತ ।
ಸುಲೋಚನಾಪಿ ಕಾಂತಸ್ಯ ಭುಜಂ ಕೇಯೂರಭೂಷಿತಂ ॥ ೨೦೫ ॥

---

೨೦೧. ಇತ್ತ ರಾವಣನು ಮಗನ ತೋಳು ಬಂದು ಬಿದ್ದಿರುವುದನ್ನೂ ಆನಂತರ ಅವನು ಸತ್ತುದನ್ನೂ ಕೇಳಿದನು. ಒಡನೆಯೇ ಆ ಸಭೆಯಲ್ಲಿ ಪುತ್ರ ದುಃಖದಿಂದ ಮೂರ್ಛಿತನಾಗಿ ನೆಲದಮೇಲೆ ಬಿದ್ದನು.

೨೦೨. ಆದರಿಂದ ಕೋಪಗೊಂಡು ಖಡ್ಗವನ್ನು ತೆಗೆದುಕೊಂಡು ಸೀತೆಯನ್ನು ಕೊಲ್ಲಲು ಹೋದನು.. ಆಗ ಸುಪಾರ್ಶ್ವನೆಂಬ ಬುದ್ಧಿವಂತನಾದ ಮಂತ್ರಿಯು ಅವನನ್ನು ತಡೆದನು.

೨೦೩. ಆ ಸುಪಾರ್ಶ್ವನು ಬೇಗಬೇಗನೆ ಹೋಗಿ ಕತ್ತಿಯನ್ನು ಎತ್ತಿ ಹಿಡಿದುಕೊಂಡಿರುವ ಆ ರಾವಣನ ಕೈಯ್ಯನ್ನು ಹಾಗೆಯೇ ಹಿಡಿದುಕೊಂಡನು. ಮತ್ತು ನೀತಿಯಿಂದ ಕೂಡಿದ ಈ ಮಾತುಗಳನ್ನು ಹೇಳಿದನು.

೨೦೪. ಎಲೈ ದಶಗ್ರೀವನೇ! ಕೋಪದಿಂದ ಬುದ್ಧಿಗೆಟ್ಟು ಸ್ತ್ರೀವಧೆಯನ್ನು ಮಾಡಲು ಹೋಗುತ್ತಿರುವೆಯಲ್ಲ! ನಮ್ಮಗಳನ್ನು ಕರೆದುಕೊಂಡು, ನಮ್ಮ ಸಹಾಯದಿಂದ ಯುದ್ಧದಲ್ಲಿ ರಾಮಲಕ್ಷ್ಮಣರನ್ನು ಕೊಂದು ಜಾನಕಿಯನ್ನು ಹೊಂದು.

೨೦೫-೨೦೬. ಎಂಬುದಾಗಿ ಹೇಳಲು ಆಗ ರಾವಣನು ಹಿಂದಿರುಗಿದನು. ಮೇಘನಾದನ ಹೆಂಡತಿಯಾದ ಸುಲೋಚನೆಯು ಭುಜಕೀರ್ತಿಯಿಂದ ಕೂಡಿದ

ದೃಷ್ಟ್ವಾ ಸಮಾರ್ಗಣಂ ಸ್ವೀಯಂ ಪುರತಃ ಪತಿತಂ ಭುವಿ ।
ತದಾ ವಿಲಾಪಮಕರೋತ್ ಸ್ಮೃತ್ವಾ ತತ್ಪೌರುಷಾಣಿ ಸಾ ॥ ೨೦೬ ॥

ಭುಜೋಪಿ ಸಾಂತ್ವಯನ್ ತಾಂ ಸ ಲೇಖ್ಯ ಭೂಮ್ಯಾಂ ಶರೇಣ ಹಿ ।
ಸ್ವಲೋಹಿತಾಕ್ಷರೈಃ ಪ್ರಾಹ ಮಾ ಖೇದಂ ಭಜ ಭಾಮಿನಿ ॥ ೨೦೭ ॥

ಸಾಕ್ಷಾಚ್ಛೇಷಶರಾಘಾತೈರ್ಹತೋಽಹಂ ಮುಕ್ತಿಮಾಗತಃ ।
ತ್ವಂ ಚಾಪಿ ಗತ್ವಾ ಶ್ರೀರಾಮಂ ನತ್ವಾ ಯಾಚಸ್ವ ಮಚ್ಛಿರಃ ॥ ೨೦೮ ॥

ತತ್ತ್ವಾಂ ದಾಸ್ಯತಿ ರಾಮೋಪಿ ತೇನಾಗ್ನಿಂ ವಿಶ್ಯ ಯಾಹಿ ಮಾಂ ।
ಸುಲೋಚನಾ ಪಠಿತ್ವಾ ಸಾ ಲಿಖಿತಾನ್ಯಕ್ಷರಾಣಿ ಹಿ ॥ ೨೦೯ ॥

ತುಷ್ಟಾ ಪೃಷ್ಟ್ವಾ ರಾವಣಾಯ ಮಂದೋದರ್ಯೈ ವಿಭೂಷಿತಾ ।
ಯಯೌ ರಾಮಂ ಶಿಬಿಕಯಾ ತಾಂ ದೃಷ್ಟ್ವಾ ವಾನರೋತ್ತಮಾಃ॥೨೧೦॥

ಗಂಡನ ತೋಳನ್ನೂ ಅದು ಬಾಣದೊಡನೆ ಬಿದ್ದಿರುವುದನ್ನೂ ನೋಡಿದಳು. ಆಗ ಆತನ ಪೌರುಷಗಳನ್ನು ಆಕೆಯು ಸ್ಮರಿಸಿಕೊಳ್ಳುತ್ತ ಅತ್ತಳು.

೨೦೭. ಆ ಭುಜವು ಆಕೆಯನ್ನು ಸಮಾಧಾನಪಡಿಸುತ್ತ ನೆಲದಮೇಲೆ ಆ ಬಾಣದಿಂದ ತನ್ನಿಂದ ಬರುತ್ತಿರುವ ರಕ್ತದಿಂದಲೇ ಇಂತೆಂದು ಬರೆಯಿತು.

೨೦೮. ಎಲೈ ಭಾಮಿನಿಯೇ! ದುಃಖಪಡಬೇಡ. ನಾನು ಪ್ರತ್ಯಕ್ಷನಾದ ಶೇಷನ ಬಾಣಗಳಿಂದಲೇ ಸತ್ತಿರುವೆನಾದುದರಿಂದ ನನಗೆ ಮುಕ್ತಿಯು ದೊರಕಿದೆ. ನೀನು ರಾಮನ ಬಳಿಗೆ ಹೋಗಿ ನನ್ನ ತಲೆಯನ್ನು ಕೇಳಿಕೋ. ಅವನು ಅದನ್ನು ಕೊಡುವನು.

೨೦೯. ಅದರೊಡನೆ ನೀನು ಅಗ್ನಿಪ್ರವೇಶಮಾಡಿ ನನ್ನನ್ನು ಹೊಂದು ಎಂದು ಬರೆಯಲು ಆದನ್ನು ಸುಲೋಚನೆಯು ಓದಿಕೊಂಡಳು.

೨೧೦. ಅವಳಿಗೆ ಬಹು ಸಂತೋಷವಾಯಿತು. ರಾವಣನನ್ನೂ ಮಂಡೋದರಿಯನ್ನೂ ಕೇಳಿ ಅವರ ಅಪ್ಪಣೆಯನ್ನು ಪಡೆದು ಅಲಂಕರಿಸಿಕೊಂಡು ರಾಮನ ಬಳಿಗೆ ಪಲ್ಲಕ್ಕಿಯಲ್ಲಿ ಹೋದಳು.

ಸೀತೇಯಂ ರಾವಣೇನಾದ್ಯ ಭಯಾದ್ರಾಮಂ ವಿಸರ್ಜಿತಾ ।
ಇತಿ ಮತ್ವಾ ದುದ್ರುವುಸ್ತೇ ಸೀತಾಯಾ ದರ್ಶನೇಚ್ಛಯಾ ॥ ೨೧೧ ॥

ಶಿಬಿಕಾಂ ವೇಷ್ಟಯಾಮಾಸುರ್ಜ್ಞಾತ್ವಾ ತಾಂ ತು ಸುಲೋಚನಾಂ ।
ಶಿಬಿಕಾವಾಹಕಾಸ್ತೇನಾಯಯುಃ ಶ್ರೀರಾಘವಂ ಪುನಃ ॥ ೨೧೨ ॥

ಸುಲೋಚನಾಪಿ ಶ್ರೀರಾಮಂ ನನಾಮ ಶಿರಸಾ ಮುಹುಃ ।
ಭರ್ತ್ತುಶ್ಶಿರಃ ಕಾಂಕ್ಷಮಾಣಾಂ ತಾಂ ರಾಮೋ ವಾಕ್ಯಮಬ್ರವೀತ್ ॥ ೨೧೩ ॥

ಕೃಪಯಾ ತವ ಭರ್ತ್ತಾರಂ ಕರೋಮ್ಯದ್ಯ ಸಜೀವಿತಂ ।
ಮಾ ವಿಶಸ್ವಾದ್ಯ ವಹ್ನಿಂ ತ್ವಂ ರೋಚತೇಚೇದ್ವದಸ್ವ ಮಾಂ ॥ ೨೧೪ ॥

---

೨೧೧. ಅವಳನ್ನು ಕಪಿಗಳು ನೋಡಿ ಇವಳು ಸೀತೆಯು. ರಾವಣನು ಭಯಪಟ್ಟುಕೊಂಡು ರಾಮನ ಬಳಿಗೆ ಸೀತೆಯನ್ನು ಕಳುಹಿಸಿರುವನು. ಹೀಗೆಂದು ತಿಳಿದು ಆಕೆಯನ್ನು ನೋಡಲಿಚ್ಛೆಯಿಂದ ಬೇಗಬೇಗನೆ ಓಡಿದುವು.

೨೧೨. ಅವೆಲ್ಲವೂ ಹೋಗಿ ಆ ಪಲ್ಲಕ್ಕಿಯನ್ನು ಸುತ್ತುಗಟ್ಟಿಕೊಂಡುವು. ಆನಂತರ ಆವರಿಗೆ ಸುಲೋಚನೆಯೆಂಬುದು ಗೊತ್ತಾಯಿತು. ಅವರೆಲ್ಲರೂ ಆ ಪಲ್ಲಕ್ಕಿಯೊಡನೆ ರಾಮನ ಬಳಿಗೆ ಬಂದರು.

೨೧೩. ಸುಲೋಚನೆಯು ರಾಮನಿಗೆ ತಲೆಯನ್ನು ಬಗ್ಗಿಸಿ ನಮಸ್ಕರಿಸಿದಳು. ಮತ್ತು ಆ ಗಂಡನ ತಲೆಯನ್ನು ಕೊಡೆಂದು ಕೇಳಿಕೊಂಡಳು. ಆಗ ರಾಮನು ಅವಳನ್ನು ಕುರಿತು ಇಂತೆಂದನು.

೨೧೪. ಎಲೈ ಸುಲೋಚನೆಯೆ! ನಿನ್ನ ಮೇಲಿನ ಕೃಪೆಯಿಂದ ನಿನ್ನ ಗಂಡನನ್ನು ಬದುಕಿಸುತ್ತೇನೆ. ಈಗ ನೀನು ಅಗ್ನಿಪ್ರವೇಶವನ್ನು ಮಾಡಬೇಡ. ಇಷ್ಟವಿದ್ದರೆ ಹೇಳು.

ತದಾ ಸಾ ಪ್ರಾಹ ಶ್ರೀರಾಮಂ ಪುನಸ್ಸೌಮಿತ್ರಿಹಸ್ತತಃ ।
ಕುತೋ ಭವೇತ್ತನ್ಮರಣಂ ಮೋಕ್ಷದಂ ಜೀವಯಸ್ವ ಮಾ ॥ ೨೧೫ ॥

ಇತ್ಯುಕ್ತ್ವಾ ರಾಘವಂ ನತ್ವಾ ಸಸ್ಮಿತಂ ಕಪಿವಾಕ್ಯತಃ ।
ಕೃತ್ವಾ ಪತ್ಯುಶ್ಶಿರಸ್ತತ್ರ ಲಬ್ಧ್ವಾ ಭರ್ತೃಗಲೇರ್ಪಿತಂ ॥ ೨೧೬ ॥

ಲಂಕಾಯಾಸ್ತೌ ಸಮಾನೀಯ ಭುಜೌ ಗತ್ವಾ ನಿಕುಂಭಿಲಾಂ ।
ಭರ್ತೃದೇಹೇನ ಸಂಯೋಜ್ಯ ವಿವೇಶಾಗ್ನಿಂ ಯಥಾವಿಧಿ ॥ ೨೧೭ ॥

ಸುಲೋಚನಾ ದಿವ್ಯದೇಹಾ ವೈಕುಂಠಂ ಪತಿನಾ ಯಯೌ ।
ರಾವಣೋಪಿ ಸುಹೃನ್ಮಿತ್ರೈಃ ಪುನರ್ಯೋದ್ಧುಂ ಯಯೌ ರಣಂ ॥ ೨೧೮ ॥

ತತೋ ರಾಮೇಣ ನಿಹತಾಸ್ಸರ್ವೇ ತೇ ರಾಕ್ಷಸಾ ಯುಧಿ ।
ಲಂಕಾಯಾಂ ರಾವಣಃ ಕ್ಷಿಪ್ತಶ್ಶರೇಣ ರಾಘವೇಣ ಸಃ ॥ ೨೧೯ ॥

---

೨೧೫. ಇಂತೆನ್ನಲು ಆಕೆಯು ಶ್ರೀರಾಮುನನ್ನು ಕುರಿತು ಮೋಕ್ಷವನ್ನು ಕೊಡುವ ಈ ಸೌಮಿತ್ರಿಯ ಕೈಯ್ಯಿಂದ ಈತನಿಗೆ ಮತ್ತೆಲ್ಲಿ ಮರಣವು ಬಂದೀತು ? ಆದುದರಿಂದ ಆತನನ್ನು ಬದುಕಿಸಬೇಡ.

೨೧೬–೨೧೭. ಎಂಬುದಾಗಿ ರಾಘವನಿಗೆ ಹೇಳಿ ನಮಸ್ಕರಿಸಿ ಗಂಡನ ತಲೆಯನ್ನು ತೆಗೆದುಕೊಂಡು ನಿಕುಂಭಿಳೆಗೆ ಹೋಗಿ ಅಲ್ಲಿ ಗಂಡನ ದೇಹದೊಡನೆ ಅದನ್ನು ಸೇರಿಸಿ ಲಂಕೆಯಿಂದ ಅವನ ಕೈಗಳನ್ನು ತರಿಸಿ ಅವನ್ನೂ ಅದಕ್ಕೆ ಸೇರಿಸಿ ಶಾಸ್ತ್ರರೀತಿಯಾಗಿ ಅಗ್ನಿಪ್ರವೇಶವನ್ನು ಮಾಡಿದಳು.

೨೧೮. ಅನಂತರ ಸುಲೋಚನೆಯು ದಿವ್ಯದೇಹವನ್ನು ಹೊಂದಿ ವೈಕುಂಠಕ್ಕೆ ಗಂಡನ ಸಂಗಡ ಹೋದಳು. ರಾವಣನು ಬಂಧುಮಿತ್ರರೊಡನೆ ಕೂಡಿಕೊಂಡು ಯುದ್ಧಮಾಡಲು ರಣಭೂಮಿಗೆ ಹೋದನು.

೨೧೯. ರಾಮನು ರಾಕ್ಷಸರೆಲ್ಲರನ್ನೂ ಯುದ್ಧದಲ್ಲಿ ಕೊಂದನು. ಒಂದು ಬಾಣವನ್ನು ಬಿಟ್ಟು ರಾವಣನು ಲಂಕೆಯಲ್ಲಿ ಬೀಳುವಂತೆ ಅದರಿಂದ ಎಸೆದನು.

ತತಃ ಕೃತ್ವಾ ರಾಮಶಿರಃ ಕೃತ್ರಿಮಂ ಮಯಹಸ್ತತಃ ।
ಯಯೌ ಸೀತಾಂ ದರ್ಶಯಿತುಂ ರಾವಣೋಽಶೋಕಕಾನನಂ ॥ ೨೨೦ ॥

ಏತಸ್ಮಿನ್ನಂತರೇ ಬ್ರಹ್ಮಾ ಬೋಧಯಾಮಾಸ ಜಾನಕೀಂ ।
ಕೃತಮಸ್ತಿ ರಾವಣೇನ ಕೃತ್ರಿಮಂ ರಾಮಸಚ್ಛಿರಃ ॥ ೨೨೧ ॥

ತದ್ದೃಷ್ಟ್ವಾ ಮಾ ಭಜಸ್ವಾದ್ಯ ಖೇದಂ ತ್ವಮಧುನಾಬಲೇ ।
ಇತಿ ಸಂಬೋಧ್ಯ ತಾಂ ಸೀತಾಂ ಬ್ರಹ್ಮಾಂತರ್ಧಾನಮಾಯಯೌ ॥ ೨೨೨ ॥

ರಾವಣೋಪಿ ಸಮಾಗತ್ಯ ದರ್ಶಯಾಮಾಸಚ್ಛಿತರಃ ।
ಸೀತಾಂ ಪ್ರಾಹ ಹತೋ ರಾಮಸ್ತ್ವಧುನಾ ತ್ವಂ ಭಜಸ್ವ ಮಾಂ ॥ ೨೨೩ ॥

ತದಾ ಸಾಧೋಮುಖೀ ಪ್ರಾಹ ತನ್ನೈವಾಹಂ ಶಿರಾಂಸಿ ಹಿ ।
ರಾಮಬಾಣೈಶ್ಛ ಪಶ್ಯಾಮಿ ಪತಿತಾನಿ ರಣಾಂಗಣೇ ॥ ೨೨೪ ॥

---

೨೨೦. ಆಗ ರಾವಣನು ಮಯನನ್ನು ಕರೆದು ರಾಮನ ತಲೆಯಂತೆ ಒಂದು ಕೃತ್ರಿಮವಾದ ತಲೆಯನ್ನು ಮಾಡಿಸಿದನು. ಅದನ್ನು ಸೀತೆಗೆ ತೋರಿಸಲು ಅಶೋಕವನಕ್ಕೆ ಆದನ್ನು ತೆಗೆದುಕೊಂಡು ಹೋದನು.

೨೨೧–೨೨೨. ಇಷ್ಟರೊಳಗೆ ಬ್ರಹ್ಮನು ಜಾನಕಿಯನ್ನು ಕುರಿತು ಎಲೈ ಸೀತೆಯೇ! ರಾವಣನು ರಾಮನ ತಲೆಯಂತೆಯೇ ತಲೆಯನ್ನು ಮಾಡಿಸಿರುವನು. ಅದನ್ನು ತಂದು ತೋರಿಸುವನು. ಅದನ್ನು ನೋಡಿ ನೀನು ದುಃಖಗೊಳ್ಳ ಬೇಡ. ಎಂಬುದಾಗಿ ಹೇಳಿ ಅಂತರ್ಧಾನನಾದನು.

೨೨೩. ರಾವಣನು ಆ ತಲೆಯನ್ನು ತಂದು ಸೀತೆಗೆ ತೋರಿಸಿದನು. ಎಲೈ ಸೀತೆಯೇ! ರಾಮನು ಕೊಲ್ಲಲ್ಪಟ್ಟನು. ಈಗಲಾದರೂ ನನ್ನನ್ನು ಹೊಂದಿ ಸೇವಿಸು. ಎಂದು ಹೇಳಿದನು.

೨೨೪. ಆಗ ಸೀತೆಯು ತಲೆಯನ್ನು ತಗ್ಗಿಸಿಕೊಂಡು ಇದನ್ನು ನಾನು ನೋಡುವುದಿಲ್ಲ. ರಾಮಬಾಣದಿಂದ ರಣಾಂಗಣದಲ್ಲಿ ಕತ್ತರಿಸಲ್ಪಟ್ಟ ನಿನ್ನ ತಲೆಗಳನ್ನು ನಾನು ನೋಡುತ್ತೇನೆ. ಎಂದಳು.

ಇತಿ ತದ್ವಾಕ್ಯರಾಘಾತತಾಡಿತಸ್ಸ ದಶಾನನಃ ।
ಯಯೌ ತೂಷ್ಣೀಂ ಸ್ವಯಂ ಗೇಹಂ ಲಜ್ಜಯಾವನತಸ್ತದಾ ॥ ೨೨೫ ॥

ಅಥ ರಾಮಾಜ್ಞಯಾ ಸರ್ವೇ ಲಂಕಾಂ ಪ್ರಾಸಾದಮಂಡಿತಾಂ ।
ಇಷಿಕಾಚೂಡಹಸ್ತಾಸ್ತೇ ವಾನರಾಃ ಕೋಟಿಶಃ ಕ್ಷಣಾತ್ ॥ ೨೨೬ ॥

ಜ್ವಾಲಯಾಮಾಸುಸ್ಸರ್ವತ್ರ ದತ್ವಾ ವಹ್ನಿಂ ಮುಹುರ್ಮುಹುಃ ।
ತದಾ ಕೋಲಾಹಲಶ್ಚಾಸೀಲ್ಲಂಕಾದಾಹೇ ಪುರಾ ಯಥಾ ॥ ೨೨೭ ॥

ದಗ್ಧಾಂ ಸ್ವನಗರೀಂ ದೃಷ್ಟ್ವಾ ಸ್ವಗೃಹಾಣ್ಯಪಿ ರಾವಣಃ ।
ದೃಷ್ಟ್ವಾ ದಗ್ಧಾನಿ ಕಪಿಭಿರ್ಮೇಘಾಸ್ತ್ರಂ ಸಸೃಜೇ ಜವಾತ್ ॥ ೨೨೮ ॥

ತೇನಾಸೀದನಲಶ್ಶಾಂತಸ್ತದ್ದೃಷ್ಟ್ವಾ ಕಪಯೋ ಯಯುಃ ।
ತತಸ್ಸ ರಾವಣಶ್ಶುಕ್ರವಚನಾದ್ರಹಸಿ ಸ್ಥಿತಾಂ ॥ ೨೨೯ ॥

---

೨೨೫. ಆಕೆಯು ಈ ರೀತಿಯಾಗಿ ಹೇಳಿದ ಮಾತುಗಳೆಂಬ ಶರದಿಂದ ನೊಂದವನಾಗಿ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಸುಮ್ಮನೆ ತನ್ನ ಮನೆಗೆ ಹೊರಟುಹೋದನು.

೨೨೬. ಅನಂತರ ರಾಮನ ಅಪ್ಪಣೆಯಂತೆ ಕಪಿಗಳೆಲ್ಲರೂ ಕೈಯ್ಯಲ್ಲಿ ಪಂಜನ್ನು ಹಿಡಿದುಕೊಂಡು ಕೋಟಿಕೋಟಿಗಟ್ಟಲೆಯಿಂದ ಲಂಕೆಗೆ ನುಗ್ಗಿದರು.

೨೨೭. ಅವರೆಲ್ಲರೂ ಪಂಜಿನಿಂದ ಬೆಂಕಿಯನ್ನು ಮನೆಮನೆಗಳಿಗೆ ಹತ್ತಿಸುತ್ತ ಉರಿಯನ್ನುಂಟುಮಾಡಿದರು. ಹೀಗೆ ಲಂಕೆಯೆಲ್ಲವೂ ಹತ್ತಿಕೊಳ್ಳಲು ಹಿಂದೆ ಹೇಗೆ ಗಲಭೆಯೆದ್ದಿದ್ದಿತೋ ಅಂತೆಯೇ ಈಗಲೂ ಗಲಭೆಯೆದ್ದಿತು.

೨೨೮. ಆಗ ರಾವಣನು ಊರೆಲ್ಲವೂ ಸುಟ್ಟುದನ್ನೂ ತನ್ನ ಮನೆಯೂ ಕೂಡ ಉರಿಯುತ್ತಿರುವುದನ್ನೂ ನೋಡಿ ಮೇಘಾಸ್ತ್ರವನ್ನು ಕ್ಷಣಕಾಲದಲ್ಲಿಯೇ ಬಿಟ್ಟನು.

೨೨೯. ಇದರಿಂದ ಬೆಂಕಿಯು ಆರಿಹೋಯಿತು. ಇದನ್ನು ನೋಡಿ ಕಪಿಗಳು ಹೊರಟುಹೋದುವು. ಅನಂತರ ರಾವಣನು ಶುಕ್ರನ ಮಾತಿನಂತೆ ರಹಸ್ಯವಾದ ಗುಹೆಯನ್ನು ಹೊಕ್ಕನು.

ಗುಹಾಂ ಪ್ರವಿಶ್ಯ ಚೈಕಾಂತೇ ಮೌನೀ ಹೋಮಂ ಪ್ರಚಕ್ರಮೇ ।
ಲಂಕಾದ್ವಾರಕಪಾಟಾದಿ ಬಧ್ವಾ ಸರ್ವತ್ರ ಯತ್ನತಃ ॥ ೨೩೦ ॥

ಹೋಮದ್ರವ್ಯಾಣಿ ಸಂಗೃಹ್ಯ ಯಾನ್ಯುಕ್ತಾನಿ ಮಯಾ ಪುರಾ ।
ರಕ್ತಾವಗಾಹಿತೋ ಮುಂಡಮಾಲೀ ಪ್ರೇತಾಸನಸ್ಥಿತಃ ॥ ೨೩೧ ॥

ಪರಿಸ್ತೀರ್ಯಾಥ ಶಸ್ತ್ರಾಣಿ ಹೋಮಕುಂಡಂ ಸಮಂತತಃ ।
ಆದಶಾಹಬಾಲಕಾನಾಂ ಶಿರೋಭಿರ್ಮಾಂಸಲೋಹಿತೈಃ ॥ ೨೩೨ ॥

ಏವಂ ಸ ರಿಪುಘಾತಾರ್ಥಂ ಚಕಾರ ಹವನಂ ರಹಃ ।
ಉತ್ಥಿತಂ ಧೂಮ್ರಮಾಲೋಕ್ಯ ರಾಮಂ ಪ್ರಾಹ ವಿಭೀಷಣಃ ॥ ೨೩೩ ॥

ಯದಿ ಹೋಮಸಮಾಪ್ತಿಸ್ಸ್ಯಾತ್ತದಾಜೇಯೋ ಭವೇದಯಂ ।
ತತೋ ರಾಮೋ ಹರೀನ್ಸರ್ವಾನ್ಪ್ರೇಷಯಾಮಾಸ ಸಾದರಂ ॥ ೨೩೪ ॥

---

೨೩೦. ಆ ಗುಹೆಗೆ ಹೋಗಿ ಒಬ್ಬರಿಗೂ ತಿಳಿಯದಂತೆ ಮೌನವಾಗಿ ಹೋಮವನ್ನು ಮಾಡಿದನು. ಆಗ ಕಪಿಗಳಿಂದ ತೊಂದರೆಯು ಬರದಿರಲು ಲಂಕೆಯ ಬಾಗಿಲುಗಳನ್ನೆಲ್ಲಾ ಬಿಗಿಯಾಗಿ ಹಾಕಿಸಿದನು.

೨೩೧–೨೩೨. ಹಿಂದೆ ಹೇಳಿದಂತೆ ಹೋಮದ್ರವ್ಯಗಳೆಲ್ಲವನ್ನೂ ಸಿದ್ಧಮಾಡಿಕೊಂಡನು. ರಕ್ತದಲ್ಲಿ ಮುಳುಗಿ ತಲೆಬುರುಡೆಗಳ ಹಾರವನ್ನು ಹಾಕಿಕೊಂಡು ಹೆಣದಮೇಲೆ ಕುಳಿತುಕೊಂಡು ಶಸ್ತ್ರಗಳನ್ನೇ ಹೋಮಕುಂಡದ ಸುತ್ತಲೂ ಪರಿಸ್ತರಣಕ್ಕಿಟ್ಟು ಹತ್ತು ದಿನದವರೆಗೂ ಇರುವ ಮಕ್ಕಳ ತಲೆಗಳಿಂದಲೂ ಮಾಂಸಖಂಡಗಳಿಂದಲೂ ರಕ್ತಗಳಿಂದಲೂ ಹೋಮಮಾಡಲು ಮೊದಲುಮಾಡಿದನು.

೨೩೩. ರಾವಣನು ಶತ್ರುನಾಶಕ್ಕೋಸ್ಕರ ಗುಟ್ಟಿನಲ್ಲಿ ಇಂತು ಹೋಮ ಮಾಡಲಾರಂಭಿಸಿದನು. ಅದರಿಂದ ಹೊಗೆಯು ಮೇಲಕ್ಕೇಳಲು ವಿಭೀಷಣನು ಇದನ್ನು ನೋಡಿ ರಾಮನನ್ನು ಕುರಿತು ಇಂತೆಂದನು.

೨೩೪. ಎಲೈ ರಾಮನೇ! ಈ ಹೋಮವು ಸರಿಯಾಗಿ ಮುಗಿದರೆ ಆಗ ರಾವಣನನ್ನು ಜಯಿಸಲು ಆಗುವುದಿಲ್ಲ. ಎನ್ನಲು ರಾಮನು ಕಪಿಗಳೆಲ್ಲವನ್ನೂ ಅಲ್ಲಿಗೆ ಹೋಗುವಂತೆ ಹೇಳಿದನು.

ಪ್ರಾಕಾರಂ ಲಂಘಯಿತ್ವಾ ತೇ ಗತ್ವಾ ರಾವಣಮಂದಿರಂ ।
ಹತ್ವಾ ರಾಕ್ಷಸವೃಂದಂ ತದ್ಗುಹಾರಕ್ಷಣತತ್ಪರಂ ॥ ೨೩೫ ॥

ನ ದದೃಶುರ್ಗುಹಾದ್ವಾರಂ ಯತ್ರ ಹೋಮಂ ಚಕಾರ ಸಃ ।
ತತಶ್ಚ ಸರಮಾ ನಾಮ ಪ್ರಭಾತೇ ಕರಸಂಜ್ಞಯಾ ॥ ೨೩೬ ॥

ವಿಭೀಷಣಸ್ಯ ಭಾರ್ಯಾ ತಾಂ ಹೋಮಸ್ಥಾನಮಸೂಚಯತ್ ।
ಗುಹಾಪಿಧಾನಪಾಷಾಣಮಂಗದಃ ಪಾದಘಟ್ಟನೈಃ ॥ ೨೩೭ ॥

ಚೂರ್ಣಯಿತ್ವಾ ರಾವಣಾಯ ತಾಡಯಾಮಾಸ ಮುಷ್ಟಿನಾ ।
ವಾನರಾಸ್ತೇಽಪಿ ತಂ ವೃಕ್ಷೈಸ್ತಾಡಯಾಮಾಸುರಾದರಾತ್ ॥ ೨೩೮ ॥

ತದಾ ತೇ ವಾನರಾ ದೃಷ್ಟ್ವಾ ತೂಷ್ಣೀಮೇವ ಸ್ಥಿತಂ ರಿಪುಂ ।
ಸಮಾನಯನ್ಕೇಶಪಾಶೇ ಧೃತ್ವಾ ಮಂಡೋದರೀಂ ಶುಭಾಂ ॥ ೨೩೯ ॥

---

೨೩೫ ಕಪಿಗಳೆಲ್ಲವೂ ಕೋಟೆಯನ್ನು ದಾಟಿಹೋಗಿ ರಾವಣನ ಮನೆಯನ್ನು ಹೊಕ್ಕು ಆ ಗುಹೆಯನ್ನು ಕಾಯುತ್ತಿದ್ದ ರಾಕ್ಷಸರೆಲ್ಲರನ್ನೂ ಕೊಂದುವು.

೨೩೬. ಆದರೆ ಅವನು ಹೋಮಮಾಡುತ್ತಿರುವ ಗುಹೆಯ ಬಾಗಿಲನ್ನು ಕಾಣಲಿಲ್ಲ. ಬೆಳಗ್ಗೆ ವಿಭೀಷಣನ ಹೆಂಡತಿಯಾದ ಸರಮೆಯು ಹಸ್ತಸಂಜ್ಞೆಯಿಂದ ಆ ಹೋಮಸ್ಥಾನವನ್ನು ತೋರಿಸಿದಳು.

೨೩೭-೨೩೮. ಅನಂತರ ಅಂಗದನು ಆ ಗುಹೆಯ ಬಾಗಿಲನ್ನು ಮುಚ್ಚಿರುವ ಕಲ್ಲನ್ನು ಕಾಲಿನ ಒತ್ತದಿಂದ ಪುಡಿಪುಡಿಮಾಡಿ ರಾವಣನ ಬಳಿಗೆ ಹೋಗಿ ಮುಷ್ಟಿಯಿಂದ ಹೊಡೆದನು. ಮತ್ತು ಉಳಿದ ಕಪಿಗಳೂ ಕೂಡ ಬಹು ಉತ್ಸಾಹದಿಂದ ಮರಗಳನ್ನು ತಂದು ಅವನನ್ನು ಹೊಡೆದುವು.

೨೩೯. ಆದರೂ ಕೂಡ ರಾವಣನು ಶಾಂತತೆಯಿಂದ ಸುಮ್ಮನಿರಲು ಅವನೆದುರಿಗೆ ಮಂಡೋದರಿಯ ಜುಟ್ಟನ್ನು ಹಿಡಿದು ಎಳೆತಂದರು.

ವಿಲಪಂತೀಂ ಮುಕ್ತನೀವೀಂ ವಿಹ್ವಲಾಂ ಹೃತಕಂಚುಕೀಂ ।
ದೃಷ್ಟ್ವಾ ತ್ಯಕ್ತ್ವಾ ತದಾ ಹೋಮಮುದತಿಷ್ಠತ್ತ್ವರಾನ್ವಿತಃ ॥ ೨೪೦ ॥

ತತಸ್ತೇ ವಾನರಾಸ್ಸರ್ವೇ ಯಯುಃ ಶ್ರೀರಾಘವಾಂತಿಕಂ ।
ತತೋ ಮಂಡೋದರೀ ಪ್ರಾಹ ಕುರು ತ್ವಂ ವಚನಂ ಮಮ ॥ ೨೪೧ ॥

ದತ್ವಾ ಸೀತಾಂ ರಾಘವಾಯ ರಾಜ್ಯೇ ಕೃತ್ವಾ ವಿಭೀಷಣಂ ।
ತಪಶ್ಚರ್ಯಾಂ ಮಯಾರಣ್ಯೇ ಕರ್ತುಮರ್ಹಸಿ ವೈ ಸುಖಂ ॥ ೨೪೨ ॥

ತತ್ತಸ್ಯಾ ವಚನಂ ಶ್ರುತ್ವಾ ತಾಂ ಸ ಪ್ರಾಹ ದಶಾನನಃ ।
ರಾಮೋ ವಿಷ್ಣುಶ್ಚ ಮಾ ಸೀತಾ ಜಾನಾಮಿ ಪ್ರಾಣವಲ್ಲಭೇ ॥ ೨೪೩ ॥

---

೨೪೦. ಆ ಮಂಡೋದರಿಯು ಅಳುತ್ತಲಿದ್ದಳು. ಸೀರೆಯ ಗಂಟು ಬಿಚ್ಚಿ ಹೋಗಿದ್ದಿತು. ರೌಕೆಯನ್ನು ಹರಿದುಹಾಕಿದ್ದರು. ಖೇದಗೊಂಡಿದ್ದಳು. ಇಂತಹ ಮಂಡೋದರಿಯನ್ನು ನೋಡಿ ರಾವಣನು ಒಡನೆಯೇ ಆ ಹೋಮವನ್ನು ಬಿಟ್ಟು ಬಿಟ್ಟು ಜಾಗ್ರತೆಯಾಗಿ ಮೇಲಕ್ಕೆದ್ದನು.

೨೪೧. ಅನಂತರ ಆ ಕಪಿಗಳೆಲ್ಲರೂ ರಾಮನ ಬಳಿಗೆ ಹೊರಟುಹೋದರು. ಅನಂತರ ಮಂಡೋದರಿಯು ರಾವಣನನ್ನು ಕುರಿತು ನನ್ನ ಮಾತಿನಂತೆ ಮಾಡೆಂದಳು.

೨೪೨. ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ರಾಜ್ಯವನ್ನು ವಿಭೀಷಣನಿಗೆ ಕೊಟ್ಟುಬಿಡು. ಅನಂತರ ನಾವಿಬ್ಬರೂ ಹೋಗಿ ಕಾಡಿನಲ್ಲಿ ತಪಸ್ಸು ಮಾಡೋಣ ಎಂದಳು.

೨೪೩. ಈಕೆಯ ಮಾತನ್ನು ಕೇಳಿ ದಶಾನನು ಇಂತೆಂದನು. ಎಲೈ ಪ್ರಾಣವಲ್ಲಭೆಯೆ! ರಾಮನೇ ವಿಷ್ಣುವು. ಸೀತೆಯೇ ಲಕ್ಷ್ಮಿಯು. ಎಂಬುದನ್ನು ಬಲ್ಲೆನು.

ರಾಮಹಸ್ತಾದ್ವಧಂ ಲಬ್ಧುಂ ಹೃತಾ ಸೀತಾ ಪುರಾ ಮಯಾ ।
ರಾಮಹಸ್ತಾತ್ತ್ಯಕ್ತದೇಹೋ ಗಚ್ಛಾಮಿ ಪರಮಂ ಪದಂ ॥ ೨೪೪ ॥

ತ್ವಯಾ ಕಾರ್ಯಾ ಕ್ರಿಯಾ ಮೇ ಹಿ ಪ್ರವಿಶಸ್ವಾನಲಂ ತತಃ ।
ತತಸ್ಸುಖಂ ಮಯಾ ಯುಕ್ತಾ ಗಮಿಷ್ಯಸಿ ಪರಂ ಪದಂ ॥ ೨೪೫ ॥

ಇತ್ಯುಕ್ತ್ವಾ ಪ್ರಯಯೌ ಯೋದ್ಧುಂ ರಥೇ ಸ್ಥಿತ್ವಾ ತ್ವರಾನ್ವಿತಃ ।
ರಾಜಗೃಹಾದ್ವಿನಿರ್ಗಚ್ಛನ್ನಗ್ರೇ ಮುಂಡೀ ವಿಲೋಕಿತಃ ॥ ೨೪೬ ॥

ಮುಕುಟಃ ಪತಿತಶ್ಚಿತ್ರಸ್ಸಂವಿಗ್ನೋ ರಾವಣೋ ಹೃದಿ ।
ತತೋ ಯಯೌ ರಣಭುವಂ ವವರ್ಷ ನಿಶಿತೈಶ್ಶರೈಃ ॥ ೨೪೭ ॥

ವಿಧಾಯ ಕೃತ್ರಿಮಾಂ ಸೀತಾಂ ಮಯೇನ ಸ ದಶಾನನಃ ।
ಪಶ್ಯತಾಂ ವಾನರಾಣಾಂ ಚ ಸ್ವರಥೇ ತಾಂ ಜಘಾನ ವೈ ॥ ೨೪೮ ॥

---

೨೪೪. ಆ ರಾಮನ ಕೈಯ್ಯಿಂದ ಮರಣವಾಗಬೇಕೆಂದೇ ನಾನು ಸೀತೆಯನ್ನು ತಂದಿರುವೆನು. ರಾಮನ ಕೈಯ್ಯಲ್ಲಿ ಮರಣವು ಸಂಭವಿಸಿದರೆ ನನಗೆ ಮುಕ್ತಿಯು ಸಿಕ್ಕುತ್ತದೆ ಖಂಡಿತವು.

೨೪೫. ನೀನು ನನಗೆ ಉತ್ತರಕ್ರಿಯೆಗಳನ್ನೆಲ್ಲಾ ಮೊದಲು ಮಾಡಿಬಿಡು ಅದಾದನಂತರದಲ್ಲಿ ಅಗ್ನಿಪ್ರವೇಶವನ್ನು ಮಾಡು. ಅನಂತರದಲ್ಲಿ ನನ್ನೊಡನೆ ಪರಮಪದವನ್ನು ಹೊಂದುವೆಯಂತೆ.

೨೪೬–೨೪೭. ರಾವಣನು ಹೀಗೆಂದು ಹೆಂಡತಿಗೆ ಹೇಳಿ ರಥದಲ್ಲಿ ಕುಳಿತು ಬೇಗನೆ ಯುದ್ಧಕ್ಕೆ ಹೊರಟನು. ಅರಮನೆಯಿಂದ ಹೊರಟೊಡನೆಯೇ ಎದುರಿಗೆ ಒಬ್ಬಬೋಳನು ಸಿಕ್ಕಿದನು. ತಲೆಯಿಂದ ಕಿರೀಟವು ಕೆಳಗೆ ಬಿದ್ದುಹೋಯಿತು. ಆಗ ರಾವಣನ ಮನಸ್ಸಿನಲ್ಲಿ ಕಳವಳವುಂಟಾಯಿತು. ಯುದ್ಧರಂಗಕ್ಕೆ ಹೋಗಿ ಬಹುವಾಗಿ ಅಮೋಘವಾದ ಬಾಣಗಳನ್ನು ಬಿಡಲು ಮೊದಲುಮಾಡಿದನು.

೨೪೮. ಮತ್ತು ಆ ದಶಾನನನು ಕೃತ್ರಿಮಳಾದ ಸೀತೆಯನ್ನು ಮಯನಿಂದ ನಿರ್ಮಿಸಿ ರಥದಲ್ಲಿ ಕೂರಿಸಿಕೊಂಡಿದ್ದು ಆ ಕಪಿಗಳ ಎದುರಿಗೆ ಹರಿತವಾದ ಖಡ್ಗದಿಂದ ಅವಳನ್ನು ಕೊಂದನು.

ದಿವ್ಯೇನ ಶಿತಖಡ್ಗೇನ ತದ್ದೃಷ್ಟ್ವಾ ತೇ ಪ್ಲವಂಗಮಾಃ ।
ಹಾ ಹೇತ್ಯುಕ್ತ್ವಾ ದುಃಖಿತಾಸ್ತೇ ಯಯುೂ ರಾಮಂ ನಿವೇದಿತುಂ ॥೨೪೯॥

ತಾವದ್ವೇಧಾಸ್ಸಮಾಗತ್ಯ ರಾಮಾದೀನ್ಪ್ರಾಹ ಸಾದರಂ ।
ಕೃತ್ರಿಮೇಯಂ ಹತಾ ಸೀತಾ ಮಾ ಖೇದಂ ಭಜತಾದ್ಯ ಹಿ ॥ ೨೫೦ ॥

ತತೋಽಂತರ್ಧಾನಮಗಮದ್ವಿಧಿಸ್ತೇ ಽಪಿ ಪ್ಲವಂಗಮಾಃ ।
ರಾಮಾದ್ಯಾ ಬ್ರಹ್ಮವಾಕ್ಯೇನ ತುಷ್ಟಾ ಯುದ್ಧಾಯ ನಿರ್ಯಯುಃ ॥ ೨೫೧ ॥

ತದಾ ಸ ಮಾತಲಿಶ್ಶೀಘ್ರಂ ದೇವೇಂದ್ರವಚನಾದ್ರಥಂ ।
ಶಸ್ತ್ರಾಸ್ತ್ರವಾಜಿಸಹಿತಮಶನಿಧ್ವಜಶೋಭಿತಂ ॥ ೨೫೨ ॥

ವರಛತ್ರಸಮಾಯುಕ್ತಂ ರಾಘವಾಗ್ರೇ ನ್ಯವೇದಯತ್ ।
ತಮಾರುಹ್ಯ ತದಾ ರಾಮಶ್ಚಕಾರ ಕದನಂ ಮಹತ್ ॥ ೨೫೩ ॥

---

೨೪೯. ಅದನ್ನು ಕಪಿಗಳು ನೋಡಿ ಹಾ ಹಾ ಎಂದೆನ್ನುತ್ತಾ ದುಃಖಿತರಾದರು. ಇದನ್ನು ರಾಮನಿಗೆ ಹೇಳಲು ಹೊರಟುಹೋದರು.

೨೫೦. ಆಗ ಬ್ರಹ್ಮನು ಬಂದು ರಾಮನೇ ಮುಂತಾದವರನ್ನು ಕುರಿತು ಅಯ್ಯಾ! ಈ ಸೀತೆಯು ಕೃತ್ರಿಮ ಸೀತೆಯು. ಇವಳನ್ನು ಕೊಂದುದನ್ನು ನೋಡಿ ದುಃಖಿಸಬೇಡಿರಿ. ಎಂದನು.

೨೫೧. ಅನಂತರದಲ್ಲಿ ಬ್ರಹ್ಮನು ಹೊರಟುಹೋದನು. ರಾಮನೂ ಕಪಿಗಳೂ ಬ್ರಹ್ಮವಾಕ್ಯದಿಂದ ಸಂತೋಷಗೊಂಡು ಯುದ್ಧಕ್ಕೆ ಹೊರಟರು.

೨೫೨. ಆಗ ಮಾತಲಿಯು ದೇವೇಂದ್ರನ ಮಾತಿನಂತೆ ರಥವನ್ನು ತಂದನು. ಅದಕ್ಕೆ ಉತ್ತಮವಾದ ಕುದುರೆಗಳನ್ನು ಕಟ್ಟಿದ್ದನು. ಶಸ್ತ್ರಾಸ್ತ್ರಗಳು ತುಂಬಿದ್ದುವು. ಧ್ವಜವನ್ನು ಕಟ್ಟಿದ್ದನು. ಖಡ್ಗವನ್ನು ಇಟ್ಟಿದ್ದನು.

೨೫೩. ಉತ್ತಮವಾದ ಛತ್ರಿಯು ಕಟ್ಟಲ್ಪಟ್ಟಿದ್ದಿತು. ಇಂತಹ ರಥವನ್ನು ರಾಘವನಿಗೆ ಮಾತಲಿಯು ತಂದು ಒಪ್ಪಿಸಿದನು. ರಾಮನು ಆ ರಥದಲ್ಲಿ ಕುಳಿತು ಅದ್ಭುತವಾದ ಯುದ್ಧವನ್ನು ಮಾಡಿದನು.

ಆಗ್ನೇಯೇನ ತದಾಗ್ನೇಯಂ ದೈವಂ ದೈವೇನ ರಾಘವಃ ।
ಅಸ್ತ್ರಂ ರಾಕ್ಷಸರಾಜಸ್ಯ ಜಘಾನ ಪರಮಾಸ್ತ್ರವಿತ್ ॥ ೨೫೪ ॥

ತತಸ್ತು ಸಸೃಜೇ ಘೋರಂ ರಾಕ್ಷಸಸ್ಸಾರ್ಪಮಸ್ತ್ರವಿತ್ ।
ರಾಮಸ್ಸರ್ಪಾಂಸ್ತತೋ ದೃಷ್ಟ್ವಾ ಸೌಪರ್ಣಾಸ್ತ್ರಂ ಮುಮೋಚ ಸಃ ॥೨೫೫॥

ಅಸ್ತ್ರೈಃ ಪ್ರತಿಹತೇ ಯುದ್ಧೇ ರಾಮೇಣ ದಶಕಂಧರಃ ।
ಪಾರ್ಜನ್ಯಂ ಸಸೃಜೇ ಘೋರಂ ವಾಯವ್ಯಾಸ್ತ್ರೇಣ ರಾಘವಃ ॥೨೫೬॥

ತದಸ್ತ್ರಂ ವಿನಿವಾರ್ಯಾಸೌ ವಹ್ನ್ಯಸ್ತ್ರಂ ಸಸೃಜೇ ಪುನಃ ।
ಪರ್ಜನ್ಯಾಸ್ತ್ರೇಣ ಪೌಲಸ್ತ್ಯಶ್ಚಕಾರ ವಿಫಲಂ ತದಾ ॥ ೨೫೭ ॥

---

೨೫೪. ಆಗ್ನೇಯಾಸ್ತ್ರವನ್ನು ಆಗ್ನೇಯಾಸ್ತ್ರದಿಂದಲೂ ದೈವಾಸ್ತ್ರವನ್ನು ದೈವಾಸ್ತ್ರದಿಂದಲೂ ಒಬ್ಬರದನ್ನೊಬ್ಬರು ಪ್ರತೀಕಾರಮಾಡುತ್ತಿದ್ದರು. ಇಬ್ಬರೂ ಉತ್ತಮಾಸ್ತ್ರಗಳನ್ನು ಬಲ್ಲವರು.

೨೫೫. ಅನಂತರ ರಾವಣನು ಸರ್ಪಾಸ್ತ್ರವನ್ನು ಸೃಷ್ಟಿಸಿದನು. ರಾಮನು ಆ ಸರ್ಪಗಳನ್ನು ನೋಡಿ ಗರುಡಾಸ್ತ್ರವನ್ನು ಬಿಟ್ಟು ಅದನ್ನು ನಾಶಪಡಿಸಿದನು.

೨೫೬–೨೫೭. ರಾಮನು ರಾವಣನ ಅಸ್ತ್ರಗಳಿಗೆ ಪ್ರತಿಯನ್ನು ಕಲ್ಪಿಸಲು ರಾವಣನು ಮತ್ತೆ ಪರ್ಜನ್ಯಾಸ್ತ್ರವನ್ನು ಸೃಷ್ಟಿಸಿದನು. ಆ ಪರ್ಜನ್ಯಾಸ್ತ್ರವನ್ನು ರಾಘವನು ವಾಯುವ್ಯಾಸ್ತ್ರದಿಂದ ನಾಶಪಡಿಸಿದನು. ಮತ್ತು ರಾವಣನಮೇಲೆ ಆಗ್ನೇಯಾಸ್ತ್ರವನ್ನು ಬಿಟ್ಟನು. ಅದನ್ನು ರಾವಣನು ಪರ್ಜನ್ಯಾಸ್ತ್ರದಿಂದ ನಾಶ ಪಡಿಸಿದನು.

ನಾಗಾನಾಮಯುತಂ ತುರಂಗನಿಯುತಂ ಸಾರ್ಧಂ ರಥಾನಾಂ ಶತಂ |
ಪತ್ತೀನಾಂ ಶತಕೋಟಿ ನಾಶಸಮಯೇ ತ್ವೇಕಾ ಕಬಂಧಾನೃತಿಃ ||
ಏವಂ ಕೋಟಿಕಬಂಧನರ್ತನವಿಧಾವೇಕೋ ಧ್ವನಿಃ ಕಿಂಕಿಣೇಃ
ವಿಂಶತ್ಯಾಃ ಪ್ರಹರಾರ್ಧತೋ ರಘುಪತೇಃ ಕೋದಂಡಘಂಟಾ ರಣೇ ||

ತದಾ ಖೇ ಕೌತುಕಂ ದ್ರಷ್ಟುಂ ಸಮಾಜಗ್ಮುಸ್ಸುರಾ ಮುದಾ |
ಗಂಧರ್ವಾಃ ಕಿನ್ನರಾ ಯಕ್ಷಾ ವಿಮಾನಶತಸಂಸ್ಥಿತಾಃ || ೨೫೯ ||

ತದಾಶನಿಧ್ವಜಂ ರಮ್ಯಂ ಬಾಣೈಶ್ಚಿಚ್ಛೇದ ರಾವಣಃ |
ತಂ ದೃಷ್ಟ್ವಾ ರಾಮಚಂದ್ರೋಽಪಿ ಧ್ವಜಹೀನಂ ರಥಂ ನಿಜಂ || ೨೬೦ ||

ಮಾರುತಿಂ ಪ್ರಾಹ ವೇಗೇನ ಕ್ಷಣಂ ತಿಷ್ಠ ಧ್ವಜೋಪರಿ |
ತಥೇತ್ಯುಕ್ತ್ವಾ ಮಾರುತಿಸ್ಸ ತಾಲಮುತ್ಪಾಟ್ಯ ವೇಗತಃ || ೨೬೧ ||

---

೨೫೮. ಹೀಗೆ ಯುದ್ಧವು ನಡೆಯುತ್ತಿರಲು ಹತ್ತುಸಾವಿರ ಆನೆಗಳೂ ಒಂದು ಲಕ್ಷ ಕುದುರೆಗಳೂ ನೂರ ಐವತ್ತು ರಥಗಳೂ ನೂರುಕೋಟಿ ಪದಾತಿಗಳೂ ನಾಶವಾದರೆ ಒಂದುಕಬಂಧವು ಕುಣಿಯುತ್ತಿದ್ದಿತು. ಈ ರೀತಿಯಾಗಿ ಕೋಟಿಕಭಂಥಗಳು ಕುಣಿದರೆ ಆ ರಾಮನ ಬಿಲ್ಲಿನ ಒಂದು ಗೆಜ್ಜೆಯು ಧ್ವನಿಮಾಡುತ್ತಿದ್ದಿತು. ಹೀಗೆ ರಾಮನ ಬಿಲ್ಲಿನಲ್ಲಿ ಒಂದು ಅರ್ಧಪ್ರಹರದೊಳಗೆ ಇಪ್ಪತ್ತು ಗೆಜ್ಜೆಗಳು ಧ್ವನಿಮಾಡಿದುವು. ಅಂದರೆ ಅಷ್ಟನ್ನು ಕೊಂದನು.

೨೫೯. ಆಗ ಈ ಆಶ್ಚರ್ಯವನ್ನು ನೋಡುವುದಕ್ಕೆ ದೇವತೆಗಳೆಲ್ಲ ಅಂತರಿಕ್ಷದಲ್ಲಿ ಬಂದು ನಿಂತರು. ಗಂಧರ್ವರೂ ಯಕ್ಷರೂ ಕೂಡ ಅನೇಕ ವಿಮಾನಗಳಲ್ಲಿ ಬಂದು ಆ ಅಂತರಿಕ್ಷದಲ್ಲಿಯೇ ನಿಂತರು.

೨೬೦–೨೬೧. ಆಗ ಆ ರಾವಣನು ಬಾಣಗಳನ್ನು ಬಿಟ್ಟು ರಾಮನ ರಥದಲ್ಲಿದ್ದ ವಜ್ರಧ್ವಜವನ್ನು ಕತ್ತರಿಸಿದನು. ಅದನ್ನು ರಾಮನು ನೋಡಿ ಮಾರುತಿಯನ್ನು ಕುರಿತು ಒಂದು ಕ್ಷಣಕಾಲ ನನ್ನ ಧ್ವಜದಲ್ಲಿ ಕುಳಿತುಕೋ. ಎನ್ನಲು ಮಾರುತಿಯು ಹಾಗೆಯೇ ಆಗಲೆಂದು ಒಂದು ತಾಳಿಯ ಮರವನ್ನು

ಕೃತ್ವಾ ರಾಮರಥೇ ದಿವ್ಯೇ ತಸ್ಮಿಂಸ್ತಸ್ಥೌ ಸ್ವಯಂ ಮುದಾ ।
ತಂ ಮಾರುತಿಧ್ವಜಂ ದೃಷ್ಟ್ವಾ ರಾವಣಸ್ಸಮರಾಂಗಣೇ ॥ ೨೬೨ ॥

ತಾಲಂ ಛತ್ರಂ ಮಾತಲಿನಂ ತುರಗಾನ್ವಾಯುನಂದನಂ ।
ಐದ್ರಂ ಧನುಸ್ತಚ್ಚಿಚ್ಛೇದ ನವಬಾಣೈಸ್ತ್ವರಾನ್ವಿತಃ ॥ ೨೬೩ ॥

ವಾತಾತ್ಮಜ ಮಾತಲಿನೌ ಮೂರ್ಛಿತೌ ಪತಿತೌ ಭುವಿ ।
ಕ್ಷಣಮಾತ್ರೇಣ ಸ್ವಸ್ಥೋಽಭೂತ್ ಸ ತದಾ ವಾಯುನಂದನಃ ॥ ೨೬೪ ॥

ತದಾ ರಾಮೋ ವಾಯುಪುತ್ರಸ್ಕಂಧೇ ಸ್ಥಿತ್ವಾ ರಣಾಜಿರೇ ।
ಚಕಾರ ತುಮುಲಂ ಯುದ್ಧಂ ರಾವಣೇನ ಭಯಾವಹಂ ॥ ೨೬೫ ॥

ರಾವಣಃ ಪರಿಘೇಣೈವ ಸಂತಾಡ್ಯ ಮಾರುತಿಂ ಹೃದಿ ।
ಚಕಾರ ಮೂರ್ಛಿತಂ ವೇಗಾತ್ಪಪಾತ ಸ ಪುನರ್ಭುವಿ ॥ ೨೬೬ ॥

ಕಿತ್ತುತಂದು ಆ ರಾಮನ ರಥದಲ್ಲಿ ನೆಟ್ಟು ಅದರಮೇಲೆ ತಾನು ಸುಖವಾಗಿ ಕುಳಿತನು.

೨೬೨-೨೬೩. ಆಗ ರಾವಣನು ರಾಮನ ರಥದಲ್ಲಿ ಮಾರುತಿಯ ಧ್ವಜವನ್ನು ನೋಡಿದನು. ಒಡನೆಯೇ ಒಂಭತ್ತು ಬಾಣಗಳನ್ನು ಬಿಟ್ಟು ತಾಳೆಯಮರವನ್ನೂ ಛತ್ರಿಯನ್ನೂ ಕುದುರೆಗಳನ್ನೂ ಹನುಮಂತನನ್ನೂ ಇಂದ್ರನ ಧನುಸ್ಸನ್ನೂ ಉದ್ದೇಶಿಸಿ ಹೊಡೆದನು.

೨೬೪. ಮಾರುತಿ ಮಾತಳಿಯರು ಮೂರ್ಛೆಬಂದು ನೆಲದಮೇಲೆ ಬಿದ್ದರು. ವಾಯುನಂದನನು ಕೂಡಲೇ ಎಚ್ಚೆತ್ತು ಸ್ವಸ್ಥನಾದನು.

೨೬೫. ಆಗ ಶ್ರೀರಾಮನು ವಾಯುಪುತ್ರನ ಹೆಗಲಿನಮೇಲೆಯೇ ಕುಳಿತು ರಾವಣನೊಡನೆ ಭಯಂಕರವಾದ ಯುದ್ಧವನ್ನು ಮಾಡಿದನು

೨೬೬. ರಾವಣನು ಪರಿಘಾಯುಧವನ್ನು ತೆಗೆದುಕೊಂಡು ಮಾರುತಿಯ ಎದೆಯಮೇಲೆ ಹೊಡೆದನು. ಈ ಏಟಿನಿಂದ ಮಾರುತಿಗೆ ಮೂರ್ಛೆಬಂದು ನೆಲದಮೇಲೆ ಮತ್ತೆ ಬಿದ್ದನು.

ತದಾ ಸಸ್ಮಾರ ರಾಮೋಽಪಿ ಸ್ವರಥಂ ಸಮರಾಂಗಣೇ |
ತಾವದ್ರಥಃ ಕ್ಷಣಾದೇವಾಯಯೌ ಖಾದಗ್ರತಃ ಸ್ಥಿತಃ ॥ ೨೬೭ ॥

ದಾರುಕಸ್ಸಾರಥಿರ್ಯತ್ರ ಯತ್ರ ಶಸ್ತ್ರಾಣ್ಯನೇಕಶಃ |
ಯತ್ರಾಸಾತೇ ಗದಾಪದ್ಮೇ ಯತ್ರಾಸ್ತಿ ಗರುಡೋ ಧ್ವಜೇ ॥ ೨೬೮ ॥

ಯಸ್ಮಿನ್ ಶೈಬ್ಯಶ್ಚ ಸುಗ್ರೀವಸ್ತಥಾ ಚೈವ ಬಲಾಹಕಃ |
ಮೇಘಪುಷ್ಪಶ್ಚ ಚತ್ವಾರೋ ವಾಯುಗಾಸ್ತುರಗೋತ್ತಮಾಃ ॥ ೨೬೯ ॥

ಯತ್ರ ಛತ್ರಂ ವರಂ ದಿವ್ಯಂ ಹೇಮದಂಡಂ ವಿರಾಜತೇ ।
ಚಾಮರೇ ದ್ವೇ ಶುಭೇ ಯತ್ರ ಶಾರ್ಙ್ಗಂ ವೈ ಯತ್ರ ಸದ್ಧನುಃ ॥ ೨೭೦ ॥

ತಂ ರಥಂ ರಾಘವೋ ದೃಷ್ಟ್ವಾ ಪರಿಕ್ರಮ್ಯ ಪ್ರಣಮ್ಯ ಚ ।
ಆರುರೋಹ ಮುದಾ ಯುಕ್ತಶ್ಶಾರ್ಙ್ಗಂ ಸ್ವಂ ಧನುರಾದದೇ ॥ ೨೭೧ ॥

---

೨೬೭. ಆಗ ರಾಮನು ತನ್ನ ರಥವನ್ನು ಸ್ಮರಿಸಿದನು. ಒಡನೆಯೇ ಆ ರಥವು ಅಂತರಿಕ್ಷದಿಂದ ಕೆಳಗೆ ಇಳಿದು ರಾಮನ ಎದುರಿಗೆ ನಿಂತುಕೊಂಡಿತು.

೨೬೮-೨೭೦. ಆ ರಥದಲ್ಲಿ ಸಾರಥಿಯಾದ ದಾರುಕನಿದ್ದನು. ಅನೇಕವಾದ ಶಸ್ತ್ರಗಳಿದ್ದುವು. ಗದಾಪದ್ಮಗಳೂ ಇದ್ದುವು. ಗರುಡನು ಧ್ವಜದಲ್ಲಿದ್ದನು. ಶೈಬ್ಯ ಸುಗ್ರೀವ ಬಲಾಹಕ ಮೇಘಪುಷ್ಪಗಳೆಂಬ ವಾಯುವೇಗವುಳ್ಳ ಕುದುರೆಗಳನ್ನು ಕಟ್ಟಿದ್ದರು. ದಿವ್ಯವಾದ ಛತ್ರವಿದ್ದಿತು. ಅದಕ್ಕೆ ಚಿನ್ನದ ದಂಡವಿದ್ದಿತು. ಎರಡು ಚಾಮರಗಳು ಅಲ್ಲಿದ್ದುವು. ಶಾರ್ಙ್ಗವೆಂಬ ಧನುಸ್ಸು ಅದರಲ್ಲಿಡಲ್ಪಟ್ಟಿದ್ದಿತು.

೨೭೧. ಇಂತಹ ರಥವನ್ನು ನೋಡಿ ರಾಮನು ಅದಕ್ಕೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ಸಂತೋಷದಿಂದ ಅದನ್ನು ಹತ್ತಿದನು. ಮತ್ತು ತನ್ನ ಧನುಸ್ಸಾದ ಶಾಂರ್ಗವನ್ನು ತೆಗೆದುಕೊಂಡನು.

ತತೋ ರಾಮಃ ಶರೈಸ್ತೀಕ್ಷ್ಣೈಃ ದಶಾಸ್ಯಸ್ಯ ರಥಂ ಕ್ಷಣಾತ್ ।
ಚಕಾರ ಚೂರ್ಣಂ ಸಾಶ್ವಂ ತಂ ರಾವಣಂ ಚಾಪ್ಯತರ್ಜಯತ್ ॥ ೨೭೨ ॥

ತದಾನ್ಯರಥಮಾರೂಢೋ ರಾವಣೋ ರಾಘವಂ ಯಯೌ ।
ತತೋ ರಾಮಃ ಶರೈಸ್ತೀಕ್ಷ್ಣೈಃ ದಶಾನನಶಿರಾಂಸಿ ಸಃ ॥ ೨೭೩ ॥

ಚಿಚ್ಛೇದ ತಾನಿ ಗಗನೇ ಗತ್ವಾ ತೋಷಯುತಾನಿ ಹಿ ।
ರಾಮಹಸ್ತಾನ್ಮೃತಿರ್ಜಾತಾಸ್ಮಾಕಂ ಚೇತಿ ವಿಚಿಂತ್ಯ ಚ ॥ ೨೭೪ ॥

ನಂದನಂ ಕರ್ತುಕಾಮಾನಿ ಗಗನಾಚ್ಚ ರಣಾಜಿರೇ ।
ಸಸ್ಮಿತಾನಿ ಪತಂತಿ ಸ್ಮ ರಾಘವಸ್ಯ ಪದೋಪರಿ ॥ ೨೭೫ ॥

ರಾಮಶ್ಶಿರಾಂಸಿ ದೃಷ್ಟ್ವಾಥ ವಿದೀರ್ಣಾಸ್ಯಾನಿ ಚಾತ್ಮನಃ ।
ಮಾಂ ಹಂತುಂ ಪ್ರದ್ರವಂತೀತಿ ಮತ್ವಾ ಭೀತ್ಯಾ ವ್ಯತಾಡಯತ್ ॥ ೨೭೬ ॥

---

೨೭೨. ಆಗ ರಾಮನು ಬಾಣಗಳನ್ನು ಬಿಟ್ಟು ಆ ರಾವಣನ ರಥವನ್ನು ಪುಡಿ ಪುಡಿ ಮಾಡಿದನು. ಮತ್ತು ರಾವಣನನ್ನು ಹೊಡೆದು ಗಾಬರಿಪಡಿಸಿದನು. ಒಡನೆಯೇ ರಾವಣನು ಮತ್ತೊಂದು ರಥವನ್ನು ಹತ್ತಿ ರಾಮನ ಎದುರಿಗೆ ನಿಂತನು.

೨೭೩–೨೭೫. ಒಡನೆಯೇ ಬಾಣಗಳನ್ನು ಹೂಡಿ ದಶಾನನನ ಕತ್ತುಗಳನ್ನು ಕತ್ತರಿಸಿದನು. ಆ ತಲೆಗಳು ಸಂತೋಷದಿಂದ ಅಂತರಿಕ್ಷದಲ್ಲಿ ಹಾರಾಡುತ್ತ ರಾಮನ ಕೈಯ್ಯಿಂದಲೇ ನಮಗೆ ಮರಣವುಂಟಾಯಿತು ಎಂದು ಯೋಚಿಸಿ, ಆ ಯುದ್ಧರಂಗದಲ್ಲಿ ಅಂತರಿಕ್ಷದಿಂದ ಆ ರಾಮನ ಕಾಲುಗಳ ಮೇಲೆ ನಗುತ್ತ ಬಿದ್ದುವು.

೨೭೬. ರಾಮನು ಆ ತಲೆಗಳನ್ನು ನೋಡಿದನು. ಅವು ಬಾಯನ್ನು ತೆರೆದುಕೊಂಡಿದ್ದುವು. ಇವು ಮತ್ತೆ ನನ್ನನ್ನು ತಿನ್ನುವುದಕ್ಕೆ ಬರುತ್ತವೆ. ಎಂದು ತಿಳಿದು ಮತ್ತೆ ಅವನ್ನು ಹೊಡೆದನು.

ಶರೌಘೈಶ್ಶತಶಶ್ಶೀಘ್ರಂ ತದದ್ಭುತಮಿವಾಭವತ್ ।
ಶತನೇಕೋತ್ತರಂ ಛಿನ್ನಂ ಶಿರಸಾಂ ಚೈಕವರ್ಚಸಾಂ ॥ ೨೭೭ ॥

ಶತಮೂರ್ಧ್ನೋ ರಾವಣಸ್ಯ ಚೈಕೋತ್ತರಸಹಸ್ರಕಂ ।
ಛಿನ್ನಂ ತತ್ಕಲ್ಪಭೇದೇನ ವದಂತೀತ್ಯಪಿ ಕೇಚನ ॥ ೨೭೮ ॥

ನ ದೃಷ್ಟ್ವಾ ರಾವಣಸ್ಯಾಂತಂ ವಿಭೀಷಣಮತೇನ ಸಃ ।
ನಾಭಿದೇಶೇಽಮೃತಂ ತಸ್ಯ ಕುಂಡಲಾಕಾರಸಂಸ್ಥಿತಂ ॥ ೨೭೯ ॥

ಪಾವಕಾಸ್ತ್ರೇಣ ತಚ್ಛೀಘ್ರಂ ಶೋಷಯಾಮಾಸ ರಾಘವಃ ।
ತತಶ್ಶಿರಾಂಸಿ ಬಾಹೂಂಶ್ಚ ಚಿಚ್ಛೇದ ರಾವಣಸ್ಯ ಸಃ ॥ ೨೮೦ ॥

ಏಕೇನ ಮುಖ್ಯಶಿರಸಾ ಬಾಹುಭ್ಯಾಂ ರಾವಣೋ ಬಭೌ ।
ತಯೋರ್ಯುದ್ಧಮಭೂದ್ಘೋರಂ ತುಮುಲಂ ರೋಮಹರ್ಷಣಂ ॥ ೨೮೧ ॥

೨೭೭–೨೭೮. ಅವು ನೂರೊಂದು ಚೂರಾದುವು. ಅದು ಆಶ್ಚರ್ಯವಾಗಿ ಕಂಡುಬಂದಿತು. ಹತ್ತು ತಲೆಯುಳ್ಳ ರಾವಣನ ತಲೆಯು ನೂರೊಂದು ಚೂರಾಗಿಯೂ ಆದುವು. ರಾವಣನಿಗೆ ಹತ್ತು ತಲೆಯೆಂದೂ ನೂರು ತಲೆಯೆಂದೂ ಸಾವಿರದ ಒಂದು ತಲೆಯೆಂದೂ ಹೇಳುವರು. ಇವು ಕಲ್ಪಭೇದದಿಂದ ಹೇಳಿದ ಮಾತು. ಮಾಡಿದ ಕೆಲಸವು ಎಂದು ಕೆಲವರು ಹೇಳುವರು.

೨೭೯–೨೮೦. ಆದರೂ ಆ ತಲೆಗಳು ಮತ್ತೆ ಸೇರಿಕೊಂಡುವು. ರಾವಣನು ಸಾಯುದಿರುವುದನ್ನು ನೋಡಿ ವಿಭೀಷಣನ ಮಾತಿನಂತೆ ರಾವಣನ ಹೊಕ್ಕುಳಿನಲ್ಲಿರುವ ಕುಂಡಲಾಕಾರವಾದ ಅಮೃತವನ್ನು ಆಗ್ನೇಯಾಸ್ತ್ರದಿಂದ ಶೋಷಿಸುವಂತೆ ಮಾಡಿದನು. ಅನಂತರ ಆ ರಾವಣನ ತಲೆಗಳನ್ನೂ ತೋಳುಗಳನ್ನೂ ಕತ್ತರಿಸಿದನು.

೨೮೧. ಆಗ ರಾವಣನು ಮುಖ್ಯವಾದ ಒಂದು ತಲೆಯಿಂದಲೂ ಮುಖ್ಯವಾದ ಎರಡು ತೋಳುಗಳಿಂದಲೂ ಪ್ರಕಾಶಿಸಿದನು. ಆಗ ಅವರಿಬ್ಬರಿಗೂ ಭಯಂಕರವಾದ ಯುದ್ಧವು ನಡೆಯಿತು.

ತತೋ ದಾರುವಾಕ್ಯೇನ ಮರ್ಮದೇಶೇ ವ್ಯತಾಡಯತ್ ।
ಬ್ರಹ್ಮಾಸ್ತ್ರೇಣ ರಘುಶ್ರೇಷ್ಠಸ್ಸಮರೇ ದಶಕಂಧರಂ ॥ ೨೮೨ ॥

ಸ ಶರೋ ಹೃದಯಂ ಭಿತ್ವಾ ಹೃತ್ವಾ ತಂ ತು ದಶಾನನಂ ।
ರಾಮತೂಣೀರಮಾವಿಶ್ಯ ಮೇನೇ ಸ ಕೃತಕೃತ್ಯತಾಂ ॥ ೨೮೩ ॥

ರಾವಣಸ್ಯ ಚ ದೇಹೋತ್ಥಂ ಜ್ಯೋತಿರಾದಿತ್ಯವತ್ ಸ್ಫುರತ್ ।
ಪ್ರವಿವೇಶ ರಘುಶ್ರೇಷ್ಠಂ ದೇವಾನಾಂ ಪಶ್ಯತಾಂ ಸತಾಂ ॥ ೨೮೪ ॥

ತದಾ ದೇವಾಸ್ತುಷ್ಟುವುಸ್ತಂ ವವರ್ಷುಃ ಪುಷ್ಪವೃಷ್ಟಿಭಿಃ ।
ನೇದುಃ ಖೇ ದೇವವಾದ್ಯಾನಿ ನನೃತುಶ್ಚಾಪ್ಸರೋಗಣಾಃ ॥ ೨೮೫ ॥

ತದಾ ಮಂಡೋದರೀ ಭರ್ತ್ರಾ ಸಹ ದೇಹಂ ವಿಸೃಜ್ಯ ಸಾ ।
ಯಯೌ ವೈಕುಂಠಭುವನಂ ರಾವಣೇನ ಮುದಾನ್ವಿತಾ ॥ ೨೮೬ ॥

೨೮೨-೨೮೩. ಆಗ ದಾರುಕನ ಮಾತಿನಂತೆ ರಾವಣನ ಮರ್ಮ ಪ್ರದೇಶಕ್ಕೆ ರಾಮನು ಬ್ರಹ್ಮಾಸ್ತ್ರದಿಂದ ಹೊಡೆದನು. ಆ ಬಾಣವು ರಾವಣನ ಹೃದಯವನ್ನು ಭೇದಿಸಿಕೊಂಡು ಅವನನ್ನು ಸಂಹರಿಸಿ ತಾನು ಕೃತಕೃತ್ಯನಾದೆನೆಂದು ತಿಳಿದು ಮತ್ತೆ ರಾಮನ ಬತ್ತಳಿಕೆಗೆ ಸೇರಿಕೊಂಡಿತು.

೨೮೪. ಆಗ ರಾವಣನ ದೇಹದಿಂದ ಒಂದು ತೇಜಸ್ಸು ಹೊರಟಿತು. ಅದು ಆದಿತ್ಯನಂತೆ ಪ್ರಕಾಶಿಸುತ್ತಿದ್ದಿತು. ಆ ತೇಜಸ್ಸು ದೇವತೆಗಳ ಎದುರಿಗೇನೆ ರಾಮನಲ್ಲಿ ಸೇರಿಹೋಯಿತು.

೨೮೫. ಆಗ ದೇವತೆಗಳು ರಾಮನನ್ನು ಹೊಗಳಿ ಅವನ ಮೇಲೆ ಪುಷ್ಪವೃಷ್ಟಿಯನ್ನು ಚೆಲ್ಲಿದರು. ಅಂತರಿಕ್ಷದಲ್ಲಿ ದುಂದುಭಿಗಳು ಮೊಳಗಿದುವು. ಅಪ್ಸರರು ಕುಣಿದರು.

೨೮೬. ಅನಂತರ ಮಂಡೋದರಿಯೂ ಕೂಡ ಗಂಡನೊಡನೆ ಸಹಗಮನವನ್ನು ಮಾಡಿ, ರಾವಣನೊಡನೆ ವೈಕುಂಠವನ್ನು ಹೊಂದಿದಳು.

ತತೋ ವಿಭೀಷಣೇನೈವ ರಾಮೋ ರಾವಣಸತ್ಕ್ರಿಯಾಂ ।
ಕಾರಯಿತ್ವಾ ಲಕ್ಷ್ಮಣೇನ ಲಂಕಾಯಾಂ ತಂ ವಿಭೀಷಣಂ ॥ ೨೮೭ ॥

ನೀತ್ವಾಭಿಷೇಚಯಿತ್ವಾಥ ನ್ಯಾಸಭೂತಾಂ ತದಂತಿಕೇ ।
ವಾಯುಪುತ್ರಕೃತಾಂ ಲಂಕಾಂ ಮೋಚಯಾಮಾಸ ರಾಕ್ಷಸಾತ್ ॥ ೨೮೮ ॥

ವಿಭೀಷಣಾಧಿಭಿಶ್ಶೀಘ್ರಮಶೋಕಂ ಪ್ರೇಷ್ಯ ಮಾರುತಿಂ ।
ಸೀತಾಯೈ ಸಕಲಂ ವೃತ್ತಂ ಶ್ರಾವಯಾಮಾಸ ರಾಘವಃ ॥ ೨೮೯ ॥

ಇತಿ ಶ್ರೀ ಶತಕೋಟಿರಾಮಚರಿತಾಂರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕಿಯೇ ಸಾರಕಾಂಡೇ ಯುದ್ಧ ಚರಿತೇ
ರಾವಣವಧೋ ನಾಮ ಏಕಾದಶಸ್ಸರ್ಗ ಸಮಾಪ್ತಃ

೨೮೭-೨೮೮. ರಾಮನು ವಿಭೀಷಣನಿಂದಲೇ ರಾವಣನ ಉತ್ತರಕ್ರಿಯಾದಿಗಳನ್ನು ಮಾಡಿಸಿ ಆ ವಿಭೀಷಣನಿಗೆ ಲಂಕೆಯಲ್ಲಿ ಲಕ್ಷ್ಮಣನಿಂದ ಪಟ್ಟಾಭಿಷೇಕವನ್ನು ಮಾಡಿಸಿ ತಾನು ನ್ಯಾಸಭೂತವಾಗಿಟ್ಟುಕೊಂಡಿದ್ದ ಲಂಕೆಯನ್ನು ವಿಭೀಷಣನಿಗೆ ಒಪ್ಪಿಸಿ ಹನುಮಂತನಿಂದ ನಿರ್ಮಿತವಾದ ಲಂಕೆಯನ್ನು ಆ ರಾಕ್ಷಸನಿಂದ ಬಿಡುಗಡೆಮಾಡಿದನು.

೨೮೯. ವಿಭೀಷಣನೇ ಮುಂತಾದವರ ಸಂಗಡ ಮಾರುತಿಯನ್ನು ಅಶೋಕವನಕ್ಕೆ ಕಳುಹಿಸಿ ಸೀತೆಗೆ ಸಮಸ್ತ ವಿಷಯಗಳನ್ನೂ ರಾಮನು ತಿಳಿಯಪಡಿಸಿದನು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ
ಆನಂದರಾಮಾಯಣದ ಸಾರಕಾಂಡದ ಯುದ್ಧಚರಿತ್ರೆಯಲ್ಲಿ ರಾವಣ
ವಧೆಯೆಂಬ ಹನ್ನೊಂದನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ
॥ ಹನ್ನೊಂದನೆಯ ಸರ್ಗದ ಸಾರಾಂಶವು ॥

ರಾಮರಾವಣರ ಸೈನ್ಯವು ಎದುರು ಬದುರಾಗಿ ನಿಂತು ಯುದ್ಧಕ್ಕೆ ಆರಂಭಿಸಿ ಬಹು ರಭಸದಿಂದ ಯುದ್ಧಮಾಡಿದರು. ವಾನರರು ರಾಕ್ಷಸರ ಮುಕ್ಕಾಲು ಭಾಗ ಸೈನ್ಯವನ್ನು ನಾಶಮಾಡಿದರು. ಈ ವಿಷಯವು ಮೇಘನಾದನಿಗೆ ತಿಳಿಯಲು ಒಡನೆಯೇ ಅವನು ಯುದ್ಧಕ್ಕೆ ಬಂದು ಸರ್ಪಾಸ್ತ್ರವನ್ನು ಬಿಟ್ಟನು. ಅದನ್ನು ರಾಮನು ನಿವಾರಿಸಿದನು. ಅನಂತರ ಆ ಮೇಘನಾದನು ಮಾಯೆಯಿಂದ ಕಣ್ಣಿಗೆ ಕಾಣದಂತಾಗಿ ಬಾಣಗಳ ಮಳೆಯನ್ನೇ ಸುರಿಸಿ ಕೊನೆಗೆ ಬ್ರಹ್ಮಾಸ್ತ್ರವನ್ನು ಬಿಟ್ಟನು. ಶ್ರೀರಾಮನು ಆ ಬ್ರಹ್ಮಾಸ್ತ್ರಕ್ಕೆ ಗೌರವವನ್ನು ಕೊಟ್ಟು ಕ್ಷಣಕಾಲ ಸುಮ್ಮನಿದ್ದನು. ಅಷ್ಟರಲ್ಲಿ ಕಪಿಸೈನ್ಯವೆಲ್ಲವೂ ಮೂರ್ಛೆಗೊಂಡಿತು. ಇದನ್ನು ನೋಡಿ ರಾಮನು ಕೋಪಗೊಂಡು ಲಕ್ಷ್ಮಣನಿಗೆ ಬಿಲ್ಲನ್ನು ತರುವಂತೆ ಹೇಳಲು ಅದರಿಂದ ಭಯಪಟ್ಟ ಮೇಘನಾದನು ಲಂಕೆಗೆ ಓಡಿ ಹೋದನು.

ಇತ್ತ ಸೈನ್ಯವೆಲ್ಲವೂ ಬ್ರಹ್ಮಾಸ್ತ್ರದಿಂದ ಸತ್ತಿರುವುದನ್ನು ನೋಡಿ ಹನುಮ ವಿಭೀಷಣರು ರಾಮನ ಬಳಿಗೆ ಹೋದರು. ರಾಮನು ಜೀವದಿಂದಿದ್ದನು. ಇವರು ಅವನ ಬಳಿಯಲ್ಲಿ ಅಳುತ್ತ ನಿಂತರು. ಆಗ ರಾಮನು "ಜಾಂಬವನು ಜೀವದಿಂದಿರುವನೇ? ನೋಡಿರಿ. ಅವನು ಬದುಕಿದ್ದರೆ 'ವಾನರರನ್ನು ಬದುಕಿಸುವ ಉಪಾಯವನ್ನು ಯೋಚಿಸಬೇಕು' ಎಂದು ರಾಮನು ಹೇಳಿರುವನು" ಎಂದು ಹೇಳಿರಿ, ಎಂದನು.

ಅವರಿಬ್ಬರೂ ರಾಮನ ಮಾತಿನಂತೆ ಜಾಂಬವಂತನನ್ನು ಹುಡುಕಲು ಕೈಯಲ್ಲಿ ಪಂಜನ್ನು ಹಿಡಿದುಕೊಂಡು ಹೊರಟರು. ಎಲ್ಲೆಡೆಯಲ್ಲಿಯೂ ಹುಡುಕುತ್ತ ಕೊನೆಗೆ ಅವನ ಬಳಿಗೆ ಹೋದರು. ಅವನು ಬದುಕಿರುವುದನ್ನು ನೋಡಿ ರಾಮನು ಹೇಳಿದುದನ್ನು ಹೇಳಿದರು. ಜಾಂಬವನು ಆ ಮಾತನ್ನು ಕೇಳಿ ಬಹು ಸಂತೋಷಗೊಂಡು ಅರೆಗಣ್ಣನ್ನು ಬಿಡುತ್ತ "ನೀವಾರು? ವಾಯುಪುತ್ರನಾದ

ಹನುಮಂತನು ಬದುಕಿದ್ದರೆ ಈ ಸೇನೆಯೆಲ್ಲವೂ ಬದುಕಿದಂತೆಯೇ ಸರಿ. ಅವನು ಇದೆಲ್ಲವನ್ನೂ ಬದುಕಿಸುವನು" ಎಂದನು. ಆಗ ವಿಭೀಷಣನು "ಎಲೈ ಜಾಂಬವನೆ! ಅಂಗದನೇ ಮುಂತಾದ ಶೂರರಿರುವಾಗ ಅವರನ್ನು ಬಿಟ್ಟು ಬಹು ವಿಶ್ವಾಸದಿಂದ ಆ ವಾಯುಪುತ್ರನನ್ನೇ ಕೇಳಲು ಕಾರಣವೇನು?" ಎಂದನು. ಅದಕ್ಕೆ ಜಾಂಬವನು ವಿಭೀಷಣನನ್ನು ಕುರಿತು "ಆ ವಾಯುಪುತ್ರನು ಪ್ರತಾಪ ಶಾಲಿಯು. ಆ ರುದ್ರನ ಅವತಾರಿಯು. ಅವನನ್ನು ಸಾಮಾನ್ಯಕಪಿಯಂತೆ ತಿಳಿಯ ಬೇಡ. ಆದ್ದರಿಂದ ಅವನನ್ನು ಹುಡುಕು" ಎಂದನು.

ಆಗ ಆ ಹನುಮಂತನು ಆ ಜಾಂಬವನಿಗೆ ನಮಸ್ಕರಿಸಿ "ಎಲೈ ಮಹಾನು ಭಾವನೆ! ನೀನು ಯಾರನ್ನು ಈಗ ಕೇಳುತ್ತಿದ್ದೀಯೋ ಆ ಮಾರುತಿಯಾದ ನಾನು ಬದುಕಿದ್ದೇನೆ. ನಿನ್ನೊಡನೆ ಮಾತನಾಡುತ್ತಿರುವ ಈ ಎರಡನೆಯವನೇ ವಿಭೀಷಣನು" ಎಂದನು. ಇದರಿಂದ ಜಾಂಬವನು ಸಂತೋಷಗೊಂಡು "ಎಲೈ ಮಾರುತಿಯೆ! ನೀನು ಈಗಲೇ ಕ್ಷೀರಸಮುದ್ರಕ್ಕೆ ಹೋಗಿ ದ್ರೋಣಾಚಲವನ್ನು ತೆಗೆದುಕೊಂಡು ಬಾ" ಎಂದನು. ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಜಾಗ್ರತೆಯಾಗಿ ಹೊರಟನು. ಆ ಬೆಟ್ಟವು ಗಂಧರ್ವರಿಂದ ರಕ್ಷಿತವಾಗಿ ಕಣ್ಣಿಗೆ ಕಾಣಿಸದಿರಲು ದಾರಿಯಲ್ಲಿ ಸಿಕ್ಕಿದ ಕಾಮಧೇನುವು ತನ್ನ ಗಂಜಲವನ್ನು ಕೊಟ್ಟು ಕಣ್ಣಿಗೆ ಸವರಿಕೊಳ್ಳುವಂತೆ ಹೇಳಲು, ಆಗ ಆ ಪರ್ವತವು ಒಡನೆಯೇ ಅವನ ಕಣ್ಣಿಗೆ ಕಂಡುಬಂದಿತು. ಒಡನೆಯೇ ಅದನ್ನು ಕಿತ್ತು ಹೂವಿನಂತೆ ಹಿಡಿದು ಕೊಂಡು ಬೇಗನೆ ಬಂದನು.

ಇದನ್ನು ತಿಳಿದ ರಾಮನು ಆ ಮೂಲಿಕೆಗಳ ಸುಗಂಧವನ್ನು ವಾಸನೆಮಾಡು ವುದರಿಂದಲೇ ರಾಕ್ಷಸರು ಬದುಕಿಯಾರು? ಎಂದು ಸಂದೇಹಗೊಂಡು ಆ ರಾಕ್ಷಸರ ಶವಗಳನ್ನು ಗರುಡ ವಿಭೀಷಣರ ಕೈಯಲ್ಲಿ ಸಮುದ್ರಕ್ಕೆ ಬಿಸಾಡಿಸಿಬಿಟ್ಟನು.

ಹನುಮಂತನು ಈ ದ್ರೋಣಾದ್ರಿಯನ್ನು ತಂದಮೇಲೆ ಸುಷೇಣನೆಂಬ ವೈದ್ಯನು ಔಷಧಿಗಳಿಂದ ಆ ಕಪಿಗಳನ್ನು ಬದುಕಿಸಿದನು. ಒಡನೆಯೇ ಕಪಿಗಳೆಲ್ಲವೂ ಗರ್ಜಿಸುತ್ತ ಎದ್ದುನಿಂತವು. ಅನಂತರ ಮಾರುತಿಯು ದ್ರೋಣಾದ್ರಿಯನ್ನು ಅದರ ಜಾಗದಲ್ಲಿ ಇಟ್ಟುಬಿಟ್ಟು ಹಿಂತಿರುಗುವಾಗ ಕುಬೇರನು ರಾಮಾದಿಗಳಿಗೆ ಯುದ್ಧ ದಲ್ಲಿ ಮಾಯೆಯಿಂದ ಕಾಣದಿದ್ದವರೆಲ್ಲರೂ ಕಣ್ಣಿಗೆ ಕಾಣುವಂತೆ ಒಂದು ನೀರನ್ನು ಕೊಟ್ಟು ಕಳುಹಿಸಿದನು. ಅದರಿಂದ ಅವರಿಗೆ ಅಂತರ್ಧಾನದಿಂದ ಬರುವವ ರೆಲ್ಲರೂ ಕಾಣುವಂತಾದರು.

ಅನಂತರ ರಾವಣನು ತನ್ನ ಮಂತ್ರಿಗಳನ್ನು ಕಳುಹಿಸಲು ಅವರೆಲ್ಲರನ್ನೂ ಕಪಿಗಳು ಕೊಂದುಹಾಕಿದರು. ಅನಂತರ ರಾವಣನ ಮಗನಾದ ಅತಿಕಾಯನು ಯುದ್ಧಕ್ಕೆ ಬರಲು ಸೌಮಿತ್ರಿಯು ಅವನನ್ನು ಕೊಂದನು. ಅನಂತರ ರಾವಣನೇ ಯುದ್ಧಕ್ಕೆ ಬಂದನು. ರಂಗದಲ್ಲಿ ವಿಭೀಷಣನನ್ನು ಕಂಡು ಅವನಮೇಲೆ ಶಕ್ತ್ಯಾಯುಧವನ್ನು ಬಿಡಲು ಲಕ್ಷ್ಮಣನು ಮುಂದೆ ಹೋಗಿ ಅದನ್ನು ತಡೆಯಲು ಅದು ಆ ಲಕ್ಷ್ಮಣನ ಎದೆಗೆ ಬಡಿಯಲು ರಕ್ತವನ್ನು ಕಾರುತ್ತ ಬಿದ್ದು ಬಿಟ್ಟನು. ಅನಂತರ ರಾಮನೇ ರಾವಣನ ಎದುರಿಗೆ ನಿಂತು ಯುದ್ಧಮಾಡಿದನು. ಅವನ ರಥ, ಧ್ವಜ, ಸಾರಥಿ, ಪತಾಕೆ, ಕುದುರೆಗಳನ್ನು ನಾಶಮಾಡಿ ರಾವಣನನ್ನು ನೋಯಿಸಿ ಸುಧಾರಿಸಿಕೊಂಡು ನಾಳೆ ಯುದ್ಧಮಾಡುವಂತೆ ಹೇಳಲು ರಾವಣನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಲಂಕೆಗೆ ಹೋದನು.

ರಾಮನು ಲಕ್ಷ್ಮಣನು ಮೂರ್ಛಿತನಾಗಿರುವುದನ್ನು ನೋಡಿ ಮಾರುತಿಯನ್ನು ಕುರಿತು ಮತ್ತೆ ದ್ರೋಣಾದ್ರಿಯನ್ನು ತರುವಂತೆ ಹೇಳಿದನು. ಹನುಮಂತನು ಹಾಗೆಯೇ ಆಗಲೆಂದು ಹೊರಟನು. ಇದು ರಾವಣನಿಗೆ ತಿಳಿಯಿತು. ಹನುಮಂತನಿಗೆ ವಿಘ್ನವನ್ನು ಉಂಟುಮಾಡಲು ಕಾಲನೇಮಿಯನ್ನು ಕಳುಹಿಸಿದನು. ಆ ಕಾಲನೇಮಿಯು ಹಿಮವತ್ಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡು ಮುನಿವೇಷವನ್ನು ಧರಿಸಿ ಶಿಷ್ಯಪ್ರಶಿಷ್ಯರಿಂದ ಕೂಡಿಕೊಂಡಿದ್ದನು. ಮಾರುತಿಯು ದಾರಿಯಲ್ಲಿ ಹೋಗುತ್ತ ಈ ಆಶ್ರಮವನ್ನು ನೋಡಿ ನೀರನ್ನು ಕುಡಿಯಲು ಅಲ್ಲಿಗೆ ಹೋದನು. ಮುನಿಯು ನೀರನ್ನು ಕುಡಿಯುವಂತೆ ಒಂದು ಬಿಂದಿಗೆಯನ್ನು ತೋರಿಸಲು ಹನುಮನು ಅದು ಸಾಲದೆಂದು ಹೇಳಿದನು. ಅದಕ್ಕೆ ಮುನಿಯು ಬಂದು ಕೆರೆಯನ್ನು ತೋರಿಸಿ ಅಲ್ಲಿ ಕಣ್ಣನ್ನು ಮುಚ್ಚಿಕೊಂಡು ನೀರನ್ನು ಕುಡಿಯುವಂತೆ ಹೇಳಿದನು. ಅಲ್ಲದೆ ಸಾವಕಾಶವಾಗುವಂತೆ ಮಾಡಲು ಲಕ್ಷ್ಮಣನು ಎಚ್ಚೆತ್ತಿರುವಂತೆ ಜ್ಞಾನದೃಷ್ಟಿಯಿಂದ ಹೇಳಿದನು. ಗಂಧರ್ವರಿಂದ ಗೋಪಿತವಾಗಿರುವ ಆ ಪರ್ವತವು ಕಾಣುವಂತೆ ತಾನು ವಿದ್ಯೆಯನ್ನುಪದೇಶಿಸುವುದಾಗಿಯೂ ಅದಕ್ಕೆ ಗುರುದಕ್ಷಿಣೆಯನ್ನು ಕೊಡಬೇಕೆಂದೂ ಹೇಳಿದನು.

ಮಾರುತಿಯು ಆ ಕೆರೆಗೆ ಹೋಗಿ ಕಣ್ಣನ್ನು ಮುಚ್ಚಿಕೊಂಡು ನೀರನ್ನು ಕುಡಿಯುತ್ತಿದ್ದನು. ಆಗ ಒಂದು ಮೊಸಳೆಯು ಬಂದು ಅವನನ್ನು ಹಿಡಿಯಲು ಅದನ್ನು ಕೊಂದನು. ಅದಕ್ಕೆ ಉತ್ತಮದೇಹವು ಬಂದು ಅದು ಅಂತರಿಕ್ಷದಲ್ಲಿ ನಿಂತುಕೊಂಡು "ಎಲೈ ಮಾರುತಿಯೆ! ನಾನು ಧಾನ್ಯಮಾಲಿನಿ ಎಂಬ

ಅಪ್ಸರಸ್ತ್ರೀಯು. ಪೂರ್ವದಲ್ಲಿ ಒಬ್ಬ ಋಷಿಯು ನನ್ನನ್ನು ರತಿಗೋಸ್ಕರ ಕರೆದನು. ನಾನು ರಜಸ್ವಲೆಯಾಗಿದ್ದುದರಿಂದ ರತಿಗೆ ಸಮ್ಮತಿಸಲಿಲ್ಲ. ಅವನು ಮೊಸಳೆಯಾಗುವಂತೆ ನನ್ನನ್ನು ಶಪಿಸಿ, ನಿನ್ನಿಂದ ಆ ಶಾಪವಿಮೋಚನೆಯನ್ನು ಹೇಳಿದ್ದನು. ಅದರಂತೆ ಈಗ ವಿಮೋಚನೆಯಾಗಿದೆ. ನೀನು ಈ ಆಶ್ರಮದಲ್ಲಿ ನೋಡಿದ ಆ ಕಪಟಮುನಿಯು ಕಾಲನೇಮಿಯೆಂಬ ರಾಕ್ಷಸನು. ಅವನನ್ನು ರಾವಣನು ಕಳುಹಿಸಿರುವನು. ಅವನನ್ನು ಕೊಂದುಹಾಕು." ಎಂದಳು.

ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಆಶ್ರಮಕ್ಕೆ ಹೋಗಿ ವಜ್ರಮುಷ್ಟಿಯನ್ನು ಹಿಡಿದು "ಎಲೈ ಮುನಿಯೇ! ಗುರುದಕ್ಷಿಣೆಯನ್ನು ತೆಗೆದುಕೊ" ಎಂದು ಹೇಳುತ್ತ ಗುದ್ದಿದನು. ಇದರಿಂದ ಅವನು ಪ್ರಾಣಗಳನ್ನು ಕಳೆದುಕೊಂಡನು. ಮುಂದೆ ಹೊರಟು ಕ್ಷೀರಸಮುದ್ರಕ್ಕೆ ಹೋಗಿ ಗಂಧರ್ವರನ್ನು ಜಯಿಸಿ ಬೆಟ್ಟವನ್ನು ಹಿಡಿದುಕೊಂಡು ದಾರಿಯಲ್ಲಿ ಅಂತರಿಕ್ಷಮಾರ್ಗದಿಂದ ಬರುತ್ತಿದ್ದನು. ಇದನ್ನು ನೋಡಿ ಭರತನು ಒಂದು ಬಾಣವನ್ನು ಬಿಟ್ಟು ಆ ಬೆಟ್ಟವನ್ನು ಕೆಳಕ್ಕೆ ಕೆಡವಿದನು. ಆ ಭರತನನ್ನು ನೋಡಿ ಮಾರುತಿಯು ರಾಮನೆಂದು ಶಂಕಿಸಿ "ಇದೇನು! ಎಲೈ ರಾಮನೆ! ರಾವಣನಿಂದ ಸೋತು ನೀನು ಇಲ್ಲಿಗೆ ಬಂದೆಯಾ?" ಎಂದನು. ಇದರಿಂದ ಭರತನಿಗೂ ಸಂದೇಹ ಬಂದು ರಾಕ್ಷಸನೆಂಬ ಬುದ್ಧಿಯಿಂದ ಅವನನ್ನು ಕೊಲ್ಲಲು ಬಾಣವನ್ನು ತೊಟ್ಟನು. ಇದರಿಂದ ಅವನು ರಾಮನಲ್ಲವೆಂದು ತಿಳಿದು "ಭು, ಭು" ಎಂದೆನ್ನುತ್ತಾ "ರಾಮದೂತನಾದ ನನ್ನ ಬಲವನ್ನು ನೋಡೆಂದು'' ಹೇಳಿ ಯುದ್ಧಕ್ಕೆ ಸಿದ್ಧನಾದನು. ಆಗ ಭರತನು "ನನ್ನ ಅಣ್ಣನಾದ ರಾಮನಿಗೂ ನಿನಗೂ ಸ್ನೇಹವೆಲ್ಲಿ ಉಂಟಾಯಿತು'' ಎಂದು ಕೇಳಲು, ಮಾರುತಿಯು ಎಲ್ಲವನ್ನೂ ಹೇಳಿದನು. ಆಗ ನೆಲದಮೇಲಿದ್ದ ಆ ಬೆಟ್ಟವನ್ನು ಬಾಣದಿಂದ ತೆಗೆದು ಭರತನು ಹನುಮನ ಕೈಗೆ ಕೊಟ್ಟನು. ಹನುಮಂತನು ಲಂಕೆಗೆ ಬಂದು ಲಕ್ಷ್ಮಣನನ್ನೂ ಕಪಿಗಳನ್ನೂ ಬದುಕಿಸಿ ರಾಮನಿಗೆ ಭರತನ ವಿಷಯವನ್ನು ಹೇಳಿ ಪರ್ವತವನ್ನು ಅದರ ಸ್ಥಾನಕ್ಕೆ ಸೇರಿಸಿದನು. ಮತ್ತು ಭರತನಿಗೂ ಲಕ್ಷ್ಮಣನು ಬದುಕಿದನೆಂದು ಹೇಳಿದನು. ಇತ್ತ ಭರತನು ರಾಜರೆಲ್ಲರನ್ನು ಕರೆಸಿ ಅವರೊಡನೆ ಆಲೋಚಿಸಿ ರಾಮನ ಸಹಾಯಕ್ಕೆ ಲಂಕೆಗೆ ಹೋಗಲು ಮನಸ್ಸನ್ನು ಮಾಡಿದನು.

ಇತ್ತ ಸಭೆಯಲ್ಲಿ ಕುಳಿತಿದ್ದ ರಾವಣನು ದೂತರನ್ನು ಕರೆದು ''ಎಲೈ ದೂತರಿರಾ! ನೀವು ಪಾತಾಳಕ್ಕೆ ಹೋಗಿ ಅಲ್ಲಿರುವ ನನ್ನ ಸ್ನೇಹಿತರಾದ ಐರಾವಣ ಮೈರಾವಣರಿಗೆ ನನ್ನ ಯುದ್ಧದ ವಿಷಯವನ್ನು ಹೇಳಿರಿ" ಎಂದು

ಹೇಳಿಕಳುಹಿಸಿದನು. ಅವರು ಹೋಗಿ ಅಂತೆಯೇ ವಿಜ್ಞಾಪಿಸಲು ಅವರೂ ಅಂತೆಯೇ ಲಂಕೆಗೆ ಬಂದರು. ಮತ್ತು ಆ ರಾಮಲಕ್ಷ್ಮಣರನ್ನು ಕದಿಯಲು ಉದ್ದೇಶಿಸಿ ರಾತ್ರಿಯಲ್ಲಿ ಶಿಬಿರದ ಬಳಿಗೆ ಹೋದರು. ಅಲ್ಲಿ ಹನುಮಂತನು ತನ್ನ ಬಲವಾದ ಬಾಲವನ್ನು ಕೋಟೆಯನ್ನಾಗಿ ಕಪಿಗಳ ಸುತ್ತಲೂ ಕಟ್ಟಿರುವುದನ್ನು ನೋಡಿ ನೆಲದಮೇಲಿನಿಂದ ರಾಮಲಕ್ಷ್ಮಣರ ಬಳಿಗೆ ಹೋಗಲು ಹೆದರಿ ಅಂತರಿಕ್ಷದಿಂದ ಸೈನ್ಯದೊಳಕ್ಕೆ ಇಳಿದರು. ಅಲ್ಲಿ ರಾಮಲಕ್ಷ್ಮಣರು ಮಲಗಿರುವ ಕಲ್ಲುಚಪ್ಪಡಿಯನ್ನೇ ತಲೆಯಮೇಲೆ ಹೊತ್ತುಕೊಂಡು ಅವರನ್ನು ಕದ್ದುಕೊಂಡು ಹೋದರು.

ಅನಂತರ ಮಾರುತಿಯು ಎದ್ದುನೋಡಲು ಆ ರಾಮಲಕ್ಷ್ಮಣರನ್ನು ಕಾಣ ಲಿಲ್ಲ. ಆಗ ಅವರನ್ನು ಹುಡುಕಲು ಹೊರಟು ಅವರ ಹೆಜ್ಜೆಯ ಗುರುತಿನಮೇಲೆ ಪಾತಾಳಕ್ಕೆ ಹೊರಟನು. ಲಂಕೆಯ ದಕ್ಷಿಣದಲ್ಲಿ ನಿಕುಂಭಿಳೆಯಲ್ಲಿ ಹೋಗು ತ್ತಿದ್ದಾಗ ಅಲ್ಲಿ ಎರಡು ಪಾರಿವಾಳಗಳು ಮಾತನಾಡುತ್ತಿರುವುದನ್ನು ಕೇಳಿದನು. ಹೆಣ್ಣುಪಾರಿವಾಳವು ನರಮಾಂಸವನ್ನು ತಿನ್ನಲು ಅಪೇಕ್ಷಿಸಲು, ಗಂಡುಪಾರಿವಾಳವು "ರಾಮಲಕ್ಷ್ಮಣರನ್ನು ಐರಾವಣ ಮೈರಾವಣರು ತಂದಿರುವರು. ನಾಳೆಯದಿನ ಅವರನ್ನು ದೇವಿಯ ಎದುರಿನಲ್ಲಿ ವಧಿಸುವರು. ಆಗ ನರಮಾಂಸವನ್ನು ತಂದು ಕೊಡುತ್ತೇನೆ." ಎಂದಿತು.

ಇದರಿಂದ ಮಾರುತಿಗೆ ವಿಷಯವು ತಿಳಿದುಬರಲು ಪಾತಾಳಕ್ಕೆ ಹೊರಟನು. ಆ ಪಾತಾಳದ ಬಾಗಿಲಿನಲ್ಲಿ ಮಕರಧ್ವಜನು ಕುಳಿತಿದ್ದು ಹನುಮಂತನನ್ನು ಹಿಡಿದು "ನೀನಾರು? ಎಲ್ಲಿಂದ ಬಂದೆ?" ಎಂದನು. ಅದಕ್ಕೆ ಅವನು "ನಾನು ರಾಮನ ದೂತನು. ಲಂಕೆಯಿಂದ ಬಂದೆನು. ರಾಮಲಕ್ಷ್ಮಣರನ್ನು ಕದ್ದುಕೊಂಡುಹೋಗಿರುವುದರಿಂದ ಅವರನ್ನು ಹುಡುಕಲು ಬಂದೆನು" ಎಂದನು. ಆಗ ಮಕರಧ್ವಜನು "ಅಲ್ಲಿ ನನ್ನ ತಂದೆಯು ಕ್ಷೇಮದಿಂದಿರುವನೇ?" ಎಂದನು. ಅದಕ್ಕೆ ಹನುಮಂತನು ಆಶ್ಚರ್ಯಪಡುತ್ತ "ಹನುಮಂತನಿಗೆ ಹೆಂಡತಿಯೇ ಇಲ್ಲವಲ್ಲ!" ಎಂದನು.

ಅದಕ್ಕೆ ಮಕರಧ್ವಜನು "ಹನುಮಂತನು ಲಂಕೆಯನ್ನು ಸುಟ್ಟು ಬಾಲ ವನ್ನು ತಣ್ಣಗೆ ಮಾಡಿಕೊಳ್ಳಲು ಸಮುದ್ರಕ್ಕೆ ಅದ್ದಿದನಷ್ಟೆ. ಆಗ ಹೊಗೆಯಿಂದ ಕೂಡಿದ ಕಫವನ್ನು ಸಮುದ್ರದಲ್ಲಿ ಉಗಿಯಲು ಅದನ್ನು ಒಂದು ಮೀನು ತಿಂದಿತು. ಅದರಿಂದ ಹುಟ್ಟಿದುದರಿಂದ ಅವನು ನನಗೆ ತಂದೆಯಾಗಬೇಕು" ಎಂದನು.

ಅದಕ್ಕೆ ಮಾರುತಿಯು ಅವನೇ ನಾನೆಂದು ಹೇಳಿದನು. ಆಗ ಮಕರಧ್ವಜನು ತಂದೆಗೆ ನಮಸ್ಕರಿಸಿ ವಿಷಯವೆಲ್ಲವನ್ನೂ ವಿಸ್ತಾರವಾಗಿ ಹೇಳಿದನು. "ಆ ರಾಕ್ಷಸರು ರಾಮಲಕ್ಷ್ಮಣರನ್ನು ತರಲು ಹೊರಟಾಗಲೇ ಕಾಮಾಕ್ಷಿಗೆ ಬಲಿಯನ್ನು ಕೊಡಬೇಕೆಂದೇ ನಿಶ್ಚಯಿಸಿಕೊಂಡರು. ನಾಳೆ ಅವರನ್ನು ಬಲಿಕೊಡುವರು. ನೀನು ಆ ದೇವಸ್ಥಾನದಲ್ಲಿದ್ದುಕೊಂಡು ಅವರನ್ನು ಕದ್ದುಕೊಂಡು ಹೋಗು" ಎಂದನು.

ಅದನ್ನು ಕೇಳಿ ಹನುಮನು ಅಣುಸ್ವರೂಪನಾಗಿ ದೇವಾಲಯಕ್ಕೆ ನುಗ್ಗಿ ಬಾಗಿಲುಗಳನ್ನು ಭದ್ರಪಡಿಸಿದನು. ಇತ್ತ ದೈತ್ಯರು ದೇವಿಯ ಪೂಜೆಗೆ ಬಂದು ಬಾಗಿಲಿನಲ್ಲಿ ನಿಂತರು. ಮಾರುತಿಯು ದೇವಿಯ ಸ್ವರದಿಂದ ಮೆತ್ತಗೆ ಇಂತೆಂದನು. "ಎಲೈ ದೈತ್ಯರಿರಾ! ಗವಾಕ್ಷದಿಂದಲೇ ಪೂಜೆಯನ್ನು ಮಾಡಿರಿ. ಆ ರಾಮಲಕ್ಷ್ಮಣರು ಜೀವದಿಂದಲೇ ಇರಲಿ. ಅವರನ್ನು ಹೂಗಳಿಂದ ಅಲಂಕರಿಸಿ ಅವರಿಗೆ ಬಿಲ್ಲು ಬಾಣಗಳನ್ನು ಕೊಟ್ಟು ದೇವಾಲಯದ ಬಾಗಿಲನ್ನು ಸ್ವಲ್ಪ ತೆಗೆದು ನನ್ನ ತೃಪ್ತಿಗೋಸ್ಕರ ಕಳುಹಿಸಿರಿ. ಯಾರೂ ನನ್ನನ್ನು ನೋಡಕೂಡದು. ಹಾಗೆ ನೋಡಿದರೆ ಅವರು ಕುರುಡರಾಗುವರು.'' ಎಂದನು. ಇದರಿಂದ ಆ ದೈತ್ಯರು ದೇವಿಯು ಸಂತುಷ್ಟಳಾಗಿರುವಳೆಂದು ತಿಳಿದು ಗವಾಕ್ಷದಿಂದಲೇ ಪೂಜಿಸಿದರು. ಮೃಷ್ಟಾನ್ನಗಳನ್ನೂ ಪಂಚಾಮೃತಗಳನ್ನೂ ಗವಾಕ್ಷದಿಂದ ಬಹುವಾಗಿ ಹಾಕಿದರು. ಅದೆಲ್ಲವನ್ನೂ ಮಾರುತಿಯು ತಿಂದು ಇದು ಸಾಕಾಗಲಿಲ್ಲವೆಂದು ಹೇಳಿದನು. ಇದರಿಂದ ಅವರು ಪಟ್ಟಣದಲ್ಲಿರುವ ಆಹಾರಪದಾರ್ಥಗಳೆಲ್ಲವನ್ನೂ ತಂದು ಹಾಕಿದರು. ಇದರಿಂದ ಮಕ್ಕಳಿಗೂ ಹಾಲುತುಪ್ಪಗಳಿಲ್ಲದಂತಾಯಿತು. ಅನಂತರ ರಾಮಲಕ್ಷ್ಮಣರನ್ನು ಅಲಂಕರಿಸಿ ಧನುರ್ಬಾಣಗಳನ್ನು ಕೊಟ್ಟು ಬಾಗಿಲಿನಿಂದ ಕಾಳಿಗೆ ಅರ್ಪಿಸಿದರು. ಆಗ ಹನುಮನು ರಾಮಲಕ್ಷ್ಮಣರಿಗೆ ನಮಸ್ಕರಿಸಿ ಬಾಗಿಲನ್ನು ತೆಗೆದು ಗರ್ಜಿಸಿದನು. ರಾಮಲಕ್ಷ್ಮಣರೂ ಹೊರಗೆ ಬಂದು ಬಾಣವನ್ನು ಬಿಟ್ಟು ಎಲ್ಲರನ್ನೂ ಕೊಂದರು. ಆ ಐರಾವಣ ಮೈರಾವಣರನ್ನು ಮಾತ್ರ ನೂರುಬಾರಿ ಕೊಂದರೂ ಅವರು ಸಾಯಲಿಲ್ಲ. ಆಗ ಮಾರುತಿಯು ಇದೇನೋ ಐತಿಹ್ಯವಿರಬೇಕೆಂದು ಅವಸರದಿಂದ ಊರೊಳಕ್ಕೆ ಹೋಗಿ ಅಲ್ಲಿ ಇಲ್ಲಿ ನೋಡುತ್ತ ರಹಸ್ಯಪ್ರದೇಶದಲ್ಲಿ ಕುಳಿತಿದ್ದ ಒಬ್ಬ ಹೆಂಗಸನ್ನು ನೋಡಿದನು. ಅವಳು ಐರಾವಣನ ಭೋಗಪತ್ನಿಯು. ಅವಳನ್ನು ಕುರಿತು ಅವರ ಮರಣದ ವಿಷಯವನ್ನು ಕೇಳಿದನು. ಅದಕ್ಕೆ ಅವಳು "ನಾನು ನಾಗಕನ್ಯೆಯು. ನನ್ನನ್ನು ಬಲಾತ್ಕಾರದಿಂದ ತಂದಿರುವರು. ಮೈರಾವಣನೂ ಕೂಡ ನನ್ನನ್ನು ದುಷ್ಟಬುದ್ಧಿಯಿಂದ ನೋಡುತ್ತಿರುವನು. ಅವರಿಬ್ಬರೊಡನೆಯೂ ಭೋಗಿಸಲು ನನಗೆ ಶಕ್ತಿಯು ಸಾಲದು. ಇದರಿಂದ

ನನಗೆ ಒಬ್ಬನು ಮಿತ್ರನೂ ಮತ್ತೊಬ್ಬನು ಶತ್ರುವೂ ಆಗಿರುವರು. ಇದೇ ನನಗೆ ಬಂದಿರುವ ದುಃಖವು. ಆದ್ದರಿಂದ ಅವರಿಬ್ಬರೂ ಸತ್ತರೆ ನನಗೂ ಸಂತೋಷ ವಾಗುತ್ತದೆ. ಎಲೈ ಮಾರುತಿಯೇ! ಶ್ರೀರಾಮನು ನನ್ನನ್ನು ಅವನ ಹೆಂಡತಿ ಯನ್ನಾಗಿ ಮಾಡಿಕೊಳ್ಳುವುದಾದರೆ ಆಗ ನಾನು ಆ ದೈತ್ಯರ ಮರಣದ ವಿಷಯ ವನ್ನು ಹೇಳುತ್ತೇನೆ" ಎಂದಳು.

ಅದಕ್ಕೆ ಮಾರುತಿಯು "ಶ್ರೀರಾಮನ ಭಾರದಿಂದ ನಿನ್ನ ಮಂಚವು ಮುರಿದು ಹೋಗದಿದ್ದರೆ ಅವನು ನಿನ್ನ ಗಂಡನಾಗುವನು'' ಎನ್ನಲು ಅದಕ್ಕೆ ಆಕೆಯು ಒಪ್ಪಿ ಕೊಂಡು ಇಂತೆಂದಳು.

ಒಂದುಸಾರಿ ಹುಡುಗರು ಹುಡುಗಾಟಕ್ಕೋಸ್ಕರ ಕೆಲವು ದುಂಬಿಗಳಿಗೆ ದಾರವನ್ನು ಕಟ್ಟಿಬಿಟ್ಟರು. ಇದರಿಂದ ಅವುಗಳು ಕಷ್ಟಪಡುತ್ತಿರುವುದನ್ನು ಈ ಐರಾವಣ ಮೈರಾವಣರು ಆ ದಾರಗಳನ್ನು ಬಿಚ್ಚಿ ಅದನ್ನು ತಪ್ಪಿಸಿದರು. ಅದಕ್ಕೆ ಅವು ಸಂತೋಷಗೊಂಡು "ಅಯ್ಯಾ! ನಿಮ್ಮಿಬ್ಬರನ್ನು ನಾವು ಮರಣದಿಂದ ತಪ್ಪಿಸು ತ್ತೇವೆ" ಎಂದುವು. ಅದರಂತೆಯೇ ಅವು ಇಲ್ಲಿದ್ದುಕೊಂಡು ಅಮೃತವನ್ನು ತಂದು ಅವರ ರಕ್ತದ ಬಿಂದುಗಳನ್ನು ಮುಟ್ಟುವುದರಿಂದ ಅವರನ್ನು ಬದುಕಿಸುತ್ತವೆ. ಈಗ ಆ ದುಂಬಿಗಳು ಅವರು ಮಲಗುವ ಮನೆಯಲ್ಲಿವೆ. ಅವೆಲ್ಲವನ್ನೂ ಕೊಂದು ಹಾಕೆಂದು ಹೇಳಲು ಅವನು ಅಂತೆಯೇ ಮಾಡಿದನು. ಅದರಲ್ಲಿ ಒಂದು ದುಂಬಿಯು ಶರಣಾಗತವಾಗಲು ಅದನ್ನು ಕುರಿತು ಐರಾವಣನ ಭೋಗಪತ್ನಿಯ ಮಂಚವನ್ನು ಪೊಳ್ಳಾಗಿ ಮಾಡುವಂತೆ ಹೇಳಿದನು. ಅದು ಅಂತೆಯೇ ಮಾಡಿತು.

ಇತ್ತ ರಾಮನು ದೈತ್ಯರನ್ನು ಬಾಣಗಳಿಂದ ಕೊಲ್ಲಲು ಸತ್ತುಹೋದರು. ಅನಂತರ ಆ ರಾಜ್ಯದಲ್ಲಿ ಮಕರಧ್ವಜನಿಗೆ ಅಭಿಷೇಕ ಮಾಡಿದರು. ಅನಂತರ ಹೊರಡಲುದ್ಯುಕ್ತರಾದಾಗ ಮಾರುತಿಯ ಪ್ರಾರ್ಥನೆಯಂತೆ ರಾಮನು ಆ ನಾಗ ಕನ್ಯೆಯ ಮನೆಗೆ ಹೋಗಿ ಅವಳ ಕೈಯ್ಯನ್ನು ಹಿಡಿದುಕೊಂಡು ಮಂಚದಮೇಲೆ ಕುಳಿತುಕೊಳ್ಳಲು ಅದು ಮುರಿದುಹೋಯಿತು. ಆದರೂ ತನ್ನನ್ನು ಹೆಂಡತಿ ಯನ್ನಾಗಿ ಮಾಡಿಕೊ ಎಂದೆನಲು, ರಾಮನು "ನೀನು ಈ ದೇಹವನ್ನು ಬಿಟ್ಟು ಭೂಮಿಯಲ್ಲಿ ಬ್ರಾಹ್ಮಣನ ಮಗಳಾಗಿ ಹುಟ್ಟುತ್ತೀಯೆ. ಆಗ ನೀನು ಬಹುಕಾಲ ತಪಸ್ಸನ್ನು ಮಾಡಿ ಮೃತಳಾಗಿ ಮೂರನೆಯ ಜನ್ಮದಲ್ಲಿ ದ್ವಾಪರದಲ್ಲಿ ದ್ವಾರಕೆಯಲ್ಲಿ ಹುಟ್ಟಿ ನನ್ನ ಹೆಂಡತಿಯಾಗಿ ಆಗುತ್ತೀಯೆ'' ಎಂದನು. ಆಗ ಆಕೆಯು ಆ ರಾಮನ

ಎದುರಿಗೇನೆ ಅಗ್ನಿ ಪ್ರವೇಶವನ್ನು ಮಾಡಿದಳು. ಎರಡನೆಯ ಜನ್ಮದಲ್ಲಿ ಸಮುದ್ರದ ದಡದಲ್ಲಿ ಕನ್ಯಾಕುಮಾರಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ಇತ್ತ ಶ್ರೀರಾಮನು ಹನುಮಂತನ ಹೆಗಲಿನ ಮೇಲೆ ಕುಳಿತುಕೊಂಡು ಹೊರಟನು. ಮಕರಧ್ವಜನು ತನ್ನ ರಾಜ್ಯದಲ್ಲಿ ಮಂತ್ರಿಯನ್ನಿಟ್ಟು ತಾನು ಲಕ್ಷ್ಮಣನನ್ನು ಕೂರಿಸಿಕೊಂಡು ಹೊರಟನು. ಇವರು ಲಂಕೆಗೆ ಹೋಗುತ್ತಲೂ ಸುಗ್ರೀವಾದಿಗಳಿಗೆ ಬಹು ಸಂತೋಷವಾಯಿತು. ಇತ್ತ ರಾವಣನು ಐರಾವಣ ಮೈರಾವಣರು ಸತ್ತುದನ್ನು ಕೇಳಿ ರಾಕ್ಷಸರನ್ನು ಕುರಿತು ಇಂತೆಂದನು. "ನನಗೆ ಬ್ರಹ್ಮನು ಮನುಷ್ಯರಿಂದ ಮೃತ್ಯುವು ಬರುವುದೆಂದು ಹೇಳಿರುವನು. ಈಗ ನಾರಾಯಣನೇ ದಶರಥನ ಹೊಟ್ಟೆಯಲ್ಲಿ ಹುಟ್ಟಿ ಈ ರೂಪದಿಂದ ಬಂದಿರುವನು.

ನಾನು ಸೂರ್ಯವಂಶದಲ್ಲಿ ಹುಟ್ಟಿದ್ದ ಅನರಣ್ಯನನ್ನು ಯಾಗಮಾಡುತ್ತಿದ್ದಾಗ ಕೊಂದೆನು. ಆಗ ಅವನು 'ನನ್ನ ಈ ಸೂರ್ಯವಂಶದಲ್ಲಿ ಪರಮಾತ್ಮನು ಅವತರಿಸಿ ನಿನ್ನನ್ನು ಪುತ್ರಪೌತ್ರಬಾಂಧವರೊಡನೆ ಕೊಲ್ಲುವನು' ಎಂದು ಶಪಿಸಿದನು. ಆ ಕಾಲವು ಈಗ ಬಂದಿರುವುದು. ಈಗ ನೀವು ಕುಂಭಕರ್ಣನನ್ನು ಎಬ್ಬಿಸಿ ಕರೆತನ್ನಿರಿ" ಎಂದನು. ಆಗ ಅವರೆಲ್ಲರೂ ಹೋಗಿ ಕುಂಭಕರ್ಣನನ್ನು ಬಹು ಪ್ರಯಾಸದಿಂದ ಎಬ್ಬಿಸಿದರು. ಎಚ್ಚೆತ್ತು ಅವನು ತೃಪ್ತಿಯಾಗಿ ತಿಂದು ಕುಡಿದು ರಾವಣನ ಬಳಿಗೆ ಬಂದು ವಿಷಯವನ್ನು ಕೇಳಿ ತಿಳಿದುಕೊಂಡು ಇಂತೆಂದನು. "ಎಲೈ ರಾಕ್ಷಸೇಂದ್ರನೇ! ಒಂದುಸಾರಿ ನಾನು ಕಾಡಿಗೆ ಹೋಗಿದ್ದಾಗ ನಾರದನನ್ನು ಕಂಡೆನು. ಅವನನ್ನು ಪ್ರಶ್ನಿಸಲು ತಾನು ದೇವವಾಕ್ಯದಿಂದ ಸ್ವರ್ಗದಿಂದ ಅಯೋಧ್ಯೆಗೆ ಹೋಗಿ ರಾವಣಾದಿಗಳನ್ನು ಕೊಲ್ಲಲು ಅಲ್ಲಿ ಹುಟ್ಟಿರುವ ವಿಷ್ಣುವನ್ನು ಎಚ್ಚರಿಸುವುದಾಗಿ ಹೇಳಿದನು. ಇದ್ದ ವಿಷಯವನ್ನು ನಿನ್ನ ಸನ್ನಿಧಿಯಲ್ಲಿ ಹೇಳಿದ್ದೇನೆ. ಈಗ ನೀನು ಸೀತೆಯನ್ನು ರಾಮನಿಗೆ ಒಪ್ಪಿಸಿ ಅವನೊಡನೆ ಸ್ನೇಹ ಮಾಡಿಕೋ" ಎಂದನು. ಕುಂಭಕರ್ಣನ ಈ ಮಾತುಗಳನ್ನು ಕೇಳಿ ರಾವಣನು "ಎಲೈ ಕುಂಭಕರ್ಣನೇ! ನಿನ್ನ ಕಣ್ಣುಗಳು ಇನ್ನೂ ನಿದ್ರೆಯಿಂದ ಕೂಡಿಕೊಂಡಿವೆ. ಹೋಗಿ ಸುಖವಾಗಿ ನಿದ್ರೆಯನ್ನು ಮಾಡು" ಎಂದನು. ಅಣ್ಣನ ಈ ಕ್ರೂರವಾದ ಮಾತನ್ನು ಕೇಳಿ ಯುದ್ಧಕ್ಕೆ ಹೊರಟನು. ಕಪಿಗಳೆಲ್ಲರೂ ಓಡಿದರು. ವಿಭೀಷಣನು ತನ್ನ ವಿಷಯವನ್ನು ಅವನಿಗೆ ತಿಳಿಸಲು, ನೀನು ಒಳ್ಳೆಯದನ್ನು ಮಾಡಿದೆ ಎಂದನು ಅನಂತರ ಕಪಿಗಳೊಡನೆ ಘೋರಯುದ್ಧವನ್ನು ಮಾಡಿದನು. ಅನಂತರ ರಾಮನು ಯುದ್ಧಕ್ಕೆ ಬಂದು ಆ ಕುಂಭಕರ್ಣನ ಕೈಕಾಲುಗಳನ್ನು ಕತ್ತರಿಸಿದನು. ಅನಂತರ ತಲೆಯನ್ನು ಕಡಿದನು. ಅನಂತರ ಇಂದ್ರಜಿತುವು ರಾಮನನ್ನು ಜಯಿಸಲು

ಸಲಕರಣೆಗಳನ್ನು ಪಡೆಯುವುದಕ್ಕೆ ನಿಕುಂಭಿಳೆಗೆ ಹೋಗಿ ಯಾಗವನ್ನು ಮಾಡಿದನು. ಇದರ ಸುಳಿವನ್ನು ತಿಳಿದ ವಿಭೀಷಣನು ಲಕ್ಷ್ಮಣನನ್ನು ಕರೆದುಕೊಂಡು ಹೋಗಿ ಆ ಯಾಗವನ್ನು ನಾಶಪಡಿಸಿದನು.

ಲಕ್ಷ್ಮಣನು ಯುದ್ಧವನ್ನು ಮಾಡುತ್ತ ಅವನ ಒಂದು ಕೈಯ್ಯನ್ನು ಕತ್ತರಿಸಿ ಊರೊಳಗಿರುವ ಅವನ ಹೆಂಡತಿಯ ಬಳಿಯಲ್ಲಿಯೂ, ಮತ್ತೊಂದನ್ನು ಕತ್ತರಿಸಿ ಅದನ್ನು ರಾವಣನ ಮುಂದೆಯೂ ಬೀಳುವಂತೆ ಮಾಡಿದನು. ಅನಂತರ ಕತ್ತನ್ನು ಕತ್ತರಿಸಿದನು. ಆ ಕತ್ತನ್ನು ಕಪಿಗಳು ರಾಮನ ಬಳಿಗೆ ಹೋಗಿ ತೋರಿಸಿದರು. ರಾವಣನು ಮಗನು ಸತ್ತುದನ್ನು ಕೇಳಿ ಸೀತೆಯನ್ನು ಕೊಲ್ಲಲು ಹೋದನು. ಆಗ ಸುಪಾರ್ಶ್ವನು ಸಮಾಧಾನಪಡಿಸಿದನು. ಇಂದ್ರಜಿತುವಿನ ಹೆಂಡತಿಯಾದ ಸುಲೋಚನೆಯು ರಾಮನ ಬಳಿಗೆ ಬಂದು ಆ ತಲೆಯನ್ನು ತೆಗೆದುಕೊಂಡು ಅದನ್ನು ದೇಹದೊಡನೆ ಸೇರಿಸಿ ಅದರೊಡನೆ ಸಹಗಮನವನ್ನು ಮಾಡಿದಳು. ರಾವಣನು ರಾಮನ ತಲೆಯನ್ನು ಮಯನಿಂದ ಮಾಡಿಸಿ ರಾಮನು ಸತ್ತನೆಂದು ಸೀತೆಗೆ ಅದನ್ನು ತೋರಿಸಿದನು. ಬ್ರಹ್ಮನ ಎಚ್ಚರಿಕೆಯಿಂದ ಸೀತೆಯು ಅದನ್ನು ನಂಬಲಿಲ್ಲ.

ಅನಂತರ ರಾಮನ ಅಪ್ಪಣೆಯಂತೆ ಕಪಿಗಳು ಪಂಜುಗಳನ್ನು ತೆಗೆದುಕೊಂಡು ಹೋಗಿ ಲಂಕೆಯನ್ನು ಸುಟ್ಟರು. ಆಗ ರಾವಣನು ಮೇಘಾಸ್ತ್ರದಿಂದ ಅದನ್ನು ಶಮನಮಾಡಿದನು. ಆಮೇಲೆ ಶುಕ್ರನ ಸಲಹೆಯಂತೆ ರಾವಣನು ಗುಹೆಗೆ ಹೋಗಿ ಅಭಿಚಾರಿಕ ಹೋಮವನ್ನು ಮಾಡಲು ಮೊದಲುಮಾಡಿದನು. ಅದನ್ನು ತಿಳಿದು ಅಂಗದನು ಕಪಿಗಳೊಡನೆ ಹೋಗಿ ಅದನ್ನು ನಾಶಮಾಡಿದನು. ಮಂಡೋದರಿಯು ರಾವಣನು ಯುದ್ಧಕ್ಕೆ ಹೋಗುವುದನ್ನು ತಡೆದರೂ ಅವನು ನಿಲ್ಲದೆ ವಿಷ್ಣುವಿನ ಕೈಯಲ್ಲಿ ಮರಣವಾಗುವುದೆಂದು ಸಂತೋಷದಿಂದ ಹೋದನು. ಮತ್ತು ಮಯನಿಂದ ಕೃತ್ರಿಮ ಜಾನಕಿಯನ್ನು ಮಾಡಿಸಿ ಅವಳೊಡನೆ ತಾನಿರುವಂತೆ ರಾಮನಿಗೆ ತೋರಿಸಿದನು. ಅದನ್ನು ಬ್ರಹ್ಮನು ರಾಮನಿಗೆ ಹೇಳಿದನು. ರಾಮನಿಗೆ ಯುದ್ಧಕ್ಕೋಸ್ಕರ ಇಂದ್ರನು ತನ್ನ ರಥವನ್ನು ಕಳುಹಿಸಿದನು. ರಾವಣನು ಅದನ್ನು ನಾಶಪಡಿಸಿದನು. ಅನಂತರ ರಾಮನ ಸ್ಮರಣೆಯಂತೆ ಅವನ ರಥವೇ ಬಂದಿತು. ಬಹು ಘೋರವಾದ ಯುದ್ಧವು ನಡೆಯಿತು. ಕೊನೆಗೆ ರಾಮನು ರಾವಣನ ತಲೆಗಳನ್ನು ಕತ್ತರಿಸಿದನು. ಅವು ನಾಶವಾಗದಿರಲು ಹೊಕ್ಕುಳಿನಲ್ಲಿದ್ದ ಅಮೃತ ಪದ್ಮವನ್ನು ಕತ್ತರಿಸಿದನು. ಅನಂತರ ಬ್ರಹ್ಮಾಸ್ತ್ರವನ್ನು ಬಿಟ್ಟು ತಲೆಯನು್ನ ಕತ್ತಿರಿಸಿ ಕೊಂದನು. ಅನಂತರ ಆ ರಾವಣನಿಂದ ಒಂದು ಜ್ಯೋತಿಯು ಹೊರಟು

ರಾಮನಲ್ಲಿ ಸೇರಿಹೋಯಿತು. ಮಂಡೋದರಿಯು ಗಂಡನೊಡನೆ ಸಹಗಮನವನ್ನು ಮಾಡಿದಳು. ವಿಭೀಷಣನು ಅವರಿಗೆಲ್ಲರಿಗೂ ಉತ್ತರಕ್ರಿಯೆಗಳನ್ನು ಮಾಡಿದನು. ಲಕ್ಷ್ಮಣನು ರಾಮನ ಮಾತಿನಂತೆ ವಿಭೀಷಣನಿಗೆ ಲಂಕೆಯಲ್ಲಿ ಅಭಿಷೇಕ ಮಾಡಿದನು. ಅನಂತರ ಎಲ್ಲ ವಿಷಯಗಳನ್ನು ತಿಳಿಸುವಂತೆ ಮಾರುತಿಯನ್ನು ಸೀತೆಯ ಬಳಿಗೆ ಅಶೋಕವನಕ್ಕೆ ಕಳುಹಿಸಿದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ದ್ವಾದಶಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಅಥ ತಾಂ ದಿವ್ಯವಸ್ತ್ರೈಶ್ಚ ಭೂಷಯಿತ್ವಾ ವಿದೇಹಜಾಂ ।
ಸುಸ್ನಾತಾಂ ಶಿಬಿಕಾ ಸಂಸ್ಥಾಂ ವೇಷ್ಟಿತಾಂ ವೇತ್ರಪಾಣಿಭಿಃ ॥ ೧ ॥

ನಿನ್ಯುಶ್ಶ್ರೀರಾಮಸಾನ್ನಿಧ್ಯಂ ಸುಗ್ರೀವಾದ್ಯಾಸ್ತ್ವರಾನ್ವಿತಾಃ ।
ನಾನಾವಾದ್ಯಸಮುತ್ಸಾಹೈರ್ನರ್ತನೈರಪ್ಸರಯೋಷಿತಾಂ ॥ ೨ ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

ಹನ್ನೆರಡನೆಯ ಸರ್ಗವು

೧–೨. ಶ್ರೀ ಶಿವನು ಹೇಳಿದನು–ಸುಗ್ರೀವನೇ ಮುಂತಾದವರು ಸೀತೆಗೆ ನಡೆದ ವಿಷಯಗಳನ್ನೆಲ್ಲಾ ಹೇಳಿದಮೇಲೆ ಆಕೆಗೆ ಸ್ನಾನಮಾಡಿಸಿ ಭೂಷಣಾದಿಗಳನ್ನು ಕೊಟ್ಟು ಅಲಂಕರಿಸಿ ಮೇನಾದಲ್ಲಿ ಕೂರಿಸಿ ಸುತ್ತಲೂ ವೇತ್ರಪಾಣಿಗಳಾದ ಕಂಚುಕಿಗಳನ್ನು ನಿಯಮಿಸಿ ಆಕೆಯ ಮುಂದೆ ವಾದ್ಯಗಳನ್ನು ಬಾಜಿಸುತ್ತ ಅಪ್ಸರಸ್ತ್ರೀಯರಿಂದ ನೃತ್ಯವನ್ನು ಮಾಡಿಸುತ್ತ ಜಾಗ್ರತೆಯಾಗಿ ರಾಮಚಂದ್ರನ ಬಳಿಗೆ ಕರೆತಂದರು.

ತತೋಽವರುಹ್ಯ ಯಾನಾತ್ಸಾ ಪದ್ಭ್ಯಾಂ ಗತ್ವಾ ಶನೈಃ ಪತಿಂ ।
ನನಾಮ ಸೀತಾ ಶ್ರೀರಾಮಂ ಲಜ್ಜಿತಾಸೀತ್ಪತೇಃ ಪುರಃ ॥ ೩ ॥

ರಾಮೋಽಪಿ ದೃಷ್ಟ್ವಾ ತಾಂ ಸೀತಾಂ ಶುದ್ಧಾಂ ಜ್ಞಾತ್ವಾಪಿ ತ್ವಾಂ ಪುನಃ ।
ಸರ್ವೇಷಾಂ ಪ್ರತ್ಯಯಾರ್ಥಂ ಹಿ ತದಾ ವಚನಮಬ್ರವೀತ್ ॥ ೪ ॥

ಯಥೇಚ್ಛಂ ಗಚ್ಛ ವೈದೇಹಿ ರಿಪುಗೇಹ ನಿವಾಸಿನಿ ।
ನ ತ್ವಾಮಂಗೀಕರೋಮ್ಯದ್ಯ ಬ್ರಹ್ಮಣಾ ಪ್ರಾರ್ಥಿತೋಽಪ್ಯಹಂ ॥ ೫ ॥

ತದ್ರಾಮವಚನಂ ಶ್ರುತ್ವಾ ಕಾರಯಿತ್ವಾ ಚಿತಾಂ ಶುಭಾಂ ।
ಲಕ್ಷ್ಮಣೇನಾಥ ಸುಸ್ನಾತಾಂ ಸೀತಾ ವಚನಮಬ್ರವೀತ್ ॥ ೬ ॥

---

೩. ರಾಮನಬಳಿಗೆ ಹೋಗುತ್ತಲೂ ಸೀತೆಯು ಪಲ್ಲಕ್ಕಿಯಿಂದ ಕೆಳಕ್ಕೆ ಇಳಿದು ಕಾಲುನಡಗೆಯಿಂದಲೇ ಗಂಡನ ಬಳಿಗೆ ಹೋದಳು. ಮತ್ತು ಆ ರಾಮನಿಗೆ ನಮಸ್ಕರಿಸಿ ಲಜ್ಜೆಯಿಂದ ಅವನ ಎದುರಿಗೆ ನಿಂತಳು.

೪. ರಾಮನು ಸೀತೆಯನ್ನು ನೋಡಿದನು. ಆಕೆಯು ಶುದ್ಧಳೆಂದು ರಾಮನಿಗೆ ಗೊತ್ತಿದ್ದರೂ ಎಲ್ಲರಿಗೂ ನಂಬುಗೆ ಹುಟ್ಟುವುದಕ್ಕೋಸ್ಕರ ಆಕೆಯನ್ನು ಕುರಿತು ಇಂತೆಂದನು.

೫. ಎಲೈ ಸೀತೆಯೆ ! ನೀನು ಶತ್ರುವಿನ ಮನೆಯಲ್ಲಿದ್ದೆ. ನೀನು ನಿನಗೆ ಇಷ್ಟಬಂದ ಕಡೆಗೆ ಹೋಗಬಹುದು. ಬ್ರಹ್ಮನು ಬಂದು ನನಗೆ ಹೇಳಿದರೂ ಕೂಡ ನಾನು ನಿನ್ನನ್ನು ಅಂಗೀಕರಿಸುವುದಿಲ್ಲ.

೬. ರಾಮನು ಹೀಗೆ ಹೇಳಿದುದನ್ನು ಕೇಳಿ ಸೀತೆಯು ಲಕ್ಷ್ಮಣನಿಗೆ ಹೇಳಿ ಚಿತೆಯನ್ನು ಮಾಡಿಸಿದಳು. ಮತ್ತು ಮತ್ತೆ ಸ್ನಾನವನ್ನು ಮಾಡಿಕೊಂಡು ಬಂದು ಅಲ್ಲಿ ಇಂತೆಂದಳು.

ರಾಮಾದನ್ಯಂ ಚೇತಸಾಪಿ ನಾಹಂ ಜಾನಾಮಿ ಪಾವಕೇ ।
ಯದಿದಂ ಮೇಽಸ್ತಿ ಸತ್ಯಂ ಹಿ ತರ್ಹಿ ತ್ವಂ ಶೀತಲೋ ಭವ ॥ ೭ ॥

ಇತಿ ಸಾ ಶಪಥಂ ಕೃತ್ವಾ ವಿವೇಶಾನಲಮುತ್ತಮಂ ।
ತತಸ್ಸ ದೇವ ವಾಕ್ಯೈಶ್ಚ ತಥಾ ದಶರಥಸ್ಯ ಚ ॥ ೮ ॥

ವಚನಾಜ್ಜಾನಕೀಂ ಶುದ್ಧಾಂ ಜ್ಞಾತ್ವಾ ತಾಮುಗ್ರಹೀತ್ಪ್ರಭುಃ ।
ಸುಭೂಷಿತಾಂ ಪಾವಕೇನ ಸ್ವಾಂಕೇ ಸಂಸ್ಥಾಪಿತಾಂ ಶುಭಾಂ ॥ ೯ ॥

ಪಂಚವಟ್ಯಾಂ ಸ್ವಯಮೇವ ಪುರಾ ನ್ಯಸ್ತಾಂ ಚ ಪಾವಕೇ ।
ಆಲಿಂಗ್ಯ ಜಾನಕೀಂ ರಾಮೋ ನಿಜಾಂಕೇ ಸನ್ನ್ಯವೇಶಯತ್ ॥ ೧೦ ॥

---

೭. ಎಲೈ ವಹ್ನಿಯೆ ! ನಾನು ರಾಮುನನ್ನು ಬಿಟ್ಟು ಮತ್ತೊಬ್ಬನನ್ನು ಮನಸ್ಸಿನಲ್ಲಿಯೂ ನೆನಸಿಲ್ಲ. ಈ ಪಾತಿವ್ರತ್ಯರೂಪವಾದ ಸತ್ಯವು ನನ್ನಲ್ಲಿದ್ದರೆ ನೀನು ನನಗೆ ಶೀತವಾಗಿ ಆಗು.

೮. ಹೀಗೆಂಬುದಾಗಿ ಸೀತೆಯು ಶಪಥವನ್ನು ಮಾಡಿ ಆ ಚಿತೆಯ ಬೆಂಕಿಯಲ್ಲಿ ಧುಮಿಕಿದಳು. ಅನಂತರದಲ್ಲಿ ಅಂತರಿಕ್ಷದಲ್ಲಿ ದೇವತೆಗಳೂ ದಶರಥನೂ ಬಂದರು.

೯. ಅವರು ಆ ಜಾನಕಿಯು ಶುದ್ಧಳೆಂದು ಹೇಳಲು ಮತ್ತು ಅಗ್ನಿಯೂ ಸುಡದೆ ತೊಡೆಯಮೇಲೆ ಕೂರಿಸಿಕೊಂಡಿರಲು ಇದರಿಂದ ಜಾನಕಿಯು ಶುದ್ಧಳೆಂದು ತಿಳಿದು ರಾಮುನು ಅವಳನ್ನು ಪರಿಗ್ರಹಿಸಿದನು.

೧೦. ಮತ್ತು ಅಗ್ನಿದೇವನು ಛಾಯಾರೂಪಳಾದ ಸೀತೆಯನ್ನು ತೊಡೆಯ ಮೇಲೆ ಕೂರಿಸಿಕೊಳ್ಳಲು ಪಂಚವಟಿಯಲ್ಲಿ ಅಗ್ನಿಯಲ್ಲಿಟ್ಟಿದ್ದ ಆ ಸೀತೆಯ ಭಾಗವೂ ಬಂದು ಸೇರಿಕೊಂಡಿತು. ಆಗ ಆಕೆಯನ್ನು ರಾಮುನು ಪರಿಗ್ರಹಿಸಿ ಆಲಿಂಗನ ಮಾಡಿಕೊಂಡು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡನು.

ತಾಮಸೀ ರಾಜಸೀ ಚೈವ ಸಾತ್ವಿಕೀ ಯಾ ತ್ರಿಧಾ ಪುರಾ |
ಜಾತಾ ರಾವಣಘಾತಾರ್ಥೇ ಸಾ ಜಾತೈಕತ್ರ ವೈ ತದಾ || ೧೧ ||

ತತೋ ದೇವೈಸ್ತುತೋ ರಾಮಶ್ಚೇಂದ್ರೇಣ ಸಮರೇ ಮೃತಾನ್ |
ವಾನರೌಘಾ೯ ಸುಧಾವೃಷ್ಟ್ಯಾ ಜೀವಯಾಮಾಸ ಸಾದರಂ || ೧೨ ||

ತತ್ರೈಕಂ ವಾನರಂ ರಾಮೋಽದೃಷ್ಟ್ವಾ ಪಪ್ರಚ್ಛ ಮಾರುತಿಂ |
ರಾಘವಂ ಮಾರುತಿಃ ಪ್ರಾಹ ಕುಂಭಕರ್ಣೇನ ಭಕ್ಷಿತಃ || ೧೩ ||

ಯದಿ ಕಿಂಚಿತ್ತಸ್ಯ ಕಪೇರ್ನಖಕೇಶಾಸ್ಥಿಲೋಹಿತಂ |
ರಣೇಽಭವಿಷ್ಯತ್ಪತಿತಂ ತರ್ಹ್ಯದ್ಯಾಮೃತವೃಷ್ಟಿಭಿಃ || ೧೪ ||

---

೧೧. ಸಾತ್ವಿಕೀ, ರಾಜಸೀ, ತಾಮಸೀ, ಎಂಬುದಾಗಿ ರಾವಣನನ್ನು ಕೊಲ್ಲಲು ಮೂರು ಭಾಗವಾಗಿ ಹಿಂದೆ ಆ ಸೀತೆಯು ಆಗಿದ್ದಳಷ್ಟೆ! ಆ ಮೂರು ಭಾಗವೂ ಈಗ ಒಂದಾದುವು.

೧೨. ಅನಂತರ ದೇವತೆಗಳು ರಾಮನನ್ನು ಸ್ತುತಿಸಿದರು. ರಾಮನು ಇಂದ್ರನಿಗೆ ಹೇಳಿ ಆ ಯುದ್ಧದಲ್ಲಿ ಮೃತರಾದ ಕಪಿಗಳನ್ನು ವಿಶ್ವಾಸದಿಂದ ಅಮೃತವೃಷ್ಟಿಯನ್ನು ಮಾಡಿ ಬದುಕಿಸಿದನು.

೧೩. ಅವುಗಳೊಳಗೆ ಒಂದು ಕಪಿಯು ಕಾಣದಿರುವುದನ್ನು ನೋಡಿ ರಾಮನು ಮಾರುತಿಯನ್ನು ಕುರಿತು ಆ ಕಪಿಯು ಎಲ್ಲಿಹೋಯಿತೆಂದು ಕೇಳಿದನು. ಅದಕ್ಕೆ ಮಾರುತಿಯು ಆ ಕಪಿಯನ್ನು ಕುಂಭಕರ್ಣನು ತಿಂದು ಬಿಟ್ಟನು. ಎಂದನು.

೧೪. ಎಲೈ ರಘೂತ್ತಮನೆ! ಆ ಕಪಿಯ ನಖವಾಗಲೀ, ಕೇಶವಾಗಲೀ, ರಕ್ತವಾಗಲೀ, ಯಾವ ಪದಾರ್ಥವಾದರೂ ಆಗಲಿ, ರಣರಂಗದಲ್ಲಿ ಬಿದ್ದಿದ್ದರೆ ಆಗ ಅಮೃತವೃಷ್ಟಿಯಿಂದ ಆ ಕಪಿಯು ನಿಶ್ಚಯವಾಗಿಯೂ ಬದುಕುತ್ತಿದ್ದಿತು. ಇದು ಸತ್ಯವಾದುದು.

ಅಭವಿಷ್ಯಜ್ಜೀವಿತಸ್ಸ ಸತ್ಯಂ ವಿದ್ಧಿ ರಘೂತ್ತಮ ।
ಸುಧಾವೃಷ್ಟ್ಯಾ ರಾಕ್ಷಸಾಸ್ತೇ ಜೀವಯಿಷ್ಯಂತಿ ವೈ ಪುನಃ ॥ ೧೫ ॥

ಇತಿ ಭೀತ್ಯಾ ಪುರಾಸ್ಮಾಭಿಸ್ಸರ್ವೇ ತ್ಯಕ್ತಾ ಮಹೋದಧೌ ।
ತನ್ಮಾರುತೇರ್ವಚಶ್ಶ್ರುತ್ವಾ ಯಮರಾಜಂ ವ್ಯಲೋಕಯತ್ ॥ ೧೬ ॥

ಯಮೋಽಪಿ ಭೀತ್ಯಾ ರಾಮಾಗ್ರೇಽರ್ಪಯತ್ತಂ ಪ್ಲವಗೋತ್ತಮಂ ।
ತಂ ದೃಷ್ಟ್ವಾ ರಾಘವಸ್ತುಷ್ಟಸ್ತದಾಜ್ಞಾಂ ನಾಕಮುತ್ತಮಂ ॥ ೧೭ ॥

ಗಂತುಂ ದದೌ ಮಾತಲಿನೇ ಸೋಽಪಿ ನತ್ವಾ ರಘೂತ್ತಮಂ ।
ರಥೇನ ವಾಜಿಯುಕ್ತೇನ ಸ ಯಯೌ ಮಘವತಃ ಪುರೀಂ ॥ ೧೮ ॥

ರಾಮಸ್ತು ಮಂಗಳಸ್ನಾನಂ ಕರ್ತುಂ ಸಂಪ್ರಾರ್ಥಿತೋಽಪಿ ಹಿ ।
ವಿಭೀಷಣೇನ ಭರತಂ ಸ್ಮೃತ್ವಾ ನಾಂಗೀಚಕಾರ ಸಃ ॥ ೧೯ ॥

೧೫–೧೬. ಈ ಸುಧಾವೃಷ್ಟಿಯಿಂದ ರಾಕ್ಷಸರು ಬದುಕಿಯಾರೆಂಬ ಭೀತಿಯಿಂದ ಅವರ ಶವವನ್ನೆಲ್ಲಾ ಮೊದಲೇನೇ ಸಮುದ್ರದಲ್ಲಿ ಬಿಸಾಡಿದೆವು. ಮಾರುತಿಯು ಹೀಗೆಂದು ಹೇಳಿದುದನ್ನು ನೋಡಿ ರಾಮನು ಯಮರಾಜನ ಮುಖವನ್ನು ನೋಡಿದನು.

೧೭. ಆಗ ಯಮನು ಹೆದರಿಕೊಂಡು ಆ ಕಪಿಯನ್ನು ತಂದು ರಾಮನಿಗೆ ಒಪ್ಪಿಸಿದನು. ಇದರಿಂದ ರಾಮನಿಗೆ ಬಹು ಸಂತೋಷವಾಯಿತು. ಆಗ ಮಾತಲಿಗೆ ಸ್ವರ್ಗಕ್ಕೆ ಹೋಗುವಂತೆ ಅಪ್ಪಣೆಮಾಡಿದನು.

೧೮. ಆಗ ಮಾತಲಿಯು ರಾಮನಿಗೆ ನಮಸ್ಕರಿಸಿ ರಥವನ್ನು ತೆಗೆದುಕೊಂಡು ಇಂದ್ರನ ಪಟ್ಟಣಕ್ಕೆ ಹೋಗಿ ರಥವನ್ನು ಇಂದ್ರನಿಗೆ ಒಪ್ಪಿಸಿದನು.

೧೯. ವಿಭೀಷಣನು ರಾಮನನ್ನು ಮಂಗಳಸ್ನಾನ ಮಾಡಬೇಕೆಂದು ಕೇಳಿಕೊಳ್ಳಲು ಭರತನ ವಿಷಯವನ್ನು ಸ್ಮರಿಸಿಕೊಂಡು ಹಾಗೆ ಮಾಡಲು ಒಪ್ಪಲಿಲ್ಲ.

ತತಸ್ಸರ್ವೈರ್ವಾನರೈಶ್ಚ ಪುಷ್ಪಕಂ ಚಾರುರೋಹ ಸಃ ।
ರಥೇನ ದಾರುಕಶ್ಚಾಪಿ ಗರುಡೋ ಮಕರಧ್ವಜಃ ॥ ೨೦ ॥

ವಿಭೀಷಣಶ್ಚಾರುರೋಹ ಪುಷ್ಪಕಂ ರಾಘವಾಜ್ಞಯಾ ।
ತತಸ್ತೇ ನಿರ್ಜರಾಸ್ಸರ್ವೇ ರಾಮಮಾಮಂತ್ರ್ಯ ಖಂ ಯಯುಃ ॥ ೨೧ ॥

ಪೃಷ್ಟ್ವಾ ರಾಮಂ ದಶರಥೋ ವಿಮಾನೇನ ಯಯೌ ದಿವಂ ।
ಅಥ ತಂ ರಾಘವಂ ಪ್ರಾಹ ಪುಷ್ಪಕಸ್ಥಂ ವಿಭೀಷಣಃ ॥ ೨೨ ॥

ರಾಮ ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ಮಾಂ ವಕ್ತುಮರ್ಹಸಿ ।
ಐರಾವಣಗೃಹೇ ರಾಮ ಯದಾ ಪಾತಾಲಮುತ್ತಮಂ ॥ ೨೩ ॥

ಪುರಾ ಗತಸ್ತದಾ ತೂಷ್ಣೀಂ ಕಿಮರ್ಥಂ ತ್ವಂ ಸ್ಥಿತಃ ಪ್ರಭೋ ।
ಕಥಂ ತೌ ನ ಹತೌ ದುಷ್ಟೌ ತದೈವ ಕ್ಷಣಮಾತ್ರತಃ ॥ ೨೪ ॥

---

೨೦. ಅನಂತರ ರಾಮನು ಪುಷ್ಪಕದಲ್ಲಿ ಎಲ್ಲಾ ಕಪಿಗಳನ್ನೂ ಕೂರಿಸಿ ಕೊಂಡು ಕುಳಿತುಕೊಂಡನು. ದಾರುಕನು ರಥದೊಡನೆ ಆ ಪುಷ್ಪಕದಲ್ಲಿ ಕುಳಿತನು. ಗರುಡನೂ, ಮಕರಧ್ವಜನೂ ಆ ಪುಷ್ಪಕದಲ್ಲಿ ಕುಳಿತರು.

೨೧. ರಾಮನ ಅಪ್ಪಣೆಯಂತೆ ವಿಭೀಷಣನೂ ಪುಷ್ಪಕವನ್ನು ಏರಿದನು. ಅನಂತರ ಅಲ್ಲಿಗೆ ಬಂದಿದ್ದ ದೇವತೆಗಳೆಲ್ಲರೂ ರಾಮನಿಗೆ ಹೇಳಿ ಅಂತರಿಕ್ಷದಲ್ಲಿ ಹೊರಟು ಹೋದರು.

೨೨. ದಶರಥನೂ ಕೂಡ ರಾಮನಿಗೆ ಹೇಳಿ ಸ್ವರ್ಗಕ್ಕೆ ಹೊರಟುಹೋದನು. ಎಲ್ಲರೂ ಪುಷ್ಪಕದಲ್ಲಿ ಕುಳಿತಮೇಲೆ ವಿಭೀಷಣನು ರಾಮನನ್ನು ಕುರಿತು ಇಂತೆಂದನು.

೨೩–೨೪. ಎಲೈ ರಾಮನೆ ! ನಿನ್ನಲ್ಲಿ ಒಂದು ವಿಷಯವನ್ನು ಪ್ರಶ್ನಿಸ ಬೇಕೆಂದಿದ್ದೇನೆ. ಅದರ ನಿಶ್ಚಯಾಂಶವನ್ನು ನೀನು ಹೇಳಬೇಕು. ನೀನು ಐರಾವಣನ ಮನೆಗೆ ಒಯ್ಯಲ್ಪಟ್ಟಾಗ ಏತಕ್ಕೋಸ್ಕರ ಸುಮ್ಮನಿದ್ದೆ ? ಒಡನೆಯೇ ದುಷ್ಟರಾದ ಅವರಿಬ್ಬರನ್ನೂ ನೀನೇತಕ್ಕೆ ಕೊಲ್ಲಲಿಲ್ಲ ?

ತತ್ತಸ್ಯ ವಚನಂ ಶ್ರುತ್ವಾ ವಿಹಸ್ಯ ರಾಘವೋಽಬ್ರವೀತ್ ।
ಭ್ರಮರಾಣಾಂ ವಧಃ ಪೂರ್ವಂ ವಿಧಿನಾ ಮಾರುತೇಃ ಕರಾತ್ ॥ ೨೫ ॥

ಪ್ರೋಕ್ತಸ್ತಸ್ಮಾನ್ಮಯಾ ತೂಷ್ಣೀಂ ಪ್ರತೀಕ್ಷಾ ಮಾರುತೇಃ ಕೃತಾ ।
ಅನ್ಯಚ್ಚಾಪಿ ಜಗತ್ಯಾಂ ಹಿ ಮಾರುತೇಃ ಪೌರುಷಂ ಜನಾಃ ॥ ೨೬ ॥

ವದಂತು ಯೇನ ಶ್ರೀರಾಮಲಕ್ಷ್ಮಣೌ ಮೋಚಿತೌ ಪುರಾ ।
ಅಸುರಾಭ್ಯಾಂ ಹಿ ಪಾತಾಲೇ ಸೋಽಯಂ ಶ್ರೀರಾಮ ಸೇವಕಃ ॥ ೨೭ ॥

ಇತಿ ಪೌರುಷವೃಧ್ಯರ್ಥಂ ಮಾರುತೇರ್ಜಗತೀತಲೇ ।
ಮಮ ದಾಸಸ್ಯ ಬಲಿನಸ್ತದಾ ತೂಷ್ಣೀಂ ಸ್ಥಿತಂ ಮಯಾ ॥ ೨೮ ॥

---

೨೫. ವಿಭೀಷಣನ ಈ ಮಾತನ್ನು ಕೇಳಿ ರಾಮನು ನಗುತ್ತ ಇಂತೆಂದನು. ಅಲ್ಲಿದ್ದ ಭ್ರಮರಗಳ ನಾಶವು ಮಾರುತಿಯಿಂದ ಆಗಬೇಕೆಂದು ವಿಧಿಯು ವರವನ್ನು ಕೊಟ್ಟಿದ್ದನು.

೨೬–೨೭. ಆದುದರಿಂದ ನಾನು ಸುಮ್ಮನಿದ್ದು ಮಾರುತಿಯನ್ನು ನಿರೀಕ್ಷಿಸುತ್ತಿದ್ದೆನು. ಇದೂ ಅಲ್ಲದೆ ಜನರು ಲೋಕದಲ್ಲಿ ಮಾರುತಿಯ ಪೌರುಷವನ್ನು ಹೊಗಳಬೇಕು. ರಾಮಲಕ್ಷ್ಮಣರನ್ನೂ ಕೂಡ ಮಾರುತಿಯು ಬಿಡಿಸಿದನು. ಎಂಬುದು ಅವನಿಗೆ ಒಂದು ಹೆಮ್ಮೆಯಾಗಿರಬೇಕು. ಪಾತಾಳದಲ್ಲಿಯೂ ಕೂಡ ಈತನು ರಾಮಲಕ್ಷ್ಮಣರನ್ನು ಬಿಡಿಸಿದನು. ಈತನು ಅಂತಹ ರಾಮಸೇವಕನೆಂದೆನ್ನಬೇಕು.

೨೮. ಮಾರುತಿಗೆ ಜಗತ್ತಿನಲ್ಲಿ ಈ ರೀತಿಯಾಗಿ ಪೌರುಷವು ವೃದ್ಧಿ ಹೊಂದಲಿ. ಅವನು ನನ್ನ ದಾಸನು. ಮತ್ತು ಬಲಿಷ್ಠನು. ಎಂಬುದಾಗಿ ತಿಳಿದು ನಾನು ಸುಮ್ಮನಾದೆನು.

ನೋ ಚೇದ್ಧುಂಕಾರಮಾತ್ರೇಣ ಪಥಿ ಹಂತುಂ ನ ಕಿಂ ಕ್ಷಮಃ ।
ಇಷಿಕಾಸ್ತ್ರೇಣ ಕಾಕಸ್ಯ ಯೇನ ನೇತ್ರೋ ವಿದಾರಿತಃ ॥ ೨೯ ॥

ಶತಯೋಜನಪರ್ಯಂತಂ ಮಾರೀಚೋಬ್ಧೌ ಪತತ್ರಿಣಾ ।
ಪುರಾ ಯೇನ ಮಯಾತ್ಯಕ್ತಸ್ಸೋಽಹಂ ಕಿಂ ಕುಂಠಿತಸ್ತದಾ ॥ ೩೦ ॥

ತಯೋರ್ವಧೇ ತು ಪಾತಾಳೇ ನ ಶಸ್ತ್ರಾರ್ಥಂ ಪ್ರತೀಕ್ಷಿತಂ ।
ಮಾರುತೇಃ ಪೌರುಷಾರ್ಥಂ ಹಿ ಸತ್ಯಂ ವೇದ ವಿಭೀಷಣ ॥ ೩೧ ॥

ಇತಿ ರಾಮವಚಶ್ಶ್ರುತ್ವಾ ಮಾರುತಿಸ್ಸವಿಭೀಷಣಂ ।
ತದಾ ಪ್ರಾಹ ವಿಹಾಸ್ಯಾಥ ಕಿಂ ತ್ವಂ ತದ್ವಿಸ್ಮೃತೋಽಸಿ ಹಿ । ॥ ೩೨ ॥

ಸೇತುಕಾಲೇ ರಾಘವೇಣ ಗರ್ವಂ ದೃಷ್ಟ್ವಾ ಮಯಿ ಸ್ಥಿತಂ ।
ಲಾಂಗೂಲಂ ಖಂಡಿತಂ ಪೂರ್ವಂ ಲಿಂಗೋತ್ಪಾಟನಹೇತುನಾ ॥ ೩೩ ॥

೨೯–೩೦. ಹಾಗಿಲ್ಲದಿದ್ದರೆ ದಾರಿಯಲ್ಲಿ ಹೋಗುತ್ತಿರುವಾಗ ಹುಂಕಾರ ಮಾತ್ರದಿಂದಲೇ ಅವರನ್ನು ನಾಶಪಡಿಸಲು ನನ್ನ ಕೈಯ್ಯಲ್ಲಿ ಆಗುತ್ತಿರಲಿಲ್ಲವೆ? ಆ ಕಾಗೆಯ ಕಣ್ಣನ್ನು ಇಷಿಕಾಸ್ತ್ರದಿಂದಲೇ ಸೀಳಿದೆನು. ಒಂದು ಬಾಣವನ್ನು ಬಿಟ್ಟು ಮಾರೀಚನನ್ನು ನೂರು ಯೋಜನಗಳ ದೂರದಲ್ಲಿ ಸಾಗರದೊಳಕ್ಕೆ ಎಸೆದೆನು. ನಾನು ಹಿಂದೆ ತೋರಿಸಿದ ಆ ಬಲವೆಲ್ಲವೂ ಈಗ ಕಡಿಮೆಯಾಗಿವೆಯೇ ಯೇನು ?

೩೧. ಪಾತಾಳದಲ್ಲಿ ಹೋಗಿದ್ದಾಗ ಶಸ್ತ್ರಾಸ್ತ್ರಗಳು ಇರಲಿಲ್ಲವೆಂದು ನಾನು ಸುಮ್ಮನಿರಲಿಲ್ಲ. ಮಾರುತಿಯ ಪೌರುಷವನ್ನು ಎಲ್ಲರಿಗೂ ತೋರಿಸಬೇಕೆಂದು ಸುಮ್ಮನಿದ್ದೆನು. ಎಲೈ ವಿಭೀಷಣನೆ ! ಈ ಮಾತು ಸತ್ಯವು.

೩೨. ರಾಮನು ಹೀಗೆ ಹೇಳಿದ್ದುದನ್ನು ಮಾರುತಿಯು ಕೇಳಿ ವಿಭೀಷಣ ನನ್ನು ಕುರಿತು ನಗುತ್ತ ಎಲೈ ವಿಭೀಷಣನೆ ! ನೀನು ಮರೆತು ಬಿಟ್ಟೆಯಾ !

೩೩. ಸೇತುವೆಯನ್ನು ಕಟ್ಟುವಾಗ ರಾಮನು ನನ್ನಲ್ಲಿದ್ದ ಗರ್ವವನ್ನು ತಿಳಿದು ಲಿಂಗವನ್ನು ಕೀಳುವುದೆಂಬ ನೆವವನ್ನು ಹೂಡಿ ನನ್ನ ಬಾಲವನ್ನು ಕತ್ತರಿಸಿದನು.

ತಸ್ಯ ಮೇ ರಾಘವಾಗ್ರೇ ಹಿ ಕಿಂ ಬಲಂ ಮನ್ಯಸೇತ್ರ ಹಿ ।
ಕಿಂ ವಿಲಂಬೋ ರಾಘವಾಯ ತಯೋರಸುರಯೋರ್ವಧೇ ॥ ೩೪ ॥

ವರ್ಧಿತಾ ನಿಜದಾಸಸ್ಯ ಕೀರ್ತಿರ್ಮಮ ವಿಭೀಷಣ ।
ಇತಿ ತನ್ಮಾರುತೇರ್ವಾಕ್ಯಂ ಶ್ರುತ್ವಾ ರಾಮಂ ವಿಭೀಷಣಃ ॥ ೩೫ ॥

ನನಾಮ ಪರಯಾ ಭಕ್ತ್ಯಾ ತತಸ್ಸಮ್ಯತ್ರ್ಯಪೂಜಯತ್ ।
ಅಥ ರಾಮಃ ಪುಷ್ಪಕಸ್ಥಸ್ಸೀತಯಾ ಪ್ರಾರ್ಥಿತೋ ಮುಹುಃ ॥ ೩೬ ॥

ತದ್ವಾಕ್ಯಗೌರವಾತ್ತುಷ್ಟಸ್ತ್ರಿಜಟಾಯೈ ವರಾನ್ದದೌ ।
ವಸ್ತ್ರಾಲಂಕಾರಭೂಷಾಭಿಃ ಪೂರ್ವತುಷ್ಟಾಂ ವಿಧಾಯ ಚ ॥ ೩೭ ॥

ತ್ರಿಜಟೇ ವಚನಂ ಮೇದ್ಯ ಶೃಣು ಮಂಗಳದಾಯಕಂ ।
ಕಾರ್ತಿಕೇ ಮಾಧವೇ ಮಾಘೇ ಚೈತ್ರೇ ಮಾಸೇ ಚತುಷ್ಟಯೇ ॥ ೩೮ ॥

---

೩೪. ಈ ರಾಘವನ ಎದುರಿನಲ್ಲಿ ನನ್ನನ್ನು ಬಲಿಷ್ಠನೆಂದು ತಿಳಿದಿರುವೆಯಾ ? ಆ ಇಬ್ಬರು ರಾಕ್ಷಸರನ್ನು ಕೊಲ್ಲಬೇಕಾದರೆ ರಾಮನಿಗೆ ಸಾವಕಾಶ ಮಾಡಬೇಕಾಗಿದ್ದಿತೆ ?

೩೫. ಆ ರಾಮನು ದಾಸನಾದ ನನ್ನ ಕೀರ್ತಿಯನ್ನು ಬೆಳೆಸಿದನು. ಎಂದು ಮಾರುತಿಯು ಹೇಳಲು ಆಗ ರಾಮನಿಗೆ ವಿಭೀಷಣನು ನಮಸ್ಕರಿಸಿದನು.

೩೬–೩೭. ಬಹು ಭಕ್ತಿಯಿಂದ ನಮಸ್ಕರಿಸಿ ರಾಮನನ್ನು ಪೂಜಿಸಿದನು. ಅನಂತರ ರಾಮನು ಪುಷ್ಪಕದಲ್ಲಿ ಕುಳಿತನು. ಆಗ ಸೀತೆಯು ಬಹುವಾಗಿ ಕೇಳಿಕೊಳ್ಳಲು ಅವಳ ಮಾತಿನಂತೆ ತ್ರಿಜಟೆಗೆ ವರವನ್ನು ಕೊಟ್ಟನು. ಮತ್ತು ವಸ್ತ್ರ, ಅಲಂಕಾರ ಮುಂತಾದುವನ್ನು ಕೊಟ್ಟು ಸಂತೋಷಪಡಿಸಿದನು.

೩೮–೩೯. ಎಲೈ ತ್ರಿಜಟೆಯೆ ! ನಾನು ಹೇಳುವ ಮಂಗಳಕರವಾದ ಮಾತನ್ನು ಕೇಳು. ಕಾರ್ತಿಕ, ವೈಶಾಖ, ಚೈತ್ರ, ಮಾಘ ಈ ನಾಲ್ಕು ತಿಂಗಳಲ್ಲಿಯೂ

ಸ್ನಾತ್ವಾಗ್ರೇ ತ್ರಿದಿನಂ ಸ್ನಾನಂ ತ್ವತ್ಪ್ರೀತ್ಯರ್ಥಂ ನರೋತ್ತಮಾಃ ।
ಕರಿಷ್ಯಂತಿ ಹಿ ತೇನೈವ ಕೃತಕೃತ್ಯಾ ಭವಿಷ್ಯಸಿ ॥ ೩೯ ॥

ಯೈರ್ನರೈಸ್ತ್ರಿದಿನಂ ಸ್ನಾನಂ ನ ಕೃತಂ ಪೌರ್ಣಿಮೋರ್ಧ್ವತಃ ।
ತೇಷಾಂ ಮಾಸಕೃತಂ ಪುಣ್ಯಂ ಹರ ತ್ವಂ ವಚನಾನ್ಮಮ ॥ ೪೦ ॥

ಅನ್ಯಚ್ಚಾಪಿ ಶೃಣುಷ್ವ ತ್ವಂ ದೀಯತೇ ಯೋ ವರೋ ಮಯಾ ।
ಅಶುಚೀನಿ ಗೃಹಾಣ್ಯೇವ ತಥಾ ಶ್ರಾದ್ಧಹವೀಂಷಿ ಚ ॥ ೪೧ ॥

ಕ್ರೋಧಾವಿಷ್ಟೇನ ದತ್ತಾನಿ ವಿಧಿಪುತ್ರಕೃತಾನ್ಯಪಿ ।
ತ್ರಿಜಟೇ ತಾನಿ ತುಭ್ಯಂ ಹಿ ಶೃಣ್ವನ್ಯತ್ತ್ವಂ ಮಯೋಚ್ಯತೇ ॥ ೪೨ ॥

ಪಾದಶೌಚಮನಭ್ಯಂಗಂ ತಿಲಹೀನಂ ಚ ತರ್ಪಣಂ ।
ಸರ್ವಂ ತತ್ತ್ರಿಜಟೇ ತುಭ್ಯಂ ತಥಾ ಶ್ರಾದ್ಧಮದಕ್ಷಿಣಂ ॥ ೪೩ ॥

ಜನರು ಸ್ನಾನಮಾಡುವಾಗ ಮೊದಲಿನ ಮೂರುದಿನದ ಸ್ನಾನವನ್ನು ನಿನ್ನ ಪ್ರೀತಿಗೋಸ್ಕರ ಮಾಡಲಿ. ಅದರಿಂದಲೇ ನೀನು ಕೃತಕೃತ್ಯಗಳಾಗುತ್ತೀಯೆ !

೪೦. ಯಾರು ಆ ನಾಲ್ಕು ತಿಂಗಳಿನ ಪೌರ್ಣಮಿಯು ಮೊದಲಿನಲ್ಲಿ ಮೂರು ದಿನಗಳು ಸ್ನಾನಮಾಡುವುದಿಲ್ಲವೋ ಅವರು ಆ ತಿಂಗಳಲ್ಲಿ ಮಾಡಿದ ಪುಣ್ಯಗಳನ್ನು ನೀನು ತೆಗೆದುಕೋ. ಇದೇ ನನ್ನ ವರವು.

೪೧-೪೨. ಮತ್ತೂ ಒಂದು ವರವನ್ನು ಕೊಡುತ್ತೇನೆ. ಅದನ್ನೂ ಕೇಳು. ಯಾರಾದರೂ ಸರಿಯೆ ! ಕೊನೆಗೆ ಬ್ರಹ್ಮನ ಮಗನಾದರೂ ಸರಿಯೆ ! ಯಾವ ಮನುಷ್ಯನು ಮನೆಯನ್ನು ಶುಚಿಯಾಗಿಟ್ಟುಕೊಳ್ಳದೆಯಾಗಲಿ ಕವ್ಯಗಳನ್ನು ಶುಚಿಯಾಗಿಟ್ಟುಕೊಳ್ಳದೆಯಾಗಲಿ ಇದ್ದರೂ ಮಧ್ಯದಲ್ಲಿ ಕೋಪಮಾಡಿದರೂ ಅಂತಹವರು ಮಾಡಿದ ಶ್ರಾದ್ಧಗಳೆಲ್ಲವೂ ನಿನಗೆ ಬಂದು ಸೇರಲಿ.

೪೩. ಅಭ್ಯಂಜನವಿಲ್ಲದ ಪಾದಶೌಚವೂ (ಕಾಲುತೊಳೆದುಕೊಳ್ಳುವುದು) ಎಳ್ಳಿಲ್ಲದ ತರ್ಪಣವೂ ದಕ್ಷಿಣೆಯನ್ನು ಕೊಡದೆ ಮಾಡಿದ ಶ್ರಾದ್ಧವೂ ಇವೆಲ್ಲವೂ ನಿನಗಾಗಲಿ.

ಇತಿ ದತ್ವಾ ವರಾನ್ ರಾಮಸ್ತ್ರಿಜಟಾಸರಮಾನ್ವಿತಃ ।
ಸವಿಭೀಷಣಸುಗ್ರೀವ ಮಕರಧ್ವಜ ವಾನರೈಃ ॥ ೪೪ ॥

ಯಯೌ ವಿಹಾಯಸಾ ಸೀತಾಂ ದರ್ಶಯನ್ ಕೌತುಕಾನಿ ಸಃ ।
ಪಶ್ಯ ಸೀತೇ ಪುರೀಂ ಲಂಕಾಂ ತಥಾ ರಣಭುವಂ ಶುಭಾಂ ॥ ೪೫ ॥

ಪಶ್ಯ ಸೇತುರ್ಮಯಾ ಬದ್ಧಃ ಶಿಲಾಭಿರ್ಲವಣಾರ್ಣವೇ ।
ಏತಚ್ಚ ದೃಶ್ಯತೇ ತೀರ್ಥಂ ಸೇತುಬಂಧಮಿತಿ ಸ್ಮೃತಂ ॥ ೪೬ ॥

ಇತ್ಯುಕ್ತ್ವಾ ರಘುವೀರಸ್ತು ರಾಕ್ಷಸೇಂದ್ರಸ್ಯ ವಾಕ್ಯತಃ ।
ಪುಷ್ಪಕಾದ್ಭುವಿ ಚೋತ್ತೀರ್ಯ ಧೃತ್ವಾ ಕೋದಂಡಮುತ್ತಮಂ ॥ ೪೭ ॥

ಬಭಂಜ ಸೇತುಂ ತತ್ಕೋಟ್ಯಾ ಧನುಷ್ಕೋಟಿರಿತೀರ್ಯತೇ ।
ಅತ ಏವ ಹಿ ತತ್ತೀರ್ಥಂ ಸ್ನಾನಾತ್ಕೈವಲ್ಯ ದಾಯಕಂ ॥ ೪೮ ॥

---

೪೪. ರಾಮನು ತ್ರಿಜಟೆಗೆ ಈ ರೀತಿಯಾಗಿ ವರವನ್ನು ಕೊಟ್ಟು ತ್ರಿಜಟೆ, ಸರಮೆ, ವಿಭೀಷಣ, ಸುಗ್ರೀವ, ಮಕರಧ್ವಜ ಕಪಿಗಳು ಇವರೊಡನೆ ಪುಷ್ಪಕದಲ್ಲಿ ಕುಳಿತು ಸೀತೆಗೆ ಕಾಡುಗಳನ್ನು ತೋರಿಸುತ್ತ ಹೊರಟನು.

೪೫–೪೬. ಎಲೈ ಸೀತೆಯೆ! ಲಂಕೆಯನ್ನು ನೋಡು. ಈ ರಣರಂಗವನ್ನು ನೋಡು. ಆ ಸೇತುವೆಯನ್ನು ನೋಡು. ಇದನ್ನು ನಾನು ಕಲ್ಲುಗಳಿಂದ ಲವಣ ಸಮುದ್ರದಲ್ಲಿ ಕಟ್ಟಿದ್ದೇನೆ. ಇಲ್ಲಿ ಕಾಣುವ ಈ ತೀರ್ಥವು ಸೇತುಬಂಧ ತೀರ್ಥವು. ಇದು ಬಹು ಪವಿತ್ರವಾದುದು.

೪೭–೪೮. ರಾಮನು ಹೀಗೆಂದು ಹೇಳುತ್ತ ಆ ವಿಭೀಷಣನ ಮಾತಿನಂತೆ ಅಲ್ಲಿಳಿದು ತನ್ನ ಧನುಸ್ಸನ್ನು ತೆಗೆದುಕೊಂಡು ಆ ಸೇತುವೆಯನ್ನು ಧನುಸ್ಸಿನ ತುದಿಯಿಂದ ಕತ್ತರಿಸಿದನು. (ಒಡೆದನು) ಅದೇ ಧನುಷ್ಕೋಟಿ ಎಂದೆನಿಸಿ ಕೊಳ್ಳುತ್ತದೆ. ಆದುದರಿಂದಲೇ ಆ ಧನುಷ್ಕೋಟಿ ತೀರ್ಥವು ಸ್ನಾನಮಾಡಿದವರಿಗೆ ಕೈವಲ್ಯವನ್ನು ಕೊಡುತ್ತದೆ.

ಕೋದಂಡಪಾಣಿರ್ನಾಮ್ನಾಸೀದ್ರಾಮಮೂರ್ತಿಶ್ಚ ತತ್ರ ಹಿ ।
ಏತಸ್ಮಿನ್ನಂತರೇ ತತ್ರ ಸಂಪಾತಿಸ್ಸ ಯಯೌ ತದಾ ॥ ೪೯ ॥

ತಮಾಲಿಂಗ್ಯ ರಾಮಚಂದ್ರಸ್ತಂ ಪ್ರಾಹ ಸ್ಮಿತಪೂರ್ವಕಂ ।
ಬಂಧೋರ್ನಾಮಾತ್ರ ತೀರ್ಥಂ ತ್ವಂ ಕುರು ಸೇತೌ ಮಹತ್ತಮಂ ॥ ೫೦ ॥

ತಥೇತಿ ರಾಮವಚನಾದ್ಭ್ರಾತುಸ್ಸಂತೋಷಕಾಮ್ಯಯಾ ।
ತೀರ್ಥಂ ಚಕಾರ ಸಂಪಾತಿರ್ಜಟಾಯುಮಿತಿ ವಿಶ್ರುತಂ ॥ ೫೧ ॥

ತತೋ ರಾಮಾಜ್ಞಯಾ ಯಾನಂ ಸಂಪಾತಿಶ್ಚಾರುರೋಹ ಸಃ ।
ತತೋ ಯಾನೇನ ತಾಂ ಸೀತಾಂ ದರ್ಶಯರ್ನ ಕೌತುಕಾನಿ ಹಿ ॥ ೫೨ ॥

ಯಯೌ ರಾಮೇಶ್ವರಂ ಪೂಜ್ಯ ತಯಾ ಶ್ರೀರಘುನಂದನಃ ।
ಸೀತೇತ್ರ ಪಶ್ಯೆ ಮಂತ್ರಾರ್ಥ ಮೇಕಾಂತೇ ಸಂಸ್ಥಿತಂ ಪುರಾ ॥ ೫೩ ॥

---

೪೯. ಆ ಜಾಗದಲ್ಲಿ ಪ್ರತಿಷ್ಠಿತವಾದ ರಾಮಮೂರ್ತಿಗೆ ಕೋದಂಡಪಾಣಿ ಎಂದು ಹೆಸರಾಯಿತು. ಇಷ್ಟು ನಡೆಯುವವೇಳೆಗೆ ಅಲ್ಲಿಗೆ ಸಂಪಾತಿಯು ಬಂದನು.

೫೦. ರಾಮಚಂದ್ರನು ಆ ಸಂಪಾತಿಯನ್ನು ಆಲಿಂಗಿಸಿಕೊಂಡು ನಗುಮುಖದಿಂದ ಎಲೈ ಸಂಪಾತಿಯೆ! ನಿನ್ನ ತಮ್ಮನಾದ ಜಟಾಯುವಿನ ಹೆಸರಿನಿಂದ ಇಲ್ಲಿ ಒಂದು ತೀರ್ಥವನ್ನು ಮಾಡು. ಎಂದನು.

೫೧. ಹಾಗೆಯೇ ಆಗಲೆಂದು ರಾಮನ ಮಾತಿನಂತೆ ತಮ್ಮನಿಗೆ ಸಂತೋಷವಾಗಲೆಂದು ಜಟಾಯು ತೀರ್ಥವೆಂಬ ಹೆಸರಿನಿಂದ ಅಲ್ಲೊಂದು ತೀರ್ಥವನ್ನು ಕಲ್ಪಿಸಿದನು.

೫೨. ಅನಂತರ ರಾಮನ ಅಪ್ಪಣೆಯಂತೆ ಸಂಪಾತಿಯೂ ಪುಷ್ಪಕದಲ್ಲಿ ಕುಳಿತನು. ರಾಮನು ಸೀತೆಗೆ ಮತ್ತೆ ಕೌತುಕವನ್ನು ತೋರಿಸುತ್ತ ಹೊರಟನು.

೫೩. ರಾಮೇಶ್ವರದಲ್ಲಿ ರಾಮನೂ ಸೀತೆಯೂ ರಾಮೇಶ್ವರನನ್ನು ಪೂಜಿಸಿದರು. ಆಗ ರಾಮನು ಸೀತೆಯನ್ನು ಕುರಿತು ಎಲೈ ಸೀತೆಯೆ! ಇಲ್ಲಿ ಮಂತ್ರಾಲೋಚನೆಯನ್ನು ಮಾಡಲು ಯಾರಿಗೂ ತಿಳಿಯದಂತೆ ಕುಳಿತಿದ್ದೆವು.

ಅತ್ರ ದರ್ಭೇಷು ಶಯನಂ ಕೃತಂ ಪಶ್ಯ ವಿದೇಹಜೇ ।
ನವಗ್ರಹಾರ್ಥಂ ಪ್ರಕ್ಷಿಪ್ತಾನ್ಪಾಷಾಣಾನ್ಪಶ್ಯ ಸಾಗರೇ ॥ ೫೪ ॥

ತೂಷ್ಣೀಮೇವ ಸ್ಥಿತಂ ಪಶ್ಯ ಸಾಗರಂ ಮಮ ವಾಕ್ಯತಃ ।
ಏವಂ ತಾಂ ದರ್ಶಯನ್ ರಾಮಃ ಕಿಷ್ಕಿಂಧಾಂ ಪ್ರಯಯೌ ಕ್ಷಣಾತ್ ॥೫೫॥

ವಾನರಾಣಾಂ ಸ್ತ್ರಿಯಃ ಸರ್ವಾ ವಿಮಾನೇ ಸ್ಥಾಪ್ಯ ರಾಘವಃ ।
ಯಯೌ ತಾಂ ದರ್ಶಯನ್ ಸೀತಾಂ ಕೌತುಕಾನಿ ಸಮಂತತಃ ॥ ೫೬ ॥

ಪ್ರವರ್ಷಣಗಿರಿಂ ಪಶ್ಯ ಋಷ್ಯಮೂಕಾಚಲಂ ತಥಾ ।
ಪಂಪಾಸರೋವರಂ ಪಶ್ಯ ಕೃಷ್ಣಾಂ ಭೀಮರಥೀಂ ಶುಭಾಂ ॥ ೫೭ ॥

ಪಶ್ಯ ಪಂಚವಟೀಂ ರಮ್ಯಾಂ ಗೋದಾತೀರವಿರಾಜಿತಾಂ ।
ಅಗಸ್ತೇರಾಶ್ರಮಂ ಪಶ್ಯ ಸುತೀಕ್ಷ್ಣಸ್ಯಾಶ್ರಮಂ ತಥಾ ॥ ೫೮ ॥

---

೫೪. ಇಲ್ಲಿ ನಾನು ದರ್ಭೆಯಲ್ಲಿ ಮಲಗಿದ್ದೆನು. ಇತ್ತ ನವಗ್ರಹಗಳಿಗಾಗಿ ಸಮುದ್ರದಲ್ಲಿ ನೆಟ್ಟಿರುವ ಈ ಕಲ್ಲುಗಳನ್ನು ನೋಡು.

೫೫. ಸಾಗರವು ನನ್ನ ಮಾತಿನಂತೆ ಸುಮ್ಮನೆ ಇದ್ದುಕೊಂಡಿರುವುದನ್ನು ನೋಡು. ಎಂಬುದಾಗಿ ಇದೆಲ್ಲವನ್ನೂ ತೋರಿಸುತ್ತ ಕ್ಷಣಕಾಲದಲ್ಲಿಯೇ ರಾಮನು ಕಿಷ್ಕಿಂಧೆಗೆ ಹೋದನು.

೫೬. ಅಲ್ಲಿ ಕಿಷ್ಕಿಂಧೆಯಲ್ಲಿ ಹೆಣ್ಣು ಕಪಿಗಳನ್ನೆಲ್ಲಾ ಪುಷ್ಪಕದಲ್ಲಿ ಕೂರಿಸಿಕೊಂಡು ಮುಂದಿನ ಕೌತುಕಗಳನ್ನು ಸೀತೆಗೆ ತೋರಿಸುತ್ತ ಹೊರಟನು.

೫೭. ಇದು ಪ್ರವರ್ಷಣ ಗಿರಿಯು. ಇದು ಋಷ್ಯಮೂಕ ಪರ್ವತವು. ನೋಡು. ಇದು ಪಂಪಾಸರೋವರವು. ಇಲ್ಲಿ ಕೃಷ್ಣಾನದಿಯೂ ಭೀಮರಥೀ ನದಿಯೂ ಇವೆ. ನೋಡು.

೫೮–೫೯. ಇದು ರಮ್ಯವಾದ ಪಂಚವಟಿಯು. ಇಲ್ಲಿ ಗೋದಾವರಿಯು ಹರಿಯುತ್ತಿದೆ. ನೋಡು. ಇದು ಅಗಸ್ತ್ಯನ ಆಶ್ರಮವು. ಇದು ಸುತೀಕ್ಷ್ಣನ

ಪಶ್ಯಾತ್ರೇರಾಶ್ರಮಂ ಸೀತೇ ಚಿತ್ರಕೂಟಂ ಸಮೀಕ್ಷಯ ।
ಕಾಲಿಂದೀಂ ಜಾಹ್ನವೀಂ ಪಶ್ಯ ಭರದ್ವಾಜಾಶ್ರಮಂ ತಥಾ ॥ ೫೯ ॥

ಇತ್ಯುಕ್ತ್ವಾ ಜಾನಕೀಂ ರಾಮೋ ಭರದ್ವಾಜಾರ್ಥಿತಸ್ತದಾ ।
ತಸ್ಥೌ ತಸ್ಯಾಶ್ರಮೇ ಯಾನಾದವರುಹ್ಯ ಯಥಾಸುಖಂ ॥ ೬೦ ॥

ಮಾಘಶುಕ್ಲ ಚತುರ್ಥ್ಯಾಂ ಹಿ ಪೂರ್ಣೇ ವರ್ಷೇ ಚತುರ್ದಶೇ ।
ಭರದ್ವಾಜೋಪಿ ತಪಸಾ ಸ್ವರ್ಗಂ ನಿರ್ಮಾಯ ಭೂತಲೇ ॥ ೬೧ ॥

ಪೂಜಯಾಮಾಸ ಶ್ರೀರಾಮಂ ಸೀತಾವಾನರ ಸಂಯುತಂ ।
ರಾಮೋಪಿ ಹೃದಿ ಸಂಮಂತ್ರ್ಯ ಮಾರುತಿಂ ವಾಕ್ಯಮಬ್ರವೀತ್ ॥ ೬೨ ॥

ಅಯೋಧ್ಯಾಂ ಗಚ್ಛ ಭರತಂ ಮದ್ವೃತ್ತಂ ಕಥಯಸ್ವ ತಂ ।
ಸಖಾಯಂ ಶೃಂಗಬೇರೇ ಮೇ ವೃತ್ತಂ ಕಥಯ ಗೂಹಕಂ ॥ ೬೩ ॥

ಆಶ್ರಮವು. ಇದು ಅತ್ರಿಯ ಆಶ್ರಮವು. ಇದು ಚಿತ್ರಕೂಟವು. ಇದು ಯಮುನೆಯು. ಇದು ಜಾಹ್ನವೀನದಿಯು. ಇದೇ ಭರದ್ವಾಜಾಶ್ರಮವು.

೬೦. ರಾಮನು ಹೀಗೆಂದು ಜಾನಕಿಗೆ ಹೇಳುತ್ತಿರಲು ಭರದ್ವಾಜನು ಇಲ್ಲಿ ಇಳಿಯಬೇಕೆಂದು ಪ್ರಾರ್ಥಿಸಲು ಅಲ್ಲಿ ವಿಮಾನದಿಂದಿಳಿದು ಸುಖವಾಗಿ ನಿಂತನು.

೬೧-೬೨. ಮಾಘಶುಕ್ಲ ಚತುರ್ದಶಿಯದಿವಸಕ್ಕೆ ಹದಿನಾಲ್ಕು ವರ್ಷಗಳು ತುಂಬಿತು. ಭರದ್ವಾಜನು ತನ್ನ ತಪಸ್ಸಿನಿಂದ ಸ್ವರ್ಗವನ್ನು ಭೂಮಿಯಲ್ಲಿ ನಿರ್ಮಿಸಿದನು. ಆ ಸ್ವರ್ಗದಲ್ಲಿಯೇ ಶ್ರೀರಾಮನನ್ನೂ ಸೀತೆಯನ್ನೂ ವಾನರಾದಿಗಳನ್ನೂ ಪೂಜಿಸಿದನು. ರಾಮನು ಮನಸ್ಸಿನಲ್ಲಿಯೇ ಆಲೋಚಿಸಿಕೊಂಡು ಮಾರುತಿಯನ್ನು ಕುರಿತು ಇಂತೆಂದನು.

೬೩. ಎಲೈ ಮಾರುತಿಯೆ! ನೀನು ಅಯೋಧ್ಯೆಗೆ ಹೋಗಿ ನನ್ನ ವಿಷಯವನ್ನು ಭರತನಿಗೆ ತಿಳಿಸು. ಶೃಂಗಬೇರಪುರಕ್ಕೆ ಹೋಗಿ ನನ್ನ ಸ್ನೇಹಿತನಾದ ಗುಹನಿಗೆ ನನ್ನ ವಿಷಯವನ್ನು ತಿಳಿಸು.

ತಥೇತಿ ಗುಹಕಂ ಗತ್ವಾ ಕಪಿರ್ವೃತ್ತಂ ನ್ಯವೇದಯತ್ ।
ಗುಹಕೋಪಿ ಮುದಾ ಯುಕ್ತಸ್ತದಾ ರಾಮಾಂತಿಕಂ ಯಯೌ ॥ ೬೪ ॥

ತತೋಽಯೋಧ್ಯಾಂ ಯಯೌ ವೇಗಾನ್ಮಾರುತಿಸ್ಸ ವಿಹಾಯಸಾ ।
ನಂದಿಗ್ರಾಮೇಽಪಿ ಭರತೋ ಪೂರ್ಣೇ ವರ್ಷೇ ಚತುರ್ದಶೇ ॥ ೬೫ ॥

ನಾಗತೇ ರಾಘವೇ ವಹ್ನಿಂ ಸನ್ನದ್ಧೋ ಭೂತ್ಪ್ರವೇಶಿತುಂ ।
ಶತ್ರುಘ್ನಂ ಭರತಃ ಪ್ರಾಹ ರಾವಣೇನ ರಣಾಂಗಣೇ ॥ ೬೬ ॥

ಶ್ರೀರಾಮಲಕ್ಷ್ಮಣೌ ವೀರೌ ಹತೌ ಮನ್ಯೇದ್ಯ ನಾಗತೌ ।
ಆಕಾರಿತಾ ಮಯಾ ಸರ್ವೇ ನೃಪಾ ಏತೇ ಬಲೈರ್ಯುತಾಃ ॥ ೬೭ ॥

ಲಂಕಾಂ ಗತ್ವಾ ರಾಘವಸ್ಯ ಸಾಹಾಯ್ಯಂ ಕರ್ತುಮಿಚ್ಛತಾ ।
ಸೋಽಹಮಗ್ನಿಂ ವಿಶಾಮ್ಯದ್ಯ ರವಾವಸ್ತಾಚಲಂ ಗತೇ ॥ ೬೮ ॥

---

೬೪. ಮಾರುತಿಯು ಹಾಗೆಯೇ ಆಗಲೆಂದು ಹೇಳಿ ಗುಹನ ಬಳಿಗೆ ಹೋಗಿ ರಾಮನ ವೃತ್ತಾಂತವೆಲ್ಲವನ್ನೂ ತಿಳಿಸಿದನು. ಗುಹನು ಬಹು ಸಂತೋಷಗೊಂಡವನಾಗಿ ರಾಮನ ಬಳಿಗೆ ಬಂದನು.

೬೫. ಅನಂತರ ಮಾರುತಿಯು ವೇಗವಾಗಿ ಆಕಾಶಮಾರ್ಗವಾಗಿ ಅಯೋಧ್ಯೆಗೆ ಹೋದನು. ಅದರ ಬಳಿಯಲ್ಲಿರುವ ನಂದೀಗ್ರಾಮದಲ್ಲಿದ್ದ ಭರತನು ಹದಿನಾಲ್ಕು ವರ್ಷಗಳಾದರೂ ರಾಮನು ಬಾರದಿದ್ದುದನ್ನು ನೋಡಿ ಅಗ್ನಿ ಪ್ರವೇಶವನ್ನು ಮಾಡಲು ಸಿದ್ಧನಾಗಿದ್ದನು.

೬೬. ಅಲ್ಲಿ ಭರತನು ಶತ್ರುಘ್ನನನ್ನು ಕುರಿತು ಎಲೈ ಶತ್ರುಘ್ನನೇ ! ರಾವಣನು ರಾಮಲಕ್ಷ್ಮಣರನ್ನು ಯುದ್ಧದಲ್ಲಿ ಕೊಂದಿರಬಹುದು. ಹಾಗಿಲ್ಲದಿದ್ದರೆ ಇಷ್ಟುವೇಳೆಗೆ ಅವರು ಬರುತ್ತಿದ್ದರು

೬೭–೬೮. ನಾನು ಇಲ್ಲಿನ ರಾಜರುಗಳೆಲ್ಲರನ್ನೂ ಯುದ್ಧಕ್ಕೆ ಸಿದ್ಧರನ್ನಾಗಿ ಮಾಡಿ ಬಲಿಷ್ಠರನ್ನಾಗಿ ಮಾಡಿರುವೆನು. ಲಂಕೆಗೆ ಹೋಗಿ ರಾಮನಿಗೆ ಸಹಾಯವನ್ನು ಮಾಡಬೇಕೆಂದಿದ್ದೆನು. ಆದರೆ ನನ್ನ ಪ್ರತಿಜ್ಞೆಯ ಪ್ರಕಾರ ಸೂರ್ಯನು ಮುಳುಗಿದಮೇಲೆ ನಾನು ಅಗ್ನಿಪ್ರವೇಶವನ್ನು ಮಾಡುತ್ತೇನೆ.

ತ್ವಂ ಗಚ್ಛ ಪಾರ್ಥಿವೈರ್ಲಂಕಾಂ ಹತ್ವಾ ಯುದ್ಧೇ ದಶಾನನಂ ।
ಮೋಚಯಿತ್ವಾ ಜನಕಜಾಂ ತತೋ ನಃ ಪಾರಲೌಕಿಕಂ ॥ ೬೯ ॥

ರಾಮಾದೀನಾಂ ತ್ರಿಬಂಧೂನಾಂ ಕರ್ತುಮರ್ಹಸಿ ಸಾದರಂ ।
ಇತಿ ತದ್ವಾಕ್ಯಮಾಕರ್ಣ್ಯ ಪೌರಜಾನಪದಾ ನೃಪಾಃ ॥ ೭೦ ॥

ಶತ್ರುಘ್ನೋ ಮಾತರಸ್ಸರ್ವಾ ಊರ್ಮಿಲಾದ್ಯಾ ಸ್ತ್ರಿಯಶ್ಚ ತಾಃ ।
ಸುಮಂತ್ರಾದ್ಯಾ ಮಂತ್ರಿಣಶ್ಚ ಪೌರನಾರ್ಯಶ್ಚ ಸೇವಕಾಃ ॥ ೭೧ ॥

ಭರತಂ ವೇಷ್ಟಯಾಮಾಸುಃ ಖೇದಾದ್ವಿಹ್ವಲಮಾನಸಾಃ ।
ಭರತಸ್ಸಾಂತ್ವಯನ್ ಸರ್ವಾನ್ ಯಯೌ ತಾಂ ಸರಯೂಂ ನದೀಂ ॥ ೭೨ ॥

ಚಿತಾಂ ಕೃತ್ವಾ ತತಃ ಸ್ನಾತ್ವಾ ದದೌ ದಾನಾನ್ಯನೇಕಶಃ ।
ಸಪ್ತಪ್ರದಕ್ಷಿಣಾಃ ಕೃತ್ವಾ ವಹ್ನಿಂ ಧ್ಯಾತ್ವಾ ರಘೂತ್ತಮಂ ॥ ೭೩ ॥

---

೬೯. ನೀನು ರಾಜರೊಡನೆ ಲಂಕೆಗೆ ಹೋಗಿ ಯುದ್ಧದಲ್ಲಿ ಆ ದಶಾನನನನ್ನು ಕೊಂದು ಜಾನಕಿಯನ್ನು ಬಿಡಿಸಿ ಅನಂತರ ನಮಗೆ ಉತ್ತರಕ್ರಿಯಾದಿಗಳನ್ನು ಮಾಡು.

೭೦–೭೨. ನೀನು ಇಲ್ಲಿಗೆ ಬಂದು ರಾಮ, ಲಕ್ಷ್ಮಣ, ಭರತರಾದ ನಮ್ಮ ಮೂವರಿಗೂ ಉತ್ತರಕ್ರಿಯೆಗಳನ್ನು ಸ್ವಲ್ಪವೂ ಬಿಡದೆ ಮಾಡು. ಎಂದು ಹೇಳಿದುದನ್ನು ಕೇಳಿ ಪಟ್ಟಣಿಗರೂ ದೇಶದವರೂ ರಾಜರೂ ಶತ್ರುಘ್ನನೂ ಅವನ ತಾಯಿಯರೂ ಊರ್ಮಿಳೆಯೇ ಮುಂತಾದ ಹೆಂಗಸರೂ ಸುಮಂತ್ರನೇ ಮುಂತಾದ ಮಂತ್ರಿಗಳೂ ಪಟ್ಟಣದ ಹೆಂಗಸರೂ ಇವರೆಲ್ಲರೂ ದುಃಖದಿಂದ ಕಳವಳಪಡುತ್ತ ಆ ಭರತನನ್ನು ಸುತ್ತುಗಟ್ಟಿಕೊಂಡರು. ಆಗ ಭರತನು ಎಲ್ಲರಿಗೂ ಸಮಾಧಾನವನ್ನು ಹೇಳುತ್ತ ಸರಯೂನದಿಯ ಬಳಿಗೆ ಹೋದನು.

೭೩. ಭರತನು ಆ ನದಿಯ ದಡದಲ್ಲಿ ಚಿತೆಯನ್ನು ಒಡ್ಡಿಸಿ ಸ್ನಾನಮಾಡಿ ಅನೇಕ ದಾನಗಳನ್ನು ಮಾಡಿ ಆ ಚಿತೆಗೆ ಏಳುಬಾರಿ ಪ್ರದಕ್ಷಿಣೆಯನ್ನು ಮಾಡಿ ಅಗ್ನಿದೇವನನ್ನೂ ರಾಮನನ್ನೂ ಧ್ಯಾನಿಸಿದನು.

ಸೀತಾಂ ತಾಂ ಲಕ್ಷ್ಮಣಂ ವೀರಂ ನತ್ವಾ ಮಾತೄಃ ಗುರೂಂ ಮುನೀನ್ ।
ಆರಾಧ್ಯದೇವತಾಂ ಧ್ಯಾತ್ವಾ ಹ್ಯುತ್ತರಾಭಿಮುಖಃ ಸ್ಥಿತಃ ॥ ೭೪ ॥

ರವೌ ನ್ಯಸ್ತೇಕ್ಷಣಸ್ಸಾಯಂ ಪ್ರತೀಕ್ಷ್ಯ ಸಂಸ್ಥಿತಃ ಕ್ಷಣಂ ।
ಮಹಾನ್ಕೋಲಾಹಲಶ್ಚಾಸೀತ್ತದಾ ಸ್ತ್ರೀಪುರುಷೈಃ ಕೃತಃ ॥ ೭೫ ॥

ಏತಸ್ಮಿನ್ನಂತರೇ ಖಸ್ಥಸ್ತದ್ದೃಷ್ಟ್ವಾ ವಾಯುನಂದನಃ ।
ಪ್ರವೇಷ್ಟುಮುದ್ಯತಂ ವೇಗಾದ್ಭರತಂ ಗದ್ಗದಸ್ವನಃ ॥ ೭೬ ॥

ಅಬ್ರವೀನ್ಮಧುರಂ ವಾಕ್ಯಂ ಸುಧಯಾ ಸೇಚಯನ್ನಿವ ।
ಮಾವಿಶಸ್ವಾನಲಂ ವೀರ ರಾಘವೋದ್ಯ ಸಮಾಗತಃ ॥ ೭೭ ॥

---

೭೪. ಸೀತೆಯನ್ನೂ ಲಕ್ಷ್ಮಣನನ್ನೂ ಧ್ಯಾನಿಸಿದನು. ಅಲ್ಲಿರುವ ಗುರುಗಳಿಗೆಲ್ಲಾ ನಮಸ್ಕರಿಸಿದನು. ತಾಯಿಯರಿಗೆ ನಮಸ್ಕರಿಸಿ ಮುನಿಗಳಿಗೆ ನಮಸ್ಕರಿಸಿದನು. ತಾನು ಆರಾಧಿಸುತ್ತಿದ್ದ ಮನೆದೇವರನ್ನು ಧ್ಯಾನಿಸಿದನು. ಉತ್ತರಮುಖವಾಗಿ ನಿಂತನು.

೭೫. ಸೂರ್ಯನಲ್ಲಿಯೇ ಕಣ್ಣನ್ನಿಟ್ಟುಕೊಂಡು ಸಾಯಂಕಾಲವಾಗುವುದನ್ನೇ ನಿರೀಕ್ಷಿಸುತ್ತಿದ್ದನು. ಆಗ ಹೆಂಗಸರು, ಗಂಡಸರು, ಎಲ್ಲರೂ ದುಃಖಿಸುತ್ತಾ ಕಳವಳಗೊಂಡು ಬಹುವಾಗಿ ಗಲಭೆಮಾಡುತ್ತಿದ್ದರು.

೭೬. ಈ ಸಮಯದಲ್ಲಿ ಮಾರುತಿಯು ಅಂತರಿಕ್ಷದಲ್ಲಿಯೇ ಇದ್ದುಕೊಂಡು ಬೆಂಕಿಯಲ್ಲಿ ಬೀಳಲು ಸಿದ್ಧನಾಗಿದ್ದ ಭರತನನ್ನು ನೋಡಿ ಗದ್ಗದಧ್ವನಿಯಿಂದ ಇಂತೆಂದನು.

೭೭. ಆ ಧ್ವನಿಯು ಮಧುರವಾಗಿಯೂ ಅಮೃತವನ್ನು ಎರಚುವಂತೆಯೂ ಇದ್ದಿತು. ಎಲೈ ವೀರನೆ! ಅಗ್ನಿಪ್ರವೇಶವನ್ನು ಮಾಡಬೇಡ. ರಾಮನು ಈಗಲೇ ಬರುವನು.

ಸೀತಯಾ ಲಕ್ಷ್ಮಣೇನಾಪಿ ಭರದ್ವಾಜಾಶ್ರಮಂ ಪ್ರತಿ ।
ವಾನರೈಸ್ಸಹಿತಂ ರಾಮಂ ಶ್ವಸ್ತ್ವಂ ಪಶ್ಯಸಿ ನಿಶ್ಚಯಾತ್ ॥ ೭೮ ॥

ರಾಮೋಽಪ್ಯುತ್ಕಂಠಿತಸ್ತ್ವಾಂ ಹಿ ದ್ರಷ್ಟುಮಸ್ತಿ ಜಟಾಧರ ।
ಇತಿ ವಾಕ್ಯಸುಧಾವೃಷ್ಟಿಸಿಂಚಿತೋ ಭರತೋ ಮುದಾ ॥ ೭೯ ॥

ವಹ್ನಿಂ ನತ್ವಾ ಪರಾವೃತ್ಯ ನನಾಮ ವಾಯುನಂದನಂ ।
ಭರತಂ ಮಾರುತಿಶ್ಚಾಪಿ ನತ್ವಾಲಿಂಗ್ಯ ಸವಿಸ್ತರಂ ॥ ೮೦ ॥

ಶ್ರಾವಯಾಮಾಸ ಶ್ರೀರಾಮವೃತ್ತಂ ಸಂತೋಷಕಾರಕಂ ।
ತಚ್ಛ್ರುತ್ವಾ ಭರತಸ್ತುಷ್ಟಃ ಶೋಭಯಾಮಾಸ ತಾಂ ಪುರೀಂ ॥ ೮೧ ॥

ಅಯೋಧ್ಯಾಂ ತೋರಣಾದ್ಯೈಶ್ಚ ಪೌರೈಃ ಪ್ರತ್ಯುಜ್ಜಗಾಮ ತಂ ।
ಮಸ್ತಕೇ ಪಾದುಕೇ ಬಧ್ವಾ ಪುರಸ್ಕೃತ್ಯಾಥ ವಾರಣಂ ॥ ೮೨ ॥

---

೭೮. ಸೀತಾಲಕ್ಷ್ಮಣರೊಡನೆ ಭರದ್ವಾಜಾಶ್ರಮಕ್ಕೆ ಬಂದಿರುವನು. ವಾನರರಿಂದಲೂ, ಸಹೋದರನಿಂದಲೂ, ಹೆಂಡತಿಯಿಂದಲೂ ಕೂಡಿರುವ ರಾಮನನ್ನು ನಾಳೆ ನೀನು ನೋಡುತ್ತೀಯೆ. ಇದು ನಿಶ್ಚಯವು.

೭೯. ಎಲೈ ಜಟಾಧರನಾದ ಭರತನೆ! ರಾಮನು ಸಾವಕಾಶಮಾಡದೆ ನಿನ್ನನ್ನು ನೋಡುವವನಾಗಿದ್ದಾನೆ. ಈ ರೀತಿಯಾದ ಮಾತನ್ನು ಕೇಳಿ ಭರತನು ಅಮೃತದಲ್ಲಿ ಮುಳುಗಿದಂತಾದನು.

೮೦. ಒಡನೆಯೇ ವಹ್ನಿಗೆ ನಮಸ್ಕರಿಸಿ, ಹಿಂದಿರುಗಿ ಮಾರುತಿಗೆ ನಮಸ್ಕರಿಸಿದನು. ಅನಂತರ ಮಾರುತಿಯು ಭರತನನ್ನು ಆಲಿಂಗಿಸಿಕೊಂಡನು.

೮೧. ಅನಂತರ ಸಂತೋಷಕರವಾದ ಶ್ರೀರಾಮನ ವಿಷಯವನ್ನೆಲ್ಲಾ ವಿಸ್ತಾರವಾಗಿ ಹೇಳಿದನು. ಆ ವಿಷಯವೆಲ್ಲವನ್ನೂ ಕೇಳಿ ಭರತನು ಅಯೋಧ್ಯಾ ಪಟ್ಟಣವನ್ನು ಅಲಂಕರಿಸಿದನು.

೮೨. ಪಟ್ಟಣಿಗರನ್ನೂ ಜೊತೆಯಲ್ಲಿ ಕರೆದುಕೊಂಡು ತಲೆಯಲ್ಲಿ ರಾಮನ ಪಾದುಕೆಗಳನ್ನು ಹೊತ್ತುಕೊಂಡು ಆನೆ ಕುದುರೆಗಳೆಲ್ಲವನ್ನೂ ಮುಂದು ಮಾಡಿಕೊಂಡು ರಾಮನನ್ನು ಎದುರುಗೊಂಡನು.

ಮಾಘಸ್ಯ ಸಿತಪಂಚಮ್ಯಾಂ ಪ್ರಾಪ್ತೇ ಪಂಚದಶೇಬ್ಧಕೇ ।
ಪ್ರಭಾತೇ ಭರತೋ ಯಾಮ್ಯೇ ದದರ್ಶ ಪುಷ್ಪಕಂ ಖಗಂ ॥ ೮೩ ॥

ನನಾಮ ರಾಘವಂ ದೃಷ್ಟ್ವಾ ಸಾಷ್ಟಾಂಗಂ ಭರಸ್ತದಾ ।
ರಾಮೋಪ್ಯಾಲಿಂಗ್ಯ ಭರತಂ ಕೃತ್ವಾ ರೂಪಾಣ್ಯನೇಕಶಃ ॥ ೮೪ ॥

ಏಕಕಾಲೇ ಜನಾನ್ಸರ್ವಾನ್ ಪೃಥಕ್ ಸ ಪರಿಷಸ್ವಜೇ ।
ಆದೌ ಪಶ್ಚಾನ್ನ ರಾಮೇಣ ಕೃತಮಾಲಿಂಗನಂ ತದಾ ॥ ೮೫ ॥

ರಾಮಾನ್ ದೃಷ್ಟ್ವಾ ಹ್ಯಸಂಖ್ಯಾತಾನ್ ಜನಾಶ್ಚಾಸನ್ ಸುವಿಸ್ಮಿತಾಃ ।
ಸಮಾಶ್ವಾಸ್ಯಾಥ ಭರತಂ ರಾಘವಸ್ಸಾಶ್ರುಲೋಚನಂ ॥ ೮೬ ॥

---

೮೩. ಮಾಘಮಾಸದ ಶುದ್ಧ ಪಂಚಮಿಯ ದಿವಸ ಹದಿನೈದನೆಯ ವರ್ಷವು ಪ್ರಾರಂಭವಾಯಿತು. ಆ ದಿನ ಪುಷ್ಪಕವು ಅಂತರಿಕ್ಷದಲ್ಲಿ ಬರುತ್ತಿರುವುದನ್ನು ಭರತನು ನೋಡಿದನು.

೮೪-೮೫. ಅದರಲ್ಲಿ ರಾಘವನು ಕುಳಿತಿರುವುದನ್ನು ನೋಡಿ ಭರತನು ಸಾಷ್ಟಾಂಗವಾಗಿ ನಮಸ್ಕರಿಸಿದನು. ರಾಮನೂ ಕೂಡ ಭರತನನ್ನು ಆಲಿಂಗಿಸಿಕೊಂಡನು. ಮತ್ತು ಒಂದೇಕಾಲದಲ್ಲಿ ಅನೇಕ ರೂಪಗಳನ್ನು ತಾಳಿ ಅಲ್ಲಿರುವ ಜನರನ್ನೆಲ್ಲಾ ಬೇರೆ ಬೇರೆಯಾಗಿ ಆಲಿಂಗಿಸಿಕೊಂಡನು. ಈ ರಾಮನು ಎಲ್ಲರನ್ನೂ ಏಕಕಾಲದಲ್ಲಿ ಆಲಿಂಗಿಸಿಕೊಂಡನೇ ಹೊರತು ನನ್ನನ್ನು ಮೊದಲು ಆಲಿಂಗಿಸಿಕೊಂಡನು, ನನ್ನನ್ನು ಅನಂತರ ಆಲಿಂಗಿಸಿಕೊಂಡನೆಂಬ ಮಾತೇ ಇರಲಿಲ್ಲ.

೮೬. ಆ ಜಾಗದಲ್ಲಿ ಒಂದೇ ಸಮಯದಲ್ಲಿ ಅನೇಕ ರಾಮರಿರುವುದನ್ನು ನೋಡಿ ಜನರು ಬಹುವಾಗಿ ಆಶ್ಚರ್ಯಪಟ್ಟರು. ಭರತನು ನಿಂತುಕೊಂಡು ಕಣ್ಣೀರನ್ನು ಸುರಿಸುತ್ತಿರಲು ರಾಮನು ಅವನನ್ನು ಸಮಾಧಾನಪಡಿಸಿದನು.

ನನಾಮ ಶಿರಸಾ ಮಾತೄರ್ವಸಿಷ್ಠಂ ಚಾಪ್ಯರುಂಧತೀಂ ।
ತತೋ ವಾದ್ಯೈರ್ನರ್ತನಾದ್ಯೈರ್ನಂದಿಗ್ರಾಮಂ ಯಯೌ ಶನೈಃ ॥ ೮೭ ॥

ಶ್ಮಶ್ರುಕರ್ಮೋದ್ವರ್ತನಂ ಚ ತೈಲಾಭ್ಯಂಗಂ ತು ಬಂಧುಭಿಃ ।
ನಂದೀಗ್ರಾಮೇಽಕರೋದ್ರಾಮೋ ನಾನಾಮಾಂಗಲ್ಯವಸ್ತುಭಿಃ ॥ ೮೮ ॥

ನವವಾದ್ಯ ಸುಘೋಷಾಶ್ಚ ನೇದುಸ್ಸರ್ವತ್ರ ಸುಸ್ವರಾಃ ।
ನಾರ್ಯೋ ನೀರಾಜಯಾಮಾಸೂ ರತ್ನದೀಪೈ ರಘೂತ್ತಮಂ ॥ ೮೯ ॥

ತತಸ್ಸೀತಾಪಿ ಶ್ವಶ್ರೂಸ್ಸಾ ಪ್ರಣನಾಮ ತ್ವರುಂಧತೀಂ ।
ವಸಿಷ್ಠಂ ಬ್ರಾಹ್ಮಣಾ ವೃದ್ಧಾ ವಂದನೀಯಾನ್ಯಥಾಕ್ರಮಂ ॥ ೯೦ ॥

---

೮೭. ಅನಂತರ ರಾಮನು ತಾಯಿಯರಿಗೂ ಅರುಂಧತಿ ವಸಿಷ್ಠರಿಗೂ ನಮಸ್ಕರಿಸಿದನು. ಅನಂತರ ವಾದ್ಯಗಳು ಮೊಳಗುತ್ತಿರಲು ನರ್ತಕಿಯರು ಕುಣಿಯುತ್ತಿರಲು ನಿಧಾನವಾಗಿ ನಂದೀಗ್ರಾಮಕ್ಕೆ ಹೋದನು.

೮೮. ರಾಮನು ಆ ನಂದೀಗ್ರಾಮದಲ್ಲಿ ಗಡ್ಡಗಳನ್ನು ತೆಗೆಸಿದನು. ತೈಲಾಭ್ಯಂಜನವನ್ನು ಮಾಡಿದನು. ತಮ್ಮಂದಿರೂ ಅಂತೆಯೇ ಮಾಡಿದರು. ಅನೇಕ ರೀತಿಯಾದ ಮಂಗಳವಸ್ತುಗಳನ್ನು ಅವನ ಬಳಿಯಲ್ಲಿಟ್ಟಿದ್ದರು.

೮೯. ಹೊಸವಾದ್ಯಗಳು ಸುಸ್ವರವಾಗಿ ಮೊಳಗಿದುವು. ಮುತ್ತೈದೆಯರು ರತ್ನದೀಪಗಳಿಂದ ಆ ರಘೂತ್ತಮನಿಗೆ ಆರತಿಯನ್ನು ಎತ್ತಿದರು.

೯೦. ಸೀತೆಯೂ ಕೂಡ ಅತ್ತೆಯರಿಗೆ ನಮಸ್ಕರಿಸಿ ಅರುಂಧತಿಗೂ ನಮಸ್ಕರಿಸಿದಳು. ವಸಿಷ್ಠನಿಗೂ ಅಲ್ಲಿರುವ ಪೂಜ್ಯರಾದ ಬ್ರಾಹ್ಮಣರಿಗೂ ಕ್ರಮವಾಗಿ ನಮಸ್ಕರಿಸಿದಳು.

ತತಸ್ಸೀತಾಂ ಸಮಾಲಿಂಗ್ಯ ಕೌಸಲ್ಯಾದ್ಯಾಶ್ಚ ಮಾತರಃ ।
ಸ್ನಾಪಯಾಮಾಸುರ್ಮಾಂಗಲ್ಯದ್ರವ್ಯೈರ್ವಾದ್ಯಪುರಸ್ಸರಂ ॥ ೯೧ ॥

ವಸ್ತ್ರಾಲಂಕಾರಭೂಷಾಭಿಶ್ಶುಶುಭೇ ಜಾನಕೀ ತದಾ ।
ಭರತಃ ಪಾದುಕೇ ತೇ ತು ರಾಘವಸ್ಯ ಸುಪೂಜಿತೇ ॥ ೯೨ ॥

ಯೋಜಯಾಮಾಸ ರಾಮಸ್ಯ ಪಾದಯೋರ್ಭಕ್ತಿಸಂಯುತಃ ।
ತತೋಽತಿವಿನಯಾತ್ಪ್ರಾಹ ಭರತೋ ರಘುನಂದನಂ ॥ ೯೩ ॥

ರಾಜ್ಯಮೇತನ್ನ್ಯಾಸಭೂತಂ ಮಯಾ ನಿರ್ಯಾತಿತಂ ತವ ।
ಕೋಷ್ಠಾಗಾರಂ ಬಲಂ ಕೋಶಂ ಕೃತಂ ದಶಗುಣಂ ಮಯಾ ॥ ೯೪ ॥

ತ್ವತ್ತೇಜಸಾ ಜಗನ್ನಾಥ ಪಾಲಯಸ್ವ ಪುರಂ ಸ್ವಕಂ ।
ತಥೇತಿ ರಾಘವಶ್ಚೋಕ್ತ್ವಾ ಭರತಂ ಸಂನ್ಯವೇಶಯತ್ ॥ ೯೫ ॥

---

೯೧. ಅನಂತರ ಕೌಸಲ್ಯೆಯೇ ಮುಂತಾದ ಅತ್ತೆಯರು ಸೀತೆಯನ್ನು ಆಲಿಂಗಿಸಿಕೊಂಡರು. ಮತ್ತು ಮಂಗಳವಾದ್ಯವನ್ನು ಮಾಡಿಸಿಕೊಂಡು ಮಂಗಳದ್ರವ್ಯಗಳಿಂದ ಅಭ್ಯಂಜನವನ್ನು ಮಾಡಿಸಿದರು.

೯೨–೯೩. ವಸ್ತ್ರಗಳನ್ನುಡಿಸಿ ಒಡವೆಗಳಿಂದ ಅಲಂಕರಿಸಿದರು. ಇದರಿಂದ ಜಾನಕಿಯು ಬಹು ಸುಂದರಿಯಾಗಿ ಕಂಡುಬಂದಳು. ಭರತನು ತಾನು ಪೂಜೆಮಾಡುತ್ತಿದ್ದ ಪಾದುಕೆಗಳನ್ನು ಅಲಂಕರಿಸಿ ಆ ರಾಮನ ಪಾದಗಳಿಗೆ ಭಕ್ತಿಯಿಂದ ತೊಡಿಸಿದನು. ಅನಂತರ ಭರತನು ವಿನಯದಿಂದ ರಾಮನನ್ನು ಕುರಿತು ಇಂತೆಂದನು.

೯೪. ಎಲೈ ರಾಮನೆ! ಈ ರಾಜ್ಯವನ್ನೇ ನನ್ನಲ್ಲಿ ನ್ಯಾಸವಾಗಿ ಇಟ್ಟದ್ದೆಯಷ್ಟೆ! ಅದನ್ನು ಈಗ ನಾನು ಹಿಂದಿರುಗಿ ಕೊಟ್ಟದ್ದೇನೆ. ನಿನ್ನ ಮಹಿಮೆಯಿಂದ ಉಗ್ರಾಣ ಸೈನ್ಯ ಕೋಶ ಇವನ್ನು ಹತ್ತರಷ್ಟು ಹೆಚ್ಚಿಸಿದ್ದೇನೆ.

೯೫. ಎಲೈ ಜಗನ್ನಾಥನೆ! ಈಗ ನೀನು ನಿನ್ನ ರಾಜ್ಯವನ್ನು ಆಳು. ಎನ್ನಲು ರಾಘವನು ಹಾಗೇ ಆಗಲೆಂದು ಹೇಳಿ ಭರತನನ್ನು ಕೂರಿಸಿದನು.

ತತಸ್ಸ ದಿವ್ಯವಸ್ತ್ರಾಣಿ ಪರಿಧಾಯ ರಘೂತ್ತಮಃ ।
ಸೀತಯಾ ರಥಮಾರುಹ್ಯ ವಾದ್ಯಘೋಷೈರ್ಜಯಸ್ವನೈಃ ॥ ೯೬ ॥

ವಾರಾಂಗನಾನೃತ್ತಗೀತೈರ್ಯಯೌ ನಿಜಪುರೀಂ ಪ್ರತಿ ।
ಪೌರನಾರ್ಯಶ್ಚ ಸೌಧಸ್ಥಾ ವವರ್ಷುಃ ಪುಷ್ಪವೃಷ್ಟಿಭಿಃ ॥ ೯೭ ॥

ಚಕ್ರುರ್ನೀರಾಜನಂ ಮಾರ್ಗೇ ನಾನಾಬಲಿಪುರಸ್ಸರಂ ।
ರಾಮೋ ರಥಾತ್ತದೋತ್ತೀರ್ಯ ಸೀತಾಂ ಸಂಪ್ರೇಷ್ಯ ವೈ ಗೃಹಂ ॥ ೯೮ ॥

ಪುಷ್ಪಕಂ ಪ್ರಾಹ ಗಚ್ಛ ತ್ವಂ ಕುಬೇರಂ ವಹ ಸರ್ವದಾ ।
ತಥೇತಿ ರಾಮವಚನಾಜ್ಜಗಾಮ ಪುಷ್ಪಕಂ ತು ತತ್ ॥ ೯೯ ॥

ಅಥ ರಾಮಸ್ಸಭಾಮಧ್ಯೇ ವಿವೇಶ ಕಪಿಭಿಸ್ಸಹ ।
ದದೌ ಕಪಿಭ್ಯೋ ಗೇಹಾನಿ ವಸ್ತುಂ ರಮ್ಯಾಣಿ ಸಾದರಂ ॥ ೧೦೦ ॥

೯೬-೯೭. ಅನಂತರ ಶ್ರೀರಾಮನು ಉತ್ತಮವಾದ ವಸ್ತ್ರಗಳನ್ನು ಧರಿಸಿಕೊಂಡನು. ಸೀತೆಯೊಡನೆ ರಥದಲ್ಲಿ ಕುಳಿತುಕೊಂಡನು. ಮಂಗಳ ವಾದ್ಯಗಳು ಮೊಳಗುತ್ತಿದ್ದುವು. ನರ್ತಕಿಯರು ನರ್ತನ ಮಾಡುತ್ತಿದ್ದರು. ಹೀಗಿರಲು ರಥದಲ್ಲಿ ಕುಳಿತು ಅಯೋಧ್ಯೆಗೆ ಹೊರಟನು. ಪಟ್ಟಣದ ಹೆಂಗಸರು ಮಹಡಿಯಮೇಲಿದ್ದುಕೊಂಡು ರಾಮನಮೇಲೆ ಹೂಮಳೆಯನ್ನು ಕರೆದರು.

೯೮-೯೯. ಮುತ್ತೈದೆಯರು ದಾರಿಯಲ್ಲಿ ಬಲಿಯನ್ನು ಹಾಕಿ ಆರತಿಯನ್ನು ಎತ್ತಿದರು. ಅರಮನೆಯ ಬಳಿಗೆ ಬರಲು ಸೀತೆಯನ್ನು ಒಳಕ್ಕೆ ಕಳುಹಿಸಿದನು. ಪುಷ್ಪಕವನ್ನು ಕುರಿತು ಎಲೈ ಪುಷ್ಪಕವೇ ! ನೀನು ಕುಬೇರನ ಬಳಿಗೆ ಹೋಗು. ಅವನನ್ನು ಹೊತ್ತುಕೊಂಡು ಯಾವಾಗಲೂ ಸುತ್ತಾಡಿಸು. ಎನ್ನಲು ಅದು ಹಾಗೆಯೇ ಆಗಲೆಂದು ಕುಬೇರನ ಬಳಿಗೆ ಹೊರಟು ಹೋಯಿತು.

೧೦೦. ಅನಂತರ ರಾಮನು ಕಪಿಗಳನ್ನು ಕರೆದುಕೊಂಡು ಸಭೆಯ ಮಧ್ಯದಲ್ಲಿ ಕುಳಿತನು. ಆ ಕಪಿಗಳಿಗೆ ಇಳಿದುಕೊಳ್ಳಲು ಉತ್ತಮವಾದ ಮನೆಗಳನ್ನೂ ರಮ್ಯವಾದ ಪದಾರ್ಥಗಳನ್ನೂ ಕೊಟ್ಟನು.

ಅಥ ರಾಮಾಯ ರಾಜ್ಯಾರ್ಥಮಭಿಷೇಕಂ ಗುರುಸ್ತದಾ ।
ಚಕಾರ ಸುಮುಹೂರ್ತೇ ವೈ ಮಹಾಮಂಗಲಪೂರ್ವಕಂ ॥ ೧೦೧ ॥

ಹನೂಮತ್ಪ್ರಮುಖಾದ್ಯೈಶ್ಚ ಚತುಸ್ಸಿಂಧುಜಲಂ ಶುಭಂ ।
ಸಮಾನೀಯ ನೃಪೈಸ್ಸರ್ವೈರ್ಮಹಾವಾದ್ಯ ಪುರಸ್ಸರಂ ॥ ೧೦೨ ॥

ಛತ್ರಂ ಚ ತಸ್ಯ ಜಗ್ರಾಹ ಪೃಷ್ಠಸಂಸ್ಥಸ್ಸ ಲಕ್ಷ್ಮಣಃ ।
ದಧಾರ ಸವ್ಯಪಾರ್ಶ್ವಸ್ಥಶ್ಚಾಮರಂ ಭರತಸ್ತದಾ ॥ ೧೦೩ ॥

ಶತ್ರುಘ್ನೋ ವಾಮಪಾರ್ಶ್ವಸ್ಥೋ ದಧಾರ ವ್ಯಜನಂ ಶುಭಂ ।
ಹನೂಮಾನ್ಪಾದುಕೇ ದಿವ್ಯೇ ದಧಾರ ಪುರತಃ ಸ್ಥಿತಃ ॥ ೧೦೪ ॥

ವಾಯವ್ಯಾದಿ ಚತುಷ್ಕೋಣಸಂಸ್ಥಿತಾಸ್ತೇ ಮಹೌಜಸಃ ।
ಸುಗ್ರೀವಾದ್ಯಾಸ್ತದಾ ಚಾಸಂಶ್ಚತ್ವಾರೋ ರಾಘವೇಕ್ಷಣಾಃ ॥ ೧೦೫ ॥

---

೧೦೧. ಅನಂತರ ಗುರುವಾಗಿರುವ ವಸಿಷ್ಠನು ರಾಮನಿಗೆ ಅಭಿಷೇಕವನ್ನು ಮಾಡಲು ಸುಮುಹೂರ್ತವನ್ನು ಗೊತ್ತುಮಾಡಿ ಮಹಾ ಮಂಗಳಗಳನ್ನು ಮಾಡಿಸಿದನು.

೧೦೨. ಹನುಮಂತನೇ ಮುಂತಾದ ವೀರರಿಂದ ನಾಲ್ಕು ಸಮುದ್ರಗಳ ನೀರನ್ನು ತರಿಸಿದನು. ಮತ್ತು ರಾಜರನ್ನೂ ಕಳುಹಿಸಿ ವಾದ್ಯಗಳೊಡನೆ ತೀರ್ಥಗಳನ್ನು ತರಿಸಿದನು.

೧೦೩–೧೦೪. ಆ ರಾಮನಿಗೆ ಹಿಂದುಗಡೆಯಲ್ಲಿ ನಿಂತು ಲಕ್ಷ್ಮಣನು ಛತ್ರಿಯನ್ನು ಹಿಡಿದನು. ಭರತನು ಬಲಗಡೆಯಲ್ಲಿ ನಿಂತು ಚಾಮರವನ್ನು ಹಿಡಿದನು. ಶತ್ರುಘ್ನನು ಎಡಗಡೆಯಲ್ಲಿ ನಿಂತು ಬೀಸಣಿಗೆಯನ್ನು ಹಿಡಿದನು. ಹನುಮಂತನು ಎದುರಿಗೆ ಕುಳಿತು ದಿವ್ಯವಾದ ಪಾದುಕೆಗಳನ್ನು ಹಿಡಿದನು.

೧೦೫–೧೦೬. ವಾಯುವ್ಯವೇ ಮುಂತಾದ ನಾಲ್ಕು ಮೂಲೆಗಳಲ್ಲಿಯೂ ಸುಗ್ರೀವಾದಿಗಳು ರಾಮನನ್ನೇ ನೋಡುತ್ತ ನಿಂತರು. ಸುಗ್ರೀವನು ನೀರಿನ

ಸುಗ್ರೀವೋ ಜಲಪಾತ್ರಂ ಚ ವರಾದರ್ಶಂ ವಿಭೀಷಣಃ ।
ದಧಾರ ಹಸ್ತೇ ತಾಂಬೂಲಪಾತ್ರಂ ಸ ವಾಲಿನಂದನಃ ॥ ೧೦೬ ॥

ವಸ್ತ್ರಕೋಶಂ ಜಾಂಬವಾಂಶ್ಚ ದಧಾರ ವೇಗವತ್ತರಃ ।
ತಸ್ಥೌ ಸಿಂಹಾಸನೇ ರಾಮುಸ್ಸಸ್ಪೃಷ್ಟಾಂಕೋಪಬರ್ಹಣಃ ॥ ೧೦೭ ॥

ಸೌಮಿತ್ರಿ ವಾಮಪಾರ್ಶ್ವೇಽಥ ಸಂಪಾತಿಸ್ಸಂಸ್ಥಿತೋಽಭವತ್ ।
ವಾಮಪಾರ್ಶ್ವೇ ಭರತಸ್ಯ ಗುಹಕಸ್ಸಂಸ್ಥಿತೋಽಭವತ್ ॥ ೧೦೮ ॥

ಶತ್ರುಘ್ನವಾಮಪಾರ್ಶ್ವೇಽಥ ಸಂಸ್ಥಿತೋ ಮಕರಧ್ವಜಃ ।
ಹನೂಮದ್ವಾಮಪಾರ್ಶ್ವೇ ಚ ಗರುಡಸ್ಸಂಸ್ಥಿತೋ ಭವತ್ ॥ ೧೦೯ ॥

ಸುಗ್ರೀವಾದಿ ಚತುರ್ಣಾಂ ತೇ ವಾಮಪಾರ್ಶ್ವೇ ತು ಸಂಸ್ಥಿತಾಃ ।
ಶ್ರೀಚಿತ್ರರಥ ವಿಜಯ ಸುಮಂತ್ರದಾರುಕಾಸ್ತಥಾ ॥ ೧೧೦ ॥

ಪಾತ್ರೆಯನ್ನು ಹಿಡಿದನು. ವಿಭೀಷಣನು ಕನ್ನಡಿಯನ್ನೂ ಅಂಗದನು ತಾಂಬೂಲ ಪಾತ್ರೆಯನ್ನೂ ಜಾಂಬವಂತನು ಬಟ್ಟೆಯ ಗಂಟನ್ನೂ ಹಿಡಿದರು. ಈ ರೀತಿಯಾಗಿ ಇವರೆಲ್ಲರೂ ರಾಮನ ಅನುಗ್ರಹಕ್ಕೆ ಪಾತ್ರರಾದರು. ಆಗ ರಾಮನು ಸಿಂಹಾಸನದ ಮೇಲೆ ರತ್ನಗಂಬಳಿಯನ್ನು ಹಾಸಿಕೊಂಡು ಕುಳಿತನು.

೧೦೮–೧೧೦. ಲಕ್ಷ್ಮಣನ ಎಡಗಡೆಯಲ್ಲಿ ಸಂಪಾತಿಯು ಕುಳಿತನು. ಭರತನ ಎಡಗಡೆಯಲ್ಲಿ ಗುಹನು ಕುಳಿತನು. ಶತ್ರುಘ್ನನ ಎಡಗಡೆಯಲ್ಲಿ ಮಕರಧ್ವಜನು ಕುಳಿತನು. ಹನುಮಂತನ ಎಡಗಡೆಯಲ್ಲಿ ಗರುಡನು ಕುಳಿತನು. ಸುಗ್ರೀವನೇ ಮುಂತಾದ ನಾಲ್ಕುಜನರ ಎಡಗಡೆಯಲ್ಲಿ ಚಿತ್ರರಥ ವಿಜಯ ಸುಮಂತ್ರ ದಾರುಕರು ಕುಳಿತರು.

ನಾನಾರಾಜೋಪಕರಣಧೃತಹಸ್ತಾ ಮಹೌಜಸಃ ।
ಯಯುರ್ದೇವಾಸುರಾಸ್ಸರ್ವೇ ಯಕ್ಷಗಂಧರ್ವ ಕಿನ್ನರಾಃ || ೧೧೧ ||

ಔಷಧ್ಯಃ ಪರ್ವತಾ ವೃಕ್ಷಾಸ್ಸಾಗರಾಶ್ಚಾಥ ನಿಮ್ನಗಾಃ ।
ಮಾಲಾಂ ಚ ಕಾಂಚನೀಂ ವಾಯುರ್ದದೌ ವಾಸವಚೋದಿತಃ || ೧೧೨ ||

ಸರ್ವರತ್ನ ಸಮಾಯುಕ್ತಂ ಮಣಿಕಾಂಚನಭೂಷಿತಂ ।
ದದೌ ಹಾರಂ ನರೇಂದ್ರಾಯ ಸ್ವಯಂ ಶಕ್ರಸ್ತು ಭಕ್ತಿತಃ || ೧೧೩ ||

ಪ್ರಜಗುರ್ದೇವ ಗಂಧರ್ವಾ ನನೃತುರ್ವಾರಯೋಷಿತಃ ।
ದೇವದುಂಧುಭಯೋ ನೇದುಃ ಪುಷ್ಪವೃಷ್ಟಿಃ ಪಪಾತ ಖಾತ್ || ೧೧೪ ||

ತತೋಽಕುರ್ವಂ ಸ್ತುತಿಂ ಚಾಹಂ ಭರತೇನಾತಿಪೂಜಿತಃ || ೧೧೫ ||

೧೧೧-೧೧೨. ಯಕ್ಷರು, ಗಂಧರ್ವರು, ಕಿನ್ನರರು, ಮತ್ತು ಎಲ್ಲಾ ದೇವತೆಗಳೂ ಕೂಡ ಬಗೆ ಬಗೆಯಾದ ರಾಜೋಪಕರಣಗಳನ್ನು ಹಿಡಿದು ಶಿವನಾದ ನನ್ನೊಡನೆ ಬಂದರು. ಔಷಧಿಗಳು, ಪರ್ವತಗಳು, ವೃಕ್ಷಗಳು, ಸಾಗರಗಳು, ನದಿಗಳು ಇವರೆಲ್ಲರೂ ಬಂದರು. ಇಂದ್ರನಿಂದ ಪ್ರೇರಿತನಾದ ವಾಯುವು ಚಿನ್ನದಮಾಲೆಯನ್ನು ರಾಮನಿಗೆ ಕೊಟ್ಟನು.

೧೧೩. ಇಂದ್ರನು ಎಲ್ಲಾ ಬಗೆಯ ರತ್ನಗಳಿಂದಲೂ ಮಣಿಗಳಿಂದಲೂ ಚಿನ್ನದಿಂದಲೂ ಕೂಡಿದ ಹಾರವನ್ನು ಆ ರಾಮನಿಗೆ ಭಕ್ತಿಯಿಂದ ಕೊಟ್ಟನು.

೧೧೪-೧೧೫. ದೇವತೆಗಳೂ ಗಂಧರ್ವರೂ ಹಾಡಿದರು. ಅಪ್ಸರಸ್ತ್ರೀಯರು ಕುಣಿದರು. ದೇವದುಂದುಭಿಗಳು ಮೊಳಗಿದುವು. ಅಂತರಿಕ್ಷದಿಂದ ಪುಷ್ಪ ವೃಷ್ಟಿಯೂ ಸುರಿಯಿತು. ಭರತನು ನನ್ನನ್ನು ಪೂಜಿಸಲು ನಾನು ಆ ರಾಮನನು ಸ್ತುತಿಸಿದೆನು.

|| ಶ್ರೀ ಶಿವ ಉವಾಚ ||

ಸುಗ್ರೀವಮಿತ್ರಂ ಪರಮಂ ಪವಿತ್ರಂ
ಸೀತಾಕಳತ್ರಂ ನವಮೇಘಗಾತ್ರಂ ।
ಕಾರುಣ್ಯಪಾತ್ರಂ ಶತಪತ್ರನೇತ್ರಂ
ಶ್ರೀರಾಮಚಂದ್ರಂ ಸತತಂ ನಮಾಮಿ || ೧೧೬ ||

ಸಂಸಾರಸಾರಂ ನಿಗಮಪ್ರಚಾರಂ
ಧರ್ಮಾವತಾರಂ ಹೃತಭೂಮಿಭಾರಂ ।
ಸದಾವಿಕಾರಂ ಸುಖಸಿಂಧುಸಾರಂ
ಶ್ರೀರಾಮಚಂದ್ರಂ ಸತತಂ ನಮಾಮಿ || ೧೧೭ ||

ಲಕ್ಷ್ಮೀವಿಲಾಸಂ ಜಗತಾಂ ನಿವಾಸಂ
ಲಂಕಾವಿನಾಶಂ ಭುವನಪ್ರಕಾಶಂ ।
ಭೂದೇವವಾಸಂ ಶರದಿಂದುಹಾಸಂ
ಶ್ರೀರಾಮಚಂದ್ರಂ ಸತತಂ ನಮಾಮಿ || ೧೧೮ ||

---

೧೧೬. ಶಿವನು ಹೇಳಿದನು–ಸುಗ್ರೀವನಿಗೆ ಮಿತ್ರನೂ ಪರಮ ಪವಿತ್ರನೂ ಸೀತೆಯನ್ನೇ ಹೆಂಡತಿಯಾಗುಳ್ಳವನೂ ನವಮೇಘದಂತೆ ದೇಹವುಳ್ಳವನೂ ಕರುಣಾಮಯನೂ ಕಮಲದಂತೆ ಕಣ್ಣುಳ್ಳವನೂ ಆದ ಶ್ರೀರಾಮಚಂದ್ರನೆ ! ನಮಸ್ಕರಿಸುತ್ತೇನೆ.

೧೧೭. ಸಂಸಾರದಲ್ಲಿ ಸಾರಭೂತನಾದ, ವೇದದಲ್ಲಿ ಹೊಗಳಲ್ಪಟ್ಟ, ಧರ್ಮದ ಅವತಾರನಾದ, ಭೂಭಾರವನ್ನು ನಾಶಮಾಡಿದ, ಯಾವಾಗಲೂ ವಿಕಾರವನ್ನು ಹೊಂದದಿರುವ, ಸುಖವೆಂಬ ಸಮುದ್ರಕ್ಕೆ ಸಾರಭೂತನಾದ, ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

೧೧೮. ಲಕ್ಷ್ಮಿಗೆ ವಿಲಾಸರೂಪನಾದ, ಜಗತ್ತಿಗೆ ಸ್ಥಾನರೂಪನಾದ, ಲಂಕೆಯನ್ನು ನಾಶಮಾಡಿದ, ಪ್ರಪಂಚಕ್ಕೆ ದೀಪದಂತಿರುವ, ಬ್ರಾಹ್ಮಣರಿಗೆ ವಾಸಸ್ಥಾನನಾದ, ಶರತ್ಕಾಲದ ಚಂದ್ರನಂತೆ ನಗುವುಳ್ಳ, ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಮಂದಾರಮಾಲಂ ವಚನೇ ರಸಾಲಂ
ಗುಣೈರ್ವಿಶಾಲಂ ಹತಸಪ್ತಸಾಲಂ ।
ಕ್ರವ್ಯಾದಕಾಲಂ ಸುರಲೋಕಪಾಲಂ
ಶ್ರೀರಾಮಚಂದ್ರಂ ಸತತಂ ನಮಾಮಿ ॥ ೧೧೯ ॥

ವೇದಾಂತಗಾನಂ ಸಕಲೈಸ್ಸಮಾನಂ
ಹತಾರಿಮಾನಂ ತ್ರಿದಶಪ್ರಧಾನಂ ।
ಗಜೇಂದ್ರಯಾನಂ ವಿಗತಾವಸಾನಂ
ಶ್ರೀರಾಮಚಂದ್ರಂ ಸತತಂ ನಮಾಮಿ ॥ ೧೨೦ ॥

ಶ್ಯಾಮಾಭಿರಾಮಂ ನಯನಾಭಿರಾಮಂ
ಗುಣಾಭಿರಾಮಂ ವಚನಾಭಿರಾಮಂ ।
ವಿಶ್ವಪ್ರಣಾಮಂ ಕೃತಭಕ್ತಕಾಮಂ
ಶ್ರೀರಾಮಚಂದ್ರಂ ಸತತಂ ನಮಾಮಿ ॥ ೧೨೧ ॥

---

೧೧೯. ಮಂದಾರದ ಹೂವಿನ ಮಾಲೆಯನ್ನು ಹಾಕಿಕೊಂಡಿರುವ ರಸವತ್ತಾದ ಮಾತುಗಳನ್ನಾಡುವ ಉತ್ತಮವಾದ ಗುಣಗಳುಳ್ಳ ಏಳುತಾಳೆಯ ಮರಗಳನ್ನು ನಾಶಮಾಡಿದ ರಾಕ್ಷಸರಿಗೆ ಯಮನಾದ ದೇವತೆಗಳಿಗೆ ಪಾಲಕನಾದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

೧೨೦. ವೇದಾಂತದಲ್ಲಿ ಹೊಗಳಲ್ಪಡುತ್ತಿರುವ ಸಕಲರಿಂದಲೂ ಪೂಜ್ಯನಾದ ಶತ್ರುಗಳ ಮಾನವನ್ನು ಹಾಳುಮಾಡಿದ ದೇವತೆಗಳಲ್ಲಿ ಮುಖ್ಯನಾದ ಆನೆಯಂತೆ ನಡೆಗೆಯುಳ್ಳ ನಾಶರಹಿತನಾದ ಶ್ರೀರಾಮಚಂದ್ರನೇ! ನಿನ್ನನ್ನು ನಮಸ್ಕರಿಸುತ್ತೇನೆ.

೧೨೧. ಶ್ಯಾಮಲವರ್ಣನಾಗಿರುವ ಕಣ್ಣಿಗೆ ಮನೋಹರನಾದ ಗುಣಗಳಿಂದ ಮನೋಹರನಾದ ಮಾತನ್ನು ಚೆನ್ನಾಗಿ ಆಡುವ ಪ್ರಪಂಚಕ್ಕೆ ಪೂಜ್ಯನಾದ ಭಕ್ತರ ಇಷ್ಟವನ್ನು ನೇರವೇರಿಸುವ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

ಲೀಲಾಶರೀರಂ ರಣರಂಗಧೀರಂ
ವಿಶ್ವೈಕಸಾರಂ ರಘುವಂಶಹಾರಂ ।
ಗಂಭೀರನಾದಂ ಜಿತಸರ್ವನಾದಂ
ಶ್ರೀರಾಮಚಂದ್ರಂ ಸತತಂ ನಮಾಮಿ ॥ ೧೨೨ ॥

ಖಲೇ ಕೃತಾಂತಂ ಸುಜನೇ ವಿನೀತಂ
ಸಾಂಗೋಪಗೀತಂ ಮನಸಾಪ್ರತೀತಂ ।
ರಾಗೇಣ ಗೀತಂ ವಚನಾದತೀತಂ
ಶ್ರೀರಾಮಚಂದ್ರಂ ಸತತಂ ನಮಾಮಿ ॥ ೧೨೩ ॥

ಶ್ರೀರಾಮಚಂದ್ರಸ್ಯ ವರಾಷ್ಟಕಂ ತ್ವಾಂ
ಮಯೇರಿತಂ ದೇವಿ ಮನೋಹರಂ ಯೇ ।
ಪಠಂತಿ ಶೃಣ್ವಂತಿ ಗೃಣಂತಿ ಭಕ್ತ್ಯಾ
ತೇ ಸ್ವೀಯಕಾಮಾನ್ ಪ್ರಲಭಂತಿ ನಿತ್ಯಂ ॥ ೧೨೪ ॥

---

೧೨೨. ಲೀಲೆಗೋಸ್ಕರ ದೇಹವನ್ನು ಧರಿಸುವ ರಣರಂಗದಲ್ಲಿ ಧೀರನಾದ ಪ್ರಪಂಚಕ್ಕೆ ಬಹು ಮುಖ್ಯನಾದ ರಘುವಂಶಕ್ಕೆ ಹಾರರೂಪನಾದ ಗಂಭೀರವಾದ ಧ್ವನಿಯುಳ್ಳ ಎಲ್ಲಾ ವಾದಗಳಿಗಿಂತಲೂ ಮೇಲಿರುವ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

೧೨೩. ದುಷ್ಟರಿಗೆ ಯಮನಾದ ಸ್ವಜನರಲ್ಲಿ ವಿನೀತನಾದ ಚೆನ್ನಾಗಿ ಹೊಗಳಲ್ಪಟ್ಟ ಮನಸ್ಸಿಗೆ ಯಾವಾಗಲೂ ಗೋಚರನಾಗುವ ರಾಗದಿಂದ ಗಾನವನ್ನು ಮಾಡಿಸಿಕೊಳ್ಳುವ ಮಾತಿಗೆ ಸಿಕ್ಕದ ಶ್ರೀರಾಮಚಂದ್ರನನ್ನು ನಮಸ್ಕರಿಸುತ್ತೇನೆ.

೧೨೪. ಎಲೈ ದೇವಿಯೆ ! ನಿನಗೆ ನಾನು ಹೇಳಿದ ರಾಮಚಂದ್ರನ ಈ ಅಷ್ಟಕವನ್ನು ಯಾರು ಓದುವರೋ ಅಥವಾ ಕೇಳುವರೋ ಇಲ್ಲವೆ ಸಂಗ್ರಹಿಸುವರೋ ಅವರ ಇಷ್ಟಾರ್ಥಗಳು ನಿತ್ಯವೂ ನೆರವೇರುತ್ತವೆ.

ಇತಿ ಸ್ತುತ್ವಾ ರಾಮಚಂದ್ರಂ ಸಭಾಯಾಂ ಸಂಸ್ಥಿತಸ್ತ್ವಹಂ ।
ಏತಸ್ಮಿನ್ನಂತರೇ ತತ್ರ ರಾಜಾ ದಶರಥೋ ಮಹಾನ್ ॥ ೧೨೫ ॥

ದೃಷ್ಟ್ವಾ ರಾಮಂ ಸಸೀತಂ ಚ ವಿಮಾನಸ್ಥೋಽರ್ಕಸನ್ನಿಭಃ ।
ಸ್ತುತ್ವಾ ರಾಮಂ ಪರಾತ್ಮಾನಾಂ ರಾಜ್ಯಸ್ಥಂ ಬಂಧುವೇಷ್ಟಿತಂ ॥ ೧೨೬ ॥

॥ ದಶರಥ ಉವಾಚ ॥

ಉವಾಚ ರಾಮಂ ಸಂತುಷ್ಟಃ ಸುರಾನೀಕವಿರಾಜಿತಃ ।
ಧನ್ಯೋಽಹಂ ಕೃತಕೃತ್ಯೋಽಹಂ ಧನ್ಯೌ ತೌ ಪಿತರೌ ಮಮ ॥ ೧೨೭ ॥

ಧನ್ಯೋ ದೇಶಃ ಕುಲಂ ಧನ್ಯಂ ಯಸ್ತ್ವಾಂ ರಾಜ್ಯಾಭಿಷೇಚಿತಂ ।
ಪಶ್ಯಾಮ್ಯದ್ಯ ಮಹಾಬಾಹೋ ಧನ್ಯಾ ಸಾ ಜನನೀ ತವ ॥ ೧೨೮ ॥

೧೨೫–೧೨೬. ಆ ಸಭೆಯಲ್ಲಿ ರಾಮಚಂದ್ರನನ್ನು ಈ ರೀತಿಯಾಗಿ ಸ್ತುತಿಸಿ ಕುಳಿತುಕೊಂಡೆನು. ಈ ಮಧ್ಯದಲ್ಲಿ ರಾಜಾಧಿರಾಜನಾದ ದಶರಥನು ಸೀತೆಯೊಡನೆ ಕುಳಿತಿರುವ ಶ್ರೀರಾಮನನ್ನು ನೋಡಿ ಸೂರ್ಯನಂತಿರುವ ವಿಮಾನದಲ್ಲಿ ಆಕಾಶದಲ್ಲಿಯೇ ಇದ್ದುಕೊಂಡು ಸಹೋದರರೊಡನೆ ಸೇರಿಕೊಂಡು ರಾಜ್ಯದಲ್ಲಿ ಅಭಿಷಿಕ್ತನಾದ ಅವನನ್ನು ಸ್ತುತಿಸಿದನು. ಮತ್ತು ದೇವತೆಗಳು ನೋಡುತ್ತಿರುವಂತೆಯೇ ರಾಮನನ್ನು ಕುರಿತು ಇಂತೆಂದನು.

೧೨೭–೧೨೮. ದಶರಥನು ಹೇಳಿದನು–ಎಲೈ ರಾಮನೆ ! ನಾನೇ ಧನ್ಯನು. ಕೃತಕೃತ್ಯನು. ನನ್ನ ತಾಯಿತಂದೆಗಳೂ ಧನ್ಯರು. ಈ ದೇಶವು ಧನ್ಯವು. ನನ್ನ ಕುಲವೂ ಧನ್ಯವು. ನೀನು ರಾಜ್ಯದಲ್ಲಿ ಅಭಿಷಿಕ್ತನಾದುದನ್ನು ನೋಡಿದೆನಲ್ಲಾ ! ಇಂತಹ ನಿನ್ನನ್ನು ನಾನು ನೋಡುತ್ತಿರುವೆನಲ್ಲ ! ನಿನ್ನ ತಾಯಿಯೂ ಕೂಡ ಧನ್ಯಳು.

ಯಾ ಕೌಸಲ್ಯಾ ಸಮುತ್ಸಾಹನೇತ್ರಾಭ್ಯಾಂ ತೇದ್ಯ ಪಶ್ಯತಿ ।
ಇತ್ಯುಕ್ತವಂತಂ ರಾಜಾನಂ ನನಾಮ ಸ ರಘೂತ್ತಮಃ ॥ ೧೨೯ ॥

ಕೌಸಲ್ಯಾದ್ಯಾ ರಾಜದಾರಾಸ್ಸರ್ವೇ ತೇ ಪೌರವಾಸಿನಃ ।
ಲಕ್ಷ್ಮಣೋ ಭರತಶ್ಚೈವ ಶತ್ರುಘ್ನಸ್ತೇ ಚ ಮಂತ್ರಿಣಃ ॥ ೧೩೦ ॥

ನಮಸ್ಕಾರಾನ್ ನೃಪಂ ಚಕ್ರುರ್ವಿಮಾನಸ್ಥಂ ಮುದಾನ್ವಿತಾಃ ।
ತಾನ್ರಾಜಾಪಿ ಪೃಥಕ್ಪೃಷ್ಟ್ವಾ ಸರ್ವೈರ್ದೇವ ಗಣೈರ್ಯುತಃ ॥ ೧೩೧ ॥

ಪೂಜಿತೋ ರಾಮಚಂದ್ರೇಣ ಮಯಾ ಸಹ ನ್ಯವರ್ತತ ।
ಯಯುಃ ಸ್ವಂ ಸ್ವಂ ಪದಂ ಸರ್ವೇ ಮಯಾ ರಾಜನ್ಸುರಾಸ್ತದಾ॥ ೧೩೨ ॥

ರಾಮೇಭಿಷಿಕ್ತೇ ರಾಜೇಂದ್ರೇ ಸರ್ವಲೋಕ ಸುಖಾವಹೇ ।
ವಸುಧಾ ಸಸ್ಯಸಂಪನ್ನಾ ಫಲವಂತೋ ಮಹೀರುಹಾಃ ॥ ೧೩೩ ॥

---

೧೨೯. ಕೌಸಲ್ಯೆಯು ಉತ್ಸಾಹದಿಂದ ಈ ಕಣ್ಣುಗಳಿಂದಲೇ ನಿನ್ನನ್ನು ನೋಡುತ್ತಿರುವಳು. ಎಂದು ದಶರಥನು ಹೇಳುತ್ತಿರಲು ರಘೂತ್ತಮನಾದ ರಾಮನು ಅವನಿಗೆ ನಮಸ್ಕರಿಸಿದನು.

೧೩೦–೧೩೨. ಕೌಸಲ್ಯೆಯೇ ಮುಂತಾದ ರಾಜಪತ್ನಿಯರೂ ಆ ಪಟ್ಟಣವಾಸಿಗಳೂ ಲಕ್ಷ್ಮಣ, ಭರತ, ಶತ್ರುಘ್ನರೂ ಮಂತ್ರಿಗಳೂ ಆ ವಿಮಾನದಲ್ಲಿರುವ ದಶರಥನಿಗೆ ನಮಸ್ಕರಿಸಿದರು. ದಶರಥನು ಅವರ ಕುಶಲವನ್ನು ಬೇರೆ ಬೇರೆಯಾಗಿ ಕೇಳಿದನು. ಅನಂತರದಲ್ಲಿ ರಾಮಚಂದ್ರನು ಅವರನ್ನು ಗೌರವಿಸಿ ಪೂಜಿಸಲು ದೇವತೆಗಳೊಡನೆಯೂ ನನ್ನೊಡನೆಯೂ ಹಿಂದಿರುಗಿ ಹೊರಟನು. ನಾವೆಲ್ಲರೂ ಬಂದು ನಮ್ಮ ನಮ್ಮ ಸ್ಥಾನಗಳನ್ನು ಹೊಂದಿದೆವು.

೧೩೩. ಲೋಕಗಳಿಗೆಲ್ಲಾ ಸುಖವನ್ನುಂಟುಮಾಡುವ ರಾಮನು ಅಭಿಷಿಕ್ತನಾಗಿ ರಾಜ್ಯಭಾರಮಾಡುತ್ತಿರಲು ಭೂಮಿಯು ಸಸ್ಯಗಳಿಂದ ತುಂಬಿತು. ಮರಗಳೆಲ್ಲವೂ ಹಣ್ಣು ಹೂಗಳಿಂದ ನಿಡವಾಯಿತು. ವಾಸನೆಯಿಲ್ಲದ ಹೂಗಳೂ ಕೂಡ ವಾಸನೆಯುಳ್ಳವಾಗಿ ಪ್ರಕಾಶಿಸಿದುವು.

ಗಂಧಹೀನಾನಿ ಪುಷ್ಪಾಣಿ ಗಂಧವಂತಿ ಚಕಾಶಿರೇ |
ಸಹಸ್ರಶತಮಶ್ವಾನಾಂ ಧೇನುನಾಂ ರಘುನಂದನಃ || ೧೩೪ ||

ದದೌ ಶತಂ ವೃಷಾಣಾಂ ಚ ದ್ವಿಜೇಭ್ಯೋ ವಸುಕೋಟಿಶಃ ।
ಸೂರ್ಯಕಾಂತಿಸಮಪ್ರಖ್ಯಾಂ ಸರ್ವರತ್ನಮಯೀಂ ಸ್ರಜಂ || ೧೩೫ ||

ಸುಗ್ರೀವಾಯ ದದೌ ಪ್ರೀತ್ಯಾ ರಾಘವೋ ಭಕ್ತವತ್ಸಲಃ ।
ಅವತಂಸಂ ದದೌ ಶ್ರೇಷ್ಠಂ ರಾಕ್ಷಸೇಂದ್ರಾಯ ರಾಘವಃ || ೧೩೬ ||

ಅಂಗದಾಯ ದದೌ ದಿವ್ಯೇ ರಾಘವೋ ಬಾಹುಭೂಷಣೇ ।
ಚಂದ್ರಕೋಟಿಪ್ರತೀಕಾಶಂ ಮಣಿರತ್ನವಿಭೂಷಿತಂ || ೧೩೭ ||

ಸೀತಾಯೈ ಪ್ರದದೌ ಹಾರಂ ಪ್ರೀತ್ಯಾ ರಘುಕುಲೋತ್ತಮಃ ।
ಸಾ ತಂ ಹಾರಂ ದದೌ ವಾಯುಪುತ್ರಂ ವಾಯುಸಮರ್ಪಿತಂ॥ || ೧೩೮ ||

---

೧೩೪. ಆಗ ರಾಮನು ಬ್ರಾಹ್ಮಣರಿಗೆ ಲಕ್ಷ ಕುದುರೆಗಳನ್ನೂ ಲಕ್ಷ ಹಸುಗಳನ್ನೂ ನೂರು ಹೋರಿಗಳನ್ನೂ ಕೋಟಿಗಟ್ಟಲೆಯಲ್ಲಿ ಧನವನ್ನೂ ಕೊಟ್ಟನು.

೧೩೫. ಸೂರ್ಯನಂತೆ ಕಾಂತಿಯುಳ್ಳ ರತ್ನಹಾರವನ್ನು ಸುಗ್ರೀವನಿಗೂ ರಾಕ್ಷಸೇಂದ್ರನಾದ ವಿಭೀಷಣನಿಗೆ ಒಂದು ಶ್ರೇಷ್ಠವಾದ “ ಶಿರವಂತಿಗೆ ” ಎಂಬ ಒಡವೆಯನ್ನೂ ಅಂಗದನಿಗೆ ದಿವ್ಯವಾದ ಎರಡು ಭುಜಕೀರ್ತಿಗಳನ್ನೂ ಕೊಟ್ಟನು.

೧೩೭–೧೩೮. ಕೋಟಿಚಂದ್ರರಂತೆ ಪ್ರಕಾಶಮಾನವಾದ ಮಣಿರತ್ನಗಳಿಂದ ಕೂಡಿದ ಒಂದು ಹಾರವನ್ನು ರಾಮನು ಸೀತೆಗೆ ಕೊಟ್ಟನು. ಅದು ಶ್ರೀರಾಮನಿಗೆ ವಾಯುದೇವನು ಕೊಟ್ಟ ಹಾರವು. ಸೀತೆಯು ಆ ಹಾರವನ್ನು ವಾಯುಪುತ್ರನಾದ ಹನುಮಂತನಿಗೆ ಕೊಟ್ಟಳು.

ತೇನ ಹಾರೇಣ ಶುಶುಭೇ ಮಾರುತಿರ್ಗೌರವೇಣ ಚ ।
ತದಾ ದೃಷ್ಟ್ವಾ ಹನೂಮಂತಂ ರಾಮೋ ವಚನಮಬ್ರವೀತ್ ॥ ೧೩೯ ॥

ಮಾರುತೇ ತ್ವಾಂ ಪ್ರಸನ್ನೋಽಸ್ಮಿ ವರಂ ವರಯ ಕಾಂಕ್ಷಿತಂ ।
ಹನೂಮಾನಪಿ ತಂ ಪ್ರಾಹ ನತ್ವಾ ರಾಮಂ ಪ್ರಹೃಷ್ಟಧೀಃ ॥ ೧೪೦ ॥

ತ್ವನ್ನಾಮ ಸ್ಮರತೋ ರಾಮ ನ ತೃಪ್ಯತಿ ಮನೋ ಮಮ ।
ಅತಸ್ತ್ವನ್ನಾಮ ಸತತಂ ಸ್ಮರನ್ ಸ್ಥಾಸ್ಯಾಮಿ ಭೂತಲೇ ॥ ೧೪೧ ॥

ಯಾವತ್ ಸ್ಥಾಸ್ಯತಿ ತೇ ನಾಮ ಲೋಕೇ ತಾವತ್ಕಲೇವರಂ ।
ಮಮ ತಿಷ್ಠತು ರಾಜೇಂದ್ರ ವರೋಽಯಂ ಮೇಽಭಿಕಾಂಕ್ಷಿತಃ ॥ ೧೪೨ ॥

ಯತ್ರ ಯತ್ರ ಕಥಾ ಲೋಕೇ ಪ್ರಚರಿಷ್ಯತಿ ತೇ ಶುಭಾ ।
ತತ್ರ ತತ್ರ ಗತಿರ್ಮೇಽಸ್ತು ಶ್ರವಣಾರ್ಥಂ ಸದೈವ ಹಿ ॥ ೧೪೩ ॥

---

೧೩೯. ಮಾರುತಿಯು ಆ ಹಾರದ ಕಾಂತಿಯಿಂದಲೂ ಅದರಿಂದುಂಟಾದ ಗೌರವದಿಂದಲೂ ಪ್ರಕಾಶಿಸಿದನು. ಆಗ ಹನುಮಂತನನ್ನು ನೋಡಿ ರಾಮನು ಇಂತೆಂದನು.

೧೪೦. ಎಲೈ ಮಾರುತಿಯೆ! ನಿನ್ನ ವಿಷಯದಲ್ಲಿ ಪ್ರಸನ್ನನಾಗಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳಿಕೋ ಎನ್ನಲು ಅದನ್ನು ಕೇಳಿದ ಹನುಮಂತನು ಸಂತೋಷಗೊಂಡು ನಮಸ್ಕರಿಸಿ ಇಂತೆಂದನು.

೧೪೧. ಎಲೈ ರಾಮನೆ! ನಾನು ನಿನ್ನ ನಾಮಗಳನ್ನು ಸ್ಮರಿಸುತ್ತಿದ್ದರೆ ತೃಪ್ತಿಯೇ ಉಂಟಾಗುವುದಿಲ್ಲ. ಆದುದರಿಂದ ನಿನ್ನ ನಾಮವನ್ನೇ ಸ್ಮರಿಸುತ್ತ ಭೂಲೋಕದಲ್ಲಿರುತ್ತೇನೆ.

೧೪೨. ಲೋಕದಲ್ಲಿ ನಿನ್ನ ಹೆಸರು ಇರುವವರೆಗೂ ನನ್ನ ದೇಹವು ಇರಲಿ. ಇದೇ ವರವು ನನಗೆ ಬೇಕಾದುದು.

೧೪೩-೧೪೪. ಎಲೈ ರಾಮನೆ! ನಿನ್ನ ಮಂಗಳಕರವಾದ ಕಥೆಯು ಎಲ್ಲೆಲ್ಲಿ ನಡೆಯುತ್ತಿರುವುದೋ ಅಲ್ಲೆಲ್ಲವೂ ನಾನು ಅದನ್ನು ಕೇಳಲು ಇರಬೇಕು.

ದೇವಾಲಯಾನ್ನದೀತೀರಾತ್ತೀರ್ಥಾದ್ವಾನ್ಯಜ್ಜಲಾಶಯಾತ್ ।
ವಿನಾನ್ಯತ್ರ ಸ್ಥಲೇ ತೇಸ್ತು ಕಥಾ ಷಡ್ಘಟಿಕೋರ್ಧ್ವತಃ ॥ ೧೪೪ ॥

ರಾಮಸ್ತಥೇತಿ ತಂ ಪ್ರಾಹ ಮುಕ್ತಸ್ತಿಷ್ಠ ಯಥಾಸುಖಂ ।
ಕಲ್ಪಾಂತೇ ಮಮ ಸಾಯುಜ್ಯಂ ಪ್ರಾಪ್ಸ್ಯಸೇ ನಾತ್ರ ಸಂಶಯಃ ॥ ೧೪೫ ॥

ತಮಾಹ ಜಾನಕೀ ಪ್ರೀತಾ ಯತ್ರ ಕುತ್ರಾಪಿ ಮಾರುತೇ ।
ಸ್ಥಿತಂ ತ್ವಾಮನುಯಾಸ್ಯಂತಿ ಭೋಗಾಸ್ಸರ್ವೇ ಮಮಾಜ್ಞಯಾ ॥ ೧೪೬ ॥

ಗ್ರಾಮಾರಾಮೇ ಪತ್ತನೇಷು ವ್ರಜಖೇಟಕಸದ್ಮಸು ।
ವನದುರ್ಗ ಪರ್ವತೇಷು ಸರ್ವದೇವಾಲಯೇಷು ಚ ॥ ೧೪೭ ॥

ನದೀಷು ಕ್ಷೇತ್ರತೀರ್ಥೇಷು ಜಲಾಶಯಪುರೇಷು ಚ ।
ವಾಟಿಕೋಪವನಾಶ್ವತ್ಥ ವಟವೃಂದವನಾದಿಷು ॥ ೧೪೮ ॥

ದೇವಾಲಯ, ನದೀತೀರ, ತೀರ್ಥಪ್ರದೇಶಗಳು, ಇವನ್ನು ಬಿಟ್ಟು ಬೇರೆಯ ಸ್ಥಳದಲ್ಲಿ ನಿನ್ನ ಚರಿತ್ರೆಯು ಆರುಘಳಿಗೆಯಮೇಲೆಯೂ ನಡೆಯುತ್ತಿರಲಿ ! ಎಂದನು.

೧೪೫. ಅದನ್ನು ಕೇಳಿ ರಾಮನು ಹಾಗೆಯೇ ಆಗಲಿ. ನೀನು ಮುಕ್ತನಾಗಿ ಸುಖವಾಗಿದ್ದುಕೊಂಡಿರು. ಈ ಕಲ್ಪವಾದಮೇಲೆ ನನ್ನ ಸಾಯುಜ್ಯವನ್ನು ಹೊಂದುತ್ತೀಯೆ. ಸಂಶಯವಿಲ್ಲ. ಎಂದನು.

೧೪೬. ಅನಂತರ ಜಾನಕಿಯು ಮಾರುತಿಯನ್ನು ಕುರಿತು. ಮಾರುತಿಯೆ ! ನೀನು ಎಲ್ಲಿಬೇಕಾದರೂ ಇರು. ಭೋಗಗಳೆಲ್ಲವೂ ನನ್ನ ಅಪ್ಪಣೆಯಂತೆ ನಿನ್ನನ್ನು ಅನುಸರಿಸಿ ನೀನಿರುವ ಜಾಗಕ್ಕೆ ಬರಲಿ.

೧೪೭–೧೫೯. ಗ್ರಾಮ, ತೋಟ, ಪಟ್ಟಣ ಗೊಲ್ಲರಹಳ್ಳಿ ಕೋಟೆ, ಹೊಲಗಳು, ಮನೆಗಳು, ವನದುರ್ಗಗಳು, ಪರ್ವತ, ಸಮಸ್ತ ದೇವಾಲಯಗಳು, ನದಿಗಳು, ಕ್ಷೇತ್ರಗಳು, ತೀರ್ಥಗಳು ನೀರಿರುವ ಜಾಗಗಳು ಹಳ್ಳಿಗಳು ಉಪವನಗಳು, ಗುಡಿಸಲುಗಳು ಆಶ್ರಮಗಳು ಅಶ್ವತ್ಥದಮೂಲ ಆಲದಮರದ ಬುಡ, ವನಗಳು

ತ್ವನ್ಮೂರ್ತಿಂ ಪೂಜಯಿಷ್ಯಂತಿ ಮಾನವಾ ವಿಘ್ನಶಾಂತಯೇ ।
ಭೂತಪ್ರೇತಪಿಶಾಚಾದ್ಯಾ ನಶ್ಯಂತಿ ಸ್ಮರಣಾತ್ತವ ॥ ೧೪೯ ॥

ಯೇ ಚಾನ್ಯೇ ವಾನರಾದ್ಯಾಶ್ಚ ಹ್ಯಯೋಧ್ಯಾಂ ಸಮುಪಾಗತಾ ।
ಅಮೂಲ್ಯಾಭರಣೈರ್ವಸ್ತ್ರೈಃ ಪೂಜಿತಾ ರಾಘವೇಣ ತೇ ॥ ೧೫೦ ॥

ಸುಗ್ರೀವಪ್ರಮುಖಾಸ್ಸರ್ವೇ ವಾನರಾಸ್ಸವಿಭೀಷಣಾಃ ।
ಮಕರಧ್ವಜ ಸಂಪಾತಿ ಗುಹಕಾಃ ಪಾರ್ಥಿವಾದಯಃ ॥ ೧೫೧ ॥

ಯಥಾರ್ಹಂ ಪೂಜಿತಾಸ್ತೇನ ರಾಮೇಣ ವಸನಾದಿಭಿಃ ।
ತತಸ್ಸರ್ವೈರ್ಭೋಜನಾರ್ಥಂ ರಾಘವಸ್ಸಂಸ್ಥಿತೋಽಭವತ್ ॥ ೧೫೨ ॥

ರಾಮೇಣ ಪ್ರಾಣಾಹುತಯೋ ಗೃಹೀತಾಶ್ಚೇತಿ ಮಾರುತಿಃ ।
ನಿರೀಕ್ಷ್ಯೋಡ್ಡೀಯ ವೇಗೇನ ರಾಮಾಗ್ರೇ ಭೋಜನಸ್ಯ ಚ ॥ ೧೫೩ ॥

ಈ ಸ್ಥಳಗಳಲ್ಲೆಲ್ಲಾ ನಿನ್ನ ಮೂರ್ತಿಯನ್ನು ಜನರು ಸ್ಥಾಪಿಸಿ ವಿಘ್ನಶಾಂತ್ಯರ್ಥವಾಗಿ ಪೂಜಿಸಲಿ, ನಿನ್ನ ಸ್ಮರಣೆಯಿಂದ ಪಿಶಾಚಗಳು ನಾಶವಾಗಲಿ. ಎಂದು ವರವನ್ನು ಕೊಟ್ಟಳು.

೧೫೦. ಅಯೋಧ್ಯೆಗೆ ಬಂದಿದ್ದ ಉಳಿದ ಕಪಿಗಳಿಗೂ ಕೂಡ ಅಮೂಲ್ಯವಾದ ಆಭರಣಗಳನ್ನು ಕೊಟ್ಟು ರಾಘವನು ಗೌರವಿಸಿದನು.

೧೫೧. ಸುಗ್ರೀವನೇ ಮುಂತಾದ ಪ್ರಮುಖವಾನರರಿಗೂ ವಿಭೀಷಣ. ಮಕರಧ್ವಜ, ಗುಹ ಅನೇಕರಾದ ರಾಜರುಗಳು, ಇವರೆಲ್ಲರಿಗೂ, ರಾಮನು ಅವರವರ ಯೋಗ್ಯತಾನುಸಾರ ವಸ್ತ್ರಾಲಂಕಾರಾದಿಗಳನ್ನು ಕೊಟ್ಟು ಗೌರವಿಸಿದನು. ಅನಂತರ ಅವರೆಲ್ಲರನ್ನೂ ಕೂರಿಸಿಕೊಂಡು ರಾಮನು ಭೋಜನಕ್ಕೆ ಕುಳಿತನು.

೧೫೨-೧೫೩. ರಾಮನು ಮುಕ್ಕಾಲುಮಣೆಯಮೇಲೆ ತಟ್ಟೆಯನ್ನಿಟ್ಟು ಕೊಂಡು ಊಟಕ್ಕೆ ಕುಳಿತನು. ರಾಮನು ಪ್ರಾಣಾಹುತಿಯನ್ನು ತೆಗೆದು ಕೊಳ್ಳುತ್ತಲು ಒಡನೆಯೇ ಮಾರುತಿಯು ಅದನ್ನು ತಿಳಿದು ವೇಗದಿಂದ ಹಾರಿ ಆ ರಾಮನ ಮುಂದೆ ಹೋದನು.

ತ್ರಿಪಾದಾಯಾಂ ಸ್ಥಿತಂ ಪಾತ್ರಂ ಹೈಮಂ ಪಕ್ವಾನ್ನಪೂರಿತಂ |
ನಿನಾಯ ವಾಮಹಸ್ತೇನ ಧೃತ್ವಾಗ್ರೇ ವಿಹಸನ್ಮುದಾ ॥ ೧೫೪ ॥

ಸ್ವಯಂ ಭುಕ್ತ್ವಾ ರಾಮಶೇಷಂ ಪ್ರಾಕ್ಷಿಪದ್ವಾನರಾನಪಿ |
ತದಾ ವಿಭೀಷಣಾದ್ಯಾಶ್ಚ ಸ್ವೀಯಪಾತ್ರಾಣಿ ವೇಗತಃ ॥ ೧೫೫ ॥

ವಿಸೃಜ್ಯ ಮಾರುತಿಂ ಸ್ತುತ್ವಾ ತ್ವಯಾ ಸಮ್ಯಕ್ಕೃತಂ ತ್ವಿತಿ |
ತತ್ಕ್ಷಿಪ್ತಂ ರಾಘವೋಚ್ಛಿಷ್ಟಂ ಬುಭುಜುಸ್ಸಂಭ್ರಮಾನ್ವಿತಾಃ ॥ ೧೫೬ ॥

ಮಹಾನ್ಕೋಲಾಹಲಶ್ಚಾಸೀದ್ರಾಮೋಚ್ಛಿಷ್ಟಾರ್ಥ ಮಾದರಾತ್ |
ಸೀತಾರಾಮೌ ತನ್ನಿರೀಕ್ಷ್ಯ ಮುದಾ ಪ್ರಹಸತುಸ್ತದಾ ॥ ೧೫೭ ॥

ಏವಂ ನಾನಾಕೌತುಕಾನಿ ಕುರ್ವಂತೋ ರಾಘವಾಂತಿಕೇ |
ಸುಗ್ರೀವಾದ್ಯಾಸ್ಸುಖಂ ತಸ್ಥುಸ್ತೋಷಯನ್ ತಂ ಕಿಯದ್ದಿನಂ ॥ ೧೫೮ ॥

---

೧೫೪. ನಂತರ ಮುಕ್ಕಾಲುಮಣೆಯಮೇಲಿರುವ ಊಟದ ಚಿನ್ನದ ತಟ್ಟೆಯನ್ನು ಆ ಪಕ್ವಾನ್ನಗಳೊಡನೆಯೇ ತೆಗೆದುಕೊಂಡು ಹಾರಿ ಆಕಾಶದಲ್ಲಿ ನಗುತ್ತ ನಿಂತನು.

೧೫೫–೧೫೬. ರಾಮನ ಭೋಜನ ಶೇಷವನ್ನು ತಾನು ತಿಂದು ಕಪಿಗಳಿಗೂ ಕೂಡ ಎಸೆದನು. ಒಡನೆಯೇ ವಿಭೀಷಣನೇ ಮುಂತಾದವರು ತಮ್ಮ ಪಾತ್ರೆಗಳನ್ನು ಬಿಟ್ಟು ಬೇಗನೆ ಆ ಪ್ರಸಾದವನ್ನು ತೆಗೆದುಕೊಂಡು ಎಲೈ ಮಾರುತಿಯೆ! ನೀನು ಮಾಡಿದುದು ಬಹು ಒಳ್ಳೆಯ ಕೆಲಸವು. ಎಂದು ಹೊಗಳಿದರು. ಮತ್ತು ಆ ರಾಘವನ ಊಟದ ಪ್ರಸಾದವನ್ನು ಸಂತೋಷದಿಂದ ಸ್ವೀಕರಿಸಿ ತಿಂದರು.

೧೫೭. ಆಗ ರಾಮನ ಉಚ್ಛಿಷ್ಟಾನ್ನವನ್ನು ತೆಗೆದುಕೊಳ್ಳುವಾಗ ಬಹು ಕೋಲಾಹಲವಾಯಿತು. ಸೀತೆಯೂ ರಾಮನೂ ಅದನ್ನು ನೋಡಿ ಸಂತೋಷದಿಂದ ನಕ್ಕರು.

೧೫೮. ಸುಗ್ರೀವಾದಿಗಳು ಈ ರೀತಿಯಾದ ಆಶ್ಚರ್ಯಕರವಾದ ಸಂಗತಿಗಳನ್ನು ನಡೆಸುತ್ತ ರಾಮನ ಬಳಿಯಲ್ಲಿ ಕೆಲವು ದಿನಗಳವರೆಗೂ ಇದ್ದರು.

ಏತಸ್ಮಿನ್ನಂತರೇ ತತ್ರ ಪುಷ್ಪಕಂ ಚಾಗಮತ್ಪುನಃ ।
ಪ್ರಾಹ ದೇವ ಕುಬೇರೇಣ ಪ್ರೇಷಿತಸ್ತ್ವಾಮಹಂ ಪುನಃ ॥ ೧೫೯ ॥

ಮಾಮಾಹ ಯತ್ಕುಬೇರಸ್ತಚ್ಛೃಣುಷ್ವ ರಘುನಂದನ ।
ಜಿತಂ ತ್ವಂ ರಾವಣೇನಾದೌ ಪಶ್ಚಾದ್ರಾಮೇಣ ನಿರ್ಜಿತಂ ॥ ೧೬೦ ॥

ಅತಸ್ತ್ವಂ ರಾಘವಂ ನಿತ್ಯಂ ವಹ ಯಾವದ್ವಸೇದ್ಭುವಿ ।
ಯದಾ ಗಚ್ಛೇದ್ರಘುಶ್ರೇಷ್ಠೋ ವೈಕುಂಠಂ ಯಾಹಿ ಮಾಂ ತದಾ॥ ೧೬೧ ॥

ತಚ್ಛ್ರುತ್ವಾ ರಾಘವಃ ಪ್ರೀತಸ್ಸುಗ್ರೀವಾದೀನ್ ಯಥಾಸ್ಥಲೇ ।
ಸ್ಥಾಪ್ಯ ಶೀಘ್ರಮಯೋಧ್ಯಾಯಾಂ ರಾಜದ್ವಾರಾದ್ಬಹಿರ್ವಸ ॥ ೧೬೨ ॥

---

೧೫೯. ಹೀಗಿರುತ್ತಿರುವಲ್ಲಿ ಅಲ್ಲಿ ಪುಷ್ಪಕ ವಿಮಾನವು ಮತ್ತೆಗೆ ಬಂದಿತು. ಅದು ಎಲೈ ದೇವನೆ ! ಕುಬೇರನು ಮತ್ತೆ ನನ್ನನ್ನು ನಿನ್ನ ಬಳಿಗೆ ಕಳುಹಿಸಿದನು.

೧೬೦–೧೬೧. ನನ್ನನ್ನು ಕುರಿತು ಕುಬೇರನು ಹೇಳಿದುದನ್ನು ಕೇಳು. ಮೊದಲು ನಿನ್ನನ್ನು ರಾವಣನು ಜಯಿಸಿ ತೆಗೆದುಕೊಂಡು ಹೋದನು. ಅನಂತರದಲ್ಲಿ ರಾವಣನನ್ನು ಜಯಿಸಿ ರಾಮನು ತೆಗೆದುಕೊಂಡನು. ಆದುದರಿಂದ ರಾಮನು ಭೂಮಿಯಲ್ಲಿ ಇರುವವರೆಗೂ ಅವನನ್ನು ಎತ್ತಿಕೊಂಡು ಸಂಚರಿಸುತ್ತಿರು. ರಾಘವನು ವೈಕುಂಠಕ್ಕೆ ಹೊರಟು ಹೋದಮೇಲೆ ನೀನು ನನ್ನ ಬಳಿಗೆ ಬಾ. ಎಂದನು. ಎಂದಿತು.

೧೬೨. ಇದನ್ನು ಕೇಳಿ ರಾಘವನು ಎಲೈ ಪುಷ್ಪಕವೆ ! ನೀನು ಇಲ್ಲಿಗೆ ಬಂದಿರುವ ಸುಗ್ರೀವನೇ ಮುಂತಾದವರನ್ನು ಅವರವರ ಜಾಗಕ್ಕೆ ಬಿಟ್ಟು ಈ ಊರಿನ ರಾಜದ್ವಾರದ ಎಂದರೆ ಊರುಬಾಗಿಲಿನ ಹೊರಗಡೆಯಲ್ಲಿರು. ಎಂದು ಆಜ್ಞಾಪಿಸಿದನು.

ತಥೇತಿ ರಾಮವಚನಾದ್ವಾನರಾದ್ಯಾನ್ಸ್ವಥಾ ಸ್ಥಲೇ |
ಸ್ಥಾಪ್ಯ ಯಾನಮಯೋಧ್ಯಾಯಾಂ ರಾಜದ್ವಾರಾದ್ಬಹಿಃ ಸ್ಥಿತಃ || ೧೬೩ ||

ಚಕಾರ ರಾಜ್ಯಂ ಧರ್ಮೇಣ ಲಂಕಾಯಾಂ ಸ ವಿಭೀಷಣಃ |
ಶಶಾಸ ರಾಜ್ಯಂ ಪಾತಾಳೇ ಧರ್ಮೇಣ ಮಕರಧ್ವಜಃ || ೧೬೪ ||

ಚಕಾರ ತಾರ್ಕ್ಷ್ಯಸ್ಸಂಪಾತಿಂ ಯೌವರಾಜ್ಯೇ ಪದೇ ನಿಜೇ |
ಶಶಾಸ ರಾಜ್ಯಂ ಕಪಿಭಿಃ ಕಿಷ್ಕಿಂಧಾಯಾಂ ಕಪೀಶ್ವರಃ || ೧೬೫ ||

ಶೃಂಗವೇರಪುರೇ ರಾಜ್ಯಂ ಗುಹಶ್ಚಾಕರೋನ್ಮುದಾ |
ನತ್ವಾ ರಾಮಂ ವಾಯುಪುತ್ರೋ ಯಯೌ ತಪ್ತುಂ ಹಿಮಾಲಯಂ ||

---

೧೬೩. ರಾಮನ ಅಪ್ಪಣೆಯಂತೆ ಹಾಗೆಯೇ ಆಗಲೆಂದು ಆ ಪುಷ್ಪಕವು ಕಪಿಗಳೆಲ್ಲವನ್ನೂ, ರಾಕ್ಷಸರನ್ನೂ, ಅವರವರುಗಳ ಸ್ಥಳಕ್ಕೆ ಬಿಟ್ಟುಬಂದು ಅಯೋಧ್ಯೆಯ ಊರಹೆಬ್ಬಾಗಿಲಿನ ಹೊರಗಡೆಯಲ್ಲಿ ನಿಂತಿತು.

೧೬೪. ವಿಭೀಷಣನು ಲಂಕೆಯಲ್ಲಿ ರಾಜ್ಯವನ್ನು ಧರ್ಮದಿಂದ ಪರಿಪಾಲಿಸುತ್ತ ಬಂದನು. ಮಕರಧ್ವಜನು ಪಾತಾಳದಲ್ಲಿ ರಾಜ್ಯವನ್ನು ಧರ್ಮದಿಂದ ಪಾಲಿಸುತ್ತ ಬಂದನು.

೧೬೫. ಗರುಡನು ಸಂಪಾತಿಯನ್ನು ಯುವರಾಜಪಟ್ಟದಲ್ಲಿ ಕೂರಿಸಿದನು. ಕಪೀಶ್ವರನಾದ ಸುಗ್ರೀವನು ಕಪಿಗಳೊಡನೆ ಕಿಷ್ಕಿಂಧೆಯಲ್ಲಿ ರಾಜ್ಯವನ್ನಾಳುತ್ತ ಬಂದನು.

೧೬೬. ಗುಹನು ಶೃಂಗಬೇರಪುರದಲ್ಲಿ ರಾಜ್ಯಭಾರಮಾಡುತ್ತ ಬಂದನು. ವಾಯುಪುತ್ರನಾದ ಹನುಮಂತನು ರಾಮನಿಗೆ ನಮಸ್ಕರಿಸಿ ತಪಸ್ಸನ್ನು ಮಾಡಲು ಹಿಮವತ್ಪರ್ವತಕ್ಕೆ ಹೊರಟು ಹೋದನು.

ಸರ್ವೇ ವಿಭೀಷಣಾದ್ಯಾಶ್ಚ ಪಂಚಮೇ ಸಪ್ತಮೇಽಹನಿ ।
ದರ್ಶನಾರ್ಥಂ ರಾಘವಸ್ಯ ಸಾಕೇತಂ ಪ್ರಯಯುಸ್ಸದಾ ॥ ೧೬೭ ॥

ಪಂಚಸಪ್ತದಿನಾನ್ಯತ್ರ ಸ್ಥಿತ್ವಾ ಶ್ರೀರಾಘವಾಂತಿಕಂ ।
ಯಾತಾಯಾತಂ ಸದಾ ಚಕ್ರುಸ್ಸ್ವಸ್ವರಾಜ್ಯಾದ್ರಘೂತ್ತಮಂ ॥ ೧೬೮ ॥

ರಾಮೋಽಪಿ ರಾಜ್ಯಮಖಿಲಂ ಶಶಾಸಾಖಿಲವತ್ಸಲಃ ।
ಅನಿಚ್ಛಂತಂ ಹಿ ಸೌಮಿತ್ರಿಂ ಯೌವರಾಜ್ಯೇಭ್ಯಷೇಚಯತ್ ॥ ೧೬೯ ॥

ಲಕ್ಷ್ಮಣಃ ಪರಯಾ ಭಕ್ತ್ಯಾ ರಾಮಸೇವಾಪರೋಽಭವತ್ ।
ವಿಶ್ವಾಮಿತ್ರಾಧ್ವರೇ ಪೂರ್ವಂ ರಣಯಾಗಸ್ಯ ಪೂರ್ಣತಾ ॥ ೧೭೦ ॥

ನ ಕೃತಾ ಯಾ ರಾಘವೇಣ ಸಾ ಕೃತಾ ಸ್ವಪದೇ ತದಾ ।
ರಣಯಾಗಸ್ಸವಿಸ್ತಾರಾದ್ವರ್ಣ್ಯತೇ ಶೃಣು ಪಾರ್ವತಿ ॥ ೧೭೧ ॥

---

೧೬೭. ಅನಂತರ ವಿಭೀಷಣನೇ ಮುಂತಾದವರು ಐದನೆಯ ಅಥವಾ ಏಳನೆಯ ದಿನದಲ್ಲಿ ರಾಮನ ದರ್ಶನಕ್ಕೋಸ್ಕರ ಅಯೋಧ್ಯೆಗೆ ಬಂದು ಹೋಗುತ್ತಿದ್ದರು.

೧೬೮. ಅವರುಗಳು ಹನ್ನೆರಡುದಿನಗಳವರೆಗೂ ರಾಘವನ ಬಳಿಯಲ್ಲಿದ್ದು ಕೊಂಡು ಮತ್ತೆ ಹೊರಟು ಹೋಗಿ, ಅನಂತರ ತಮ್ಮ ರಾಜ್ಯದಿಂದ ಬರುವುದು ಹೋಗುವುದು ಹೀಗೆ ಮಾಡುತ್ತಿದ್ದರು.

೧೬೯. ರಾಮನು ಎಲ್ಲರಲ್ಲಿಯೂ ಪ್ರೀತಿಯನ್ನಿಟ್ಟುಕೊಂಡು ರಾಜ್ಯ ವನ್ನಾಳುತ್ತಿದ್ದನು. ಲಕ್ಷ್ಮಣನು ಇಚ್ಛೆಪಡದಿದ್ದರೂ ಅವನನ್ನೇ ಯೌವರಾಜ್ಯದಲ್ಲಿ ಅಭಿಷೇಕಮಾಡಿದನು.

೧೭೦-೧೭೧. ಲಕ್ಷ್ಮಣನು ಬಹು ಭಕ್ತಿಯಿಂದ ಶ್ರೀರಾಮನ ಸೇವೆಯನ್ನು ಮಾಡುತ್ತಿದ್ದನು. ವಿಶ್ವಾಮಿತ್ರನೊಡನೆ ಯಾಗಪೂರ್ತಿಗೆ ರಾಮನು ಹೋಗಿ ರಣಯಾಗವನ್ನು ಪೂರ್ತಿಮಾಡಲಿಲ್ಲವಷ್ಟೆ! ಆ ರಣಯಾಗವನ್ನು ಈಗ ಪೂರ್ತಿಯಾಗಿ ಮಾಡಿದನು. ಎಲೈ ಪಾರ್ವತಿಯೆ! ರಣಯಾಗವನ್ನು ಪೂರ್ತಿಯಾಗಿ ವರ್ಣಿಸುತ್ತೇನೆ. ಕೇಳು.

ರಣಾಂಗಣಂ ಯಜ್ಞಕುಂಡಂ ತತ್ರ ವೈ ಹ್ಯಪಲಾಯನಂ ।
ತಚ್ಚ ವೇದವಿಧಾನಂ ಚ ಬ್ರಹ್ಮಸತ್ವಂ ಪ್ರಕೀರ್ತಿತಂ ॥ ೧೭೨ ॥

ಕರ್ಮಣಶ್ಚ ಖಟಾಟೋಪೋ ಜ್ಞೇಯಶ್ಶಸ್ತ್ರಖಣಸ್ವನಃ ।
ಸಂಮಾರ್ಜನಂ ಸುಕ್ಸ್ರುವಯೋರ್ಜ್ಞೇಯಂ ಪಾಷಾಣಘರ್ಷಣಂ ॥೧೭೩॥

ಶಸ್ತ್ರಾಣಾಂ ಮಲಶೋಧಾರ್ಥಂ ಕ್ರಿಯತೇ ಯದ್ರಣಾಂಗಣೇ ।
ಭೂಮ್ಯಾಂ ಶರಾಣಾಂ ವಿಸ್ತಾರಃ ಪರಿಸ್ತರಣಮುತ್ತಮಂ ॥ ೧೭೪ ॥

ಪರಿಸಮೂಹನಂ ಧೈರ್ಯಂ ವಹ್ನಿಃ ಕಾಲಾನಲೋ ಮಹಾನ್ ।
ಸ್ರುವೇಣ ಬಾಣರೂಪೇಣ ಮಾಂಸಾಹುತಿಸಮರ್ಪಣಂ ॥ ೧೭೫ ॥

ರಕ್ತಧಾರಾ ವಸೋರ್ಧಾರಾ ಹಾಹಾಕಾರೋ ಭಯಾನಕಃ ।
ಸ ಓಂಕಾರ ವಷಟ್ಕಾರಘೋಷೋ ಜ್ಞೇಯೋ ರಣಾಧ್ವರೇ ॥ ೧೭೬ ॥

ಅಗ್ನೇರ್ಜ್ವಾಲಾ ಶಸ್ತ್ರತೇಜೋಧೂಮ್ರಸ್ಸ್ವೇದಸ್ರವೋ ರಣೇ ।
ಜ್ವಾಲಾತಿಶಯಶಾಂತ್ಯರ್ಥಂ ಪೃಷದಾಜ್ಯಸ್ಯ ಸೇಚನಂ ॥ ೧೭೭ ॥

೧೭೨-೧೭೩. ರಣರಂಗವೇ ಯಜ್ಞಕುಂಡವು. ಆದರಿಂದ ಓಡಿಹೋಗದಿರುವುದೇ ವೇದವಿಧಾನವು. ರಣಕರ್ಮವೇ ಬ್ರಹ್ಮಸದ್ಮವು. ಶಸ್ತ್ರಗಳ ಖಣಖಣಧ್ವನಿಯೇ ಕರ್ಮಗಳ ಕಲಾಪವಾದ ವೇದಶಾಸ್ತ್ರಗಳು. ಕಲ್ಲಿನೇಟುಗಳ ತೀಡುವಿಕೆಯು ಸ್ರುಕ್‌ಸ್ರುವಗಳ ಮಾರ್ಜನವು.

೧೭೪-೧೭೭. ರಣಾಂಗಣದಲ್ಲಿ ಶಸ್ತ್ರಗಳ ಕೊಳೆಯನ್ನು ತೆಗೆಯಲು ಭೂಮಿಯಲ್ಲಿ ಶರಗಳನ್ನು ಹರಡುವುದೇ ಪರಿಸ್ತರಣವು. ಧೈರ್ಯವೆಂಬುದೇ ಪರಿಸಮೂಹವು. ಕಾಲವೆಂಬುದೇ ವಹ್ನಿಯು. ಬಾಣವೆಂಬ ಸ್ರುವದಿಂದಲೇ ಮಾಂಸಾಹುತಿಯ ಸಮರ್ಪಣೆಯು. ರಕ್ತಧಾರೆಯೇ ವಸುಧಾರೆಯೆಂಬ ತುಪ್ಪದ ಧಾರೆಯು. ಭಯಾನಕವಾದ ಹಾ ಹಾ ಕಾರಗಳೇ ಓಂಕಾರ ವಷಟ್ಕಾರಗಳು. ಶಸ್ತ್ರಗಳ ತೇಜಸ್ಸೇ ಅಗ್ನಿಯ ಜ್ವಾಲೆಯು. ಬೆವರು ಬಿಳುವಿಕೆಯೇ ಹೊಗೆಯು. ಯಾಗದಲ್ಲಿ ಬೆಂಕಿಯ ಜ್ವಾಲೆಯನ್ನು ಶಾಂತಿಮಾಡುವುದಕ್ಕೆ ಪೃಷದಾಜ್ಯದ ಸೇಚನವನ್ನು ಮಾಡುತ್ತಾರೆಯಷ್ಟೆ !

ಯತ್ತ್ರದತ್ರ ತು ವೀರಾಣಾಮಸ್ತ್ರಮೋಚನಮುತ್ತಮಂ ।
ಜ್ಞಾನೇನ ಸಹ ಜೀವಸ್ಯ ಬಲಿರ್ದೀಪ ಬಲಿಸ್ಸ್ಮೃತಃ ॥ ೧೭೮ ॥

ಯೇ ದೇಹಲೋಭಿನೋ ಜೀವಾ ಬಲಿದೀಪಹರಾಃ ಸ್ಮೃತಾಃ ।
ರಾಮಹಸ್ತಾತ್ಸ್ಮೃತಿಂ ತ್ಯಕ್ತ್ವಾ ಯೇ ಕುರ್ವಂತಿ ಪಲಾಯನಂ ॥ ೧೭೯ ॥

ದೇಹ ಬಂಧಾನ್ನ ಮುಕ್ತಾಸ್ತೇ ಬಲಿಭಕ್ಷಣದೋಷತಃ ।
ಪೂರ್ಣಾಹುತಿಶ್ಶಿರೋಭಿರ್ಹಿ ಜ್ಞೇಯಾ ತತ್ರ ಪ್ರದಕ್ಷಿಣಾಃ ॥ ೧೮೦ ॥

ಉಚ್ಚಾಟನಂ ಹಿ ಸನ್ಯೇನ ವೀರಾಣಾಂ ಜಯಹೇತವೇ ।
ನಿಜಪದ ಪ್ರದಾನಂ ಚ ಜ್ಞೇಯಾ ಸಾ ದಕ್ಷಿಣಾಧ್ವರೇ ॥ ೧೮೧ ॥

ಸುರೈರ್ಯಾ ಪುಷ್ಪವೃಷ್ಟಿಸ್ತತ್ ಜ್ಞೇಯಂ ವಿಪ್ರಾಭಿಷೇಚನಂ ।
ಜಯಸಂಪಾದನಂ ಯುದ್ಧೇ ಶ್ರೇಯಸ್ಸಂಪಾದನಂ ಹಿ ತತ್ ॥ ೧೮೨ ॥

---

೧೭೮. ಈ ರಣರಂಗದಲ್ಲಿ ವೀರರ ಅಸ್ತ್ರಮೋಚನವೇ ಆ ವೃಷರಾಜ್ಯವು. ಜ್ಞಾನವನ್ನು ಹೊಂದಿ ರಣದಲ್ಲಿ ಜೀವವನ್ನು ಬಲಿಕೊಡುವುದೇ ದೀಪಬಲಿಯು.

೧೭೯. ಯಾರು ಜೀವನದಲ್ಲಿ ಆಸೆಯಿಟ್ಟುಕೊಂಡು ರಾಮನ ಕೈಯ್ಯಲ್ಲಿ ಜೀವವನ್ನು ಬಿಡದೆ ಇರುವರೋ ಅವರೇ ಬಲಿಯೆಂಬ ದೀಪವನ್ನು ನಾಶ ಮಾಡುವವರು.

೧೮೦–೧೮೧. ಅವರು ಈ ಬಲಿಯನ್ನು ತಿನ್ನದುದರಿಂದ ಮುಕ್ತಿಯನ್ನು ಹೊಂದದಿರುವಂತೆ ಓಡಿಹೋದವರು. ಈ ದೇಹದಿಂದ ಮುಕ್ತರಾಗುವುದಿಲ್ಲ. ತಲೆಗಳೇ ಪೂರ್ಣಾಹುತಿಗಳು. ವೀರರು ಜಯವನ್ನು ಪಡೆಯಲು ಬಲದಿಂದ ಓಡಿಸುವಿಕೆಯೇ ಪ್ರದಕ್ಷಿಣೆಯು. ತಮ್ಮ ಜಾಗವನ್ನು ಕೊಡುವುದೇ ದಕ್ಷಿಣೆಯು.

೧೮೨. ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸುವುದೇ ಬ್ರಾಹ್ಮಣರು ಮಾಡುವ ಅಭಿಷೇಕವು. ಯುದ್ಧದಲ್ಲಿ ಜಯಸಂಪಾದನೆಯೇ ಶ್ರೇಯಸ್ಸಂಪಾದನೆಯು.

ಚರಾಚರಾಣಾಮಾನಂದೋ ಜ್ಞೇಯಸ್ಸ ನಿಜಗೋತ್ರಿಣಾಂ ।
ಭೂತಾನಾಂ ತರ್ಪಣಂ ವಿಪ್ರಭೋಜನಂ ಸಂಪ್ರಕೀರ್ತಿತಂ ॥ ೧೮೩ ॥

ಏವಂ ಸುಬಾಹುನಾ ಯುದ್ಧೇ ರಾಘವಸ್ಯ ರಣಾಧ್ವರಃ ।
ತಥಾ ಗಾಧಿಜಯಜ್ಞೋಽಪಿ ದ್ವೌ ತೌ ಜ್ಞೇಯೌ ಸಹೈವ ಹಿ ॥ ೧೮೪ ॥

ಕೃತಾಧ್ವರ ಸಮಾಪ್ತಿಸ್ತು ವಿಶ್ವಾಮಿತ್ರೇಣ ವೈ ಪುರಾ ।
ವಿಸರ್ಜಿತೋ ನ ರಾಮೇಣ ದೃಷ್ಟ್ವಾತೃಪ್ತಂ ರಣಾಧ್ವರೇ ॥ ೧೮೫ ॥

ಕಾಲಾನಲಂ ಪುನಸ್ತಸ್ಯ ತೃಪ್ತ್ಯರ್ಥಂ ಚಾಕರೋನ್ಮತಿಂ ।
ಕೃತ್ವಾ ಭೂಮೇರ್ಮಹತ್ಪಾತ್ರಂ ವಿರಾಧರುಧಿರೇಣ ಹಿ ॥ ೧೮೬ ॥

ಪಾತ್ರಸ್ಯ ಪ್ರೋಕ್ಷಣಂ ಕೃತ್ವಾ ಚಿತ್ರಾಹುತ್ಯರ್ಥ ಮಾದರಾತ್ ।
ರಾಮಶ್ಶೂರ್ಪಣಖಾಯಾಶ್ಚ ಘ್ರಾಣಂ ಕರ್ಣೌ ಬಿಭೇದ ಯತ್ ॥ ೧೮೭ ॥

---

೧೮೩. ತಮ್ಮ ಗೋತ್ರದವರಿಗೆ ಉಂಟಾಗುವ ಆನಂದವೇ ಚರಾಚರಾನಂದವು. ಪ್ರಾಣಿಗಳನ್ನು ತೃಪ್ತಿಪಡಿಸುವುದು. (ಪಿಶಾಚಗಳನ್ನು ತೃಪ್ತಿಪಡಿಸುವುದು) ಬ್ರಾಹ್ಮಣಭೋಜನವು.

೧೮೪. ರಾಮನು ಸುಬಾಹುವಿನೊಡನೆ ಯುದ್ಧವನ್ನು ಪ್ರಾರಂಭಿಸಿದ ನಷ್ಟೆ. ಅದೂ ಮತ್ತು ವಿಶ್ವಾಮಿತ್ರನ ಯಜ್ಞದಲ್ಲಿ ಪ್ರಾರಂಭಿಸಿದ ರಣಯಜ್ಞವೂ, ಇವೆರಡನ್ನು ಜೊತೆಯಲ್ಲಿಯೇ ಇಂತೆಯೇ ತಿಳಿಯಬೇಕು.

೧೮೫–೧೮೭. ವಿಶ್ವಾಮಿತ್ರನಾದರೋ ತಾನು ಪೂರ್ವದಲ್ಲಿಯೇ ಯಜ್ಞವನ್ನು ಮುಗಿಸಿದನು. ರಾಮನು ಮಾತ್ರ ತನ್ನ ರಣಯಜ್ಞವನ್ನು ಮುಗಿಸಿರಲಿಲ್ಲ. ಕಾಲಾನಲನಿಗೆ ತೃಪ್ತಿಯನ್ನುಂಟುಮಾಡಬೇಕೆಂದು ಮನಸ್ಸು ಬಂದಿತು. ಅದಕ್ಕೋಸ್ಕರ ಈ ಭೂಮಿಯನ್ನೇ ದೊಡ್ಡ ಪಾತ್ರೆಯನ್ನಾಗಿ ಮಾಡಿದನು. ವಿರಾಧನ ರಕ್ತದಿಂದ ಆ ಪಾತ್ರಕ್ಕೆ ಪ್ರೋಕ್ಷಣೆಮಾಡಿದನು. ಮತ್ತು ಶೂರ್ಪಣಖೆಯ ಕಿವಿಮೂಗುಗಳನ್ನು ಕತ್ತರಿಸಿ ಚಿತ್ರಾಹುತಿಯನ್ನು ಕೊಟ್ಟನು.

ಪ್ರಾಣಾಹುತಿಭ್ಯೋ ರಾಮೇಣ ತ್ರಿಶಿರಾಃ ಖರದೂಷಣೌ ।
ಮಾರೀಚಶ್ಚ ಕಬಂಧಶ್ಚ ಪಂಚೈತೇ ನಿಹತಾಃ ಕ್ಷಣಾತ್ ॥ ೧೮೮ ॥

ಶಿಖಾಬಂಧವಿಮೋಕ್ಷಾರ್ಥಂ ಶಬರೀಭವಬಂಧನಾತ್ ।
ಕೃತಾ ಮುಕ್ತಾ ತು ರಾಮೇಣ ಜಲಸ್ಪರ್ಶನಹೇತವೇ ॥ ೧೮೯ ॥

ನೇತ್ರಯೋರ್ನಿಹತೋ ವಾಲೀ ದತ್ತಂ ತದ್ರುಧಿರಂ ತದಾ ।
ಕ್ವಥಿರ್ಲಂಕಾಪುರೀ ದಗ್ಧಾ ಕುಂಭಕರ್ಣಸ್ತಥೌದನಃ ॥ ೧೯೦ ॥

ಪಕ್ವಾನ್ನಮಿಂದ್ರಜಿತ್ ಜ್ಞೇಯಶ್ಶಾಕಾರ್ಥಂ ರಾಕ್ಷಸಾ ಹತಾಃ ।
ವರಾನ್ನಂ ಸಾರಣೋ ಜ್ಞೇಯಃ ಪ್ರಹಸ್ತೋ ವಟಕಃ ಸ್ಮೃತಃ ॥ ೧೯೧ ॥

ನಿಕುಂಭಃ ಪರ್ಪಟೋ ಜ್ಞೇಯಃ ಕುಂಭಸ್ತು ಲವಣಂ ಸ್ಮೃತಂ ।
ಪಾಯಸಾರ್ಥಂ ಕಾಲನೇಮಿಸ್ತ್ವತಿಕಾಯಸ್ಸಶರ್ಕರಾ ॥ ೧೯೨ ॥

ಕ್ಷೀರಮೈರಾವಣೋ ಜ್ಞೇಯೋ ಘೃತಂ ಮೈರಾವಣಸ್ಮೃತಃ ।
ದಧ್ಯೋದನಸ್ಸಮಾಪ್ತೌ ತು ಆಹವೇ ಚ ಸ ರಾವಣಃ ॥ ೧೯೩ ॥

೧೮೮-೧೯೦. ಪ್ರಾಣಾಹುತಿಗೋಸ್ಕರ ರಾಮನು, ತ್ರಿಶಿರ, ಖರ, ದೂಷಣ, ಮಾರೀಚ, ಕಂಬಂಧರೈವರನ್ನೂ ಕೊಂದನು. ಶಿಖಾಬಂಧ ವಿಸರ್ಜನೆಗೋಸ್ಕರವಾಗಿ ಶಬರಿಯನ್ನು ಈ ಭವಬಂಧದಿಂದಲೇ ಮುಕ್ತಳನ್ನಾಗಿ ಮಾಡಿದನು. ಕಣ್ಣಿಗೆ ನೀರನ್ನು ತೊಡೆದುಕೊಳ್ಳುವುದಕ್ಕೋಸ್ಕರವಾಗಿ ವಾಲಿಯನ್ನು ಕೊಂದು ರಕ್ತವನ್ನು ಹೊಂದಿದನು. ಲಂಕಾಪುರದಹನವೇ ಕುದಿಯು. ಕುಂಭಕರ್ಣನೇ ಅನ್ನವು.

೧೯೧-೧೯೨. ಇಂದ್ರಜಿತುವೇ ಪಕ್ವಾನ್ನವು. ಪಲ್ಯವೇ ರಾಕ್ಷಸರು. ಶಾಲ್ಯಾನ್ನವೇ ಸಾರಣನು. ಪ್ರಹಸ್ತನೇ ವೊಡೆಯು. ನಿಕುಂಭನು ಹಪ್ಪಳವು. ಕುಂಭನು ಉಪ್ಪು. ಕಾಲನೇಮಿಯು ಪಾಯಸವು. ಅತಿಕಾಯನ ಸಕ್ಕರೆಯು.

೧೯೩. ಐರಾವಣನು ಹಾಲು, ಮೈರಾವಣನು ತುಪ್ಪವು. ಭೋಜನವು ಪೂರ್ಣವಾಗುವಾಗ ಭುಂಜಿಸುವ ಮೊಸರನ್ನವೇ ರಾವಣನು.

ವತ್ವಾ ನಿವೇದಿತಃ ಪಾತ್ರಃ ತಸ್ಯ ಕಾಲಾನಲಸ್ಯ ಚ ।
ಉಚ್ಛಿಷ್ಟ ಬಲಿಸಂತ್ಯಾಗಃ ಕೇಶತ್ವಕ್ಕೀಕಸಾದಿನಾಂ ॥ ೧೯೪ ॥

ಸಂತ್ಯಾಗೋತ್ರ ರಣೇ ಜ್ಞೇಯಸ್ತದಾ ತೃಪ್ತೋ ಬಭೂವ ಸಃ ।
ತತೋ ರಣಾಧ್ವರಸ್ಯಾತ್ರ ರಾಘವೇಣ ವಿಸರ್ಜನಂ ॥ ೧೯೫ ॥

ಅಯೋಧ್ಯಾಯಾಂ ಪ್ರವೇಶೋ ಹಿ ಕೃತಸ್ತತ್ತೇ ವದಾಮ್ಯಹಂ ।
ಅಧ್ವರಾವಭೃತಸ್ನಾನಂ ಜ್ಞೇಯಂ ರಾಜ್ಯಾಭಿಷೇಚನಂ ॥ ೧೯೬ ॥

ಮಂಗಳಾನಿ ಸಮಸ್ತಾನಿ ಯಜ್ಞಾಂಗ ವಿಹಿತಾನಿ ಹಿ ।
ಜ್ಞಾತವ್ಯಾನೀತಿ ರಾಮೇಣ ರಣಯಾಗೋ ವಿಸರ್ಜಿತಃ ॥ ೧೯೭ ॥

ಏವಂ ಪ್ರೋಕ್ತಂ ಮಯಾ ದೇವಿ ರಣಯಾಗಸ್ಸವಿಸ್ತರಃ ।
ರಾಮೋಥ ಪರಮಾತ್ಮಾಪಿ ಕಾರ್ಯಾರ್ಥ್ಯಕ್ಷೋತಿ ನಿರ್ಮಲಃ ॥ ೧೯೮ ॥

ಕರ್ತೃತ್ವಾದಿವಿಹೀನೋಪಿ ನಿರ್ವಿಕಾರೋಪಿ ಸರ್ವದಾ ।
ಸ್ವಾನಂದೇನಾಪಿ ಸಂತುಷ್ಟೋ ಲೋಕಾನಾಮುಪದೇಶಕೃತ್ ॥ ೧೯೯ ॥

೧೯೪-೧೯೫. ಈ ರೀತಿಯಾಗಿ ಕೊಂದು ಆ ಪಾತ್ರೆಯನ್ನು ಕಾಲಾನಲನಿಗೆ ನಿವೇದನ ಮಾಡಿದನು. ಸತ್ತವರ ಕೂದಲು, ಮೂಳೆ, ಚರ್ಮಗಳೇ, ಉಚ್ಛಿಷ್ಟ ಬಲಿಯಾಗವು. ಹೀಗಾದಮೇಲೆ ಕಾಲಾಗ್ನಿಯು ತೃಪ್ತಿಯನ್ನು ಹೊಂದಿದನು. ಹಾಗೆ ಆದಮೇಲೆ ರಾಘವನು ರಣಯಾಗವನ್ನು ಬಿಟ್ಟು ಬಿಟ್ಟನು.

೧೯೬-೧೯೭. ಅನಂತರ ಆ ಶ್ರೀರಾಮನು ಅಯೋಧ್ಯೆಗೆ ಪ್ರವೇಶಿಸಿದ ವಿಷಯವನ್ನು ಹೇಳುತ್ತೇನೆ. ಕೇಳು. ರಾಜ್ಯಾಭಿಷೇಕವೇ ಯಾಗದಲ್ಲಿ ಅವಭೃತಸ್ನಾನವು. ಯಜ್ಞಾಂಗಕ್ಕೆ ವಿಹಿತವಾಗಿರುವಂತೆಯೇ ಈ ರಣಯಜ್ಞಕ್ಕೂ ಮಂಗಳಪದಾರ್ಥಗಳು ಹೇಳಲ್ಪಟ್ಟಿವೆ. ಈ ರೀತಿಯಾಗಿ ಎಲ್ಲವನ್ನೂ ತಿಳಿಯ ಬೇಕು. ಹೀಗೆ ಮಾಡಿ ರಾಮನು ರಣಯಜ್ಞವನ್ನು ಬಿಟ್ಟು ಬಿಟ್ಟನು.

೧೯೮-೧೯೯. ಎಲೈ ದೇವಿಯೆ! ಈ ರೀತಿಯಾಗಿ ರಣಯಾಗವನ್ನು ವಿಸ್ತರಿಸಿ ಹೇಳಿದೆನು. ರಾಮನು ಪರಮಾತ್ಮನು. ಕಾರ್ಯಕ್ಕೆಲ್ಲಾ ಮುಖ್ಯನಾಗಿದ್ದರೂ ಅವನು ಬಹು ನಿರ್ಮಲನು. ಅವನಿಗೆ ಕರ್ತೃತ್ವಾದಿ ವಿಕಾರಗಳಿಲ್ಲವು. ಯಾವಾಗಲೂ ನಿರ್ವಿಕಾರನು. ಆತ್ಮಾನಂದದಲ್ಲಿಯೇ ತೃಪ್ತನಾಗಿರುವನು. ಆದರೂ ಕೂಡ ಲೋಕಗಳಿಗೆಲ್ಲಾ ಉಪದೇಶಿಸಲು ಗೃಹಸ್ಥಾಶ್ರಮವನ್ನು ಅವಲಂಬಿಸಿದನು.

ಚಕಾರ ವಿವಿಧಾ೯ ಧರ್ಮಾ೯ ಗಾರ್ಹಸ್ಥ್ಯಮವಲಂಬ್ಯ ಚ |
ನ ಪರ್ಯದೇವ೯ ವಿಧವಾ ನ ಚ ವ್ಯಾಲಕೃತಂ ಭಯಂ ॥ ೨೦೦ ॥

ನ ವ್ಯಾಧಿಕಂ ಭಯಂ ಚಾಸೀದ್ರಾಮೇ ರಾಜ್ಯಂ ಪ್ರಶಾಸತಿ |
ಔರಸಾನಿವ ರಾಮೋಽಪಿ ಜುಗೋಪ ಪಿತೃವತ್ಪ್ರಜಾಃ ॥ ೨೦೧ ॥

ಸೀತಯಾ ಬಂಧುಭಿಸ್ಸಾರ್ಧಂ ಸಾಕೇತೇ ಸುಖಮಾಪ ಸಃ |
ಇದಂ ಯುದ್ಧಚರಿತ್ರಂ ತೇ ಪ್ರೋಕ್ತಂ ದೇವಿ ಮಯಾ ತವ ॥ ೨೦೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ ಯುದ್ಧ ಚರಿತೇ ಶ್ರೀರಾಮ ರಾಜ್ಯಾಭಿಷೇಕವರ್ಣನಂ ನಾಮ ದ್ವಾದಶಸ್ಸರ್ಗಸ್ಸಮಾಪ್ತಃ

---

೨೦೦. ಅನೇಕ ಬಗೆಯಾದ ಧರ್ಮಗಳನ್ನು ಆಚರಿಸಿದನು. ರಾಮನ ರಾಜ್ಯದಲ್ಲಿ ಹೆಂಗಸರು ಗಂಡಸರನ್ನು ಕಳೆದುಕೊಂಡು ದುಃಖಿಸುತ್ತಿರಲಿಲ್ಲ.

೨೦೧. ರಾಮನು ರಾಜ್ಯಭಾರಮಾಡುತ್ತಿರಲು ಸರ್ಪಭಯವಾಗಲಿ ಕ್ರೂರ ಮೃಗಗಳ ಭಯವಾಗಲಿ ಇರಲಿಲ್ಲ. ರೋಗಗಳ ಭಯವೂ ಇರಲಿಲ್ಲ. ರಾಮನು ಪ್ರಜೆಗಳನ್ನು ಅವರವರ ಹೆತ್ತತಂದೆಯಂತೆ ಕಾಪಾಡುತ್ತಿದ್ದನು.

೨೦೨. ಆ ಶ್ರೀರಾಮನು ಸೀತೆಯೊಡನೆಯೂ, ಬಂಧುಗಳೊಡನೆಯೂ, ಅಯೋಧ್ಯೆಯಲ್ಲಿ ಸುಖವಾಗಿದ್ದನು. ಎಲೈ ದೇವಿಯೆ! ಈ ಯುದ್ಧಚರಿತ್ರೆಯನ್ನು ನಿನಗೆ ವರ್ಣಿಸಿದ್ದೇನೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದ ಯುದ್ಧಚರಿತ್ರೆಯಲ್ಲಿ ಶ್ರೀ ರಾಮ ರಾಜ್ಯಾಭಿಷೇಕ ವರ್ಣನವೆಂಬ ಹನ್ನೆರಡನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಹನ್ನೆರಡನೆಯ ಸರ್ಗದ ಸಾರಾಂಶವು ॥

ಸುಗ್ರೀವನೇ ಮುಂತಾದವರು ಆ ಸೀತೆಗೆ ಸ್ನಾನಮಾಡಿಸಿ ಮೇನದಲ್ಲಿ ಕೂರಿಸಿಕೊಂಡು ಅದರ ಸುತ್ತಲೂ ಕಾವಲುಗಾರರನ್ನು ನಿಯಮಿಸಿ ಜೊತೆಯಲ್ಲಿ ಕರೆದುಕೊಂಡು ರಾಮನ ಬಳಿಗೆ ಹೋದರು.

ಸೀತೆಯು ರಾಮನ ಬಳಿಗೆ ಬಂದೊಡನೆಯೇ ಮೇನದಿಂದ ಕೆಳಕ್ಕೆ ಇಳಿದು ನಡೆದುಕೊಂಡೇ ರಾಮನ ಬಳಿಗೆ ಹೋದಳು. ಅಲ್ಲಿ ರಾಮನಿಗೆ ನಮಸ್ಕರಿಸಿ ಲಜ್ಜೆಯಿಂದ ತಲೆಬಾಗಿಸಿ ನಿಂತುಕೊಂಡಳು.

ಆ ರಾಮನು ಸೀತೆಯು ಶುದ್ಧಳೆಂದು ತಿಳಿದಿದ್ದರೂ ಅವಳ ಪಾತಿವ್ರತ್ಯದ ವಿಷಯದಲ್ಲಿ ಎಲ್ಲರಿಗೂ ನಂಬಿಕೆಯನ್ನುಂಟುಮಾಡಬೇಕೆಂದು ಯೋಚಿಸಿ, "ಎಲೈ ವೈದೇಹಿಯೇ! ನೀನು ಶತ್ರುಗಳ ಮನೆಯಲ್ಲಿ ಬಹುಕಾಲದಿಂದ ಇದ್ದೆ. ಬ್ರಹ್ಮನೇ ಬಂದು ಹೇಳಿದರೂ ಕೂಡ ನಿನ್ನನ್ನು ನಾನು ಅಂಗೀಕರಿಸುವುದಿಲ್ಲ. ನೀನು ನಿನಗೆ ಇಷ್ಟಬಂದಂತೆ ಬೇಕಾದ ಕಡೆಗೆ ಹೋಗಬಹುದು" ಎಂದನು.

ರಾಮನು ಇಂತೆಂದುದನ್ನು ಕೇಳಿ ಸೀತೆಯು ಲಕ್ಷ್ಮಣನಿಗೆ ಹೇಳಿ ಚಿತೆಯನ್ನು ಒಡ್ಡಿಸಿ ಸ್ನಾನಮಾಡಿಕೊಂಡು ಬಂದು ಅದಕ್ಕೆ ಬೆಂಕಿಯನ್ನು ಹತ್ತಿಸಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, "ಎಲೈ ಅಗ್ನಿದೇವನೇ! ನಾನು ರಾಮನಿಗಿಂತಲೂ ಬೇರೆಯಾದವನನ್ನು ಮನಸ್ಸಿನಲ್ಲಿಯೂ ಭಾವಿಸಿಲ್ಲ. ಈ ಸತ್ಯವು ನನ್ನಲ್ಲಿದ್ದರೆ ನೀನು ನನಗೆ ಶೀತಳನಾಗು" ಎಂಬುದಾಗಿ ಶಪಥವನ್ನು ಮಾಡಿಕೊಂಡು ಆ ಬೆಂಕಿಯಲ್ಲಿ ಬಿದ್ದಳು. ಅಗ್ನಿದೇವನಾದರೋ ಆಕೆಯನ್ನು ತೊಡೆಯಮೇಲೆ ಕೂರಿಸಿಕೊಂಡನು. ಆಗ ದೇವತೆಗಳೂ, ದಶರಥನೂ ಸೀತೆಯು ಶುದ್ಧಳೆಂದು ಹೇಳಲು ರಾಮನು ಪರಿಗ್ರಹಿಸಿದನು.

ರಾಮನಾದರೋ ಹಿಂದೆ ಪಂಚವಟಿಯಲ್ಲಿ ಅಗ್ನಿಯಲ್ಲಿಟ್ಟಿದ್ದ ಆ ಸೀತೆಯನ್ನೇ ಕರೆದು ಆಲಿಂಗಿಸಿಕೊಂಡು ತೊಡೆಯಮೇಲೆ ಕೂರಿಸಿಕೊಂಡನು. ರಾವಣನನ್ನು ಕೊಲ್ಲಲು ಸಾತ್ವಿಕೀ, ತಾಮಸೀ, ರಾಜಸೀ ಎಂಬುದಾಗಿ ವಿಭಾಗವಾಗಿದ್ದ ಆ ಭಾಗಗಳು ಬಂದು ಒಂದಾಗಿ ಸೇರಿದುವು. ಅನಂತರ ರಾಮನು ಅಮೃತವೃಷ್ಟಿಯಿಂದ ಸತ್ತ ಕಪಿಗಳನ್ನೆಲ್ಲಾ ಬದುಕಿಸಿದನು. ಅವುಗಳಲ್ಲಿ ಒಂದು ಕಪಿಯನ್ನು ಕಾಣದೆ ಮಾರುತಿಯನ್ನು ಕೇಳಲು ಅವನು ಅದನ್ನು ಕುಂಭಕರ್ಣನು ತಿಂದು ಬಿಟ್ಟಿರುವನೆಂದನು. ಆಗ ರಾಮನು ಯಮನ ಮುಖವನ್ನು ನೋಡಲು ಆತನು ಆ ಕಪಿಯನ್ನು ತಂದು ಒಪ್ಪಿಸಿದನು. ಅನಂತರ ಮಾತಳಿಯನ್ನು ಸ್ವರ್ಗಕ್ಕೆ ಕಳುಹಿಸಿದನು.

ಅನಂತರ ರಾಮನು ಎಲ್ಲರೊಡನೆಯೂ ಪುಷ್ಪಕದಲ್ಲಿ ಕುಳಿತುಕೊಂಡನು. ಆಗ ವಿಭೀಷಣನು, "ಎಲೈ ರಾಮನೇ! ನೀನು ಪಾತಾಳಲೋಕದಲ್ಲಿ ಐರಾವಣನ ಮನೆಯಲ್ಲಿ ಹೇಡಿಯಂತೆ ಏತಕ್ಕೆ ಸುಮ್ಮನಿದ್ದೆ?" ಎಂದನು. ಅದಕ್ಕೆ ರಾಮನು, "ಎಲೈ ವಿಭೀಷಣನೇ! ಭ್ರಮರಗಳನ್ನು ಮಾರುತಿಯು ಕೊಲ್ಲಬೇಕೆಂದು ಬ್ರಹ್ಮನು ವರವನ್ನು ಕೊಟ್ಟಿದ್ದನು. ಅದರಿಂದ ನಾನು ಸುಮ್ಮನಿದ್ದೆನು. ಅಲ್ಲದೆ ಪಾತಾಳಲೋಕದಲ್ಲಿ ರಾಕ್ಷಸರನ್ನು ಕೊಂದು ರಾಮನನ್ನು ಬಿಡಿಸಿದನು. ಇವನು ಅಂತಹ ಬಲಶಾಲಿಯು ಎಂದು ಜನರು ಹನುಮನನ್ನು ಹೊಗಳಲಿ ಎಂದೇ ನಾನು ಸುಮ್ಮನಿದ್ದೆನು. ಇಲ್ಲದಿದ್ದರೆ ಹೂಂಕಾರ ಮಾತ್ರದಿಂದಲೇ ಅವರನ್ನು ಕೊಲ್ಲದಿರುತ್ತಿದ್ದೆನೆ?" ಎಂದನು.

ಇದನ್ನು ಕೇಳಿ ಮಾರುತಿಯು "ಎಲೈ ವಿಭೀಷಣನೇ! ಸೇತುವೆಯನ್ನು ಕಟ್ಟುವಾಗ ನನ್ನಲ್ಲಿದ್ದ ಗರ್ವವನ್ನು ರಾಮನು ತಿಳಿದು ಲಿಂಗವನ್ನು ಕೀಳುವುದೆಂಬ ನೆವದಿಂದ ನನ್ನ ಬಾಲವನ್ನೇ ಕಿತ್ತುಹೋಗುವಂತೆ ಮಾಡಿದನು. ಇದನ್ನು ಮರೆತು ಬಿಟ್ಟೆಯಾ! ಈ ರಾಮನ ಮುಂದೆ ನನ್ನ ಬಲವೆಷ್ಟರದು! ಅವನು ನನ್ನ ಕೀರ್ತಿಯನ್ನು ಹೆಚ್ಚಿಸಿದನು" ಎನ್ನಲು, ಇದನ್ನು ಕೇಳಿದ ಆ ವಿಭೀಷಣನು ಭಕ್ತಿಯಿಂದ ನಮಸ್ಕರಿಸಿದನು.

ಅನಂತರ ಸೀತೆಯು ಪ್ರಾರ್ಥನೆಯಂತೆ ತ್ರಿಜಟೆಗೆ ಅನೇಕವಾದ ವರಗಳನು ಕೊಟ್ಟನು. ಅನಂತರ ಪುಷ್ಪಕದಲ್ಲಿ ಹೊರಟು ಸೀತೆಗೆ ಅಲ್ಲಿನ ಸ್ಥಳಗಳಲ್ಲಿ ತಾನ್ನು ಮಾಡಿದ ಕೆಲಸಗಳೆಲ್ಲವನ್ನೂ ಹೇಳಿ ತೋರಿಸುತ್ತ ಹೊರಟನು. ವಿಭೀಷಣನ ಮಾತಿನಂತೆ ಸೇತುವೆಯನ್ನು ಮೂರು ಭಾಗವಾಗಿ ಕತ್ತರಿಸಿದನು. ಅಲ್ಲಿಗೆ ಬಂದ

ಸಂಪಾತಿಯನ್ನೂ ಕರೆದುಕೊಂಡು ಹೊರಟನು. ಕಿಷ್ಕಿಂಧೆಗೆ ಹೋಗಿ ಅಲ್ಲಿ ವಾನರರ ಹೆಂಗಸರನ್ನೂ ಕರೆದುಕೊಂಡು ಹೊರಟನು.

ಮಧ್ಯದಲ್ಲಿ ಭರದ್ವಾಜನ ಪ್ರಾರ್ಥನೆಯಂತೆ ಇಳಿದು ಅವನ ಆತಿಥ್ಯವನ್ನು ಸ್ವೀಕರಿಸಿದನು. ಭರತನಿಗೆ ತನ್ನ ವಿಷಯವನ್ನು ತಿಳಿಸಲು ಹನುಮಂತನನ್ನು ಮುಂದಾಗಿಯೇ ಕಳುಹಿಸಿದನು. ಅಲ್ಲಿ ರಾಮನು ಬರಲಿಲ್ಲವೆಂದು ಭರತನು ಬೆಂಕಿಯಲ್ಲಿ ಬೀಳಲು ಸಿದ್ಧನಾಗಿದ್ದನು. ಮಾರುತಿಯು ಅಲ್ಲಿ ರಾಮನ ವಿಷಯುವನ್ನು ಹೇಳಿ ಅದನ್ನು ನಿಲ್ಲಿಸಿದನು. ಅನಂತರ ಭರತನು ಅಯೋಧ್ಯೆಗೆ ಹೋಗಿ ಅದನ್ನು ಅಲಂಕರಿಸಿದನು. ಬೆಳಗಾಗುತ್ತಲೂ ಪುಷ್ಪಕವು ಬಂದಿತು. ರಾಮನು ಅದರಿಂದ ಇಳಿದು ಅನೇಕ ರಾಮಮೂರ್ತಿಗಳಾಗಿ ಅಲ್ಲಿಗೆ ಬಂದಿದ್ದವರೆಲ್ಲರನ್ನೂ ಏಕಕಾಲದಲ್ಲಿ ಆಲಿಂಗಿಸಿಕೊಂಡನು. ಅನಂತರ ಭರತನು ಪಾದುಕೆಗಳನ್ನು ಪಾದಗಳಿಗೆ ತೊಡಿಸಿ ರಾಜ್ಯವನ್ನು ಒಪ್ಪಿಸಿದನು. ರಾಮನು ಸಭೆಗೆ ಹೋಗಿ ಕುಳಿತು ಕಪಿಗಳಿಗೆಲ್ಲಾ ಇಳಿದುಕೊಳ್ಳಲು ಮನೆಯನ್ನು ಮಾಡಿಕೊಟ್ಟನು.

ಅನಂತರ ರಾಮನಿಗೆ ರಾಜ್ಯಾಭಿಷೇಕವನ್ನು ಮಾಡಲು ಗುರುವು ನಿಶ್ಚಯಿಸಿ ತೀರ್ಥಗಳನ್ನು ತರಿಸಿದನು. ಇದನ್ನು ನೋಡಲು ದೇವಾಸುರರೆಲ್ಲರೂ ಬಂದರು. ಇಂದ್ರನೂ ಕೂಡ ಬಂದು ಕಾಣಿಕೆಯನ್ನು ಒಪ್ಪಿಸಿದನು. ಆಗ ಶಿವನು ರಾಮನನ್ನು ಹೊಗಳಿದನು. ದಶರಥನೂ ನೋಡಿ ಬಹು ಸಂತೋಷಗೊಂಡನು. ರಾಮನು ರಾಜ್ಯಭಾರವನ್ನು ಮಾಡುತ್ತಿದಾಗ ಎಲ್ಲವೂ ಸಂಪೂರ್ಣವಾಗಿದ್ದಿತು. ಕಪಿಗಳೆಲ್ಲರಿಗೂ ಬಹುಮಾನಗಳನ್ನು ಕೊಟ್ಟನು. ಎಲ್ಲರೂ ಭೋಜನಕ್ಕೆ ಕುಳಿತಾಗ ಮಾರುತಿಯು ರಾಮನ ಎಂಜಲನ್ನು ತೆಗೆದುಕೊಂಡು ಎಲ್ಲರಿಗೂ ಕೊಟ್ಟನು. ಪುಷ್ಪಕವು ಕುಬೇರನ ಮಾತಿನಂತೆ ಮತ್ತೆ ಬಂದು ರಾಮನು ಲೋಕದಲ್ಲಿ ಇರುವವರೆಗೂ ಇದ್ದಿತು. ಅನಂತರ ಬಂದಿದ್ದವರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ಅವರು ಆಗಾಗ್ಗೆ ಬರುತ್ತಲೂ ಹೋಗುತ್ತಲೂ ಇದ್ದರು. ಅನಂತರ ಲಕ್ಷ್ಮಣನು ಯುವರಾಜನಾದನು. ಈ ರೀತಿಯಾಗಿ ರಾಮನು ಜಯಶೀಲನಾಗಿ ಅಯೋಧ್ಯೆಗೆ ಬಂದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಸಾರಕಾಂಡೇ

॥ ತ್ರಯೋದಶಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ಏಕದಾ ರಾಘವಂ ದ್ರಷ್ಟುಂ ಮುನಿಭಿಃ ಕುಂಭಸಂಭವಃ ।
ಯಯೌ ರಾಮೇಣ ಸಂಮಾನಮಾನಿತಸ್ಸ ಉಪಾವಿಶತ್ ॥ ೧ ॥

ಉಪವಿಷ್ಟಾಃ ಪ್ರಹೃಷ್ಟಾಶ್ಚ ಮುನಯೋ ರಾಮಪೂಜಿತಾಃ ।
ಸಂಪೃಷ್ಟಕುಶಲಾಸ್ಸರ್ವೇ ರಾಮಂ ಕುಶಲಮಬ್ರುರ್ವ ॥ ೨ ॥

ಶ್ರೀಮದಾನಂದರಾಮಾಯಣದಸಾರಕಾಂಡದಲ್ಲಿ

ಹದಿಮೂರನೆಯ ಸರ್ಗವು

೧. ಶ್ರೀ ಶಿವನು ಹೇಳಿದನು—ರಾಮನು ರಾಜ್ಯಭಾರಮಾಡುತ್ತಿದ್ದಾಗ ಒಂದುಸಾರಿ ಅಗಸ್ತ್ಯನು ರಾಮನ ದರ್ಶನಾರ್ಥವಾಗಿ ಹೋಗಲು ಆ ರಾಮನು ಮುನಿಯನ್ನು ಗೌರವಿಸಿ ಪೂಜಿಸಿದನು. ಅನಂತರ ಆ ಋಷಿಯು ಸುಖವಾಗಿ ಕುಳಿತುಕೊಂಡನು.

೨. ಉಳಿದ ಮುನಿಗಳನ್ನೂ ರಾಮನು ಪೂಜಿಸಲು ಎಲ್ಲರೂ ಸಂತೋಷ ದಿಂದ ಕುಳಿತುಕೊಂಡರು. ರಾಮನು ಎಲ್ಲರನ್ನೂ ಕುಶಲವನ್ನು ಕೇಳಲು ಅವರೆಲ್ಲರೂ ತಮ್ಮ ಕುಶಲಗಳನ್ನು ಹೇಳಿದರು.

ಕುಶಲಂ ತೇ ಮಹಾಬಾಹೋ ಸರ್ವತ್ರ ರಘುನಂದನ ।
ದಿಷ್ಟ್ಯೇದಾನಿಂ ಪ್ರಪಶ್ಯಾಮೋ ಹತಶತ್ರು ಮರಿಂದಮ ॥ ೩ ॥

ದಿಷ್ಟ್ಯಾ ತ್ವಯಾ ಹತಾಸ್ಸರ್ವೇ ಮೇಘನಾದಾದಯೋಽಸುರಾಃ ।
ಹತ್ವಾ ರಕ್ಷೋಗಣಾನ್ ಸರ್ವಾನ್ ಕೃತಕೃತ್ಯೋದ್ಯ ಜೀವಸಿ ॥ ೪ ॥

ಇತಿ ತೇಷಾಂ ವಚಶ್ಶ್ರುತ್ವಾ ರಾಮಸ್ತಾನ್ಪ್ರಾಹ ಸುಸ್ಮಿತಃ ।
ಕಿಮರ್ಥಮಾದೌ ಯುಷ್ಮಾಭಿರ್ಮೇಘನಾದೋದ್ಯ ಕೀರ್ತಿತಃ ॥ ೫ ॥

ಇತಿ ರಾಮವಚಶ್ಶ್ರುತ್ವಾಗಸ್ತಿಸ್ತೈರವಲೋಕಿತಃ ।
ಕುಂಭಯೋನಿಸ್ತದಾ ರಾಮಂ ಪ್ರೀತ್ಯಾವಚನಮಬ್ರವೀತ್ ॥ ೬ ॥

---

೩. ಅವರೂ ಕೂಡ ಎಲೈ ಮಹಾಬಾಹುವಾದ ರಘುನಂದನನೆ! ಎಲ್ಲಾ ವಿಷಯುಗಳಲ್ಲಿಯೂ ಕುಶಲಿಯಾಗಿರುವೆಯಾ! ಎಲೈ ಶತ್ರುಸಂಹಾರಕನೆ! ಶತ್ರುಗಳನ್ನು ನಾಶಮಾಡಿದ ನಿನ್ನನ್ನು ನೋಡಿದುದು ಬಹು ಸಂತೋಷಕರವು.

೪. ನೀನು ಮೇಘನಾದನೇ ಮುಂತಾದ ರಾಕ್ಷಸರನ್ನು ಕೊಂದುದು ಬಹು ಸಂತೋಷವು. ಆ ರಾಕ್ಷಸರ ಗುಂಪನ್ನೇ ಕೊಂದು ಈಗ ನೀನು ಕೃತಕೃತ್ಯನಾಗಿದ್ದೀಯೆ. ಬಹು ಸಂತೋಷವು.

೫. ಇಂತೆಂದು ಆ ಮುನಿಗಳು ಹೇಳಲು ಇದನ್ನು ಕೇಳಿ ರಾಮನು ನಗುತ್ತ ಅವರನ್ನು ಕುರಿತು ಎಲೈ ಋಷಿಗಳಿರ! ನೀವು ಮತ್ತಾರವಿಷಯವನ್ನೂ ಹೇಳದೆ ಮೊದಲು ಮೇಘನಾದನ ಹೆಸರನ್ನೇಕೆ ಹೇಳಿದಿರಿ? ಎಂದನು.

೬. ರಾಮನ ಈ ಮಾತನ್ನು ಋಷಿಗಳು ಕೇಳಿ ಅವರೆಲ್ಲರೂ ಅಗಸ್ತ್ಯನ ಮುಖವನ್ನು ನೋಡಿದರು. ಆಗ ಆ ಅಗಸ್ತ್ಯನು ರಾಮುನನ್ನು ಕುರಿತು ಇಂತೆಂದನು.

ಶೃಣು ರಾಮ ಯಥಾವೃತ್ತಂ ಮೇಘನಾದಸ್ಯ ಚೇಷ್ಟಿತಂ ।
ಜನ್ಮಕರ್ಮವರಾದಾನಂ ಸಂಕ್ಷೇಪಾದ್ವದತೋ ಮಮ ॥ ೭ ॥

ಪುರಾ ಕೃತಯುಗೇ ರಾಮ ಪುಲಸ್ತ್ಯೋ ಬ್ರಹ್ಮಣಸ್ಸುತಃ ।
ತೃಣಬಿಂದು ಸುತಾಯಾಂ ಸ ಪುತ್ರಂ ತ್ರೈಲೋಕ್ಯವಿಶ್ರುತಂ ॥ ೮ ॥

ನಿರ್ಮಮೇ ವಿಶ್ರವಾ ನಾಮಧೇಯಂ ವೇದನಿಧಿಂ ಶುಭಂ ।
ಭರದ್ವಾಜಸುತಾಯಾಂ ಚ ವಿಶ್ರವಾ ನಿರ್ಮಮೇ ಸುತಂ ॥ ೯ ॥

ಶ್ರೇಷ್ಠಂ ವೈಶ್ರವಣಂ ತಸ್ಮೈ ಪ್ರಸನ್ನೋಽಭೂದ್ವಿಧಿಶ್ಚಿರಾತ್ ।
ವಿಧಿರ್ವೈಶ್ರವಣಾಯಾಥ ತುಷ್ಟಸ್ತತ್ತಪಸಾ ದದೌ ॥ ೧೦ ॥

---

೭. ಎಲೈ ರಾಮನೆ! ಮೇಘನಾದನ ವಿಷಯವನ್ನು ಹೇಳುತ್ತೇನೆ. ಕ್ರಮವಾಗಿ ಕೇಳು. ಅವನ ಜನ್ಮ, ಅವನ ಕರ್ಮ, ಅವನಿಗೆ ಬಂದವರಗಳು ಇವನ್ನು ಸಂಕ್ಷೇಪವಾಗಿ ಹೇಳುತ್ತೇನೆ.

೮. ಎಲೈ ರಾಮನೆ! ಪೂರ್ವದಲ್ಲಿ ಕೃತಯುಗದಲ್ಲಿ ಬ್ರಹ್ಮನಿಗೆ ಸುತನಾದ ಪುಲಸ್ತ್ಯನಿದ್ದನು. ಆ ಪುಲಸ್ತ್ಯನಿಗೆ ತೃಣಬಿಂದುವಿನ ಮಗಳನ್ನು ಕೊಟ್ಟು ಮದುವೆಯಾಗಿದ್ದಿತು.

೯. ಪುಲಸ್ತ್ಯನಿಗೆ ಆಕೆಯಲ್ಲಿ ಮೂರುಲೋಕದಲ್ಲಿಯೂ ವಿಶ್ರುತನಾದ ವೇದನಿಧಿಯಾದ ವಿಶ್ರವಸ್ಸೆಂಬ ಮಗನು ಹುಟ್ಟಿದನು. ಆ ವಿಶ್ರವಸ್ಸಿಗೆ ಭರದ್ವಾಜನ ಮಗಳನ್ನು ಕೊಟ್ಟು ಮದುವೆಯಾಯಿತು.

೧೦. ಆ ಭರದ್ವಾಜನ ಮಗಳಲ್ಲಿ ವಿಶ್ರವಸ್ಸಿಗೆ ವೈಶ್ರವಣನೆಂಬ ಮಗನು ಹುಟ್ಟಿದನು, ಈ ವೈಶ್ರವಣನು ಬ್ರಹ್ಮನನ್ನು ಕುರಿತು ತಪಸ್ಸುಮಾಡಲು ಅದರಿಂದ ತುಷ್ಟನಾದ ಬ್ರಹ್ಮನು ಅವನಿಗೆ ವರವನ್ನು ಕೊಟ್ಟನು.

ಮನೋಭಿಲಷಿತಂ ತಸ್ಮೈ ಧನೇಶತ್ವಮಖಂಡಿತಂ ।
ಪುಷ್ಪಕಂ ಚಾಪ್ಯೇಕದಾಸೌ ದ್ರಷ್ಟುಂ ವಿಶ್ರವಸಂ ಯಯೌ ॥ ೧೧ ॥

ಪುಷ್ಪಕೇಣ ಧನಾಧ್ಯಕ್ಷೋ ಬ್ರಹ್ಮದತ್ತೇನ ಭಾಸ್ವತಾ ।
ನತ್ವಾ ತಾತಂ ತದಾ ಪ್ರಾಹ ನ ಸ್ಥಾನಂ ಬ್ರಹ್ಮಣಾ ಮಮ ॥ ೧೨ ॥

ದತ್ತಂ ಸ್ಥೇಯಂ ಮಯಾ ಕುತ್ರ ತದ್ವಿಚಾರ್ಯ ವದಸ್ವ ಮಾಂ ।
ವಿಶ್ರವಾ ಅಪಿ ತಂ ಪ್ರಾಹ ವಿಶ್ವಕರ್ಮವಿನಿರ್ಮಿತಾ ॥ ೧೩ ॥

ಲಂಕಾನಾಮ್ನೀ ಪುರೀ ಶ್ರೇಷ್ಠಾ ಸಾಗರೇಽಸ್ತಿ ಸುಮಂಡಿತಾ ।
ತ್ಯಕ್ತ್ವಾ ವಿಷ್ಣುಭಯಾದ್ದೈತ್ಯಾ ವಿವಿಶುಸ್ತಾಂ ರಸಾತಲಂ ॥ ೧೪ ॥

---

೧೧. ಅವನ ಇಷ್ಟಾರ್ಥವನ್ನು ಕೊಟ್ಟುದಲ್ಲದೆ ಅಖಂಡಿತವಾದ ಧನೇಶತ್ವವನ್ನೂ ಕೊಟ್ಟನು. ಅಲ್ಲದೆ ಇಷ್ಟಬಂದಂತೆ ಸಂಚರಿಸುವ ಪುಷ್ಪಕವೆಂಬ ವಿಮಾನವನ್ನೂ ಕೊಟ್ಟನು.

೧೨. ಈ ವೈಶ್ರವಣನು ಒಂದುಸಾರಿ ಪುಷ್ಪಕದಲ್ಲಿ ಕುಳಿತು ತಂದೆಯಾದ ವಿಶ್ರವಸ್ಸನ್ನು ನೋಡಲು ಹೋದನು. ಅಲ್ಲಿ ತಂದೆಗೆ ನಮಸ್ಕರಿಸಿ ಎಲೈ ತಾತನೆ ! ನನಗೆ ಬ್ರಹ್ಮನು ಇರುವುದಕ್ಕೆ ಜಾಗವನ್ನೇ ಕೊಡಲಿಲ್ಲ.

೧೩. ನಾನು ಎಲ್ಲಿ ನೆಲಸಬೇಕೆಂಬುದನ್ನು ವಿಚಾರಿಸಿ ನನಗೆ ಹೇಳು. ಎಂದನು. ಆಗ ವಿಶ್ರವಸನು ಮಗನಾದ ವೈಶ್ರವಣನನ್ನು ಕುರಿತು ಇಂತೆಂದನು.

೧೪. ಎಲೈ ಪುತ್ರನೆ ! ಸಮುದ್ರ ಮಧ್ಯದಲ್ಲಿ ವಿಶ್ವಕರ್ಮನು ಲಂಕೆಯೆಂಬ ಪಟ್ಟಣವನ್ನು ನಿರ್ಮಿಸಿರುವನು. ಅದು ಬಹು ಶ್ರೇಷ್ಠವಾದುದು. ಆ ಊರಿನಲ್ಲಿ ದೈತ್ಯರು ಅನೇಕರಿದ್ದರು. ಈ ವಿಷ್ಣುವಿನ ಭಯದಿಂದ ಅದನ್ನು ಬಿಟ್ಟು ಅವರು ಪಾತಾಳಕ್ಕೆ ಹೊರಟು ಹೋದರು.

ಸುಖಂ ತ್ವಂ ವಸ ತಸ್ಯಾಂ ಹಿ ತಥೇತ್ಯುಕ್ತ್ವಾ ಧನೇಶ್ವರಃ ।
ಗತ್ವಾ ತಸ್ಯಾಂ ಚಿರಂ ಕಾಲಮುವಾಸ ಪಿತೃಸಂಮತಃ ॥ ೧೫ ॥

ಕಸ್ಮಿಂಶ್ಚಿತ್ ತ್ವಥ ಕಾಲೇ ಹಿ ಸುಮಾಲಿರ್ನಾಮ ರಾಕ್ಷಸಃ ।
ದುಹಿತ್ರಾ ವ್ಯಚರದ್ಭೂಮ್ಯಾಂ ಪುಷ್ಪಕೇ ತಂ ದದರ್ಶ ಸಃ ॥ ೧೬ ॥

ಹಿತಾಯ ಚಿಂತಯಾಮಾಸ ರಾಕ್ಷಸಾನಾಂ ಮಹಾಮನಾಃ ।
ಕೈಕಸೀಂ ತನಯಾಮಾಹ ಗಚ್ಛ ವಿಶ್ರವಸಂ ಮುನಿಂ ॥ ೧೭ ॥

ವರಯಸ್ವ ಮುನೇಸ್ತೇಜಃ ಪ್ರತಾಪಾತ್ತೇ ಸುತಾಶ್ಶುಭಾಃ ।
ಭವಿಷ್ಯಂತಿ ಧನಾಧ್ಯಕ್ಷತುಲ್ಯಾ ನೋ ಹಿತಕಾರಿಣಃ ॥ ೧೮ ॥

---

೧೫. ಅಲ್ಲಿಗೆ ನೀನು ಹೋಗಿ ಸುಖವಾಗಿ ವಾಸಮಾಡು. ಎಂದು ಹೇಳಲು ಧನೇಶನು ಹಾಗೆಯೇ ಆಗಲೆಂದು ಲಂಕೆಗೆ ಹೋಗಿ ತಂದೆಯು ಹೇಳಿದ ಹಾಗೆ ಕೇಳಿಕೊಂಡು ಬಹು ಕಾಲವಿದ್ದನು.

೧೬. ಹೀಗಿರುತ್ತಿರಲು ಒಂದುಸಲ ಸುಮಾಲಿಯೆಂಬ ರಾಕ್ಷಸನು ಮಗಳೊಡನೆ ಭೂಮಿಯಲ್ಲಿ ಸಂಚರಿಸುತ್ತಿದ್ದಾಗ ಪುಷ್ಪಕವಿಮಾನದಲ್ಲಿ ಆ ಕುಬೇರನು ಸಂಚರಿಸುತ್ತಿದ್ದುದನ್ನು ನೋಡಿದನು.

೧೭. ಆಗ ಅವನ ಮನಸ್ಸಿನಲ್ಲಿ ರಾಕ್ಷಸರಿಗೆ ಒಳ್ಳೆಯದನ್ನು ಮಾಡಬೇಕೆಂದು ಬುದ್ಧಿಯೂ ಬಂದಿತು. ಮಗಳಾದ ಕೈಕಸಿಯನ್ನು ಕುರಿತು ಅಮ್ಮಾ! ನೀನು ವಿಶ್ರವಸ್ಸು ಮುನಿಯ ಬಳಿಗೆ ಹೋಗು.

೧೮. ಅವನಲ್ಲಿರುವ ತೇಜಸ್ಸನ್ನು ಕೇಳಿಕೋ! ಆ ತೇಜಸ್ಸಿನಿಂದ ನಿನಗೆ ಉತ್ತಮರಾದ ಮಕ್ಕಳಾಗುವರು. ಅವರು ಈ ಧನೇಶನಿಗೆ ಸಮರಾಗಿ ನಮ್ಮ ರಾಕ್ಷಸರಿಗೆ ಹಿತಕಾರಿಗಳಾಗುವರು. ಎಂದನು.

ಸಾ ಸಂಧ್ಯಾಯಾಂ ಯಯೌ ಶೀಘ್ರಂ ಮುನೇರಗ್ರೇ ವ್ಯವಸ್ಥಿತಾ |
ಲಿಖಂತೀ ಭುವಿ ಪಾದಾಂಗುಷ್ಠೇನ ಚಾಧೋಮುಖೀ ಸ್ಥಿತಾ ॥ ೧೯ ॥

ತಾಮಪೃಚ್ಛನ್ಮುನಿಃ ಕಾ ತ್ವಂ ಸಾಹ ತ್ವಂ ವೇತ್ತುಮರ್ಹಸಿ |
ತತೋ ಧ್ಯಾತ್ವಾ ಮುನಿಸ್ಸರ್ವಂ ಜ್ಞಾತ್ವಾ ತಾಂ ಪ್ರತ್ಯಭಾಷತ ॥ ೨೦ ॥

ಜ್ಞಾತಂ ತವಾಭಿಲಷಿತಂ ಮತ್ತಃ ಪುತ್ರಾನಭೀಪ್ಸಸಿ |
ದಾರುಣಾಯಾಂ ತು ವೇಲಾಯಾಮಾಗತಾಸಿ ಸುಮಧ್ಯಮೇ ॥ ೨೧ ॥

ಅತಸ್ತೇ ದಾರುಣೌ ಪುತ್ರೌ ರಾಕ್ಷಸೌ ಸಂಭವಿಷ್ಯತಃ |
ಸಾಬ್ರವೀನ್ಮುನಿಶಾರ್ದೂಲಂ ತ್ವತ್ತೋಽಪ್ಯೇವಂ ವಿಧೌ ಸುತೌ ॥ ೨೨ ॥

---

೧೯. ತಂದೆಯ ಮಾತಿನಂತೆ ಆಕೆಯು ಸಂಧ್ಯಾಕಾಲದ ಸಮಯದಲ್ಲಿ ಆ ಮುನಿಯ ಎದುರಿಗೆ ಹೋಗಿ ನಿಂತುಕೊಂಡಳು. ಮತ್ತು ಕಾಲಿನ ಹೆಬ್ಬೆರಳಿನಿಂದ ಭೂಮಿಯನ್ನು ಕೆರೆಯುತ್ತ ತಲೆಯನ್ನು ತಗ್ಗಿಸಿಕೊಂಡು ಲಜ್ಜೆಪಡುತ್ತ ನಿಂತಳು.

೨೦. ಇವಳನ್ನು ನೋಡಿ ಆ ಮುನಿಯು ನೀನು ಯಾರೆಂದು ಕೇಳಲು ನನ್ನ ವಿಷಯವೆಲ್ಲವನ್ನೂ ನೀನೇ ತಿಳಿದುಕೊಳ್ಳಲು ಯೋಗ್ಯನಾಗಿರುತ್ತೀಯೆ. ಎಂದೆನ್ನಲು ಆಗ ಅವನು ಧ್ಯಾನದಿಂದ ಎಲ್ಲವನ್ನೂ ತಿಳಿದುಕೊಂಡು ಆಕೆಯನ್ನು ಕುರಿತು ಇಂತೆಂದನು.

೨೧. ನಿನ್ನ ಮನಸ್ಸಿನಲ್ಲಿರುವುದು ತಿಳಿಯಿತು. ನನ್ನಿಂದ ನೀನು ಮಕ್ಕಳನ್ನು ಆಪೇಕ್ಷಿಸುತ್ತೀಯೆ. ಎಲೈ ಸುಮಧ್ಯಮೆಯೆ! ನೀನು ಬಂದಿರುವುದು ಬಹುದಾರುಣವಾದ ವೇಳೆಯು.

೨೨. ಆದುದರಿಂದ ನಿನಗೆ ದಾರುಣರಾದ ರಾಕ್ಷಸರಾದ ಇಬ್ಬರು ಮಕ್ಕಳು ಹುಟ್ಟುವರು. ಎಂದನು. ಆಗ ಆಕೆಯು ಆ ಮುನಿಯನ್ನು ಕುರಿತು ಎಲೆ ಮುನಿಯೆ! ನಿನ್ನಿಂದಲೂ ಈ ರೀತಿಯಾದ ಮಕ್ಕಳಾಗಬಹುದೆ? ಎಂದಳು.

ತಾಮಾಹಾಂತಿಮಜೋ ಯಸ್ತೇ ಭವಿಷ್ಯತಿ ಮಹಾಮತಿಃ ।
ತತಸ್ಸಾ ಸುಷುವೇ ಪುತ್ರಾರ್ನ್ ಯಥಾಕಾಲೇ ಸುಮಧ್ಯಮಾ ॥ ೨೩ ॥

ರಾವಣಂ ಕುಂಭಕರ್ಣಂ ಚ ಕ್ರೌಂಚೀಂ ಶೂರ್ಪಣಖಾಂ ಶುಭಾಂ ।
ಕುಂಭೀನಸೀಂ ಕನೀಯಾಂಸಂ ತೃತೀಯಂ ತಂ ವಿಭೀಷಣಂ ॥ ೨೪ ॥

ರಾವಣಃ ಕುಂಭಕರ್ಣಶ್ಚ ತ್ರಯೋ ದುಹಿತರಸ್ತಥಾ ।
ದುರ್ವೃತ್ತಾಃ ಪ್ರಾಣಿಭಕ್ಷಾಶ್ಚ ಬಭೂವುರ್ಮುನಿಹಿಂಸಕಾಃ ॥ ೨೫ ॥

ಏಕದಾ ರಾವಣೋ ಮಾತ್ರಾ ಲಿಂಗಾರ್ಥಂ ಪ್ರೇಷಿತಶ್ಶಿವಂ ।
ಕರ್ತುಂ ಪ್ರಸನ್ನಮಕರೋತ್ಕೈಲಾಸೇ ಕರ್ಮ ದುಷ್ಕರಂ ॥ ೨೬ ॥

---

೨೩. ಆಗ ಆಕೆಯನ್ನು ಕುರಿತು ಅನಂತರ ಕೊನೆಯಲ್ಲಿ ಮತ್ತೊಬ್ಬ ಮಗನು ಹುಟ್ಟುವನು. ಅವನು ಬಹು ಬುದ್ಧಿವಂತನಾಗುವನು. ಎಂದನು. ಅನಂತರ ಆಕೆಯು ಕ್ರಮವಾಗಿ ಆಯಾಕಾಲದಲ್ಲಿ ಆವನ ವರಕ್ಕೆ ತಕ್ಕಂತೆ ಮೂರುಜನ ಗಂಡುಮಕ್ಕಳನ್ನು ಪಡೆದಳು.

೨೪–೨೫. ಅವರು ಕ್ರಮವಾಗಿ ರಾವಣ ಕುಂಭಕರ್ಣ ಕ್ರೌಂಚಿ ಶೂರ್ಪಣಖೀ ಕುಂಭೀನಸಿ ವಿಭೀಷಣ ಎಂಬುವರಾದರು. ಐವರು ಕೆಟ್ಟ ಆಚಾರ ವುಳ್ಳವರಾಗಿ ಪ್ರಾಣಿಗಳನ್ನು ಭಕ್ಷಿಸುವವರಾದರು. ಮುನಿಗಳನ್ನು ಹಿಂಸಿಸುವವ ರಾಗಿಯೂ ಆದರು.

೨೬. ಒಂದುಸಾರಿ ತಾಯಿಯಾದ ಕೈಕಸಿಯು ರಾವಣನೆಂಬ ಮಗನನ್ನು ಕರೆದು ತನಗೆ ಪೂಜೆಗೋಸ್ಕರ ಶಿವಲಿಂಗವನ್ನು ತರಬೇಕೆನ್ನಲು ಅವನು ಅಂತೆಯೇ ಹೋಗಿ ಶಿವನನ್ನು ಪ್ರಸನ್ನನಾಗಿ ಮಾಡಿಕೊಳ್ಳಲು ಬಹು ದುಷ್ಕರವಾದ ಕೆಲಸಗಳನ್ನು ಮಾಡಿದನು.

ಕಿಂಚಿಸ್ಸ್ವೀಯಂ ಶಿರಚ್ಛಿತ್ವಾ ಪೀಥಿಂ ಕರ್ತುಂ ಸಮುದ್ಯತಃ ।
ಕೃತ್ವಾ ಪೀಠಂ ಹಿ ದೇಹಸ್ಯ ತನ್ಮೂಲಂ ಶಿರಸಸ್ತಥಾ ॥ ೨೭ ॥

ತದಗ್ರಂ ಪಾದಯೋಃ ಕೃತ್ವಾ ಶಂಕೂನಂಗುಲಿಭಿಸ್ತಥಾ ।
ತಂತ್ರೀಃ ಕೃತ್ವಾಂತ್ರಮಾಲಾಭಿಶ್ಶತಶೋಥ ಸಹಸ್ರಶಃ ॥ ೨೮ ॥

ಏವಂ ಕೃತ್ವಾ ಸ್ವದೇಹಸ್ಯ ವೀಣಾಂ ಷಡ್ಜಸ್ವರೈರ್ಮುಹುಃ ।
ಚಕಾರ ಸ್ವಮುಖೇನೈವ ಗಾಂಧರ್ವಂ ಗಾಯನಂ ಶುಭಂ ॥ ೨೯ ॥

ತದಾ ನಂದೀಶ್ವರಂ ಪ್ರಾಹ ಶಂಕರೋ ಲೋಕಶಂಕರಃ ।
ಶಿರಸ್ಸಂಧಾಯ ಹಸ್ತೇನ ತ್ವಯಾ ವಾಚ್ಯೋದ್ಯ ರಾವಣಃ ॥ ೩೦ ॥

---

೨೭. ತನ್ನ ಕತ್ತನ್ನು ಕತ್ತರಿಸಿ ಅದರಿಂದ ವೀಣೆಯನ್ನು ಮಾಡಿಕೊಳ್ಳಲು ಪ್ರಯತ್ನಪಟ್ಟನು. ಈ ದೇಹವನ್ನು ಆ ಕತ್ತಿಗೆ ಪೀಠವನ್ನಾಗಿಮಾಡಿ ಕಾಲುಗಳನ್ನೇ ತುದಿಯನ್ನಾಗಿ ಮಾಡಿದನು.

೨೮. ಬೆರಳನ್ನು ಕತ್ತರಿಸಿ ಅವುಗಳಿಂದ ಮೆಟ್ಟಲುಗಳನ್ನೂ ಗೂಟಗಳನ್ನೂ ಮಾಡಿದನು. ತನ್ನ ಕರುಳುಗಳನ್ನು ಸಾವಿರಾರನ್ನು ಹಾಕಿ ತಂತಿಗಳನ್ನು ಮಾಡಿದನು.

೨೯. ಈ ರೀತಿಯಾಗಿ ತನ್ನ ದೇಹವನ್ನು ವೀಣೆಯನ್ನಾಗಿ ಮಾಡಿ ಷಡ್ಜಸ್ವರದಿಂದ ಬಾರಿಸುತ್ತ ತನ್ನ ಬಾಯಿಂದಲೇ ಹಾಡನ್ನು ಹಾಡಿದನು.

೩೦. ಈತನು ಹೀಗೆ ಮಾಡುತ್ತಿರಲು ಶಿವನು ನಂದೀಶ್ವರನನ್ನು ಕುರಿತು ಈ ರಾವಣನ ತಲೆಯನ್ನು ನೀನು ನಿನ್ನ ಕೈಯ್ಯಿಂದಲೇ ತೆಗೆದು ಅವನ ಕತ್ತಿಗೆ ಸೇರಿಸು.

ಆತ್ಮಲಿಂಗಂ ರಾಕ್ಷಸಂ ತ್ವಾಂ ಶಂಕರೋ ನ ಪ್ರದಾಸ್ಯತಿ |
ಹೃದ್ಗತಂ ಹಿ ಮಯಾ ಜ್ಞಾತಂ ಶಂಭೋಸ್ತ್ವಂ ಯಾಹಿ ಸ್ವಸ್ಥಲಂ || ೩೧ ||

ಇತ್ಯುಕ್ತ್ವಾ ಪ್ರೇಷಣೀಯಸ್ಸ ರಾವಣಃ ಸ್ವಸ್ಥಲಂ ತ್ವಯಾ |
ಇತಿ ಶಂಭೋರ್ವಚಶ್ಶ್ರುತ್ವಾ ಯಯೌ ನಂದೀ ಸ ರಾವಣಂ || ೩೨ ||

ಶಿರಸ್ಸಂಯೋಜ್ಯ ಹಸ್ತೇನ ಶಿವೋಕ್ತಂ ತಂ ನ್ಯವೇದಯತ್ |
ತಚ್ಛ್ರುತ್ವಾ ರಾವಣಶ್ಚಾಪಿ ಸಮತಿಕ್ರಮ್ಯ ತಾಂ ನಿಶಾಂ || ೩೩ ||

ಚಕಾರ ಪೂರ್ವವದ್ಗಾನಂ ದ್ವಿತೀಯದಿವಸೇ ಪುನಃ |
ನಂದಿನಾ ಶಂಕರಶ್ಚಾಪಿ ಪೂರ್ವವತ್ತಂ ನ್ಯವೇದಯತ್ || ೩೪ ||

---

೩೧. ಮತ್ತು ಎಲೈ ರಾವಣನೆ! ನೀನು ರಾಕ್ಷಸನಾದುದರಿಂದ ಶಿವನು ಆತ್ಮಲಿಂಗವನ್ನು ನಿನಗೆ ಕೊಡುವುದಿಲ್ಲ. ಆ ಶಂಭುವಿನ ಮನಸ್ಸಿನಲ್ಲಿರುವುದನ್ನು ನಾನು ತಿಳಿದೆನು. ನೀನು ನಿನ್ನ ಊರಿಗೆ ಹೋಗು.

೩೨. ಎಂದು ಹೇಳಿ ರಾವಣನನ್ನು ಅವನ ಸ್ಥಳಕ್ಕೆ ಹಿಂದಿರುಗಿಸಿ ಕಳುಹಿಸು. ಎಂದು ಹೇಳಿದನು. ಈ ರೀತಿಯಾಗಿ ಶಂಭುವಿನ ಮಾತನ್ನು ಕೇಳಿ ನಂದಿಯು ರಾವಣನ ಬಳಿಗೆ ಹೋದನು.

೩೩. ಅವನ ತಲೆಯನ್ನು ಕೈಯ್ಯಿಂದ ತೆಗೆದು ಕತ್ತಿಗೆ ಸೇರಿಸಿ ಶಿವನು ಹೇಳಿದುದನ್ನು ಹೇಳಿದನು. ರಾವಣನೂ ಕೂಡ ಅದನ್ನು ಕೇಳಿ ಆ ರಾತ್ರಿಯೆಲ್ಲಾ ಸುಮ್ಮನಿದ್ದು ಬಿಟ್ಟನು.

೩೪. ಮತ್ತೆ ಎರಡನೆಯ ದಿವಸ ಮೊದಲಿನಂತೆ ವೀಣೆಯನ್ನು ನಿರ್ಮಿಸಿ ಗಾನವನ್ನು ಮಾಡಲು ಮೊದಲು ಮಾಡಿದನು ಶಂಕರನು ಮತ್ತೆ ನಂದಿಯ ಕೈಯ್ಯಲ್ಲಿ ಹಿಂದಿನಂತೆಯೇ ಹೇಳಿಕಳುಹಿಸಿದನು.

ಇತ್ಥಂ ದಶದಿನಾನ್ಯೇವ ಗತಾನಿ ರಾವಣಸ್ಯ ಚ ।
ಅಥ ತತ್ಕರ್ಮಣಾ ತುಷ್ಟಃ ಶಂಕರೋ ಗಾಯನೇನ ಚ ॥ ೩೫ ॥

ಭೂತ್ವಾ ಪ್ರಸನ್ನಸ್ತಂ ಪ್ರಾಹ ವರಂ ವರಯ ಚೇತಿ ವೈ ।
ದೃಷ್ಟ್ವಾ ಶಂಭುಂ ರಾವಣೋಽಪಿ ಶಿರಸಾ ತೇನ ಸಂಧಿತಃ ॥ ೩೬ ॥

ವರಯಾಮಾಸ ಮನ್ಮಾತ್ರೇ ಹ್ಯಾತ್ಮಲಿಂಗಂ ತಥಾ ಮಮ ।
ಪತ್ನ್ಯರ್ಥಂ ಪಾರ್ವತೀಂ ದೇಹಿ ತಥೇತ್ಯುಕ್ತ್ವಾ ದದೌ ಶಿವಃ ॥ ೩೭ ॥

ಗೃಹೀತ್ವಾ ಗಂತು ಕಾಮಂ ತಂ ಪುನಃ ಪ್ರಾಹ ಹರಸ್ತದಾ ।
ಮತ್ತೋಷಾರ್ಥಂ ತ್ವಯಾ ವೀರ ದಶವಾರಂ ನಿಜಂ ಶಿರಃ ॥ ೩೮ ॥

---

೩೫. ಈ ರೀತಿಯಾಗಿ ರಾವಣನು ಹತ್ತು ದಿನಗಳು ಮಾಡಿದನು. ನಂದಿಯು ಆ ಹತ್ತುದಿನಗಳೂ ಹೇಳಿದನು. ಆಗ ಶಂಕರನು ಅವನ ಕರ್ಮದಿಂದಲೂ ಗಾನದಿಂದಲೂ ಸಂತೋಷಪಟ್ಟನು.

೩೬. ಇದರಿಂದ ಪ್ರಸನ್ನನಾಗಿ ಎಲೈ ರಾವಣನೆ! ನಾನು ಸಂತೋಷ ಪಟ್ಟಿದ್ದೇನೆ. ವರವನ್ನು ಕೇಳಿಕೋ ? ಎಂದನು. ಶಂಭುವನ್ನು ನೋಡಿ ರಾವಣನು ತನ್ನ ತಲೆಯನ್ನು ಸರಿಯಾಗಿ ಸೇರಿಸಿಕೊಂಡನು.

೪೭. ಎಲೈ ಶಿವನೆ! ನನ್ನ ತಾಯಿಗೆ ಶಿವನಾದ ನಿನ್ನ ಆತ್ಮಲಿಂಗವನ್ನು ಕೊಡಬೇಕು. ನನಗೆ ನಿನ್ನ ಹೆಂಡತಿಯಾದ ಪಾರ್ವತಿಯು ಹೆಂಡತಿಯಾಗಬೇಕು. ಕೊಡು ಎಂದೆನ್ನಲು ಶಿವನು ಹಾಗೆಯೇ ಅಗಲಿ ಎಂದು ಅವೆರಡನ್ನೂ ಕೊಟ್ಟನು.

೩೮–೩೯. ಅವನ್ನು ಹೊಂದಿ ತೆಗೆದುಕೊಂಡು ಹೋಗಲು ಉದ್ಯುಕ್ತನಾದ ರಾವಣನನ್ನು ಕುರಿತು ಶಿವನು ಎಲೈ ವೀರನೇ! ನನಗೆ ಸಂತೋಷಪಡಿಸಲು

ಖಡ್ಗೇನ ಚ್ಛೇದಿಕಂ ಯಸ್ಮಾತ್ತಸ್ಮಾತ್ತೇದ್ಯ ತಿರಾಂಸಿ ಹಿ ।
ದಶ ವಿಂಶದ್ಭುಜಾಶ್ಚಾಪಿ ಭವಿಷ್ಯಂತಿ ಗಿರಾ ಮಮ ॥ ೩೯ ॥

ತದಾ ಸ ರಾವಣಸ್ತುಷ್ಟೋ ಗಿರಿಜಾಲಿಂಗಸಂಯುತಃ ।
ವಿಂಶದ್ಭುಜೋ ದಶಗ್ರೀವಃ ಸ್ವಸ್ಥಲಂ ಗಂತುಮುದ್ಯತಃ ॥ ೪೦ ॥

ಕಲ್ಪಭೇದಾಚ್ಛತಶಿರಾಶ್ಶತವಾರಂ ಪ್ರಖಂಡಿತೈಃ ।
ಸ ಪ್ರೋಕ್ತಸ್ಸ್ವಶಿರೋಭಿರ್ಹಿ ಶತದ್ವಯಭುಜಃ ಕ್ವಚಿತ್ ॥ ೪೧ ॥

ತಸ್ಮಾದ್ಧಿ ಹೃತವಾರ್ ವಿಷ್ಣುಸ್ತ್ವಾಂ ತಂ ಮಾರ್ಗೇ ಪ್ರತಾರ್ಯ ವೈ ।
ತಥೈವಾಬ್ಧೇಸ್ತಟೇ ಲಿಂಗಂ ಗೋಕರ್ಣಂ ರಾವಣಾತ್ತ್ವಯಾ ॥ ೪೨ ॥

ಹತ್ತುಬಾರಿ ನಿನ್ನ ತಲೆಯನು ಕತ್ತಿಯಿಂದ ಕತ್ತರಿಸಿರುವುದರಿಂದ ನಿನಗೆ ಹತ್ತು ತಲೆಗಳಾಗಲಿ. ಮತ್ತು ಇಪ್ಪತ್ತು ತೋಳುಗಳೂ ಆಗಲಿ. ಇದೇ ನನ್ನ ವರವು. ಎಂದನು.

೪೦. ಆಗ ರಾವಣನು ಸಂತೋಷಪಟ್ಟು ಗಿರಿಜೆಯನ್ನೂ ಲಿಂಗವನ್ನೂ ತೆಗೆದುಕೊಂಡು ಹತ್ತು ತಲೆಗಳನ್ನೂ ಇಪ್ಪತ್ತು ತೋಳುಗಳನ್ನೂ ಹೊಂದಿದವನಾಗಿ ತನ್ನ ಸ್ಥಳಕ್ಕೆ ಹೊರಟನು.

೪೧. ಕಲ್ಪಭೇದದಿಂದ ಹತ್ತುಸಾರಿ ಕತ್ತರಿಸಿದಾಗ ಹತ್ತುತಲೆಗಳೂ ಇಪ್ಪತ್ತು ತೋಳುಗಳೂ ನೂರುಬಾರಿ ಕತ್ತರಿಸಿದಾಗ ನೂರುತಲೆಗಳೂ ಇನ್ನೂರು ತೋಳುಗಳೂ ಆದುವೆಂದು ತಿಳಿಯಬೇಕು. ಈ ಆಧಾರದಮೇಲೆಯೇ ರಾವಣನಿಗೆ ಕೆಲವು ಕಡೆಗಳಲ್ಲಿ ಹತ್ತು ತಲೆಗಳೂ ಇಪ್ಪತ್ತು ತೋಳುಗಳೂ ಇವೆಯೆಂದೂ ಮತ್ತೊಂದೆಡೆಯಲ್ಲಿ ನೂರುತಲೆಗಳೂ ಇನ್ನೂರು ತೋಳುಗಳು ಇವೆಯೆಂದೂ ಹೇಳಿದ್ದಾರೆ.

೪೨–೪೩. ರಾವಣನು ಮಾರ್ಗದಲ್ಲಿ ಬರುತ್ತಿರಲು ವಿಷ್ಣುವು ಅವನನ್ನು ಮೋಸಗೊಳಿಸಿ ಗಿರಿಜೆಯಾದ ನಿನ್ನನ್ನು ಅಪಹರಿಸಿದನು. ಅಂತೆಯೇ ಸಮುದ್ರದ ದಡದಲ್ಲಿ ಗೋಕರ್ಣದಲ್ಲಿ ಆ ಲಿಂಗವನ್ನು ತೆಗೆದುಕೊಂಡು ಸ್ಥಾಪಿಸಿದನು.

ಗೃಹೀತ್ವಾ ಸ್ಥಾಪಿತಂ ಪೂರ್ವಂ ರಾವಣೋಽಪಿ ಗೃಹಂ ಯಯೌ ।
ಮಂಡೋದರೀಂ ಹರೇರ್ವಾಕ್ಯಾಲ್ಲಬ್ಧ್ವಾ ಮಯಸುತಾಂ ಶುಭಾಂ ॥ ೪೩ ॥

ಮಾತುಃ ಕಾರ್ಯಮಸಂಪಾದ್ಯ ತೂಷ್ಣೀಮೇವಾತಿಲಜ್ಜಿತಃ ।
ಮಂಡೋದರ್ಯಾಕರೋತ್ಸ್ವೀಯಂ ವಿವಾಹಂ ತೋಷಪೂರಿತಃ ॥ ೪೪ ॥

ದೃಷ್ಟ್ವೈಕದಾ ಧನಾಧ್ಯಕ್ಷಂ ಪುಷ್ಪಕಸ್ಥಂ ತು ಕೈಕಸೀ ।
ಪುತ್ರಾನ್ ಧಿಕ್ಕಾರಯಾಮಾಸ ಯೂಯಂ ಷಂಡಾ ಮೃತೋಪಮಾಃ ॥ ೪೫ ॥

ಸಾಪತ್ನಬಂಧುಂ ಯೇ ದೃಷ್ಟ್ವಾ ಜಾಯಂತೇ ನಾತ್ರಲಜ್ಜಿತಾಃ ।
ತೇ ಮಾತೃವಚನಂ ಶ್ರುತ್ವಾ ಯಯುರ್ಗೋಕರ್ಣಮುತ್ತಮಂ ॥ ೪೬ ॥

ಗೋಕರ್ಣೇಶ್ವರವಾಯಿತು. ರಾವಣನು ಅಲ್ಲಿಂದ ಮುಂದೆ ಹೊರಟು ಹೋದನು. ಹರಿಯ ಮಾತಿನಂತೆ ಮಂಡೋದರಿಯೆಂಬ ಮಯನ ಮಗಳನ್ನು ಹೊಂದಿದನು.

೪೪. ಇವನು ತಾಯಿಯು ಹೇಳಿದಂತೆ ಕೆಲಸವನ್ನು ಮಾಡದಿದ್ದುದರಿಂದ ಲಜ್ಜಿತನಾಗಿ ಸುಮ್ಮನೆ ಇದ್ದನು. ಮಯನ ಮಗಳಾದ ಮಂಡೋದರಿಯನ್ನು ಮದುವೆಯಾಗಿ ಬಹು ಸಂತುಷ್ಟನಾದನು.

೪೫-೪೬. ಒಂದುಸಾರಿ ಈ ಕೈಕಸಿಯು ಕುಬೇರನು ಪುಷ್ಪಕ ವಿಮಾನದಲ್ಲಿ ಸುತ್ತುತ್ತಿರುವುದನ್ನು ನೋಡಿದಳು. ಆಗ ತನ್ನ ಮಕ್ಕಳನ್ನು ಕುರಿತು ನೀವು ನಪುಂಸಕರಿಗೆ ಸಮರಾದವರು. ನಿಮಗೆ ಧಿಕ್ಕಾರವಿರಲಿ. ಹಗೆಯಾದವನನ್ನು ನೋಡಿ ಅವನು ಉಚ್ಛಸ್ಥಿತಿಯಲ್ಲಿರುವುದನ್ನೂ ತಿಳಿದು ಯಾರು ನಾಚಿಕೆಪಡುವು ದಿಲ್ಲವೋ ಅವರು ಕೈಲಾಗದವರು ಎಂದು ತಿಳಿ. ಎಂದಳು.

ದಶವರ್ಷಸಹಸ್ರಾಣಿ ಕುಂಭಕರ್ಣೋಽಕರೋತ್ತಪಃ ।
ವಿಭೀಷಣೋಽಪಿ ಧರ್ಮಾತ್ಮಾ ಸತ್ಯಧರ್ಮಪರಾಯಣಃ ॥ ೪೭ ॥

ಪಂಚವರ್ಷಸಹಸ್ರಾಣಿ ಪಾದಾಂಗುಷ್ಠೇನ ತಸ್ಥಿವಾನ್ ।
ದಿವ್ಯವರ್ಷಸಹಸ್ರಂ ತು ಧೂಮಾಹಾರೋ ದಶಾನನಃ ॥ ೪೮ ॥

ಪೂರ್ಣೇ ವರ್ಷಸಹಸ್ರೇ ಸ್ವಂ ಶೀರ್ಷಮಗ್ನೌ ಜುಹಾವ ಸಃ ।
ಏವಂ ವರ್ಷಸಹಸ್ರಾಣಿ ನವ ತಸ್ಯಾತಿಚಕ್ರಮುಃ ॥ ೪೯ ॥

ಅಥ ವರ್ಷಸಹಸ್ರೇ ತು ದಶಮೇ ದಶಮಂ ಶಿರಃ ।
ಛೇತ್ತುಕಾಮಸ್ಯ ಧರ್ಮಾತ್ಮಾ ಪ್ರಸನ್ನೋಽಭೂತ್ಪ್ರಜಾಪತಿಃ ॥ ೫೦ ॥

---

೪೭. ತಾಯಿಯು ಹೀಗೆನ್ನುತ್ತಲೂ ಅದನ್ನು ಕೇಳಿ ರಾವಣ, ಕುಂಭಕರ್ಣ, ವಿಭೀಷಣರು, ಉತ್ತಮವಾದ ಗೋಕರ್ಣಕ್ಕೆ ಹೋದರು. ಕುಂಭಕರ್ಣನು ಹತ್ತುಸಾವಿರ ವರ್ಷಗಳವರೆಗೂ ಅಲ್ಲಿ ತಪಸ್ಸನ್ನು ಮಾಡಿದನು. ವಿಭೀಷಣನು ಸತ್ಯದಲ್ಲಿಯೂ, ಧರ್ಮದಲ್ಲಿಯೂ, ಆಸಕ್ತನಾಗಿ ಐದುಸಾವಿರ ವರ್ಷಗಳವರೆಗೂ ಪಾದಾಂಗುಷ್ಠದಮೇಲೆ ನಿಂತುಕೊಂಡು ತಪಸ್ಸನ್ನು ಮಾಡಿದನು.

೪೮–೪೯. ದಶಕಂಠನು ದೇವತೆಗಳ ಸಾವಿರ ವರ್ಷಗಳವರೆಗೂ ಹೊಗೆಯನ್ನು ಕುಡಿದುಕೊಂಡು ತಪಸ್ಸುಮಾಡಿದನು ಒಂದುಸಾವಿರ ವರ್ಷಗಳಾದಮೇಲೆ ತನ್ನ ತಲೆಯನ್ನು ಕತ್ತರಿಸಿ ಹೋಮಮಾಡಿದನು. ಈ ರೀತಿಯಾಗಿ ಮಾಡುತ್ತ ಒಂಭತ್ತುಸಾವಿರ ವರ್ಷಗಳ ಕಾಲವು ಕಳೆಯಿತು.

೫೦. ಹತ್ತನೆಯಸಾವಿರದ ವರ್ಷದ ಅವಧಿಯಲ್ಲಿ ಹತ್ತನೆಯ ತಲೆಯನ್ನು ಕಡಿದು ಹೋಮಮಾಡಲು ಪ್ರಯತ್ನಪಟ್ಟನು. ಆಗ ಧರ್ಮಿಷ್ಠನಾದ ಬ್ರಹ್ಮನು ಪ್ರಸನ್ನನಾದನು.

ಉವಾಚ ವಚನಂ ಬ್ರಹ್ಮಾ ವರಂ ವರಯ ಕಾಂಕ್ಷಿತಂ ।
ತದೋವಾಚ ದಶಾಸ್ಯಸ್ತಮವಧ್ಯತ್ವಂ ವೃಣೋಮ್ಯಹಂ ॥ ೫೧ ॥

ಸುಪರ್ಣನಾಗಯಕ್ಷೇಭ್ಯೋ ದೇವೇಭ್ಯಶ್ಚಾಸುರೈರಪಿ ।
ತ್ವತ್ತಶ್ಶಂಭೋರ್ಮಹಾವಿಷ್ಣೋರ್ಮಾನುಷಾ ಮೇ ತೃಣೋಪಮಾಃ ॥ ೫೨ ॥

ತಥೇತ್ಯುಕ್ತ್ವಾ ವಿಧಿಸ್ತಸ್ಮೈ ದಶಶೀರ್ಷಾಣಿ ಸಂದಧೌ ।
ವಿಭೀಷಣಾಯ ಸದ್ಬುದ್ಧಿಮಮರತ್ವಂ ದದೌ ಮುದಾ ॥ ೫೩ ॥

ವಿಮೋಹಿತಂ ಸರಸ್ವತ್ಯಾ ದೇವೇಂದ್ರಪದಕಾಂಕ್ಷಿಣಂ ।
ಕುಂಭಕರ್ಣಂ ವಿಧಿಃ ಪ್ರಾಹ ವರಂ ವರಯ ವಾಂಛಿತಂ ॥ ೫೪ ॥

ಸೋಽಪಿ ತಂ ವರಯಾಮಾಸ ನಿದ್ರಾಂ ಷಾಣ್ಮಾಸಿಕೀಂ ಶುಭಾಂ ।
ಷಾಣ್ಮಾಸೀಯೇ ಚೈಕದಿನೇಽಶನಂ ಬ್ರಹ್ಮಾಪಿ ದತ್ತವಾನ್ ॥ ೫೫ ॥

೫೧–೫೨. ಆಗ ಅವನು ರಾವಣನನ್ನು ಕುರಿತು ಎಲೈ ರಾವಣನೆ! ನಿನಗೆ ಬೇಕಾದವರನ್ನು ಕೇಳಿಕೋ ಎಂದನು. ಆಗ ಅವನು ಸುಪರ್ಣರು, ನಾಗರು, ಯಕ್ಷರು, ದೇವತೆಗಳು, ಅಸುರರು, ಬ್ರಹ್ಮ, ಶಂಭು, ಮಹಾವಿಷ್ಣು ಇವರಿಂದ ನನಗೆ ಮರಣವಾಗಕೂಡದು. ಮನುಷ್ಯರು ನನಗೆ ಹುಲ್ಲಿಗೆ ಸಮಾನರು ಎಂದನು.

೫೩. ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಹತ್ತು ತಲೆಗಳನ್ನೂ ಹಿಂದಿನಂತೆಯೇ ಸೇರಿಸಿ ಕೊಟ್ಟನು. ವಿಭೀಷಣನಿಗೆ ತಾನಾಗಿಯೇ ಅಮರತ್ವವನ್ನೂ ಒಳ್ಳೆಯ ಬುದ್ಧಿಯನ್ನೂ ಸಂತೋಷದಿಂದ ಕೊಟ್ಟನು.

೫೪. ಕುಂಭಕರ್ಣನು ದೇವೇಂದ್ರನ ಸ್ಥಾನವನ್ನು ಅಪೇಕ್ಷಿಸುತ್ತಿದ್ದನು. ವರವನ್ನು ಕೇಳುವಾಗ ಸರಸ್ವತಿಯಿಂದ ಬುದ್ಧಿಗೆಟ್ಟವನಾದನು. ಬ್ರಹ್ಮನು ಅವನನ್ನು ಬೇಕಾದ ವರವನ್ನು ಕೇಳಿಕೋ ಎಂದನು.

೫೫. ಆಗ ಅವನು ಆರುತಿಂಗಳ ಕಾಲದ ನಿದ್ದೆಯನ್ನು ಅಪೇಕ್ಷಿಸಿದನು. ಬ್ರಹ್ಮನು ಆರುತಿಂಗಳಾದಮೇಲೆ ಒಂದುದಿನ ಊಟಮಾಡೆಂದೂ ವರವನ್ನು ಕೊಟ್ಟನು.

ತತೋಂತರ್ಧಾನ ಮಗಮದ್ವಿಧಿಸ್ತೇಪಿ ಗೃಹಂ ಯಯುಃ ।
ಸುಮಾಲೀ ವರಲಬ್ಧಾಂಸ್ತಾನ್ ಜ್ಞಾತ್ವಾ ದೌಹಿತ್ರಸತ್ತಮಾನ್ ‖ ೫೬ ‖

ಪಾತಾಲಾನ್ನಿರ್ಗಯಃ ಪ್ರಾಯಾತ್ಪ್ರಹಸ್ತಾದ್ಯೈರ್ಭುವಂ ಸುಖಂ ।
ಮಂತ್ರಿವಾಕ್ಯಾದ್ದಶಾಸ್ಯೋಪಿ ನಿಷ್ಕಾಸ್ಯ ಧನದಂ ಬಲಾತ್ ‖ ೫೭ ‖

ಲಂಕಾಪುರ್ಯಾಂ ರಾಕ್ಷಸೈಸ್ತು ಲಂಕಾರಾಜ್ಯಂ ಚಕಾರ ಸಃ ।
ಧನದಃ ಪಿತರಂ ಪೃಷ್ಟ್ವಾ ತ್ಯಕ್ತ್ವಾ ಲಂಕಾಂ ಮಹಾಯಶಾಃ ‖ ೫೮ ‖

ಗತ್ವಾ ಕೈಲಾಸಶಿಖರಂ ತಪಸಾ ತೋಷಯಚ್ಛಿವಂ ।
ತೇನ ಸಖ್ಯಮನುಪ್ರಾಪ್ಯ ತೇನೈವ ಪರಿನಂದಿತಃ ‖ ೫೯ ‖

ಅಲಂಕಾಂ ನಗರೀಂ ತತ್ರ ನಿರ್ಮಮೇ ವಿಶ್ವಕರ್ಮಣಾ ।
ದಿಕ್ಪಾಲತ್ವಮನುಪ್ರಾಪ್ಯ ಶಿವಸ್ಯ ವರದಾನತಃ ‖ ೬೦ ‖

---

೫೬. ಅನಂತರ ಬ್ರಹ್ಮನು ಅಂತರ್ಧಾನನಾದನು. ಅವರುಗಳೂ ಮನೆಗೆ ಬಂದರು. ಸುಮಾಲಿಗೆ ತನ್ನ ಮಗಳ ಮಕ್ಕಳು ವರವನ್ನು ಹೊಂದಿರುವುದು ತಿಳಿಯಬಂದಿತು. ಒಡನೆಯೇ ಪ್ರಹಸ್ತಾದಿಗಳೊಡನೆ ಭೂಲೋಕಕ್ಕೆ ಬಂದನು.

೫೭-೫೮. ಪ್ರಹಸ್ತನೆಂಬ ಮಂತ್ರಿಯವಾಕ್ಯದಿಂದ ಕುಬೇರನನ್ನು ಲಂಕೆಯಿಂದ ಬಲಾತ್ಕಾರವಾಗಿ ಓಡಿಸಿದನು. ಮತ್ತು ರಾಕ್ಷಸರೊಡನೆ ಆ ಲಂಕೆಯಲ್ಲಿಯೇ ರಾಜ್ಯಭಾರವನ್ನು ಮಾಡಿದನು. ಧನಧನು ಲಂಕೆಯನ್ನು ಬಿಟ್ಟು ಕೊಟ್ಟು ತಂದೆಯ ಬಳಿಗೆ ಹೋದನು.

೫೯. ಆ ತಂದೆಯಮಾತಿನಂತೆ ಕೈಲಾಸಪರ್ವತಕ್ಕೆ ಹೋಗಿ ತಪಸ್ಸುಮಾಡಿ ಶಿವನನ್ನು ಸಂತೋಷಪಡಿಸಿದನು. ಅವನೊಡನೆಯೇ ಸ್ನೇಹವನ್ನು ಬೆಳಸಿ ಆನಂದದಿಂದಿದ್ದನು.

೬೦. ಆ ಶಿವನ ವರದಾನದಿಂದ ವಿಶ್ವಕರ್ಮನಿಂದ ಅಲಕೆಯೆಂಬ ನಗರವನ್ನು ಕಲ್ಪಿಸಿಕೊಂಡು ದಿಕ್ಪಾಲತ್ವವನ್ನು ಹೊಂದಿದನು.

ರಾವಣೋ ವಿದ್ಯುಜ್ಜಿಹ್ವಾಯ ದದೌ ಶೂರ್ಪಣಖಾಂ ತದಾ ।
ಪಾರಿಬರ್ಹಂ ದದೌ ದಸ್ಮೈ ದಂಡಕಾರಣ್ಯಮುತ್ತಮಂ ॥ ೬೧ ॥

ಮಾತೃಸ್ವಸ್ರೂದ್ಭವಾನ್ ಬಂಧೂನ್ ತ್ರಿಶಿರಃ ಖರದೂಷಣಾನ್ ।
ಸಾಹಾಯ್ಯಾರ್ಥಂ ದದೌ ತಸ್ಯೈ ತತ್ಕಾಂತೇ ತು ಮೃತೇ ಚಿರಾತ್ ॥ ೬೨ ॥

ಕುಂಭೀನಸೀಂ ದದೌ ಹರ್ಷಾನ್ಮಧುದೈತ್ಯಾಯ ರಾವಣಃ ।
ದದೌ ಮಧುವನಂ ತಸ್ಯೈ ಪಾರಿಬರ್ಹಮನುತ್ತಮಂ ॥ ೬೩ ॥

ಖಡ್ಗಜಿಹ್ವಾಯ ತಾಂ ಕ್ರೌಂಚೀಂ ದದೌ ಪ್ರೀತ್ಯಾ ದಶಾನನಃ ।
ಪರಲಂಕಾಂ ಪಾರಿಬರ್ಹಂ ದದೌ ತಸ್ಯೈ ಮನೋಹರಮಂ ॥ ೬೪ ॥

---

೬೧. ರಾವಣನು ತಂಗಿಯಾದ ಶೂರ್ಪಣಖಿಯನ್ನು ವಿದ್ಯುಜ್ಜಿಹ್ವನಿಗೆ ಮದುವೆಮಾಡಿಕೊಟ್ಟನು. ಆಗ ಆ ಶೂರ್ಪಣಖಿಗೆ ದಂಡಕಾರಣ್ಯವನ್ನು ಬಳುವಳಿಯಾಗಿ ಕೊಟ್ಟನು. ಕೆಲವು ಕಾಲದಮೇಲೆ ಆ ವಿದ್ಯುಜ್ಜಿಹ್ವನು ಸತ್ತು ಹೋದನು.

೬೨. ಅನಂತರ ತನ್ನ ಚಿಕ್ಕಮ್ಮನ ಮಕ್ಕಳಾದ ತ್ರಿಶರ ಖರ ದೂಷಣ ಎಂಬ ಸಹೋದರರನ್ನು ಆ ಶೂರ್ಪಣಖಿಯ ಸಹಾಯಕ್ಕೆ ಕೊಟ್ಟನು.

೬೩. ರಾವಣನು ಕುಂಭೀನಸಿ ಎಂಬುವಳನ್ನು ಮಧುವೆಂಬ ದೈತ್ಯನಿಗೆ ಕೊಟ್ಟು ಸಂತೋಷದಿಂದ ಮದುವೆಮಾಡಿದನು. ಆ ಕುಂಭೀನಸಿಗೆ ಮಧು ವನವನ್ನು ಬಳುವಳಿಯಾಗಿ ಕೊಟ್ಟನು.

೬೪. ಕ್ರೌಂಚಿ ಎಂಬುವಳನ್ನು ಖಡ್ಗಜಿಹ್ವನೆಂಬುವನಿಗೆ ಕೊಟ್ಟನು. ಮನೋಹರವಾದ ಪರಲಂಕೆ ಎಂಬ ಪಟ್ಟಣವನ್ನು ಅವಳಿಗೆ ಬಳುವಳಿಯನ್ನಾಗಿ ಕೊಟ್ಟನು.

ವೈರೋಚನಸ್ಯ ದೌಹಿತ್ರೀಂ ವೃತ್ರಜ್ವಾಲೇತಿ ವಿಶ್ರುತಾಂ ।
ಸ್ವಯಂ ದತ್ತಾಂ ಮುದೋವಾಹ ಕುಂಭಕರ್ಣಾಯ ರಾವಣಃ ॥ ೬೫ ॥

ಗಂಧರ್ವರಾಜಸ್ಯ ಸುತಾಂ ಶೈಲೂಷಸ್ಯ ಮಹಾತ್ಮನಃ ।
ವಿಭೀಷಣಸ್ಯ ಭಾರ್ಯಾರ್ಥೇ ಸರಮಾಂ ಸ ಮುದಾವಹತ್ ॥ ೬೬ ॥

ತತೋ ಮಂಡೋದರೀ ಪುತ್ರಂ ಮೇಘನಾದಮಜೀಜನತ್ ।
ಜಾತಮಾತ್ರಸ್ತು ಯೋ ನಾದಂ ಮೇಘವತ್ಪ್ರಚಕಾರ ಹ ॥ ೬೭ ॥

ತತಸ್ಸರ್ವೇಽಬ್ರುವನ್ ಮೇಘನಾದೋಽಯಮಿತಿ ವೈ ಜನಾಃ ।
ಗುಹಾಯಾಂ ಕುಂಭಕರ್ಣೋಽಪಿ ನಿದ್ರಾವ್ಯಾಪ್ತೋಽವಿನಿದ್ರಿತಃ ॥ ೬೮ ॥

ತತಸ್ಸ ರಾವಣಶ್ಚಾಪಿ ದೇವಗಂಧರ್ವ ಕಿನ್ನರಾನ್ ।
ಹತ್ವಾ ಋಷೀಶ್ವರಾನ್ನಾಗಾನ್ ಸ್ತ್ರಿಯಸ್ತೇಷಾಮುಪಾಹರತ್ ॥ ೬೯ ॥

---

೬೫. ವೈರೋಚನನ ಮಗಳ ಮಗಳಾದ ವೃತ್ರಜ್ವಾಲೆ ಎಂಬುವಳನ್ನು ಅವರು ತಾವಾಗಿಯೇ ಮದುವೆಮಾಡಿಕೊಳ್ಳಿ ಎಂದು ಕೇಳಿದುದರಿಂದ ಕುಂಭಕರ್ಣನಿಗೆ ಆಕೆಯನ್ನು ಮದುವೆ ಮಾಡಿದನು.

೬೬-೬೮. ಶೈಲೂಷನೆಂಬ ಗಂಧರ್ವರಾಜನ ಮಗಳಾದ ಸರಮೆಯನ್ನು ವಿಭೀಷಣನಿಗೆ ಮದುವೆಮಾಡಿಕೊಂಡನು. ಮಂಡೋದರಿಗೆ ಮೇಘನಾದನೆಂಬ ಒಬ್ಬ ಮಗನು ಹುಟ್ಟಿದನು. ಅವನು ಹುಟ್ಟಿದ ಒಡನೆಯೇ ಮೇಘದಂತೆ ನಾದವನ್ನು ಮಾಡಿದುದರಿಂದ ಅವನಿಗೆ ಆ ಹೆಸರನ್ನು ಇಟ್ಟರು. ಕುಂಭಕರ್ಣನಿಗೆ ನಿದ್ರೆಯೇ ಹೆಚ್ಚಾದುದರಿಂದ ಅವನು ಒಂದು ಗುಹೆಯಲ್ಲಿ ಮಲಗಿ ನಿದ್ರಿಸಿದನು.

೬೯. ರಾವಣನು ದೇವತೆಗಳು, ಗಂಧರ್ವರು, ಕಿನ್ನರರು, ಋಷಿಗಳು, ನಾಗರು ಇವರನ್ನು ಜಯಿಸಿ ಅವರ ಉತ್ತಮರಾದ ಸ್ತ್ರೀರತ್ನಗಳನ್ನು ಅಪಹರಿಸಿ ಕೊಂಡು ಬಂದನು.

ಧನದೋಽಪಿ ಚ ತಚ್ಛ್ರುತ್ವಾ ರಾವಣಸ್ಯಾಕ್ರಮಂ ತದಾ ।
ಅಧರ್ಮಂ ಮಾ ಕುರುಷ್ವೇತಿ ದೂತವಾಕ್ಯೈರ್ನ್ಯವಾರಯತ್ ॥ ೭೦ ॥

ತತಃ ಕ್ರುದ್ಧೋ ದಶಗ್ರೀವೋ ಜಗಾಮ ಧನದಾಲಯಂ ।
ವಿನಿರ್ಜಿತ್ಯ ಧನಾಧ್ಯಕ್ಷಂ ಜಹಾರ ತಸ್ಯ ಪುಷ್ಪಕಂ ॥ ೭೧ ॥

ಅಲಕಾಯಾಂ ಯದಾಸೀತ್ಸ ಸೇನಯಾ ರಾವಣಸ್ತದಾ ।
ನಿಶಾಯಾಮೇಕದಾ ಭ್ರಾತುಃ ಕುಬೇರಸ್ಯ ಸುತೇನ ಹಿ ॥ ೭೨ ॥

ಪ್ರಾರ್ಥಿತಾ ಸಾ ಪುರಾ ರಂಭಾ ಚಕಾರ ನಿಯತಂ ದಿನಂ ।
ಅಜ್ಞಾತವೃತ್ತಾ ವೇಗೇನ ಯಯೌ ಖಾನ್ನೂಪುರಸ್ವನಾ ॥ ೭೩ ॥

ರಾವಣೋಽಪಿ ಚ ತಾಂ ದೃಷ್ಟ್ವಾ ಬಲಾದೇವ ಪ್ರಭುಕ್ತವಾನ್ ।
ಚಿರಾನ್ಮುಕ್ತಾಥ ವೃತ್ತಂ ಸಾ ಕೌಬೇರಂ ಸಂನ್ಯವೇದಯತ್ ॥ ೭೪ ॥

---

೭೦. ಕುಬೇರನು ರಾವಣನ ಈ ಅಕ್ರಮವನ್ನು ಕೇಳಿ ತನ್ನ ಸಂಬಂಧಿಯಾದುದರಿಂದ ಅಧರ್ಮವನ್ನು ಮಾಡಬೇಡವೆಂದು ದೂತರ ಕೈಯ್ಯಲ್ಲಿ ಹೇಳಿ ಕಳುಹಿಸಿದನು.

೭೧. ಇದರಿಂದ ರಾವಣನಿಗೆ ಕೋಪಬಂದಿತು. ಕುಬೇರನ ಪಟ್ಟಣವಾದ ಅಲಕೆಗೆ ಮುತ್ತಿಗೆ ಹಾಕಿ ಅವನನ್ನು ಜಯಿಸಿ ಅವನ ಪುಷ್ಪಕವಿಮಾನವನ್ನು ಕಸಿದುಕೊಂಡು ಬಂದನು.

೭೨–೭೩. ಕುಬೇರನ ಮಗನಾದ ನಳಕೂಬರನು ರಂಭೆಯನ್ನು ಕ್ರೀಡಾರ್ಥವಾಗಿ ಪ್ರಾರ್ಥಿಸಲು ಆಕೆಯು ಅವನಿಗೆ ಒಂದು ನಿಯತವಾದ ದಿನವನ್ನು ಗೊತ್ತು ಮಾಡಿದ್ದಳು. ರಾವಣನು ಅಲಕೆಯನ್ನು ಮುತ್ತಿಗೆ ಹಾಕಿದ್ದಾಗ ಈ ಶತ್ರು ಮುತ್ತಿಗೆಯು ಆಕೆಗೆ ಗೊತ್ತಿರಲಿಲ್ಲವಾದುದರಿಂದ ಆಕೆಯು ನಿಯತದಿನದಲ್ಲಿ ಅಂತರಿಕ್ಷದಿಂದ ಹಾರಿಬರುತ್ತಿರಲು ಕಾಲುಬಳೆಗಳು ಸದ್ದಾದುವು.

೭೪. ಆ ಸದ್ದನ್ನು ರಾವಣನು ಕೇಳಿ ಆಕೆಯನ್ನು ಹಿಡಿದುಕೊಂಡು ಬಲಾತ್ಕಾರದಿಂದ ರಮಿಸಿದನು. ಬಹಳ ಹೊತ್ತಿನಮೇಲೆ ಆತನು ಬಿಟ್ಟು ಬಿಡಲು ಆ ರಂಭೆಯು ನಳಕೂಬರನಿಗೆ ನಡೆದ ವೃತ್ತಾಂತವನ್ನು ತಿಳಿಸಿದಳು.

ಕ್ರುದ್ಧಸ್ಸೋಽಪಿ ದದೌ ಶಾಪಂ ರಾವಣಾಯ ಮಹಾತ್ಮನೇ ।
ಅದ್ಯಾರಭ್ಯ ದಶಾಸ್ಯಸ್ತು ವಿರಕ್ತಾಂ ಸ್ತ್ರಿಯಮುತ್ತಮಾಂ ॥ ೭೫ ॥

ಹಠಾದ್ಭೋಕ್ಷ್ಯತಿ ಚೇತ್ತರ್ಹಿ ಕ್ಷಣಮಾತ್ರಾನ್ಮರಿಷ್ಯತಿ ।
ಇತಿ ಶಾಪಂ ರಾವಣೋಽಪಿ ಶುಶ್ರಾವ ಚರವಾಕ್ಯತಃ ॥ ೭೬ ॥

ತದಾರಭ್ಯ ಸ್ತ್ರಿಯಂ ಕಾಮಮನಿಚ್ಛಂತೀಂ ನ ಧರ್ಷಯತ್ ।
ತತೋ ಯಮಂ ಚ ವರುಣಂ ನಿರ್ಜಿತ್ಯ ಸಮರೇಽಸುರಃ ॥ ೭೭ ॥

ಸ್ವರ್ಗಲೋಕಮಗಾತ್ತೂರ್ಣಂ ದೇವರಾಜಜಿಘಾಂಸಯಾ ।
ತತೋ ರಾವಣಮಭ್ಯೇತ್ಯ ಬಬಂಧ ತ್ರಿದಶೇಶ್ವರಃ ॥ ೭೮ ॥

ತಚ್ಛ್ರುತ್ವಾ ಸಹಸಾಗತ್ಯ ಮೇಘನಾದಃ ಪ್ರತಾಪವಾನ್ ।
ಕೃತ್ವಾ ಯುದ್ಧಂ ಮಹಾಘೋರಂ ಜಿತ್ವಾ ತ್ರಿದಶಪುಂಗವಂ ॥ ೭೯ ॥

೭೫–೭೬. ಆ ನಳಕೂಬರನಿಗೆ ಕೋಪಬರಲು ರಾವಣನನ್ನು ಕುರಿತು ದಶಾನನನು ಇಂದಿನಿಂದ ಮೊದಲುಗೊಂಡು ವಿರಕ್ತಳಾದ ಹೆಂಗಸನ್ನು ಹಠದಿಂದ ಅನುಭವಿಸಿದರೆ ಕ್ಷಣಮಾತ್ರದಲ್ಲಿಯೇ ಮೃತನಾಗಲಿ ಎಂದು ಶಾಪವನ್ನು ಕೊಟ್ಟನು. ಈರೀತಿ ಶಾಪಕೊಟ್ಟಿರುವುದನ್ನು ವನೇಚರರ ಮುಖದಿಂದ ರಾವಣನು ಕೇಳಿದನು.

೭೭ ಅದು ಮೊದಲುಗೊಂಡು ರಾವಣನು ತನ್ನನ್ನು ಇಚ್ಛಿಸದಿರುವ ಹೆಂಗಸರನ್ನು ಬಲಾತ್ಕರಿಸುತ್ತಿರಲಿಲ್ಲ. ಅನಂತರ ರಾವಣನು ಯಮನನ್ನೂ ವರುಣನನ್ನೂ ಜಯಿಸಿದನು.

೭೮. ಅನಂತರ ಸ್ವರ್ಗಲೋಕಕ್ಕೆ ದೇವರಾಜನಾದ ಇಂದ್ರನನ್ನು ಜಯಿಸಬೇಕೆಂದು ಹೋದನು. ಆಗ ಇಂದ್ರನು ರಾವಣನಮೇಲೆ ಯುದ್ಧಮಾಡಿ ಅವನನ್ನು ಸೆರೆಹಾಕಿದನು.

೭೯. ರಾವಣನ ಮಗನಾದ ಮೇಘನಾದನು ಆ ವಿಷಯವನ್ನು ಕೇಳಿದನು. ಒಡನೆಯೇ ಬಂದು ಇಂದ್ರನೊಡನೆ ಘೋರವಾದ ಯುದ್ಧವನ್ನು ಮಾಡಿ ಆ ಇಂದ್ರನನ್ನು ಜಯಿಸಿದನು.

ಇಂದ್ರಂ ಧೃತ್ವಾ ದೃಢಂ ಬಧ್ವಾ ಮೇಘನಾದೋ ಮಹಾಬಲಃ ।
ಮೋಚಯಿತ್ವಾ ಸ್ವಪಿತರಂ ಗೃಹೀತ್ವೇಂದ್ರಂ ಯಯೌ ಪುರೀಂ ॥ ೮೦ ॥

ಬ್ರಹ್ಮಾ ತಂ ಮೋಚಯಾಮಾಸ ದೇವೇಂದ್ರಂ ಮೇಘನಾದತಃ ।
ದತ್ವಾ ವರಾ್ ರಾಕ್ಷಸಾಯ ಬ್ರಹ್ಮಾ ಸ್ವಭವನಂ ಯಯೌ ॥ ೮೧ ॥

ಇಂದ್ರಜಿನ್ನಾಮ ತಸ್ಯಾಸೀತ್ತದಾರಭ್ಯ ರಘೂತ್ತಮ ।
ರಾವಣಾದಪಿ ಯಶ್ಚಾಸೀದ್ಬಲಿಷ್ಠಸ್ಸಮರಪ್ರಿಯಃ ॥ ೮೨ ॥

ಮೇಘನಾದಾದಯಶ್ಚೇತಿ ತಸ್ಮಾತ್ಪ್ರೋಕ್ತಂ ತವಾಗ್ರತಃ ।
ಏತೈರ್ಮುನೀಶ್ವರೈಃ ಪೂರ್ವಂ ತನ್ನಿಮಿತ್ತಂ ಮಯೇರಿತಂ ॥ ೮೩ ॥

---

೮೦. ಮತ್ತು ಆ ಇಂದ್ರನನ್ನು ಹಿಡಿದು ಹೆಗ್ಗಟ್ಟುಮುರಿಗಟ್ಟಿ ತನ್ನ ತಂದೆಯುನ್ನು ಬಿಡಿಸಿಕೊಂಡು ಇಂದ್ರನನ್ನೂ ಹಿಡಿದುಕೊಂಡು ತನ್ನ ಪಟ್ಟಣವಾದ ಲಂಕೆಗೆ ಹೋದನು.

೮೧. ಅನಂತರ ಬ್ರಹ್ಮನು ಬಂದು ಮೇಘನಾದನಿಗೂ ರಾವಣನಿಗೂ ಸಮಾಧಾನವನ್ನು ಹೇಳಿ ಇಂದ್ರನನ್ನು ಬಿಡಿಸಿದನು. ಮತ್ತು ಆ ಮೇಘನಾದನಿಗೆ ಅನೇಕವರಗಳನ್ನು ಕೊಟ್ಟು ತನ್ನ ಸ್ಥಳಕ್ಕೆ ಹೊರಟು ಹೋದನು.

೮೨. ಅದು ಮೊದಲುಗೊಂಡು ಅವನಿಗೆ ಇಂದ್ರಜಿತ್ತೆಂದು ಹೆಸರಾಯಿತು. ಅವನು ರಾವಣನಿಗಿಂತಲೂ ಬಲಿಷ್ಠನಾಗಿಯೂ ಯುದ್ಧಪ್ರಿಯನಾಗಿಯೂ ಇದ್ದನು.

೮೩. ಆದುದರಿಂದಲೇ ಮೇಘನಾದನೇ ಮುಂತಾದವರೆಂದು ನಿನ್ನೆದುರಿಗೆ ಆ ಋಷಿಗಳು ಹೇಳಿದುದು. ಆದುದರಿಂದಲೇ ನಾನೂ ಹೇಳಿದೆನು.

ರಾವಣೋ ವಿಜಯೀ ಲೋಕಾನ್ ಸರ್ವಾನ್ ಜಿತ್ವಾ ಕ್ರಮೇಣ ತು ।
ಜಿತ್ವಾ ವಹ್ನಿಂ ನಿರ್‌ಋತಿಂ ಚ ವಾಯುಮೀಶಂ ಯಯೌ ಮುದಾ ॥೮೪॥

ಕೈಲಾಸಂ ತೋಲಯಾಮಾಸ ಬಾಹುಭಿಃ ಪರಿಘೋಪಮೈಃ ।
ತದಾ ಭೀತಾ ಸ್ವಯಂ ದೇವೀ ದೋರ್ಭ್ಯಾಂ ಸಾ ಪರಿಷಸ್ವಜೇ ॥ ೮೫ ॥

ಶಿವೋಪಿ ವಾಮಪಾದಾಂಗುಷ್ಠೇನ ಕೈಲಾಸಮೂರ್ಧನಿ ।
ಭಾರಂ ದತ್ವಾ ಗಿರಿಂ ಖರ್ವಂ ಚಕಾರಾಥ ಶನೈಶ್ಶನೈಃ ॥ ೮೬ ॥

ತದಾ ತದ್ಗಿರಿಸಂಭೂತವಲ್ಲಿಸಂಧಿಷು ದೋರ್ಲತಾಃ ।
ವಿಷಜ್ಜಾ ರಾವಣಸ್ಯಾಪಿ ತಾ ಆಸನ್ ಮರ್ದಿತಾಃ ಕ್ಷಣಾತ್ ॥ ೮೭ ॥

---

೮೪. ರಾವಣನು ಕ್ರಮವಾಗಿ ಹೀಗೆ ಜಯಿಸಿದವನಾಗಿ ಇನ್ನೂ ಜಯಿಸುತ್ತಾ ಎಲ್ಲಾ ಲೋಕಗಳನ್ನೂ ಕ್ರಮವಾಗಿ ಜಯಿಸಿದನು. ವಹ್ನಿಯನ್ನೂ ನಿಋತಿಯನ್ನೂ ಜಯಿಸಿ, ಅನಂತರ ವಾಯುವನ್ನೂ ಜಯಿಸಿ, ಈಶಾನನನ್ನೂ ಜಯಿಸಲು ಕೈಲಾಸಕ್ಕೆ ಹೋದನು.

೮೫. ಅಲ್ಲಿ ಪರಿಘದಂತಿರುವ ತೋಳುಗಳಿಂದ ಆ ಕೈಲಾಸವನ್ನು ಎತ್ತಿ ಅಲ್ಲಾಡಿಸಿದನು. ಆ ಬೆಟ್ಟವು ಅಲ್ಲಾಡಿದುದರಿಂದ ಪಾರ್ವತಿಯು ಹೆದರಿ ಬೇಗನೆ ಈಶಾನನನ್ನು ತೋಳುಗಳಿಂದ ತಬ್ಬಿಕೊಂಡಳು.

೮೬. ಇದನ್ನು ಶಿವನು ತಿಳಿದು ತನ್ನ ಎಡಗಾಲಿನ ಹೆಬ್ಬೆಟ್ಟಿನಿಂದ ಆ ಕೈಲಾಸವನ್ನು ಅಮುಕುತ್ತ ಭಾರವನ್ನುಂಟುಮಾಡುತ್ತ ಮೆಲ್ಲಮೆಲ್ಲಗೆ ಗಿಡ್ಡಾಗುವಂತೆ ಮಾಡಿದನು.

೮೭. ಆಗ ಬೆಟ್ಟದ ಕೆಳಗೆ ಅದನ್ನು ಎತ್ತಲು ಹಿಡಿದಿದ್ದ ಆ ರಾವಣನ ಬಾಹುಗಳು ಆ ಪರ್ವತದ ಕೆಳಗೆ ಸಿಕ್ಕಿಕೊಂಡು ಚೆನ್ನಾಗಿ ಜಜ್ಜಿಹೋದುವು.

ಸ ತೇನಾಕ್ರಂದಯಾಮಾಸ ಸ್ತಂಭೆ ಸಂಬದ್ಧ ಚೋರವತ್ ।
ತದಾ ನಂದೀಶ್ವರೇಣಾಪಿ ಶಪ್ತೋಽಯಂ ರಾವಣೇಶ್ವರಃ ॥ ೮೮ ॥

ಚಂಚಲಂ ಕರ್ಮ ಏತತ್ತೇ ಕಪಿತುಲ್ಯಮತೋಽಸುರ ।
ವಾನರೈರ್ಮಾನುಷ್ಯೈಶ್ಚೈವ ನಾಶಂ ಗಚ್ಛೇತಿ ಕೋಪಿನಾ ॥ ೮೯ ॥

ತತಃ ಕಾಲಾಂತರೇಣಾಯಂ ಶಂಭುನೈವ ವಿಮೋಚಿತಃ ।
ಶಪ್ತೋಽಪ್ಯಗಣಯನ್ ವಾಕ್ಯಂ ಯಯೌ ಹೈಹಯಪತ್ತನಂ ॥ ೯೦ ॥

ಬಹಿರ್ಗತಂ ನೃಪಂ ಶ್ರುತ್ವಾ ಸಹಸ್ರಾರ್ಜುನನಾಮಕಂ ।
ಮಧ್ಯಾಹ್ನೇ ರಾವಣಶ್ಚಕ್ರೇ ರೇವಾಯಾಂ ಶಿವಪೂಜನಂ ॥ ೯೧ ॥

---

೮೮. ಇದರಿಂದ ಅವನ ಕೈಗಳು ಕೆಳಗೆ ಸಿಕ್ಕಿಕೊಂಡು ಕಂಭಕ್ಕೆ ಕಟ್ಟಿದ ಕಳ್ಳನಂತೆ ಅಳುತ್ತ ನಿಂತನು. ಆಗ ನಂದೀಶ್ವರನೂ ಕೂಡ ರಾವಣನಿಗೆ ಶಾಪವನ್ನು ಕೊಟ್ಟನು.

೮೯. ಎಲೈ ರಾವಣನೇ! ನಿನ್ನ ಈ ಕೆಲಸವು ಕಪಿಯು ಮಾಡುವಂತಹ ಚಪಲ ಕೆಲಸವು. ಆದುದರಿಂದ ಕೋಪಗೊಂಡ ಮನುಷ್ಯರಿಂದಾಗಲೀ, ಕಪಿಗಳಿಂದಲಾಗಲೀ ನಾಶವನ್ನು ಹೊಂದು.

೯೦. ಹೀಗಿರಲು ಕೆಲವು ಕಾಲದ ಮೇಲೆ ಆ ಶಂಭುವೇ ಅವನನ್ನು ಬಿಡಿಸಿದನು. ಅನಂತರ ಈ ನಂದಿಯ ಶಾಪವನ್ನೂ ಲೆಕ್ಕಿಸದೆ ಹೈಹೇಯನ ಮೇಲೆ ಯುದ್ಧಮಾಡಲು ಅವನ ಪಟ್ಟಣಕ್ಕೆ ಹೋದನು.

೯೧. ಆಗ ಆ ಸಹಸ್ರಾರ್ಜುನನು ಇಲ್ಲದಿರಲು ಅದನ್ನು ತಿಳಿದು ಮಧ್ಯಾಹ್ನದ ಸಮಯದಲ್ಲಿ ಶಿವಪೂಜೆಯನ್ನು ಮಾಡಲು ರೇವಾನದಿಗೆ ಹೋಗಿ ಪೂಜೆಯನ್ನು ಮಾಡುತ್ತಿದ್ದನು.

ಅಥಸ್ತಸ್ಯಾ ನರ್ಮದಾಯಾ ಭುಜಪಾಶೈಶ್ಚ ಸೇತುವತ್ ।
ಸ್ತಂಭಯಾಮಾಸ ನೀರೌಘಂ ಜಲಕ್ರೀಡಾಂ ಗತೋಽರ್ಜುನಃ ॥ ೯೨ ॥

ವೇಷ್ಟಿತೋಽಯುತನಾರೀಭಿಸ್ತತ್ತೋಽಯಂ ರಾವಣಂ ತದಾ ।
ಪ್ಲಾವಯಾಮಾಸ ಧ್ಯಾನಸ್ಥಂ ಜ್ಞಾತಸ್ತತ್ಕರ್ಮಣಾರ್ಜುನಃ ॥ ೯೩ ॥

ಮುಕ್ತ್ವಾ ಧ್ಯಾನಾದಿಕಂ ಸರ್ವಂ ಯುದ್ಧಂ ಚಕ್ರೇಽರ್ಜುನೇನ ಸಃ ।
ತೇನ ಬದ್ಧೋ ದಶಗ್ರೀವಃ ಕಂಠೇ ರಂತುಂ ಸುತಾಯ ತಂ ॥ ೯೪ ॥

---

೯೨. ಈ ಕಾರ್ತವಿರ್ಯ್ಯಾರ್ಜುನನು ಆ ರೇವಾನದಿಯಲ್ಲಿ ಹೆಂಗಸರೊಡನೆ ಜಲಕ್ರೀಡೆಯಾಡಲು ಹೋಗಿ ತನ್ನ ಸಾವಿರ ತೋಳುಗಳನ್ನೂ ಅಣೆಕಟ್ಟೆಯಂತೆ ಕಟ್ಟಿ ಆ ನರ್ಮದೆಯ ಪ್ರವಾಹವನ್ನೇ ತಡೆದನು. ತಡೆದು ಆ ನಿಂತನೀರಿನಲ್ಲಿ ಹತ್ತುಸಾವಿರ ಜನ ಹೆಂಡಿರೊಡನೆ ಜಲಕ್ರೀಡೆಯಾಡುತ್ತಿದ್ದನು.

೯೩. ಈ ನೀರನ್ನು ಕಾರ್ತವೀರ್ಯ್ಯಾರ್ಜುನನು ಕೆಳಗಡೆಯಲ್ಲಿ ತಡೆದನು. ರಾವಣನು ಮೇಲುಗಡೆಯಲ್ಲಿ ಶಿವಪೂಜೆಯನ್ನು ಮಾಡುತ್ತಿದ್ದನು. ನಿಂತನೀರು ಹಿಂದಕ್ಕೆ ತಳ್ಳುತ್ತ ತಳ್ಳುತ್ತ ರಾವಣನು ಪೂಜೆಮಾಡುತ್ತಿದ್ದ ಜಾಗವನ್ನೂ ಆವರಿಸಿ ಕೊಂಡು ಅವನ ಪೂಜೋಪಕರಣಗಳನ್ನು ಕೊಚ್ಚಿಸಿ ಬಿಟ್ಟಿತು. ಇದರಿಂದ ಅವನ ಧ್ಯಾನಕ್ಕೆ ಭಂಗವು ಬಂದಿತು.

೯೪. ಈ ಕೆಲಸವನ್ನು ಮಾಡಿದವನು ಕಾರ್ತವೀರ್ಯನು ಎಂದು ರಾವಣನಿಗೆ ತಿಳಿಯಿತು. ಆಗ ಒಡನೆಯೇ ಧ್ಯಾನವನ್ನು ಬಿಟ್ಟು ಬಂದು ಆ ಅರ್ಜುನನೊಡನೆ ಯುದ್ಧಕ್ಕೆ ಮೊದಲು ಮಾಡಿದನು. ಕಾರ್ತವೀರ್ಯನು ಆ ರಾವಣನನ್ನು ಸೋಲಿಸಿ ಕತ್ತಿಗೆ ಹಗ್ಗವನ್ನು ಹಾಕಿ ಹಿಡಿದುಕೊಂಡು ಮಗನಿಗೆ ಆಟಕ್ಕೋಸ್ಕರ ಕೊಟ್ಟನು.

ದದೌ ದಶಾನನಂ ಪ್ರೀತ್ಯಾ ಕಾಷ್ಠನಿರ್ಮಿತಹಸ್ತಿವತ್ ।
ಕಿಯತ್ಕಾಲಾಂತರೇಣೈವ ಪುಲಸ್ತ್ಯೇನ ಸ ಮೋಚಿತಃ ॥ ೯೫ ॥

ತತೋಽತಿ ಬಲಮಾಸಾದ್ಯ ಜಿಘಾಂಸುರ್ಹರಿಪುಂಗವಂ ।
ಸಾಗರೇ ಧ್ಯಾನಮಾಸೀನಂ ಪಶ್ಚಾದ್ಭಾಗೇ ಶನೈರ್ಯಯೌ ॥ ೯೬ ॥

ಧೃತಸ್ತೇನೈವ ಕಕ್ಷೇಣ ವಾಲಿನಾ ದಶಕಂಧರಃ ।
ಭ್ರಾಮಯಿತ್ವಾ ತು ಚತುರಸ್ಸಮುದ್ರಾನ್ ರಾವಣಂ ಹರಿಃ ॥ ೯೭ ॥

ಕಿಷ್ಕಿಂಧಾಂ ಸ್ವಾಂ ಯಯೌ ವೇಗಾದಗ್ರೇ ದೃಷ್ಟ್ವಾಂಗದಂ ಶಿಶುಂ ।
ಪ್ರೀತ್ಯಾ ತಂ ಚುಂಬನಂ ದಾತುಂ ದೋರ್ಭ್ಯಾಂ ಕಟ್ಯಾಂ ನ್ಯವೇಶಯತ್ ॥

---

೯೫. ಆ ಮಗುವು ಇವನನ್ನು ಮರದಿಂದ ಮಾಡಿದ ಆನೆಯಂತಿಟ್ಟು ಕೊಂಡು ಆಡುತ್ತಿದ್ದಿತು. ಕೆಲವು ದಿನವಾದಮೇಲೆ ಪುಲಸ್ತ್ಯಬ್ರಹ್ಮನು ಈ ಕಾರ್ತವೀರ್ಯನ ಬಳಿಗೆ ಬಂದು ಅವನಿಗೆ ಒಳ್ಳೆಯ ಮಾತುಗಳನ್ನು ಹೇಳಿ ಬಿಡಿಸಿದನು.

೯೬. ಬಹು ಬಲಿಷ್ಠನಾದ ವಾಲಿಯನ್ನು ನಿಗ್ರಹಿಸಬೇಕೆಂದು ಒಂದುಸಾರಿ ರಾವಣನಿಗೆ ತೋರಿಬರಲು ಆ ವಾಲಿಯನ್ನು ಕೊಲ್ಲಬೇಕೆಂದು ಅವನು ಸಾಗರದಲ್ಲಿ ಧ್ಯಾನದಲ್ಲಿದ್ದಾಗ ಹಿಂದುಗಡೆಯಿಂದ ಮೆಲ್ಲಗೆ ಈ ರಾವಣನು ಹೋಗಿ ಕಂಕುಳ ಕೆಳಕ್ಕೆ ಕೈಹಾಕಿ ಹಿಡಿದುಕೊಂಡನು.

೯೭. ಆಗ ಆ ವಾಲಿಯು ಆ ದಶಕಂಧರನನ್ನು ಕಂಕುಳಿನಿಂದಲೇ ಅವುಕಿ ಹಿಡಿದುಕೊಂಡನು. ಹಾಗೆಯೇ ಹಿಡಿದುಕೊಂಡು ನಾಲ್ಕು ಸಮುದ್ರಗಳನ್ನೂ ಸುತ್ತಿಸಿದನು.

೯೮. ಅನಂತರ ತನ್ನ ಪಟ್ಟಣವಾದ ಕಿಷ್ಕಿಂಧೆಗೆ ಹೋದನು. ಆಗ ಎದುರಿಗೆ ಮಗನಾದ ಅಂಗದನು ಬಂದನು. ಅವನನ್ನು ಪ್ರೀತಿಯಿಂದ ಕೈಯ್ಯಿಂದ ಎತ್ತಿಕೊಂಡು ಮುತ್ತಿಕ್ಕಲು ಸೊಂಟದಮೇಲೆ ಕೂರಿಸಿಕೊಂಡನು.

ತದಾ ಬಾಹೋಶ್ಚಂಚಲತ್ವಾತ್ಕಕ್ಷಾತ್ಸ ಪತಿತೋ ಭುವಿ ।
ತಂ ದೃಷ್ಟ್ವಾ ಸ್ವಜನಾನ್ ಸ್ತ್ರೀಶ್ಚ ದರ್ಶಯಾಮಾಸ ವೈ ಮುದಾ ॥ ೯೯ ॥

ಪ್ರೇಂಖಸ್ಯೋಪರಿ ಪುತ್ರಸ್ಯ ಬಬಂಧಾಧೋಮುಖಂ ಚಿರಂ ।
ಆಸೀತ್ಸೋಂಗದಮೂತ್ರಸ್ಯ ಧಾರಾಧೌತಾನನೋಽಸುರಃ ॥ ೧೦೦ ॥

ಸ್ವಯಮೇವ ತತೋ ವಾಲೀ ಬಹುಕಾಲೇ ಗತೇ ಸತಿ ।
ದದಾವಾಜ್ಞಾಂ ದಶಾಸ್ಯಾಯ ತೇನ ಸಖ್ಯಂ ಚಕಾರ ಸಃ ॥ ೧೦೧ ॥

ರಾವಣಸ್ಸ ಪುನಃ ಸ್ಥಿತ್ವಾ ಪುಷ್ಪಕೇ ವ್ಯಚರತ್ಸುಖಂ ।
ಪಶ್ಯನ್ನಾನಾವಿಧಾನ್ವೀರಾನ್ ಯಯೌ ಪಾತಾಲಮುತ್ತಮಂ ॥ ೧೦೨ ॥

---

೯೯. ಆಗ ಈ ತೋಳುಗಳು ಅಲ್ಲಾಡಿದುದರಿಂದ ಕಂಕುಳು ಸಡಿಲವಾಗಿ ಕಂಕುಳಿನಿಂದ ಆ ರಾವಣನು ಕೆಳಗೆ ಬಿದ್ದನು. ಆಗ ಆ ರಾವಣನನ್ನು ನೋಡಿ ಅವನನ್ನು ತನ್ನ ಜನಗಳಿಗೂ ಹೆಂಗಸರಿಗೂ ಹೀಗಾಯಿತೆಂದು ಹೇಳಿ ಹಾಸ್ಯಮಾಡುತ್ತ ತೋರಿಸಿದನು.

೧೦೦. ಅನಂತರ ಮಗನ ತೊಟ್ಟಿಲಿನ ಮೇಲುಭಾಗದಲ್ಲಿ ಈತನನ್ನು ಆಟಕ್ಕೋಸ್ಕರ ತಲೆಕೆಳಗಾಗಿ ಕಟ್ಟಿದನು. ಇದರಿಂದ ಅಂಗದನು ಮೂತ್ರವನ್ನು ಬಿಡುವಾಗ ಆದು ದಶಾನನನ ಮುಖಕ್ಕೆ ಎರಚುತ್ತ ತೊಳೆಯುತ್ತಿದ್ದಿತು. ಹೀಗೆ ಬಹು ಕಾಲದವರೆಗೂ ಇದ್ದನು.

೧೦೧. ಕೊನೆಗೆ ವಾಲಿಯು ತಾನೇ ಆಜ್ಞೆಯನ್ನು ಮಾಡಿ ಆ ದಶಾನನನನ್ನು ಬಿಡಿಸಲು ಅವನೊಡನೆ ರಾವಣನು ಸ್ನೇಹವನ್ನು ಮಾಡಿಕೊಂಡನು.

೧೦೨. ರಾವಣನು ಮತ್ತೆ ಊರಿನಲ್ಲಿದ್ದುಕೊಂಡು ಪುಷ್ಪಕದಲ್ಲಿ ಸುಖವಾಗಿ ಸಂಚರಿಸುತ್ತಿದ್ದನು. ನಾನಾಬಗೆಯಾದ ವೀರರನ್ನು ನೋಡುತ್ತ ಪಾತಾಳ ಲೋಕಕ್ಕೆ ಹೋದನು.

ತತ್ರ ದೃಷ್ಟ್ವಾ ಪುರಂ ರಮ್ಯಂ ಬಲೇಃ ಕೋಟಿರವಿಪ್ರಭಂ ।
ತತ್ತೇಜೋಹತತೇಜಸ್ತತ್ಪುಷ್ಪಕಂ ನ ಚಚಾಲ ವೈ ॥ ೧೦೩ ॥

ತತಃ ಸ್ವಯಂ ಯಯೌ ತೂಷ್ಣೀಂ ಏಕ ಏವ ದಶಾನನಃ ।
ಪುರಂ ಪ್ರವಿಶ್ಯ ತದ್ದ್ವಾರಿ ದದರ್ಶ ತ್ವಾಂ ಹಿ ವಾಮನಂ ॥ ೧೦೪ ॥

ಕೋಟಿಸೂರ್ಯಪ್ರತೀಕಾಶಂ ಪೀತಕೌಶೇಯವಾಸಸಂ ।
ಚತುರ್ಭುಜಂ ಸಪತ್ನೀಕಂ ದ್ವಾರರಕ್ಷಣತತ್ಪರಂ ॥ ೧೦೫ ॥

ತ್ವಾಂ ಪ್ರಾಹ ಸ ದಶಗ್ರೀವಃ ಕೋತ್ರ ರಾಜಾಸ್ತಿ ಮಾಂ ವದ ।
ತೂಷ್ಣೀಂ ಸ್ಥಿತೋ ವಾಮನಸ್ತ್ವಮರ್ಪಿತಂ ನೋತ್ತರಂ ರಿಪೋಃ ॥ ೧೦೬ ॥

---

೧೦೩. ಅಲ್ಲಿ ಕೋಟಿ ಸೂರ್‍ಯಪ್ರಕಾಶವಾದ ಬಲಿಯ ಪಟ್ಟಣವಿದ್ದಿತು. ಆ ಪಟ್ಟಣದ ತೇಜಸ್ಸಿನಿಂದ ಈ ಪುಷ್ಪಕದ ತೇಜಸ್ಸು ಕಡಿಮೆಯಾಗಿ ಮುಂದಕ್ಕೆ ಅಲ್ಲಾಡಲೇ ಇಲ್ಲ.

೧೦೪. ಅನಂತರ ದಶಾನನನು ಪುಷ್ಪಕದಿಂದಿಳಿದು ಒಬ್ಬನೇ ಕಾಲಿನಿಂದ ನಡೆದುಕೊಂಡು ಹೊರಟನು. ಊರಿನೊಳಕ್ಕೆ ಹೋಗಿ ಆ ಬಲಿಯ ಮನೆಯ ಬಾಗಿಲಿನಲ್ಲಿ ವಾಮನ ರೂಪನಾದ ನಿನ್ನನ್ನು ನೋಡಿದನು.

೧೦೫. ಆ ವಾಮನನು ಕೋಟಿ ಸೂರ್‍ಯರಂತೆ ಪ್ರಕಾಶಮಾನನಾಗಿದ್ದನು. ಬೆಳ್ಳಗಿರುವ ರೇಷ್ಮೇ ಬಟ್ಟೆಯನ್ನು ಹೊದ್ದಿದ್ದನು. ನಾಲ್ಕು ತೋಳುಗಳಿದ್ದುವು. ಜೊತೆಯಲ್ಲಿ ಹೆಂಡತಿಯೂ ಇದ್ದಳು. ಆ ಬಲಿಯ ಮನೆಯ ಬಾಗಿಲನ್ನು ಕಾಯುವುದರಲ್ಲಿ ಆಸಕ್ತನಾಗಿದ್ದನು.

೧೦೬. ಆಗ ದಶಾನನನು ವಾಮನನಾದ ನಿನ್ನನ್ನು ನೋಡಿ ಅಯ್ಯಾ! ಇಲ್ಲಿರುವ ರಾಜನಾರು? ನನಗೆ ಹೇಳು. ಎನ್ನಲು ಆಗ ನೀನು ಸುಮ್ಮನಿರುತ್ತ ಅವನಿಗೆ ಉತ್ತರವನ್ನೇ ಕೊಡಲಿಲ್ಲ.

ತದಾ ತ್ವಾಂ ಬಧಿರಂ ಮತ್ವಾ ಸ ವಿವೇಶ ಬಲೇರ್ಗೃಹಂ ।
ತತ್ರ ದೃಷ್ಟ್ವಾ ಬಲಿಂ ಪತ್ನ್ಯಾ ಸಾರಿಕ್ರೀಡನತತ್ಪರಂ ॥ ೧೦೭ ॥

ತಸ್ಥೌ ತತ್ರ ಕ್ಷಣಂ ತೂಷ್ಣೀಂ ಬಲೇರ್ಲಕ್ಷ್ಮೀಂ ವ್ಯಲೋಕಯತ್ ।
ತಾವದ್ದೂರಂ ಬಲೇರ್ಹಸ್ತಾತ್ಕ್ರೀಡಾಪಾಶೋಪತತ್ ಭುವಿ ॥ ೧೦೮ ॥

ತಮಾನೇತುಂ ರಾವಣಾಯ ಬಲಿರಾಜ್ಞಾಪಯತ್ತದಾ ।
ರಾವಣೋಪಿ ತಮಾನೇತುಂ ಯಯೌ ಪಾಶಾಂತಿಕಂ ಶುಭಂ ॥ ೧೦೯ ॥

ಪ್ರೋಚ್ಚಚಾಲ ಭುವಃ ಪಾಶಂ ಕರೇಣ ನ ಚಚಾಲ ಸಃ ।
ವಿಂಶದ್ದೋರ್ಭಿಃ ಕ್ರಮೇಣಾಸೌ ಯಾವತ್ಪಾಶಮಚಾಲಯತ್ ॥ ೧೧೦ ॥

---

೧೦೭. ಇದರಿಂದ ನೀನು ಕಿವುಡನೆಂದು ತಿಳಿದುಕೊಂಡು ರಾವಣನು ಬಲಿಯ ಮನೆಯ ಒಳಕ್ಕೆ ಹೋದನು. ಒಳಗೆಹೋಗಿ ಬಲಿಯು ಹೆಂಡತಿಯೊಡನೆ ಪಗಡೆಯಾಡುತ್ತಿರುವುದನ್ನು ನೋಡಿದನು.

೧೦೮. ಅಲ್ಲಿ ಕ್ಷಣಕಾಲವಿದ್ದುಕೊಂಡು ಆ ಬಲಿಯ ವೈಭವವನ್ನು ನೋಡುತ್ತಲಿದ್ದನು. ಈತನು ಅಲ್ಲಿ ನೋಡುತ್ತಿರುವಾಗ ಬಲಿಯ ಕೈಯ್ಯಿಂದ ತಾನು ಆಡುತ್ತಿದ್ದ ದಾಳವು ಕೈಗೆ ನಿಲುಕದಷ್ಟು ದೂರದಲ್ಲಿ ಉರುಳಿಹೋಗಿ ನೆಲದಮೇಲೆ ಬಿದ್ದಿತು.

೧೦೯. ಬಲಿಯು ರಾವಣನಿಗೆ ಆ ದಾಳವನ್ನು ತರುವಂತೆ ಆಜ್ಞಾಪಿಸಿದನು. ರಾವಣನು ದಾಳವನ್ನು ತಂದುಕೊಡಲು ಬೇಗನೆ ಆ ದಾಳದ ಬಳಿಗೆ ಹೋದನು.

೧೧೦. ಆ ದಾಳವನ್ನು ತೆಗೆದುಕೊಳ್ಳಲು ಪ್ರಯತ್ನಪಟ್ಟಾಗ ಬೆರಳಿನಿಂದ ಎತ್ತಲು ಅದು ನೆಲದಿಂದಲೇ ಅಲ್ಲಾಡಲಿಲ್ಲ. ಕೈಯ್ಯಿಂದ ಅಲ್ಲಾಡಿಸಲು ಅಲ್ಲಾಡಲೂ ಇಲ್ಲ. ಒಂದು, ಎರಡು, ಮೂರು, ನಾಲ್ಕು ಇದೇ ರೀತಿಯಲ್ಲಿ ಇಪ್ಪತ್ತು ತೋಳುಗಳನ್ನೂ ನೀಡಿ ಹಿಡಿದು ಆ ದಾಳವನ್ನು ಸ್ವಲ್ಪ ಅಲ್ಲಾಡಿಸಿದನು.

ತಾವದಂಗುಲಯಸ್ಸರ್ವಾಃ ಪಾಶಭಾರೇಣ ಪೀಡಿತಾ ।
ನ ನಿಷ್ಕ್ರಮುಃ ಪಾಶತಲಾಚ್ಚೂರ್ಣಿತಾ ರುಧಿರಪ್ಲುತಾಃ ॥ ೧೧೧ ॥

ತದಾ ಚುಕ್ರೋಶ ದೀರ್ಘಂ ಸ ಚಿರಕಾಲಂ ದಶಾನನಃ ।
ತತೋ ವಿಹಸ್ಯ ದಾಸ್ಯಾ ತಂ ಪಾಶಮಾನೀಯ ವೈ ಬಲಿಃ ॥ ೧೧೨ ॥

ಧಿಕ್ ಧಿಕ್ ಕೃತ್ವಾ ರಾವಣಂ ತಂ ಗೃಹಾನ್ನಿಷ್ಕಾಸಯದ್ಬಹಿಃ ।
ತತೋ ಧೃತ್ವಾ ರಾಜಾದೂತೈಸ್ತದುಚ್ಛಿಷ್ಟೈಸ್ತು ಪೋಷಿತಾಃ ॥ ೧೧೩ ॥

ಅಶ್ವಾನಾಂ ಶಕೃತಂ ನೀತ್ವಾ ಪ್ರಾಕ್ಷಿಪತ್ತ್ರ್ಯಹಂ ಬಹಿಃ ।
ಏಕದಾ ದ್ವಾರಪಂ ಗತ್ವಾ ಪ್ರಾರ್ಥಯಾಮಾಸ ತ್ವಾಂ ಮುಹುಃ ॥ ೧೧೪ ॥

---

೧೧೧. ಆ ದಾಳವು ಸ್ವಲ್ಪ ಅಲ್ಲಾಡಿದಾಗ ಇವನ ಕೈಬೆರಳುಗಳು ಅದರ ಕೆಳಗೆ ಸಿಕ್ಕಿಕೊಂಡುವು. ಆದರ ಕೆಳಗಿಂದ ಬರಲೇ ಇಲ್ಲ. ಆಗ ಅವು ಜಜ್ಜಿಹೋಗಿ ರಕ್ತದಿಂದ ನೆನೆದುಹೋದುವು.

೧೧೨. ಈ ನೋವಿನ ದೆಸೆಯಿಂದ ದಶಾನನನು ಗಟ್ಟಿಯಾಗಿ ಅತ್ತನು. ಆಗ ಬಲಿಯು ನಕ್ಕು ದಾಸಿಯ ಕೈಯ್ಯಿಂದ ಅದನ್ನು ತೆಗೆಸಿದನು.

೧೧೩. ಆಗ ಬಲಿಯು ಅವನನ್ನು ಬೈದು ಧಿಕ್ಕಾರಮಾಡಿ ಮನೆಯಿಂದ ಹೊರಕ್ಕೆ ನೂಕಿಸಿ ಬಿಟ್ಟನು. ಅನಂತರ ಆ ಬಲಿಯದೂತರು ಅವನನ್ನು ಹಿಡಿದುಕೊಂಡು ತಮಗೆ ಕೊಟ್ಟ ಆಹಾರದಲ್ಲಿ ತಾವು ತಿಂದು ಮಿಕ್ಕುದನ್ನು ಕೊಟ್ಟು ಇಟ್ಟುಕೊಂಡಿರುತ್ತ ಅವನ ಕೈಯ್ಯಿಂದ ಕುದುರೆಗಳ ಲದ್ದಿಯನ್ನು ನಿತ್ಯವೂ ತೆಗೆಸಿ ಹೊರಗೆ ಹಾಕಿಸುತ್ತಿದ್ದರು.

೧೧೪–೧೧೫. ಹೀಗಿರುತ್ತಿರಲು ಒಂದುಸಾರಿ ದ್ವಾರಪಾಲಕನಾದ ನಿನ್ನ ಬಳಿಗೆ ಆತನು ಬಂದು ಅನೇಕ ಬಗೆಯಾಗಿ ಕೇಳಿಕೊಂಡನು. ಮತ್ತು ನಿನ

ತ್ವಯಾ ಸ್ವಪಾದಲಗ್ನಃ ಸ ಪಾದಾಂಗುಷ್ಠೇನ ಕ್ಷೇಪಿತಃ ।
ತದಾತಿಮುದಿತೋ ಲಂಕಾಂ ಚಿರಕಾಲೇನ ರಾವಣಃ ॥ ೧೧೫ ॥

ಯಯೌ ಮೇನೇ ನಿಜಂ ಜನ್ಮ ದ್ವಿತೀಯಂ ಜಾತಮದ್ಯ ವೈ ।
ರಾವಣಃ ಪರಮಪ್ರೀತ ಏವಂ ಲೋಕಾನ್ಮಹಾಬಲಃ ॥ ೧೧೬ ॥

ಕರ್ತುಂ ತಾನ್ ಸ್ವವಶಾನ್ನಿತ್ಯಂ ಬಭ್ರಾಮ ಪುಷ್ಪಕಸ್ಥಿತಃ ।
ದೃಷ್ಟ್ವೈಕದಾತ್ರ ಸಾಕೇತೇ ಪೂರ್ವಜಂ ತವ ದೀಕ್ಷಿತಂ ॥ ೧೧೭ ॥

ಅನರಣ್ಯಂ ಸಂಗರೇಣ ಚಕಾರ ಪತಿತಂ ರಣೇ ।
ತದಾ ಶಪ್ತೋಽನರಣ್ಯೇನ ಮದ್ವಂಶೇ ರಘುನಂದನಃ ॥ ೧೧೮ ॥

ಭೂತ್ವಾ ತ್ವಾಂ ಸಂಗರೇಣೈವ ಸಕುಟುಂಬಂ ವಧಿಷ್ಯತಿ ।
ಇತ್ಯುಕ್ತ್ವಾ ಸ ಗತೋ ನಾಕಂ ರಾವಣೋಽಪಿ ಪುರೀಂ ಯಯೌ ॥ ೧೧೯ ॥

ಕಾಲಿಗೆ ಬಿದ್ದು ನಮಸ್ಕರಿಸಿದನು. ಆಗ ನೀನು ಕಾಲಿನ ಹೆಬ್ಬೆರಳಿನಿಂದ ಪಾತಾಳದಿಂದ ಹೊರಕ್ಕೆ ಚಿಮ್ಮಿಸಿ ಎಸೆದುಬಿಟ್ಟೆ ಆಗ ರಾವಣನು ಬಹು ಸಂತೋಷ ಪಡುತ್ತ ಬಹುಕಾಲದಮೇಲೆ ಲಂಕೆಗೆ ಹೋದನು.

೧೧೬-೧೧೭. ಇದರಿಂದ ರಾವಣನು ತಾನು ಎರಡನೆಯಬಾರಿ ಹುಟ್ಟಿದಂತೆ ತಿಳಿದುಕೊಂಡನು. ಎಲೈ ರಾಮಚಂದ್ರನೆ ! ಮಹಾ ಬಲಿಷ್ಠನಾದ ರಾವಣನು ಲೋಕದಲ್ಲಿರುವ ಬಲಿಷ್ಠರನ್ನೆಲ್ಲಾ ತನ್ನ ಅಧೀನರನ್ನಾಗಿ ಮಾಡಿಕೊಳ್ಳಬೇಕೆಂದು ಯಾವಾಗಲೂ ಪುಷ್ಪಕ ವಿಮಾನದಲ್ಲಿ ಸಂಚರಿಸುತ್ತಿದ್ದನು.

೧೧೮. ಹೀಗೆ ಪುಷ್ಪಕದಲ್ಲಿ ಸಂಚರಿಸುತ್ತಿರಲು ಒಂದುಸಾರಿ ಅಯೋಧ್ಯೆಗೆ ಬಂದು ಯಾಗದಲ್ಲಿ ದೀಕ್ಷೆಯನ್ನು ಹೊಂದಿರುವ ನಿನ್ನ ಪೂರ್ವಿಕನಾದ ಅನರಣ್ಯನನ್ನು ನೋಡಿ ಅವನೊಡನೆ ಯುದ್ಧಮಾಡಿ ಸೋಲಿಸಿ ಕೊಂದನು.

೧೧೯. ಆಗ ಅನರಣ್ಯನು ನನ್ನ ವಂಶದಲ್ಲಿ ರಘುವಿಗೆ ಮಗನು ಹುಟ್ಟಿ ನಿನ್ನನ್ನು ಯುದ್ಧದಲ್ಲಿಯೇ ಬಂಧುಸಹಿತನನ್ನಾಗಿ ಕೊಲ್ಲುವನು. ಎಂದು ಶಪಿಸಿ ಸ್ವರ್ಗಸ್ಥನಾದನು. ರಾವಣನೂ ಕೂಡ ಲಂಕೆಗೆ ಹಿಂದಿರುಗಿ ಹೋದನು.

ಸನತ್ಕುಮಾರಮೇಕಾಂತೇ ಸನ್ನಿರೀಕ್ಷೈಕದಾಸುರಃ ।
ನತ್ವಾ ಪಪ್ರಚ್ಛ ದೇವೇಷು ಕೋ ವರಶ್ಚೇತಿ ಸಾದರಂ ॥ ೧೨೦ ॥

ಮುನಿಃ ಸ್ಮಾಹ ಮಹಾವಿಷ್ಣುಂ ತಚ್ಛ್ರುತ್ವಾ ಪ್ರಾಹ ತಂ ಪುನಃ ।
ವಿಷ್ಣುನಾ ಯೇ ಹತಾ ಯುದ್ಧೇ ರಾಕ್ಷಸಾದ್ಯಾ ಲಭಂತಿ ಕಾಂ ॥ ೧೨೧ ॥

ಗತಿಂ ಚೇತಿ ಮುನಿಃ ಪ್ರಾಹ ತೇ ಮುಕ್ತಿಂ ಯಾಂತಿ ದುರ್ಲಭಾಂ ।
ಪುನಃ ಪಪ್ರಚ್ಛ ತಂ ನತ್ವಾ ಕೇನೋಪಾಯೇನ ವೈ ಹರೇಃ ॥ ೧೨೨ ॥

ಭವಿಷ್ಯತ್ಯತ್ರ ಮೇ ಮೃತ್ಯುಸ್ತದಾ ತಂ ಮುನಿರಬ್ರವೀತ್ ।
ತ್ರೇತಾಯಾಂ ನರರೂಪೇಣ ರಾಮೋ ವಿಷ್ಣುರ್ಭವಿಷ್ಯತಿ ॥ ೧೨೩ ॥

ಅಯೋಧ್ಯಾಯಾಂ ತದಾ ತೇನ ಕೃತ್ವಾ ವೈರಂ ಸುದಾರುಣಂ ।
ತಸ್ಮಾದ್ವಧಂ ಕುರುಷ್ವ ತ್ವಂ ಆತ್ಮನಃ ಪರಮಾತ್ಮನಃ ॥ ೧೨೪ ॥

---

೧೨೦. ಒಂದುಸಾರಿ ಈ ರಾವಣನು ಸನತ್ಕುಮಾರನನ್ನು ಕಂಡು ಅವನನ್ನು ಏಕಾಂತದಲ್ಲಿ ನಮಸ್ಕರಿಸಿ ಎಲೈ ಸನತ್ಕುಮಾರನೆ! ದೇವತೆಗಳಲ್ಲಿ ಯಾವನು ಶ್ರೇಷ್ಠನು ಎಂದು ಆದರದಿಂದ ಕೇಳಿದನು.

೧೨೧–೧೨೨. ಆಗ ಆ ಮುನಿಯು ಮಹಾವಿಷ್ಣುವು ಶಕ್ತನೂ ಶ್ರೇಷ್ಠನೂ ಆಗಿರುವನೆಂದನು. ಅದನ್ನು ಕೇಳಿ ಅವನನ್ನು ಕುರಿತು ಮತ್ತೆ ವಿಷ್ಣುವಿನಿಂದ ಕೊಲ್ಲಲ್ಪಟ್ಟವರಿಗೆ ಯಾವ ಗತಿಯು ಬರುವುದು ? ಎಂದೆನಲು ಅದಕ್ಕೆ ಮುನಿಯು ಅವರಿಗೆ ಮುಕ್ತಿಯು ಬರುವುದು ಎಂದನು. ಅದನ್ನು ಕೇಳಿ ಮತ್ತೆ ನಮಸ್ಕರಿಸಿ ಏನುಮಾಡಿದರೆ ನನಗೆ ಹರಿಯಿಂದ ಮೃತ್ಯುವು ಒದಗುವುದು ? ಎಂದನು.

೧೨೩–೧೨೪. ಆಗ ಮುನಿಯು ತ್ರೇತಾಯುಗದಲ್ಲಿ ವಿಷ್ಣುವು ನರರೂಪದಿಂದ ರಾಮನೆಂಬ ಹೆಸರುಳ್ಳವನಾಗಿ ಆಯೋಧ್ಯೆಯಲ್ಲಿ ಹುಟ್ಟುವನು. ಆಗ ಅವನೊಡನೆ ದಾರುಣವಾದ ವೈರವನ್ನು ಬೆಳಸಿ ಆ ಪರಮಾತ್ಮನಿಂದ ನೀನು ವಧೆಯನ್ನು ಹೊಂದು.

ತೇನ ಗಚ್ಛಸಿ ಮುಕ್ತಿಂ ತ್ವಂ ತಚ್ಛ್ರುತ್ವಾ ಸ ದಶಾನನಃ ।
ವಿರೋಧಾರ್ಥಂ ಜನಕಜಾಮಾಹರದ್ಗೌತಮೀತಟಾತ್ ॥ ೧೨೫ ॥

ಅಶೋಕೇ ರಕ್ಷಿತಾ ತೇನ ಮಾತೃವತ್ಸ್ವವಧೇಚ್ಛಯಾ ।
ಏಕದಾ ನಾರದಂ ದೃಷ್ಟ್ವಾ ನತ್ವಾ ಪಪ್ರಚ್ಛ ರಾವಣಃ ॥ ೧೨೬ ॥

ಭಗವನ್ ಬ್ರೂಹಿ ಮೇ ಯೋದ್ಧುಂ ಕುತ್ರ ಸಂತಿ ಮಹಾಬಲಾಃ ।
ಯೋದ್ಧುಮಿಚ್ಛಾಮಿ ಬಲಿಭಿಸ್ತ್ವಂ ಜಾನಾಸಿ ಜಗತ್ತ್ರಯಂ ॥ ೧೨೭ ॥

ಮುನಿರ್ಧ್ಯಾತ್ವಾ ಚಿರಾತ್ಪ್ರಾಹ ಶ್ವೇತದ್ವೀಪನಿವಾಸಿನಃ ।
ಮಹಾಬಲಾ ಮಹಾಕಾಯಾಸ್ತತ್ರ ಯಾಹಿ ಮಹಾಮತೇ ॥ ೧೨೮ ॥

---

೧೨೫. ಆದರಿಂದ ನಿನಗೆ ಮುಕ್ತಿಯು ಬರುತ್ತದೆ. ಎಂದು ಹೇಳಿದನು. ಅದನ್ನು ಕೇಳಿ ಈ ದಶಾನನನು ಅವನೊಡನೆ ವಿರೋಧವನ್ನು ಹೊಂದಲು ಗೌತಮೀನದಿಯ ದಡದಿಂದ ಸೀತೆಯನ್ನು ಕದ್ದುಕೊಂಡು ಹೋದನು.

೧೨೬. ಲಂಕೆಗೆ ತೆಗೆದುಕೊಂಡು ಹೋಗಿ ಅಶೋಕವೃಕ್ಷದ ಕೆಳಗೆ ಆಕೆಯನ್ನು ಇರಿಸಿ ತನ್ನ ವಧೆಯಾಗಲೆಂದು ಬಯಸುತ್ತಾ ಆಕೆಯನ್ನು ತಾಯಿಯಂತೆ ಕಾಪಾಡುತ್ತಿದ್ದನು. ಹೀಗಿರಲು ಒಂದುಸಾರಿ ನಾರದನು ಬರಲು ಅವನನ್ನು ರಾವಣನು ನೋಡಿ ನಮಸ್ಕರಿಸಿ ಇಂತೆಂದು ಕೇಳಿದನು.

೧೨೭. ಎಲೈ ಪೂಜ್ಯನೆ! ನನಗೆ ಯುದ್ಧಮಾಡಬೇಕೆಂಬ ಆಶೆಯು ಬಹುವಾಗಿರುವುದು ಬಹುವಾದ ಬಲಿಷ್ಠರು ಎಲ್ಲಿರುವರು? ಬಲಿಷ್ಠರೊಡನೆ ಯುದ್ಧಮಾಡಬೇಕೆಂದಿದ್ದೇನೆ. ನೀನು ಮೂರುಲೋಕಗಳಲ್ಲಿಯೂ ಸಂಚರಿಸಿ ತಿಳಿದಿರುವುದರಿಂದ ನಿನಗೆ ಎಲ್ಲಾ ವಿಷಯಗಳೂ ಗೊತ್ತಿವೆ.

೧೨೮. ಈ ಮಾತನ್ನು ಕೇಳಿ ಆ ನಾರದನು ಸ್ವಲ್ಪಕಾಲ ಯೋಚಿಸಿ ಶ್ವೇತದ್ವೀಪದಲ್ಲಿ ವಾಸಮಾಡುವವರು ಮಹಾಬಲರೂ ಮಹಾಕಾಯರೂ ಆಗಿರುವರು. ನಿನಗೆ ಯುದ್ಧವು ಬೇಕಾದರೆ ಅಲ್ಲಿಗೆ ಹೋಗು.

ವಿಷ್ಣುಪೂಜಾರತಾ ಯೇ ವೈ ವಿಷ್ಣುನಾ ನಿಹತಾಶ್ಚ ಯೇ ।
ತ ಏವ ತತ್ರ ಸಂಜಾತಾ ಅಜೇಯಾಶ್ಚ ಸುರಾಸುರೈಃ ॥ ೧೨೯ ॥

ತಚ್ಛ್ರುತ್ವಾ ರಾವಣೋ ವೇಗಾನ್ಮಂತ್ರಿಭಿಃ ಪುಷ್ಪಕೇಣ ತೈಃ ।
ಯೋದ್ಧುಕಾಮೋ ಯಯೌ ಗರ್ವಾಚ್ಛ್ವೇತ ದ್ವೀಪಾಂತಿಕಂ ಮುದಾ ॥

ತತ್ಪ್ರಭಾಹತತೇಜಸ್ಕಂ ಪುಷ್ಪಕಂ ನಾಚಲತ್ಪರಃ ।
ತ್ಯಕ್ತ್ವಾ ವಿಮಾನಂ ಪ್ರಯಯೌ ಸ್ವಯಮೇವ ದಶಾನನಃ ॥ ೧೩೧ ॥

ಪ್ರವಿಶನ್ನೇವ ತಂ ದ್ವೀಪಂ ಧೃತೋ ಹಸ್ತೇನ ಯೋಷಿತಾ ।
ಗಚ್ಛಂತ್ಯಾ ಕಸ್ಯಚಿದ್ದಾಸ್ಯಾ ಪುಷ್ಪಾಣ್ಯಾನಯಿತುಂ ವನಂ ॥ ೧೩೨ ॥

---

೧೨೯. ಯಾರು ವಿಷ್ಣುವನ್ನೇ ಪೂಜಿಸುತ್ತಿದ್ದರೋ ಯಾರು ವಿಷ್ಣುವಿನಿಂದ ಹತರಾದವರೋ ಅವರೆಲ್ಲರೂ ಅಲ್ಲಿ ಹುಟ್ಟಿರುವರು. ಅವರನ್ನು ದೇವತೆಗಳಾಗಲೀ ದಾನವರಾಗಲೀ ಜಯಿಸಲಾರರು. ಎಂದನು.

೧೩೦. ಅದನ್ನು ಕೇಳಿ ರಾವಣನು ವೇಗದಿಂದ ಅವರೊಡನೆ ಯುದ್ಧವನ್ನು ಮಾಡಲು ಮಂತ್ರಿಗಳನ್ನೂ ಕರೆದುಕೊಂಡು ಪುಷ್ಪಕದಲ್ಲಿ ಕುಳಿತು ಗರ್ವದಿಂದ ಆ ಶ್ವೇತದ್ವೀಪದ ಬಳಿಗೆ ಹೋದನು.

೧೩೧. ಆ ಶ್ವೇತದ್ವೀಪದ ತೇಜಸ್ಸಿನ ಶಕ್ತಿಯಿಂದ ಪುಷ್ಪಕದ ತೇಜಸ್ಸು ಕಡಿಮೆಯಾಯಿತು. ಆಗ ದಶಾನನನು ಪುಷ್ಪಕವನ್ನು ಬಿಟ್ಟು ಇಳಿದು ನಡೆದು ಕೊಂಡೇ ಅಲ್ಲಿಗೆ ಹೋದನು.

೧೩೨. ಆ ದ್ವೀಪಕ್ಕೆ ಹೋಗುತ್ತಿರುವಾಗಲೇ ಹೂವನ್ನು ತರುವುದಕ್ಕೆ ಕಾಡಿಗೆ ಹೋಗುತ್ತಿದ್ದ ದಾಸಿಯರಲ್ಲಿ ಒಬ್ಬದಾಸಿಯು ಆ ರಾವಣನನ್ನು ಕೈಯ್ಯಿಂದ ಹಿಡಿದುಕೊಂಡಳು.

ತಯಾ ಪೃಷ್ಟಃ ಕುತಃ ಕೋಸಿ ಪ್ರೇಷಿತಃ ಕೇನ ವಾ ವದ ।
ಇತ್ಯುಕ್ತ್ವಾ ಲೀಲಯಾ ಸ್ತ್ರೀಭಿರ್ಹಸಂತೀಭಿರ್ಮುಹುರ್ಮುಹುಃ ॥ ೧೩೩ ॥

ಮುಖೇಷು ತಾಡಿತೋ ಹಸ್ತೈರ್ಭ್ರಾಮಿತೋಽಧೋ ಮುಖಂ ಚಿರಂ ।
ಧೃತ್ವೈಕಂ ತತ್ಪದಂ ತಾಭಿಃ ಕ್ಷಿಪ್ತಃ ಕಂದುಕವನ್ಮುಹುಃ ॥ ೧೩೪ ॥

ಪರಸ್ಪರಂ ಹಿ ಕ್ರೀಡದ್ಭಿಃ ಕಯಾ ತ್ಯಕ್ತಸ್ತು ಲೀಲಯಾ ।
ಪಪಾತ ಪರಲಂಕಾಯಾಂ ಕೌಂಚಾಯಾಶ್ಶೌಚಕೂಪಕೇ ॥ ೧೩೫ ॥

ಕೃಚ್ಛ್ರಾದ್ಧಸ್ತಾದ್ವಿನಿರ್ಮುಕ್ತಸ್ತಾಸಾಂ ಸ್ತ್ರೀಣಾಂ ದಶಾನನಃ ।
ಆಶ್ಚರ್ಯಮತುಲಂ ಲಬ್ಧ್ವಾ ಚಿಂತಯಾಮಾಸ ದುರ್ಮತಿಃ ॥ ೧೩೬ ॥

೧೩೩–೧೩೪. ಅವಳೂ ಮತ್ತು ಅವಳ ಜೊತೆಯವರೂ ದಶಾನನನನ್ನು ಕುರಿತು ನೀನು ಯಾರು ? ಎಲ್ಲಿಂದ ಬಂದೆ ? ಯಾರು ನಿನ್ನನ್ನು ಕಳುಹಿಸಿದರು ? ಹೇಳು ? ಎಂದೆನ್ನುತ್ತಾ ಅವರೆಲ್ಲರೂ ಹಾಸ್ಯಮಾಡಿ ನಗುತ್ತ ಇವನ ಮುಖದ ಮೇಲೆಯೂ ಕಪಾಲಕ್ಕೂ ಹೊಡೆಯುತ್ತ ಕಾಲನ್ನು ಹಿಡಿದು ತಲೆಕೆಳಗಾಗಿ ಮಾಡಿ ಬಹುಹೊತ್ತು ಗರ್ರನೆ ತಿರುಗಿಸಿದರು. ಮತ್ತು ಅವನ ಒಂದು ಕಾಲನ್ನು ಹಿಡಿದುಕೊಂಡು ಅವನನ್ನು ಚಂಡಿನಂತೆ ಎಸೆದಾಡುತ್ತಿದ್ದರು.

೧೩೫. ಹೀಗೆ ಅವನನ್ನು ಒಬ್ಬರಿಗೊಬ್ಬರು ಎಸೆದಾಡುತ್ತ ಆಟವಾಡುತ್ತಿದ್ದಾಗ ಒಬ್ಬಳು ಬಹು ಲೀಲೆಯಿಂದ ಸ್ವಲ್ಪ ವೇಗವಾಗಿ ಎಸೆಯಲು ಅವನು ತನ್ನ ತಂಗಿಗೆ ಕೊಟ್ಟಿದ್ದ ಪರಲಂಕೆಯಲ್ಲಿ ಕೌಂಚೆಯ ಶೌಚದ ಬಾವಿಯಲ್ಲಿ (ಕಕ್ಕಸಿನಲ್ಲಿ) ಬಿದ್ದನು.

೧೩೬. ಅಂತು ಶ್ವೇತದ್ವೀಪದ ಹೆಂಗಸರ ಕೈಯ್ಯಿಂದ ಬಿಡುಗಡೆಯನ್ನು ಹೊಂದಿ ಅಲ್ಲಿರುವ ಹೆಂಗಸರೇ ಬಲಿಷ್ಠರಾಗಿದ್ದಮೇಲೆ ಗಂಡಸರ ಪರಾಕ್ರಮ ವೆಷ್ಟಿರಬೇಕೆಂದು ಯೋಚಿಸುತ್ತ ಬಹುವಾಗಿ ಆಶ್ಚರ್ಯವನ್ನು ಹೊಂದಿದನು.

ವಿಷ್ಣುನಾ ಯೇ ಹತಾ ಯುದ್ಧೇ ತೇಷಾಮೇತಾದೃಶಂ ಬಲಂ ।
ತರ್ಹ್ಯತ್ರ ನಿಹತಸ್ತೇನ ಶ್ವೇತದ್ವೀಪಂ ವ್ರಜಾಮ್ಯಹಂ ॥ ೧೩೭ ॥

ಮಯಿ ವಿಷ್ಣುರ್ಯಥಾ ಕುಪ್ಯೇತ್ತಥಾ ಕಾರ್ಯಂ ಕರೋಮ್ಯಹಂ ।
ಇತಿ ನಿಶ್ಚಿತ್ಯ ವೈದೇಹೀಂ ಜಹಾರ ರಾವಣೋ ವನಾತ್ ॥ ೧೩೮ ॥

ಜಾನನ್ನೇವಂ ಮಹಾಲಕ್ಷ್ಮೀಂ ಸ ಜಹಾರಾವನೀಸುತಾಂ ।
ಮಾತೃವತ್ಪಾಲಯಾಮಾಸ ತ್ವತ್ತಃ ಕಾಂಕ್ಷನ್ ವಧಂ ನಿಜಂ ॥ ೧೩೯ ॥

॥ ಶ್ರೀರಾಮಚಂದ್ರ ಉವಾಚ ॥

ವಾಲಿ ಸುಗ್ರೀವಯೋರ್ಜನ್ಮ ಶ್ರೋತುಮಿಚ್ಛಾಮಿ ತ್ವನ್ಮುಖಾತ್ ।
ರವೀಂದ್ರೌ ವಾನರಾಕಾರೌ ಜಜ್ಞಾತ ಇತಿ ತಚ್ಛ್ರುತಂ ॥ ೧೪೦ ॥

---

೧೩೭. ವಿಷ್ಣುವಿನಿಂದ ಯುದ್ಧದಲ್ಲಿ ಮರಣವನ್ನು ಹೊಂದಿದವರಿಗೆ ಈ ರೀತಿಯಾದ ಬಲವಿರುವುದು. ನಾನೂ ಕೂಡ ಆ ವಿಷ್ಣುವಿನ ಕೈಯ್ಯಿಂದ ಯುದ್ಧದಲ್ಲಿ ಮರಣವನ್ನು ಹೊಂದಿದರೆ ಶ್ವೇತದ್ವೀಪಕ್ಕೆ ಹೋಗಿ ವಾಸಿಸುತ್ತೇನೆ.

೧೩೮. ವಿಷ್ಣುವು ನನ್ನ ವಿಷಯದಲ್ಲಿ ಕೋಪವನ್ನು ಹೊಂದುವಂತೆ ಆ ರೀತಿಯಾದ ಕೆಲಸಗಳನ್ನು ನಾನು ಮಾಡಬೇಕು. ಎಂದು ಯೋಚಿಸಿ ನಿಶ್ಚಯಿಸಿಕೊಂಡು ವೈದೇಹಿಯನ್ನು ರಾವಣನು ವನದಿಂದ ಕದ್ದುಕೊಂಡು ಹೋಗಿದ್ದನು.

೧೩೯. ಸೀತೆಯು ಮಹಾಲಕ್ಷ್ಮಿಯೆಂದು ತಿಳಿದಿದ್ದರೂ ಅವನು ಕಾಡಿನಿಂದ ಆಕೆಯನ್ನು ಕದ್ದು ತಂದನು. ನಿನ್ನಿಂದ ತನ್ನ ವಧೆಯನ್ನು ಅಪೇಕ್ಷಿಸುತ್ತ ತಾಯಿಯಂತೆ ಆಕೆಯನ್ನು ಕಾಪಾಡಿದನು.

೧೪೦. ಶ್ರೀರಾಮಚಂದ್ರನು ಹೇಳಿದನು-ಎಲೈ ಅಗಸ್ತ್ಯನೇ! ವಾಲಿ ಸುಗ್ರೀವರ ಜನ್ಮವನ್ನು ನಿನ್ನ ಬಾಯಿಂದ ಕೇಳಲು ಅಪೇಕ್ಷಿಸುತ್ತೇನೆ. ಸೂರ್ಯನೂ ಇಂದ್ರನೂ ವಾನರಾಕಾರರಾಗಿ ಹುಟ್ಟಿ ಈ ಅವತಾರಿಗಳಾಗಿರುವರೆಂದು ಕೇಳಿರುವೆನು. ಅವರ ವಿಷಯವನ್ನು ಹೇಳು.

|| ಅಗಸ್ತ್ಯ ಉವಾಚ ||

ಮೇರೌ ಸ್ವರ್ಣಮಯೇ ಪೂರ್ವಂ ಸಭಾಯಾಂ ಬ್ರಹ್ಮಣಃ ಕದಾ |
ನೇತ್ರಾಭ್ಯಾಂ ಪತಿತಂ ದಿವ್ಯಮಾನಂದಾಶ್ರುಜಲಂ ತದಾ || ೦೪೧ ||

ತದ್ಗೃಹೀತ್ವಾ ಕರೇ ಬ್ರಹ್ಮಾ ಧ್ಯಾತ್ವಾ ಕಿಂಚಿತ್ತದತ್ಯಜತ್ ।
ಭೂಮೌ ಪತಿತಮಾತ್ರೇಣ ತಸ್ಮಾಜ್ಜಾತೋ ಮಹಾಕಪಿಃ || ೧೪೨ ||

ತಮಾಹ ದ್ರುಹಿಣೋ ವತ್ಸ ತ್ವಮತ್ರ ವಸ ಸರ್ವದಾ |
ಏವಂ ಬಹುತಿಥೇ ಕಾಲೇ ಗತೇಽರ್ಕ್ಷ ವಿರಜಾಸ್ಸುಧೀಃ || ೧೪೩ ||

ಕದಾಚಿತ್ಪರ್ಯಟನ್ಮೇರೌ ಫಲಮೂಲಾರ್ಥಮುದ್ಯತಃ ।
ಅಪಶ್ಯದ್ದಿವ್ಯಸಲಿಲಾಂ ವಾಪೀಂ ಮಣಿಶಿಲಾಚಿತಾಂ || ೧೪೪ ||

---

೧೪೧. ಅಗಸ್ತ್ಯನು ಹೇಳಿದನು–ಚಿನ್ನದ ಮಯವಾದ ಮೇರುಪರ್ವತದಲ್ಲಿ ಒಂದುಸಾರಿ ಬ್ರಹ್ಮನು ಸಭೆಯಲ್ಲಿ ಕುಳಿತಿರಲು ಆ ಬ್ರಹ್ಮನ ಕಣ್ಣುಗಳಿಂದ ದಿವ್ಯವಾದ ಆನಂದಾಶ್ರುಗಳು ನೆಲದಮೇಲೆ ಬಿದ್ದುವು.

೧೪೨. ಬ್ರಹ್ಮನು ಆ ನೀರನ್ನು ಕೈಯ್ಯಲ್ಲಿ ಹಿಡಿದುಕೊಂಡು ಸ್ವಲ್ಪಹೊತ್ತು ಏನನ್ನೋ ಧ್ಯಾನಿಸಿ ಅದನ್ನು ಚೆಲ್ಲಿಬಿಟ್ಟನು. ಅದು ನೆಲದ ಮೇಲೆ ಬಿದ್ದೊಡನೆಯೇ ಅದರಿಂದ ಒಂದು ದೊಡ್ಡ ಕಪಿಯು ಹುಟ್ಟಿತು.

೧೪೩-೧೪೪. ಅದನ್ನು ನೋಡಿ ಬ್ರಹ್ಮನು ಎಲೈ ವತ್ಸನೆ! ನೀನು ಇಲ್ಲಿಯೇ ಯಾವಾಗಲೂ ವಾಸಮಾಡುತ್ತಿರು. ಎಂದು ಹೇಳಿದನು. ಹೀಗೆ ಬಹುಕಾಲವು ಕಳೆದ ಮೇಲೆ ಪಾಪರಹಿತನಾದ ಬುದ್ಧಿವಂತನಾದ ವಿರಜನೆಂಬ ಆ ಕಪಿಯು ಒಂದು ಸಾರಿ ಹಣ್ಣುಹಂಪಲಿಗೋಸ್ಕರ ಮೇರುಪರ್ವತದಲ್ಲಿ ಸುತ್ತುತ್ತಿರಲು ಮಣಿಯಿಂದ ಮೆಟ್ಟಿಲುಗಳನ್ನು ಮಾಡಿರುವ ಒಂದು ಕೊಳವನ್ನು ನೋಡಿತು.

ಪಾನೀಯಂ ಪಾತುಮಗಮತ್ತತ್ರ ಚ್ಛಾಯಾಮಯಂ ಕಪಿಂ ।
ದೃಷ್ಟ್ವಾ ಪ್ರತಿಕಪಿಂ ಮತ್ವಾ ನಿಪಪಾತ ಜಲಾಂತರೇ ॥ ೧೪೫ ॥

ತತ್ರಾದೃಷ್ಟ್ವಾ ಹರಿಂ ಶೀಘ್ರಂ ಬಹಿರುತ್ಪ್ಲುತ್ಯ ಸಂಯಯೌ ।
ಆಪಶ್ಯತ್ಸುಂದರೀಂ ನಾರೀಮಾತ್ಮಾನಂ ವಿಸ್ಮಯಂ ಗತಃ ॥ ೧೪೬ ॥

ತತೋ ದದರ್ಶ ಮಘವಾ ಸೋತ್ಯಜದ್ವೀರ್ಯಮುತ್ತಮಂ ।
ತಾಮಪ್ರಾಪ್ಯೈವ ತದ್ವೀರ್ಯಂ ವಾಲದೇಶೇಽಪತದ್ಭುವಿ ॥ ೧೪೭ ॥

ವಾಲೀ ಸಮಭವತ್ತತ್ರ ಶಕ್ರತುಲ್ಯ ಪರಾಕ್ರಮಃ ।
ಭಾನುರಪ್ಯಾಗಮತ್ತತ್ರ ತದಾನೀಮೇವ ಭಾಮಿನೀಂ ॥ ೧೪೮ ॥

---

೧೪೫. ಈ ಕಪಿಯು ಅಲ್ಲಿಗೆ ನೀರನ್ನು ಕುಡಿಯಲು ಹೋಯಿತು. ನೀರನ್ನು ಕುಡಿಯುತ್ತಿರಲು ಆ ನೀರಿನಲ್ಲಿ ತನ್ನ ನೆರಳಿನ ರೂಪವಾದ ಕಪಿಯು ಕಂಡು ಬಂದಿತು. ಇದು ಮತ್ತೊಂದು ಕಪಿಯೆಂದು ತಿಳಿದು ಜಗಳವಾಡಲು ಅದರ ಮೇಲೆ ಬೀಳಲು ಹೋಗಿ ನೀರಿನೊಳಕ್ಕೆ ಬಿದ್ದು ಬಿಟ್ಟಿತು.

೧೪೬. ಆ ನೀರಿನಲ್ಲಿ ಕಪಿಯನ್ನು ಕಾಣದೆ ಬೇಗನೆ ಮೇಲಕ್ಕೆ ನೆಗೆದು ಬಂದುಬಿಟ್ಟಿತು. ಒಡನೆಯೇ ಆ ಕಪಿಯು ತಾನು ಒಬ್ಬ ಸುಂದರಿಯಾದ ಹೆಂಗಸಾಗಿರುವುದನ್ನು ನೋಡಿತು. ಇದರಿಂದ ತನಗೆ ಬಹು ಆಶ್ಚರ್ಯವಾಯಿತು.

೧೪೭. ಆಗ ಆ ಹೆಂಗಸನ್ನು ಇಂದ್ರನು ನೋಡಿ ಮೋಹಿಸಿ ರಮಿಸಿದನು. ಆ ಇಂದ್ರನ ವೀರ್ಯವು ಆಕೆಯ ಸರಿಯಾದ ಜಾಗದಲ್ಲಿ ಬೀಳದೆ ಬಾಲವಿರುವ ಪ್ರದೇಶದಲ್ಲಿ ಬಿದ್ದಿತು. ಅದು ಅಲ್ಲಿಯೂ ನಿಲ್ಲದೆ ಕೊನೆಗೆ ಕೆಳಗೆ ನೆಲದಮೇಲಕ್ಕೆ ಬಿದ್ದಿತು. ಬಾಲದ ಬಳಿಯಲ್ಲಿ ಆ ವೀರ್ಯವು ಬಿದ್ದುದರಿಂದ ಅದರಿಂದ ಹುಟ್ಟಿದವನು ವಾಲಿಯಾದನು.

೧೪೮-೧೪೯. ಅವನು ಇಂದ್ರನಿಗೆ ಸಮಾನವಾದ ಪರಾಕ್ರಮಿಯೂ ಆದನು. ಆ ಕಾಲದಲ್ಲಿಯೇ ಸೂರ್ಯನೂ ಕೂಡ ಅಲ್ಲಿಗೆ ಬಂದು ಆಕೆಯನ್ನು ನೋಡಿದನು. ಅವನು ಕಾಮವಶನಾಗಿ ಆಕೆಯಲ್ಲಿ ರಮಿಸಲು ಆಸೆಪಟ್ಟು ಆಕೆಯ ಕತ್ತಿನ

ದೃಷ್ಟ್ವಾ ಕಾಮವಶೋ ಭೂತ್ವಾ ಗ್ರೀವಾದೇಶೇಽಸೃಜನ್ಮಹತ್ ।
ಬೀಜಂ ತಸ್ಯಾಸ್ತತಸ್ಸದ್ಯೋ ಸುಗ್ರೀವೋ ಬಲವಾನಭೂತ್ ॥ ೧೪೯ ॥

ಪುತ್ರದ್ವಯಂ ಸಮಾದಾಯ ಗತ್ವಾ ಸಾ ನಿದ್ರಿತಾ ಕ್ವಚಿತ್ ।
ಪ್ರಭಾತೇಽಪಶ್ಯದಾತ್ಮಾನಂ ಪೂರ್ವವದ್ವಾನರಾಕೃತಿಂ ॥ ೧೫೦ ॥

ತದ್ವೃತ್ತಂ ತು ವಿಧಿಶ್ಶ್ರುತ್ವಾ ಕಿಷ್ಕಿಂಧಾರಾಜ್ಯಮುತ್ತಮಂ ।
ದದೌ ಸ ವಾನರೇಂದ್ರಾಯ ಪುತ್ರಾಭ್ಯಾಂ ತತ್ರ ಸಂಸ್ಥಿತಃ ॥ ೧೫೧ ॥

ಮೃತೇಽರ್ಕ್ಷೇ ವಿರಜಸ್ಯಾಭೂದ್ವಾಲೀ ಪುರ್ಯಾಂ ಕಪೀಶ್ವರಃ ।
ಏವಂ ತೇ ಕಥಿತಂ ರಾಮ ಯಥಾಪೃಷ್ಟಂ ತ್ವಯಾ ಮಮ ॥ ೧೫೨ ॥

ಪ್ರದೇಶದಲ್ಲಿ ತನ್ನ ವೀರ್ಯವು ಬೀಳುವಂತೆ ಅವಕಾಶಮಾಡಿಕೊಂಡನು. ಗ್ರೀವ ಎಂದರೆ ಕತ್ತು. ಆ ಪ್ರದೇಶದಲ್ಲಿ ಬಿದ್ದ ವೀರ್ಯದಿಂದ ಹುಟ್ಟಿದವನಾದುದರಿಂದ ಅವನೇ ಸುಗ್ರೀವನಾದನು. ಅವನೂ ಕೂಡ ಸೂರ್ಯನಂತೆಯೇ ಬಲಿಷ್ಠನಾದನು.

೧೫೦. ಈ ಇಬ್ಬರು ಮಕ್ಕಳನ್ನೂ ತೆಗೆದುಕೊಂಡು ಹೋಗಿ ಇಟ್ಟುಕೊಂಡು ಆಕೆಯು ಒಂದು ಜಾಗದಲ್ಲಿ ಮಲಗಿ ನಿದ್ರಿಸುತ್ತಿದ್ದಳು. ಬೆಳಗ್ಗೆ ಎದ್ದು ನೋಡಲು ಮೊದಲಿನಂತೆ ಗಂಡುಕಪಿಯಾಗಿದ್ದಳು.

೧೫೧. ಈ ವಿಷಯವು ಬ್ರಹ್ಮನಿಗೆ ತಿಳಿಯಿತು. ಆಗ ಅವನು ಕಿಷ್ಕಿಂಧೆ ಎಂಬ ರಾಜ್ಯವನ್ನು ವಿರಜನೆಂಬ ಆ ಕಪಿಗೆ ಕೊಟ್ಟನು. ಆ ಕಪಿಯು ಮಕ್ಕಳಾದ ವಾಲೀ ಸುಗ್ರೀವರೆಂಬ ಆ ಕಪಿಗಳೊಡನೆ ಅಲ್ಲಿದ್ದನು.

೧೫೨. ಕೆಲವು ಕಾಲದಮೇಲೆ ವಿರಜನು ಸಾಯಲಾಗಿ ವಾಲಿಯು ಆ ಕಿಷ್ಕಿಂಧೆಗೆ ರಾಜನಾದನು. ಎಲೈ ರಾಮನೆ ! ನೀನು ಕೇಳಿದಂತೆ ವಾಲಿಸುಗ್ರೀವರ ಕಥೆಯನ್ನು ಹೇಳಿದೆನು.

॥ ಶ್ರೀರಾಮ ಉವಾಚ ॥

ಯದಾಸೌ ವಾಲಿನಾ ಬಂಧುಃ ಕಿಷ್ಕಿಂಧಾಯಾ ಬಹಿಷ್ಕೃತಃ ।
ತದಾ ತಸ್ಯೈವ ಸಚಿವಃ ಶ್ರೀಮಾನ್ ಪವನನಂದನಃ ॥ ೧೫೩ ॥

ನ ವೇದ ಕಿಂ ಬಲಂ ನೈಜಂ ವಾಲಿತುಲ್ಯ ಪರಾಕ್ರಮಃ ।
ಇತಿ ರಾಮವಚಶ್ಶ್ರುತ್ವಾ ಪುನಸ್ತಂ ಮುನಿರಬ್ರವೀತ್ ॥ ೧೫೪ ॥

ಕೇಸರೀ ನಾಮ ವಿಖ್ಯಾತಃ ಕಪಿರಂಜನಪರ್ವತೇ ।
ತಸ್ಯಾಸ್ತಾಂ ಚ ಶುಭೇ ಪತ್ನ್ಯೌ ವಾನರ್ಯಾವೇಕದಾ ಗಿರೌ ॥ ೧೫೫ ॥

ಪ್ಲವಂಗಸ್ಯಾಂಜನೀ ನಾಮ್ನೀ ಸ್ಥಿತಾ ತಾವಚ್ಚ ಖಾತ್ತದಾ ।
ಪಪಾತ ಪಾಯಸಮಯಃ ಪಿಂಡೋ ಗೃಧ್ರೀಮುಖಾದ್ಭುವಿ ॥ ೧೫೬ ॥

ಯದಾ ನೀತಸ್ತು ಕೈಕೇಯ್ಯಾ ಕರಾದ್ಗೃಧ್ರ್ಯಾ ಶುಭಃ ಪುರಾ ।
ತಂ ಪಿಂಡಂ ಭಕ್ಷಯಾಮಾಸ ವಾನರೀ ಹ್ಯಮೃತೋಪಮಂ ॥ ೧೫೭ ॥

೧೫೩–೧೫೪. ಶ್ರೀರಾಮನು ಹೇಳಿದನು–ಎಲೈ ಅಗಸ್ತ್ಯನೆ! ವಾಲಿಯು ತಮ್ಮನಾದ ಸುಗ್ರೀವನನ್ನು ಕಿಷ್ಕಿಂಧೆಯಿಂದ ಓಡಿಸಿದಾಗ ಸುಗ್ರೀವನ ಸಚಿವನಾದ ಹನುಮಂತನು ತನ್ನ ಬಲವನ್ನು ತಾನು ತಿಳಿದುಕೊಂಡಿರಲಿಲ್ಲವೆ? ಅವನು ವಾಲಿಗೆ ಸಮನಾದ ಪರಾಕ್ರಮಿಯಷ್ಟೆ! ಅವನೇಕೆ ಸರಿಪಡಿಸಬಾರದಾಗಿತ್ತು? ಎಂದು ರಾಮನು ಹೇಳಿದುದನ್ನು ಮುನಿಯು ಕೇಳಿ ರಾಮನಿಗೆ ಇಂತೆಂದನು.

೧೫೫–೧೫೬. ಅಂಜನಪರ್ವತದಲ್ಲಿ ಕೇಸರಿಯೆಂಬ ಕಪಿಯಿದ್ದನು. ಅವನು ಪ್ರಸಿದ್ಧನು. ಅವನಿಗೆ ಆ ಪರ್ವತದಲ್ಲಿ ಇಬ್ಬರು ಹೆಂಡತಿಯರಿದ್ದರು. ಅಂಜನಿಯೆಂಬ ಹೆಂಡತಿಯು ಆ ಪರ್ವತದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿದ್ದಾಗ ಆಕಾಶದಲ್ಲಿ ಒಂದು ಹದ್ದು ಹೊತ್ತುಕೊಂಡು ಹೋಗುತ್ತಿದ್ದ ಪಾಯಸದ ಉಂಡೆಯು ಮೇಲಿನಿಂದ ಕೆಳಗೆ ಬಿದ್ದಿತು.

೧೫೭. ಅದನ್ನು ಆ ಹದ್ದು ಕೈಕೇಯಿಯಿಂದ ಹಾರಿಸಿಕೊಂಡು ಬಂದಿದ್ದಿತು. ಆ ಅಮೃತದ ಉಂಡೆಯನ್ನು ಆ ಅಂಜನಿಯೆಂಬ ಕಪಿಯು ತಿಂದಿತು.

ಏತಸ್ಮಿನ್ನಂತರೇ ತತ್ರ ಮಾರ್ಜಾರಾಸ್ಯಾ ಸಮಾಗತಾ ।
ಪತಿನಾ ರಹಿತೇ ದ್ವೇ ತೇ ಕ್ರೀಡಂತ್ಯೌ ವಸನಂ ತಯೋಃ ॥ ೧೫೮ ॥

ಅಹರತ್ಪವನೋ ವೇಗಾದ್ದೃಷ್ಟ್ವಾ ವಾಯುಸ್ತು ದೂರತಃ ।
ಅಂಜನೀಂ ಪ್ರಾರ್ಥಯಾಮಾಸ ತದಾ ಭೋಗಂ ಚಕಾರ ಸಃ ॥ ೧೫೯ ॥

ತಥೈವ ಪ್ರಾರ್ಥಯಾಮಾಸ ಮಾರ್ಜಾರಾಸ್ಯಾಂ ಸ ನಿಋರ್ತಿಃ ।
ತಯಾಕರೋದ್ರತಿಂ ತತ್ರ ಸೋಽಪಿ ಪರ್ವತಮೂರ್ಧನಿ ॥ ೧೬೦ ॥

ತಯೋಸ್ತಾಭ್ಯಾಂ ಸಮುತ್ಪನ್ನೌ ವಾನರ್ಯಾ ಮಾರುತಾತ್ಮಜಃ ।
ಮಾರ್ಜಾರ್ಯಾ ಸಮಭೂದ್ಘೋರಃ ಪಿಶಾಚೋ ಘುರ್ಘುರಸ್ವನಃ ॥ ೧೬೧ ॥

---

೧೫೮. ಇಷ್ಟರಲ್ಲಿ ಅಲ್ಲಿಗೆ ಮಾರ್ಜಾರಾಸ್ಯಳೆಂಬ ಮತ್ತೊಬ್ಬ ಹೆಂಡತಿಯು ಬಂದಳು. ಆಗ ಅವಳ ಗಂಡನಾದ ಕೇಸರಿಯು ಅಲ್ಲಿರಲಿಲ್ಲ. ಅವರಿಬ್ಬರೂ ಸುಖವಾಗಿ ಕ್ರೀಡಿಸುತ್ತಿದ್ದರು.

೧೫೯. ಆಗ ಅವರಿಬ್ಬರ ಬಟ್ಟೆಗಳೂ ಗಾಳಿಯಿಂದ ಹಾರಿ ಹೋದುವು. ವಾಯುವು ಇದನ್ನು ದೂರದಲ್ಲಿಯೇ ನೋಡಿ ಅಂಜನಿಯನ್ನು ಭೋಗಕ್ಕೋಸ್ಕರ ಪ್ರಾರ್ಥಿಸಲು ಆಕೆಯು ಒಪ್ಪಿದುದರಿಂದ ಆ ವಾಯುವು ಅವಳಲ್ಲಿ ರಮಿಸಿದನು.

೧೬೦. ಮತ್ತೊಬ್ಬಳಾದ ಮಾರ್ಜಾರಾಸ್ಯೆಯನ್ನು ನಿರ್ಋತಿಯು ಪ್ರಾರ್ಥಿಸಲು ಅವಳು ಸಮ್ಮತಿಸಲು ಅವಳೊಡನೆ ಆ ನಿರ್ಋತಿಯು ಭೋಗಿಸಿದನು. ಈ ಕೆಲಸವು ಪರ್ವತದ ಮೇಲುಭಾಗದಲ್ಲಿಯೇ ನಡೆಯಿತು.

೧೬೧. ಆಗ ಅವರಿಬ್ಬರೂ ಅವರಿಬ್ಬರಿಂದಲೂ ಗರ್ಭಿಣಿಯರಾದರು. ಮಾರ್ಜಾರಾಸ್ಯೆಯು ಕ್ರೂರಧ್ವನಿಯುಳ್ಳ ಘೋರನಾದ ರಾಕ್ಷಸನನ್ನು ಹೆತ್ತಳು. ಅಂಜನಿಯು ಆಂಜನೇಯನನ್ನು ಹೆತ್ತಳು.

ಚೈತ್ರೇ ಮಾಸಿ ಸಿತೇ ಪಕ್ಷೇ ಹರಿದಿನೇ ಮಘಾಭಿದೇ ।
ನಕ್ಷತ್ರೇ ಸ ಸಮುತ್ಪನ್ನೋ ಹನೂಮಾನ್ರಿಪುಸೂದನಃ ॥ ೧೬೨ ॥

ಮಹಾಚೈತ್ರೀ ಪೂರ್ಣಿಮಾಯಾಂ ಸಮುತ್ಪನ್ನೋಂಜನೀಸುತಃ ।
ವದಂತಿ ಕಲ್ಪಭೇದೇನ ಬುಧಾ ಇತ್ಯಪಿ ಕೇಚನ ॥ ೧೬೩ ॥

ಬಾಲಭಾವೇಪಿ ಯಃ ಪೂರ್ವಂ ದೃಷ್ಟ್ವೋದ್ಯಂತಂ ವಿಭಾವಸುಂ ।
ಮತ್ವಾ ಪಕ್ವಫಲಂ ಚೇತಿ ಜಿಘೃಕ್ಷುರ್ಲೀಲಯೋತ್ಪ್ಲುತಃ ॥ ೧೬೪ ॥

ಯೋಜನಾನಾಂ ಪಂಚಶತಂ ವಾಯುವೇಗೇನ ಮಾರುತಿಃ ।
ರಾಹುಸ್ತಸ್ಮಿನ್ ದಿನೇ ದರ್ಶೇ ಯಯೌ ಸೂರ್ಯಂ ರಘೂತ್ತಮ ॥ ೧೬೫ ॥

ತಾವದ್ದೃಷ್ಟ್ವಾ ಧರ್ತುಕಾಮಂ ರವೇರಗ್ರೇ ಕಪಿಂ ಸ್ಥಿತಂ ।
ತದಾ ರಾಹುರ್ಭಯಾದೇವ ರವಿಂ ಮುಕ್ತ್ವೇಂದ್ರಮಾಯಯೌ ॥ ೧೬೬ ॥

೧೬೨-೧೬೩. ಚೈತ್ರಮಾಸದ ಶುಕ್ಲಪಕ್ಷದ ಮಘಾನಕ್ಷತ್ರದಿಂದ ಕೂಡಿದ ಏಕಾದಶಿಯ ದಿನ ಮಾರುತಿಯು ಹುಟ್ಟಿದನೆಂದು ಕೆಲವರೂ ಚೈತ್ರಮಾಸದ ಪೂರ್ಣಿಮೆಯ ದಿನ ಹುಟ್ಟಿದನೆಂದು ಕೆಲವರೂ ಹೇಳುವರು. ಇದು ಕಲ್ಪಭೇದದಿಂದ ಹೇಳಿದ ಮಾತು. ಎಂದು ಕೆಲವರು ಹೇಳುವರು.

೧೬೪. ಆ ಮಾರುತಿಯು ಬಾಲನಾಗಿರುವಾಗಲೇ ಉದಯಿಸುತ್ತಿರುವ ಸೂರ್ಯನನ್ನು ನೋಡಿ ಇದು ಕಳಿತಿರುವ ಹಣ್ಣೆಂದು ತಿಳಿದು ಅದನ್ನು ತೆಗೆದುಕೊಳ್ಳಲು ಮೇಲಕ್ಕೆ ನೆಗೆದನು.

೧೬೫. ವಾಯುವೇಗದಿಂದ ಐನೂರುಯೋಜನದಷ್ಟುದೂರ ಮೇಲಕ್ಕೆ ನೆಗೆದನು. ಆ ದಿನ ಅಮಾವಾಸ್ಯೆಯಾಗಿದ್ದಿತು. ರಾಹುವು ಸೂರ್ಯನನ್ನು ಹಿಡಿಯಲು ಹೋದನು.

೧೬೬. ರಾಹುವು ಹೋದಾಗ ಸೂರ್ಯನನ್ನು ಹಿಡಿಯಲು ಅವನೆದುರಿಗೆ ಈ ಕಪಿಯಿದ್ದುದನ್ನು ನೋಡಿದನು. ಆಗ ಆ ರಾಹುವು ಭಯದಿಂದ ಸೂರ್ಯನನ್ನು ಬಿಟ್ಟು ಇಂದ್ರನನ್ನು ಹಿಡಿಯಲು ಹೊರಟನು.

ರಾಹುಃ ಪ್ರಾಹ ಶಚೀನಾಥಂ ತವ ಪೀಡಾಂ ಕರೋಮ್ಯಹಂ |
ದತ್ತಃ ಪೂರ್ವಂ ತ್ವಯಾ ಸೂರ್ಯಃ ಪೀಡಾಂ ಕರ್ತುಂ ಸುರೇಶ್ವರ ||

ತತ್ರ ವಿಘ್ನಂ ಸಮುತ್ಪನ್ನಂ ತತ್ತ್ವಂ ಶೀಘ್ರಂ ನಿವಾರಯ |
ತದ್ರಾಹುವಚನಾದಿಂದ್ರಸ್ಸಮಾರುಹ್ಯ ಗಜೋಪರಿ || ೧೬೮ ||

ದೇವೈರ್ಯುತೋ ಯಯೌ ವೇಗಾದ್ದದರ್ಶ ಪ್ಲವಗಂ ಪುರಃ |
ತದಾ ಮುಮೋಚ ತಂ ವಜ್ರಂ ಮಘವಾ ಮಾರುತಿಂ ಪ್ರತಿ || ೧೬೯ ||

ವಜ್ರಘಾತಾನ್ಮಾರುತಿಃ ಖಾತ್ ಪಪಾತ ಗಿರಿಕಂದರೇ |
ತದಾ ಭಗ್ನಾ ಹನೂಸ್ತಸ್ಯ ಹನೂಮಾನಿತಿ ವೈ ಯತಃ || ೧೭೦ ||

೧೬೭–೧೬೮ ಆಗ ಆ ರಾಹುವು ಇಂದ್ರನನ್ನು ಕುರಿತು ಎಲೈ ಇಂದ್ರನೆ! ಇದಕ್ಕೆ ಮೊದಲು ಸೂರ್ಯನನ್ನು ಪೀಡಿಸಿ ತಿನ್ನಬೇಕೆಂದು ನೀನೇ ಕಲ್ಪಿಸಿದ್ದೆ. ಅದಕ್ಕೆ ವಿಘ್ನವು ಬಂದಿತು. ಅದನ್ನು ಬೇಗನೆ ನಿವಾರಿಸು. ಇಲ್ಲದಿದ್ದರೆ ನಿನ್ನನ್ನೇ ತಿನ್ನುವೆನು ಎಂದನು. ಆ ರಾಹುವಿನ ಮಾತನ್ನು ಕೇಳಿ ಇಂದ್ರನು ಒಡನೆಯೇ ಐರಾವತದಮೇಲೆ ಕುಳಿತು ಹೊರಟನು.

೧೬೯. ಜೊತೆಯಲ್ಲಿ ದೇವತೆಗಳೂ ಹೊರಟರು. ಸೂರ್ಯನ ಬಳಿಗೆ ಹೋಗಿ ನೋಡಲು ಅಲ್ಲಿ ಆ ಆಂಜನೇಯನೆಂಬ ಕಪಿಯಿದ್ದನು. ಒಡನೆಯೇ ಇಂದ್ರನು ಆ ಕಪಿಯಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು.

೧೭೦. ಆ ವಜ್ರಾಯುಧದ ಏಟಿನಿಂದ ಮಾರುತಿಯು ಅಂತರಿಕ್ಷದಿಂದ ಕೆಳಗೆ ಬೀಳುತ್ತ ಒಂದು ಬೆಟ್ಟದ ಕಿಬ್ಬಿಗೆ ಬಿದ್ದನು. ಆಗ ಅವನ ಒಂದು ಕಪಾಲಕ್ಕೆ ಏಟುಬಿದ್ದು ಅದು ಒಳಕ್ಕೆ ಹೋಯಿತು. ಆಗಿನಿಂದಲೂ ಅವನಿಗೆ ಹನುಮಂತನೆಂದು ಹೆಸರಾಯಿತು.

ಖ್ಯಾತಿಂ ಗತೋಽಯಂ ಸರ್ವತ್ರ ತದಾ ವಾಯುಶ್ಚುಕೋಪ ಹ ।
ಸಾಂತ್ವಯಿತ್ವಾ ಹನೂಮಂತಂ ಸ್ವಯಂ ಸ್ತಬ್ಧೋಽಭವತ್ತದಾ ॥ ೧೭೧ ॥

ವಾಯುಸ್ತಂಭಾಜ್ಜನಾಸ್ಸರ್ವೇ ನಿಪೇತುರ್ಧರಣೀತಲೇ ।
ತ್ರೈಲೋಕ್ಯಂ ಶವವಜ್ಜಾತಂ ಹಾಹಾಕಾರೋಽಭವದ್ದಿವಿ ॥ ೧೭೨ ॥

ತದಾ ಧಿಕ್ಕೃತ್ಯ ದೇವೇಂದ್ರಂ ವೇಧಾ ವಾಯುಂ ಯಯೌ ಜವಾತ್ ।
ಪ್ರಾರ್ಥಯಾಮಾಸ ತಂ ನತ್ವಾ ಪುನರ್ವಾಯುಂ ವಚೋಽಬ್ರವೀತ್ ॥೧೭೩॥

ದೇವೇಂದ್ರಸ್ಯಾಪರಾಧಂ ತ್ವಂ ಕ್ಷಂತುಮರ್ಹಸಿ ಕಂಪನ ।
ತವ ಪುತ್ರಾಯ ದಾಸ್ಯಾಮಿ ವರಾನದ್ಯ ಹನೂಮತೇ ॥ ೧೭೪ ॥

---

೧೭೧. ಮಗನಿಗೆ ಈ ರೀತಿಯಾಗಿ ಪೆಟ್ಟು ಬಿದ್ದುದನ್ನು ನೋಡಿ ವಾಯುವಿಗೆ ಕೋಪಬಂದಿತು. ಆಗ ವಾಯುವು ಹನುಮಂತನ ಬಳಿಗೆ ಬಂದು ಅವನನ್ನು ಸಮಾಧಾನಪಡಿಸಿ ತಾನು ಬೀಸದೆ ಸುಮ್ಮನೆ ನಿಂತು ಬಿಟ್ಟನು.

೧೭೨. ವಾಯುವು ಬೀಸದಿರುವುದರಿಂದ ಜನರು ಉಸಿರಾಡದೆ ನೆಲದಮೇಲೆ ಬಿದ್ದು ಬಿಟ್ಟರು. ಮೂರು ಲೋಕವೂ ಶವದಂತೆ ಆಯಿತು. ಆಗ ಸ್ವರ್ಗದಲ್ಲಿ ಹಾಹಾಕಾರವೆದ್ದಿತು.

೧೭೩. ಆಗ ಬ್ರಹ್ಮನು ದೇವೇಂದ್ರನನ್ನು ಧಿಕ್ಕಾರಮಾಡಿ ಬೈದು ಬೇಗನೆ ವಾಯುವಿನ ಬಳಿಗೆ ಬಂದನು. ಆ ವಾಯುವಿಗೆ ನಮಸ್ಕರಿಸಿ ಪ್ರಾರ್ಥಿಸುತ್ತ ಇಂತೆಂದನು.

೧೭೪. ಎಲೈ ವಾಯುವೆ ! ದೇವೇಂದ್ರನು ಮಾಡಿದ ತಪ್ಪನ್ನು ಕ್ಷಮಿಸು. ನಿನ್ನ ಮಗನಾದ ಹನುಮಂತನಿಗೆ ಈಗ ಬೇಕಾದಂತೆ ವರಗಳನ್ನು ಕೊಡುತ್ತೇನೆ.

ತದಾ ತುಷ್ಟೋಽಭವದ್ವಾಯುಶ್ಚಚಾಲ ಪೂರ್ವವತ್ಪುನಃ ।
ಅಭೂವತ್ಸಂಜೀವಿತಂ ಸರ್ವಂ ತ್ರೈಲೋಕ್ಯಂ ಕ್ಷಣಮಾತ್ರತಃ ॥ ೧೭೫ ॥

ತದಾ ದದೌ ವರಾನ್ ಬ್ರಹ್ಮಾ ಮಾರುತಿಂ ಪುರತಃ ಸ್ಥಿತಂ ।
ಭವಿಷ್ಯಸಿ ತ್ವಮಮರೋ ವಜ್ರದೇಹೋ ವರಾನ್ಮಮ ॥ ೧೭೬ ॥

ತ್ವಂ ವಿಷ್ಣೋರಪಿ ಸಾಹಾಯ್ಯಂ ಕರಿಷ್ಯಸಿ ವರಾನ್ಮಮ ।
ತೇ ಕುಂಠಿತಾ ಗತಿರ್ಮಾಸ್ತು ಕುತ್ರಾಪ್ಯಂಜನಿಸಂಭವ ॥ ೧೭೭ ॥

ಭವಿಷ್ಯತಿ ಹರೌ ಭಕ್ತಿಸ್ತವ ಚಿತ್ಯಮನುತ್ತಮಾ ।
ಇತ್ಯುಕ್ತ್ವಾಂತರ್ದಧೇ ವೇಧಾ ರಾಹುಸ್ಸೂರ್ಯಂ ಯಯೌ ಪುನಃ ॥೧೭೮॥

॥ ಶ್ರೀರಾಮ ಉವಾಚ ॥

ದೇವೇಂದ್ರೇಣ ಕಥಂ ದತ್ತೋ ರವಿಸ್ತಸ್ಮೈ ಸ ರಾಹವೇ ।
ತತ್ಸರ್ವಂ ವಿಸ್ತರೇಣೈವ ಕಥಯಸ್ವ ಮಮಾಗ್ರತಃ ॥ ೧೭೯ ॥

---

೧೭೫. ಇದನ್ನು ಕೇಳಿ ವಾಯುವಿಗೆ ಸಂತೋಷವಾಯಿತು. ಮೊದಲಿನಂತೆಯೇ ಸಂಚಾರಮಾಡಲು ಮೊದಲುಮಾಡಿದನು. ಆಗ ಒಡನೆಯೇ ಮೂರು ಲೋಕಗಳೂ ಕ್ಷಣಕಾಲದಲ್ಲಿ ಜೀವಿಸಿಕೊಂಡೆದ್ದುವು.

೧೭೬-೧೭೮. ಬ್ರಹ್ಮನು ಎದುರಿಗೆ ನಿಂತಿರುವ ಹನುಮಂತನನ್ನು ನೋಡಿ ಇಂತೆಂದು ವರಗಳನ್ನು ಕೊಟ್ಟನು. ಎಲೈ ಹನುಮನೆ ! ನಿನಗೆ ಮರಣವಿರುವುದಿಲ್ಲ ನಿನ್ನ ದೇಹವು ವಜ್ರದೇಹವಾಗುತ್ತದೆ. ನನ್ನ ವರದಿಂದ ನೀನು ವಿಷ್ಣುವಿಗೂ ಸಹಾಯವನ್ನು ಮಾಡುತ್ತೀಯೆ. ನಿನ್ನ ಗಮನವು ಎಲ್ಲಿಯೂ ಕೂಡ ಕಡಿಮೆಯಾಗದಿರಲಿ. ನಿನಗೆ ಹರಿಯಲ್ಲಿ ಉತ್ತಮವಾದ ಭಕ್ತಿಯು ಉಂಟಾಗಲಿ. ಹೀಗೆಂದು ವರಗಳನ್ನು ಕೊಟ್ಟು ಬ್ರಹ್ಮನು ಹೊರಟು ಹೋದನು. ರಾಹುವು ಮತ್ತೆ ಸೂರ್ಯನ ಮೇಲೆ ಬಂದನು.

೧೭೯. ಶ್ರೀರಾಮನು ಹೇಳಿದನು-ಎಲೈ ಮುನಿಯೆ ! ದೇವೇಂದ್ರನು ರಾಹುವಿಗೆ ಸೂರ್ಯನನ್ನು ತಿನ್ನುವುದಕ್ಕೆ ಕೊಡಲು ಕಾರಣವೇನು ? ಅದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು.

॥ ಅಗಸ್ತ್ಯ ಉವಾಚ ॥

ಸುಧಾಪಾನಾದಯಂ ರಾಹುರ್ದೈತ್ಯೋಽಭೂದಮರಸ್ತ್ವಯಂ ।
ಗ್ರಹೋಽಷ್ಟಮೋಽಭವತ್ಸೋಽಪಿ ಯದಾ ವಾಂಛತ್ಯಯಂ ಸುರಾನ್॥೧೮೦॥

ಪೀಡಾಂ ಕರ್ತುಂ ತದಾ ದೇವಾನ್ ಸೂರ್ಯಂ ಸೋಮಂ ದದಂತಿ ಹಿ ।
ಜ್ಞಾತ್ವಾ ಧರ್ಮೈರ್ಜನಾಸ್ಸರ್ವೇ ನಿಜಕರ್ಮಾದಿ ಹೇತವೇ ॥ ೧೮೧ ॥

ಮೋಚಯಿಷ್ಯಂತಿ ರಾಹೋಶ್ಚ ಶಶಿನಂ ಭಾಸ್ಕರಂ ಪ್ರತಿ ।
ಯದಾ ಯದಾ ಭವತ್ಯತ್ರೋಪರಾಗೋ ಜಗತೀತಲೇ ॥ ೧೮೨ ॥

ತದಾ ತದಾ ಜನಾ ಧರ್ಮೈರ್ನಿಜಗತ್ಯರ್ಥಂ ಮಾದರಾತ್ ।
ತೋಷಯಿತ್ವಾ ಸದಾ ರಾಹುಂ ತೌ ತಸ್ಮಾನ್ಮೋಚಯಂತಿ ಹಿ ॥ ೧೮೩ ॥

ಏತತ್ಸರ್ವಂ ಮಯಾ ಪ್ರೋಕ್ತಮುಪರಾಗಸ್ಯ ಕಾರಣಂ ।
ಜನ್ಮ ಕರ್ಮ ವರಾದಾನಂ ಮಾರುತೇಶ್ಚಾಪಿ ವಿಸ್ತರಾತ್ ॥ ೧೮೪ ॥

---

೧೮೦. ಅಗಸ್ತ್ಯನು ಹೇಳಿದನು–ಈ ರಾಹುವು ರಾಕ್ಷಸನು. ಅಮೃತವನ್ನು ಕುಡಿದುದರಿಂದ ಅಮರನಾದನು. ಗ್ರಹಗಳ ಜೊತೆಯಲ್ಲಿ ಸೇರಿಕೊಂಡು ಎಂಟನೆಯ ಗ್ರಹವೂ ಆದನು. ದೇವತೆಗಳನ್ನೂ ತೊಂದರೆಪಡಿಸಲು ಬಂದಾಗ ಇಂದ್ರನು ಸೂರ್ಯಚಂದ್ರರನ್ನು ತಿನ್ನುವಂತೆ ನಿಯಮಿಸಿದನು.

೧೮೧–೧೮೩. ಧರ್ಮವನ್ನು ಮಾಡತಕ್ಕವರು ತಮ್ಮ ಕರ್ಮಗಳಿಗೆ ಕಾರಣರಾದ ಸೂರ್ಯಚಂದ್ರರಿಗೆ ಈ ತೊಂದರೆ ಬರುವುದನ್ನು ತಿಳಿದು ತಮ್ಮ ಧರ್ಮಗಳನ್ನು ಕೊಟ್ಟು ರಾಹುವಿನ ದೆಸೆಯಿಂದ ಚಂದ್ರಸೂರ್ಯರನ್ನು ಬಿಡಿಸುತ್ತಾರೆ. ರಾಹು ಕೇತುಗಳು ಸೂರ್ಯಚಂದ್ರರನ್ನು ತೊಂದರೆಪಡಿಸಲು ಬಂದಾಗಲೆಲ್ಲಾ ಜನರು ತಮ್ಮ ತಮ್ಮ ಧರ್ಮಗಳನ್ನು ಆದರದಿಂದ ಕೊಡುತ್ತಾರೆ. ಇದರಿಂದ ರಾಹುವು ಸಂತೋಷಪಡುವಂತೆ ಮಾಡಿ ಅವನಿಂದ ಆ ಸೂರ್ಯಚಂದ್ರರನ್ನು ಬಿಡಿಸುತ್ತಾರೆ.

೧೮೪. ಈ ಗ್ರಹಣಕ್ಕೆ ಕಾರಣವಾದ ವಿಷಯವೆಲ್ಲವನ್ನೂ ಹೇಳಿದ್ದೇನೆ. ಮಾರುತಿಯ ಜನ್ಮ ಅವನ ಕರ್ಮ ಅವನಿಗೆ ಬಂದ ವರಗಳು ಎಲ್ಲವನ್ನೂ ವಿಸ್ತಾರವಾಗಿ ಹೇಳಿದ್ದೇನೆ.

ಅತಸ್ತದ್ಬಲಮಾಹಾತ್ಮ್ಯಂ ಕೋ ವಾ ಶಕ್ನೋತಿ ವರ್ಣಿತುಂ ।
ಸ ಏಕದಾ ಮುನೀನಾಂ ಹಿ ಚಾಶ್ರಮೇಷು ಕುಶಾದಿಕಾನ್ ॥ ೧೮೫ ॥

ಚಕಾರೇತಸ್ತತಸ್ಸರ್ವಾನ್ ಧರ್ಷಯನ್ ಮುನಿಬಾಲಕಾನ್ ।
ತಸ್ಯ ತತ್ಕರ್ಮ ಮುನಿಭಿರ್ದೃಷ್ಟ್ವಾ ಶಪ್ತೋಽಂಜನೀಸುತಃ ॥ ೧೮೬ ॥

ಅದ್ಯಾರಭ್ಯ ಕಪಿಶ್ರೇಷ್ಠ ನ ಜ್ಞಾಸ್ಯಸಿ ಸ್ವಪೌರುಷಂ ।
ಯದಾನ್ಯಸ್ಯ ಮುಖಾತ್ಸ್ವೀಯಂ ಬಲಂ ಶ್ರೋಷ್ಯಸಿ ವಿಸ್ತರಾತ್ ॥ ೧೮೭ ॥

ಭವಿಷ್ಯತಿ ತದಾ ಪೂರ್ವಸ್ಮೃತಿಸ್ತೇ ಪೌರುಷಂ ಪುನಃ ।
ಅತಸ್ಸುಗ್ರೀವಸಾನ್ನಿಧ್ಯೇ ವಿಸ್ಮೃತಃ ಸ್ವಪರಾಕ್ರಮಃ ॥ ೧೮೮ ॥

ಯದಾ ಸ್ತುತೋ ಜಾಂಬವತಾ ಪುರಾ ಪ್ರಾಯೋಪವೇಶನೇ ।
ತದಾ ಸ್ಮೃತಿಸ್ತಸ್ಯ ಜಾತಾ ಸ್ವಬಲಸ್ಯ ಹನೂಮತಃ ॥ ೧೮೯ ॥

೧೮೫–೧೮೬. ಇಂತಹ ಮಾರುತಿಯ ಬಲವನ್ನು ಯಾವನು ತಾನೆ ವರ್ಣಿಸಲು ಸಾಧ್ಯವಾದೀತು ? ಹೀಗಿರುತ್ತಿರಲು ಈ ಮಾರುತಿಯು ಋಷಿಗಳ ಆಶ್ರಮದಲ್ಲಿ ಓಡಾಡುತ್ತ ಮುನಿಬಾಲಕರನ್ನು ಹೆದರಿಸುತ್ತ ಅಲ್ಲಿರುವ ದರ್ಭೆ ಸಮಿತ್ತುಗಳನ್ನೆಲಾ ಚೆಲ್ಲಾಪಿಲ್ಲಿಯಾಗುವಂತೆ ಕಿತ್ತೊಗೆಯುತ್ತಿದ್ದನು. ಆಂಜನೇಯನ ಈ ಕೆಲಸವನ್ನು ಋಷಿಗಳು ನೋಡಿ ಈ ರೀತಿಯಾಗಿ ಶಪಿಸಿದರು.

೧೮೭–೧೮೮. ಎಲೈ ಕಪಿಶ್ರೇಷ್ಠನೆ ! ಇಂದಿನಿಂದ ಮೊದಲುಗೊಂಡು ನಿನ್ನ ಬಲವು ನಿನಗೆ ತಿಳಿಯದೆ ಹೋಗಲಿ. ನೀನು ನಿನ್ನ ಪೌರುಷವನ್ನು ಮತ್ತೊಬ್ಬರ ಬಾಯಿಂದ ಕೇಳಿದಾಗ ಪೂರ್ವದ ವಿಷಯವು ಗೊತ್ತಾಗಿ ನಿನ್ನ ಪೌರುಷದ ಜ್ಞಾಪಕವು ಬರಲಿ. ಎಂದು ಈ ರೀತಿಯಾಗಿ ಶಪಿಸಿದ್ದುದರಿಂದ ಸುಗ್ರೀವನ ಬಳಿಯಲ್ಲಿ ಅವನ ಪರಾಕ್ರಮವು ಮರೆತು ಹೋಗಿದ್ದಿತು.

೧೮೯. ಪೂರ್ವದಲ್ಲಿ ಕಪಿಗಳು ಪ್ರಾಯೋಪವೇಶಮಾಡಿದಾಗ ಜಾಂಬವಂತನು ಅವನ ಕರ್ಮವನ್ನು ಹೊಗಳಿದುದರಿಂದ ಆಗ ಹನುಮಂತನಿಗೆ ಅವನ ಬಲದ ಜ್ಞಾಪಕವು ಉಂಟಾಯಿತು.

ಏತತ್ತೇ ಸರ್ವಮಾಖ್ಯಾತಂ ತ್ವಯಾ ಪೃಷ್ಟಂ ಮಯಾ ತವ ।
ಯಥಾ ತಥಾ ಸವಿಸ್ತಾರಂ ಕಪಿರಾವಣಚೇಷ್ಟಿತಂ ॥ ೧೯೦ ॥

ರಾಮ ತ್ವಂ ಪರಮೇಶ್ವರೋಸಿ ಸಕಲಂ ಜಾನಾಸಿ ವಿಜ್ಞಾನದೃಕ್
ಭೂತಂ ಭವ್ಯಮಿದಂ ತ್ರಿಕಾಲಕಲನಾಸಾಕ್ಷೀ ವಿಕಲ್ಪೋಜ್ಝಿತಃ ।
ಭಕ್ತಾನಾಮನುವರ್ತನಾಯ ಸಕಲಾಂ ಕುರ್ವನ್ ಕ್ರಿಯಾಸಂಹತಿಂ
ಚಾಶೃಣ್ವನ್ ಮನುಜಾಕೃತಿರ್ಮಮಮುಚೋ ಭಾಸೀಶ ಲೋಕಾರ್ಚಿತಃ ॥

॥ ಶ್ರೀ ಶಿವ ಉವಾಚ ॥

ಸ್ತುತ್ವೈವಂ ರಾಘವಂ ತೇನ ಪೂಜಿತಃ ಕುಂಭಸಂಭವಃ ।
ಸ್ವಾಶ್ರಮಂ ಮುನಿಭಿಸ್ಸಾರ್ಧಂ ಪ್ರಯಯೌ ಗುಪ್ತವಿಗ್ರಹಃ ॥ ೧೯೨ ॥

---

೧೯೦. ಎಲೈ ರಾಮನೆ ! ನೀನು ಕೇಳಿದುದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಕಪಿಯ ಮತ್ತು ರಾವಣನ ಈ ಕೃತ್ಯಗಳ ವಿಷಯವನ್ನೆಲ್ಲಾ ವಿಸ್ತಾರವಾಗಿ ಹೇಳಿದ್ದೇನೆ.

೧೯೧. ಎಲೈ ರಾಮನೆ! ನೀನು ಪರಮೇಶ್ವರನು. ಜ್ಞಾನದೃಷ್ಟಿಯುಳ್ಳವನು. ನೀನು ಎಲ್ಲವನ್ನೂ ತಿಳಿದಿದ್ದೀಯೆ. ಭೂತ ಭವಿಷ್ಯತ್ತು ವರ್ತಮಾನ ಕಾಲಗಳಲ್ಲಿ ನಡೆಯುವುದನ್ನು ಬಲ್ಲವನಾಗಿ ತ್ರಿಕಾಲಕ್ಕೂ ಸಾಕ್ಷಿಯಾಗಿದ್ದೀಯೆ. ನಿನಗೆ ವಿಕಲ್ಪವೆಂಬುದೇ ಇಲ್ಲ. ಭಕ್ತರು ನನ್ನಂತೆ ಮಾಡಲಿ ಎಂದು ತೋರಿಸಲು ಕ್ರಿಯಾ ಕಲಾಪಗಳನ್ನು ಮಾಡುತ್ತಿದ್ದೀಯೆ. ನೀನು ಮನುಷ್ಯಾಕಾರದಲ್ಲಿದ್ದುಕೊಂಡು ನನ್ನ ಮಾತನ್ನು ಕೇಳುತ್ತಿರುವನಂತೆ ಎಲ್ಲರಿಗೂ ತೋರ್ಪಡಿಸುತ್ತಿದ್ದೀಯೆ. ಎಲೈ ಈಶನೇ ! ನೀನು ಲೋಕಪೂಜ್ಯನು.

೧೯೨. ಶ್ರೀ ಶಿವನು ಹೇಳಿದನು–ಅಗಸ್ತ್ಯನು ರಾಮನನ್ನು ಈ ರೀತಿಯಾಗಿ ಸ್ತುತಿಸಿ ಅವನಿಂದ ಗೌರವಿತನಾದನು. ಮತ್ತು ಮುನಿಗಳೊಡನೆ ತನ್ನ ಆಶ್ರಮಕ್ಕೆ ಹೊರಟುಹೋದನು.

ವಿಂಧ್ಯಾಚಲಂ ನಿಜಂ ರೂಪಂ ಸ ಮುನಿರ್ನೈವ ದರ್ಶಯತ್ ।
ಪುನರುತ್ಥಾಸ್ಯತಿ ಗಿರಿಸ್ಸರ್ವದಾ ಚೇತಿ ತದ್ಭಯಾತ್ ॥ ೧೯೩ ॥

ರಾಮಸ್ತು ಸೀತಯಾ ಸಾರ್ಧಂ ಭ್ರಾತೃಭಿಸ್ಸಹ ಮಂತ್ರಿಭಿಃ ।
ಸಂಸಾರೀವ ರಮಾನಾಥೋ ರಮಮಾಣೋಽವಸದ್ಗೃಹೇ ॥ ೧೯೪ ॥

ಅನಾಸಕ್ತೋಽಪಿ ವಿಷಯಾನ್ ಬುಭುಜೇ ಪ್ರಿಯಯಾ ಸಹ ।
ಹನೂಮತ್ಪ್ರಮುಖೈಸ್ಸದ್ಭಿರ್ವಾನರೈಃ ಪರಿಸೇವಿತಃ ॥ ೧೯೫ ॥

ರಾಘವೇ ಶಾಸತಿ ಭುವಂ ಲೋಕನಾಥೇ ರಮಾಪತೌ ।
ವಸುಧಾ ಸಸ್ಯಸಂಪನ್ನಾ ಫಲವಂತಶ್ಚ ಭೂರುಹಾಃ ॥ ೧೯೬ ॥

ಜನಾಃ ಸ್ವಧರ್ಮನಿರತಾಃ ಪತಿಭಕ್ತಿಪರಾಃ ಸ್ತ್ರಿಯಃ ।
ನಾಪಶ್ಯತ್ಪುತ್ರಮರಣಂ ಕಶ್ಚಿದ್ರಾಜನಿ ರಾಘವೇ ॥ ೧೯೭ ॥

---

೧೯೩. ಈ ಮುನಿಯು ವಿಂಧ್ಯಪರ್ವತಕ್ಕೆ ತನ್ನ ನಿಜರೂಪವನ್ನು ತೋರಿಸಲಿಲ್ಲ. ಆ ಪರ್ವತವು ಮತ್ತೆಲ್ಲಿ ಮೇಲಕ್ಕೇಳುವುದೋ ಎಂಬ ಭಯದಿಂದ ಕಾಣದಂತಾದನು.

೧೯೪–೧೯೫. ರಾಮನು ತಮ್ಮಂದಿರೊಡನೆಯೂ, ತಾಯಿಯರೊಡನೆಯೂ, ಸೀತೆಯೊಡನೆಯೂ, ಬಂಧುಗಳೊಡನೆಯೂ, ಅರಮನೆಯಲ್ಲಿ ಸಂಸಾರಿಯಂತಿರುತ್ತ ಸುಖವಾಗಿರುತ್ತಿದ್ದನು. ವಿಷಯಗಳಲ್ಲಿ ಅನಾಸಕ್ತನಾಗಿದ್ದರೂ, ಆಸಕ್ತನಾಗಿರುವನಂತೆ ಹೆಂಡತಿಯೊಡನೆ ಸುಖವನ್ನು ಅನುಭವಿಸುತ್ತಿದ್ದನು. ಹನುಮಂತನೇ ಮುಂತಾದವರು ಅವನನ್ನು ಸೇವಿಸುತ್ತಿದ್ದರು.

೧೯೬. ಲೋಕನಾಥನೂ ರಮಾಪತಿಯೂ ಆದ ರಾಘವನು ಭೂಮಿಯನ್ನು ಆಳುತ್ತಿರುವಾಗ ಭೂಮಿಯು ಸಸ್ಯಪೂರ್ಣವಾಗಿದ್ದಿತು. ಮರಗಳೆಲ್ಲವೂ ಫಲವನ್ನು ತಪ್ಪದೆ ಬಿಡುತ್ತಿದ್ದುವು.

೧೯೭. ಜನಗಳು ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾಗಿದ್ದರು. ಹೆಂಗಸರು ಗಂಡಂದಿರಲ್ಲಿ ಭಕ್ತಿಯುಳ್ಳವರಾಗಿದ್ದರು. ರಾಘವನು ರಾಜನಾಗಿದ್ದಾಗ ಯಾವನೂ ಕೂಡ ಪುತ್ರಮರಣವನ್ನು ಕಾಣುತ್ತಿರಲಿಲ್ಲ.

ಸಮಾರುಹ್ಯ ವಿಮಾನಾಗ್ರ್ಯಂ ರಾಘವಸ್ಸೀತಯಾ ಸಹ ।
ವಾನರೈರ್ಭ್ರಾತೃಭಿಸ್ಸಾರ್ಧಂ ಸಂಚಚಾರಾವನಿಂ ಪ್ರಭುಃ ॥ ೧೯೮ ॥

ಅಮಾನುಷಾಣಿ ಕರ್ಮಾಣಿ ಚಕಾರ ಬಹುಶೋ ಭುವಿ ।
ಲೋಕಾನಾಮುಪದೇಶಾರ್ಥಂ ಪರಮಾತ್ಮಾ ರಘೂತ್ತಮಃ ॥ ೧೯೯ ॥

ಕೋಟಿಶಶ್ಶಿವಲಿಂಗಾನಿ ಸ್ಥಾಪಯಾಮಾಸ ಸರ್ವಶಃ ।
ಅಶ್ವಮೇಧಾದಿ ವಿವಿಧಾನ್ ಯಜ್ಞಾನ್ ವಿಪುಲದಕ್ಷಿಣಾನ್ ॥ ೨೦೦ ॥

ಚಕಾರ ಪರಮಾನಂದೋ ಮಾನುಷಂ ವಪುರಾಸ್ಥಿತಃ ।
ಸೀತಾಂ ತಾಂ ರಮಯಾಮಾಸ ಸರ್ವಭೋಗೈರಮಾನುಷೈಃ ॥ ೨೦೧ ॥

ಶಶಾಸ ರಾಮೋ ಧರ್ಮೇಣ ರಾಜ್ಯಂ ಪರಮಧರ್ಮವಿತ್ ।
ಕಥಾಸ್ಸಂಸ್ಥಾಪಯಾಮಾಸ ಸರ್ವಲೋಕಮಲಾಪಹಾಃ ॥ ೨೦೨ ॥

---

೧೯೮. ರಾಮನು ಸೀತೆಯನ್ನೂ ಸಹೋದರರನ್ನೂ ಕಪಿಗಳನ್ನೂ ಪುಷ್ಪಕದಲ್ಲಿ ಕೂರಿಸಿಕೊಂಡು ಭೂಮಿಯಲ್ಲೆಲ್ಲಾ ಸುತ್ತುತ್ತಿದ್ದನು.

೧೯೯. ಭೂಮಿಯಲ್ಲಿ ಮನುಷ್ಯರ ಕೈಯ್ಯಲ್ಲಿ ಮಾಡಲಾಗದ ಅನೇಕ ಕೆಲಸಗಳನ್ನು ಮಾಡಿದನು. ಇದೆಲ್ಲವನ್ನೂ ಲೋಕದ ಅನುಗ್ರಹಾರ್ಥವಾಗಿಯೂ ಉಪದೇಶಾರ್ಥವಾಗಿಯೂ ಅವನು ಮಾಡುತ್ತಲಿದ್ದನು.

೨೦೦–೨೦೧. ಶಿವಲಿಂಗಗಳನ್ನು ಕೋಟಿಗಟ್ಟಲೆಯಲ್ಲಿ ಸ್ಥಾಪಿಸಿದನು. ಬಹುವಾಗಿ ದಕ್ಷಿಣೆಗಳನ್ನು ಕೊಟ್ಟು ಅಶ್ವಮೇಧವೇ ಮುಂತಾದ ಯಾಗಗಳನ್ನು ಬಹುವಾಗಿ ಮಾಡಿದನು. ಇನ್ನೂ ಅನೇಕ ಕೆಲಸಗಳನ್ನು ಈ ಮನುಷ್ಯ ರೂಪಿನಿಂದ ಆನಂದದಿಂದ ಬಹುವಾಗಿ ಮಾಡಿದನು. ಅಮಾನುಷವಾದ ಅನೇಕವಿಧವಾದ ಭೋಗಗಳಿಂದ ಆ ಸೀತೆಯನ್ನು ಸಂತೋಷಪಡಿಸಿದನು.

೨೦೨. ಧರ್ಮದ ನೆಲೆಯನ್ನು ಬಲ್ಲ ಶ್ರೀರಾಮನು ಧರ್ಮದಿಂದ ರಾಜ್ಯವನ್ನು ಆಳಿದನು. ಸಮಸ್ತ ಜನಗಳಿಗೂ ಪಾಪಾಪಹಾರಕವಾದ ತನ್ನ ಕಥೆಗಳು ಲೋಕದಲ್ಲಿರುವಂತೆ ಮಾಡಿದನು.

ಏಕಾದಶಸಹಸ್ರಾಣಿ ಸೈಕಾದಶ ಸಮಾನಿ ಚ ।
ತ್ರೇತಾಯುಗ ಭವಾನ್ಯೇವ ವರ್ಷಾಣಿ ರಘುನಂದನಃ ॥ ೨೦೩ ॥

ಚಕಾರ ರಾಜ್ಯಂ ಧರ್ಮೇಣ ಲೋಕವಂದ್ಯ ಪದಾಂಬುಜಃ ।
ಕಲೇರ್ಮಾನೇನ ಜ್ಞೇಯಾನಿ ಲಕ್ಷಾಣ್ಯೈಕಾದಶೈವ ಹಿ ॥ ೨೦೪ ॥

ಸೈಕಾದಶ ಶತಾನ್ಯತ್ರ ರಾಮೋ ರಾಜ್ಯಂ ಚಕಾರ ಸಃ ।
ಏಕಪತ್ನೀವ್ರತೋ ರಾಮೋ ರಾಜರ್ಷಿಃ ಸರ್ವದಾ ಶುಚಿಃ ॥ ೨೦೫ ॥

ಯಸ್ಯೈಕಮೇವ ತಚ್ಚಾಸೀತ್ಪತ್ನೀ ವಾಕ್ಯಂ ಶರಸ್ತಥಾ ।
ಗೃಹಮೇಧೀಯಮಖಿಲಮಾಚರಚ್ಛಿಕ್ಷಯಾಕ್ಷರಂ ॥ ೨೦೬ ॥

ಸೀತಾ ಪ್ರೇಮ್ಣಾನುವೃತ್ತ್ಯಾ ಚ ಪ್ರಶ್ರಯೇಣ ದಮೇನ ಚ ।
ಭರ್ತುರ್ಮನೋಹರಾ ಸಾಧ್ವೀ ಭಾವಜ್ಞಾ ಸಾ ಹ್ರಿಯಾ ಭಿಯಾ॥ ೨೦೭ ॥

೨೦೩–೨೦೪. ಲೋಕವಂದ್ಯವಾದ ಪಾದ ಪದ್ಮಗಳುಳ್ಳ ಆ ರಾಮನು ತ್ರೇತಾಯುಗದಲ್ಲಿ ತ್ರೇತಾಯುಗದಲೆಕ್ಕದ ಹನ್ನೊಂದುಸಾವಿರದ ಹನ್ನೊಂದು ವರ್ಷಗಳವರೆಗೆ ರಾಜ್ಯಭಾರಮಾಡಿದನು. ಈ ಕಲಿಯುಗದ ರೀತಿಯಿಂದ ಆ ರಾಮನು ಹನ್ನೊಂದುಸಾವಿರದ ಹನ್ನೊಂದು ಲಕ್ಷವರ್ಷಗಳವರೆಗೂ ರಾಜ್ಯ ವಾಳಿದನು. ಆ ರಾಮನು ಏಕಪತ್ನೀವ್ರತಸ್ಥನಾಗಿ ಶುಚಿರ್ಭೂತನಾಗಿ ರಾಜರ್ಷಿ ಯಾಗಿದ್ದನು.

೨೦೫–೨೦೬. ಆ ರಾಮನು ರಾಜ್ಯವಾಳುತ್ತಿದ್ದಾಗ ಹೆಂಡತಿಯೂ ಮಾತೂ ಶರವೂ ಒಂದೇ ಆಗಿದ್ದುವು. ಎಂದರೆ ಹೆಂಡತಿಯೂ ಒಬ್ಬಳೆ. ಆಡಿದಮಾತೂ ಒಂದೇ. ಎಂದರೆ ಬದಲಾಯಿಸುತ್ತಿರಲಿಲ್ಲ. ಬಾಣವೂ ಒಂದೇ. ಎಂದರೆ ಒಂದೇ ಬಾಣದಿಂದ ಸಂಹರಿಸುತ್ತಿದ್ದನು. ಈ ರಾಮನು ತನ್ನ ಆಚರಣೆಯಿಂದಲೇ ಗೃಹಸ್ಥಧರ್ಮವನ್ನು ನಶ್ವರರಾದ ಜನರು ವಾಕ್ಯಗಳನ್ನಾಗಿ ಮಾಡಿಕೊಳ್ಳುವಂತೆ ನಡೆಸಿದನು.

೨೦೭–೨೦೮. ಸೀತೆಯೂ ಕೂಡ ಗಂಡನಲ್ಲಿ ಪ್ರೀತಿಯಿಂದಲೂ ಅನುಸರಣೆ ಯಿಂದಲೂ, ನಮ್ರತೆಯಿಂದಲೂ, ಇಂದ್ರಿಯ ನಿಗ್ರಹದಿಂದಲೂ, ಗಂಡನ

ಯುಕ್ತಾ ತಂ ರಂಜಯಾಮಾಸ ರಾಜಾನಂ ರಾಘವಂ ಮುದಾ ।
ಏವಂ ಗಿರೀಂದ್ರಜೇ ಪ್ರೋಕ್ತಂ ರಾಮರಾಜ್ಯೋತ್ತರೋದ್ಭವಂ ॥ ೨೦೮ ॥

ಚರಿತಂ ರಘುನಾಥಸ್ಯ ಯಥಾ ಪೃಷ್ಟಂ ತ್ವಯಾ ಮಮ ।
ಶ್ರವಣಾತ್ಸರ್ವಪಾಪಘ್ನಂ ಮಹಾಮಂಗಳಕಾರಕಂ ॥ ೨೦೯ ॥

ಸಾರಕಾಂಡಮಿದಂ ದೇವಿ ಯೇ ಶೃಣ್ವಂತಿ ನರೋತ್ತಮಾಃ ।
ತೇಷಾಂ ಮನೋರಥಾಸ್ಸರ್ವೇ ಪರಿಪೂರ್ಣಾ ಭವಂತಿ ಹಿ ॥ ೨೧೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಸಾರಕಾಂಡೇ ಅಗಸ್ತ್ಯರಾಮ ಶಿವಪಾರ್ವತೀ ಸಂವಾದೇ ತ್ರಯೋದಶಸ್ಸರ್ಗಸ್ಸಮಾಪ್ತಃ

॥ ಸಾರಕಾಂಡಃ ಪ್ರಥಮಃ ಸಂಪೂರ್ಣಃ ॥

ಶ್ರೀರಾಮಚಂದ್ರಾರ್ಪಣಮಸ್ತು

ಮನಸ್ಸಿನಂತೆ ನಡೆಯುತ್ತಾ, ಅವನ ಮನಸ್ಸನ್ನು ಅಪಹರಿಸುತ್ತಾ, ಅವನ ಅಭಿಪ್ರಾಯದಂತೆ ತಿಳಿದು ನಡೆಯುತ್ತಾ ನಾಚಿಕೆಯಿಂದಲೂ, ಹೆದರಿಕೆಯಿಂದಲೂ ಇದ್ದುಕೊಂಡು ಸೇವಿಸುತ್ತಿದ್ದಳು. ಈ ರೀತಿಯಾಗಿ ರಾಜನಾದ ರಾಮನನ್ನು ರಂಜಿಸುತ್ತಿದ್ದಳು. ಎಲೈ ಗಿರೀಂದ್ರಜೆಯೇ! ರಾಮರಾಜ್ಯದ ಮುಂದಿನ ಸ್ಥಿತಿಯನ್ನು ಹೀಗೆ ವಿಸ್ತರಿಸಿ ಹೇಳಿದ್ದೇನೆ.

೨೦೯–೨೧೦ ನೀನು ಕೇಳಿದಂತೆ ರಾಮನ ಚರಿತ್ರೆಯನ್ನು ಹೇಳಿದ್ದೇನೆ. ಇದನ್ನು ಕೇಳುವುದರಿಂದಲೇ ಇದು ಎಲ್ಲಾ ಪಾಪಗಳನ್ನೂ ನಾಶಮಾಡುತ್ತದೆ. ಬಹು ಮಂಗಳಕರವಾದುದು. ಎಲೈ ದೇವಿಯೆ! ಈ ಸಾರಕಾಂಡವನ್ನು ಯಾರು ಕೇಳುವರೋ ಅವರ ಮನೋರಥಗಳು ಪರಿಪೂರ್ಣವಾಗುತ್ತವೆ.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಸಾರಕಾಂಡದ ಅಗಸ್ತ್ಯರಾಮ ಶಿವ ಪಾರ್ವತಿಯರ ಸಂವಾದದಲ್ಲಿ ಹದಿಮೂರನೆಯ ಸರ್ಗವು ಮುಗಿದುದು.

॥ ಮೊದಲನೆಯದಾದ ಸಾರಕಾಂಡವು ಮುಗಿದುದು ॥

ಶ್ರೀರಾಮಚಂದ್ರಾರ್ಪಣವಾಗಲಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಸಾರಕಾಂಡದಲ್ಲಿ

॥ ಹದಿಮೂರನೆಯ ಸರ್ಗದ ಸಾರಾಂಶವು ॥

ರಾವಣನನ್ನು ಕೊಂದು ಸೀತೆಯನ್ನು ಹೊಂದಿ ರಾಜ್ಯಭಾರವನ್ನು ವಹಿಸಿಕೊಂಡು ಕೃತಕೃತ್ಯನಾಗಿರುವ ಶ್ರೀರಾಮನನ್ನು ಅಭಿನಂದಿಸಲು ಋಷಿಗಳೆಲ್ಲರೂ ಬಂದರು. ಪರಸ್ಪರ ಕುಶಲ ಪ್ರಶ್ನೆಗಳಾದುವು. ಆಗ ಋಷಿಗಳು ಮೇಘನಾದನನ್ನು ಕೊಂದು ಬಹು ಅದ್ಭುತ ಕೆಲಸವನ್ನು ಮಾಡಿದೆ! ಎಂದೆನಲು ರಾಮನು ಅವರನ್ನು ಕುರಿತು ಶಕ್ತನೂ ಲೋಕಕಂಟಕನೂ ಆದ ರಾವಣನನ್ನು ಕೊಂದುದು ಆದ್ಭುತವೆಂದು ಕೇಳದೆ ಮೇಘನಾದನ ವಿಷಯವನ್ನೇಕೆ ಕೇಳುವಿರಿ? ಎಂದನು. ಅದಕ್ಕೆ ಅಗಸ್ತ್ಯನು ಇಂತೆಂದನು.

“ಎಲೈ ರಾಮನೇ! ಮೇಘನಾದನು ಬಹು ಬಲಶಾಲಿಯು. ಆತನ ಕೃತ್ಯಗಳನ್ನು ಹೇಳುತ್ತೇನೆ ಕೇಳು. ಬ್ರಹ್ಮನಿಗೆ ಪುಲಸ್ತ್ಯನೆಂಬ ಮಗನಿರುವನು. ಅವನಿಗೆ ವಿಶ್ರವಸು ಎಂಬ ಒಬ್ಬ ಮಗನಾದನು ಆ ವಿಶ್ರವಸ್ಸಿಗೆ ವೈಶ್ರವಣನೆಂಬ ಮಗನಾದನು. ಅವನಿಗೆ ಕುಬೇರನೆಂಬ ಹೆಸರು ಪ್ರಸಿದ್ಧವಾಗಿರುವುದು. ಅವನು ತಪಸ್ಸನ್ನು ಮಾಡಿ ಬ್ರಹ್ಮನನ್ನು ಸಂತೋಷಗೊಳಿಸಲು ಅವನ ಮನಸ್ಸಿನಲ್ಲಿರುವುದನ್ನು ತಿಳಿದು ಅದರಂತೆ ಪ್ರಯಾಣಮಾಡುವ ಒಂದು ಪುಷ್ಪಕವಿಮಾನವನ್ನು ಕೊಟ್ಟನು. ಆಗ ಕುಬೇರನು ಪುಷ್ಪಕವಿಮಾನದಲ್ಲಿ ಕುಳಿತು ತಂದೆಯ ಬಳಿಗೆ ಹೋಗಿ ತನಗೆ ವಾಸಮಾಡಲು ಒಂದು ಸ್ಥಳವನ್ನು ಕೇಳಿದನು. ಅದಕ್ಕೆ ಅವನು ಸಾಗರದ ಮಧ್ಯದಲ್ಲಿ ವಿಶ್ವಕರ್ಮನಿಂದ ನಿರ್ಮಿತವಾದ ವಿಷ್ಣುವಿನ ಭಯದಿಂದ ದೈತ್ಯರು ಬಿಟ್ಟುಬಿಟ್ಟಿರುವ ಲಂಕೆಯಲ್ಲಿ ಹೋಗಿ ವಾಸಿಸುವಂತೆ ಹೇಳಿದನು. ಅಂತೆಯೇ ಹೋಗಿ ಅವನು ಅಲ್ಲಿದ್ದುಕೊಂಡಿದ್ದನು. ಒಂದುಸಾರಿ ಸುಮಾಲಿ ಎಂಬ ರಾಕ್ಷಸನು ಮಗಳೊಡನೆ ಭೂಲೋಕದಲ್ಲಿ ಸಂಚರಿಸುತ್ತ ಈ ಕುಬೇರನ ಔತ್ಕೃಷ್ಟ್ಯವನ್ನು ನೋಡಿ ರಾಕ್ಷಸರಿಗೂ ಈ ರೀತಿಯಾಗಿ ಒಳ್ಳೆಯದನ್ನು ಮಾಡಬೇಕೆಂಬ ಮನಸ್ಸಿನಿಂದ ಮಗಳಾದ ಕೈಕಸಿಯನ್ನು ಕುರಿತು ವಿಶ್ರವಸ್ಸಿನಿಂದ ಉತ್ತಮರಾದ ಮಕ್ಕಳನ್ನು ಪಡೆಯುವಂತೆ ಹೇಳಿಕಳುಹಿಸಿದನು.

ಆಕೆಯು ಸಂಧ್ಯಾಕಾಲದಲ್ಲಿ ಆ ವಿಶ್ರವಸ್ಸಿನ ಬಳಿಗೆ ಹೋಗಿ ಕೇಳಿಕೊಳ್ಳಲು ದಾರುಣರಾದ ಮಕ್ಕಳಾಗುವಂತೆ ವರವನ್ನು ಕೊಟ್ಟನು. ಕೊನೆಗೆ ಆಕೆಯ ಪ್ರಾರ್ಥನೆಯಂತೆ ಕೊನೆಗೆ ಒಬ್ಬ ಯೋಗ್ಯನಾದ ಮಗನನ್ನು ಅನುಗ್ರಹಿಸಿದನು. ರಾವಣ, ಕುಂಭಕರ್ಣ, ಕ್ರೌಂಚಿ, ಶೂರ್ಪಣಖಿ, ಕುಂಭೀನಸೀ, ವಿಭೀಷಣ ಎಂಬುದಾಗಿ ಕ್ರಮವಾಗಿ ಮಕ್ಕಳಾದರು. ಇವರಲ್ಲಿ ರಾವಣ, ಕುಂಭಕರ್ಣರೆಂಬ ಗಂಡುಮಕ್ಕಳೂ ಕ್ರೌಂಚಿ, ಶೂರ್ಪಣಖಿ, ಕುಂಭೀನಸಿ ಎಂಬ ಹೆಣ್ಣುಮಕ್ಕಳೂ ಪ್ರಾಣಿಗಳನ್ನು ತಿನ್ನುತ್ತ ಹಿಂಸಕರಾದರು.

ಹೀಗಿರುತ್ತಿರಲು ತಾಯಿಯಾದ ಕೈಕಸಿಯು ಶಿವನ ಆತ್ಮಲಿಂಗವನ್ನು ತನಗೆ ಪೂಜೆಗೋಸ್ಕರ ತಂದುಕೊಡಬೇಕೆಂದು ರಾವಣನನ್ನು ಕೇಳಲು ಆತನು ಕೈಲಾಸಕ್ಕೆ ಹೋಗಿ ಉಗ್ರವಾದ ತಪಸ್ಸನ್ನು ಮಾಡಿ ಶಿವನನ್ನು ಸಂತೋಷಪಡಿಸಿ ಅವನಿಂದ ಆತ್ಮಲಿಂಗವನ್ನೂ, ಶಿವನ ಹೆಂಡತಿಯಾದ ಪಾರ್ವತಿಯನ್ನು ತನಗೆ ಹೆಂಡತಿ ಯನ್ನಾಗಿ ಮಾಡಿಕೊಳ್ಳಲು ಅವಳನ್ನೂ ಕೇಳಿ ತೆಗೆದುಕೊಂಡು ಬಂದನು. ಇದನ್ನು ತಿಳಿದ ವಿಷ್ಣುವು ಮಧ್ಯಮಾರ್ಗದಲ್ಲಿ ಆ ಪಾರ್ವತಿಯನ್ನು ಅಪಹರಿಸಿ ಮತ್ತೆ ಶಿವನಿಗೆ ಕೊಟ್ಟನು. ಆತ್ಮಲಿಂಗವನ್ನು ಗೋಕರ್ಣದಲ್ಲಿ ಸ್ಥಾಪಿಸಿದನು. ಮಯನ ಮಗಳಾದ ಮಂಡೋದರಿಯನ್ನು ಅನಂತರ ಈ ರಾವಣನು ಮದುವೆಯಾದನು. ಒಂದುಸಾರಿ ಕೈಕಸಿಯು ಸವತಿಯ ಮಗನಾದ ಕುಬೇರನು ಅಟ್ಟಹಾಸದಿಂದಿರು ವುದನ್ನು ನೋಡಿ ಮಕ್ಕಳನ್ನು ತಿರಸ್ಕರಿಸಿ ಬಯ್ಯಲು ಅವರು ಗೋಕರ್ಣಕ್ಕೆ ಹೋಗಿ ತಪಸ್ಸನ್ನು ಮಾಡಿದರು. ಅದರಿಂದ ಸಂತುಷ್ಟನಾದ ಬ್ರಹ್ಮನು ರಾವಣನಿಗೆ ಅವನ ಇಷ್ಟಬಂದಂತೆ ಮನುಷ್ಯರಿಂದ ಹೊರತಾದ ಅವಧ್ಯತ್ವವನ್ನೂ ಕುಂಭಕರ್ಣ ನಿಗೆ ಆರು ತಿಂಗಳಕಾಲ ನಿದ್ದೆಯನ್ನೂ ಕೊಟ್ಟನು.

ಸುಮಾಲಿಯು ಮಗಳ ಮಕ್ಕಳು ಬಲಿಷ್ಠರಾದುದನ್ನು ತಿಳಿದು ಪಾತಾಳದಿಂದ ಹೊರಗೆ ಬಂದು ರಾವಣನ ಶಕ್ತಿಯಿಂದ ಮತ್ತೆ ಲಂಕೆಯನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡನು. ರಾವಣನಿಂದ ಓಡಿಸಲ್ಪಟ್ಟ ಕುಬೇರನು ಶಿವನಿಗೆ ಸ್ನೇಹಿತ ನಾಗಿ ದಿಕ್ಪಾಲಕನಾದನು. ಅನಂತರ ಆ ಲಂಕೆಯಲ್ಲಿಯೇ ಎಲ್ಲರಿಗೂ ಮದುವೆ ಯಾಯಿತು. ಆಗ ಮಂಡೋದರಿಯಲ್ಲಿ ರಾವಣನಿಗೆ ಮೇಘನಾದನೆಂಬ ಮಗ ನಾದನು. ಕುಬೇರನು ರಾವಣನ ದುಷ್ಕೃತ್ಯವನ್ನು ನೋಡಿ ಅವನಿಗೆ ಬುದ್ಧಿಯನ್ನು ಹೇಳಿಕಳುಹಿಸಲು ರಾವಣನು ಅವನನ್ನು ಸೋಲಿಸಿ ಅವನ ಪುಷ್ಪಕವಿಮಾನವನು ಕಿತ್ತುಕೊಂಡನು.

ರಾವಣನು ಒಂದುಸಾರಿ ಕುಬೇರನ ಪಟ್ಟಣವಾದ ಅಲಕೆಗೆ ಮುತ್ತಿಗೆ ಹಾಕಿದ್ದನು. ಕುಬೇರನ ಮಗನಾದ ನಳಕೂಬರನನ್ನು ಹೊಂದಲು ಹೋಗುತ್ತಿದ್ದ ರಂಭೆಯನ್ನು ಕರೆದು ತಾನು ಅನುಭವಿಸಿದನು. ಇದರಿಂದ ನಳಕೂಬರನು ರಾವಣನಿಗೆ ಶಾಪವನ್ನು ಕೊಟ್ಟನು. ಒಂದುಸಾರಿ ರಾವಣನು ಇಂದ್ರನೊಡನೆ ಯುದ್ಧಕ್ಕೆ ಹೋಗಲು ಇಂದ್ರನು ರಾವಣನನ್ನು ಸೆರೆಯಲ್ಲಿಟ್ಟನು. ಆಗ ಮೇಘನಾದನು ಇಂದ್ರನನ್ನು ಜಯಿಸಿ ತಂದೆಯನ್ನು ಬಿಡಿಸಿಕೊಂಡು ಬಂದನು. ಆಗ ಇವನಿಗೆ ಇಂದ್ರಜಿತ್ ಎಂಬ ಹೆಸರು ಬಂದಿತು. ಇದರಿಂದಲೇ ಅಗಸ್ತ್ಯನು ಇಂದ್ರಜಿತ್ತುವಿನ ಹೆಸರನ್ನು ಹೇಳಿದುದು.

ಮತ್ತೊಂದು ಸಾರಿ ರಾವಣನು ಶಿವನನ್ನು ಜಯಿಸಲು ಕೈಲಾಸವನ್ನು ಕೈಯ್ಯಿಂದೆತ್ತಲು ಹೋದಾಗ ಶಿವನು ಅಂತೆಯೇ ಅಮುಕಲು ಅವನ ಕೈಗಳು ಕೆಳಗೆ ಸಿಕ್ಕಿಕೊಂಡವು. ಆಗ ನಂದಿಯು ಕಪಿಗಳಿಂದ ನಿನ್ನ ನಾಶವಾಗಲೆಂದು ಶಪಿಸಿದನು.

ಇನ್ನೊಂದು ಸಾರಿ ಕಾರ್ತಿಕೇಯಾರ್ಜುನನ ಪಟ್ಟಣಕ್ಕೆ ಹೋಗಿ ಅವನಿಂದ ಹಿಡಿಯಲ್ಪಟ್ಟವನಾಗಿ ಮಗನಿಗೆ ಆಟದ ಬೊಂಬೆಯಂತೆ ಕೊಡಲ್ಪಟ್ಟನು ಅನಂತರ ಪುಲಸ್ತ್ಯನು ಬಂದು ಬಿಡಿಸಿಕೊಂಡು ಹೋದನು.

ಮಗದೊಂದು ಸಾರಿ ವಾಲಿಯನ್ನು ಜಯಿಸಲು ಹೋಗಿ ಅವನನ್ನು ಹಿಂದಿನಿಂದ ಹಿಡಿಯಲು ಆ ವಾಲಿಯು ಅಂತೆಯೇ ಅವನನ್ನು ಕಂಕುಳಲ್ಲಿ ಇರುಕಿಕೊಂಡನು. ಮನೆಗೆ ಬಂದು ಮಗುವನ್ನು ಎತ್ತಿಕೊಂಡಾಗ ಈ ರಾವಣನು ಕೆಳಗೆ ಬಿದ್ದನು. ಆಗ ವಾಲಿಯು ಮಗನ ಆಟಕ್ಕೋಸ್ಕರ ರಾವಣನನ್ನು ತೊಟ್ಟಿಲಿನಮೇಲೆ ಗಿಣಿಯ ಚಪ್ಪರವನ್ನು ಕಟ್ಟುವಂತೆ ಕಟ್ಟಿದ್ದನು.

ಇನ್ನೊಂದುಸಾರಿ ರಾವಣನು ಪುಷ್ಪಕದಲ್ಲಿ ಹೋಗುತ್ತ ಅದರಿಂದಿಳಿದು ಪಾತಾಳಕ್ಕೆ ಹೋದನು. ಅಲ್ಲಿ ಬಲಿಯು ಹೆಂಡತಿಯೊಡನೆ ಪಗಡೆಯಾಡುತ್ತಿರಲು ದಾಳವು ದೂರವಾಗಿ ಉರುಳಿಹೋಗಿ ಬಿದ್ದಿತು. ಬಲಿಯು ಅಲ್ಲಿ ನಿಂತಿದ್ದ ರಾವಣನಿಗೆ ಅದನ್ನು ತರುವಂತೆ ಹೇಳಲು ರಾವಣನು ಅದನ್ನು ಎತ್ತಲಾರದೆ ಅದರ ಕೆಳಗೆ ಕೈಗಳು ಸಿಕ್ಕಿಕೊಂಡು ಅತ್ತನು. ಆಗ ದಾಸಿಯು ಬಿಡಿಸಿದಳು. ಅಲ್ಲಿಂದ ಹೊರಡಲು ಆಳುಗಳು ಇವನನ್ನು ಹಿಡಿದು ಇಟ್ಟುಕೊಂಡು ತಮ್ಮ ಎಂಜಲನ್ನವನ್ನು ಅವನಿಗೆ ಕೊಡುತ್ತ ಕುದುರೆಯ ಲದ್ದಿಯನ್ನು ಎತ್ತಿಸುತ್ತಿದ್ದರು.

ಒಂದುಸಾರಿ ಬಾಗಿಲುಕಾಯುವವನ ಬಳಿಗೆ ಹೋಗಿ ಹೊರಗೆ ಬಿಡುವಂತೆ ಕೇಳಲು ಅವನು ಕಾಲಿನಮೇಲೆ ನಮಸ್ಕರಿಸುತ್ತಿದ್ದ ರಾವಣನನ್ನು ತೆಗೆದು ಎಸೆಯಲು ಹೊರಗೆ ಬಂದು ಬಿದ್ದನು. ಈ ರಾವಣನಿಗೆ ಜಯದ ಆಸೆಯು ಇನ್ನೂ ಬಿಡದಿರಲು ಅಯೋಧ್ಯೆಗೆ ಹೋಗಿ ಅಲ್ಲಿ ದೀಕ್ಷಿತನಾದ ಅನರಣ್ಯವನ್ನು ಕೊಲ್ಲಲು ಅವನು ತನ್ನ ವಂಶದಲ್ಲಿ ಹುಟ್ಟಿದವನಿಂದ ನಿನಗೆ ಮರಣವುಂಟಾಗಲಿ ಎಂದು ಶಪಿಸಿದನು.

ಒಂದುಸಾರಿ ಸನತ್ಕುಮಾರನು ಹೋಗುತ್ತಿರುವಾಗ ಅವನಿಂದ ವಿಷ್ಣುವು ಸರ್ವೋತ್ತಮನೆಂದೂ ಆ ವಿಷ್ಣುವಿನಿಂದ ಸತ್ತವರು ಶ್ವೇತದ್ವೀಪದಲ್ಲಿ ಶೂರರಾಗಿ ವಾಸಿಸುತ್ತಿರುವರೆಂದೂ ತಿಳಿದು ತಾನೂ ಅಂತೆ ಅವನ ಕೈಯ್ಯಿಂದ ಸಾಯಬೇಕೆನ್ನಲು ಸನತ್ಕುಮಾರನು ರಾಮಾವತಾರದಲ್ಲಿ ಜಾನಕಿಯನ್ನು ಹರಣಮಾಡೆಂದು ಹೇಳಿದನು. ಅಂತೆಯೇ ಈಗ ಹರಣಮಾಡಿದನು. ರಾವಣನಿಗೆ ಶ್ವೇತದ್ವೀಪದವರನ್ನು ಜಯಿಸಬೇಕೆಂಬ ಆಸೆಯುಂಟಾಗಲು ಅಲ್ಲಿಗೆ ಹೋದನು. ಅಲ್ಲಿ ಹೂವನ್ನು ಕುಯ್ಯಲು ಹೆಂಗಸರು ಬರುತ್ತಿದ್ದರು. ಈತನನ್ನು ಕಂಡು ಯಾರೆಂದು ಕೇಳುತ್ತ ಒಬ್ಬರಿಗೊಬ್ಬರು ಈತನನ್ನೇ ಎಸೆದಾಡಿದರು. ಒಬ್ಬಳು ವೇಗದಿಂದ ಎಸೆಯಲು ಇವನು ಪರಲಂಕೆಯಲ್ಲಿ ತಂಗಿಯಾದ ಕುಂಭೀನಸಿಯ ಮನೆಯ ಕಕ್ಕಸಿನಲ್ಲಿ ಬಂದು ಬಿದ್ದನು. ಸೀತೆಯನ್ನು ಕದ್ದುದು ಈ ರಾವಣನು ಆಕೆಯನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆಯಿಂದಲ್ಲ ಆಕೆಯನ್ನು ಅಶೋಕವನದಲ್ಲಿಟ್ಟು ತಾಯಿಯಂತೆ ಕಾಪಾಡುತ್ತಲಿದ್ದನು. ರಾಮನಿಗೆ ಕೋಪಬರಲು ಆಕೆಯನ್ನು ಬಾಧಿಸುವವನಂತೆ ತೋರ್ಪಡಿಸಿಕೊಂಡನು.

ಒಂದುಸಾರಿ ಬ್ರಹ್ಮನ ಕಣ್ಣಿನಿಂದ ನೀರುಬರಲು ಅದನ್ನು ಕೈಯ್ಯಲ್ಲಿ ಹಿಡಿದು ಧ್ಯಾನಿಸಿ ಕೆಳಗೆ ಹಾಕಿದನು. ಇದರಿಂದ ಒಂದು ಕಪಿಯು ಹುಟ್ಟಿತು. ಈ ಕಪಿಯು ಕಾಡಿನಲ್ಲಿ ತಿಂಡಿಯನ್ನು ತಿನ್ನುತ್ತ ನೀರನ್ನು ಕುಡಿಯಲು ಕೊಳಕ್ಕೆ ಹೋಗಿ ಪ್ರತಿಬಿಂಬವನ್ನು ನೋಡಿ ಅದರಮೇಲೆ ಜಗಳವಾಡುವ ಚಪಲದಿಂದ ನೀರಿಗೆ ಬಿದ್ದು ಬಿಟ್ಟಿತು. ಮೇಲಕ್ಕೆ ಬಂದು ನೋಡಲು ತಾನು ಹೆಂಗಸಾಗಿದ್ದಿತು. ಇವಳನ್ನು ನೋಡಿ ಇಂದ್ರನು ಬಂದು ರಮಿಸಲು ಅವನಿಂದ ವಾಲಿಯೂ ಸೂರ್ಯನು ಬಂದು ರಮಿಸಲು ಅವನಿಂದ ಸುಗ್ರೀವನೂ ಹುಟ್ಟಿದರು. ಹೀಗೆಯೇ ಈ ಕಪಿಯು ಮಕ್ಕಳನ್ನು ಕಾಪಾಡಿಕೊಂಡಿರಲು ಒಂದುದಿನ ಬೆಳಿಗ್ಗೆ ಎದ್ದು ನೋಡಿಕೊಳ್ಳಲು ತಾನು ಪೂರ್ವದಂತೆ ಗಂಡಸಾಗಿದ್ದಿತು. ಬ್ರಹ್ಮನು ಈ ತಂದೆಮಕ್ಕಳಿಗೆ ಕಿಷ್ಕಿಂಧೆಯನ್ನು ಕೊಟ್ಟನು. ತಂದೆಯು ಸತ್ತಮೇಲೆ ವಾಲಿಯೇ ರಾಜನಾದನು.

ಇವೆಲ್ಲವನ್ನೂ ಕೇಳಿದ ರಾಮನು "ಎಲೈ ಅಗಸ್ತ್ಯನೇ! ಹನುಮಂತನು ಬಲಶಾಲಿಯಷ್ಟೆ! ವಾಲಿಯು ಸುಗ್ರಿವನನ್ನು ಪಟ್ಟಣದಿಂದ ಓಡಿಸಿದಾಗ ಆ ಸುಗ್ರೀವನ ಮಂತ್ರಿಯಾದ ಹನುಮಂತನು ಸುಮ್ಮನಿರಲು ಕಾರಣವೇನು? ಅವನೂ ವಾಲಿಗೆ ಸಮನಾದ ಪರಾಕ್ರಮಿಯಷ್ಟೆ?" ಎಂದು ಕೇಳಿದನು.

ಆಗ ಅಗಸ್ತ್ಯನು "ಎಲೈ ರಾಘವನೇ! ಹೇಳುವೆನು ಕೇಳು. ಪೂರ್ವದಲ್ಲಿ ಅಂಜನಪರ್ವತದಲ್ಲಿ ಕೇಸರಿ ಎಂಬ ಕಪಿರಾಜನಿದ್ದನು. ಅವನಿಗೆ ಅಂಜನಿಯೆಂದೂ ಮಾರ್ಜಾರಾಸ್ಯಳೆಂದೂ ಇಬ್ಬರು ಹೆಂಡತಿಯರಿದ್ದರು. ದಶರಥನು ಪುತ್ರಕಾಮೇಷ್ಟಿಯನ್ನು ಮಾಡಿ ಅದರಿಂದ ಬಂದ ಪಾಯಸವನ್ನು ಹೆಂಡತಿಯರಿಗೆ ಭಾಗಮಾಡಿ ಕೊಟ್ಟಾಗ ಕೈಕೇಯಿಯ ಕೈಯ್ಯಿನ ಪಾಯಸವನ್ನು ಒಂದು ಹದ್ದು ಹಾರಿಸಿಕೊಂಡು ಹೋಯಿತು. ಆ ಪಾಯಸದ ಉಂಡೆಯನ್ನು ಅಂಜನಪರ್ವತದ ಬಳಿಯಲ್ಲಿ ಆದದ್ದು ಕೆಡವಿಬಿಟ್ಟಿತು. ಆ ಉಂಡೆಯನ್ನು ಈ ಅಂಜನಿಯೆಂಬ ಹೆಂಡತಿಯು ತಿಂದಳು.

ಒಂದು ಸಾರಿ ಗಂಡನಿಲ್ಲದಿರುವಾಗ ಈ ಹೆಂಡಿರಿಬ್ಬರೂ ಆಟವಾಡುತ್ತಿದ್ದಾಗ ಬಟ್ಟೆಯು ಹಾರಿಹೋಗಲು ಇದರಿಂದ ಮೋಹಗೊಂಡ ವಾಯುವು ಅಂಜನಿಯನ್ನು ಪ್ರಾರ್ಥಿಸಿ ಆಕೆಯಲ್ಲಿ ರಮಿಸಿದನು. ಅಂತೆಯೇ ಮತ್ತೊಬ್ಬಳಾದ ಮಾರ್ಜಾರಾಸ್ಯೆಯನ್ನು ಪ್ರಾರ್ಥಿಸಿ ನಿರ್ಋತಿಯು ಭೋಗಿಸಿದನು. ಆಗ ಅಂಜನಿಯಲ್ಲಿ ಆಂಜನೇಯನೂ ಮಾರ್ಜಾರಾಸ್ಯೆಯಲ್ಲಿ ಘೋರವಾದ ಪಿಶಾಚವೂ ಹುಟ್ಟಿದರು.

ಈ ಆಂಜನೇಯನು ಸೂರ್ಯನು ಹುಟ್ಟುತ್ತಿರಲು ಅವನನ್ನು ಹಣ್ಣೆಂದು ತಿಳಿದು ಹಿಡಿದುಕೊಂಡು ತಿನ್ನಲು ಅಲ್ಲಿಗೆ ನೆಗೆದುಹೋದನು. ಆದಿನ ಅಮಾವಾಸ್ಯೆಯಾದುದರಿಂದ ಸೂರ್ಯನನ್ನು ಹಿಡಿಯಲು ರಾಹುವೂ ಅಲ್ಲಿಗೆ ಹೋಗಿ ತನ್ನ ತಿಂಡಿಯನ್ನು ಈ ಪರಾಕ್ರಮಿಯು ತಿನ್ನಲು ನಿಂತಿರುವುದನ್ನು ನೋಡಿ ಹೆದರಿ ಇಂದ್ರನ ಬಳಿಗೆ ಹೋದನು.

ಇಂದ್ರನ ಬಳಿಗೆ ಹೋದ ರಾಹುವು ಎಲೈ ಇಂದ್ರನೆ! ನೀನು ಸೂರ್ಯನನ್ನು ನನಗೆ ಆಹಾರವನ್ನಾಗಿ ಕಲ್ಪಿಸಿದ್ದೆ. ಈಗ ಅದಕ್ಕೆ ವಿಘ್ನವು ಬಂದಿರುವುದು. ಈಗ ಅದನ್ನು ತಪ್ಪಿಸು. ಇಲ್ಲದಿದ್ದರೆ ನಿನ್ನನ್ನೇ ತಿನ್ನುವೆನು ಎಂದನು. ಆಗ ಇಂದ್ರನು ದೇವತೆಗಳೊಡನೆ ಸೂರ್ಯನ ಬಳಿಗೆ ಹೋಗಿ ವಜ್ರಾಯುಧದಿಂದ ಆಂಜನೇಯನನ್ನು ಹೊಡೆಯಲು ಆಗ ಆಂಜನೇಯನು ಬೆಟ್ಟದ ತಪ್ಪಲಿನಲ್ಲಿ ಬಿದ್ದನು. ಆಗ ಕಪಾಲವು ಒಡೆದುದರಿಂದ ಹನುಮಂತನಾದನು. ವಾಯುವು

ಮಗನ ಈ ಸ್ಥಿತಿಯನ್ನು ನೋಡಿ ಸಮಾಧಾನಪಡಿಸಿ ತಾನು ದೇವತೆಗಳ ಮೇಲೆ ಕೋಪಗೊಂಡು ಬೀಸದೆ ಸುಮ್ಮನಾದನು. ಆಗ ಲೋಕಗಳೆಲ್ಲವೂ ತೊಂದರೆ ಪಡಲು ಬ್ರಹ್ಮನು ದೇವೇಂದ್ರನನ್ನು ಬಯ್ದು ವಾಯುವನ್ನು ಸಮಾಧಾನಪಡಿಸಿ ಹನುಮಂತನಿಗೆ ಅನೇಕ ವರಗಳನ್ನು ಕೊಟ್ಟನು.

ರಾಹುವು ದೈತ್ಯನಾದರೂ ಅಮೃತಪಾನದಿಂದ ಅಮರನಾದನು. ಅವನು ದೇವತೆಗಳನ್ನು ತೊಂದರೆಪಡಿಸಲು ಅವರು ಇವನಿಗೆ ಎಂಟನೆಯ ಗ್ರಹದ ಸ್ಥಾನವನ್ನೂ ಸೂರ್ಯಚಂದ್ರರನ್ನು ತಿನ್ನುವಂತೆ ಆಹಾರವನ್ನೂ ಕೊಟ್ಟರು.

ಬ್ರಹ್ಮನ ವರದಿಂದ ಮಾರುತಿಯು ಬಹು ಪ್ರಬಲನಾದನು. ಅವನ ಶಕ್ತಿಯು ಬಹು ಅಗಾಧವಾದುದು. ಇವನು ಕಾಡಿನಲ್ಲಿರುತ್ತ ಋಷಿಗಳ ಆಶ್ರಮದಲ್ಲಿ ಅವರ ಪದಾರ್ಥಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡುತ್ತ ಅವರ ಮಕ್ಕಳನ್ನು ಹೆದರಿಸುತ್ತಿದ್ದನು. ಆಗ ಅವರು ಎಲೈ ಹನುಮಂತನೇ! ನಿನ್ನ ಬಲವನ್ನು ಮತ್ತೊಬ್ಬರು ಹೇಳಿದರೇನೆ ಗೊತ್ತಾಗಲಿ. ಇಲ್ಲದಿದ್ದರೆ ಬೇಡವೆಂದು ಶಪಿಸಿದರು. ಇದರಿಂದ ಅವನಿಗೆ ಅವನ ಬಲದ ಸ್ಮೃತಿಯು ತಪ್ಪಿಹೋಯಿತು.

ಅಗಸ್ತ್ಯನು ಇದೆಲ್ಲವನ್ನೂ ಹೇಳಿ ಎಲೈ ರಾಘವನೇ! ನೀನಾರೆಂಬುದನ್ನು ನಾನು ಬಲ್ಲೆನು. ನೀನೇ ಪರಮಾತ್ಮನು. ಸರ್ವವ್ಯಾಪಿಯು. ಎಲ್ಲವನ್ನೂ ತಿಳಿದಿದ್ದರೂ ತಿಳಿಯದವನಂತೆ ತೋರ್ಪಡಿಸಿಕೊಳ್ಳುತ್ತಿದ್ದೀಯೆ ಎಂದು ಸ್ತುತಿಸಿ ಹೊರಟುಹೋದನು.

ರಾಮನು ಹೆಂಡತಿ ತಾಯಿ ತಮ್ಮಂದಿರುಗಳೊಡನೆ ಸುಖವಾಗಿ ರಾಜ್ಯವಾಳುತ್ತಿದ್ದನು. ಅವನು ರಾಜ್ಯವಾಳುತ್ತಿದ್ದಾಗ ಯಾವ ಬಗೆಯಾದ ದುಃಖವೂ ಇರಲಿಲ್ಲ. ಇವನು ಹನ್ನೊಂದುಸಾವಿರದ ಹನ್ನೊಂದುನೂರು ಲಕ್ಷ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದನು. ಈ ಸಾರಕಾಂಡವನ್ನು ಕೇಳಿದರೆ ಅವರ ಮನೋರಥಗಳು ಫಲಿಸುತ್ತವೆ.

ಶ್ರೀಮದಾನಂದರಾಮಾಯಣೇ ಸಾರಕಾಂಡಃ ಪ್ರಥಮಃ
ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ಮೊದಲನೆಯದಾದ ಸಾರಕಾಂಡವು
ಮುಗಿದುದು

|| ಶ್ರೀರಸ್ತು ||

|| ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಸ್ವಾಮಿನೇ ನಮಃ ||

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದ ರಾಮಾಯಣಂ

|| ದ್ವಿತೀಯಃ ಯಾತ್ರಾಕಾಂಡಃ ||

|| ಪ್ರಥಮಸರ್ಗಃ ||

|| ಶ್ರೀ ಪಾರ್ವತ್ಯುವಾಚ ||

ಸಾರಕಾಂಡಂ ತ್ವಯಾ ಶಂಭೋ ಕೀರ್ತಿತಂ ಬಹುಪುಣ್ಯದಂ ।
ಮಯಾ ಶ್ರುತಂ ತು ಪೃಚ್ಛಾಮಿ ಯತ್ತದ್ವಕ್ತುಂ ತ್ವಮರ್ಹಸಿ || ೧ ||

ಕಥಂ ಕೃತಾ ವಾಜಿಮೇಧಾ ರಾಘವೇಣ ಮಹಾತ್ಮನಾ ।
ರಾಮಾದೀನಾಂ ಚತುರ್ಣಾಂ ಹಿ ಬಂಧೂನಾಂ ಸಂತತಿಂ ವದ || ೨ ||

ಶ್ರೀಮದಾನಂದರಾಮಾಯಣದಲ್ಲಿ ಯಾತ್ರಾಕಾಂಡವು

ಒಂದನೆಯ ಸರ್ಗವು

೧. ಪಾರ್ವತಿಯು ಹೇಳಿದಳು—ಎಲೈ ಶಂಭುವೇ ! ಬಹು ಪುಣ್ಯವನ್ನು ಕೊಡುವ ಸಾರಕಾಂಡವನ್ನು ನೀನು ಹೇಳಿದೆ. ಅದನ್ನು ನಾನೂ ಕೇಳಿದೆನು. ಯಾವುದನ್ನು ಕೇಳಿದರೂ ನೀನು ಹೇಳಲು ಶಕ್ತನಾಗಿದ್ದೀಯೆ. ಆದ್ದರಿಂದಲೇ ನಿನ್ನನ್ನು ಕೇಳುತ್ತೇನೆ. ನೀನು ಹೇಳು.

೨. ಆ ಮಹಾತ್ಮನಾದ ರಾಘವನು ಅಶ್ವಮೇಧವನ್ನು ಹೇಗೆ ಮಾಡಿದನು ? ರಾಮ ಲಕ್ಷ್ಮಣ ಭರತ ಶತ್ರುಘ್ನರ ಸಂತತಿಯನ್ನು ನೀನು ವರ್ಣಿಸು.

ಸ್ವಪುತ್ರೋ ಬಂಧುಪುತ್ರಾಶ್ಚ ಕಥಂ ಸ್ತ್ರೀಭಿಸ್ಸಂಯೋಜಿತಾಃ ।
ದಶವರ್ಷ ಸಹಸ್ರಾಣಿ ದಶವರ್ಷ ಶತಾನಿ ಚ ॥ ೩ ॥

ತಥೈಕಾದಶವರ್ಷಾಣಿ ತ್ರೇತಾಯುಗ ಭವಾನಿ ಹಿ ।
ರಾಜ್ಯಂ ಕೃತಂ ತ್ವಯಾ ಪ್ರೋಕ್ತಂ ವಿಸ್ತರಾತ್ತದಸ್ವ ಮಾಂ ॥ ೪ ॥

ಯಾನಿ ಯಾನಿ ಚರಿತ್ರಾಣಿ ರಾಘವೇಣ ಕೃತಾನಿ ಹಿ ।
ತಾನಿ ತಾನಿ ಹಿ ಕೃತ್ಯಾನಿ ವಿಸ್ತರಾದ್ವಕ್ತುಮರ್ಹಸಿ ॥ ೫ ॥

ಇತಿ ದೇವೀವಚಶ್ಶ್ರುತ್ವಾ ಶಂಭುಸ್ತಾಂ ಪುನರಬ್ರವೀತ್ ।

॥ ಶಂಭುರುವಾಚ ॥

ಪೃಷ್ಟಂ ಸಮ್ಯಕ್ ತ್ವಯಾ ದೇವಿ ರಾಘವಸ್ಯ ಕಥಾನಕಂ ॥ ೬ ॥

ಮಮಾಪಿ ಹರ್ಷಸ್ಸಂಜಾತಸ್ತದ್ವದಾಮಿ ತವಾಂತಿಕಂ ।
ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ ॥ ೭ ॥

೩–೪. ಆ ರಾಮನು ತನ್ನ ಮಕ್ಕಳಿಗೂ ತನ್ನ ತಮ್ಮನಮಕ್ಕಳಿಗೂ ಎಲ್ಲೆಲ್ಲಿಯ ಕನ್ಯೆಯರನ್ನು ತಂದು ಮದುವೆಮಾಡಿದನು? ಶ್ರೀರಾಮನು ತ್ರೇತಾಯುಗದಲ್ಲಿ ಹನ್ನೊಂದು ಸಾವಿರದ ಹನ್ನೊಂದು ವರ್ಷಗಳವರೆಗೆ ರಾಜ್ಯ ಭಾರಮಾಡಿದನೆಂದು ಹೇಳಿದೆಯಷ್ಟೆ! ಆಗ ಮಾಡಿದ ಕೆಲಸಗಳನ್ನು ನನಗೆ ವಿಸ್ತಾರವಾಗಿ ಹೇಳು.

೫. ಆ ಕಾಲದಲ್ಲಿ ರಾಘವನು ಮಾಡಿದ ಯಾವ ಯಾವ ಚರಿತ್ರೆಗಳಿವೆಯೋ ಅವೆಲ್ಲವನ್ನೂ ಸ್ವಲ್ಪವನ್ನೂ ಬಿಡದೆ ವಿಸ್ತಾರವಾಗಿ ನನಗೆ ಹೇಳು.

೬. ದೇವಿಯು ಹೀಗೆ ಹೇಳಿದುದನ್ನು ಕೇಳಿ ಶಂಭುವು ಅವಳನ್ನು ಕುರಿತು ಇಂತೆಂದನು. ಶಂಭುವು ಹೇಳಿದನು—ಎಲೈ ದೇವಿಯೇ! ರಾಘವನ ಕಥೆಯನ್ನು ನೀನು ಕೇಳಿದುದು ಬಹು ಉತ್ತಮವಾಯಿತು.

೭. ನನಗೂ ಕೂಡ ಅದನ್ನು ಹೇಳಲು ಬಹು ಸಂತೋಷವಾಗುತ್ತದೆ. ಆ ಶ್ರೀರಾಮನ ಕಥೆಯು ನೂರು ಕೋಟಿಗ್ರಂಥಗಳಷ್ಟು ವಿಸ್ತಾರವಾಗಿದೆ.

ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಂ ।
ವಾಲ್ಮೀಕಿನಾ ಕೃತಂ ಪೂರ್ವಮೇಕದಾ ತದ್ವದಾಮಿ ತೇ ॥ ೮ ॥

ವಾಲ್ಮೀಕಿಸ್ತ್ವೇಕದಾ ಸ್ನಾತುಂ ಜಗಾಮ ತಮಸಾಂ ನದೀಂ ।
ಶಿಷ್ಯೇಣ ಸಹಿತೋ ಗತ್ವಾ ಭೂಮೌ ಸ್ಥಾಪ್ಯ ಕಮಂಡಲುಂ ॥ ೯ ॥

ಆವಶ್ಯಕಂ ತು ಸಂಪಾದ್ಯ ಕೃತ್ವಾ ಶೌಚವಿಧಿಂ ತತಃ ।
ಯಾವದ್ಗಚ್ಛತಿ ಸ್ನಾನಾರ್ಥಂ ದರ್ಭಪಾಣಿಸ್ಸ ವೈ ಮುನಿಃ ॥ ೧೦ ॥

ತಾವದ್ದದರ್ಶ ತಮಸಾ ತೀರೇ ಕೌತುಕಮುತ್ತಮಂ ।
ಕ್ರೌಂಚಯುಗ್ಮೇ ಹತಃ ಕ್ರೌಂಚೋ ನಿಷಾದೇನ ಪತತ್ರಿಣಾ ॥ ೧೧ ॥

ಕ್ರೌಂಚೀ ಶೋಕಸಮಾವಿಷ್ಟಾ ವಿಲಲಾಪಾತಿದುಃಖಿತಾ ।
ವಿಮುಕ್ತಾ ಪತಿನಾ ತೇನ ದ್ವಿಜೇನ ಸಹಚಾರಿಣಾ ॥ ೧೨ ॥

---

೮. ಇವುಗಳಲ್ಲಿರುವ ಒಂದೊಂದು ಅಕ್ಷರವೂ ಮಹಾ ಪಾಪಗಳನ್ನು ಹಾಳುಮಾಡುತ್ತವೆ. ಒಂದುಸಾರಿ ವಾಲ್ಮೀಕಿಯು ಮಾಡಿದ ವಿಷಯವನ್ನು ಹೇಳುತ್ತೇನೆ. ಕೇಳು.

೯-೧೦. ಒಂದುಸಾರಿ ವಾಲ್ಮೀಕಿ ಋಷಿಯು ಸ್ನಾನಮಾಡುವುದಕ್ಕೆ ತಮಸಾನದಿಗೆ ಹೋದನು. ಜೊತೆಯಲ್ಲಿ ಶಿಷ್ಯರೂ ಹೋದರು. ಕಮಂಡಲುವನ್ನು ನೆಲದಮೇಲಿಟ್ಟು ಜಲಬಾಧೆ ಮಲಬಾಧೆಗಳನ್ನು ತೀರಿಸಿಕೊಂಡು ಅನಂತರ ಶೌಚವನ್ನೂ ಮಾಡಿಕೊಂಡನು. ಅನಂತರ ದರ್ಭೆಯನ್ನು ಹಿಡಿದುಕೊಂಡು ಸ್ನಾನಮಾಡುವುದಕ್ಕೋಸ್ಕರ ಹೊರಟನು.

೧೧. ಆಗ ಆ ತಮಸಾನದಿಯ ದಡದಲ್ಲಿ ಒಂದು ಆಶ್ಚರ್ಯವು ನಡೆಯಿತು. ಆದನ್ನು ನೋಡಿದನು. ಅಲ್ಲಿ ಗಂಡಹೆಂಡತಿಯರಾದ ಎರಡು ಕ್ರೌಂಚಪಕ್ಷಿಗಳು ಕುಳಿತಿದ್ದುವು. ಒಬ್ಬ ಬೇಡನು ಬಾಣವನ್ನು ಬಿಟ್ಟು ಅವುಗಳಲ್ಲಿ ಗಂಡು ಹಕ್ಕಿಯನ್ನು ಹೊಡೆದು ಕೊಂದನು.

೧೨-೧೩. ತನ್ನ ಜೊತೆಯಲ್ಲಿಯೇ ಸಂಚಾರಮಾಡುವ ಆ ಗಂಡುಪಕ್ಷಿಯು ಸತ್ತುದರಿಂದ ಹೆಣ್ಣುಪಕ್ಷಿಯು ಬಹುವಾಗಿ ದುಃಖದಿಂದ ಕೂಡಿದ್ದಿತು. ಅದಕ್ಕೆ

ತಾಮ್ರಶೀರ್ಷೇಣ ಮತ್ತೇನ ಪತ್ರಿಣಾ ಸ ಹತೇನ ಚ ।
ತಥಾವಿಧಂ ದ್ವಿಜಂ ದೃಷ್ಟ್ವಾ ನಿಷಾದೇನ ನಿಪಾತಿತಂ ॥ ೧೩ ॥

ಋಷೇರ್ಧರ್ಮಾತ್ಮನಸ್ತಸ್ಯ ಕಾರುಣ್ಯಂ ಸಮಪದ್ಯತ ।
ತತಃ ಕರುಣಯಾವಿಷ್ಟಸ್ತ್ವಧರ್ಮೋಽಯಮಿತಿ ದ್ವಿಜಃ ॥ ೧೪ ॥

ನಿಶಾಮ್ಯ ರುದತೀಂ ಕ್ರೌಂಚೀ ಮಿದಂ ವಚನಮಬ್ರವೀತ್ ।
ಮಾ ನಿಷಾದ ಪ್ರತಿಷ್ಠಾಂ ತ್ವಮಗಮಶ್ಶಾಶ್ವತೀಸ್ಸಮಾಃ ॥ ೧೫ ॥

ಯತ್ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಂ ।
ತಸ್ಯೇತ್ಥಂ ಬ್ರುವತಶ್ಚಿಂತಾ ಬಭೂವ ಹೃದಿ ವೀಕ್ಷತಃ ॥ ೧೬ ॥

ಶೋಕಾರ್ತೇನಾಸ್ಯ ಶಕುನೇಃ ಕಿಮಿದಂ ವ್ಯಾಹೃತಂ ಮಯಾ ।
ಚಿಂತಯನ್ ಸ ಮಹಾಪ್ರಾಜ್ಞಶ್ಚಕಾರ ಮತಿಮಾನ್ ಮತಿಂ ॥ ೧೭ ॥

ಕೆಂಪಗಿರುವ ಜುಟ್ಟು ಇದ್ದು ಮದದಿಂದ ಕೂಡಿ ಮನೋಹರವಾಗಿದ್ದಿತು. ಇಂತಹ ಪಕ್ಷಿಯನ್ನು ಆ ವ್ಯಾಧನು ಕೊಂದಿದ್ದನು. ಈ ರೀತಿಯಾದ ಪಕ್ಷಿಯನ್ನು ಆ ನಿಷಾದನು ಕೊಂದುದನ್ನು ಆ ಋಷಿಯು ನೋಡಿದನು.

೧೪. ಇದನ್ನು ನೋಡಿದುದರಿಂದ ಒಡನೆಯೇ ಆ ಧರ್ಮಾತ್ಮನಾದ ವಾಲ್ಮೀಕಿಗೆ ಕರುಣವು ಹುಟ್ಟಿತು. ಹೀಗೆ ಕರುಣ ಬಂದಮೇಲೆ ಇದನ್ನು ಕೊಂದುದು ಅಧರ್ಮವೆಂದು ಅವನಿಗೆ ತಿಳಿಯಿತು.

೧೫–೧೬. ಆ ಕ್ರೌಂಚಿಯೂ ದುಃಖಿಸುತ್ತಿದ್ದಿತು. ಈ ಅಳುವನ್ನು ಕೇಳಿ ಇಂತೆಂದನು. ಎಲೈ ನಿಷಾದನೆ! ಈ ಕ್ರೌಂಚಪಕ್ಷಿಗಳು ದಂಪತಿಗಳು. ಇವುಗಳಲ್ಲಿ ಕಾಮಮೋಹದಿಂದ ಕೂಡಿದ್ದ ಒಂದಾದ ಗಂಡುಪಕ್ಷಿಯನ್ನು ನೀನು ಕೊಂದುದರಿಂದ ಬಹುಕಾಲ ಬದುಕಬೇಡ.

೧೭. ಈ ರೀತಿಯಾಗಿ ಶಪಿಸುತ್ತಿರುವ ಆ ಋಷಿಯು ಹೃದಯದಲ್ಲಿ ಯೋಚನೆಯುಂಟಾಗಿ ಈ ಹಕ್ಕಿಯ ವಿಷಯದಲ್ಲಿ ಶೋಕವು ಪ್ರಾಪ್ತವಾಗಿ ನಾನು ಏನೆಂದು ಶಪಿಸಿಬಿಟ್ಟೆನು ? ಎಂಬುದಾಗಿ ಚಿಂತಿಸುತ್ತ ಬುದ್ಧಿವಂತನಾದ ಆ ಋಷಿಗೆ ಉತ್ತಮತರದ ಒಂದು ಯೋಚನೆಯು ಹೊಳೆಯಿತು.

ಶಿಷ್ಯಂ ಚೈವಾಬ್ರವೀದ್ವಾಕ್ಯಮಿದಂ ಸ ಮುನಿಪುಂಗವಃ ।
ಪಾದಬದ್ಧೋಽಕ್ಷರ ಸಮಸ್ತಂತ್ರೀಲಯಸಮನ್ವಿತಃ ॥ ೧೮ ॥

ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ ।
ಶಿಷ್ಯಸ್ತು ತಸ್ಯ ಬ್ರುವತೋ ಮುನೇರ್ವಾಕ್ಯಮನುತ್ತಮಂ ॥ ೧೯ ॥

ಪ್ರತಿಜಗ್ರಾಹ ಸಂತುಷ್ಟಸ್ತಸ್ಯ ತುಷ್ಟೋಽಭವನ್ಮುನಿಃ ।
ಸೋಽಭಿಷೇಕಂ ತತಃ ಕೃತ್ವಾ ತೀರ್ಥೇ ತಸ್ಮಿನ್ ಯಥಾವಿಧಿ ॥ ೨೦ ॥

ತಮೇವ ಚಿಂತಯನ್ನರ್ಥಮುಪಾವರ್ತತ ವೈ ಮುನಿಃ ।
ಭರದ್ವಾಜಸ್ತಸ್ಯ ಶಿಷ್ಯೋ ವಿನೀತಶ್ಶ್ರುತವಾನ್ ಗುರೋಃ ॥ ೨೧ ॥

---

೧೮. ಆಗ ಶಿಷ್ಯನನ್ನು ಕರೆದು ಆ ಋಷಿಯು ಇಂತೆಂದನು. ಎಲೈ ಶಿಷ್ಯನೇ! ಈಗ ನಾನು ಹೇಳಿದಮಾತು ಪಾದಗಳಿಂದ ಕೂಡಿಕೊಂಡಿದೆ. ಸಮವಾದ ಅಕ್ಷರಗಳಿವೆ. ತಂತಿಯ ಲಯಕ್ಕೆ ಸಮಹೊಂದುತ್ತದೆ.

೧೯. ನಾನು ಶೋಕದಿಂದ ಹೇಳಿದ ಈ ಮಾತು ಶ್ಲೋಕರೂಪವಾಗಿ ಪರಿಣಮಿಸಿದೆ. ಗುರುವು ಹೇಳಿದ ಈ ಮಾತಿನ ವಿಷಯಗಳನ್ನು ಶಿಷ್ಯನು ತಿಳಿದುಕೊಂಡನು.

೨೦. ಸಂತೋಷದಿಂದ ತಿಳಿದು ಶಿಷ್ಯನು ಗ್ರಹಿಸಲು ಋಷಿಯೂ ಸಂತೋಷಪಟ್ಟನು. ಅನಂತರ ವಿಧಿಯಂತೆ ಆ ತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡಿದರು.

೨೧. ಆ ಮುನಿಯು ಅದೇ ವಿಷಯವನ್ನು ಯೋಚಿಸುತ್ತ ಸ್ನಾನಮಾಡಿಕೊಂಡು ಹಿಂತಿರುಗಿದನು. ಶಿಷ್ಯನಾದ ಭರದ್ವಾಜನು ವಿನೀತನು. ಮತ್ತು ವಿದ್ಯಾವಂತನು.

ಕಲಶಂ ಪೂರ್ಣಮಾದಾಯ ಪ್ರಹೃಷ್ಟಶ್ಚ ಜಗಾಮ ಹ ।
ಸ ಪ್ರವಿಶ್ಯಾಶ್ರಮಪದಂ ಶಿಷ್ಯೇಣ ಸಹ ಧರ್ಮವಿತ್ ॥ ೨೨ ॥

ಉಪವಿಷ್ಟಃ ಕಥಾಶ್ಚಾನ್ಯಾಶ್ಚಕಾರ ಧ್ಯಾನಮಾಸ್ಥಿತಃ ।
ಆಜಗಾಮ ತತೋ ಬ್ರಹ್ಮಾ ಲೋಕಕರ್ತಾ ಸ್ವಯಂ ಪ್ರಭುಃ ॥ ೨೩ ॥

ಚತುರ್ಮುಖೋ ಮಹಾತೇಜಾ ದ್ರಷ್ಟುಂ ತಂ ಮುನಿಪುಂಗವಂ ।
ವಾಲ್ಮೀಕಿರಥ ತಂ ದೃಷ್ಟ್ವಾ ಸಹಸೋತ್ಥಾಯ ವಾಗ್ಯತಃ ॥ ೨೪ ॥

ಪ್ರಾಂಜಲಿಃ ಪ್ರಯತೋ ಭೂತ್ವಾ ತಸ್ಥೌ ಪರಮವಿಸ್ಮಿತಃ ।
ಪೂಜಯಾಮಾಸ ತಂ ದೇವಂ ಪಾದ್ಯಾರ್ಘ್ಯಾಸನ ವಂದನೈಃ ॥ ೨೫ ॥

ಪ್ರಣಮ್ಯ ವಿಧಿವಚ್ಚೈನಂ ಪೃಷ್ಟ್ವಾ ಚೈವ ನಿರಾಮಯಂ ।
ಅಥೋಪವಿಶ್ಯ ಭಗವಾನಾಸನೇ ಪರಮಾರ್ಚಿತೇ ॥ ೨೬ ॥

---

೨೨. ಅವನೂ ಕೂಡ ಆ ಗುರುವಿನ ಕಮಂಡಲು ಪಾತ್ರೆಯನ್ನು ತೆಗೆದು ಕೊಂಡು ಅದರಲ್ಲಿ ನೀರನ್ನು ತುಂಬಿಕೊಂಡು ಸಂತೋಷದಿಂದ ಹೊರಟು ಹೋದನು.

೨೩. ಧರ್ಮಜ್ಞನಾದ ಆ ಋಷಿಯು ಶಿಷ್ಯನೊಡನೆ ಆ ಆಶ್ರಮಕ್ಕೆ ಹೋಗಿ ಕುಳಿತುಕೊಂಡು ಮಾಡಬೇಕಾದ ಕೆಲಸಗಳನ್ನು ಮಾಡಿ ಧ್ಯಾನಕ್ಕೆ ಕುಳಿತನು. ಆಗ ಲೋಕಕರ್ತೃವಾದ ಬ್ರಹ್ಮನು ಅಲ್ಲಿಗೆ ಬಂದನು.

೨೪-೨೫. ಚತುರ್ಮುಖನೂ ಮಹಾ ತೇಜಸ್ವಿಯೂ ಆದ ಬ್ರಹ್ಮನು ಆ ವಾಲ್ಮೀಕಿಯನ್ನು ನೋಡಲು ಬರಲಾಗಿ ವಾಲ್ಮೀಕಿಯು ಬೇಗನೆ ಎದ್ದು ಮಾತನಾಡದೆ ಕೈಮುಗಿದುಕೊಂಡು ಎದುರಿಗೆ ನಿಂತುಕೊಂಡನು. ಅನಂತರದಲ್ಲಿ ಆ ಬ್ರಹ್ಮನನ್ನು ಅರ್ಘ್ಯ, ಪಾದ್ಯ, ಆಚಮನೀಯಗಳನ್ನೂ ಆಸನವನ್ನೂ ಕೊಟ್ಟು ಪೂಜಿಸಿ ನಮಸ್ಕರಿಸಿದನು.

೨೬-೨೭. ವಿಧಿವತ್ತಾಗಿ ಪೂಜಿಸಿ ನಮಸ್ಕರಿಸಿ ಆ ಬ್ರಹ್ಮನನ್ನು ಕುಶಲವನ್ನು ಕೇಳಿದನು. ಆ ಬ್ರಹ್ಮನು ಉತ್ತಮವಾದ ಆಸನದಲ್ಲಿ ಕುಳಿತು ಅನಂತರ

ಮಹರ್ಷಯೋ ವಾಲ್ಮೀಕಯೋ ಸಂದಿದೇಶಾಸನಂ ತತಃ ।
ಬ್ರಹ್ಮಣಾ ಸಮನುಜ್ಞಾತಃ ಸೋಽಪ್ಯುಪಾವಿಶದಾಸನೇ ॥ ೨೭ ॥

ಉಪವಿಷ್ಟೇ ತದಾ ತಸ್ಮಿನ್ ಸಾಕ್ಷಾಲ್ಲೋಕಪಿತಾಮಹೇ ।
ತದ್ಗತೇನೈವ ಮನಸಾ ವಾಲ್ಮೀಕಿರ್ಧ್ಯಾನಮಾಸ್ಥಿತಃ ॥ ೨೮ ॥

ಪಾಪಾತ್ಮನಾ ಕೃತಂ ಕಷ್ಟಂ ವೈರಗ್ರಹಣಬುದ್ಧಿನಾ ।
ಯಸ್ತಾದೃಶಂ ಚಾರುರವಂ ಕ್ರೌಂಚಂ ಹನ್ಯಾದಕಾರಣಂ ॥ ೨೯ ॥

ಶೋಚನ್ನೇವಂ ಪುನಃ ಕ್ರೌಂಚೀಮುಪಶ್ಲೋಕಮಿಮಂ ಜಗೌ ।
ಪುನರಂತರ್ಗತಮನಾ ಭೂತ್ವಾ ಶೋಕಪರಾಯಣಃ ॥ ೩೦ ॥

ತಮುವಾಚ ತತೋ ಬ್ರಹ್ಮಾ ಪ್ರಹಸನ್ಮುನಿಪುಂಗವಂ ।
ಶ್ಲೋಕ ಏವ ತ್ವಯಾ ಬದ್ಧೋ ನಾತ್ರ ಕಾರ್ಯಾವಿಚಾರಣಾ ॥ ೩೧ ॥

ಮಹರ್ಷಿಯಾದ ವಾಲ್ಮೀಕಿಗೂ ಕುಳಿತುಕೊಳ್ಳುವಂತೆ ಹೇಳಿದನು. ಬ್ರಹ್ಮನ ಅಪ್ಪಣೆಯಂತೆ ವಾಲ್ಮೀಕಿಯೂ ಆಸನದಲ್ಲಿ ಕುಳಿತನು.

೨೮. ಲೋಕಪಿತಾಮಹನಾದ ಬ್ರಹ್ಮನು ಕುಳಿತುಕೊಳ್ಳಲು ವಾಲ್ಮೀಕಿಯು ಮಾತ್ರ ಬೇಡನ ವಿಷಯವಾಗಿಯೇ ಯೋಚಿಸುತ್ತಿದ್ದನು.

೨೯. ವೈರಬುದ್ಧಿಯುಳ್ಳ ಆ ಬೇಡನು ಎಂತಹ ಕ್ರೂರಕೆಲಸವನ್ನು ಮಾಡಿದನು? ಮನೋಹರವಾಗಿ ಕೂಗುವ ಮನೋಹರವಾಗಿರುವ ಆ ಕ್ರೌಂಚಪಕ್ಷಿಯನ್ನು ಕಾರಣವಿಲ್ಲದೆ ಕೊಂದನಲ್ಲ!

೩೦. ಆ ಗಂಡುಪಕ್ಷಿಯ ವಿಷಯದಲ್ಲಿ ಹೀಗೆ ಯೋಚಿಸಿ ಹೆಣ್ಣುಪಕ್ಷಿಯ ವಿಷಯದಲ್ಲಿ ಶೋಕದಿಂದ ಕೂಡಿದವನಾಗಿ ತಾನು ಹೇಳಿದ ಶ್ಲೋಕವನ್ನು ಬ್ರಹ್ಮನಿಗೆ ಹೇಳಿದನು.

೩೧. ಆಗ ಬ್ರಹ್ಮನು ನಗುತ್ತ ಆ ಋಷಿಯನ್ನು ಕುರಿತು ಎಲೈ ಋಷಿಯೇ! ನೀನು ಹೇಳಿರುವುದು ಶ್ಲೋಕವಾಗಿಯೇ ನಿರ್ಮಿತವಾಗಿದೆ. ಇದರಲ್ಲಿ ಸಂದೇಹವೇ ಇರುವುದಿಲ್ಲ.

ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ ।
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ ॥ ೩೨ ॥

ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ ।
ವೃತ್ತಂ ಕಥಯ ಧೀರಸ್ಯ ಯಥಾ ತೇ ನಾರದಾಚ್ಛ್ರುತಂ ॥ ೩೩ ॥

ರಹಸ್ಯಂ ಚ ಪ್ರಕಾಶಂ ಚ ತದ್ವೃತ್ತಂ ತಸ್ಯ ಧೀಮತಃ ।
ರಾಮಸ್ಯ ಸಹ ಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ. ॥ ೩೪ ॥

ವೈದೇಹ್ಯಾಶ್ಚೈವ ಯದ್ವೃತ್ತಂ ಪ್ರಕಾಶಂ ಯದಿ ವಾ ರಹಃ ।
ತಚ್ಚಾಪ್ಯವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ ॥ ೩೫ ॥

ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ ।
ಕುರು ರಾಮಕಥಾಂ ರಮ್ಯಾಂ ಶ್ಲೋಕಬದ್ಧಾಂ ಮನೋರಮಾಂ ॥ ೩೬ ॥

೩೨–೩೩. ಎಲೈ ಋಷಿಯೇ! ನನ್ನ ಇಷ್ಟದಿಂದಲೇ ನಿನ್ನಿಂದ ಈ ಸರಸ್ವತಿಯು ಹೊರಟಿತು. ನೀನು ರಾಮನ ಚರಿತ್ರೆಯೆಲ್ಲವನ್ನೂ ಪೂರ್ತಿಯಾಗಿ ಬರೆದಿಡು. ರಾಮನು ಧರ್ಮಾತ್ಮನು. ಗುಣವಂತನು. ಬಹು ಬುದ್ಧಿವಂತನು. ಧೀರನಾದ ಆ ರಾಮನ ಕಥೆಯನ್ನು ವಿವರಿಸು. ನಿನಗೆ ನಾರದನು ಹೇಳಿರುವ ನಷ್ಟೆ. ಅದನ್ನು ಸ್ವಲ್ಪವೂ ಹೆಚ್ಚುಕಡಿಮೆಮಾಡಬೇಡ.

೩೪. ಅವನ ಚರಿತ್ರೆಯಲ್ಲಿ ರಹಸ್ಯವಾದುದನ್ನೂ ಪ್ರಕಾಶವಾದುದನ್ನೂ ಎಲ್ಲವನ್ನೂ ವಿವರಿಸು. ಆ ರಾಮನ ಚರಿತ್ರೆಯ ಜೊತೆಯಲ್ಲಿ ಲಕ್ಷ್ಮಣನ ಚರಿತ್ರೆಯೂ ಸೇರಿರಲಿ. ಕಪಿಗಳ ಮತ್ತು ರಾಕ್ಷಸರ ಚರಿತ್ರೆಯನ್ನೂ ಬಿಡಕೂಡದು.

೩೫. ವೈದೇಹಿಯ ಗುಟ್ಟಾದ ಮತ್ತು ರಟ್ಟಾದ ಚರಿತ್ರೆಯೆಲ್ಲವನ್ನೂ ವಿವರಿಸು. ಇವರ ಚರಿತ್ರೆಗಳು ನಿನಗೆ ತಿಳಿದಿರುವುದರ ಜೊತೆಗೆ ತಿಳಿಯ ದಿರುವುದೂ ತಿಳಿಯಲಿ.

೩೬. ಈ ಕಾವ್ಯದಲ್ಲಿ ನೀನು ಬರೆಯುವುದೊಂದೂ ಸುಳ್ಳಾಗಬೇಡ. ಈ ರಾಮಕಥೆಯನ್ನು ರಮ್ಯವನ್ನಾಗಿಯೂ ಶ್ಲೋಕಬದ್ಧವನ್ನಾಗಿಯೂ ಮನೋಹರ ವಾದುದನ್ನಾಗಿಯೂ ಮಾಡು.

ಯಾವತ್ ಸ್ಥಾಸ್ಯಂತಿ ಗಿರಯಸ್ಸರಿತಶ್ಚ ಮಹೀತಲೇ |
ತಾವದ್ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ || ೩೭ ||

ಯಾವದ್ರಾಮಾಯಣಕಥಾ ತ್ವತ್ಕೃತಾ ಪ್ರಚರಿಷ್ಯತಿ |
ತಾವದೂರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ || ೩೮ ||

ಇತ್ಯುಕ್ತ್ವಾ ಭಗವಾನ್ ಬ್ರಹ್ಮಾ ಸ್ವಯಂ ರಾಮಸ್ಯ ಧೀಮತಃ |
ಚರಿತ್ರಂ ಶ್ರಾವಯಾಮಾಸ ವೇದವಾಕ್ಯೈಃ ಸುಪುಣ್ಯದೈಃ || ೩೯ ||

ತತಸ್ತೇನಾರ್ಚಿತೋ ಬ್ರಹ್ಮಾ ತತ್ರೈವಾಂತರಧೀಯತ |
ತತಸ್ಸ ಶಿಷ್ಯೋಽಭಗವಾನ್ ಮುನಿರ್ವಿಸ್ಮಯ ಮಾಯಯೌ || ೪೦ ||

ತಸ್ಯ ಶಿಷ್ಯಾಸ್ತತಸ್ಸರ್ವೇ ಜಗುಃ ಶ್ಲೋಕಮಿಮಂ ಪುನಃ |
ಮುಹುರ್ಮುಹುಃ ಪ್ರೀಯಮಾಣಾಃ ಪ್ರಾಹುಶ್ಚ ಭೃಶವಿಸ್ಮಿತಾಃ || ೪೧ ||

---

೩೭. ಈ ಪರ್ವತಗಳೂ ನದಿಗಳೂ ಎಲ್ಲಿಯವರಿವಿಗೆ ಇರುತ್ತವೆಯೋ ಅಲ್ಲಿಯವರೆವಿಗೂ ಭೂಲೋಕದಲ್ಲಿ ರಾಮಾಯಣಕಥೆಯು ಬೆಳೆದುಕೊಂಡು ನಿಲ್ಲುತ್ತದೆ.

೩೮. ನೀನು ಮಾಡಿರುವ ರಾಮಾಯಣದ ಕಥೆಯು ಎಲ್ಲಿಯವರೆಗೆ ಸ್ವರ್ಗಮರ್ತ್ಯ ಪಾತಾಳಗಳಲ್ಲಿ ಇರುತ್ತದೆಯೋ ಅಲ್ಲಿಯವರೆಗೂ ನೀನು ಬ್ರಹ್ಮ ಲೋಕವಾದ ನನ್ನ ಲೋಕದಲ್ಲಿ ಸುಖವಾಗಿರುತ್ತೀಯೆ.

೩೯. ಭಗವಂತನಾದ ಬ್ರಹ್ಮನು ಇಂತೆಂದು ಹೇಳಿ ರಾಮನ ಚರಿತ್ರೆಯನ್ನು ವೇದವಾಕ್ಯಗಳಿಂದಲೇ ಆ ವಾಲ್ಮೀಕಿಗೆ ಹೇಳಿದನು.

೪೦. ಅನಂತರ ಆ ವಾಲ್ಮೀಕಿಯಿಂದ ಗೌರವಿತನಾಗಿ ಬ್ರಹ್ಮನು ಹೊರಟು ಹೋದನು. ಅನಂತರ ಈ ವಾಲ್ಮೀಕಿಗೂ ಅವನ ಶಿಷ್ಯರಿಗೂ ಬಹು ಆಶ್ಚರ್ಯ ವಾಯಿತು.

೪೧. ಅನಂತರ ಅವನ ಶಿಷ್ಯರೆಲ್ಲರೂ ಮೊದಲು ಹೇಳಿದ ಆ ಶ್ಲೋಕವನ್ನೇ ಮತ್ತೆ ಮತ್ತೆ ಹೇಳಿದರು. ಸಂತೋಷದಿಂದ ಮತ್ತೆ ಮತ್ತೆ ವಿಸ್ಮಯಭರಿತರಾಗುತ್ತಿದ್ದರು. ಮತ್ತೆ ಮತ್ತೆ ಹೇಳುತ್ತಿದ್ದರು.

ಸಮಾಕ್ಷರೈಶ್ಚತುರ್ಭಿರ್ಯಃ ಪಾದೈರ್ಗೀತೋ ಮಹರ್ಷಿಣಾ ।
ಸೋಽನುವ್ಯಾಹರಣಾದ್ಭೂಯಶ್ಶೋಕಃ ಶ್ಲೋಕತ್ವಮಾಗತಃ ॥ ೪೨ ॥

ತಸ್ಯ ಬುದ್ಧಿರಿಯಂ ಜಾತೌ ಮಹರ್ಷೇರ್ಭಾವಿತಾತ್ಮನಃ ।
ಕೃತ್ಸ್ನಂ ರಾಮಾಯಣಂ ಕಾವ್ಯಮೀದೃಶೈಃ ಕರವಾಣ್ಯಹಂ ॥ ೪೩ ॥

ಉದಾರವೃತ್ತಾರ್ಥ ಪದೈರ್ಮನೋರಮೈಃ
ತದಾಸ್ಯ ರಾಮಸ್ಯ ಚಕಾರ ಕೀರ್ತಿಮಾನ್ ।
ಸಮಾಕ್ಷರೈಃ ಶ್ಲೋಕಶತೈರ್ಯಶಸ್ವಿನೋ
ಮುನಿಸ್ಸ ಕಾವ್ಯಂ ಶತಕೋಟಿಸಮ್ಮಿತಂ ॥ ೪೪ ||

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ಶ್ಲೋಕೋತ್ಪತ್ತಿ ರಾಮಾಯಣ ಕಥನಂ ನಾಮ ಪ್ರಥಮಸ್ಸರ್ಗಸಮಾಪ್ತಃ

---

೪೨. ಸಮವಾದ ಅಕ್ಷರಗಳಿಂದಲೂ ನಾಲ್ಕು ಪಾದಗಳಿಂದಲೂ ಕೂಡಿದ್ದ ಆ ಮಹರ್ಷಿಯ ಶೋಕದ ಮಾತು ಶ್ಲೋಕವಾಯಿತು.

೪೩. ಆಗ ಈ ಮಹರ್ಷಿಯು ರಾಮಾಯಣವೆಲ್ಲವನ್ನೂ ಶ್ಲೋಕದಿಂದ ಕೂಡಿದ ಈ ಕಾವ್ಯದ ರೀತಿಯಿಂದಲೇ ಮಾಡಬೇಕೆಂಬುದನ್ನು ಮನಸ್ಸಿನಲ್ಲಿ ಮಾಡಿಕೊಂಡನು.

೪೪. ಒಳ್ಳೆಯ ವೃತ್ತಗಳಿಂದಲೂ ಉತ್ತಮವಾದ ಪದಗಳಿಂದಲೂ ಮನೋಹರವಾದ ಅರ್ಥದಿಂದಲೂ ಸಮಾಕ್ಷರವುಳ್ಳ ಶ್ಲೋಕಗಳಿಂದಲೂ ಶತಕೋಟ ಗ್ರಂಥವುಳ್ಳ ರಾಮನ ಚರಿತ್ರೆಯ.ನ್ನು ಈ ವಾಲ್ಮೀಕಿಯು ಅನಂತರ ರಚಿಸಿದನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಶ್ಲೋಕೋತ್ಪತ್ತಿ ರಾಮಾಯಣ ಕಥನವೆಂಬ ಮೊದಲನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

॥ ಮೊದಲನೆಯ ಸರ್ಗದ ಸಾರಾಂಶವು ॥

ಪಾರ್ವತಿಯು ಶಿವನನ್ನು ಕುರಿತು ರಾಮನ ಮಕ್ಕಳು ಮತ್ತು ತಮ್ಮಂದಿರ ಮಕ್ಕಳ ವಿಷಯವನ್ನೂ ಅವನು ರಾಜ್ಯಭಾರವಾಡಿದ ವಿಷಯವನ್ನೂ ಹೇಳಬೇಕೆಂದು ಕೇಳಿಕೊಂಡಳು. ಅದಕ್ಕೆ ಶಿವನು ಇಂತೆಂದನು.

ಎಲೈ ಪಾರ್ವತಿಯೇ ರಾಮಾಯಣವು ನೂರುಕೋಟಿ ಗ್ರಂಥಗಳಷ್ಟು ವಿಸ್ತಾರವಾಗಿದೆ. ಒಂದೊಂದಕ್ಷರವೂ ಪಾಪವನ್ನು ನಾಶಮಾಡುತ್ತದೆ. ಇದನ್ನು ವಾಲ್ಮೀಕಿಯು ರಚಿಸಿರುವನು. ಅದನ್ನು ಹೇಳುತ್ತೇನೆ. ಕೇಳು.

ಒಂದುಸಾರಿ ವಾಲ್ಮೀಕಿಯು ಸ್ನಾನಮಾಡಲು ಶಿಷ್ಯರೊಡನೆ ತಮಸಾನದಿಗೆ ಹೋದನು. ದೇಹಬಾಧೆಯನ್ನು ಮುಗಿಸಿಕೊಂಡು ಸ್ನಾನಕ್ಕೆ ಇಳಿಯುತ್ತಿರುವಾಗ ಒಬ್ಬ ಬೇಡನು ದಂಪತಿಗಳಾಗಿ ವಿಹರಿಸುತ್ತಿದ್ದ ಕ್ರೌಂಚಪಕ್ಷಿಗಳಲ್ಲಿ ಗಂಡು ಪಕ್ಷಿಯನ್ನು ಕೊಂದುಬಿಟ್ಟನು. ಇದನ್ನು ನೋಡಿ ಆ ಋಷಿಗೆ ಬಹು ವ್ಯಥೆಯಾಯಿತು. ಆಗ ಎಲೈ ನಿಷಾದನೆ ! ರಮಿಸುತ್ತ ಸುಖವಾಗಿರುತ್ತಿದ್ದ ಆ ಕ್ರೌಂಚಪಕ್ಷಿಗಳಲ್ಲಿ ಒಂದನ್ನು ನಿಷ್ಕಾರಣವಾಗಿ ಕೊಂದುದರಿಂದ ನೀನೂ ಬಹುಕಾಲ ಬದುಕಬೇಡ. ಎಂದು ಶಪಿಸಿದನು.

ಹಾಗೆಯೇ ಯೋಚಿಸುತ್ತಿರಲು ದುಃಖದಿಂದ ಆಡಿದ ಈ ಮಾತುಗಳು ಪಾದಬದ್ಧವಾಗಿರುವಂತೆ ಕಂಡುಬಂದುವು. ಆದುದರಿಂದ ಇದು ಶ್ಲೋಕವಾಗಿ ಪರಿಣಮಿಸಿತು. ಅನಂತರ ಗುರುಶಿಷ್ಯರು ಆಶ್ರಮಕ್ಕೆ ಬಂದುಬಿಟ್ಟರು. ಅಲ್ಲಿಯೂ ಕೂಡ ಇದೇ ಯೋಚನೆಯಲ್ಲಿದ್ದರು.

ಆಗ ಬ್ರಹ್ಮನು ಇವನ ಬಳಿಗೆ ಬರಲು ಋಷಿಯು ಅವನನ್ನು ಯೋಗ್ಯ ರೀತಿಯಿಂದ ಪೂಜಿಸಿದನು. ಮತ್ತು ತನ್ನ ಯೋಚನೆಯಲ್ಲಿಯೇ ಮಗ್ನನಾದನು. ಇದನ್ನು ತಿಳಿದು ಬ್ರಹ್ಮನು "ಎಲೈ ಋಷಿಯೇ ! ನೀನು ಶೋಕಿಸಬೇಡ. ಅದು

ಶ್ಲೋಕವಾಗಿಯೇ ಇರುವುದು. ನನ್ನ ಅಪ್ಪಣೆಯಂತೆಯೇ ಸರಸ್ವತಿಯು ನಿನ್ನ ಬಾಯಿಂದ ಈ ರೂಪದಲ್ಲಿ ಹೊರಟಿರುವಳು. ರಾಮನ ಚರಿತ್ರೆಯೆಲ್ಲವನ್ನೂ ನೀನು ರಚಿಸು. ನೀನು ನಾರದನಿಂದ ಕೇಳಿ ತಿಳಿದುಕೊಂಡಿರುವೆಯಷ್ಟೆ! ಅದರಂತೆಯೇ ಎಲ್ಲವನ್ನೂ ನಿರ್ಮಿಸು. ಅದರಲ್ಲಿ ರಹಸ್ಯವಾದುವನ್ನು ಕೂಡ ಬಿಡದೆ ಬರೆಯಬೇಕು. ನಿನಗೆ ತಿಳಿಯದಿರುವುದೂ ಕೂಡ ತಿಳಿದುಬರಲಿ. ಆ ರಾಮಾಯಣವು ಈ ಪ್ರಪಂಚವು ಇರುವವರೆಗೂ ಇರಲಿ. ಆ ರಾಮಾಯಣವು ಇರುವವರೆಗೂ ನೀನು ನನ್ನ ಲೋಕದಲ್ಲಿರು" ಎಂದು ಹೇಳಿ ಹೊರಟುಹೋದನು.

ಅನಂತರ ಆ ಋಷಿಯು ಸಂತೋಷಗೊಂಡು ಅಂತೆಯೇ ಆ ಶ್ಲೋಕವನ್ನು ಹೇಳುತ್ತ ನೂರುಕೋಟಿ ಗ್ರಂಥವುಳ್ಳ ರಾಮಾಯಣವನ್ನು ರಚಿಸಿದನು. ಅದು ಬಹು ರಮ್ಯವೂ ಪೂಜ್ಯವೂ ಹಾಡುವುದಕ್ಕೆ ಅನುಕೂಲವೂ ಆಗಿರುವುದು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ದ್ವಿತೀಯಸ್ಸರ್ಗಃ ॥

॥ ಶ್ರೀ ಶಿವ ಉವಾಚ ॥

ವಾಲ್ಮೀಕಿನಾ ಕೃತಂ ದೇವಿ ಶತಕೋಟಿಪ್ರವಿಸ್ತರಂ ।
ರಾಮಾಯಣಂ ಮಹಾಕಾವ್ಯಂ ಜಗೃಹುರ್ಮುನಯಶ್ಚ ತೇ ॥ ೧ ॥

ಆಶ್ರಮೇ ಪ್ರಪಠಂತಿ ಸ್ಮ ಕಥಯಂತಿ ಸ್ಮ ತೇ ಮುದಾ ।
ತಚ್ಛ್ರೋತುಮಮರಾಸ್ಸರ್ವೇ ವಿಮಾನೈಶ್ಚ ದಿವಿ ಸ್ಥಿತಾಃ ॥ ೨ ॥

ಶ್ರೀಮದಾನಂದರಾಮಾಯಣ ಯಾತ್ರಾಕಾಂಡದಲ್ಲಿ

ಎರಡನೆಯ ಸರ್ಗವು

೧. ಶಿವನು ಹೇಳಿದನು–ವಾಲ್ಮೀಕಿಯು ನೂರುಕೋಟಿ ಗ್ರಂಥಗಳ ವಿಸ್ತಾರವುಳ್ಳ ರಾಮಚರಿತ್ರೆಯನ್ನು ರಾಮಾಯಣ ಮಹಾಕಾವ್ಯವೆಂದು ಹೆಸರಿಟ್ಟು ಮಾಡಿದನು. ಇದನ್ನು ಋಷಿಗಳೆಲ್ಲರೂ ಪರಿಗ್ರಹಿಸಿ ಗೌರವಿಸಿದರು.

೨. ಅವರೆಲ್ಲರೂ ಅವರವರ ಆಶ್ರಮಗಳಲ್ಲಿ ಸಂತೋಷದಿಂದ ಓದುತ್ತಲೂ ಹೇಳುತ್ತಲೂ ಇದ್ದರು. ಅದನ್ನು ಕೇಳಲು ದೇವತೆಗಳೆಲ್ಲರೂ ವಿಮಾನಗಳಲ್ಲಿ ಬಂದು ಅಂತರಿಕ್ಷದಲ್ಲಿ ನಿಂತರು.

ಶ್ರುತ್ವಾ ಸರ್ವಂ ಸವಿಸ್ತಾರಂ ವಾಲ್ಮೀಕಿಂ ಪುಷ್ಪವೃಷ್ಟಿಭಿಃ ।
ವವರ್ಷುಃ ಜಯಶಬ್ದೈಸ್ತೇ ಪ್ರಶಶಂಸುರ್ಮುನೀಶ್ವರಂ ॥ ೩ ॥

ತತೋ ದೇವಾಸ್ಸಗಂಧರ್ವಾ ಯಕ್ಷಾ ನಾಗಾಸ್ಸಕಿನ್ನರಾಃ ।
ಮುನೀಶ್ವರಂ ಗುಹ್ಯಕಾಶ್ಚ ಪಾರ್ಥಿವಾಃ ಪದ್ಮಭೂಸ್ತ್ವಹಂ ॥ ೪ ॥

ಪರಸ್ಪರಂ ತೇ ಕಲಹಂ ಚಕ್ರುಃ ಕಾವ್ಯಾರ್ಥಮಾದರಾತ್ ।
ಬ್ರಹ್ಮಾದ್ಯಾ ನಿರ್ಜರಾಃ ಪ್ರೋಚುಃ ಪನ್ನಗಾನ್ ದಿತಿಜಾನ್ನರಾನ್ ॥ ೫ ॥

ವಯಂ ಕಾವ್ಯಂ ವಿನೇಷ್ಯಾಮೋ ದಿವಂ ವಾಲ್ಮೀಕಿನಾ ಕೃತಂ ।
ದಿತಿಜಾಃ ಪನ್ನಗಾಃ ಪ್ರೋಚುಃ ವಿನೇಷ್ಯಾಮೋ ರಸಾತಲಂ ॥ ೬ ॥

ವಯಂ ಕಾವ್ಯಂ ರಾಘವಸ್ಯ ಚರಿತ್ರಂ ಪಾವನಂ ಶುಭಂ ।
ಋಷೀಶ್ವರಾಸ್ಸಭೂಪಾಲಾಃ ಪ್ರೋಚುಃ ಕಾವ್ಯಂ ಹಿ ಭೂತಲಾತ್ ॥ ೭ ॥

---

೩. ಆ ರಾಮನ ಕಥೆಯೆಲ್ಲವನ್ನೂ ವಿಸ್ತಾರವಾಗಿ ಕೇಳಿ ವಾಲ್ಮೀಕಿಯ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಜಯ ಜಯ ಎಂಬ ಶಬ್ದದಿಂದ ಆ ಋಷಿಯನ್ನು ಗೌರವಿಸುತ್ತ ಹೊಗಳಿದರು.

೪. ಆಗ ಯಕ್ಷರೂ ದೇವತೆಗಳೂ ಕಿನ್ನರರೂ ಗಂಧರ್ವರೂ ನಾಗರೂ ಮುನೀಶ್ವರರೂ ಗುಹ್ಯಕರೂ ರಾಜರೂ ಬ್ರಹ್ಮನೂ ಶಿವನಾದ ನಾನೂ ಆ ಕಾವ್ಯವನ್ನು ಹೊಂದುವುದರಲ್ಲಿ ಒಬ್ಬರಿಗೊಬ್ಬರು ಆದರದಿಂದ ಬಹು ಚರ್ಚೆಯನ್ನು ಮಾಡಿದೆವು. (ನನಗೆ ಬೇಕು. ನನಗೆ ಬೇಕು. ಎಂದು ಜಗಳವಾಡಿದೆವು.)

೫-೬. ಬ್ರಹ್ಮನೇ ಮೊದಲಾದ ದೇವತೆಗಳು ಪನ್ನಗರನ್ನೂ ರಾಕ್ಷಸರನ್ನೂ ನರರನ್ನೂ ಕುರಿತು ಈ ಕಾವ್ಯವನ್ನು ತಾವು ಸ್ವರ್ಗಲೋಕಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದೂ, ರಾಕ್ಷಸರೂ ನಾಗರೂ ನಾವು ಪಾತಾಳಕ್ಕೆ ತೆಗೆದು ಕೊಂಡು ಹೋಗುತ್ತೇವೆ ಎಂದೂ ಎನ್ನುತ್ತಿದ್ದರು.

೭. ಋಷೀಶ್ವರರೂ ದೊರೆಗಳೂ ಮಿಕ್ಕವರನ್ನು ಕುರಿತು ನೀವು ಈ ಕಾವ್ಯವನ್ನು ಸ್ವರ್ಗಕ್ಕಾಗಲಿ ಪಾತಾಳಕ್ಕಾಗಲಿ ಭೂಮಿಯಿಂದ ತೆಗೆದು ಕೊಂಡು ಹೋಗಲು ಕೊಡುವುದಿಲ್ಲ. ಎನ್ನುತ್ತಿದ್ದರು.

ನೇತುಂ ರಸಾತಲಂ ಸ್ವರ್ಗಂ ನ ದಾಸ್ಯಾಮೋ ವಯಂ ತ್ವಿದಂ |
ಕಾರ್ಯಾರ್ಥಮಿತಿ ತೇ ಚಕ್ರುಃ ಕಲಹಂ ರೋಮಹರ್ಷಣಂ ॥ ೮ ॥

ತತೋ ದೇವಿ ಮಯಾ ಸರ್ವಾನ್ ನಿವಾರ್ಯ ವಚನೈರ್ನಿಜೈಃ |
ಗತ್ವಾಹಂ ತೈಸ್ತು ಕ್ಷೀರಾಬ್ಧೌ ಶೇಷಪರ್ಯಂಕಶಾಯಿನಂ ॥ ೯ ॥

ವಿಷ್ಣುಂ ಸ್ತುತ್ವಾ ತು ವೇದೋಕ್ತೈರ್ಮಂತ್ರೈರ್ನಾನಾವಿಧೈರಪಿ |
ನಾನಾಪೂಜೋಪಹಾರೈಶ್ಚ ಪೂಜಯಿತ್ವಾ ಸವಿಸ್ತರಂ ॥ ೧೦ ॥

ಕೃತವಾನ್ ಗೀತವಾದ್ಯಾದಿ ತೇನ ವಿಷ್ಣುಃ ಪ್ರಬುಧ್ಯತ |
ಪಪ್ರಚ್ಛ ಮಾಂ ತದಾ ವಿಷ್ಣುಃ ಕಿಮರ್ಥಂ ಬೋಧಿತೋ ಸ್ಮ್ಯಹಂ ॥ ೧೧ ॥

---

೮. ಸ್ವರ್ಗಕ್ಕಾಗಲೀ ಪಾತಾಳಕ್ಕಾಗಲೀ ಈ ಕಾರ್ಯವನ್ನು ತೆಗೆದುಕೊಂಡು ಹೋಗಲು ಅವಕಾಶವನ್ನು ಕೊಡದೆ ನಾವು ಜಗಳವಾಡುತ್ತೇವೆ. ಎಂಬದಾಗಿ ಬಹು ಕ್ರೂರವಾಗಿ ಭೂಲೋಕದವರು ಬದ್ಧಕಂಕಣರಾದರು. ಜಗಳವನ್ನೂ ಆಡಿದರು.

೯–೧೦. ಎಲೈ ದೇವಿಯೇ ! ಆಗ ನಾನು ಎಲ್ಲರಿಗೂ ಸಮಾಧಾನವನ್ನು ಹೇಳಿ ಅವರ ಜಗಳವನ್ನು ನಿಲ್ಲಿಸಿದೆನು. ಅವರೆಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಕ್ಷೀರಸಮುದ್ರಕ್ಕೆ ಹೋಗಿ ಶೇಷನೆಂಬ ಹಾಸಿಗೆಯಮೇಲೆ ಮಲಗಿರುವ ಆ ವಿಷ್ಣುವನ್ನು ವೇದೋಕ್ತಮಂತ್ರಗಳಿಂದಲೂ ನಾನಾಬಗೆಯಾದ ಸ್ತುತಿಗಳಿಂದಲೂ ಸ್ತುತಿಸಿ ಅನೇಕವಿಧವಾದ ಪೂಜೆಗಳಿಂದ ಪೂಜಿಸಿದೆನು.

೧೧. ಅನೇಕ ವಿಧವಾದ ಗೀತವಾದ್ಯಗಳನ್ನೂ ಮಾಡಲು ಆಗ ವಿಷ್ಣುವು ಎಚ್ಚರಗೊಂಡನು ಆಗ ಆ ವಿಷ್ಣುವು ನನ್ನನ್ನು ಕುರಿತು ನನ್ನನ್ನೇಕೆ ಎಬ್ಬಿಸಿದೆ ? ಎಂದು ಕೇಳಿದನು.

ವೃತ್ತಂ ಸರ್ವಂ ಮಯಾ ದೇವಿ ಕಥಿತಂ ತತ್ಸವಿಸ್ತರಂ ।
ಕಾವ್ಯಾರ್ಥಂ ಕಲಹಂ ಶ್ರುತ್ವಾ ಪ್ರಹಸ್ಯ ಜಗದೀಶ್ವರಃ ॥ ೧೨ ॥

ತ್ರಿಧಾ ವಿಭಜ್ಯ ಕಾವ್ಯಂ ತತ್ ಕ್ಷಣೇನ ಭಕ್ತವತ್ಸಲಃ ।
ತ್ರಯಸ್ತ್ರಿಂಶತ್ಕೋಟಿ ಲಕ್ಷ ಸಹಸ್ರಾಣಿ ಪೃಥಕ್ ಪೃಥಕ್ ॥ ೧೩ ॥

ಶತಾನಿ ತ್ರೀಣಿ ಶ್ಲೋಕಾಂಶ್ಚ ತ್ರಯಸ್ತ್ರಿಂಶಚ್ಛುಭಾವಹಾನ್ ।
ದಶಾಕ್ಷರಮಿತಾನ್ಮಂತ್ರಾನ್ ವಿಭಜ್ಯತ ರಮಾಪತಿಃ ॥ ೧೪ ॥

ದ್ವೇಕ್ಷರೇ ಯಾಚಮಾನಾಯ ಮಹ್ಯಂ ಶೇಷೇ ದದೌ ಹರಿಃ ।
ಉಪದಿಶಾಮ್ಯಹಂ ಕಾಶ್ಯಾಂ ತೇಂತಕಾಲೇ ನೃಣಾಂ ಶ್ರುತೌ ॥ ೧೫ ॥

ರಾಮೇತಿ ತಾರಕಂ ಮಂತ್ರಂ ತಮೇವ ವಿದ್ಧಿ ಪಾರ್ವತಿ ।
ಲಕ್ಷ್ಮೀಗರುಡಶೇಷೇಭ್ಯೋ ಯಾಚಮಾನೇಭ್ಯ ಆದರಾತ್ ॥ ೧೬ ॥

---

೧೨. ಆಗ ನಡೆದ ವಿಷಯವೆಲ್ಲವನ್ನೂ ಅವನಿಗೆ ವಿಸ್ತಾರವಾಗಿ ಹೇಳಿದೆನು. ಈ ಕಾವ್ಯನನ್ನು ತೆಗೆದುಕೊಂಡು ಹೋಗುವ ವಿಷಯದಲ್ಲುಂಟಾದ ಕಲಹವನ್ನು ಕೇಳಿ ಆ ಜಗದೀಶ್ವರನು ನಕ್ಕನು.

೧೩–೧೪. ಆ ಸ್ವಾಮಿಯು ಆ ಕಾವ್ಯವನ್ನು ಕ್ಷಣಕಾಲದಲ್ಲಿಯೇ ಮೂರು ಭಾಗವಾಗಿ ವಿಭಾಗಿಸಿದನು. ಅವು ಬೇರೆಬೇರೆಯಾಗಿ ಮೂವತ್ತಮೂರು ಕೋಟಿಯೂ ಮೂವತ್ತಮೂರು ಲಕ್ಷವೂ ಮೂವತ್ತುಮೂರು ಸಾವಿರವೂ ಮುನ್ನೂರಮೂವತ್ತಮೂರು ಸಂಖ್ಯೆಯುಳ್ಳುದುವು. ಅದರಲ್ಲಿದ್ದ ದಶಾಕ್ಷರೀ ಮಂತ್ರವನ್ನು ಬೇರೆಮಾಡಿದನು.

೧೫–೧೬. ಅನಂತರ ಉಳಿದ ಎರಡು ಅಕ್ಷರಗಳನ್ನು ನಾನು ಯಾಚಿಸಲು ನನಗೆ ಕೊಟ್ಟನು. ಯಾರು ನನ್ನ ಕಾಶಿಯಲ್ಲಿ ಮರಣವನ್ನು ಹೊಂದುವರೋ ಅವರ ಕೊನೆಗಾಲದಲ್ಲಿ ನಾನು ಅವರಿಗೆ ಕಿವಿಯಲ್ಲಿ ಆವೆರಡಕ್ಷರವನ್ನೂ ಉಪದೇಶಿಸುತ್ತೇನೆ.

ಮಂತ್ರತ್ರಯಂ ಪೃಥಗ್ವಿಷ್ಣುರ್ದದೌ ತೇಭ್ಯೋತಿಹರ್ಷಿತಃ ।
ಶೇಷೋ ನಿನಾಯ ಪಾತಾಲಂ ಲಕ್ಷ್ಮೀರ್ವೈಕುಂಠಮಾದರಾತ್ ॥ ೧೭ ॥

ಪೃಥಿವ್ಯಾಮೇವ ಗರುಡಸ್ತಂದಧಾರ ಮಹಾಮನುಂ ।
ಪ್ರಾಪುಶ್ಶೇಷಾತ್ ಪನ್ನಗಾದ್ಯಾಸ್ಸರ್ವೇ ಪಾತಾಲವಾಸಿನಃ ॥ ೧೮ ॥

ಸ್ವರ್ಗೇ ಪ್ರಾಪುರ್ಮಹಾಲಕ್ಷ್ಮ್ಯಾಸ್ತಂ ಮನುಂ ನಿರ್ಜರಾದಯಃ ।
ತಾರ್ಕ್ಷ್ಯಾತ್ಪ್ರಾಪುರ್ಮಹಾಮಂತ್ರಂ ಸರ್ವೇ ಭೂತಲವಾಸಿನಃ ॥ ೧೯ ॥

ಮಂತ್ರಶಾಸ್ತ್ರಾತ್ತತ್ಸ್ವರೂಪಂ ಜ್ಞೇಯಂ ಗುಹ್ಯಂ ಗಿರೀಂದ್ರಜೇ ।
ತತಃ ಪೂರ್ವವಿಭಾಗಾನ್ಸ ದದೌ ವಿಷ್ಣುಃ ಪೃಥಕ್ ಪೃಥಕ್ ॥ ೨೦ ॥

ಏಕಂ ವಿಭಾಗಂ ದೇವೇಭ್ಯೋ ದ್ವಿತೀಯಂ ಪರಮೇಶ್ವರಃ ।
ಮುನೀಶ್ವರೇಭ್ಯೋ ನಾಗೇಭ್ಯಸ್ತೃತೀಯಂ ಭಾಗಮುತ್ತಮಂ ॥ ೨೧ ॥

೧೭–೧೯. ಅದೇ "ರಾಮ" ಎಂಬ ತಾರಕಮಂತ್ರವೆಂದು ಎಲೈ ಪಾರ್ವತಿಯೇ! ನೀನು ತಿಳಿದುಕೋ. ಲಕ್ಷ್ಮಿಯೂ ಗರುಡನೂ ಶೇಷನೂ ತಾವೂ ಕೇಳಲು ಅವರಿಗೂ ಬೇರೆ ಬೇರೆಯಾದ ಮೂರುಮಂತ್ರಗಳನ್ನು ಕೊಟ್ಟನು. ಶೇಷನು ಪಾತಾಳಕ್ಕು, ಲಕ್ಷ್ಮಿಯು ವೈಕುಂಠಕ್ಕೂ, ಗರುಡನು ಭೂಮಿಗೂ ತೆಗೆದುಕೊಂಡು ಹೋಗಿ ಕಾಪಾಡಿದರು. ಆ ಶೇಷನಿಂದ ಪಾತಾಳದ ಸರ್ಪಗಳು ಹೊಂದಿದುವು. ಲಕ್ಷ್ಮಿಯು ಸ್ವರ್ಗದವರಿಗೆ ಉಪದೇಶಿಸಿದಳು. ಗರುಡನು ಭೂಮಿಯವರಿಗೆ ಹೇಳಿದನು.

೨೦–೨೧. ಆ ಮಂತ್ರಗಳ ಸ್ವರೂಪವನ್ನು ಮಂತ್ರಶಾಸ್ತ್ರದಿಂದ ತಿಳಿದುಕೊಳ್ಳಬೇಕು. ಈ ರೀತಿಯಾಗಿ ವಿಷ್ಣುವು ಮೊದಲಿನ ಭಾಗವನ್ನು ದೇವತೆಗಳಿಗೂ ಎರಡನೆಯಭಾಗವನ್ನು ಮುನಿಗಳಿಗೂ ಮೂರನೆಯ ಭಾಗವನ್ನು ನಾಗರಿಗೂ ಕೊಟ್ಟನು. ಇವರೊಬ್ಬೊಬ್ಬರಿಗೂ ಮೂವತ್ತಮೂರು ಕೋಟಿ ಮೂವತ್ತಮೂರು ಲಕ್ಷ ಮೂವತ್ತಮೂರುಸಾವಿರದ ಮೂನ್ನೂರಮೂವತ್ತಮೂರು (೩೩೩೩೩೩೩೩೩) ಗ್ರಂಥಗಳು ಬಂದುವು.

ತತೋ ದೇವಾ ನಿಜಂ ಭಾಗಂ ಸ್ವರ್ಗಂ ನಿನ್ಯುರ್ಮುದಾನ್ವಿತಾಃ ।
ಪಾತಾಲೇ ಪನ್ನಗಾಶ್ಚಾಪಿ ನಿನ್ಯುರ್ಭಾಗಂ ಮುದಾ ನಿಜಂ ॥ ೨೨ ॥

ಆಸೀದ್ಭಾಗೋ ಮುನೀನಾಂ ಹಿ ಪೃಥಿವ್ಯಾಂ ಗಿರಿಜಾತ್ಮಜೇ ।
ತಸ್ಯಾಪಿ ವಿಸ್ತರಂ ವಕ್ಷ್ಯೇ ವಿಭಕ್ತೋ ವಿಷ್ಣುನಾ ಯಥಾ ॥ ೨೩ ॥

ಸಪ್ತದ್ವೀಪೇಷು ಸರ್ವತ್ರ ವಿಭಕ್ತಸ್ಸಪ್ತಧಾ ಪುನಃ ।
ಕೋಟ್ಯಶ್ಚತ್ವಾರಿ ಲಕ್ಷಾಣಿ ಷಟ್ಸಪ್ತತಿಮಿತಾನಿ ಹಿ ॥ ೨೪ ॥

ಸಹಸ್ರಾಣಿ ತಥೈಕೋನವಿಂಶಚ್ಚೈವ ತದಾ ಪುನಃ ।
ಸಪ್ತಚತ್ವಾರಿಂಶನ್ಮಿತಾಃ ಶ್ಲೋಕಾಶ್ಚೇತಿ ಪೃಥಕ್ ಪೃಥಕ್ ॥ ೨೫ ॥

ವಿಭಕ್ತಂ ಸಪ್ತಧಾ ದೇವಿ ಸಪ್ತದ್ವೀಪೇಷು ವಿಷ್ಣುನಾ ।
ಚತುಶ್ಶ್ಲೋಕಾಶ್ಶೇಷಭೂತಾ ಯಾಚಮಾನಾಯ ವೇಧಸೇ ॥ ೨೬ ॥

೨೨–೨೩. ದೇವತೆಗಳು ಅವರ ಭಾಗವನ್ನು ಸಂತೋಷದಿಂದ ಸ್ವರ್ಗಕ್ಕೆ ತೆಗೆದುಕೊಂಡು ಹೋದರು. ನಾಗರು ತಮ್ಮ ಭಾಗವನ್ನು ಸಂತೋಷದಿಂದ ಪಾತಾಳಕ್ಕೆ ತೆಗೆದುಕೊಂಡು ಹೋದರು. ಮುನಿಗಳ ಭಾಗವು ಭೂಮಿಯಲ್ಲಿ ನಿಂತಿತು. ಅದನ್ನು ವಿಷ್ಣುವು ವಿಭಾಗಿಸಿರುವನು. ಆ ವಿಭಾಗಗಳನ್ನು ಹೇಳುತ್ತೇನೆ. ಕೇಳು.

೨೪–೨೬. ಈ ಭೂಮಿಯಲ್ಲಿರುವ ಏಳುದ್ವೀಪಗಳಿಗೂ ಏಳುಭಾಗವಾಗಿ ಮಾಡಿಟ್ಟನು. ಒಂದೊಂದಕ್ಕೂ ನಾಲ್ಕುಕೋಟಿಯೂ ಎಪ್ಪತ್ತಾರು ಲಕ್ಷದ ಹತ್ತೊಂಬತ್ತುಸಾವಿರದ ನಲವತ್ತೇಳು (೪೭೬೧೯೦೪೭) ಗ್ರಂಥದ ಭಾಗಗಳು ಬಂದುವು. ಈ ರೀತಿಯಾಗಿ ಮಾಡಿ ಒಂದೊಂದು ಭಾಗವನ್ನೂ ಒಂದೊಂದು ದ್ವೀಪಕ್ಕೂ ಕೊಟ್ಟನು. ಮತ್ತೂ ನಾಲ್ಕುಶ್ಲೋಕಗಳು ಉಳಿದುವು. ಅದನ್ನು ಬ್ರಹ್ಮನು ಕೇಳಲು ಅವನಿಗೆ ಕೊಟ್ಟುಬಿಟ್ಟನು. ಪುಷ್ಕರದ್ವೀಪದ ಭಾಗವನ್ನು ಎರಡು ಭಾಗಮಾಡಿ ಎರಡು ವರ್ಷಗಳೆಂಬ ದೇಶಗಳಿಗೆ ಹಂಚಿದನು.

ದದೌ ವಿಷ್ಣುಸ್ತುಷ್ಟಮನಾ ನಿಜಭಕ್ತಾಯ ಭಕ್ತಿತಃ ।
ಪುಷ್ಕರದ್ವೀಪಭಾಗಶ್ಚ ವರ್ಷಯೋರ್ದ್ವಿವಿಧಾಕೃತಃ ॥ ೨೭ ॥

ಕೋಟ್ಯೌ ದ್ವೇ ಹ್ಯಷ್ಟತ್ರಿಂಶಚ್ಚ ಲಕ್ಷಾಣಿ ಹಿ ತಥಾ ಪುನಃ ।
ಸಹಸ್ರಾಣಿ ನವೈವಾಥ ತಥಾ ಪಂಚಶತಾನಿ ಹಿ ॥ ೨೮ ॥

ತ್ರಯೋವಿಂಶಾಶ್ಚ ಶ್ಲೋಕಾಶ್ಚ ಷೋಡಶಾಕ್ಷರಜೋ ಮನುಃ ।
ಏವಂ ದ್ವಿಧಾ ಕೃತೌ ಭಾಗೌ ವಿಷ್ಣುನಾ ವರ್ಷಯೋಸ್ತ್ವಿಹ ॥ ೨೯ ॥

ಶಾಕದ್ವೀಪಾದಿ ದ್ವೀಪಾನಾಂ ಪಂಚಾನಾಂ ಚ ಪೃಥಕ್ ಪೃಥಕ್ ।
ಸಪ್ತಸ್ವಪಿ ಚ ಸರ್ವೇಷು ವರ್ಷೇಷು ಹರಿಣಾ ಯಥಾ ॥ ೩೦ ॥

ತತ್ತದ್ಭಾಗಾ ವಿಭಕ್ತಾಶ್ಚ ತಾನ್ ಶೃಣುಷ್ವ ಬ್ರವೀಮ್ಯಹಂ ।
ಅಷ್ಟಷಷ್ಟಿ ಹಿ ಲಕ್ಷಾಣಿ ಸಹಸ್ರೇ ದ್ವೇ ಶತಾನಿ ಹಿ ॥ ೩೧ ॥

ಸಪ್ತೈವ ಚ ತಥಾ ಶ್ಲೋಕಾ ಏಕವಿಂಶಚ್ಛುಭಪ್ರದಾಃ ।
ವಿಭಕ್ತೋ ಷಟ್ಸು ದ್ವೀಪೇಷು ತತ್ತದ್ಭಾಗೋ ಯಥಾಕ್ರಮಂ ॥
ಜಂಬುದ್ವೀಪಾಗತೋ ಭಾಗೋ ನವವರ್ಷೇಷು ಸಾದರಂ ॥ ೩೨ ॥

೨೭–೨೯. ಹಾಗೆ ಎರಡಾಗಿ ಹಂಚಲು ಎರಡು ಕೋಟಿಯೂ ಮೂವತ್ತೆಂಟು ಲಕ್ಷದ ಒಂಭತ್ತು ಸಾವಿರದ ಐನೂರಇಪ್ಪತ್ತಮೂರರಂತೆ ಬಂದುವು. ಆದರ ಜೊತೆಗೆ ಹದಿನಾರಕ್ಷರದ ಮಂತ್ರವನ್ನು ಕೊಟ್ಟನು. ಈ ಭಾಗಗಳನ್ನು ವಿಷ್ಣುವೇ ಮಾಡಿಟ್ಟನು.

೩೦–೩೧. ಶಾಕದ್ವೀಪವೇ ಮುಂತಾದ ಐದುದ್ವೀಪಗಳಿಗೂ ಅವುಗಳ ಏಳುವರ್ಷಗಳಿಗೂ ಬೇರೆ ಬೇರೆಯಾಗಿ ಏಳೇಳು ಭಾಗವನ್ನು ಮಾಡಿ ಒಂದೊಂದಕ್ಕೂ ಅರವತ್ತೆಂಟು ಲಕ್ಷದ ಎರಡುಸಾವಿರದ ಏಳನೂರ ಇಪ್ಪತ್ತೊಂದು ಸಂಖ್ಯೆಯ ಗ್ರಂಥಗಳು ಸಿಕ್ಕಿದುವು.

೩೨–೩೪. ಜಂಬೂದ್ವೀಪಕ್ಕೆ ಬಂದ ಭಾಗವನ್ನು ಒಂಭತ್ತು ವರ್ಷಗಳಿಗೂ ಹಂಚಿದನು. ಅದು ಕ್ರಮವಾಗಿ ಐವತ್ತೆರಡು ಲಕ್ಷದ ತೊಂಭತ್ತೊಂದು ಸಾವಿರದ

ವಿಭಕೋ ವಿಷ್ಣುನಾ ದೇವಿ ಯಥಾ ತ್ವಾಂ ಚ ಬ್ರವೀಮ್ಯಹಂ ।
ದ್ವಿಪಂಚಾಶತ್ತು ಲಕ್ಷಾಣಿ ತಥಾ ಗಿರಿವರಾತ್ಮಜೇ ॥ ೩೩ ॥

ಸಹಸ್ರಾಣ್ಯೇಕನವತಿಃ ಶ್ಲೋಕಾಃ ಪಂಚ ತಥಾ ಪುನಃ ।
ಸಪ್ತಾಕ್ಷರಮಿತಾ ಮಂತ್ರಾಸ್ತ್ವೇವಂ ಹಿ ನವಧಾ ಕೃತಾಃ ॥ ೩೪ ॥

ಶೇಷಮೇಕಮಕ್ಷರಂ ಶ್ರೀರಿತಿ ಸರ್ವತ್ರ ವಿಷ್ಣುನಾ ।
ನವಖಂಡೇಷು ತತ್ತ್ಯಕ್ತಂ ತತ್ಸರ್ವತ್ರ ನಿಯೋಜಯೇತ್ ॥ ೩೫ ॥

ನಾನಾ ನಾಮಸು ಮಂತ್ರೇಷು ನ ತಸ್ಯ ನಿಯಮಃ ಕೃತಃ ।
ವಿಭಜ್ಯೇತಿ ಮಹಾವಿಷ್ಣುರದೃಶ್ಯಮಗಮತ್ತದಾ ॥ ೩೬ ॥

ಅಗ್ರೇ ಕಾಲಾಂತರೇ ದೇವಿ ದಶಾಸ್ಯೋ ಬುದ್ಧಿಮತ್ತರಃ ।
ನಿಜಬುದ್ಧಿಬಲಾದೇವ ವೇದಾನಾಂ ಚ ಪೃಥಕ್ ಪೃಥಕ್ ॥ ೩೭ ॥

ಶತಶಶ್ಚೈವ ಖಂಡಾನಿ ಕರಿಷ್ಯತಿ ಋಜೂನಿ ಚ ।
ಜ್ಞಾತ್ವಾ ಮಂದಧಿಯೋ ವಿಪ್ರಾ ಭವಿಷ್ಯಂತೀತಿ ವೈ ಕಲೌ ॥ ೩೮ ॥

ಐದರಂತೆ ಬಂದುವು. ಅನಂತರ ಏಳುಅಕ್ಷರಗಳ ಒಂದು ಮಂತ್ರವನ್ನೂ ಕೊಟ್ಟನು.

೩೫-೩೬. ಇವುಗಳೆಲ್ಲದರಲ್ಲಿಯೂ ಶ್ರೀ ಎಂಬ ಅಕ್ಷರವು ಬಿಡಲ್ಪಟ್ಟದೆ. ಅದನ್ನು ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳಬೇಕು. ಅನೇಕ ನಾಮಗಳಲ್ಲಿಯೂ ಮಂತ್ರಗಳಲ್ಲಿಯೂ ಶ್ರೀಕಾರವನ್ನು ಸೇರಿಸಬೇಕು. ಆದರೆ ಸೇರಿಸಲೇಬೇಕೆಂಬ ನಿಯಮವನ್ನು ಮಾಡಲಿಲ್ಲ. ಈ ರೀತಿಯಾಗಿ ವಿಭಾಗವನ್ನು ಮಾಡಿ ವಿಷ್ಣುವು ಅಂತರ್ಧಾನನಾದನು.

೩೭-೩೮. ಎಲೈ ದೇವಿಯೇ ! ಮುಂದೆ ಕಾಲಾನುಕಾಲದಲ್ಲಿ ಬುದ್ಧಿವಂತನಾದ ದಶಾಸ್ಯನು ಹುಟ್ಟಿ ತನ್ನ ಬುದ್ಧಿಬಲದಿಂದ ವೇದಗಳಿಗೆ ಬೇರೆ ಬೇರೆಯಾಗಿ ನೂರಾರು ಖಂಡಗಳನ್ನು ಮಾಡುವನು. ಅದನ್ನು ಋಜುವಾಗಿ ಮಾಡುವುದರಿಂದ ಕಲಿಯುಗದಲ್ಲಿ ದಡ್ಡರಾದ ವಿಪ್ರರೂ ತಿಳಿದುಕೊಳ್ಳುವರು.

ಕ್ಷೀಣಾಯುಷೋ ವ್ಯಗ್ರಚಿತ್ತಾಸ್ತೇಷಾಂ ಯೋಗ್ಯಾನಿ ರಾವಣಃ ।
ಶ್ರೀಕೃಷ್ಣೋಽಪಿ ಪುನರ್ದೇವಿ ವ್ಯಾಸರೂಪಧರೋ ಭುವಿ ॥ ೩೯ ॥

ಮಾನವಾನಾಂ ಹಿತಾರ್ಥಾಯ ಕಾವ್ಯಾದ್ರಾಮಾಯಣಾತ್ಪುನಃ ।
ಭಾಗಾದ್ಭಾರತವರ್ಷಾಂತರ್ಗತಾಚ್ಚ ವಿವಿಧಾನಿ ಹಿ ॥ ೪೦ ॥

ಪೃಥಕ್ ಪೃಥಕ್ ಸಪ್ತದಶ ಪುರಾಣಾನಿ ಕರಿಷ್ಯತಿ ।
ಭಾರತಂ ತ್ವಿತಿಹಾಸಂ ಚ ಮಹಚ್ಛ್ರೇಷ್ಠಂ ಕರಿಷ್ಯತಿ ॥ ೪೧ ॥

ಭಾಗಾದ್ಭಾರತವರ್ಷಾಂತರ್ಗತಾತ್ಸಾರಂ ಪ್ರಗೃಹ್ಯ ಚ ।
ಸ ವ್ಯಾಸೋ ಭಾರತಾದ್ಯೈಶ್ಚ ಯದಾ ಶಾಂತಿಂ ನ ಗಚ್ಛತಿ ॥ ೪೨ ॥

ಸರಸ್ವತ್ಯಾಸ್ತಟೇ ವ್ಯಾಸೋ ವ್ಯಗ್ರಚಿತ್ತೋ ಭವಿಷ್ಯತಿ ।
ಏತಸ್ಮಿನ್ನಂತರೇ ಬ್ರಹ್ಮಾ ನಾರದಾಯ ಮಹಾತ್ಮನೇ ॥ ೪೩ ॥

---

೩೯. ಕಲಿಯುಗದಲ್ಲಿ ವಿಪ್ರರು ಕ್ಷೀಣಾಯುಷ್ಯರಾಗಿಯೂ ಸ್ಥಿರಚಿತ್ತರಲ್ಲದವರಾಗಿಯೂ ಆಗುವರು. ಅವರಿಗೆ ಯೋಗ್ಯವಾಗಿರುವಂತೆ ಈ ರಾವಣನು ಮಂತ್ರಗಳನ್ನು ಮಾಡುವನು. ಶ್ರೀಕೃಷ್ಣನೂ ಕೂಡ ಭೂಮಿಯಲ್ಲಿ ವ್ಯಾಸನ ರೂಪದಿಂದ ಹುಟ್ಟುವನು.

೪೦-೪೧. ಮನುಷ್ಯರ ಹಿತಕ್ಕೋಸ್ಕರ ಭಾರತವರ್ಷದ ರಾಮಾಯಣದ ಕಾವ್ಯದಿಂದ ವಿಷಯಗಳನ್ನು ತೆಗೆದು ಬೇರೆ ಬೇರೆಯಾಗಿ ಹದಿನೇಳು ಪುರಾಣಗಳನ್ನು ಮಾಡುವನು. ಅವುಗಳಲ್ಲಿ ಭಾರತವೆಂಬ ಇತಿಹಾಸವನ್ನು ಬಹು ಶ್ರೇಷ್ಠ ರೀತಿಯಿಂದ ಕಲ್ಪಿಸುವನು.

೪೨. ಈ ಭಾರತವರ್ಷದ ರಾಮಾಯಣದ ಸಾರವನ್ನು ತೆಗೆದುಕೊಂಡು ಅದನ್ನು ಬೇರೆ ಬೇರೆಯಾಗಿಯೂ ಮಾಡಿ ವ್ಯಾಸನು ಭಾರತವನ್ನು ಮಾಡಿದರೂ ಶಾಂತಿಯನ್ನು ಪಡೆಯುವುದಿಲ್ಲ.

೪೩-೪೪. ಆಗ ಮನಸ್ಸಿನಲ್ಲಿಯೇ ಖೇದವನ್ನು ಹೊಂದಿ ಸರಸ್ವತೀ ನದಿಯುದಡದಲ್ಲಿ ಕುಳಿತು ಯೋಚಿಸುತ್ತಿರುವನು. ಈ ಮಧ್ಯದಲ್ಲಿ ಬ್ರಹ್ಮನು ವಿಷ್ಣುವು

ಚತುಶ್ಶ್ಲೋಕೈರ್ವಿಷ್ಣುದತ್ತೈರುಪದೇಶಂ ಕರಿಷ್ಯತಿ ।
ಲಬ್ಧ್ವಾ ತಾನ್ ನಾರದಶ್ಚಾಪಿ ಸುವೀಣಾಂ ರಣಯನ್ಮುಹುಃ ॥ ೪೪ ॥

ಕೀರ್ತಯನ್ ಸುಸ್ವರಂ ಗತ್ವಾ ಮುನಿಂ ಸತ್ಯವತೀಸುತಂ ।
ತಾನ್ ಶ್ಲೋಕಾನ್ ವ್ಯಾಸಮುನಯೇ ಸ ತದಾ ಹ್ಯುಪದೇಕ್ಷ್ಯತಿ ॥ ೪೫ ॥

ಲಬ್ಧ್ವಾ ವ್ಯಾಸಮುನಿಃ ಶ್ಲೋಕಾನ್ ತಾನ್ವೈ ರಾಮಾಯಣಸ್ಥಿತಾನ್ ।
ಶಾಂತಿಂ ಲಬ್ಧ್ವಾ ತತಸ್ತೇಷಾಂ ವಿಸ್ತಾರಂ ಚ ಕರಿಷ್ಯತಿ ॥ ೪೬ ॥

ತೇಷಾಮೇವಾರ್ಥಮಾದಾಯ ಪುರಾಣಂ ಪರಮೋದಯಂ ।
ಅಷ್ಟಾದಶಸಹಸ್ರಂ ಹಿ ಶ್ರೀಮದ್ಭಾಗವತಾಭಿದಂ ॥ ೪೭ ॥

ಕರಿಷ್ಯತ್ಯಷ್ಟಾದಶಮಂ ರಮ್ಯಂ ಜನಮನೋಹರಂ ।
ಭಾಗವತಸ್ಯಾತ ಏವ ವಾಣೀ ಭಿನ್ನಾ ಭವಿಷ್ಯತಿ ॥ ೪೮ ॥

ತನಗೆ ಹೇಳಿಕೊಟ್ಟಿರುವ ನಾಲ್ಕುಶ್ಲೋಕಗಳನ್ನು ನಾರದನಿಗೆ ಉಪದೇಶ ಮಾಡಿದನು. ಆ ನಾರದನು ಸುಸ್ವರವಾಗಿ ವೀಣೆಯನ್ನು ಬಾರಿಸುತ್ತ ಆ ಚತುಶ್ಶ್ಲೋಕವನ್ನು ಹೇಳುತ್ತ ಅಲ್ಲಿಗೆ ಬರುವನು.

೪೫. ಹೀಗೆ ಸ್ತುತಿಸುತ್ತಿರುವಾಗ ಆ ಸತ್ಯವತಿಯ ಮಗನಾದ ವ್ಯಾಸನ ಬಳಿಗೆ ಹೋಗುವನು. ಅಲ್ಲಿ ಆ ಶ್ಲೋಕಗಳನ್ನು ಆ ವ್ಯಾಸಮುನಿಗೆ ಉಪದೇಶ ಮಾಡುವನು.

೪೬. ರಾಮಾಯಣದಲ್ಲಿರುವ ಆ ನಾಲ್ಕುಶ್ಲೋಕಗಳನ್ನು ವ್ಯಾಸಮುನಿಯು ಆ ನಾರದನಿಂದ ತಿಳಿದುಕೊಂಡು ಶಾಂತವಾಗಿ ಅವುಗಳನ್ನು ವಿಸ್ತರಿಸುವನು.

೪೭–೪೮. ಅವುಗಳ ಅರ್ಥವನ್ನು ತೆಗೆದುಕೊಂಡು ಅತ್ಯುತ್ಕೃಷ್ಟವಾದ ಹದಿನೆಂಟುಸಾವಿರ ಗ್ರಂಥಗಳುಳ್ಳ ಶ್ರೀಮದ್ಭಾಗವತವೆಂಬ ಹದಿನೆಂಟನೆಯ ಪುರಾಣವನ್ನು ಮನೋಹರವಾಗಿ ಮಾಡುವನು. ಆದ್ದರಿಂದಲೇ ಭಾಗವತದ ವಿಷಯವೂ ವೈಖರಿಯೂ ವರ್ಣನೆಯೂ ಕೂಡ ಬೇರೆಯಾದ ರೀತಿಯಲ್ಲಿಯೇ ಇರುವುವು.

ಪುರಾಣಾನಾಂ ಚ ಸರ್ವೇಷಾಂ ವಾಲ್ಮೀಕೀಯೈವ ಗೀಃ ಪ್ರಿಯೇ ।
ಪೃಥಕ್ಕರ್ತಾ ಸ್ಮೃತೋ ವ್ಯಾಸಃ ಶ್ರೀಮದ್ರಾಮಾಯಣಂ ಶತಂ ॥ ೪೯ ॥

ಕರಿಷ್ಯತಿ ತಥಾನ್ಯಾನಿ ಸ ವ್ಯಾಸೋ ವಿವಿಧಾನಿ ಚ ।
ರಮ್ಯಾಣ್ಯುಪಪುರಾಣಾನಿ ಸಾರಂ ಸಾರಂ ವಿಗೃಹ್ಯ ಚ ॥ ೫೦ ॥

ಭಾಗಾದ್ಭರತಖಂಡಾಂತರ್ಗತಾದ್ರಾಮಾಯಣಾದ್ಭುವಿ ।
ಕರಿಷ್ಯತಿ ತಥಾ ವ್ಯಾಸಃ ಷಟ್ಶಾಸ್ತ್ರಾಣಿ ಮುನೀಶ್ವರ ॥ ೫೧ ॥

ತಸ್ಮಾದ್ರಾಮಾಯಣಾದೇವ ಸಾರಮುದ್ಧೃತ್ಯ ಸಾದರಾತ್ ।
ಯತ್ಕಿಂಚಿದ್ಗಿರಿಜೇ ಭೂಮ್ಯಾಂ ಕೀರ್ತಿತಂ ವೈ ಕಥಾನಕಂ ।
ರಾಮಾಯಣಾಂಶಜಂ ವಿದ್ಧಿ ಶ್ಲೋಕಮಾತ್ರಮಪೀಹ ಯತ್ ॥ ೫೨ ॥

---

೪೯. ಎಲ್ಲಾ ಪುರಾಣಗಳಿಗೂ ವಾಲ್ಮೀಕಿಯ ರಾಮಾಯಣವೇ ಮೂಲವು. ಕೆಲಸವು ಮಾತ್ರ ಬೇರೆ ಬೇರೆಯೇ ಹೊರತು ಕರ್ತೃವು ವ್ಯಾಸನೊಬ್ಬನೇ ಆಗಿರುವನು. ಶ್ರೀಮದ್ರಾಮಾಯಣವೇ ಈ ರೀತಿಯಾಗಿ ನೂರಾರು ಬಗೆಯಾಗಿ ರುವುದು.

೫೦. ಅಲ್ಲದೆ ರಾಮಾಯಣದಲ್ಲಿ ಸಾರವನ್ನು ತೆಗೆದುಕೊಂಡು ವ್ಯಾಸನು ವಿಧ ವಿಧವಾದ ಉಪಪುರಾಣಗಳನ್ನೂ ರಚಿಸುವನು.

೫೧-೫೨. ಭರತಖಂಡದ ರಾಮಾಯಣದ ಈ ಭಾಗದಿಂದ ಸಾರವನ್ನು ತೆಗೆದು ವ್ಯಾಸನು ಆರುಶಾಸ್ತ್ರಗಳನ್ನೂ ರಚಿಸುವನು. ಎಲೈ ಗಿರಿಜೆಯೇ ! ಯಾವ ಕಥೆಯು ಭೂಮಿಯಲ್ಲಿ ಪ್ರಖ್ಯಾತವಾಗಿದೆಯೋ ಅವೆಲ್ಲವೂ ರಾಮಾಯಣ ದಲ್ಲಿದ್ದುದೆಂದು ತಿಳಿ.

॥ ಪಾರ್ವತ್ಯುವಾಚ ॥

ಶಂಭೋ ತೇ ಪ್ರಷ್ಟುಮಿಚ್ಛಾಮಿ ವ್ಯಾಸಾಯ ನಾರದೋ ಮುನಿಃ ॥ ೫೩ ॥

ಸ್ವಯಂ ಜ್ಞಾತ್ವಾ ವಿಧಿಮುಖಾದ್ರಾಮಾರ್ಯಾ ಪಾತಕನಾಶನಾ ।
ಯಾನ್ರಾಮಚರಿತ ಶ್ಲೋಕಾಂಶ್ಚತುರಶ್ಚೋಪದೇಕ್ಷ್ಯತಿ ॥ ೫೪ ॥

ಯೈಃ ಕರಿಷ್ಯತಿ ಸ ವ್ಯಾಸೋ ಮುನಿರ್ಭಾಗವತಂ ವರಂ ।
ತಾನ್ ಶ್ಲೋಕಾಂಶ್ಚತುರಸ್ತ್ವಂ ಮಾಂ ಕೃಪಯಾ ವಕ್ತುಮರ್ಹಸಿ ॥ ೫೫ ॥

॥ ಶ್ರೀ ಶಿವ ಉವಾಚ ॥

ಸಮ್ಯಕ್ಪೃಷ್ಟಂ ತ್ವಯಾ ದೇವಿ ಸಾವಧಾನಮನಾಃ ಶೃಣು ।
ನಾರದೋಕ್ತಾಂಶ್ಚತುಶ್ಶ್ಲೋಕಾಂಸ್ತವಾಗ್ರೇ ಪ್ರವದಾಮ್ಯಹಂ ॥ ೫೬ ॥

ನಾರದಾಯಾಪಿ ಕಥಿತಾ ವಿಧಿನಾ ಯೇ ಪುರಾ ಶುಭಾಃ ।
ಬ್ರಹ್ಮಣೇ ವಿಷ್ಣುನಾ ಪೂರ್ವಂ ಶ್ರೀರಾಮಚರಿತಂ ಯದಾ ॥ ೫೭ ॥

೫೩–೫೪. ಪಾರ್ವತಿಯು ಹೇಳಿದಳು–ಎಲೈ ನಾಥನೇ ! ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ನಾರದಮುನಿಯು ಬ್ರಹ್ಮನಿಂದ ಪಾತಕಹರವಾದ ನಾಲ್ಕುಶ್ಲೋಕಗಳನ್ನು ತಿಳಿದು ವ್ಯಾಸನಿಗೆ ಹೇಳುವನು. ಎಂದು ಹೇಳಿದೆಯಷ್ಟೆ. ಆ ನಾಲ್ಕುಶ್ಲೋಕಗಳಾವುವು ?

೫೫. ಉತ್ತಮೋತ್ತಮವಾದ ಭಾಗವತಕ್ಕೂ ಅದೇ ಮೂಲವೆಂದು ಹೇಳಿದೆಯಷ್ಟೆ ! ಆ ನಾಲ್ಕುಶ್ಲೋಕಗಳನ್ನು ಕೇಳಬೇಕೆಂಬ ಇಚ್ಛೆಯಿದೆ. ಅವನು ಕೃಪೆಯಿಟ್ಟು ಹೇಳು.

೫೬. ಶ್ರೀ ಶಿವನು ಹೇಳಿದನು–ಎಲೈ ದೇವಿಯೇ ! ನೀನು ಕೇಳಿದುದು ಚೆನ್ನಾಗಿದೆ. ಏಕಾಗ್ರಚಿತ್ತದಿಂದ ಕೇಳು. ನಾರದನು ಹೇಳಿದ ಆ ನಾಲ್ಕು ಶ್ಲೋಕಗಳನ್ನು ನಿನ್ನೆದುರಿಗೆ ಹೇಳುತ್ತೇನೆ.

೫೭–೫೮. ಬ್ರಹ್ಮನು ನಾರದನಿಗೆ ಹೇಳಿರುವುದರಿಂದ ಆ ಶ್ಲೋಕಗಳೇ ಬಹು ಶುಭವಾದುವು. ವಿಷ್ಣುವು ರಾಮಾಯಣವನ್ನು ಭಾಗಮಾಡಿ ಶೇಷವಾದ

ವಿಭಕ್ತಂ ಹಿ ತದಾ ದತ್ತಾಶ್ಶೇಷಭೂತಾಸ್ಸುಪುಣ್ಯದಾಃ ।
ತಾನ್ ಶೃಣುಷ್ವ ಚತುಶ್ಶ್ಲೋಕಾನ್ ವಿಷ್ಣುನೋಕ್ತಾನ್ ಸ್ವಯಂಭುವಾ ॥೫೮॥

॥ ಶ್ರೀ ಭಗವಾನುವಾಚ ॥

ಅಹಮೇವಾಸಮೇವಾಗ್ರೇ ನಾನ್ಯದ್ಯತ್ಸದಸತ್ಪರಂ ।
ಪಶ್ಚಾದಹಂ ಯದೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಂ ॥ ೫೯ ॥

ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
ತದ್ವಿದ್ಯಾದಾತ್ಮನೋ ಮಾಯಾಂ ಯಥಾ ಭಾಸೋ ಯಥಾ ತಮಃ ॥ ೬೦ ॥

ಯಥಾ ಮಹಾಂತಿ ಭೂತಾನಿ ಭೂತೇಷೂಚ್ಚಾವಚೇಷ್ವನು ।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಂ ॥ ೬೧ ॥

ಭಾಗವನ್ನು ಬ್ರಹ್ಮನಿಗೆ ಕೊಟ್ಟನಷ್ಟೆ. ಅವುಗಳೇ ಇವು. ಅವು ಪುಣ್ಯಪ್ರದವಾದುವು ವಿಷ್ಣುವು ಬ್ರಹ್ಮನಿಗೂ ಬ್ರಹ್ಮನು ನಾರದನಿಗೂ ನಾರದನು ವ್ಯಾಸನಿಗೂ. ಹೇಳಿದ ಆ ನಾಲ್ಕುಶ್ಲೋಕಗಳನ್ನು ಹೇಳುತ್ತೇನೆ. ಕೇಳು.

೫೯. ಶ್ರೀ ಭಗವಂತನು ಹೇಳಿದನು–ನಾನೇ ಪರಿಪೂರ್ಣನು. ನಾನೊಬ್ಬನೇ ಮೊದಲಿದ್ದವನು. ಈ ವ್ಯಾವಹಾರಿಕವಾದ ಸ್ಥಾವರಜಂಗಮಾತ್ಮಕವಾದ ಈ ಪ್ರಪಂಚದಲ್ಲಿ ನಾನಲ್ಲ ಅದಲ್ಲ ಇದಲ್ಲ ಎಂಬುದಾಗಿ ಎಲ್ಲವನ್ನೂ ನಿಷೇಧಮಾಡುತ್ತಲಿದ್ದರೆ ಉಳಿದ ಸತ್ತಾಮಾತ್ರನೇ ನಾನು.

೬೦. ಗುರಿಯಿಲ್ಲದೆ ಯಾವುದು ತೋರುತ್ತ ಆತ್ಮನಲ್ಲಿಯೂ ಕೂಡ ಅದು ತೋರದಿದ್ದರೆ ಅದನ್ನು ಆತ್ಮನ ಮಾಯೆಯೆಂದು ತಿಳಿಯಬೇಕು.

೬೧. ಪ್ರಕಾಶ, ಕತ್ತಲೆ, ಪಂಚಮಹಾಭೂತಗಳು ಇವುಗಳು ಎಲ್ಲಾ ಪ್ರಾಣಿಗಳಲ್ಲಿಯೂ ವ್ಯಾಪಿಸಿಕೊಂಡಿವೆ. ಇವು ಬೇರೆ ಬೇರೆಯಾಗಿ ನಮಗೆ ಕಾಣುತ್ತಿವೆಯಷ್ಟೆ! ಈ ಬ್ರಹ್ಮವು ಅವುಗಳೆಲ್ಲದರಲ್ಲಿಯೂ ಸೇರಿಕೊಂಡಿದೆ. ಆದರೆ ತಾನು ಮಾತ್ರ ನಿರ್ಲೇಪವಾಗಿರುವುದು.

ಏತಾವದೇವ ಜಿಜ್ಞಾಸ್ಯಂ ತತ್ವಜಿಜ್ಞಾಸುನಾತ್ಮನಃ |
ಅನ್ವಯವ್ಯತಿರೇಕಾಭ್ಯಾಂ ಯತ್ಸ್ಯಾತ್ಸರ್ವತ್ರ ಸರ್ವದಾ || ೬೨ ||

|| ಶ್ರೀ ಶಿವ ಉವಾಚ ||

ಏವಂ ಶ್ಲೋಕಂ ಭಗವತಾ ಚತ್ವಾರಶ್ಚ ಪ್ರಕೀರ್ತಿತಾಃ |
ವೇಧಸೇಮೇ ತವಾಗ್ರೇ ತೇ ಕೀರ್ತಿತಾ ದೇವಿ ವೈ ಮಯಾ || ೬೩ ||

ಏತೇ ಪವಿತ್ರಾ ಪಾಪಘ್ನಾ ಮರ್ತ್ಯಾನಾಂ ಜ್ಞಾನದಾಯಕಾಃ |
ಅಜ್ಞಾನನಾಶನಾತ್ಸದ್ಯಃ ಕೀರ್ತನೀಯಾ ನರೋತ್ತಮೈಃ || ೬೪ ||

ಏವಂ ದೇವಿ ತ್ವಯಾ ಪೃಷ್ಟಂ ಯಥಾ ತತ್ತೇ ನಿವೇದಿತಃ |
ಕಥಾಮಾರಂಭಿತಾಂ ಪೂರ್ವಮಧುನಾ ಶ್ರುಣು ವಚ್ಮ್ಯಹಂ || ೬೫ ||

---

೬೨. ತತ್ವಜ್ಞಾನವನ್ನು ತಿಳಿಯಬೇಕೆಂದಿರುವವನು ಎಲ್ಲಾ ಕಡೆಯಲ್ಲಿಯೂ ಯಾವಾಗಲೂ ಇರುವ ಈ ಆತ್ಮವನ್ನು ಅನ್ವಯವ್ಯತಿ ರೇಕಗಳಿಂದ ಚರ್ಚಿಸಿ ತಿಳಿಯಬೇಕು.

೬೩. ಶ್ರೀ ಶಿವನು ಹೇಳಿದನು–ಈ ರೀತಿಯಾಗಿ ನಾಲ್ಕುಶ್ಲೋಕಗಳನ್ನು ಭಗವಂತನು ಬ್ರಹ್ಮನಿಗೆ ಹೇಳಿದನು. ಅವನ್ನೇ ನಿನ್ನೆದುರಿಗೆ ಹೇಳಿದ್ದೇನೆ.

೬೪. ಈ ಶ್ಲೋಕಗಳು ಪವಿತ್ರವಾದುವು ಪಾಪನಾಶಕಗಳು. ಮನುಷ್ಯರಿಗೆ ಜ್ಞಾನವನ್ನು ಕೊಡುತ್ತವೆ. ಒಡನೆಯೇ ಆ ಜ್ಞಾನವನ್ನು ನಾಶಮಾಡುವುದರಿಂದ ನರರು ಯಾವಾಗಲೂ ಇದನ್ನೇ ಹೇಳಬೇಕು.

೬೫. ಪಾರ್ವತಿ ದೇವಿಯೇ ! ನೀನು ಕೇಳಿದುದನ್ನು ಹೀಗೆ ನಿರೂಪಿಸಿದ್ದೇನೆ. ಹಿಂದೆ ಮೊದಲು ಮಾಡಿದ ಕಥೆಯನ್ನು ಕೇಳು ಹೇಳುತ್ತೇನೆ. ಕೇಳು.

ತತೋ ರಾಮಾಯಣಂ ವ್ಯಾಸೋ ವಿಧ್ವಸ್ತಂ ಮುನಿಭಿಃ ಪುನಃ ।
ಕೃತ್ವೈಕತ್ರ ಶೇಷಭೂತಂ ಸಪ್ತಕಾಂಡಮಿತಂ ಶುಭಂ ॥ ೬೬ ॥

ಚತುರ್ವಿಂಶತಿ ಸಾಹಸ್ರಂ ರಕ್ಷಿಷ್ಯತಿ ಮುನಿಸ್ತದಾ ।
ಆದಾವಂತೇ ತ್ವತ್ರ ಏವ ಶ್ಲೋಕಾಸ್ತತ್ರ ಕಿಯಂತಿ ಹಿ ॥ ೬೭ ॥

ಚತುರ್ವಿಂಶತಿಸಾಹಸ್ರೇ ವ್ಯಾಸಸ್ಯ ರಚಿತಾ ಅಪಿ ।
ಭವಿಷ್ಯಂತಿ ಗಿರಿಜೇಗ್ರೇ ಮಂಗಳಾಚರಣಾದಿಷು ॥ ೬೮ ॥

ರಾಮಾಯಣಾನ್ಯನೇಕಾನಿ ಪೃಥಗಗ್ರೇ ಮುನೀಶ್ವರಾಃ ।
ಭಾಗಾದ್ಭಾರತಖಂಡಾಂತರ್ಗತಾತ್ಕುಂಭೋದ್ಭವಾದಯಃ ॥ ೬೯ ॥

---

೬೬. ಮುನಿಗಳು ಭಾಗ ಭಾಗಮಾಡಿ ತೆಗೆದುಕೊಂಡು ಹೋಗಿದ್ದ ರಾಮಾಯಣವನ್ನು ವ್ಯಾಸನು ಒಂದೆಡೆಯಲ್ಲಿ ಸೇರಿಸಿ ಏಳುಕಾಂಡಗಳುಳ್ಳದನ್ನಾಗಿ ಸೇರಿಸಿದನು.

೬೭. ಆ ಮುನಿಯು ಇಪ್ಪತ್ತನಾಲ್ಕು ಸಾವಿರ ಗ್ರಂಥಗಳನ್ನು ಕಾಪಾಡಿಕೊಳ್ಳುವನು. ಆದ್ಯಂತಗಳಲ್ಲಿ ಎಷ್ಟೋ ಶ್ಲೋಕಗಳು ಹೆಚ್ಚಿಗೆ ಸೇರಿಕೊಂಡಿವೆ.

೬೮. ವ್ಯಾಸನು ಇಪ್ಪತ್ತುನಾಲ್ಕು ಸಾವಿರ ಗ್ರಂಥಗಳನ್ನು ರಚಿಸಿದ್ದರೂ ಕೂಡ ಆದ್ಯಂತಗಳಲ್ಲಿಯೂ ಮಂಗಳಾಚರಣೆಯಲ್ಲಿಯೂ ಎಷ್ಟೋ ಶ್ಲೋಕಗಳು ಕೂಡಿಕೊಂಡಿವೆ.

೬೯. ರಾಮಾಯಣಗಳು ಅನೇಕವಾಗಿ ಮುಂದೆ ರಚಿತವಾಗುತ್ತವೆ. ಅವೆಲ್ಲವೂ ಈ ಭಾರತವರ್ಷದ ಅಂತರ್ಗತರಾಮಾಯಣದಿಂದಲೇ ಉಂಟಾಗುತ್ತವೆ. ಅದನ್ನು ಅಗಸ್ತ್ಯನೇ ಮುಂತಾದವರು ಮಾಡುತ್ತಾರೆ.

ಕರಿಷ್ಯತ್ಯಂತ್ರ ಶತಶಸ್ತಾನಿ ಸರ್ವಾಣಿ ಪಾರ್ವತಿ ।
ವಾಲ್ಮೀಕೀಯಾದ್ವಿನಾ ದೇವಿ ನ ಜ್ಞೇಯಾನಿ ಮನೀಷಿಭಿಃ ॥ ೭೦ ॥

ಸಾರಕಾಂಡಂ ಪುರಾ ದೇವಿ ಯದುಕ್ತಂ ಚ ಮಯಾ ತವ ।
ವಾಲ್ಮೀಕೀಯಾಚ್ಚ ತಚ್ಚಾಪಿ ಸಾರಮುದ್ಧೃತ್ಯ ವೈ ಮಯಾ ॥ ೭೧ ॥

ನಿವೇದಿತಂ ಚ ಹ್ಯಧುನಾ ಪೃಷ್ಟಂ ರಾಮಕಥಾನಕಂ ।
ಸವಿಸ್ತಾರಂ ವದಸ್ವೇತಿ ತ್ವಯಾ ತಸ್ಮಾನ್ಮಯೋದಿತಂ ॥ ೭೨ ॥

ಮಾನಂ ರಾಮಚರಿತ್ರಸ್ಯ ಶತಕೋಟಿಪ್ರವಿಸ್ತರಂ ।
ಪಂಚಾನನೋಽಪ್ಯಹಂ ದೇವಿ ದಿತ್ಯೈರ್ವರ್ಷಾಯುತೈರತಪಿ ॥ ೭೩ ॥

ರಾಮಾಯಣಂ ಸವಿಸ್ತಾರಂ ವ್ಯಾಖ್ಯಾತುಂ ನ ಕ್ಷಮಸ್ತ್ವಿಹ ।
ಯನ್ನಿರ್ಮಿತಂ ಚ ಮುನಿನಾ ಸ್ವತಪೋಭಿರನುತ್ತಮಂ ॥ ೭೪ ॥

---

೭೦. ಇನ್ನೂ ಅನೇಕ ಋಷಿಗಳು ಅನೇಕ ಬಗೆಯಾಗಿ ರಾಮಾಯಣಗಳನ್ನು ರಚಿಸಿದ್ದರೂ ವಾಲ್ಮೀಕಿಯು ರಚಿಸಿರುವುದೇ ರಾಮಾಯಣವು. ಇದಕ್ಕಿಂತಲೂ ಅವು ಬೇರೆಯೆಂದಾಗಲೀ ಹೆಚ್ಚಿಗೆ ಎಂದಾಗಲೀ ತಿಳಿಯಬೇಡ.

೭೧. ಎಲೈ ದೇವಿಯೇ! ನಾನು ನಿನಗೆ ಸಾರಕಾಂಡವನ್ನು ಹೇಳಿದ್ದೆನಷ್ಟೆ! ಅದನ್ನು ಕೂಡ ವಾಲ್ಮೀಕಿಯ ರಾಮಾಯಣದಿಂದಲೇ ಸಾರವನ್ನು ತೆಗೆದುಕೊಂಡು ಹೇಳಿದ್ದೇನೆ.

೭೨. ನೀನು ವಿಸ್ತಾರವಾಗಿ ಹೇಳಬೇಕೆಂದು ಕೇಳಿದುದರಿಂದ ಅದನ್ನೇ ವಿಸ್ತಾರಮಾಡಿ ಹೇಳಿದ್ದೇನೆ.

೭೩-೭೪. ರಾಮಚರಿತ್ರೆಯು ಎಂದರೆ ರಾಮಾಯಣದ ಲೆಕ್ಕವು ನೂರುಕೋಟಿ ಗ್ರಂಥಗಳು. ನನಗೆ ಐದುಮುಖಗಳಿದ್ದರೂ ಕೂಡ ಅವೆಲ್ಲವನ್ನೂ ದೇವತೆಗಳ ಹತ್ತುಸಾವಿರವರ್ಷಗಳ ಕಾಲವಾದರೂ ವಿಸ್ತಾರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆ ವಾಲ್ಮೀಕಿಯು ತನ್ನ ತಪೋಬಲದಿಂದ ಅವನ್ನು ವಿಸ್ತಾರವಾಗಿ ಹೇಳಿರುವನು.

ಅತಸ್ಸಂಕ್ಷೇಪಮಾತ್ರಂ ಹಿ ಸಾರಂ ಸಾರಂ ವಿಗೃಹ್ಯ ಚ ।
ಕಥಯಿಷ್ಯಾಮಿ ತ್ವತ್ಪ್ರೀತ್ಯೈ ಯಾತ್ರಾಕಾಂಡಂ ಶುಭಾವಹಂ ॥ ೭೫ ॥

ರಾಮದಾಸೋ ಯಥಾಗ್ರೇ ಹಿ ವಿಷ್ಣುದಾಸಂ ವದಿಷ್ಯತಿ ।
ಶತಕೋಟಿಮಿತಾಂ ಜ್ಞಾನಾದ್ದೃಷ್ಟ್ವಾ ಚಾಹಂ ತಥಾ ತವ ॥ ೭೬ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ
ವಾಲ್ಮೀಕೀಯೇ ಯಾತ್ರಾಕಾಂಡೇ ರಾಮಾಯಣ ವಿಸ್ತಾರ ಕಥನಂ
ನಾಮ ದ್ವಿತೀಯಸ್ಸರ್ಗಸಮಾಪ್ತಃ

---

೭೫. ಆದ್ದರಿಂದಲೇ ಸಾರದಲ್ಲಿ ಸಾರವನ್ನು ವಿಂಗಡಿಸಿಕೊಂಡು ಈ ಯಾತ್ರಾಕಾಂಡವನ್ನು ಹೇಳಿರುತ್ತೇನೆ. ಇದು ಶುಭಕರವು.

೭೬. ಮುಂದೆ ರಾಮದಾಸನು ವಿಷ್ಣುದಾಸನಿಗೆ ಹೇಳುತ್ತಾನೆ. ಜ್ಞಾನದಿಂದ ಶತಕೋಟಿಯನ್ನೂ ತಿಳಿದು ನಾನು ಹೇಳಿದಂತೆಯೇ ಅವನೂ ಹೇಳುವನು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ರಾಮಾಯಣ
ವಿಸ್ತಾರ ಕಥನವೆಂಬ ಎರಡನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

॥ ಎರಡನೆಯ ಸರ್ಗದ ಸಾರಾಂಶವು ॥

ವಾಲ್ಮೀಕಿಯು ರಾಮಾಯಣವನ್ನು ಮೂರು ಕೋಟಿ ಗ್ರಂಥಗಳಷ್ಟು ದೊಡ್ಡದನ್ನಾಗಿ ರಚಿಸಿದನು. ಅದನ್ನು ಮುನಿಗಳೆಲ್ಲರೂ ಆದರಿಸಿ ತಮ್ಮ ತಮ್ಮ ಆಶ್ರಮಗಳಲ್ಲಿ ಓದುತ್ತಲೂ ಹಾಡುತ್ತಲೂ ಇದ್ದರು. ಅವರು ಓದುತ್ತಿರುವಾಗ ದೇವತೆಗಳು, ನಾಗರು, ಯಕ್ಷರು, ಗುಹ್ಯರು, ಗಂಧರ್ವರು, ಮುನಿಗಳು, ರಾಜರು ಎಲ್ಲರೂ ಕೂಡ ಬಂದು ಅಂತರಿಕ್ಷದಲ್ಲಿ ಕೇಳುತ್ತ ನಿಂತಿದ್ದರು. ಆ ಮುನಿಯನ್ನು ಹೊಗಳುತ್ತ ಅವನ ಮೇಲೆ ಹೂಮಳೆಯನ್ನು ಸುರಿಸುತ್ತಿದ್ದರು. ಈ ರಾಮಾಯಣದ ಅಂದವನ್ನು ನೋಡಿ ಅವರುಗಳು ಅದು ತಮಗೆ ಬೇಕು ತಮಗೆ ಬೇಕು ಎಂದು ಜಗಳವಾಡುತ್ತಿದ್ದರು.

ಆಗ ಶಿವನು ಅವರ ಜಗಳವನ್ನು ನಿಲ್ಲಿಸಿ ಅವರೆಲ್ಲರನ್ನೂ ಕರೆದುಕೊಂಡು ಕ್ಷೀರಸಮುದ್ರದಲ್ಲಿರುವ ವಿಷ್ಣುವಿನ ಬಳಿಗೆ ಹೋದನು. ವಿಷ್ಣುವನ್ನು ಅನೇಕವಾದ ಸ್ತುತಿಗಳಿಂದಲೂ ವಾದ್ಯಗಳಿಂದಲೂ ಎಚ್ಚರಗೊಳಿಸಿ ತಮ್ಮ ವಿಷಯಗಳನ್ನು ಅರಿಕೆಮಾಡಿಕೊಂಡರು. ಆಗ ವಿಷ್ಣುವು ನಕ್ಕು ಅದನ್ನು ಮೂರು ಭಾಗವಾಗಿ ಮಾಡಿದನು. ಮತ್ತೆ ಹನ್ನೆರಡು ಅಕ್ಷರಗಳು ಉಳಿದುವು. ಅದರಲ್ಲಿ ಹತ್ತಕ್ಷರವಾದ ದಶಾಕ್ಷರೀ ಮಂತ್ರವನ್ನು ಬೇರೆಮಾಡಿ ಉಳಿದ “ರಾಮ” ಎಂಬ ತಾರಕಮಂತ್ರವನ್ನು ಶಿವನಿಗೆ ಕೊಟ್ಟನು. ಆ ರಾಮತಾರಕಮಂತ್ರನ್ನು ಶಿವನು ಕಾಶಿಯಲ್ಲಿ ಸಾಯುತ್ತಿರುವವರಿಗೆ ಸಾಯುವ ಕಾಲದಲ್ಲಿ ಉಪದೇಶ ಮಾಡುತ್ತಿರುತ್ತಾನೆ. ಆ ಮೂರು ಭಾಗಗಳಲ್ಲಿ ಒಂದನ್ನು ದೇವತೆಗಳಿಗೂ, ಮತ್ತೊಂದನ್ನು ಮುನಿಗಳಿಗೂ ಮಿಗದೊಂದನ್ನು ನಾಗರಿಗೂ ಕೊಟ್ಟನು. ಎಂದರೆ ಸ್ವರ್ಗಮರ್ತ್ಯ ಪಾತಾಳಗಳಿಗೆ

ಹಂಚಿದನು. ಭೂಮಿಯ ಭಾಗದಲ್ಲಿ ಏಳುಭಾಗ ಮಾಡಿ ಏಳು ದ್ವೀಪಗಳಿಗೂ ಒಂದೊಂದನ್ನು ಕೊಟ್ಟನು.

ದಶಾನನನು ಅವುಗಳನ್ನು ಅನೇಕ ಭಾಗಗಳನ್ನಾಗಿ ವಿಭಾಗಿಸಿದನು. ಈ ರಾಮಾಯಣದಿಂದಲೇ ವ್ಯಾಸನು ವಿಷಯಗಳನ್ನು ತೆಗೆದುಕೊಂಡು ವಿಸ್ತರಿಸಿ ಪುರಾಣಗಳನ್ನೂ ಉಪಪುರಾಣಗಳನ್ನೂ ಮಾಡಿದನು. ಇವುಗಳಲ್ಲಿ ಭಾಗವತವು ಬಹು ಉತ್ತಮವಾದುದು. ಪ್ರಪಂಚದಲ್ಲಿ ಹುಟ್ಟಿರುವ ಗ್ರಂಥಗಳೆಲ್ಲವೂ ರಾಮಾಯಣದಿಂದಲೇ ಬಂದುವು.

“ ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ ॥ ”

ಎಂಬುದೇ ರಾಮಾಯಣಕ್ಕೆ ಮೂಲವಾದ ಶ್ಲೋಕವು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ತೃತೀಯಸ್ಸರ್ಗಃ ॥

॥ ಪಾರ್ವತ್ಯುವಾಚ ॥

ಕೋ ರಾಮದಾಸಃ ಕ್ವುತ್ರಸ್ಥೋ ವಿಷ್ಣುದಾಸಶ್ಚ ಕಃ ಸ್ಮೃತಃ ।
ಕಥಂ ವದಿಷ್ಯತಿ ಗುರುಸ್ತನ್ಮ್ಯಾಂ ವದಸ್ವ ವಿಸ್ತರಾತ್ ॥ ೧ ॥

॥ ಶ್ರೀ ಶಿವ ಉವಾಚ ॥

ಭಾರತೇ ದಂಡಕಾರಣ್ಯೇ ಗೋದಾನಾಭೌವಿರಾಜಿತೇ ।
ಕ್ಷೇತ್ರೇಽಜ್ಞಕೇ ನೃಸಿಂಹಾಖ್ಯೇ ಮುನಿರಗ್ರೇ ಭವಿಷ್ಯತಿ ॥ ೨ ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಮೂರನೆಯ ಸರ್ಗವು

೧. ಪಾರ್ವತಿಯು ಹೇಳಿದಳು–ಎಲೈ ಶಿವನೇ ! ಆ ರಾಮದಾಸನಾರು ? ಅವನು ಎಲ್ಲಿರುವನು ? ವಿಷ್ಣುದಾಸನಾರು ? ಎಲ್ಲಿರುವನು ? ಆ ಗುರುವು ಶಿಷ್ಯನಿಗೆ ಹೇಗೆ ಹೇಳಿದನು ? ಅದನ್ನು ವಿಸ್ತಾರವಾಗಿ ನನಗೆ ಹೇಳು.

೨. ಶಿವನು ಹೇಳಿದನು–ಭರತವರ್ಷದ ದಂಡಕಾರಣ್ಯದ ಗೋದಾನದಿಯ ತೀರದಲ್ಲಿ ನೃಸಿಂಹವೆಂಬ ಅಜ್ಜಕ ಕ್ಷೇತ್ರದಲ್ಲಿ ಒಬ್ಬ ಮುನಿಯು ಮುಂದೆ ಹುಟ್ಟುವನು.

ರಾಮನಾಮಾ ತು ತತ್ಪುತ್ರಸ್ತಚ್ಛಿಷ್ಯೋ ವಿಷ್ಣುರಿತ್ಯಪಿ ।
ಗುರುಶಿಷ್ಯೌ ರಾಮಸೇವಾಸಕ್ತೌ ನಿತ್ಯಂ ಭವಿಷ್ಯತಃ ॥ ೩ ॥

ದಾಸ್ಯತ್ವಾಜ್ಜಾನಕೀಜಾನೇಸ್ತಾವುಭೌ ಭೂಸುರೋತ್ತಮೌ ।
ರಾಮದಾಸ ವಿಷ್ಣುದಾಸಾವಿತಿ ಲೋಕೇ ಪರಾಂ ಪ್ರಥಾಂ ॥ ೪ ॥

ಗಮಿಷ್ಯತೋಽಗ್ರೇ ಭೋ ದೇವಿ ಗೌತಮ್ಯಾ ದಕ್ಷಿಣೇ ತಟೇ ।
ರಾಮದಾಸಃ ಪಿತುಶ್ಶ್ರಾದ್ಧಂ ಗಯಾಯಾಂ ಸಂವಿಧಾಯ ಚ ॥ ೫ ॥

ಪೃಥಿವ್ಯಾಂ ಯಾನಿ ತೀರ್ಥಾನಿ ತಾನಿ ಗತ್ವಾ ಯಥಾಕ್ರಮಂ ।
ಅಧ್ಯಾಪಯಿಷ್ಯತಿಚ್ಛಾತ್ರಾನ್ ಗೋದಾನಾಥೌ ಗೃಹಾಶ್ರಮೀ ॥ ೬ ॥

---

೩. ಅವನಿಗೆ ರಾಮನೆಂಬ ಹೆಸರುಳ್ಳವನು ಮಗನಾಗುವನು. ಅವನಿಗೆ ವಿಷ್ಣುವೆಂಬುವನು ಶಿಷ್ಯನಾಗುವನು. ಆ ಗುರು ಶಿಷ್ಯರು ನಿತ್ಯವೂ ರಾಮ ಸೇವೆಯಲ್ಲಿಯೇ ಆಸಕ್ತರಾಗಿರುವರು.

೪. ರಾಮನಿಗೆ ಅವರಿಬ್ಬರೂ ದಾಸರಾದುದರಿಂದ ಬ್ರಾಹ್ಮಣರಲ್ಲಿ ಉತ್ತಮರಾಗುವರು. ಅವರಿಬ್ಬರೂ ರಾಮದಾಸ ವಿಷ್ಣುದಾಸರೆಂದು ಪ್ರಸಿದ್ಧಿ ಯನ್ನು ಲೋಕದಲ್ಲಿ ಹೊಂದುವರು.

೫-೬. ಅವರಿಬ್ಬರೂ ಗೌತಮೀನದಿಯ ದಕ್ಷಿಣದಡದಲ್ಲಿದ್ದುಕೊಂಡಿರುವರು. ರಾಮದಾಸನು ಗಯೆಯಲ್ಲಿ ಪಿತೃಶ್ರಾದ್ಧವನ್ನು ಮಾಡಿ ಭೂಮಿಯಲ್ಲಿರುವ ತೀರ್ಥ ಯಾತ್ರೆಗಳನ್ನೆಲ್ಲಾ ಕ್ರಮವಾಗಿ ಮಾಡಿ ಗೋದಾನದಿಯ ದಡದಲ್ಲಿರುವ ತನ್ನ ಆಶ್ರಮದಲ್ಲಿ ಗೃಹಸ್ಥಾಶ್ರಮವನ್ನು ಅನುಭವಿಸುತ್ತ ಶಿಷ್ಯರಿಗೆ ಅಧ್ಯಾಪನ ಮಾಡಿಸುತ್ತಿರುವನು.

ಏಕದಾ ವಿಷ್ಣುದಾಸಸ್ಸಶ್ರುತ್ವಾ ನಾನಾವಿಧಾಃ ಕಥಾಃ ।
ರಾಮದಾಸಮುಖಾತ್ಸಾರಕಾಂಡಂ ರಾಮಾಯಣೋದ್ಭವಂ ।
ಶ್ರುತ್ವಾ ಕಿಂಚಿತ್ಪ್ರಷ್ಟುಮನಾ ರಾಮದಾಸಂ ವದಿಷ್ಯತಿ ॥ ೭ ॥

॥ ವಿಷ್ಣುದಾಸ ಉವಾಚ ॥

ಗುರೋ ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ವಕ್ತುಮಿಹಾರ್ಹಸಿ ॥ ೮ ॥

ಸಾರಕಾಡಂ ಮಯಾ ತ್ವತ್ತಶ್ಶ್ರುತಂ ರಾಮಾಯಣಸ್ಥಿತಂ ।
ನ ಕಿಂಚಿತ್ಸೌಖ್ಯಲೇಶೋಽಪಿ ಜಾನಕ್ಯಾ ರಾಘವಸ್ಯ ಚ ॥ ೯ ॥

ಶ್ರುತೋಽತ್ರ ಕ್ವಾಪಿ ರಾಜ್ಯಸ್ಯ ವಿಸ್ತಾರೋಽಪಿ ನ ಚ ಶ್ರುತಃ ।
ಕಥಂ ಯಾಗಾಃ ಕೃತಾಸ್ತೇನ ಸಂತತಿಸ್ತಸ್ಯ ನ ಶ್ರುತಾ ॥ ೧೦ ॥

---

೭. ಹೀಗಿರುತ್ತಿರಲು ಒಂದುಸಾರಿ ವಿಷ್ಣುದಾಸನು ನಾನಾಬಗೆಯಾದ ಕಥೆಗಳನ್ನು ಕೇಳುತ್ತ ರಾಮದಾಸನ ಮುಖದಿಂದ ಸಾರಕಾಂಡದ ರಾಮಯಣದ ಕಥೆಯನ್ನು ಕೇಳಿದನು. ಅದೆಲ್ಲವನ್ನೂ ಕೇಳಿ ಯಾವುದೋ ವಿಷಯವನ್ನು ಕೇಳಬೇಕೆಂದು ಇಂತೆನ್ನುವನು.

೮. ವಿಷ್ಣುದಾಸನು ಹೇಳುವನು.—ಎಲೈ ಗುರುವೆ ! ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ಅದರ ವಿಷಯವನ್ನು ಸರಿಯಾಗಿ ತಿಳಿಸು.

೯. ರಾಮಾಯಣದಲ್ಲಿರುವ ಸಾರಕಾಂಡವನ್ನು ನೀನು ನನಗೆ ಹೇಳಿದೆ. ಅದನ್ನು ನಾನೂ ಕೇಳಿದೆನು ಅದರಲ್ಲಿ ಜಾನಕಿಗಾಗಲಿ ರಾಮನಿಗಾಗಲಿ ಸೌಖ್ಯದ ಲೇಶವೂ ಬರಲಿಲ್ಲ.

೧೦. ಅವನು ರಾಜ್ಯವನ್ನು ವಿಸ್ತರಿಸಿದ ವಿಷಯವಾಗಲಿ. ಯಾಗವನ್ನು ಮಾಡಿದ ವಿಷಯವಾಗಲಿ, ಅವನ ಸಂತತಿಯ ವಿಷಯವಾಗಲಿ ತಿಳಿಯಲೇ ಇಲ್ಲ.

ಸುತಾನಾಂ ಬಂಧುಪುತ್ರಾಣಾಂ ವಿವಾಹಾದಿಕಮಶ್ರುತಂ ।
ತತ್ಸರ್ವಂ ವಿಸ್ತರಾತ್ತ್ವತ್ತೋ ಶ್ರೋತುಮಿಚ್ಛಾಸ್ತಿ ಮೇ ಗುರೋ ॥ ೧೧ ॥

ತತ್ತ್ವಂ ವದ ಮಹಾಭಾಗ ರಘುವೀರಸ್ಯ ಚೇಷ್ಟಿತಂ ।
ರಮ್ಯಂ ಪವಿತ್ರಮಾನಂದದಾಯಕಂ ಪಾತಕಾಪಹಂ ॥ ೧೨ ॥

॥ ರಾಮದಾಸ ಉವಾಚ ॥

ಸಮ್ಯಕ್ಪೃಷ್ಟಂ ತ್ವಯಾ ವತ್ಸ ರಾಮಚಂದ್ರ ಕಥಾನಕಂ ।
ಮಂಗಳಂ ರಘುನಾಥಸ್ಯ ಪ್ರೋಚ್ಯತೇ ಯತ್ನವಿಸ್ತರಂ ॥ ೧೩ ॥

ಸಾವಧಾನಮನಾಸ್ತ್ವಂ ತಚ್ಛೃಣು ಪಾತಕನಾಶನಂ ।
ಯಥಾ ಶ್ರುತಂ ಮಯಾ ಪೂರ್ವಂ ತುಷ್ಟ್ಯರ್ಥಂ ತೇ ವದಾಮ್ಯಹಂ ॥ ೧೪ ॥

---

೧೧. ಅವನ ಮಕ್ಕಳಿಗಾಗಲಿ ಅವನ ತಮ್ಮಂದಿರ ಮಕ್ಕಳಿಗಾಗಲಿ ಆದ ವಿವಾಹವೇ ಮುಂತಾದ ಯಾವ ವಿಷಯವನ್ನೂ ಕೇಳಲೇ ಇಲ್ಲ. ಅದೆಲ್ಲವನ್ನೂ ನಿನ್ನಿಂದ ಕೇಳಬೇಕೆಂಬ ಇಚ್ಛೆಯು ಬಹುವಾಗಿ ಇದೆ.

೧೨. ಮಹಾನುಭಾವನೆ! ಆದ್ದರಿಂದ ಆ ರಘುವೀರನ ಸರಿಯಾದ ವಿಷಯವನ್ನು ಈಗ ಹೇಳು. ಆ ರಘುವೀರನ ಚರಿತ್ರೆಯು ರಮ್ಯವಾಗಿಯೂ ಪವಿತ್ರವಾಗಿಯೂ ಪಾತಕನಾಶಕವಾಗಿಯೂ ಇರುವುದು.

೧೩. ರಾಮದಾಸನು ಹೇಳಿದನು–ಎಲೈ ವತ್ಸನೆ! ರಾಮಚಂದ್ರನ ಕಥೆಯನ್ನು ನೀನು ಮನಸ್ಸಿಟ್ಟು ಕೇಳಿದುದು ಒಳ್ಳೆಯದಾಯಿತು. ಮಂಗಳ ದಾಯಕವಾದ ರಘುನಾಥನ ಕಥೆಯನ್ನು ವಿಸ್ತಾರವಾಗಿ ಹೇಳುತ್ತೇನೆ.

೧೪. ಪಾಪನಾಶಕವಾದ ಆ ಕಥೆಯನ್ನು ಸಾವಧಾನವಾದ ಮನಸ್ಸಿನಿಂದ ಕೇಳು. ನಿನ್ನ ತೃಪ್ತಿಗೋಸ್ಕರವಾಗಿ ನಾನು ಕೇಳಿದ್ದಂತೆಯೇ ನಿನಗೆ ಹೇಳುತ್ತೇನೆ.

ಹತ್ವಾ ದಶಾನನಂ ರಾಮೋ ರಾಜ್ಯಂ ನಿಹತಕಂಟಕಂ ।
ಅಯೋಧ್ಯಾಯಾಂ ಮುಕ್ತಿಪೂರ್ಯಾಂ ಶಶಾಸ ಮತಿಮತ್ತಮಃ ॥ ೧೫ ॥

ನ ದುರ್ಭಿಕ್ಷಂ ನ ಚೌರ್ಯಂ ಚ ನಾಪಮೃತ್ಯುರ್ನ ಚೇತಯಃ ।
ನ ದಾರಿದ್ರ್ಯಂ ಭಯಂ ಚಿಂತಾ ವ್ಯಾಧಯಶ್ಚ ಕದಾಚನ ॥ ೧೬ ॥

ನ ಭಿಕ್ಷಾರ್ಥೀ ನ ದುರ್ವೃತ್ತೋ ನ ಪಾಪಾತ್ಮಾ ನ ನಿಷ್ಠುರಃ ।
ನ ಕ್ರೋಧೀ ನ ಕೃತಘ್ನೋಽಪಿ ರಾಮೇ ರಾಜ್ಯಂ ಪ್ರಶಾಸತಿ ॥ ೧೭ ॥

ಏಕದಾ ಜಾನಕೀಕಾಂತ ಮೇಕಾಂತೇ ಪ್ರಾಹ ಲಜ್ಜಿತಾ ।
ಸ್ಮಿತವಕ್ತ್ರಾ ಚಾರುನಾಸಾ ದಿವ್ಯಾಲಂಕಾರ ಮಂಡಿತಾ ॥ ೧೮ ॥

ಚಾಮರವ್ಯಗ್ರಹಸ್ತಾ ಸಾ ವಿನಯಾವನತಾನನಾ ।
ರಾಮ ರಾಜೀವಪತ್ರಾಕ್ಷ ರಾವಣಾರೇ ಮಮ ಪ್ರಭೋ ॥ ೧೯ ॥

---

೧೫. ಬುದ್ಧಿವಂತನಾದ ರಾಮನು ದಶಾನನನನ್ನು ಕೊಂದು ಶತ್ರುಗಳಿಲ್ಲದ ನಿಷ್ಕಂಟಕವಾದ ರಾಜ್ಯವನ್ನು ಹೊಂದಿ ಮುಕ್ತಿಪಟ್ಟಣವಾದ ಅಯೋಧ್ಯೆಯಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದನು.

೧೬. ಅವನು ರಾಜ್ಯವಾಳುತ್ತಿರಲು ಲೋಕದಲ್ಲಿ ದುರ್ಭಿಕ್ಷವಿರಲಿಲ್ಲ. ಕಳ್ಳತನವಿರಲಿಲ್ಲ. ಅಪಮೃತ್ಯುವಿನ ಭಯವಿರಲಿಲ್ಲ. ಈತಿಬಾಧೆಗಳಿರಲಿಲ್ಲ. ದರಿದ್ರದ ಚಿಂತೆಯಿರಲಿಲ್ಲ. ಭಯವಿರಲಿಲ್ಲ. ರೋಗಗಳೆಂಬುದೇ ಇರಲಿಲ್ಲ.

೧೭. ಆ ರಾಮನು ರಾಜ್ಯವಾಳುತ್ತಿರಲಾಗಿ ಭಿಕ್ಷೆಯನ್ನು ಯಾರೂ ಬೇಡುತ್ತಿರಲಿಲ್ಲ. ಕೆಟ್ಟಮಾರ್ಗದಲ್ಲಿ ಹೋಗುತ್ತಿರಲಿಲ್ಲ. ಪಾಪಿಯೆಂಬುವರೇ ಇರಲಿಲ್ಲ. ನಿಷ್ಠೂರವಾಗಿ ಮಾತನಾಡುವವನೂ ಇರಲಿಲ್ಲ. ಕೋಪಿಯಾಗಲಿ ಉಪಕಾರಸ್ಮರಣಯಿಲ್ಲದವನಾಗಲಿ ಒಬ್ಬನೂ ಇರಲಿಲ್ಲ.

೧೮-೧೯. ಒಂದುಸಾರಿ ಸೀತಾರಾಮರು ಏಕಾಂತದಲ್ಲಿರುವಾಗ ಜಾನಕಿಯು ಲಜ್ಜೆಯಿಂದ ರಾಮನನ್ನು ಕುರಿತು ಇಂತೆಂದಳು. ಆಗ ಅವಳು ಹುಸಿನಗು ನಗುತ್ತಿದ್ದಳು. ದಿವ್ಯವಾದ ಅಲಂಕಾರಗಳನ್ನು ತೊಟ್ಟಿದ್ದಳು. ಕೈಯ್ಯಲ್ಲಿ ಚಾಮರವನ್ನು ಹಿಡಿದು ಇದ್ದಳು. ವಿನಯದಿಂದ ತಲೆಯನ್ನು ತಗ್ಗಿಸಿ ಕೊಂಡಿದ್ದಳು.

ಕಿಂಚಿದ್ವಿಜ್ಞಪ್ತುಮಿಚ್ಛಾಮಿ ಯದ್ಯನುಜ್ಞಾಂ ಕರೋಷಿ ಹಿ ।
ವಿಜ್ಞಾಪಯಾಮಿ ತರ್ಹಿ ತ್ವಾಂ ಧರ್ಮಮೂಲಂ ಮಹೋದಯಂ ॥ ೨೦ ॥

ತತ್ಸೀತಾವಚನಂ ಶ್ರುತ್ವಾ ಜಾನಕೀಂ ಪ್ರಾಹ ರಾಘವಃ ।
ಹೇ ಸೀತೇ ಕಂಜನಯನೇ ಮಮ ಪ್ರಾಣಸುಖಾಸ್ಪದೇ ॥ ೨೧ ॥

ಶೀಘ್ರಂ ವದಸ್ವ ಯತ್ತೇಽಸ್ತಿ ಚಿತ್ತೇ ತತ್ಕರವಾಣ್ಯಹಂ ।
ಇತಿ ರಾಘವಸನ್ಮಾನವಚನೈರ್ಜನಕಾತ್ಮಜಾ ॥ ೨೨ ॥

॥ ಶ್ರೀ ಸೀತೋವಾಚ ॥

ನಿತರಾಂ ತೋಷಪೂರ್ಣಾಘಪರಿಪೂರ್ಣಾಬ್ರವೀತ್ಪತಿಂ ।
ಯದಾ ತ್ವಂ ರಾಘವಶ್ರೇಷ್ಠ ದಂಡಕಂ ವಚಸಾತ್ಪಿತುಃ ॥ ೨೩ ॥

---

೨೦. ರಾಮನೇ ! ಕಮಲಾಕ್ಷನೇ ! ರಾವಣಾರಿಯೇ ! ನನ್ನ ಪ್ರಭುವೇ ! ಅಪ್ಪಣೆಯನ್ನು ಕೊಟ್ಟರೆ ಒಂದು ವಿಷಯವನ್ನು ವಿಜ್ಞಾಪಿಸಬೇಕೆಂದಿದ್ದೇನೆ. ಅದು ಧರ್ಮಮೂಲವಾದುದು. ಮತ್ತು ಉತ್ತರೋತ್ತರ ಅಭಿವೃದ್ಧಿಯನ್ನು ಕೊಡತಕದ್ದು. ಎಂದಳು.

೨೧–೨೨. ಸೀತೆಯು ಹೀಗೆ ಹೇಳಿದುದನ್ನು ರಾಮನು ಕೇಳಿ ಕಂಜನಯನೆಯಾದ ಎಲೈ ಸೀತೆಯೇ ! ನನ್ನ ಪ್ರಾಣಸುಖಕ್ಕೆ ಕಾರಣಳೇ ! ನಿನ್ನ ಮನಸ್ಸಿನಲ್ಲಿ ಏನಿರುವುದೋ ಅದನ್ನು ಹೇಳು. ಬೇಗನೆ ಅದನ್ನು ನೆರವೇರಿಸುತ್ತೇನೆ. ರಾಘವನ ಈ ಗೌರವಪೂರ್ವಕವಾದ ಮಾತಿನಿಂದ ಗೌರವಿತಳಾದ ಸೀತೆಯು ಬಹುವಾಗಿ ಸಂತೋಷಗೊಂಡು ಗಂಡನನ್ನು ಕುರಿತು ಇಂತೆಂದಳು.

೨೨–೨೫. ಸೀತೆಯು ಹೇಳಿದಳು– ಎಲೈ ರಾಘವನೇ ! ನೀನು ತಂದೆಯ ಮಾತಿನಂತೆ ನನ್ನನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಹೊರಟೆ. ಆಗ

ಮಯಾ ಸೌಮಿತ್ರಿಣಾ ಸಾಕಂ ಪೂರ್ವಂ ಸ್ವನಗರಾದ್ಗತಃ ।
ಶೃಂಗಬೇರಪುರಂ ಗತ್ವಾ ಜಾಹ್ನವ್ಯಾಸ್ತರಣೇ ಯದಾ ॥ ೨೪ ॥

ನೌಕಾಯಾಂ ಸ್ಥಿತಮಸ್ಮಾಭಿರ್ಭಾಗೀರಥ್ಯಾಂ ತದಾ ಪುರಾ ।
ಸಂಕಲ್ಪಿತಂ ಮಯಾ ಕಿಂಚಿತ್ತತ್ತ್ವಾಂ ವಕ್ಷ್ಯಾಮ್ಯಹಂ ಪ್ರಭೋ ॥ ೨೫ ॥

ದೇವಿ ಗಂಗೇ ನಮಸ್ತೇಽಸ್ತು ನಿವೃತ್ತಾ ವನವಾಸತಃ ।
ರಾಮೇಣ ಸಹಿತಾಹಂ ತ್ವಾಂ ಲಕ್ಷ್ಮಣೇನ ಚ ಪೂಜಯೇ ॥ ೨೬ ॥

ಸುರಾಮಾಂಸೋಪಹಾರೈಶ್ಚ ನಾನಾಬಲಿಭಿರಾದೃತಾ ।
ಇತ್ಯುಕ್ತಂ ವಚನಂ ಪೂರ್ವಂ ತತ್ ಜ್ಞಾತಂ ಭವತಾಪಿ ಚ ॥ ೨೭ ॥

ತತಶ್ಚತುರ್ದಶೇ ವರ್ಷೇ ವಿಮಾನೇನ ಯದಾಗತಂ ।
ತದಾ ಭರತಶತ್ರುಘ್ನ ಕೌಸಲ್ಯಾ ವಿರಹಾತುರಾ ॥ ೨೮ ॥

ಶೃಂಗಬೇರಪುರಕ್ಕೆ ಹೋಗಿ ಅಲ್ಲಿ ಜಾಹ್ನವಿಯ ಪ್ರವಾಹದಲ್ಲಿ ದೋಣಿಯಲ್ಲಿ ಕುಳಿತೆವು. ಆಗ ನಾನು ಒಂದು ಸಂಕಲ್ಪವನ್ನು ಮಾಡಿಕೊಂಡೆನು. ಅದನ್ನು ನಿನಗೆ ಹೇಳುತ್ತೇನೆ ಕೇಳು.

೨೬. ಆಗ ಆ ಗಂಗೆಯನ್ನು ಕುರಿತು ದೇವಿ ! ಗಂಗೆಯೇ ! ನಿನಗೆ ನಮಸ್ಕಾರವು. ನಾನು ರಾಮನೊಡನೆಯೂ ಲಕ್ಷ್ಮಣನೊಡನೆಯೂ ವನವಾಸದಿಂದ ಹಿಂತಿರುಗಿದಮೇಲೆ ನಿನ್ನನ್ನು ಪೂಜಿಸುತ್ತೇನೆ.

೨೭. ಸುರೆ ಮಾಂಸವೇ ಮೊದಲಾದ ನಿವೇದನೆಗಳಿಂದಲೂ ಅನೇಕ ಉಪಚಾರಗಳಿಂದಲೂ ನಿನ್ನನ್ನು ತೃಪ್ತಿಪಡಿಸುತ್ತೇನೆಂದು ಹೇಳಿರುವೆನು. ಅದು ನಿನಗೂ ತಿಳಿದು ಜ್ಞಾಪಕವಿರಬಹುದು.

೨೮. ಹದಿನಾಲ್ಕು ವರ್ಷಗಳಾಗುತ್ತಲೂ ಹಿಂತಿರುಗಿದೆವಷ್ಟೆ. ಆಗ ವಿಮಾನದಲ್ಲಿ ಬಂದೆವು. ಆಗ ಭರತ ಶತ್ರುಘ್ನರನ್ನೂ ಕೌಸಲ್ಯೆಯೇ ಮುಂತಾದವರನ್ನೂ ನೋಡಬೇಕೆಂದು ಬಹು ಆತುರದಿಂದಿದ್ದೆನು.

ಅಹಂ ತದ್ವಿಸ್ಮೃತಾ ರಾಮ ಸ್ಮೃತಿರ್ಜಾತಾದ್ಯ ಮೇ ಪ್ರಭೋ ।
ತನ್ಮತ್ಸಂಕಲ್ಪಪೂರ್ತ್ಯರ್ಥಂ ಗಂತುಮರ್ಹಸಿ ಜಾಹ್ನವೀಂ ॥ ೨೯ ॥

ಮಯಾ ಮಾತೃಬಂಧುಭಿಸ್ತ್ವಮಿತಿ ತೇ ಪ್ರಾರ್ಥಯಾಮ್ಯಹಂ ।
ರೋಚತೇ ಯದಿ ತೇ ಚಿತ್ತೇ ನ ತ್ವಾಮಾಜ್ಞಾಪಯಾಮ್ಯಹಂ ॥ ೩೦ ॥

ಇತಿ ಸೀತಾವಚಶ್ಶ್ರುತ್ವಾ ಪ್ರಹಸ್ಯ ರಘುನಂದನಃ ।
ಸೀತಾಮಾಲಿಂಗ್ಯ ಬಾಹುಭ್ಯಾಂ ಹರ್ಷಯನ್ ತಾಮುವಾಚ ಹ ॥ ೩೧ ॥

ಏತದ್ವಚನಚಾತುರ್ಯಂ ಕುತೋ ಜಾನಾಸಿ ಮೈಥಿಲಿ ।
ನ ತತ್ತೇ ವಚನಂ ದೇವಿ ಗಂಗಾಮಾಹಾತ್ಮ್ಯಮೇವ ತತ್ ॥ ೩೨ ॥

---

೨೯. ಆ ಅವಸರದಲ್ಲಿ ಅದನ್ನು ಮರೆತುಬಿಟ್ಟಿದ್ದೆ. ಈಗ ನನಗೆ ಅದು ಜ್ಞಾಪಕಕ್ಕೆ ಬಂದಿದೆ. ಈ ನನ್ನ ಸಂಕಲ್ಪವನ್ನು ಪೂರ್ತಿಮಾಡುವುದಕ್ಕೆ ಜಾಹ್ನವಿಗೆ ಹೋಗಬೇಕು.

೩೦. ನಾನೂ, ನೀನೂ, ನಿನ್ನ ತಮ್ಮಂದಿರೂ ತಾಯಿಯರೂ ಎಲ್ಲರೂ ಒಟ್ಟಿಗೆ ಹೋಗಬೇಕು. ಇದು ನನ್ನ ಪ್ರಾರ್ಥನೆಯು. ನಿನ್ನ ಮನಸ್ಸಿಗೆ ಸರಿಬಂದರೆ ಆಗಬಹುದು. ನನ್ನ ನಿರ್ಬಂಧವೇನೂ ಇರುವುದಿಲ್ಲ. ಎಂದನು.

೩೧. ಸೀತೆಯು ಹೀಗೆ ಹೇಳಿದುದನ್ನು ಕೇಳಿ ರಾಮನು ನಕ್ಕು ಸೀತೆಯನ್ನು ತೋಳುಗಳಿಂದ ಆಲಿಂಗಿಸಿಕೊಂಡು ಸಂತೋಷಪಡಿಸುತ್ತ ಇಂತೆಂದನು.

೩೨. ಎಲೈ ಜಾನಕಿಯೇ ! ಈ ಮಾತಿನ ಜಾಣತನವನ್ನು ಎಲ್ಲಿ ಕಲಿತೆ ? ದೇವಿ ! ಇದು ನಿನ್ನ ಮಾತಿನ ವೈಖರಿಯಲ್ಲ. ಗಂಗೆಯ ಮಹಿಮೆಯೇ ಆ ರೀತಿಯಾಗಿ ನಿನ್ನಿಂದ ಹೇಳಿಸಿರುವುದು.

ವಚನಾತ್ತವ ವೈದೇಹಿ ಶ್ವೋ ಗಂತಾ ಜಾಹ್ನವೀಂ ಪ್ರತಿ ।
ಕ್ವ ತೇ ವಾಂಛಾಸ್ತಿ ದಯಿತೇ ಗಂಗಾಂ ಗಂತುಂ ವದಸ್ವ ಮೇ ॥ ೩೩ ॥

ತಚ್ಛ್ರುತ್ವಾ ತತ್ರ ವೈ ಸ್ಥಾತುಂ ಸೇನಾಯೋಗ್ಯಂ ಸಮಂ ಮೃದು ।
ಋಜುಂ ಕರ್ತುಂ ಹಿ ಪಂಥಾನಂ ದೂತಾನಾಜಾಪಯಾಮ್ಯಹಂ ॥ ೩೪ ॥

ತತಸ್ಸೀತಾಬ್ರವೀದ್ವಾಕ್ಯಂ ಪುನಃ ಶ್ರೀರಾಮಚೋದಿತಾ ।
ಯತ್ರ ಗಂಗಾ ಚ ಸರಯೂಸಂಗತಾಸ್ತಿ ರಘೂದ್ವಹ ॥ ೩೫ ॥

ತತ್ರ ಗಂಗೋತ್ತರೇ ದೇಶೇ ಗಂತುಮಿಚ್ಛತಿ ಮೇ ಮನಃ ।
ಇತಿ ಸೀತಾವಚಶ್ಶ್ರುತ್ವಾ ತಥೇತ್ಯುಕ್ತ್ವಾ ರಘೂದ್ವಹಃ ॥ ೩೬ ॥

ದ್ವಾರಪಾಲಂ ಸಮಾಹೂಯ ಪಟೈರಾಚ್ಛಾದ್ಯ ಜಾನಕೀಂ ।
ಆಜ್ಞಾಪಯಚ್ಚ ತಂ ರಾಮಶ್ಶೀಘ್ರಂ ಗಚ್ಛ ಮಮಾಜ್ಞಯಾ ॥ ೩೭ ॥

---

೩೩. ಎಲೈ ಜಾನಕಿಯೇ ! ನಿನ್ನಮಾತಿನಂತೆಯೇ ನಾಳೆಯೇ ಗಂಗಾನದಿಗೆ ಹೋಗೋಣ. ಆ ಗಂಗಾನದಿಗೆ ಹೋಗಬೇಕಷ್ಟೆ! ಅದಕ್ಕೆ ಎಲ್ಲಿಗೆ ಹೋಗಿ ಪೂಜೆಯನ್ನು ಮಾಡಬೇಕೆಂದಿದ್ದೀಯೆ ? ಅದನ್ನು ಹೇಳು.

೩೪. ನೀನು ಹೇಳಿದಮೇಲೆ ಅದನ್ನು ತಿಳಿದು ಆ ಜಾಗದಲ್ಲಿ ಸೇನೆಗಳು ನಿಲ್ಲುವುದಕ್ಕಾಗುವಂತೆಯೂ, ಸಮವಾಗಿಯೂ, ಮೃದುವಾಗಿಯೂ ಇರುವಂತೆಯೂ ನೇರವಾಗಿರುವಂತೆಯೂ ದಾರಿಯಾಗಬೇಕು. ಅದಕ್ಕೆ ಅಪ್ಪಣೆ ಮಾಡಬೇಕಾಗಿದೆ. ಎಂದನು.

೩೫–೩೬. ಶ್ರೀರಾಮನು ಇಂತೆಂದುದನ್ನು ಕೇಳಿ ಸೀತೆಯು ಇಂತೆಂದು ವಿಜ್ಞಾಪಿಸಿದಳು. ಎಲೈ ರಾಮನೇ ! ಎಲ್ಲಿ ಗಂಗೆಯನ್ನು ಸರಯೂನದಿಯು ಸೇರುತ್ತದೆಯೋ ಅಲ್ಲಿ ಗಂಗೆಯ ಆಚೆಯ ದಡಕ್ಕೆ ಹೋಗಬೇಕು. ಎಂಬುದಾಗಿ ಆಸೆಯಿದೆ. ಎಂದು ಸೀತೆಯು ಹೇಳಿದುದನ್ನು ರಾಮನು ಕೇಳಿದನು.

೩೭. ಒಡನೆಯೇ ರಾಮನು ಸೀತೆಗೆ ಬುರುಕಿಯನ್ನು ಹಾಕಿ ಮುಚ್ಚಿ ದ್ವಾರಪಾಲಕನನ್ನು ಕರೆದನು. ಎಲೈ ದ್ವಾರಪಾಲಕನೆ! ನನ್ನ ಅಪ್ಪಣೆಯಮೇರೆ ಲಕ್ಷ್ಮಣನಲ್ಲಿಗೆ ಹೋಗು.

ಲಕ್ಷ್ಮಣಂ ವಚನಂ ಮೇ ತ್ವಂ ಕಥಯಸ್ವ ಸವಿಸ್ತರಂ ।
ಜ್ಞಾತವ್ಯಶ್ಶ್ವೋ ಮನೋದ್ಯೋಗಸ್ಸೀತಾಯಾಶ್ಚೈವ ಕೌತುಕಾತ್ ॥ ೩೮ ॥

ಸರಯೂಸಂಗಮೇ ಗಂಗಾಪೂಜನಾರ್ಥಂ ತ್ವಯಾ ಸಹ ।
ಮಾತೃಭಿರ್ಮಂತ್ರಿಭಿಸ್ಸೈನ್ಯೈಸ್ಸುಹೃದ್ಭಿರ್ಭರತೇನ ಚ ॥ ೩೯ ॥

ಶತ್ರುಘ್ನೇನ ಪುರಿಸ್ಥೈಶ್ಚ ಜನ್ಯೈರ್ವಿಪ್ರೇರ್ಯಥಾಸುಖಂ ।
ಸೇನಾನಿವೇಶಸ್ಥಾನಾನಿ ಯೋಜನಾರ್ಧಾಂತರಾಣಿ ಚ ॥ ೪೦ ॥

ಪೂರಿತಾನ್ಯನ್ನತೋಯಾದ್ಯೈಃ ಕಲ್ಪನೀಯಾನಿ ವೈ ಪೃಥಕ್ ।
ಇತಿ ರಾಮವಚಶ್ಶ್ರುತ್ವಾ ಸ ತಥೇತಿ ತ್ವರಾನ್ವಿತಃ ॥ ೪೧ ॥

ಆಜ್ಞಾ ಪ್ರಮಾಣಮಿತ್ಯುಕ್ತ್ವಾ ನತ್ವಾ ರಾಮಂ ಪುನಃ ಪುನಃ ।
ಕಥಯಾಮಾಸ ಸೌಮಿತ್ರಿಂ ರಾಮವಾಕ್ಯಂ ಸವಿಸ್ತರಂ ॥ ೪೨ ॥

೩೮-೪೦. ನಾನು ಹೇಳಿದೆನೆಂದು ಲಕ್ಷ್ಮಣನಿಗೆ ಹೇಳು. ಸೀತೆಯ ಆಸೆಯ ಮೇರೆಗೆ ನಾಳೆ ನನ್ನದೊಂದು ಕಾರ್ಯವು ನಡೆಯಬೇಕಾಗಿದೆ. ನಾಳೆಯೇ ಸರಯೂ ಸಂಗಮಕ್ಕೆ ಗಂಗಾ ಪೂಜೆಗೋಸ್ಕರ ಸೀತೆಯು ಹೋಗಬೇಕಾಗಿದೆ. ತಾಯಿಯರೂ ಮಂತ್ರಿಗಳೂ ಸೇನೆಯೂ ಸ್ನೇಹಿತರೂ ಭರತನೂ ಶತ್ರುಘ್ನನೂ ಪಟ್ಟಣದಲ್ಲಿರುವ ಬ್ರಾಹ್ಮಣರೂ ಅಲ್ಲಿಗೆ ಹೋಗಬೇಕು ಸೇನೆಯು ಅರ್ಧಯೋಜನದೂರದಲ್ಲಿಯೇ ನಿಲ್ಲಬೇಕು.

೪೧. ನೀರು ಆಹಾರಗಳು ಅಲ್ಲಿ ಸಮೃದ್ಧಿಯಾಗಿರುವಂತೆ ಮಾಡಬೇಕು. ಅವೆಲ್ಲವನ್ನೂ ಬೇರೆ ಬೇರೆಯಾಗಿಟ್ಟಿರಬೇಕು. ಎಂದು ಹೇಳು. ಎಂದಾಜ್ಞಾಪಿಸಿದನು. ಆ ದ್ವಾರಪಾಲನು ಇದನ್ನು ಕೇಳಿ ಹಾಗೆಯೇ ಆಗಲೆಂದು ಆವಸರದಿಂದ ಹೊರಟನು.

೪೨. ರಾಮನ ಆಜ್ಞೆಯೇ ನಮಗೆ ಪ್ರಮಾಣವು ಎಂದು ಹೇಳಿ ರಾಮನಿಗೆ ಬಹುವಾಗಿ ನಮಸ್ಕರಿಸಿ ದ್ವಾರಪಾಲಕನು ಲಕ್ಷ್ಮಣನ ಬಳಿಗೆ ಹೋಗಿ ರಾಮನ ಅಪ್ಪಣೆಯನ್ನು ವಿಸ್ತಾರವಾಗಿ ಅರಿಕೆಮಾಡಿದನು.

ತದ್ರಾಮವಚನಂ ಶ್ರುತ್ವಾ ಯೌವರಾಜ್ಯಪದಸ್ಥಿತಃ ।
ಸಭಾಯಾಂ ಮಂತ್ರಿಭಿರ್ಯುಕ್ತೋ ಲಕ್ಷ್ಮಣೋ ದೂತಮಬ್ರವೀತ್ ॥೪೩॥

ಅಂಗೀಕೃತಂ ರಾಮವಾಕ್ಯಮಿತಿ ರಾಮಂ ವದಸ್ವ ತತ್ ।
ಶ್ರುತ್ವಾ ತ್ವರಿತಂ ದೂತಃ ಕಥಯಾಮಾಸ ರಾಘವಂ ॥ ೪೪ ॥

ಸಭಾಯಾಂ ಲಕ್ಷ್ಮಣಶ್ಚಾಪಿ ದೂತಾನಾಜ್ಞಾಪಯತ್ತದಾ ।
ರುಕ್ಮದಂಡಕರಾನ್ ಚಿತ್ರೋಷ್ಣೀಷಯುಕ್ತಾನ್ ವಿಭೂಷಿತಾನ್ ॥ ೪೫ ॥

ಗಚ್ಛಧ್ವಂ ತ್ವರಿತಂ ಯೂಯಂ ಕಥಯಧ್ವಂ ಜನಾನ್ ಪುರಿ ।
ಅಯೋಧ್ಯಾಯಾಂ ರಾಘವಸ್ಯ ಶ್ವೋ ಯಾತ್ರಾರ್ಥಂ ಸಮುದ್ಯಮ॥ ೪೬ ॥

---

೪೩. ರಾಮನ ಅಪ್ಪಣೆಯನ್ನು ಕೇಳಿ ಯುವರಾಜಪದವಿಯಲ್ಲಿರುವ ಲಕ್ಷ್ಮಣನು ಮಂತ್ರಿಗಳನ್ನು ಕರೆಸಿ ಸಭೆಯನ್ನು ಮಾಡಿಸಿ ದೂತನನ್ನು ಕರೆದು ಇಂತೆಂದನು.

೪೪. "ರಾಮನ ಅಪ್ಪಣೆಯು ಅಂಗೀಕರಿಸಲ್ಪಟ್ಟಿದೆ'' ಎಂದು ರಾಮನಿಗೆ ವಿಜ್ಞಾಪಿಸು. ದೂತನು ಅದನ್ನು ಕೇಳಿ ಬೇಗನೆ ಹೋಗಿ "ಲಕ್ಷ್ಮಣನಿಗೆ ಅರಿಕೆ ಮಾಡಲು ಅವನು ಅಂತೆಯೇ ಅಪ್ಪಣೆಯನ್ನು ಅಂಗೀಕರಿಸಿದ್ದೇನೆ ಎಂದು ಹೇಳಿದನು" ಎಂದು ರಾಮನಿಗೆ ತಿಳಿಸಿದನು.

೪೫. ಸಭೆಯಲ್ಲಿದ್ದ ಲಕ್ಷ್ಮಣನು ಒಡನೆಯೇ ಚಿನ್ನದ ಕಟ್ಟಿಗೆಯನ್ನು ಹಿಡಿದು ಚಿತ್ರವಾದ ರುಮಾಲುಗಳನ್ನು ಹಾಕಿಕೊಂಡಿರುವ ದೂತರನ್ನು ಕರೆದು ಇಂತೆಂದು ಅಪ್ಪಣೆಮಾಡಿದನು.

೪೬. ಎಲೈ ದೂತರಿರಾ! ನೀವೆಲ್ಲರೂ ಅಯೋಧ್ಯೆಯ ಬೀದಿಗಳಲ್ಲಿ ಹೋಗಿರಿ. ಪಟ್ಟಣದ ಜನಗಳಿಗೆ ನಾಳೆಯ ದಿನ ರಾಮನು ಯಾತ್ರೆಗೆ ಹೊರಡಲು ಪ್ರಯತ್ನಪಟ್ಟಿರುವನು. ಎಂದು ಸಾರಿ ಹೇಳಿರಿ ಎಂದನು.

ತಥೇತ್ಯುಕ್ತ್ವಾ ಜವಾದ್ದೂತಾ ರಾಜಮಾರ್ಗೇಷು ಸರ್ವತಃ ।
ದೀರ್ಘಸ್ವರೇಣ ತೇ ಪ್ರೋಚುಶ್ಚೋರ್ಧ್ವಂ ಕೃತ್ವಾ ತು ಸತ್ಕರಾನ್ ॥ ೪೭ ॥

ಹೇ ಜನಾಃ ಶೃಣುತ ಸ್ವಸ್ಥಾಃ ಶ್ವಸ್ಸೀತಾರಾಮಯೋರ್ಮುದಾ ।
ಸಮುದ್ಯೋಗೋಸ್ತಿ ಪೂಜಾರ್ಥಂ ಸರಯ್ವಾಸಂಗಮಂ ಪ್ರತಿ ॥ ೪೮ ॥

ಭಾಗೀರಥ್ಯಾಂ ಸುಹೃದ್ಭಿಶ್ಚ ಸಾವರೋಧೈರ್ಬಲೈಸ್ಸಹ ।
ಇತಿ ಸಂಶ್ರಾವ್ಯ ಸಕಲಾನ್ ಜನಾನ್ ಸಾಕೇತವಾಸಿನಃ ॥ ೪೯ ॥

ತೇ ದೂತಾ ರಾಜಭವನೇ ಲಕ್ಷ್ಮಣಂ ತಂ ಪುನರ್ಯಯುಃ ।
ಸಂಶ್ರಾವಿತೋ ಜನಾಂಶ್ಚೇತಿ ರಾಮೋದ್ಯೋಗಂ ನ್ಯವೇದಯನ್ ॥ ೫೦ ॥

---

೪೭. ಆ ದೂತರು ಹಾಗೆಯೇ ಆಗಲೆಂದು ಬೇಗನೆ ಹೋಗಿ ರಾಜಬೀದಿಗಳಲ್ಲಿ ಕೈಗಳನ್ನು ಮೇಲಕ್ಕೆತ್ತಿಕೊಂಡು ಗಟ್ಟಿಯಾಗಿಯೂ ದೀರ್ಘ ಸ್ವರದಿಂದಲೂ ಕೂಗುತ್ತ ಇಂತೆಂದರು.

೪೮. ಎಲೈ ಜನಗಳಿರಾ ! ಕೇಳಿರಿ. ನಾಳೆ ಸೀತಾರಾಮರು ಸರಯೂ ಸಂಗಮಕ್ಕೆ ಗಂಗಾಪೂಜೆಗೆ ಹೋಗಲು ಪ್ರಯತ್ನವು ನಡೆಯುತ್ತಿದೆ.

೪೯. ಸ್ನೇಹಿತರು ಅಂತಃಪುರದ ಜನರು ಸೈನಿಕರು ಎಲ್ಲರೂ ಹೋಗುವರು. ಎಂಬದಾಗಿ ಕೂಗಿ ಹೇಳಿ ಆ ಅಯೋಧ್ಯೆಯಲ್ಲಿರುವ ಎಲ್ಲರಿಗೂ ತಿಳಿಸಿದರು.

೫೦. ಎಲ್ಲಾ ಕಡೆಯಲ್ಲಿಯೂ ಹೇಳಿ ಮುಗಿಯಲು ಆ ದೂತರು ಮತ್ತೆ ಲಕ್ಷ್ಮಣನ ಬಳಿಗೆ ಬಂದರು. ರಾಮನ ಉದ್ಯೋಗವನ್ನು ಎಲ್ಲರಿಗೂ ತಿಳಿಸಿದೆವು ಎಂದು ಅವನಿಗೆ ಅರಿಕೆ ಮಾಡಿದರು.

ಸಭಾಯಾಂ ಲಕ್ಷ್ಮಣಶ್ಚಾಪಿ ಸಮಾಹೂಯಾನುಗೈರ್ಜನಾತ್ ।
ತಕ್ಷಕಾನಿಷ್ಟಕಾಕಾರಾನ್ ದೃಷತ್ಕರ್ಮಸು ನೈಷ್ಠಿಕಾನ್ ॥ ೫೧ ॥

ಲೋಹಕಾರಾಂಶ್ಚರ್ಮಕಾಂಶ್ಚ ಭಿತ್ತಿಕರ್ಮಾದಿನೈಷ್ಠಿಕಾನ್ ।
ಕ್ರಯವಿಕ್ರಯಕರ್ತೄಂಶ್ಚ ಕಾಷ್ಠನಿರ್ಜೀವಕಾರಿಣಃ ॥ ೫೨ ॥

ವಾಸೋಗೃಹವಿದಗ್ಧಾಂಶ್ಚ ಮಹೀಸ್ಥೈರ್ಜಲವಾಹಿನಃ ।
ನಾನಾಕರ್ಮಸು ನಿಪುಣಾನ್ ರಜ್ಜುಕುದ್ದಾಲಧಾರಿಣಃ ॥ ೫೩ ॥

ಏತಾನಾಜ್ಞಾಪಯಾಮಾಸ ತೋಷಣಾನ್ ವಸನಾದಿಭಿಃ ।
ಸಂಮಾನಿತಾನ್ ಸ ಸೌಮಿತ್ರಿಃ ಕಥಯಾಮಾಸ ಸಾದರಂ ॥ ೫೪ ॥

ಸಮುದ್ಯೋಗಂ ರಾಘವಸ್ಯ ಸೀತಾಯಾಃ ಶ್ವೋ ಬಲೈಸ್ಸಹ ।
ಋಜುರ್ಮಾರ್ಗೋ ವಿಧಾತವ್ಯಸ್ಸಮುಶ್ಶರ್ಕರವರ್ಜಿತಃ ॥ ೫೫ ॥

೫೧–೫೩. ಇತ್ತ ಲಕ್ಷ್ಮಣನೂ ಕೂಡ ಸಭೆಯಲ್ಲಿದ್ದುಕೊಂಡು ಆಳುಗಳಿಂದ ಕೆತ್ತುವರನ್ನೂ ಗಾರೆಯುವರನ್ನೂ ಕಲ್ಲುಕೆಲಸದವರನ್ನೂ ಲೋಹದಲ್ಲಿ ಕೆಲಸ ಮಾಡುವವರನ್ನೂ ಚಮ್ಮಾರನನ್ನೂ ಗೋಡೆಹಾಕುವವರನ್ನೂ ಕೊಳ್ಳುವವರನ್ನೂ ಮಾರುವವರನ್ನೂ ಮರಕೆತ್ತುವವರನ್ನೂ ಡೇರಕಟ್ಟುವವರನ್ನೂ ಕೋಣಗಳಮೇಲೆ ನೀರನ್ನು ತರುವವರನ್ನೂ ಹಗ್ಗ, ಗುದ್ದಲಿಗಳನ್ನು ಧರಿಸಿರುವವರನ್ನೂ ಎಲ್ಲಬಗೆಯ ಕೆಲಸಗಾರರನ್ನೂ ಕರೆಸಿದನು.

೫೪–೫೬. ಇವರೆಲ್ಲರಿಗೂ ವಸ್ತ್ರಾದಿಗಳನ್ನು ಕೊಟ್ಟು ಬಹುಮಾನಿಸಿ ಆದರದಿಂದ ಇಂತೆಂದನು. ರಾಮನೂ ಸೀತೆಯೂ ನಾಳೆ ಗಂಗಾನದಿಗೆ ಪೂಜೆಗೆ ಹೋಗಬೇಕೆಂದಿರುವರು. ದಾರಿಯನ್ನು ನೇರವಾಗಿಯೂ ಮಟ್ಟವಾಗಿಯೂ ಕಲ್ಲುಗಳಿಲ್ಲದಂತೆಯೂ ಮಾಡಬೇಕು. ಹಳ್ಳಗಳನ್ನು ತುಂಬಿ ಸರಿಮಾಡಬೇಕು.

ನಿಮ್ನಾ ಭೂಮಿಸ್ಸಮಾ ಕಾರ್ಯಾ ಉಚ್ಚಾ ಭೂಮಿಸ್ಸಮಾಪಿ ಚ ।
ಛಿಂದ್ಯಂತಾಂ ಪರ್ವತಾ ವೃಕ್ಷಾ ಮಾರ್ಗಸ್ಥಾ ದುಃಖದಾಯಕಾಃ ॥ ೫೬ ॥

ವಾಪ್ಯಃ ಕೂಪಾಸ್ತಟಾಕಾಶ್ಚ ಶೋಧನೀಯಾಸ್ಸಹಸ್ರಶಃ ।
ನವೀನಾಶ್ಚಾಪಿ ಕರ್ತವ್ಯಾಸ್ಸತೋಯಾ ನಿರ್ಜಲೇ ವನೇ ॥ ೫೭ ॥

ಸೇನಾನಿವೇಶಸ್ಥಾನಾನಿ ಯೋಜನಾರ್ಧೇ ಸವಿಸ್ತರೈಃ ।
ಕಲ್ಪನೀಯಾನಿ ಯುಷ್ಮಾಭಿಃ ಪೂರಿತಾನ್ಯನ್ನವಾರಿಭಿಃ ॥ ೫೮ ॥

ಚುಲ್ಲ್ಯೋ ರಮ್ಯಾ ವಿಧಾತವ್ಯಾಃ ಪಾಕಶಾಲಾಸ್ಸಭಿತ್ತಯಃ ।
ವಸ್ತ್ರೈರ್ಗೇಹಾನಿ ಕಾರ್ಯಾಣಿ ತೃಣೈಶ್ಚಾಪಿ ಸಹಸ್ರಶಃ ॥ ೫೯ ॥

ತಿಟ್ಟುಗಳನ್ನು ಕಡಿದು ಸಮಮಾಡಬೇಕು. ದಾರಿಯಲ್ಲಿ ಅಡ್ಡವಾಗಿ ಸಿಕ್ಕುವ ತೊಂದರೆಯನ್ನುಕೊಡುವ ಬೆಟ್ಟಗಳನ್ನೂ ಮರಗಳನ್ನೂ ಕತ್ತರಿಸಿರಿ.

೫೭. ಕೊಳಗಳನ್ನೂ, ಬಾವಿಗಳನ್ನೂ, ಕೆರೆಗಳನ್ನೂ, ಬಹುವಾಗಿ ಶೋಧಿಸಿ ಶುದ್ಧಮಾಡಿರಿ. ನೀರಿಲ್ಲದುದರಲ್ಲಿ ನೀರು ಬರುವಂತೆ ಮಾಡಿರಿ. ನೀರಿಲ್ಲದ ಜಾಗದಲ್ಲಿ ನೀರು ಬರುವಂತೆ ಬಾವಿಗಳನ್ನು ತೋಡಿಸಿರಿ.

೫೮. ಸೇನೆಯು ಆ ಪೂಜೆಯ ಜಾಗಕ್ಕಿಂತಲೂ ಅರ್ಧಯೋಜನದೂರದಲ್ಲಿ ನಿಲ್ಲಬೇಕು. ಆ ಜಾಗವು ವಿಸ್ತಾರವಾಗಿರಬೇಕು. ಅಲ್ಲಿ ನೀರೂ ಆಹಾರವೂ ಸಮೃದ್ಧಿಯಾಗಿರಬೇಕು. ಆ ರೀತಿಯಲ್ಲಿ ಏರ್ಪಡಿಸಿರಿ.

೫೯. ಚೆನ್ನಾಗಿಯೂ ಉತ್ತಮವಾಗಿಯೂ ಇರುವ ಒಲೆಗಳನ್ನು ಕಟ್ಟಿಸಿರಿ. ಪಾಕಶಾಲೆಗೆ ಗೋಡೆಗಳನ್ನು ಹಾಕಿಸಿ ಬೇರೆ ಬೇರೆಯಾಗಿ ಮಾಡಿರಿ. ಎಲ್ಲಾ ಕಡೆಯಲ್ಲಿಯೂ ಬಟ್ಟೆಯ ಗುಡಾರಗಳನ್ನು ಹಾಕುವುದಲ್ಲದೆ ಹುಲ್ಲಿನಿಂದಲೂ ಗುಡಿಸಲುಗಳನ್ನು ಕಟ್ಟಿರಿ. ಈ ರೀತಿಯಾಗಿ ಸಾವಿರಾರನ್ನು ನಿರ್ಮಿಸತಕ್ಕದ್ದು.

ಆರಕ್ತೈಖರ್ಪರ್ಶೈರಾಚ್ಛಾದಿತಾನಿ ಚಿತ್ರಿತಾನಿ ಹಿ ।
ನಾನಾಗೃಹಾಣಿ ಕಾರ್ಯಾಣಿ ಪೂರಿತಾನ್ಯನ್ನವಾರಿಭಿಃ ॥ ೬೦ ॥

ಪುಷ್ಪಾಣಾಂ ವಾಟಿಕಾಃ ಕಾರ್ಯಾಃ ಶತಶೋಽಥ ಸಹಸ್ರಶಃ ।
ಮಾರ್ಗೇ ಮಾರ್ಗೇ ಕೌತುಕಾರ್ಥಂ ಭಿತ್ತೌ ಚಿತ್ರಾಣ್ಯನೇಕಶಃ ॥ ೬೧ ॥

ನರಸ್ಕಂಧಗತಾಶ್ಚಿತ್ರವಾಟಕಾಶ್ಚ ಸಹಸ್ರಶಃ ।
ಪುಷ್ಪಾಣಾಂ ವಾಟಿಕಾಶ್ಚಾರುಮೃತ್ಪಾತ್ರನಿರ್ಮಿತಾಶ್ಶುಭಾಃ ॥ ೬೨ ॥

ಮಾರ್ಗೇ ಮಾರ್ಗೇ ಗಾಯಕಾನಾಂ ಸ್ಥಾನಾನ್ಯಪಿ ಸಹಸ್ರಶಃ ।
ಸೇನಾನಿವಾಸಸ್ಥಾನೇಷು ಹಸ್ತ್ಯಶ್ವರಥವಾಜಿನಾಂ ॥ ೬೩ ॥

---

೬೦. ಕೆಂಪಗಿರುವ ಹಂಚಿಯ ಹುಲ್ಲನ್ನು ಹಾಕಿ ವಿಚಿತ್ರವಾದ ಮನೆಗಳನ್ನು ಕಟ್ಟಿರಿ. ಬಗೆ ಬಗೆಯಾಗಿ ಅನೇಕ ಮನೆಗಳನ್ನು ಮಾಡಿ ಅವುಗಳಲ್ಲಿ ಆಹಾರಗಳಿಗೂ ನೀರಿಗೂ ಅನುಕೂಲಪಡಿಸಿರಿ.

೬೧. ಸಾವಿರಗಟ್ಟಲೆಯಲ್ಲಿ ಹೂವುಳ್ಳ ಆ ರಾಮುದ ತೋಟಗಳನ್ನು ಮಾಡಿರಿ ಅವೆಲ್ಲವನ್ನೂ ಜನರು ತಲೆಯಮೇಲೆ ಹೊತ್ತುಕೊಂಡು ಮುಂದು ಮುಂದಕ್ಕೆ ಹೋಗುವಂತಿರಬೇಕು. ದಾರಿಯುದ್ದಕ್ಕೂ ಸಂತೋಷಕ್ಕೋಸ್ಕರ ಗೋಡೆಗಳಲ್ಲಿ ಬಹುವಾಗಿ ಚಿತ್ರಗಳನ್ನು ಬರೆಯಿರಿ.

೬೨. ಚಿತ್ರವಾದ ಪದಾರ್ಥಗಳನ್ನು ಜನರು ಹೊತ್ತಿರುವಂತೆ ಮಾಡಬೇಕು. ಚಿತ್ರವಾದ ತೋಟಗಳನ್ನು ಅಲ್ಲಲ್ಲಿ ಬಹುವಾಗಿ ಮಾಡಬೇಕು. ಮಣ್ಣಿನ ಕುಂಡಗಳಲ್ಲಿ ಹೂವಿನ ಗಿಡಗಳನ್ನು ಅಲ್ಲಲ್ಲಿಯೇ ದಾರಿಯುದ್ದಕ್ಕೂ ಇಟ್ಟಿರಬೇಕು.

೬೩–೬೪. ದಾರಿಯುದ್ದಕ್ಕೂ ಗಾಯಕರಿಗೆ ಜಾಗಗಳನ್ನು ಮಾಡಿರಲಿ. ಸೇನೆಯನ್ನು ನಿಲ್ಲಿಸುವ ಪಾಳಯದಲ್ಲಿ ಆನೆ, ಕುದುರೆ, ಕಾಲಾಳು, ರಥಗಳು ಇವು ನಿಲ್ಲಲು ಸಾವಿರಾರು ಹುಲ್ಲಿನ ಗುಡಸಲುಗಳನ್ನು ಕಟ್ಟಬೇಕು. ಅವುಗಳಿಗೆ

ಸಹಸ್ರಶೋ ವಿಧಾತವ್ಯಾಃ ಶಾಲಾಃ ಪೂರ್ಣಾಸ್ತೃಣಾದಿಭಿಃ ।
ಸುಗಂಧಚಂದನೈರ್ಮಾರ್ಗಾಸ್ಸೇಚನೀಯಾಸ್ಸಮಂತತಃ ॥ ೬೪ ॥

ನೇಮಿರೇಖೋಪಮಾ ಮಾರ್ಗೇ ವಿಚಿತ್ರವಸನೈರ್ಗೃಹಾಃ ।
ಪುಷ್ಪೈರಾಚ್ಛಾದನೀಯಾಸ್ತೇ ಹಟ್ಟಾಸ್ಸಂತು ಸಮಂತತಃ ॥ ೬೫ ॥

ಶೃಂಗಾರ್ಯೈರತಿಚಿತ್ರೈಶ್ಚ ಹಸ್ತ್ಯುಷ್ಟ್ರರಥವಾಜಿನಃ ।
ವಸ್ತ್ರಾಲಂಕಾರ ಘಂಟಾಭಿಶ್ಶೋಭನೀಯಾಸ್ಸಹಸ್ರಶಃ ॥ ೬೬ ॥

ಶಕಟೇಷು ರಥೋಷ್ಟ್ರೇಷು ವಾರಣೇಷು ರಥಾದಿಷು ।
ಶತಘ್ನ್ಯಃ ಪರಿಘಾ ಬಾಣಾಶ್ಶಕ್ತಯಃ ಕಾರ್ಮುಕಾನ್ಯಪಿ ॥ ೬೭ ॥

ಬೇಕಾದಂತೆ ಹುಲ್ಲು ನೀರುಗಳನ್ನು ಸಿದ್ಧಪಡಿಸಿ ಪೂರ್ಣವಾಗಿರಬೇಕು. ಸುಗಂಧ ದ್ರವ್ಯಗಳಿಂದಲೂ ಚಂದನದಿಂದಲೂ ದಾರಿಯನ್ನು ಸುವಾಸನೆ ಬರುವಂತೆ ಮಾಡಿರಬೇಕು.

೬೫. ದಾರಿಯಲ್ಲಿ ಉದ್ದಕ್ಕೂ ಸಾಲಾಗಿ ಚಿತ್ರವಿಚಿತ್ರವಾದ ಬಟ್ಟೆಗಳಿಂದ ಡೇರಗಳನ್ನು ಹಾಕಿಸಿರಿ. ಅಲ್ಲಿ ಅಂಗಡಿಗಳನ್ನು ಇಡಿಸಿರಲಿ. ಅಲ್ಲಿ ಹೂಗಳನ್ನು ಹಾಕಿ ಅಲಂಕರಿಸಿರಲಿ.

೬೬. ಆನೆ, ಒಂಟೆ, ರಥ, ಕುದುರೆಗಳಿಗೆ ಚಿತ್ರಗಳನ್ನು ಬರೆದು ಶೃಂಗರಿಸಿರಿ. ವಸ್ತ್ರ, ಅಲಂಕಾರ ಘಂಟೆಗಳನ್ನು ಬಹುವಾಗಿಯೂ ಚೆನ್ನಾಗಿಯೂ ಹಾಕಿ ಶೃಂಗರಿಸಲಿ.

೬೭. ಗಾಡಿಗಳಲ್ಲಿಯೂ, ರಥಗಳಲ್ಲಿಯೂ, ಒಂಟೆಗಳಮೇಲೂ ಆನೆಗಳ ಮೇಲೂ ಫಿರಂಗಿಗಳನ್ನೂ ದೊಣ್ಣೆಗಳನ್ನೂ ಬಾಣವನ್ನೂ ಕತ್ತಿಗಳನ್ನೂ ಧನುಸ್ಸುಗಳನ್ನೂ ಇಟ್ಟಿರಲಿ.

ಸ್ಥಾಪನೀಯಾನಿ ಶತಶೋ ವಿಧಾತವ್ಯಾ ಧ್ವಜಾ ಅಪಿ |
ಚತುರ್ಷ್ವಪಿ ವಿಧಾತವ್ಯಾ ಧ್ವಜಾರಾಮರಥೇಷು ಹಿ || ೬೮ ||

ಹನುಮತ್ಕೋವಿದಾರಾಂಡಜೇಶಬಾಣಾಂಕಿತಾಶ್ಶುಭಾಃ |
ಚತುರ್ಷ್ವಪಿ ಬಂಧನೀಯಾಃ ಪತಾಕಾಃ ಸ್ಯಂದನೇಷು ಹಿ || ೬೯ ||

ಹರಿಚ್ಛ್ವೇತಪೀತನೀಲವರ್ಣಾಃ ಪರಮಶೋಭನಾಃ |
ಗಜಪೃಷ್ಠೇ ರಾಘವಾರ್ಥಂ ಹರಿದ್ವರ್ಣಾಂಕಿತಾಸನಂ || ೭೦ ||

ರುಕ್ಮಮಾಣಿಕ್ಯರಚಿತಂ ಸಿಂತಚ್ಛತ್ರೋಪಶೋಭಿತಂ |
ಸ್ಥಾಪನೀಯಂ ಮಹಾದಿವ್ಯಂ ಮುಕ್ತಾಹಾರವಿರಾಜಿತಂ || ೭೧ ||

ಸೀತಾರ್ಥಂ ಕರಿಣೀಪೃಷ್ಠೇ ನೀಲವರ್ಣಂ ಮಹಾಸನಂ |
ರುಕ್ಮವಿದ್ರುಮವೈಡೂರ್ಯ ರತ್ನಮುಕ್ತಾವಿರಾಜಿತಂ || ೭೨ ||

೬೮–೬೯. ಅವುಗಳಮೇಲೆ ಧ್ವಜಗಳನ್ನು ಕಟ್ಟಿಸಿರಲಿ. ಹನುಮಂತ ಕಂಚುವಾಳ ಗರುಡ ಬಾಣಗಳ ಚಿಹ್ನೆಗಳುಳ್ಳ ಧ್ವಜಗಳನ್ನು ರಾಮನ ನಾಲ್ಕು ರಥಗಳಿಗೂ ಕಟ್ಟಿರಲಿ. ಈ ಪತಾಕೆಗಳನ್ನೂ ಎಲ್ಲಾ ಕಡೆಯಲ್ಲಿಯೂ ನಾಲ್ಕು ದಿಕ್ಕುಗಳಲ್ಲಿಯೂ ಕಟ್ಟಿರಲಿ.

೭೦–೭೧. ಹಸುರು, ಬಿಳುಪು, ಹಳದಿ, ನೀಲಿಬಣ್ಣಗಳುಳ್ಳ ರಮ್ಯವಾದ ಪತಾಕೆಗಳನ್ನು ಕಟ್ಟಿರಿ. ಹಸುರುಬಣ್ಣಕ್ಕಿರುವ ಚಿನ್ನಮಾಣಿಕ್ಯಗಳನ್ನು ಸೇರಿಸಿರುವ ಆಸನವನ್ನು ರಾಮನು ಕುಳಿತುಕೊಳ್ಳುವ ಆನೆಯಮೇಲೆ ಹಾಕಿರಿ. ಅದರಮೇಲೆ ಬಿಳಿಯಛತ್ರಿಯನ್ನು ಹಿಡಿದಿರಲಿ. ಅವುಗಳ ಅಂಚಿನಲ್ಲಿ ಮುತ್ತಿನಹಾರಗಳು ನೇತಾಡುತ್ತಿರಲಿ

೭೨. ಸೀತೆಗೋಸ್ಕರವಾಗಿ ಹೆಣ್ಣಾನೆಯಮೇಲೆ ನೀಲಿಬಣ್ಣದ ಆಸನಗಳನ್ನು ಹಾಕಿರಲಿ. ಅದರಲ್ಲಿ ಚಿನ್ನ, ಹವಳ, ವೈಡೂರ್ಯ, ರತ್ನ, ಮುತ್ತುಗಳನ್ನು ಅದಕ್ಕೆ ಯಥಾಯೋಗ್ಯವಾಗಿ ಸೇರಿಸಿರಲಿ.

ಮುಕ್ತಾಫಲಹೇಮತಂತುಗಣ್ಯೈರಾಚ್ಛಾದಿತಂ ವರಂ ।
ಸಿದ್ಧಂ ಕಾರ್ಯಂ ಮಹಾದಿವ್ಯಂ ಸ್ವರ್ಣಕುಂಭಂ ವಿರಾಜಿತಂ ॥ ೭೩ ॥

ಪುಷ್ಪಮಾಲಾಸ್ತೋರಣಾನಿ ಬಂಧನೀಯಾನಿ ವೈ ಪಥಿ ।
ನೃತ್ಯಂತು ವಾರವೇಶ್ಯಾಶ್ಚ ಸ್ತುತಿಂ ಕುರ್ವಂತು ವಂದಿನಃ ॥ ೭೪ ॥

ದ್ರವ್ಯೈರ್ವಸ್ತ್ರೈರಾಭರಣೈಃ ಪೂಜಾದ್ರವ್ಯೈಶ್ಚ ಗೋರಸೈಃ ।
ಪಾತ್ರೈರ್ನಾನಾವಿಧೈರ್ದಿವ್ಯೈಃ ಪೂರಣೀಯಾ ರಥೋತ್ತಮಾಃ ॥ ೭೫ ॥

ಅನ್ಯಚ್ಚಾಪಿ ಮಯಾ ನೋಕ್ತಂ ಯದ್ಯದ್ಯೋಗ್ಯಂ ಹಿ ತತ್ಪಥಿ ।
ಸಿದ್ಧಂ ಕಾರ್ಯಂ ಹಿ ಯೋಗೇನ ಯೇನ ತುಷ್ಯತಿ ರಾಘವಃ ॥ ೭೬ ॥

ಇತಿ ಸಂದಿಶ್ಯ ಮೇಧಾವೀ ಲಕ್ಷ್ಮಣಸ್ಸಹ ಮಂತ್ರಿಭಿಃ ।
ಸಾಯಂಸಂಧ್ಯಾದಿಕಂ ಕರ್ತುಂ ಜಗಾಮ ನಿಜಮಂದಿರಂ ॥ ೭೭ ॥

---

೭೩. ಚಿನ್ನದ ಸರಪಣಿಗೆ ಮುತ್ತುಗಳನ್ನು ಸೇರಿಸಿರುವ ಜಾಲರಿಗಳನ್ನು ಮೇಲುಗಡೆಗೆ ಹೊದಿಸಿರಬೇಕು. ದಾರಿಯಲ್ಲಿ ಚಿನ್ನದ ಕಲಶಗಳನ್ನು ಇಟ್ಟು ಸಿದ್ಧಮಾಡಿರಬೇಕು.

೭೪. ದಾರಿಯಲ್ಲಿ ಹೂಮಾಲೆಯನ್ನೂ ತಳಿರಿನ ತೋರಣಗಳನ್ನೂ ಕಟ್ಟಿರಬೇಕು. ದಾರಿಯುದ್ದಕ್ಕೂ ಸೂಳೆಯರು ಕುಣಿಯುತ್ತಿರಬೇಕು. ಹೊಗಳು ಭಟರು ಹೊಗಳುತ್ತಿರಲಿ.

೭೫. ದ್ರವ್ಯವನ್ನೂ ವಸ್ತ್ರಗಳನ್ನೂ ಆಭರಣಗಳನ್ನೂ ಪೂಜಾದ್ರವ್ಯಗಳನ್ನೂ ಹಾಲು ಮೊಸರು ಬೆಣ್ಣೆಗಳನ್ನೂ ಅನೇಕ ಬಗೆಯಾದ ಪಾತ್ರೆಗಳನ್ನೂ ರಥದಲ್ಲಿ ತುಂಬಿರಲಿ.

೭೬. ನಾನು ಹೇಳದಿದ್ದರೂ ದಾರಿಗೆ ಬೇಕಾಗುವ ಬೇರೆಯಾದ ಪದಾರ್ಥಗಳನ್ನು ಸಿದ್ಧವನ್ನಾಗಿಮಾಡಿರಿ. ರಾಮನು ಯಾವದಿದ್ದರೆ ಸಂತೋಷ ಪಡುವನೋ ಅವೆಲ್ಲವನ್ನೂ ಸಿದ್ಧಮಾಡಿರಿ.

೭೭. ಬುದ್ಧಿವಂತನಾದ ಲಕ್ಷ್ಮಣನು ಇಂತು ಆಜ್ಞಾಪಿಸಿ ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಲು ಮಂತ್ರಿಗಳೊಡನೆ ಮನೆಗೆ ಹೋದನು.

ಸೌಮಿತ್ರೇರಾಜ್ಞಯಾ ತೇಽಪಿ ತಥಾ ಚಕ್ರುರ್ಯಥೋದಿತಾಃ ।
ಸಂತುಷ್ಟಾಸ್ತೇ ಯಥಾಯೋಗ್ಯಂ ರಾಮಸಂತೋಷಹೇತವೇ ॥ ೭೮ ॥

ರಾಮೋಽಪಿ ಸೀತಯಾ ಸಾರ್ಧಂ ಮಂದಿರೇ ರತ್ನನಿರ್ಮಿತೇ ।
ಮಂಚಕೇ ಪುಷ್ಪಶಯ್ಯಾಯಾಂ ಸೀತಾಮಾಲಿಂಗ್ಯ ವೈ ದೃಢಂ ॥ ೭೯ ॥

ರುಕ್ಮನೇಪಥ್ಯಯುಕ್ತಾಭಿರ್ದಾಸೀಭಿಶ್ಚ ಮುಹುರ್ಮುಹುಃ ।
ವೀಜಿತೋ ವಾಲವ್ಯಜನೈರ್ನಿಶಿ ಸುಪ್ತಸ್ಸುಖಂ ತದಾ ॥ ೮೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ದೂತಾಜ್ಞಾಕರಣ ವರ್ಣನಂ ನಾಮ ತೃತೀಯಸ್ಸರ್ಗಸಮಾಪ್ತಃ

---

೭೮. ಸೌಮಿತ್ರಿಯ ಅಪ್ಪಣೆಯಂತೆಯೇ ಎಲ್ಲವನ್ನೂ ಆ ಸೇವಕರು ಸಿದ್ಧಮಾಡಿದರು. ಅವರು ರಾಮನಿಗೆ ಸಂತೋಷವನ್ನುಂಟುಮಾಡಲು ತಮ್ಮ ಶಕ್ತಿಯನ್ನು ಮೀರಿ ಸಿದ್ದಪಡಿಸಿ ಅದರಿಂದ ತಾವೇ ಸಂತೋಷಪಡುತ್ತ ಹೋದರು.

೭೯–೮೦. ಆದಿನ ರಾತ್ರಿ ರಾಮನೂ ಸೀತೆಯೂ ರತ್ನದ ಮಂಚದಲ್ಲಿ ಹೂವಿನ ಹಾಸಿಗೆಯಲ್ಲಿ ಆಲಂಗಿಸಿಕೊಂಡು ಚಿನ್ನದ ಸರಿಗೆಯ ತೆರೆಯನ್ನು ಹಾಕಿ ಕೊಂಡು ದಾಸಿಯರಿಂದ ಚಾಮರದಲ್ಲಿ ಬೀಸಿಸಿಕೊಳ್ಳುತ್ತ ಸುಖವಾಗಿ ಮಲಗಿದ್ದರು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ದೂತಾಜ್ಞಾಕರಣ ವರ್ಣನವೆಂಬ ಮೂರನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ
॥ ಮೂರನೆಯ ಸರ್ಗದ ಸಾರಾಂಶವು ॥

ರಾಮದಾಸನಾರು? ವಿಷ್ಣುದಾಸನಾರು? ಆ ವಿಷ್ಣುದಾಸನಿಗೆ ರಾಮದಾಸನು ಹೇಗೆ ಹೇಳುವನೆಂದು ಪಾರ್ವತಿಯು ಕೇಳಲು ಶಿವನು ಇಂತೆಂದನು.

ಭಾರತದೊಳಗೆ ದಂಡಕಾರಣ್ಯವಿರುವುದು. ಅಲ್ಲಿ ಗೋದಾವರಿ ನದಿಯ ದಡದಲ್ಲಿ ನೃಸಿಂಹಕ್ಷೇತ್ರದಲ್ಲಿ ರಾಮದಾಸನೆಂಬುವನು ಒಬ್ಬನು ಹುಟ್ಟುವನು. ಅವನಿಗೆ ವಿಷ್ಣುದಾಸನೆಂಬ ಶಿಷ್ಯನಾಗುವನು. ಅವರಿಬ್ಬರೂ ಯಾವಾಗಲೂ ರಾಮಸೇವೆಯಲ್ಲಿಯೇ ಆಸಕ್ತರಾಗಿರುವರು. ರಾಮದಾಸನು ತೀರ್ಥಯಾತ್ರೆಗಳೆಲ್ಲವನ್ನೂ ಮಾಡಿಕೊಂಡು ಬಂದು ತನ್ನ ಆಶ್ರಮದಲ್ಲಿದ್ದುಕೊಂಡು ಶಿಷ್ಯರಿಗೆ ಅಧ್ಯಯನ ಮಾಡಿಸುತ್ತಿರುವನು. ಗುರುವು ಶಿಷ್ಯನಿಗೆ ರಾಮಾಯಣದ ಕಥೆಯೆಲ್ಲವನ್ನೂ ಹೇಳಲು ಶಿಷ್ಯನು ಗುರುವನ್ನು ಕುರಿತು "ಎಲೈ ಗುರುವೆ! ನೀನು ಹೇಳಿದ ಕಥೆಯೆಲ್ಲವನ್ನೂ ಕೇಳಿದೆನು. ಅದರಲ್ಲಿ ರಾಮನಾಗಲೀ, ಸೀತೆಯಾಗಲೀ ಸಂತೋಷವಾಗಿದ್ದುದನ್ನು ಕೇಳಲೇ ಇಲ್ಲ. ಅದರ ವಿಷಯವನ್ನೂ, ಅವರು ಯಾಗಮಾಡಿದ ವಿಷಯವನ್ನೂ ವಿಸ್ತಾರವಾಗಿ ತಿಳಿಸು. ಮತ್ತು ಅವನ ಮಕ್ಕಳ ವಿಷಯವನ್ನೂ ಅವನ ತಮ್ಮಂದಿರ ವಿಷಯವನ್ನೂ, ಅವರ ವಿವಾಹಗಳನ್ನೂ ತಿಳಿಸು" ಎಂದನು.

"ಎಲೈ ಶಿಷ್ಯನೇ! ನೀನು ಕೇಳಿದುದು ಸರಿ. ಅದರಂತೆಯೇ ಎಲ್ಲವನ್ನೂ ಹೇಳುತ್ತೇನೆ. ಪಾಪನಾಶಕವಾದ ಆ ರಾಮನ ಚರಿತ್ರೆಯನ್ನು ಕೇಳು. ಶ್ರೀರಾಮನು ರಾವಣನನ್ನು ಸಂಹರಿಸಿ ಮುಕ್ತಿಪುರಿಯಾದ ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿರಲು ದುರ್ಭಿಕ್ಷವಾಗಲಿ, ಅಪಮೃತ್ಯುವಾಗಲಿ, ಕಳ್ಳತನವಾಗಲಿ,

ದಾರಿದ್ರ್ಯವಾಗಲಿ ಒಂದೂ ಇರಲಿಲ್ಲ. ಹೀಗಿರುತ್ತಿರಲು ಜಾನಕಿಯು ಒಂದು ಸಾರಿ ಗಂಡನನ್ನು ಕುರಿತು ಏಕಾಂತದಲ್ಲಿ ಇಂತೆಂದಳು. "ನಾಥನೆ! ನೀನು ತಂದೆಯ ಮಾತಿನಂತೆ ಕಾಡಿಗೆ ಹೊರಟಾಗ ಗಂಗೆಯನ್ನು ದೋಣಿಯಲ್ಲಿ ದಾಟಿದೆ ವಷ್ಟೆ! ಆಗ ನಾನು ಗಂಗೆಯನ್ನು ಕುರಿತು 'ಎಲೈ ಗಂಗೆಯೇ! ನಿನಗೆ ನಮಸ್ಕಾರವು. ನಾನು ವನವಾಸದಿಂದ ಹಿಂದಿರುಗಿದ ಮೇಲೆ ನಾನೂ ರಾಮನೂ ಲಕ್ಷ್ಮಣನೂ, ನಿನಗೆ ಸಂತೋಷಕರವಾದ ಪದಾರ್ಥಗಳನ್ನು ತಂದು ನಿವೇದನಮಾಡಿ ಪೂಜಿಸುತ್ತೇವೆ.' ಎಂದು ಪ್ರಾರ್ಥನೆಮಾಡಿಕೊಂಡಿದ್ದೆನು. ಅದು ನಿನಗೂ ತಿಳಿದಿರುವುದಾಗಿಯೇ ಇದೆ. ಹದಿನಾಲ್ಕು ವರ್ಷಗಳಾದ ಮೇಲೆ ನಾವು ಹಿಂದಿರುಗಿದಾಗ ಬಹುಕಾಲವಾಗಿದ್ದುದರಿಂದ ಬಂಧುಗಳನ್ನು ನೋಡಬೇಕೆಂಬ ಆತುರದಲ್ಲಿ ಅದನ್ನು ಮರೆತುಬಿಟ್ಟೆನು. ಈಗ ಅದು ಜ್ಞಾಪಕಕ್ಕೆ ಬಂದಿರುವುದು" ಎಂದಳು.

ರಾಮನು ಈ ಮಾತನ್ನು ಕೇಳಿ ಆಕೆಯನ್ನು ಶ್ಲಾಘಿಸಿ ನೀನು 'ಗಂಗೆಯ ಪೂಜೆಯನ್ನು ಯಾವ ಜಾಗದಲ್ಲಿ ಮಾಡಬೇಕೆಂದಿದ್ದೀಯೆ ?' ಎಂದೆನಲು ಸೀತೆಯು 'ಗಂಗಾ ಸರಿಯೂನದಿಗಳ ಸಂಗಮದಲ್ಲಿ ಪೂಜೆಮಾಡುತ್ತೇನೆ' ಎಂದಳು.

ಆಗ ರಾಮನು ಒಡನೆಯೇ ಜೋಯಿಸರನ್ನು ಕರೆಸಿ ಮುಹೂರ್ತವನ್ನು ಗೊತ್ತುಮಾಡಿಸಿ ಸೇನೆಯನ್ನು ಹೊರಡಿಸಿ ದಾರಿಯನ್ನು ಸರಿಪಡಿಸಲು ಆಳುಗಳನ್ನು ಕಳುಹಿಸಿದನು. ಎಲ್ಲೆಡೆಯಲ್ಲಿಯೂ ಬಾವುಟಗಳನ್ನು ಕಟ್ಟಿಸಿದನು. ಯಾರು ಯಾರು ಹೇಗೆ ಹೇಗೆ ಹೋಗಬೇಕೆಂಬುದನ್ನು ಅಪ್ಪಣೆಮಾಡಿದನು. ರಾಮನು ಸಂತೋಷಪಡುವಂತೆ ಎಲ್ಲವನ್ನೂ ಮಾಡುವಂತೆ ಹೇಳಿಕಳುಹಿಸಿದನು. ಹೀಗೆ ಅಪ್ಪಣೆಮಾಡಿ ಕಳುಹಿಸಿ ಅಂದಿನ ರಾತ್ರಿಯನ್ನು ಸುಖನಿದ್ರೆಯಲ್ಲಿ ಕಳೆದನು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ಚತುರ್ಥಸ್ಸರ್ಗಃ ॥

॥ ರಾಮದಾಸ ಉವಾಚ ॥

ತತಃ ಪ್ರಾತಸ್ಸಮುತ್ಥಾಯ ಶ್ರುತ್ವಾ ವಾದ್ಯಧ್ವನಿಂ ತಥಾ।
ಗಾಯನಂ ವಂದಿಭಿರ್ಗೀತಂ ಸೀತಯಾ ಸಹ ರಾಘವಃ ॥ ೧ ॥

ಕೃತ್ವಾ ನಿತ್ಯವಿಧಿಂ ಸರ್ವಂ ದತ್ವಾ ದಾನಾನಿ ವಿಸ್ತರಾತ್ ।
ಜ್ಯೋತಿರ್ವಿದಂ ಸಮಾಹೂಯ ಗೋಪಾಲಾಭಿದಮುತ್ತಮಂ ॥ ೨ ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ನಾಲ್ಕನೆಯ ಸರ್ಗವು

೧. ರಾಮದಾಸನು ಹೇಳಿದನು-ರಾಮನು ವಾದ್ಯಧ್ವನಿಯನ್ನು ಬೆಳಗ್ಗೆ ಕೇಳಿ ಎಚ್ಚೆತ್ತು ವಂದಿಗಳು ಹೇಳುವ ಗಾನಗಳನ್ನು ಸೀತೆಯೊಡನೆ ಕೇಳಿದನು. ಎಚ್ಚತ್ತನು.

೨. ಅನಂತರ ಎದ್ದುಬಂದು ನಿತ್ಯವಿಧಿಗಳನ್ನು ಮಾಡಿಕೊಂಡು ಬಹುವಾಗಿ ದಾನಗಳನ್ನು ಕೊಟ್ಟು ಜೋತಿಷ ಶ್ರೇಷ್ಠನಾದ ಗೋಪಾಲನೆಂಬ ತನ್ನ ಜೋಯಿಸನನ್ನು ಕರೆಸಿದನು.

ನಮಸ್ಕೃತ್ವಾಥ ಸಂಪೂಜ್ಯ ಗಣಕಂ ರಾಘವೋಽಬ್ರವೀತ್ ।
ಭೋ ಗೋಪಾಲ ಮಹಾಬುದ್ಧೇ ತ್ವಾಂ ಪೃಚ್ಛೇಽಹಂ ದ್ವಿಜೋತ್ತಮ ॥ ೩ ॥

ಯಾತ್ರಾರ್ಥಂ ಜಾಹ್ನವೀತೀರಂ ಗಂತುಮಿಚ್ಛಾಮಿ ಸಾಂಪ್ರತಂ ।
ಅತೋ ಮುಹೂರ್ತೋ ದಾತವ್ಯಸ್ಸಮ್ಯಕ್ ಬುದ್ಧ್ಯಾ ವಿವಿಚ್ಯ ಚ ॥ ೪ ॥

ತದ್ರಾಮವಚನಂ ಶ್ರುತ್ವಾ ಗೋಪಾಲಃ ಪ್ರಾಹ ರಾಘವಂ ।
ಪಂಚಾಂಗಪಟ್ಟಂ ವಿಸ್ತಾರ್ಯ ತತ್ರ ದೃಷ್ಟ್ವಾ ಬಲಾಬಲಂ ॥ ೫ ॥

ರಾಮ ರಾಜೀವಪತ್ರಾಕ್ಷ ಮುಹೂರ್ತಸ್ತ್ವದ್ಯ ವರ್ತತೇ ।
ಪೂರ್ವಯಾಮೋ ಮಹಾನ್ ಶ್ರೇಷ್ಠಃ ಪುಷ್ಯನಕ್ಷತ್ರ ಮಂಡಿತಃ ॥ ೬ ॥

---

೩. ಅವನಿಗೆ ನಮಸ್ಕಾರಮಾಡಿ ಸನ್ಮಾನಿಸಿ ಇಂತೆಂದನು. ಎಲೈ ಬ್ರಾಹ್ಮಣಶ್ರೇಷ್ಠನೂ ಬುದ್ಧಿವಂತನೂ ಆದ ಗೋಪಾಲನೆ! ನಿನ್ನನ್ನು ಒಂದು ವಿಷಯುವನ್ನು ಕುರಿತು ಕೇಳುತ್ತೇನೆ. ಹೇಳು.

೪. ಈಗ ಯಾತ್ರೆಗೋಸ್ಕರ ಜಾಹ್ನವಿಯತೀರಕ್ಕೆ ಹೋಗಬೇಕೆಂದಿದ್ದೇನೆ. ಆದ್ದರಿಂದ ಬುದ್ಧಿಯನ್ನು ಉಪಯೋಗಿಸಿ ಯೋಚಿಸಿ ಒಳ್ಳೆಯ ಒಂದು ಮುಹೂರ್ತವನ್ನು ನಿರ್ಣಯಮಾಡು. ಎಂದು ಕೇಳಿದನು.

೫. ರಾಮನ ಈ ಮಾತನ್ನು ಕೇಳಿ ಗೋಪಾಲನು ಪಂಚಾಂಗವನ್ನು ತೆಗೆದು ಅದರಲ್ಲಿ ಗ್ರಹಗಳ ಬಲಾಬಲಗಳನ್ನು ನೋಡಿ ರಾಮನನ್ನು ಕುರಿತು ಇಂತೆಂದನು.

೬. ಎಲೈ ರಾಜೀವಪತ್ರಾಕ್ಷನಾದ ರಾಮನೇ! ಈ ದಿನವೇ ಒಳ್ಳೆಯು ಮುಹೂರ್ತವಿರುವುದು. ಆದರಲ್ಲಿ ಪೂರ್ವಯಾಮವು ಶ್ರೇಷ್ಠವಾದುದು. ಪುಷ್ಯ ನಕ್ಷತ್ರದಿಂದ ಕೂಡಿ ಬಹು ಪ್ರಶಸ್ತವಾಗಿದೆ.

ತಸ್ಯ ವಕ್ಷ್ಯೇಫಲಂ ರಾಜನ್ ಸಾವಧಾನಮನಾಶ್ಶೃಣು ।
ಶೃಣ್ವಂತು ಮುನಯಸ್ಸರ್ವೇ ಶೃಣೋತು ತೇ ಗುರುರ್ಮಹಾನ್ ॥ ೭ ॥

ನ ಯೋಗಯೋಗಂ ನ ಚ ಲಗ್ನಲಗ್ನಂ
ನ ತಾರಕಾಚಂದ್ರಬಲಂ ಗುರೋಶ್ಚ ।
ಯೋಗಿನ್ಯರಾಹುರ್ನ ತದೈವ ಕಾಲೇ
ಸರ್ವಾಣಿ ಕಾರ್ಯಾಣಿ ಕರೋತಿ ಪುಷ್ಯಃ ॥ ೮ ॥

ಅಸ್ಮಿನ್ರಾಮ ಸುನಕ್ಷತ್ರೇ ಪ್ರಸ್ಥಾನಂ ಕುರು ಸೀತಯಾ ।
ದತ್ತೋ ಮಯಾ ಮುಹೂರ್ತೋಽಯಂ ಯಾತ್ರಾರ್ಥಂ ರಘುನಾಯಕ ॥

ಇತಿ ತಸ್ಯ ವಚಶ್ಶ್ರುತ್ವಾ ಲಕ್ಷ್ಮಣಂ ರಾಘವೋಽಬ್ರವೀತ್ ।
ಭೇರೀ ಮೃದಂಗಪಣವಕಾಹಲಾನಕ ಗೋಮುಖೈಃ ॥ ೧೦ ॥

---

೭. ಎಲೈ ರಾಮನೆ ! ಅದರ ಫಲವನ್ನು ಹೇಳುತ್ತೇನೆ. ಸಾವಧಾನ ಚಿತ್ತದಿಂದ ಕೇಳು. ಮತ್ತು ಈ ಋಷಿಗಳೂ ಕೇಳಲಿ. ನಿನ್ನ ಗುರುವೂ ಕೇಳಲಿ. ಇಲ್ಲಿರುವವರೆಲ್ಲರೂ ಕೇಳಲಿ.

೮. ಯೋಗದ ಸಂಬಂಧವು ಬೇಕಿರುವುದಿಲ್ಲ. ಲಗ್ನವು ಸಂಬಂಧಿಸಿರ ಬೇಕಾಗಿಲ್ಲ. ತಾರಾಬಲ, ಚಂದ್ರಬಲ, ಗುರುಬಲಗಳು ಬೇಕಿಲ್ಲ. ಯೋಗಿನಿ ಯಾಗಲಿ ದೃಗ್ರಾಹುವಾಗಲಿ ಇದೆಯೇ ? ಎಂದು ನೋಡಲೇ ಬೇಕಾಗಿಲ್ಲ. ಪುಷ್ಯನಕ್ಷತ್ರವಿದ್ದಾಗ ಪ್ರಯಾಣಮಾಡಿದರೆ ಅದೊಂದೇ ಎಲ್ಲಾ ಕೆಲಸಗಳನ್ನೂ ಕೈಗೂಡಿಸಿ ಕೊಡುತ್ತದೆ.

೯. ಎಲೈ ರಾಮನೆ ! ಈ ಪುಷ್ಯನಕ್ಷತ್ರವಿರುವಾಗ ಸೀತೆಯೊಡನೆ ಪ್ರಯಾಣಮಾಡು. ಯಾತ್ರೆಗೋಸ್ಕರ ಈ ಲಗ್ನವನ್ನು ನಾನು ನಿರ್ಣಯಿಸಿ ಕೊಟ್ಟಿದ್ದೇನೆ. ಎಂದನು.

೧೦–೧೧. ಆ ಜೋಯಿಸನ ಮಾತನ್ನು ಕೇಳಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು. ಭೇರಿ, ಮೃದಂಗ, ಕಹಳೆ, ತಮಟೆ, ಗೋಮುಖ, ತಾಳ,

ತಾಲಘರ್ಘರದುಂದುಭಿಶ್ಚೈಭಿಶ್ಚ ನವಭಿರ್ಮಹಾನ್ ।
ಸೇನಾಯೂಸ್ಸೂಚನಾರ್ಥಂ ಹಿ ಕರ್ತವ್ಯಃ ಪ್ರಥಮೋ ಧ್ವನಿಃ ॥ ೧೧ ॥

ತಥೇತಿ ರಾಮುವಚನಾದ್ದೂತಾನಾಜ್ಞಾಪಯತ್ತದಾ ।
ನವವಾದ್ಯಧ್ವನಿಂ ತೇಪಿ ಚಕ್ರುರ್ಮಂಜುಲಸುಸ್ವರಂ ॥ ೧೨ ॥

ತತೋ ರಾಮೋ ದ್ವಿಜೈರ್ಯುಕ್ತೋ ವಸಿಷ್ಠೇನ ಪುರೋಧಸಾ ।
ಘೃತೇನ ಪ್ರಚುರಂ ಶ್ರಾದ್ಧಂ ಗಣೇಶಾದೀನ್ ಪ್ರಪೂಜ್ಯ ಚ ॥ ೧೩ ॥

ಚಕಾರ ಪ್ರೋಕ್ತವಿಧಿನಾ ವಸಿಷ್ಠಂ ಪ್ರಾಹ ವೈ ತತಃ ।
ಅಗ್ನಿಹೋತ್ರಾಣಿ ಮೇಗ್ರೇ ತ್ವಂ ಸ್ಥಾಪಿತಾನಿ ತು ಪುಷ್ಪಕೇ ॥ ೧೪ ॥

ಘರ್ಘರ, ರವುಡೋಲು, ಪಣವ ಎಂಬ ಈ ಒಂಭತ್ತು ವಾದ್ಯಗಳಿಂದಲೂ ಸದ್ದುಮಾಡಿಸು. ಸೇನೆಗಳ ಸೂಚನೆಗೋಸ್ಕರ ಮೊದಲನೆಯ ಧ್ವನಿಯನ್ನು ಮಾಡಿಸು. ಎಂದನು.

೧೨. ಲಕ್ಷ್ಮಣನು ರಾಮನ ಅಪ್ಪಣೆಯಂತೆ ಹಾಗೆಯೇ ಆಗಲೆಂದು ಹೇಳಿ ದೂತರಿಗೆ ಆಜ್ಞಾಪಿಸಿದನು. ಅವರು ಆ ಒಂಭತ್ತು ವಾದ್ಯಗಳ ಧ್ವನಿಗಳನ್ನೂ ಸುಸ್ವರವಾಗಿ ಧ್ವನಿಮಾಡಿದರು.

೧೩. ಅನಂತರ ರಾಮನು ಬ್ರಾಹ್ಮಣರೊಡನೆಯೂ ಪುರೋಹಿತನಾದ ವಸಿಷ್ಠನೊಡನೆಯೂ ತುಪ್ಪದಲ್ಲಿ ನಾಂದಿಶ್ರಾದ್ಧವನ್ನು ಮಾಡಿ ವಿಧಿವತ್ತಾಗಿ ಗಣೇಶಾದಿ ದೇವತೆಗಳನ್ನು ಪೂಜಿಸಿದನು.

೧೪. ಅನಂತರ ವಸಿಷ್ಠನನ್ನು ಕುರಿತು ಇಂತೆಂದನು. ಎಲೈ ಗುರುವೆ ! ಅಗ್ನಿಹೋತ್ರದ ಅಗ್ನಿಗಳನ್ನು ತಂದು ಪುಷ್ಪಕದಲ್ಲಿ ನನ್ನ ಮುಂದೆ ಸ್ಥಾಪಿಸು.

ನೇತುಮರ್ಹಸಿ ಮೇ ಮಾತೄರ್ಬಂಧುಭಿಃ ಪುರವಾಸಿಭಿಃ ।
ವಿಮಾನಾಸ್ತೋರಣೇಬದ್ಧ ಪುಷ್ಪಮಾಲಾತಿಶೋಭಿತಾ ॥ ೧೫ ॥

ಸೀತಾಂಗಸ್ಪರ್ಶನೀ ಮಾರ್ಗೇ ಮಾಂ ಸ್ಪರ್ಶತು ಗಜಸ್ಥಿತಂ ।
ತತಃ ಪಪ್ರಚ್ಛ ವೈದೇಹೀಂ ಕೇನ ಯಾನೇನ ಮೈಥಿಲಿ ॥ ೧೬ ॥

ಗಮಿಷ್ಯಸಿ ವದ ತ್ವಂ ಮಾಂ ತದೇವಾಜ್ಞಾಪಯಾಮ್ಯಹಂ ।
ತದ್ರಾಮವಚನಂ ಶ್ರುತ್ವಾ ಸೀತಾ ಧ್ಯಾತ್ವಾ ಕ್ಷಣಂ ಹೃದಿ ॥ ೧೭ ॥

ಸಾ ಪ್ರಾಹ ಮುದಿತಂ ರಾಮಂ ಕರಿಣ್ಯಾ ಗಮನಂ ಮಮ ।
ರೋಚತೇ ಯದಿ ತೇ ನಾಥ ತರ್ಹ್ಯಸ್ತು ರಘುನಾಯಕ ॥ ೧೮ ॥

೧೫-೧೬. ಮತ್ತು ನನ್ನ ತಾಯಿಯರನ್ನು ಬಂಧುಗಳನ್ನೂ ತಮ್ಮಂದಿರನ್ನೂ ಪಟ್ಟಣಿಗರನ್ನೂ ಕರೆದುಕೊಂಡು ಹೊರಡು. ವಿಮಾನವನ್ನು ಸಂಬಂಧಿಸಿಕೊಂಡು ಹೂವಿನಮಾಲೆಯು ಸೀತೆಯ ಅಂಗವನ್ನು ಸ್ಪರ್ಶಿಸುತ್ತ ಮಾರ್ಗದಲ್ಲಿ ನನ್ನನ್ನೂ ಮುಟ್ಟುತ್ತಲಿರಲಿ. ಎಂದು ಹೇಳಿ ಅನಂತರದಲ್ಲಿ ಎಲೈ ಮೈಥಿಲಿಯೇ ! ನೀನು ಯಾವ ಯಾನದಮೇಲೆ ಕುಳಿತುಹೋಗುತ್ತೀಯೆ ? ಹೇಳು. ಎಂದು ಕೇಳಿದನು.

೧೭. ನೀನು ಯಾವುದನ್ನು ಹೇಳುತ್ತೀಯೋ ನಾನು ಅದಕ್ಕೆ ಆಜ್ಞೆಮಾಡುತ್ತೇನೆ. ಎನಲು ರಾಮನು ಹೀಗೆ ಹೇಳಿದುದನ್ನು ಸೀತೆಯು ಕೇಳಿ ಕ್ಷಣಕಾಲ ಮನಸ್ಸಿನಲ್ಲಿ ಯೋಚಿಸಿದಳು.

೧೮. ಅನಂತರ ಆಕೆಯು ರಾಮನನ್ನು ಕುರಿತು ಸಂತೋಷದಿಂದ ನಾನು ಆನೆಯಮೇಲೆ ಕುಳಿತುಕೊಂಡು ಹೋಗಬೇಕೆಂದಿಚ್ಛಿಸುತ್ತೇನೆ. ನಿನಗೆ ಇಷ್ಟಬಂದರೆ ಹಾಗೆ ಆಗಬಹುದು. ಇಲ್ಲದಿದ್ದರೆ ಚಿತ್ತದಂತೆ ನಡೆಯಲಿ. ಎಂದಳು.

ತತ್ರಸ್ಯಾ ವಚನಂ ಶ್ರುತ್ವಾ ಯಾನಮಾಜ್ಞಾಪ್ಯ ಲಕ್ಷ್ಮಣಂ ।
ಸೀತಾಯೈ ದಿವ್ಯವಸ್ತ್ರಾಣಿ ದದೌ ಮಾತೃಭ್ಯಸ್ತಥೈವ ಚ ॥ ೧೯ ॥

ತಥಾ ದತ್ವಾ ಬಂಧುಪತ್ನೀಭ್ಯಸ್ತತೋ ದತ್ವಾ ಗುರೋಃ ಸ್ತ್ರಿಯಂ ।
ತತೋ ದತ್ವಾ ವಸಿಷ್ಠಂ ಚ ವಿಪ್ರೇಭ್ಯೋ ದತ್ವಾ ತತಃ ಪರಂ ॥ ೨೦ ॥

ದತ್ವಾ ವಸ್ತ್ರಾಣಿ ಬಂಧುಭ್ಯಃ ಸ್ವಯಂ ಜಗ್ರಾಹ ರಾಘವಃ ।
ಬಧ್ವಾ ಶಸ್ತ್ರಾಣ್ಯನೇಕಾನಿ ತ್ವರಯಿತ್ವಾ ವಿದೇಹಜಾಂ ॥ ೨೧ ॥

ನತ್ವಾ ಮಾತೃರ್ಗುರೂಂಶ್ಚಾಪಿ ಮಂತ್ರಿಭಿಃ ಪರಿವಾರಿತಃ ।
ಆರುಹ್ಯ ಶಿಬಿಕಾಂ ರಾಮಸ್ಸಭಾಂ ಪ್ರತಿ ಸಮಾಯಯೌ ॥ ೨೨ ॥

---

೧೯. ಸೀತೆಯ ಈ ಮಾತಿನಂತೆ ಯಾನವನ್ನು ಸಿದ್ಧಪಡಿಸೆಂದು ಲಕ್ಷ್ಮಣನಿಗೆ ಹೇಳಿ ಸೀತೆಗೂ ತಾಯಿಯರಿಗೂ ಒಳ್ಳೆಯ ವಸ್ತ್ರಗಳನ್ನೂ ಕೊಟ್ಟನು.

೨೦. ತಮ್ಮಂದಿರ ಹೆಂಡತಿಯರಿಗೂ ಗುರುವಿನ ಹೆಂಡತಿಗೂ ಕೂಡ ಕೊಟ್ಟನು. ಅನಂತರ ವಸಿಷ್ಠನಿಗೂ ಬಟ್ಟೆಗಳನ್ನು ಕೊಟ್ಟನು. ಅನಂತರ ಬ್ರಾಹ್ಮಣರಿಗೂ ಬಟ್ಟೆಗಳನ್ನು ಕೊಟ್ಟನು.

೨೧. ಬಂಧುಗಳಿಗೂ ತಮ್ಮಂದಿರಿಗೂ ಕೊಟ್ಟು ಅನಂತರ ತಾನೂ ಧರಿಸಿದನು. ಅನೇಕ ಬಗೆಯಾದ ಶಸ್ತ್ರಗಳನ್ನು ಕಟ್ಟಿಕೊಂಡು ಸೀತೆಯನ್ನು ಅವಸರಪಡಿಸಿದನು.

೨೨. ತಾಯಿಯರಿಗೂ ಗುರುವಿಗೂ ನಮಸ್ಕರಿಸಿದನು. ಅನಂತರ ಮಂತ್ರಿಗಳೊಡನೆ ಪಲ್ಲಕ್ಕಿಯಲ್ಲಿ ರಾಮನು ಸಭೆಗೆ ಬಂದನು.

ತತಸ್ಸಿಂಹಾಸನೇ ಸ್ಥಿತ್ವಾ ಲಕ್ಷ್ಮಣಂ ಪ್ರಾಹ ರಾಘವಃ |
ದ್ವಿತೀಯಸ್ಸೂಚನಾರ್ಥಂ ಹಿ ನವವಾದ್ಯಧ್ವನಿಂ ಪುನಃ ‖ ೨೩ ‖

ಆಜ್ಞಾಪನೀಯಸ್ಸೌಮಿತ್ರೇ ತಚ್ಛ್ರುತ್ವಾ ರಾಘವೇರಿತಂ |
ಆಜ್ಞಾಪ್ರಮಾಣಮಿತ್ಯುಕ್ತ್ವಾ ಜ್ಞಾಪಯದ್ಧ್ವನಿಮುತ್ತಮಂ ‖ ೨೪ ‖

ಕರ್ತುಂ ದೂತಾಸ್ತೇಽಪಿ ಚಕ್ರುರ್ಧ್ವನಿಂ ನೇಘೋಪಮಂ ತತಃ |
ತತಃ ಪ್ರಾಹ ರಘುಶ್ರೇಷ್ಠಃ ಪುನಃ ಸೌಮಿತ್ರಿಮಾದರಾತ್ ‖ ೨೫ ‖

ಸುಮಂತ್ರಃ ಸ್ಥಾಪ್ಯತಾಂ ಪುರ್ಯಾಂ ರಕ್ಷಣಾರ್ಥಂ ಮಮಾಜ್ಞಯಾ |
ಗಚ್ಛತ್ವಗ್ರೇ ತು ಭರತೋ ಪಶ್ಚಾದಾಯಾತು ಶತ್ರುಹಾ ‖ ೨೬ ‖

ಮತ್ಪೃಷ್ಠೇ ತ್ವಂ ಸಮಾಗಚ್ಛ ತತಸ್ಸೀತಾನುಗಚ್ಛತು |
ತಸ್ಯಾಃ ಪೃಷ್ಠೇ ಚ ತ್ವತ್ಪತ್ನೀ ಹ್ಯೂರ್ಮಿಲಾ ಸ್ವನುಗಚ್ಛತು ‖ ೨೭ ‖

---

೨೩. ಆಗ ರಾಮನು ಸಿಂಹಾಸನದಲ್ಲಿ ಕುಳಿತುಕೊಂಡು ಲಕ್ಷ್ಮಣನಿಗೆ ಇಂತೆಂದನು. ಎಲೈ ಲಕ್ಷ್ಮಣನೆ! ಎರಡನೆಯ ಸೂಚನೆಗೋಸ್ಕರ ಮತ್ತೆ ಆ ಒಂಭತ್ತು ವಾದ್ಯಗಳನ್ನೂ ಧ್ವನಿಮಾಡಿಸು.

೨೪. ಎಂದು ಆಜ್ಞಾಪಿಸಲು ಸೌಮಿತ್ರಿಯು ರಾಮನ ಅಪ್ಪಣೆಯನ್ನೀರೆಗೆ ಅವರನ್ನು ಧ್ವನಿಮಾಡುವಂತೆ ಅಪ್ಪಣೆಮಾಡಿದನು.

೨೫. ದೂತರೂ ಕೂಡ ಅವನ ಅಪ್ಪಣೆಯಂತೆ ಗುಡುಗಿನಂತೆ ಅವುಗಳನ್ನು ಧ್ವನಿಮಾಡಿಸಿದರು. ಮತ್ತೆ ರಾಮನು ಸೌಮಿತ್ರಿಯನ್ನು ಕುರಿತು ಇಂತೆಂದನು.

೨೬. ಸುಮಂತ್ರನು ಈ ಅಯೋಧ್ಯೆಯನ್ನು ರಕ್ಷಿಸುತ್ತಾ ಪಟ್ಟಣದಲ್ಲಿಯೇ ಇರಲಿ. ಭರತನು ನಮ್ಮಗಳ ಮುಂಭಾಗದಲ್ಲಿ ಹೊರಡಲಿ. ಶತ್ರುಘ್ನನು ಸೈನ್ಯದ ಹಿಂದುಗಡೆಯಲ್ಲಿ ಬರಲಿ.

೨೭-೨೮. ನನ್ನ ಹಿಂದೆ ನೀನೂ ಬಾ. ನಿನ್ನ ಹಿಂದೆ ಸೀತೆಯು ಬರಲಿ. ಅವಳ ಹಿಂದೆ ನಿನ್ನ ಹೆಂಡತಿಯು ಬರಲಿ. ಅವಳ ಹಿಂದೆ ಭರತನ ಹೆಂಡತಿಯಾದ

ತತ್ಪೃಷ್ಠೇ ಮಾಂಡವೀ ರಮ್ಯಾ ದಯಿತಾ ಭರತಸ್ಯ ಸಾ ।
ಅನುಗಚ್ಛತು ತತ್ಪೃಷ್ಠೇ ಶ್ರುತಕೀರ್ತ್ಯನುಗಚ್ಛತು ॥ ೨೮ ॥

ಶತ್ರುಘ್ನಸ್ಯ ಪ್ರಿಯಾ ಭಾರ್ಯಾ ವಿಮಾನೈಃ ಪುರಯೋಷಿತಃ ।
ಮಾತೃಭಿಸ್ತಾಸ್ಸಮಾಯಾಂತು ಪಶ್ಯಂತ್ಯಃ ಕೌತುಕಂ ಮುದಾ ॥ ೨೯ ॥

ಸೀತಾದ್ಯಾಃ ಕರಣೀಷ್ವದ್ಯ ಸ್ಥಾಪಯಿತ್ವಾ ಮಮಾಂತಿಕಂ ।
ಆಗಂತವ್ಯಂ ತ್ವಯಾ ಶೀಘ್ರಂ ತತೋಽಹಂ ಗಜಮಾಶ್ರಯೇ ॥ ೩೦ ॥

ತಥೇತಿ ರಾಮವಚನಾತ್ತಥಾ ತಾಃ ಕರಿಣೀಷು ಸಃ ।
ಆರೋಹಯಿತ್ವಾ ಶ್ರೀರಾಮಂ ಸಮಾಗಚ್ಛತ್ತ್ವರಾನ್ವಿತಃ ॥ ೩೧ ॥

ಸಮಾಗತಂ ಲಕ್ಷ್ಮಣಂ ತಂ ದೃಷ್ಟ್ವಾ ರಾಮೋ ಮಹಾಮನಾಃ ।
ಸುಮಂತ್ರಾಯ ದದೌ ವಸ್ತ್ರಂ ತದಧೀನಾಂ ಪುರೀಂ ವ್ಯಧಾತ್ ॥ ೩೨ ॥

ಮಾಂಡವಿಯು ಬರಲಿ. ಅವಳ ಹಿಂದೆ ಶತ್ರುಘ್ನನ ಹೆಂಡತಿಯಾದ ಶ್ರುತಕೀರ್ತಿಯು ಬರಲಿ.

೨೯. ಪಟ್ಟಣದ ಹೆಂಗಸರು ವಿಮಾನದಲ್ಲಿ ಕುಳಿತುಕೊಂಡು ಬರಲಿ. ಅವರ ಜೊತೆಯಲ್ಲಿ ತಾಯಿಯರು ಬರಲಿ. ಅವರೆಲ್ಲರೂ ಹಿಂದೆ ನಮ್ಮ ಅಟ್ಟಹಾಸವನ್ನೂ ಕೌತುಕವನ್ನೂ ನೋಡುತ್ತ ಬರಲಿ.

೩೦. ಸೀತೆಯೇ ಮುಂತಾದವರನ್ನು ಆನೆಗಳಮೇಲೆ ಕೂರಿಸಿಬಿಟ್ಟು ಜಾಗ್ರತೆಯಾಗಿ ನನ್ನ ಬಳಿಗೆ ಬಂದುಬಿಡು. ಅನಂತರ ನಾನು ಆನೆಯಮೇಲೆ ಕುಳಿತುಕೊಳ್ಳುತ್ತೇನೆ.

೩೧. ಲಕ್ಷ್ಮಣನು ಹಾಗೇ ಆಗಲೆಂದು ಹೇಳಿಹೋಗಿ ದೂತರಿಗೆ ಅಪ್ಪಣೆ ಮಾಡಿ ಆ ಹೆಂಗಸರೆಲ್ಲರನ್ನೂ ಆನೆಗಳಮೇಲೆ ಕೂರಿಸಿ ತಾನು ಬೇಗನೆ ರಾಮನ ಬಳಿಗೆ ಬಂದನು.

೩೨. ರಾಮನು ಲಕ್ಷ್ಮಣನು ಬಂದುದನ್ನು ನೋಡಿ ಸುಮಂತ್ರನಿಗೆ ಅನೇಕ ವಸ್ತ್ರ ಬಹುಮಾನಗಳನ್ನು ಕೊಟ್ಟು ಪಟ್ಟಣವನ್ನು ಅವನ ಅಧೀನವನ್ನಾಗಿ ಮಾಡಿದನು.

ತತೋ ಮುಹೂರ್ತಸಮಯೇ ಧೃತ್ವಾ ಲಕ್ಷ್ಮಣಸತ್ಕರಂ ।
ಸಿಂಹಾಸನಾತ್ಸಮುತ್ತೀರ್ಯ ಮಹಾನಾಗಾಂತಿಕಂ ಯಯೌ ॥ ೩೩ ॥

ಗಜಂ ಪ್ರದಕ್ಷಿಣಂ ಕೃತ್ವಾ ಸೋಪಾನೇನ ಸ ರಾಘವಃ ।
ಗಜದಂತೋದ್ಭವೇನಾರುರೋಹ ನಾಗಂ ಸುಖಂ ಶನೈಃ ॥ ೩೪ ॥

ತದಾ ದುಂದುಭಿನಿರ್ಘೋಷಾ ನವವಾದ್ಯಸ್ವರಾ ವರಾ ।
ವಾದಯಾಮಾಸುರ್ಗಂಭೀರಾ ಗಜದೂತಾಸ್ಸಹಸ್ರಶಃ ॥ ೩೫ ॥

ಬಭೂವುರ್ಯಂತ್ರಶಬ್ದಾಶ್ಚ ನನೃತುರ್ವಾರಯೋಷಿತಃ ।
ವಾದಯಂತಿ ಸ್ಮ ವಾದ್ಯಾನಿ ಗಜವಾಜಿರಥೋಪರಿ ॥ ೩೬ ॥

ಜಯಶಬ್ದಾ ವೇದಘೋಷಾ ದ್ವಿಜಾಶ್ಚಕ್ರುರ್ಮಹಾಸ್ವನೈಃ ।
ಕೇಕಿಪಿಚ್ಛೋದ್ಭವಂ ಚಿತ್ರಂ ರತ್ನದಂಡವಿರಾಜಿತಂ ॥ ೩೭ ॥

---

೩೩. ಅನಂತರದಲ್ಲಿ ಜೋತಿಷ್ಕನು ಹೇಳಿದ ಮುಹೂರ್ತದ ಸಮಯದಲ್ಲಿ ಲಕ್ಷ್ಮಣನಿಂದ ಹಸ್ತಲಾಘವವನ್ನು ತೆಗೆದುಕೊಳ್ಳುತ್ತಾ ಸಿಂಹಾಸನದಿಂದ ಇಳಿದು ಆನೆಯ ಬಳಿಗೆ ಬಂದನು.

೩೪. ರಾಮನು ಮೊದಲು ಆನೆಗೆ ಪ್ರದಕ್ಷಿಣೆ ಮಾಡಿದನು. ದಂತಗಳಿಂದಲೇ ನಿರ್ಮಿತವಾಗಿರುವ ಏಣಿಯನ್ನು ಹಾಕಿರಲು ಅದರಮೇಲಿನಿಂದ ಆನೆಯ ಬೆನ್ನಿಗೆ ಹತ್ತಿದನು.

೩೫–೩೬. ರಾಮನು ಆನೆಯ ಮೇಲೆ ಕುಳಿತುಕೊಳ್ಳಲು ದೂತರು ಒಂಭತ್ತು ವಾದ್ಯಗಳನ್ನೂ ಸುಸ್ವರವಾಗಿ ಬಾರಿಸಿದರು. ಯಂತ್ರಗಳು ಶಬ್ದ ಮಾಡಿದುವು. ಎಂದರೆ ಗುಂಡುಗಳನ್ನು ಹಾರಿಸಿ ಧ್ವನಿಮಾಡಿದರು. ಸೂಳೆಯರು ಕುಣಿಯುತ್ತಿದ್ದರು. ಆನೆ ಕುದುರೆಗಳಮೇಲೆ ವಾದ್ಯಗಳನ್ನು ಬಾರಿಸುತ್ತಿದ್ದರು.

೩೭–೩೮. ಬ್ರಾಹ್ಮಣರು ಜಯ ಜಯ ಎಂಬ ಶಬ್ದವನ್ನೂ ವೇದ ಘೋಷವನ್ನೂ ಮಾಡಿದರು. ಪಕ್ಕದಲ್ಲಿದ್ದ ವಿಜಯನು ನವಿಲುಗರಿಯಿಂದ ಚಿತ್ರಿತವಾಗಿ ರತ್ನದಂಡದಿಂದ ಪ್ರಕಾಶಮಾನವಾದ ಚಾಮರವನ್ನು ಬೀಸಿದನು.

ಚಾಮರಂ ವೀಜಯಾಮಾಸ ವಿಜಯಃ ಪಾರ್ಶ್ವ ಸಂಸ್ಥಿತಃ |
ಅನ್ಯಸ್ತು ವಾಲವ್ಯಜನಂ ವೀಜಯಾಮಾಸ ಪೃಷ್ಠತಃ || ೩೮ ||

ಕಲಶೈಶ್ಶತಸಾಹಸ್ರೈರ್ಮುಕ್ತಾಹಾರೈಸ್ತು ಶೋಭಿತಂ |
ರತ್ನದಂಡಂ ಸುವಿಸ್ತೀರ್ಣಂ ಛತ್ರಮನ್ಯೋ ದಧಾರ ತತ್ || ೩೯ ||

ತತ್ಪೃಷ್ಠೇ ಗಜಮಾರುಹ್ಯ ಲಕ್ಷ್ಮಣಶ್ಶೀಘ್ರಮಾಯಯೌ |
ಸೀತಾಽದ್ಯಾಸ್ತಾಸ್ಸಮಾಜಗ್ಮುಸ್ಸೌಮಿತ್ರಿಗಜ ಪೃಷ್ಠತಃ || ೪೦ ||

ಪಶ್ಯಂತಃ ಕೌತುಕಾನ್ಯೇವ ಜಾಲರಂಧ್ರೈಸ್ಸಮಂತತಃ |
ಪುಷ್ಪಕಂ ಚಾಪಿ ಗಗನಮಾರ್ಗೇಣೈವ ಶನೈಶ್ಶನೈಃ || ೪೧ ||

ಜಗಾಮ ಸಂಸ್ಥಿತಾಸ್ತತ್ರ ಪುರನಾರ್ಯೋ ರಘೂತ್ತಮಂ |
ಪಶ್ಯಂತ್ಯೋಥ ಕೌತುಕಾನಿ ವವರ್ಷುಃ ಪುಷ್ಪವೃಷ್ಟಿಭಿಃ || ೪೨ ||

ಮತ್ತೊಬ್ಬನು ಚಮರಿಯ ಮೃಗದ ಚಾಮರವನ್ನೇ ಬೀಸಿದನು. ಮಗದೊಬ್ಬನು ಚಮರೀಮೃಗದ ಬರೀಬಾಲದಿಂದ ಮಾಡಿರುವ ಚಾಮರವನ್ನು ಹಿಂದುಗಡೆಯಿಂದ ಬೀಸಿದನು.

೩೯. ಇನ್ನೊಬ್ಬನು ಮೇಲುಗಡೆಯಲ್ಲಿ ನೂರಾರು ಕಲಶಗಳಿಂದ ಕೂಡಿದ ಮುತ್ತಿನ ಹಾರಗಳನ್ನು ನೇತುಹಾಕಿರುವ ರತ್ನದ ಕಾವುಳ್ಳ ದೊಡ್ಡದಾದ ಶ್ವೇತಚ್ಛತ್ರವನ್ನು ಹಿಡಿದನು.

೪೦. ಲಕ್ಷ್ಮಣನು ಆ ರಾಮನ ಹಿಂದೆ ಮತ್ತೊಂದು ಆನೆಯನ್ನು ಹತ್ತಿ ಬೇಗನೆ ಬಂದನು. ಸೀತೆಯೇ ಮುಂತಾದವರು ಹಿಂದೆ ಹೇಳಿದ ರೀತಿಯಲ್ಲಿ ಆ ಲಕ್ಷ್ಮಣನ ಆನೆಯಹಿಂದೆಯೇ ಹೊರಟರು.

೪೧. ತಾಯಿಯರೂ ಪಟ್ಟಣದ ಹೆಂಗಸರೂ ಕುಳಿತಿದ್ದ ಪುಷ್ಪಕವು ಆಕಾಶಮಾರ್ಗದಲ್ಲಿ ಹೊರಟಿತು. ಈ ಹೆಂಗಸರೆಲ್ಲರೂ ಜಾಲರಂಧ್ರದಿಂದ ಈ ರಮಣೀಯತೆಯನ್ನೇ ನೋಡುತ್ತ ಹೊರಟರು.

೪೨. ಪಟ್ಟಣದ ಹೆಂಗಸರು ಅಲ್ಲಲ್ಲಿ ನಿಂತಿದ್ದು ಈ ಅಟ್ಟಹಾಸವನ್ನು ನೋಡುತ್ತ ರಾಮನ ಮೇಲೆ ಹೂಮಳೆಯನ್ನು ಸುರಿಸುತ್ತಿದ್ದರು.

ತತಸ್ತೇ ತುರಗಾರೂಢಾ ಗಜಾರೂಢಾ ರಥೇ ಸ್ಥಿತಾಃ ।
ನೇಮಿರೇಖೋಪಮಾಸ್ಸರ್ವೇ ಸ್ಥಿತಾಸ್ತೇ ರಾಮಪಾರ್ಶ್ವಯೋಃ ॥ ೪೩ ॥

ಚಕ್ರುಃ ಪ್ರಣಾಮಂ ಶ್ರೀರಾಮಂ ಸಂಸ್ಥಿತಾ ಹಾರಬಂಧವತ್ ।
ರಾಮೋಽಪಿ ಕಂಜಹಸ್ತಾಭ್ಯಾಂ ಪ್ರಣಾಮಾನಭ್ಯನಂದಯತ್ ॥ ೪೪ ॥

ಏವಂ ಗಚ್ಛತಿ ರಾಜೇಂದ್ರೇ ರಾಮಚಂದ್ರೇ ಶನೈಃ ಪಥಿ ।
ಗಜೋಪರಿ ಸವೀಣಾಸ್ತೇ ನಟಾ ಗಾನಂ ಪ್ರಚಕ್ರಿರೇ ॥ ೪೫ ॥

ಏವಂ ಪಶ್ಯನ್ ಶ್ರೀರಾಮೋಽಪಿ ಪುಷ್ಪಾರಾಮಾದಿಕೌತುಕಂ ।
ಹಟ್ಟಾನ್ ಚಿತ್ರಾಣಿ ವೇಶ್ಯಾನಾಂ ನೃತ್ಯಾನಿ ವಿವಿಧಾನಿ ಚ ॥ ೪೬ ॥

ಸುಸ್ವರಾಣ್ಯಥ ವಾದ್ಯಾನಿ ಶೃಣ್ವನ್ ಮಾರ್ಗೇ ಶನೈಶ್ಶನೈಃ ।
ವೇಷ್ಟಿತಶ್ಚತುರಂಗಿಣ್ಯಾ ಸೇನಯಾ ಸ ಸಮಂತತಃ ॥ ೪೭ ॥

---

೪೩. ಅನಂತರ ಕುದುರೆಯಮೇಲೆ ಕುಳಿತ ರಾವುತರೂ ಆನೆಯಮೇಲೆ ಕುಳಿತ ಮಾವುಟಿಗರೂ ರಥದಮೇಲೆ ಕುಳಿತ ರಥಿಕರೂ ರಾಮನ ಅಕ್ಕಪಕ್ಕಗಳಲ್ಲಿ ಸಾಲಾಗಿ ನಿಂತರು.

೪೪. ಹಾರವನ್ನು ಕಟ್ಟಿದ ಹಾಗೆ ಅವರೆಲ್ಲರೂ ರಾಮನಿಗೆ ನಮಸ್ಕರಿಸಿದರು. ರಾಮನೂ ಕೂಡ ಅವರ ವಂದನೆಗಳನ್ನು ಕೈಯ್ಯಿಂದ ಅಭಿನಂದಿಸಿದನು.

೪೫. ರಾಮನು ಅನಂತರ ಈ ರೀತಿಯಾಗಿ ಹೊರಟು ನಿಧಾನವಾಗಿ ದಾರಿಯಲ್ಲಿ ಹೋಗುತ್ತಿರಲು ಆನೆಯಮೇಲೆಯೇ ವೀಣೆಯನ್ನು ಇಟ್ಟುಕೊಂಡು ನಟ್ಟರು ಹಾಡಿದರು.

೪೬. ರಾಮನು ಹೊರಟು ನಿಧಾನವಾಗಿ ಹೂವುಗಳ ಮತ್ತು ತೋಟಗಳ ರಮಣೀಯತೆಯನ್ನೂ ಅಂಗಡಿ ಬೀದಿಗಳ ಸೊಗಸನ್ನೂ ನಾನಾಬಗೆಯಾದ ನೃತ್ಯಗಳನ್ನೂ ನೋಡುತ್ತಾ ಹೊರಟನು.

೪೭. ದಾರಿಯುದ್ದಕ್ಕೂ ಸುಸ್ವರವಾದ ವಾದ್ಯಗಳ ಧ್ವನಿಯನ್ನು ಕೇಳುತ್ತಿದ್ದನು. ಚತುರಂಗಸೇನೆಯೂ ಆ ರಾಮನ ಸುತ್ತಲೂ ಇದ್ದಿತು.

ಪ್ರಾಪ ಸೇನಾನಿವಾಸಾಯ ಕಲ್ಪಿತಾಂ ಭುವಮುತ್ತಮಾಂ ।
ಅಯೋಧ್ಯಾಮಿವ ತಾಂ ದೃಷ್ಟ್ವಾವತರದ್ರಾಘವೋ ಗಜಾತ್ ॥ ೪೮ ॥

ಅಭಿನಂದ್ಯ ಪ್ರಣಾಮಾಂಶ್ಚ ಪುನರ್ವೀರಕೃತಾನ್ ಮುಹುಃ ।
ಲಕ್ಷ್ಮಣಸ್ಯ ಕರಂ ಧೃತ್ವಾ ಸ್ವಕರೇಣ ರಮಾಪತಿಃ ॥ ೪೯ ॥

ವಸ್ತ್ರಗೇಹಂ ಸಂಪ್ರವಿಶ್ಯ ತಸ್ಥೌ ಸಿಂಹಾಸನೇ ಪುತಃ ।
ಸೀತಾದ್ಯಾಸ್ತಾಃ ಸ್ತ್ರಿಯಸ್ಸರ್ವಾ ವಿವಿಶುರ್ವಸ್ತ್ರ ಸದ್ಮನಿ ॥ ೫೦ ॥

ತತಶ್ಶ್ರೀರಾಮಚಂದ್ರೋಽಪಿ ಲಕ್ಷ್ಮಣಂ ವಾಕ್ಯಮಬ್ರವೀತ್ ।
ಸೀಮಾಯಾಂ ಕ್ರೋಶಮಾತ್ರೇಽದ್ಯ ಶತದೂತಾನ್ ಪೃಥಕ್ ಪೃಥಕ್ ॥ ೫೧ ॥

ಏಕೈಕಸ್ಯಾಂ ದಿಶಿ ತ್ವಂ ಮೇ ವಚನಾತ್ ಸ್ಥಾಪಯಸ್ವ ಭೋಃ ।
ಯೋಜನೋಪರಿ ಸೌಮಿತ್ರೇ ತ್ವಷ್ಟದಿಕ್ಷು ಸಮಂತತಃ ॥ ೫೨ ॥

---

೪೮. ಹೀಗೆ ಹೋಗುತ್ತ ಕೊನೆಗೆ ಸೇನೆಯು ನಿಲ್ಲುವುದಕ್ಕೋಸ್ಕರ ಮಾಡಿದ ಶಿಬಿರದ ಜಾಗವನ್ನು ತಲುಪಿದರು. ಅದು ಅಯೋಧ್ಯೆಯಂತೆಯೇ ಇದ್ದಿತು. ಅದನ್ನು ನೋಡಿ ಅಲ್ಲಿ ಆ ರಾಮನು ಇಳಿದನು.

೪೯–೫೦. ಇಳಿಯುವಾಗ ವೀರರು ಮಾಡಿದ ವಂದನೆಗಳನ್ನು ಅಭಿನಂದಿಸುತ್ತ ಆನೆಯಿಂದ ಇಳಿದು ಲಕ್ಷ್ಮಣನ ಕೈಯ್ಯನ್ನು ತನ್ನ ಕೈಯ್ಯಿಂದ ಹಿಡಿದುಕೊಂಡು ಬಟ್ಟೆಯಿಂದ ರಮ್ಯವಾಗಿ ಕಟ್ಟಿದ್ದ ಗುಡಾರಕ್ಕೆ ಹೋಗಿ ಅಲ್ಲಿ ಸಿಂಹಾಸನದಮೇಲೆ ಕುಳಿತನು. ಸೀತೆಯೇ ಮುಂತಾದ ಸ್ತ್ರೀಯರು ಗುಡಾರ ದೊಳಕ್ಕೆ ಹೋದರು.

೫೧. ಅನಂತರ ಶ್ರೀರಾಮಚಂದ್ರನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ! ಈ ನಾವು ಪಾಳೆಯವನ್ನು ಬಿಟ್ಟಿರುವ ಜಾಗಕ್ಕೆ ಒಂದೊಂದು ಹರಿದಾರಿಯ ದೂರದಲ್ಲಿ ಎಂಟುದಿಕ್ಕಿನಲ್ಲಿಯೂ ನೂರು ನೂರು ಮಂದಿ ಆಳುಗಳನ್ನು ನಿಯಮಿಸು.

೫೨–೫೩. ಇಲ್ಲಿಂದ ನಾಲ್ಕು ಮೈಲಿಗಳ ದೂರದಲ್ಲಿ ಕುದುರೆಗಳಮೇಲೆ ಕುಳಿತಿರುವ ರಾವುತರನ್ನು ಎಲ್ಲಾ ಕಡೆಯಲ್ಲಿಯೂ ನಿಲ್ಲಿಸು. ಎಂದೆನಲು

ನಿಯೋಜಯಸ್ವ ಶತಶೋ ವಾಜಿವಾಜಿನಾಹರ್ಾ ಮಮಾಜ್ಞಯಾ ।
ತಥೇತ್ಯುಕ್ತ್ವಾ ಲಕ್ಷ್ಮಣೋಪಿ ತಥಾ ಸರ್ವಂ ಚಕಾರ ಸಃ ॥ ೫೩ ॥

ತತೋ ವಿಪ್ರೈಸ್ಸುಹೃದ್ಭಿಶ್ಚ ವಿವಿಧಾನ್ನೈರ್ಮನೋರಮೈಃ ।
ಘೃತೇನ ಶ್ರಾದ್ಧಶೇಷೇಣ ಭೋಜನಂ ರಾಘವೋಽಪ್ಯದಾತ್ ॥ ೫೪ ॥

ತಾಂಬೂಲೈರ್ದಕ್ಷಿಣಾಂ ದತ್ವಾ ನಾನಾವಿಪ್ರೇಭ್ಯ ಆದರಾತ್ ।
ಮುಖಶುದ್ಧಿಂ ಸ್ವಯಂ ಕೃತ್ವಾ ತಸ್ಥೌ ಸಿಂಹಾಸನೇ ಪುನಃ ॥ ೫೫ ॥

ಶ್ರುತ್ವಾ ಶಾಸ್ತ್ರಪುರಾಣಾನಿ ವೇದಾರ್ಥಾಂಶ್ಚಾಪಿ ಸಾದರಂ ।
ಸಾಯಂಸಂಧ್ಯಾದಿಕಂ ಕೃತ್ವಾ ಹುತ್ವಾ ಹೋಮಂ ಯಥಾ ವಿಧಿ ॥ ೫೬ ॥

ಸಿಂಹಾಸನೇ ಸಮಾಸೀನೋ ವೇಶ್ಯಾನಾಂ ನೃತ್ಯಮುತ್ತಮಂ ।
ಪಶ್ಯನ್ ಶೃಣ್ವನ್ ಗಾಯನಂ ಚ ನೀತ್ವಾ ಯಾಮದ್ವಯಾಂ ನಿಶಾಂ ॥ ೫೭ ॥

ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಅಂತೆಯೇ ಎಲ್ಲವನ್ನೂ ಮಾಡಿದನು.

೫೪. ಅಲ್ಲಿಳಿದು ರಾಘವನು ತೀರ್ಥಶ್ರಾದ್ಧವನ್ನು ಮಾಡಿ ಬ್ರಾಹ್ಮಣರು ಸ್ನೇಹಿತರು ಇವರೊಡನೆ ಆ ಶ್ರಾದ್ಧಶೇಷವನ್ನು ಊಟಮಾಡಿದನು.

೫೫. ಅನಂತರ ಬ್ರಾಹ್ಮಣರಿಗೆಲ್ಲರಿಗೂ ದಕ್ಷಿಣೆ ತಾಂಬೂಲಗಳನ್ನು ಕೊಟ್ಟನು. ತಾನು ತಾಂಬೂಲವನ್ನು ಹಾಕಿಕೊಂಡು ಮುಖಶುದ್ಧಿಯನ್ನು ಮಾಡಿಕೊಂಡು ಮತ್ತೆ ಸಿಂಹಾಸನದಲ್ಲಿ ಕುಳಿತನು.

೫೬. ಸಭೆಯಲ್ಲಿ ಕುಳಿತು ಶಾಸ್ತ್ರಪುರಾಣಾದಿಗಳನ್ನು ಕೇಳಿ ವೇದಾಂತದ ವಿಚಾರವನ್ನು ಮಾಡಿದನು. ಅನಂತರ ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಿದನು ಸಾಯಂಕಾಲದ ಹೋಮವನ್ನು ಕ್ರಮವಾಗಿ ಮಾಡಿದನು.

೫೭. ಮತ್ತೆ ಸಿಂಹಾಸನದಲ್ಲಿ ಬಂದು ಕುಳಿತನು. ಆಗ ಸೂಳೆಯರ ಕುಣಿತವನ್ನು ನೋಡುತ್ತ ಗಾಯನವನ್ನು ಕೇಳುತ್ತ ರಾತ್ರಿ ಎರಡು ಯಾಮಗಳನ್ನು ಕಳೆದನು.

ತತಃ ಸುಷ್ವಾಪ ಪರ್ಯಂಕೇ ಸೀತಯಾ ಸಹ ರಾಘವಃ ।
ದ್ವಿತೀಯೇ ದಿವಸೇ ತತ್ರ ಸ್ಥಿತ್ವಾ ರಾಮಸ್ತು ಕೌತುಕೈಃ ॥ ೫೮ ॥

ನೀತ್ವಾ ಸಮಗ್ರಂ ಸುದಿನಂ ತೃತೀಯೇ ದಿವಸೇ ಪುನಃ
ಪೂರ್ವವದ್ವಾದ್ಯಘೋಷಾದ್ಯೈಶ್ಶನೈಃ ಸ್ಥಾನಾಂತರಂ ಯಯೌ ॥ ೫೯ ॥

ಕ್ವಚಿದ್ದಿನಮತಿಕ್ರಮ್ಯ ಕ್ವಚಿದ್ದ್ವೇ ತ್ರೀಣಿ ರಾಘವಃ ।
ನೀತ್ವಾ ಪಶ್ಯನ್ ಕೌತುಕಾನಿ ರಂಜಯನ್ ಜನಕಾತ್ಮಜಾಂ ॥ ೬೦ ॥

ಶನೈಶ್ಶನೈರ್ಯಯೌ ಮಾರ್ಗೇ ಮಾಸೇನೈಕೇನ ರಾಘವಃ ।
ಪ್ರಾಪ ಜೀರ್ಣಂ ಮುದ್ಗಲೇನ ತ್ಯಕ್ತಮಾಶ್ರಮಮುತ್ತಮಂ ॥ ೬೧ ॥

ರಾಮಮಾಗತಮಾಜ್ಞಾಯ ಮುದ್ಗಲೋ ನೂತನಾಶ್ರಮಾತ್ ।
ಭಾಗೀರಥ್ಯಾ ದಕ್ಷಿಣತಃ ಪ್ರಾಪ ರಾಮಾಂತಿಕಂ ತದಾ ॥ ೬೨ ॥

೫೮-೫೯. ಅನಂತರ ಸೀತೆಯೊಡನೆ ಮಂಚದಮೇಲೆ ಸುಖವಾಗಿ ಮಲಗಿದನು. ಆ ರಾಮನು ಎರಡನೆಯದಿನವೂ ರಮಣೀಯತೆಯನ್ನು ನೋಡುತ್ತ ಸುಖವಾಗಿದ್ದು ಆ ದಿನವನ್ನು ಕಳೆದನು. ಮತ್ತೆ ಮೂರನೆಯದಿನ ಮೊದಲಿನಂತೆ ವಾದ್ಯಗಳ ಘೋಷಗಳಿಂದ ಕೂಡಿ ಅಲ್ಲಿಂದ ಪ್ರಯಾಣಮಾಡಿ ಬೇರೆಯ ಜಾಗಕ್ಕೆ ಹೊರಟನು.

೬೦. ಅಲ್ಲಲ್ಲಿ ಒಂದೊಂದು ಜಾಗದಲ್ಲಿ ಒಂದೊಂದು ದಿನವನ್ನೂ ಒಂದೊಂದು ಜಾಗದಲ್ಲಿ ಎರಡು ಮೂರು ದಿನಗಳನ್ನೂ ಕಳೆದನು. ಅಲ್ಲಲ್ಲಿ ಕೌತುಕಗಳನ್ನು ನೋಡುತ್ತ ಸೀತೆಯನ್ನು ಸಂತೋಷಪಡಿಸುತ್ತಲಿದ್ದನು.

೬೧. ಹೀಗೆ ಪ್ರಯಾಣಮಾಡುತ್ತ ಒಂದು ತಿಂಗಳಕಾಲ ಪ್ರಯಾಣ ಮಾಡಿದನು. ಅನಂತರ ಒಂದು ಆಶ್ರಮವು ಸಿಕ್ಕಿತು. ಅದು ಮುದ್ಗಲನ ಆಶ್ರಮವು. ಅದನ್ನು ಆ ಮುದ್ಗಲನು ಬಹಳ ಹಿಂದೆಯೇ ಬಿಟ್ಟುಬಿಟ್ಟಿದ್ದನು.

೬೨. ರಾಮನು ಈ ಹಳೆಯ ಆಶ್ರಮಕ್ಕೆ ಬಂದುದನ್ನು ತಿಳಿದು ಮುದ್ಗಲನು ಭಾಗೀರಥಿಯ ದಡದ ಹೊಸ ಆಶ್ರಮದಿಂದ ಹೊರಟು ಆ ರಾಮನ ಬಳಿಗೆ ಬಂದನು.

ತಂ ದೃಷ್ಟ್ವಾ ರಾಘವಶ್ಚಾಪಿ ನತ್ವಾ ಸಂಪೂಜ್ಯ ಸಾದರಂ ।
ವಾಸೋಗೇಹೇ ಸಮಾಸೀನಂ ಪಪ್ರಚ್ಛ ವಿನಯಾನ್ಮುನಿಂ ॥ ೬೩ ॥

ತ್ವಯಾಯಮಾಶ್ರಮಸ್ತ್ಯಕ್ತಃ ಕಿಮರ್ಥಂ ಮುನಿಸತ್ತಮಃ ।
ತತ್ವಂ ವದ ಮಹಾಭಾಗ ಯಥಾವಚ್ಚ ಸವಿಸ್ತರಂ ॥ ೬೪ ॥

ತದ್ರಾಮವಚನಂ ಶ್ರುತ್ವಾ ಮುದ್ಗಲೋ ವಾಕ್ಯಮಬ್ರವೀತ್ ।
ಅದ್ಯ ಧನ್ಯೋಽಸ್ಮ್ಯಹಂ ರಾಮ ನಿವೃತ್ತಂ ವನವಾಸತಃ ॥ ೬೫ ॥

ಯತ್ತ್ವಾಂ ಪಶ್ಯಾಮಿನೇತ್ರಾಭ್ಯಾಂ ಚಿರಕಾಲೇನ ರಾಘವ ।
ಭರತಪ್ರಾಣರಕ್ಷಾರ್ಥಂ ಯದಾನೀತಾ ಮಮಾಶ್ರಮಾತ್ ॥ ೬೬ ॥

ದಿವ್ಯೌಷಧ್ಯಸ್ತದಾ ಜಾತಂ ಪೂರ್ವಂತೇ ದರ್ಶನಂ ಮಮ ।
ಮಯಾಯಮಾಶ್ರಮಸ್ತ್ಯಕ್ತಃ ಕಿಮರ್ಥಂ ತದ್ಬ್ರವೀಮಿ ತೇ ॥ ೬೭ ॥

---

೬೩. ರಾಮನು ಆ ಮುದ್ಗಲನನ್ನು ನೋಡಿ ಆದರದಿಂದ ನಮಸ್ಕರಿಸಿ ತನ್ನ ಗುಡಾರದಲ್ಲಿ ಕೂರಿಸಿ ಸತ್ಕರಿಸಿದನು. ಮುನಿಯು ವಿಶ್ರಮಿಸಿಕೊಂಡಮೇಲೆ ರಾಮನು ವಿನಯದಿಂದ ಅವನನ್ನು ಕುರಿತು ಇಂತೆಂದನು.

೬೪. ಎಲೈ ಋಷಿಶ್ರೇಷ್ಠನೇ ! ನೀನು ಈ ಆಶ್ರಮವನ್ನು ಏತಕ್ಕೋಸ್ಕರ ಬಿಟ್ಟು ಬಿಟ್ಟೆ ? ಅದನ್ನು ವಿಸ್ತಾರವಾಗಿ ಕ್ರಮವಾಗಿ ತಿಳಿಸು ಎಂದನು.

೬೫. ರಾಮನು ಇಂತೆಂದುದನ್ನು ಕೇಳಿ ಮುದ್ಗಲನು ಇಂತೆಂದನು. ಎಲೈ ರಾಘವನೇ ! ವನವಾಸದಿಂದ ಹಿಂತಿರುಗಿದ ನಿನ್ನನ್ನು ನೋಡಿ ನಾನು ಇಂದು ಧನ್ಯನಾದೆನು.

೬೬. ಬಹುಕಾಲದಮೇಲೆ ನಿನ್ನನ್ನು ಇದೇ ಕಣ್ಣುಗಳಿಂದ ನೋಡಿದೆನಲ್ಲ! ಪೂರ್ವದಲ್ಲಿ ಭರತನ ಪ್ರಾಣರಕ್ಷಣೆಗೋಸ್ಕರ ನೀನು ನನ್ನ ಆಶ್ರಮದಿಂದ ಮಹೌಷಧಿಗಳನ್ನು ತೆಗೆದುಕೊಂಡು ಹೋದೆಯಲ್ಲ ! ಆಗ ನಿನ್ನನ್ನು ನಾನು ನೋಡಿದ್ದೆನು.

೬೭. ಆದರೆ ಈ ಆಶ್ರಮವನ್ನು ಬಿಡಲು ಕಾರಣವೇನು ? ಎಂಬುದನ್ನು ತಿಳಿಸುತ್ತೇನೆ.

ಸಾನ್ನಿಧ್ಯಂ ನಾತ್ರ ಗಂಗಾಯಾಸ್ಸರಯ್ವಾ ಅಪಿ ನಾತ್ರವೈ |
ಇತಿ ಮತ್ವಾ ಮಯಾ ತ್ಯಕ್ತಶ್ಚಾಶ್ರಮೋಽಯಂ ಮಹತ್ತಮಃ ॥ ೬೮ ॥

ಅತ್ರ ಸಿದ್ಧಿಂ ಗತಾಃ ಪೂರ್ವಂ ಶತಶೋಽಥ ಸಹಸ್ರಶಃ |
ಮುನೀಶ್ವರಾ ಮಯಾಪ್ಯತ್ರ ತಪಸ್ತಪ್ತಂ ಕಿಯದ್ದಿನಂ ॥ ೬೯ ॥

ಇತಿ ರಾಮ ಸಮಾಖ್ಯಾತಮಾಶ್ರಮಸ್ಯ ಚ ಮೋಚನೇ |
ಕಾರಣಂ ಚ ತ್ವಯಾ ಪೃಷ್ಟಂ ಕಿಮಗ್ರೇ ಶ್ರೋತುಮಿಚ್ಛಸಿ ॥ ೭೦ ॥

ತನ್ಮುನೇರ್ವಚನಂ ಶ್ರುತ್ವಾ ಪುನಸ್ತಂ ಪ್ರಾಹ ರಾಘವಃ |
ಕಿಂ ಕೃತ್ವಾ ತೇಽತ್ರ ವಸತಿರ್ಭವಿಷ್ಯತಿ ಮುನೇ ವದ ॥ ೭೧ ॥

ತದ್ರಾಮವಚನಂ ಶ್ರುತ್ವಾ ರಾಘವಂ ಪ್ರಾಹ ಮುದ್ಗಲಃ |
ಯದ್ಯತ್ರ ಸರಯೂನದ್ಯಾಸ್ಸಂಗಮೋ ಹಿ ಭವಿಷ್ಯತಿ ॥ ೭೨ ॥

---

೬೮. ಈ ಜಾಗದಲ್ಲಿ ಗಂಗೆಯಾಗಲಿ ಸರಯೂನದಿಯಾಗಲಿ ಹತ್ತಿರದಲ್ಲಿಲ್ಲ. ಎಂದು ತಿಳಿದು ಈ ಉತ್ತಮವಾದ ಆಶ್ರಮವನ್ನು ಬಿಟ್ಟು ಬಿಟ್ಟೆನು.

೬೯. ಈ ಜಾಗದಲ್ಲಿ ಸಾವಿರಾರು ಜನಮುನೀಶ್ವರರು ತಪಸ್ಸನ್ನು ಮಾಡಿ ಸಿದ್ಧಿಯನ್ನು ಹೊಂದಿದರು. ನಾನೂ ಕೂಡ ಇಲ್ಲಿ ಕೆಲವು ದಿನಗಳು ತಪಸ್ಸನ್ನು ಮಾಡಿದೆನು.

೭೦. ಎಲೈ ರಾಮನೇ ! ಈ ಆಶ್ರಮವನ್ನು ಬಿಡಲು ಕಾರಣವನ್ನು ಹೇಳಿದೆನು. ನೀನು ಅದಕ್ಕೆ ಕಾರಣವನ್ನು ಕೇಳಿದೆ. ಇನ್ನೇನು ಬೇಕು ? ಕೇಳು.

೭೧. ಮುನಿಯು ಹೀಗೆ ಹೇಳಿದುದನ್ನು ಕೇಳಿ ರಾಘವನು ಏನುಮಾಡಿದರೆ ನೀನು ಇಲ್ಲಿ ಬಂದು ವಾಸಮಾಡುತ್ತೀಯೆ ? ನಿನಗೆ ಆಗಬೇಕಾದ ಅನುಕೂಲವನ್ನು ಹೇಳು. ಎಂದನು.

೭೨-೭೩. ರಾಮನು ಇಂತೆಂದುದನ್ನು ಕೇಳಿ ಮುದ್ಗಲನು ಇಲ್ಲಿ ಸರಯೂನದಿಯು ಜಾಹ್ನವಿಯೊಡನೆ ಸಂಗಮವಾದರೆ ಆಗ ನಾನು

ಜಾಹ್ನವ್ಯಾ ತರ್ಹ್ಯಹಂ ಚಾತ್ರ ವತ್ಸ್ಯೇ ರಾಮ ಯಥಾಸುಖಂ ।
ತತ್ತಸ್ಯ ವಚನಂ ಶ್ರುತ್ವಾ ರಾಘವಃ ಪ್ರಾಹ ತಂ ಪುನಃ ॥ ೭೩ ॥

ಕಿಮರ್ಥಂ ಸರಯೂ ಶ್ರೇಷ್ಠಾ ಕುತಃ ಪ್ರಾಪ್ತಾ ಧರಾತಲಂ ।
ತತ್ತ್ವಂ ವದ ಮಹಾಭಾಗ ಸವಿಸ್ತಾರಂ ಮಮಾಗ್ರತಃ ॥ ೭೪ ॥

ತದ್ರಾಮವಚನಂ ಶ್ರುತ್ವಾ ಮುದ್ಗಲೋ ವಾಕ್ಯಮಬ್ರವೀತ್ ।
ತನ್ವೈವ ಚರಿತಂ ರಾಮ ಮನ್ಮುಖಾಚ್ಛ್ರೋತುಮಿಚ್ಛಸಿ ॥ ೭೫ ॥

ತರ್ಹಿ ತೇ ಸಂಪ್ರವಕ್ಷ್ಯಾಮಿ ತಚ್ಛೃಣುಷ್ವ ರಘೂತ್ತಮ ।
ಶಂಖಾಸುರೋ ಮಹಾನ್ ದೈತ್ಯೋ ವೇದಾನ್ ಪೂರ್ವಂ ಜಹಾರ ಸಃ ॥ ೭೬ ॥

ತಾನ್ವಿಕೀರ್ಯ ಸಮುದ್ರೇ ಹಿ ಸ್ವಯಮಾಸೀನ್ಮಹೋದಧೌ ।
ತದರ್ಥಂ ಚ ತ್ವಯಾ ಮಾತ್ಸ್ಯಂ ವಪುರ್ಧೃತ್ವಾ ಮಹತ್ತರಂ ॥ ೭೭ ॥

ಇಲ್ಲಿ ಸುಖವಾಗಿವಾಸಿಸುತ್ತೇನೆ. ಎಂದನು. ಆ ಮಾತನ್ನು ಕೇಳಿ ರಾಮನು ಇಂತೆಂದನು.

೭೪. ಎಲೈ ಮುನಿಯೇ! ಸರಯೂನದಿಯು ಶ್ರೇಷ್ಠವಾದ ನದಿಯಾಗಲು ಕಾರಣವೇನು? ಅದು ಭೂಲೋಕಕ್ಕೆ ಏಕೆಬಂದಿತು? ಅದನ್ನು ವಿಸ್ತಾರವಾಗಿ ಹೇಳು.

೭೫. ರಾಮನು ಇಂತೆಂದು ಕೇಳಲು ಮುದ್ಗಲನು ಎಲೈ ರಾಮನೇ! ನಿನ್ನ ಚರಿತ್ರೆಯನ್ನೇ ನನ್ನ ಬಾಯಿಂದ ಕೇಳಬೇಕೆನ್ನುತ್ತಿದ್ದೀಯೆ. ಆಗಲಿ ಹೇಳುತ್ತೇನೆ. ಕೇಳು. ಎಂದು ಹೇಳಿ ಹೇಳಲಾರಂಭಿಸಿದನು.

೭೬-೭೭. ಪೂರ್ವದಲ್ಲಿ ಶಂಖಾಸುರನೆಂಬ ದೈತ್ಯನೊಬ್ಬನಿದ್ದನು. ಅವನು ವೇದಗಳನ್ನು ಕದ್ದುಕೊಂಡು ಹೋದನು. ಆ ವೇದವೆಲ್ಲವನ್ನೂ ಸಮುದ್ರದಲ್ಲಿ ಬಿಸಾಡಿ ತಾನು ಸಮುದ್ರದೊಳಗಿದ್ದನು ಅದಕ್ಕೋಸ್ಕರವಾಗಿಯೇ ನೀನು ಮತ್ಸ್ಯಾವತಾರವನ್ನು ಮಾಡಿದೆ.

ಹತಶ್ಶಂಖಾಸುರೋ ವೇದಾಸ್ತ್ವಯಾ ದತ್ತಾಸ್ತು ವೇಧಸೇ ।
ತತೋ ಹರ್ಷೇಣ ಮಹತಾ ಪೂರ್ವರೂಪಂ ತ್ವಯಾ ಧೃತಂ ॥ ೭೮ ॥

ತದಾ ಹರ್ಷೇಣ ನೇತ್ರಾತ್ತೇ ಪತಿತಾಶ್ಚಾಶ್ರುಬಿಂದವಃ ।
ಹಿಮಾಲಯೇ ತತೋ ಜಾತಾ ನದೀ ಪುಣ್ಯಾ ಶುಭೋದಕಾ ॥ ೭೯ ॥

ಸಾಕ್ಷಾನ್ನಾರಾಯಣಸ್ಯೈವ ಆನಂದಾಶ್ರುಸಮುದ್ಭವಾ ।
ಶನೈರ್ಬಿಂದುಸರಃಪ್ರಾಹ ತಸ್ಮಾಚ್ಚ ಮಾನಸಂ ಯಯೌ ॥ ೮೦ ॥

ಏತಸ್ಮಿನ್ನಂತರೇ ರಾಮ ಪೂರ್ವಜಸ್ತೇ ಮಹತ್ತಮಃ ।
ವೈವಸ್ವತೋ ಮನುರ್ಯಷ್ಟುಮುದ್ಯುಕ್ತೋ ಗುರುಮಬ್ರವೀತ್ ॥ ೮೧ ॥

ಅನಾದಿಸಿದ್ಧಾಯೋಧ್ಯೇಯಂ ವಿಶೇಷೇಣಾಪಿ ವೈ ಮಯಾ ।
ರಚಿತಾ ನಿಜವಾಸಾರ್ಥಮತ್ರ ಯಜ್ಞಂ ಕರೋಮ್ಯಹಂ ॥ ೮೨ ॥

---

೭೮. ಆಗ ಆ ಸಮುದ್ರದಲ್ಲಿ ಆ ಶಂಖಾಸುರನನ್ನು ಮೀನಿನ ಅವತಾರದಿಂದ ಕೊಂದು ವೇದಗಳನ್ನು ಬ್ರಹ್ಮನಿಗೆ ತಂದುಕೊಟ್ಟೆ. ಅನಂತರ ಮತ್ತೆ ಪೂರ್ವ ರೂಪವನ್ನು ಹೊಂದಿದೆ.

೭೯. ಆಗ ಸಂತೋಷದಿಂದ ನಿನ್ನ ಕಣ್ಣುಗಳಿಂದ ಕಣ್ಣೀರಿನ ಬಿಂದುಗಳು ಬಿದ್ದುವು. ಆಗ ಹಿಮಾಲಯದಲ್ಲಿ ಮಹಾನದಿಯು ಅದರಿಂದ ಉತ್ಪನ್ನವಾಯಿತು. ಅದು ಶುಭೋದಕವುಳ್ಳುದಾಯಿತು.

೮೦. ಆ ಮಹಾನದಿಯು ಪ್ರತ್ಯಕ್ಷನಾದ ನಾರಾಯಣನ ಆನಂದಾಶ್ರುವಿನಿಂದ ಹುಟ್ಟಿ ಹರಿಯುತ್ತ ಬಿಂದಸರೋವರಕ್ಕೆ ಬಂದುಸೇರಿ ಅಲ್ಲಿಂದ ಹೊರಟು ಮಾನಸಸರೋವರಕ್ಕೆ ಬಂದು ಸೇರಿತು.

೮೧. ಇಷ್ಟರಲ್ಲಿ ನಿನ್ನ ವಂಶದಲ್ಲಿ ಹುಟ್ಟಿದ ಅತಿಯೋಗ್ಯನಾದ ವೈವಸ್ವತ ಮನುವು ಯಾಗಮಾಡುವ ಉದ್ದೇಶದಿಂದ ಗುರುವನ್ನು ಕುರಿತು ಇಂತೆಂದನು.

೮೨. ಎಲೈ ಗುರುವೇ ! ಅಯೋಧ್ಯೆಯು ಬಹುಕಾಲದಿಂದ ಇದ್ದುಕೊಂಡು ಬಂದಿದೆ. ನಾನಾದರೋ ವಾಸಿಸುವುದಕ್ಕೋಸ್ಕರ ಇದನ್ನು ಬಹುವಾಗಿ ಹೆಚ್ಚಿಸಿ ಅಲಂಕರಿಸಿದೆನು. ಇಲ್ಲಿಯೇ ಯಜ್ಞವನ್ನು ಮಾಡಬೇಕೆಂದಿದ್ದೇನೆ.

ಯದಿ ತೇ ರೋಚತೇ ಚಿತ್ತೇ ತಚ್ಛ್ರುತ್ವಾ ಗುರುರಬ್ರವೀತ್ ।
ಅತ್ರ ತೀರ್ಥಂ ವರಂ ನಾಸ್ತಿ ನಾಸ್ತಿ ಶ್ರೇಷ್ಠಾ ಮಹಾನದೀ ॥ ೮೩ ॥

ಯದ್ಯತ್ರೈವಾಸ್ತಿ ತೇ ಚಿತ್ತಂ ಯಷ್ಟುಂ ನೃಪತಿಸತ್ತಮ ।
ಆನಯಸ್ವ ನದೀಂ ರಮ್ಯಾಂ ಮಾನಸಾತ್ಪಾತಕಾಪಹಾಂ ॥ ೮೪ ॥

ತದ್ಗುರೋರ್ವಚನಾದ್ರಾಜಾ ಮನುರ್ವೈವಸ್ವತೋ ಮಹಾನ್ ।
ಟಣತ್ಕೃತ್ಯ ಮಹಚ್ಚಾಪಂ ಸಂದಧೇ ಶರಮುತ್ತಮಂ ॥ ೮೫ ॥

ಸ ಶರೋ ಮಾನಸಂ ಭಿತ್ವಾ ತನ್ಮಾನ್ನಿಷ್ಕಾಸ್ಯ ತಾಂ ನದೀಂ ।
ಅಯೋಧ್ಯಾಮಾನಯಾಮಾಸ ಪಂಥಾನಂ ದರ್ಶಯನ್ನಿವ ॥ ೮೬ ॥

---

೮೩. ಇದಕ್ಕೆ ನಿನ್ನ ಇಷ್ಟವೇನು ? ಎನ್ನಲು ಅದನ್ನು ಕೇಳಿ ಗುರುವು ಎಲೈ ಮನುವೇ ! ಇಲ್ಲಿ ಉತ್ತಮವಾದ ತೀರ್ಥವಿಲ್ಲ. ಶ್ರೇಷ್ಠವಾದ ಮಹಾನದಿಯೂ ಇಲ್ಲ.

೮೪. ನಿನಗೆ ಇಲ್ಲಿಯೇ ಯಜ್ಞವನ್ನು ಮಾಡಬೇಕೆಂಬ ಅಪೇಕ್ಷೆಯಿದ್ದರೆ ಪಾಪನಾಶಕವಾದ ಮಾನಸಸರೋವರದಿಂದ ಮನೋಹರವಾದ ನದಿಯನ್ನು ಇಲ್ಲಿಗೆ ತೆಗೆದುಕೊಂಡು ಬಾ. ಎಂದನು.

೮೫. ಗುರುವು ಹೀಗೆನ್ನಲು ಅವನ ಮಾತಿನಂತೆ ಆ ಶ್ರೇಷ್ಠನಾದ ವೈವಸ್ವತಮನುವು ತನ್ನ ದೊಡ್ಡ ಆ ಧನುಸ್ಸನ್ನು ತೆಗೆದುಕೊಂಡು ಟೇಂಕಾರವನ್ನು ಮಾಡಿಸುತ್ತ ಉತ್ತಮವಾದ ಒಂದು ಬಾಣವನ್ನು ಹೂಡಿ ಮಾನಸಸರೋವರಕ್ಕೆ ಹೊಡೆದನು.

೮೬- ಬಾಣವು ಮಾನಸಸರೋವರವನ್ನು ತೂತುಮಾಡಿ ಅಲ್ಲಿಗೆ ಬಂದಿದ್ದ ಸರಯೂನದಿಯನ್ನು ಹೊರಗೆ ಹೊರಡಿಸಿ ದಾರಿಯನ್ನು ತೋರಿಸಿ ಕರೆದುಕೊಂಡು ಬಂದಿತೋ ಎಂಬಂತೆ ಅಯೋಧ್ಯೆಗೆ ತಂದಿತು.

ಶರಮಾರ್ಗಾನುಸಾರೇಣಾಯೋಧ್ಯಾಯಾಂ ಪ್ರಾಪ ವೈ ನದೀ ।
ಮಹೋದಧೌ ಪೂರ್ವದೇಶೇ ಮಿಲಿತಾ ರಘುನಂದನ ॥ ೮೭ ॥

ಆನೀತಾ ಸಾ ಶರೇಣೈವ ಶರಯೂಶ್ಚೇತಿ ಕಥ್ಯತೇ ।
ಸರೋವರಾತ್ಸಮುದ್ಭೂತಾ ಸರಯೂಶ್ಚೇತಿ ಕೇಚನ ॥ ೮೮ ॥

ತತೋ ಭಗೀರಥೇನೇಯಂ ಕಪಿಲಕ್ರೋಧವಹ್ನಿನಾ ।
ವಿನಿರ್ದಗ್ಧಾನ್ ಪೂರ್ವಜಾನ್ವೈ ಸಾಗರಾನ್ ಪ್ರೇಷಿತುಂ ದಿವಂ ॥ ೮೯ ॥

ಭಾಗೀರಥೀ ಸಮಾನೀತಾ ತ್ವತ್ಪಾದಾಬ್ಜ ಸಮುದ್ಭವಾಪ್ಯ ।
ತಪಸಾ ಶಂಕರಂ ತೋಷ್ಯ ಶರಯ್ವಾ ಮಿಲಿತಾಥ ಸಾ ॥ ೯೦ ॥

ವರದಾನಾತ್ಕಲೌ ಶಂಭೋರ್ಗಂಗಾಖ್ಯಾತಿಂ ಗಮಿಷ್ಯತಿ ।
ಅಗ್ರೇ ಸಾಗರಪರ್ಯಂತಮೇನಾಂ ಗಂಗಾಂ ವದಂತಿ ಹಿ ॥ ೯೧ ॥

---

೮೭ ಆ ಬಾಣದ ಮಾರ್ಗವನ್ನು ಅನುಸರಿಸಿ ಆ ಸರಯೂನದಿಯು ಅಯೋಧ್ಯೆಗೆ ಬಂದಿತು. ಅದು ಮುಂದೆ ಹೊರಟು ಪೂರ್ವಪ್ರದೇಶದಲ್ಲಿ ಸಮುದ್ರಕ್ಕೆ ಸೇರಿತು.

೮೮. ಆ ನದಿಯು ವೈವಸ್ವತಮನುವಿನಿಂದ ಶರದಿಂದ ತಂದುದರಿಂದ ಅದಕ್ಕೆ ಶರಯೂ ಎಂದು ಹೆಸರು ಬಂದಿತು. ಅದು ಸರೋವರದಿಂದ ಹೊರಕ್ಕೆ ಬಂದುದರಿಂದ ಸರಯೂ ಎಂದು ಎನ್ನಿಸಿಕೊಳ್ಳುತ್ತದೆ. ಎಂದು ಕೆಲವರು ಹೇಳುತ್ತಾರೆ.

೮೯-೯೦. ಅನಂತರ ಕಪಿಲಋಷಿಯ ಕೋಪದ ಜ್ವಾಲೆಯಿಂದ ಬೆಂದು ಹೋದ ನಿನ್ನ ಪೂವಸಗಜರಾದಸರರನ್ನು ಸ್ವರ್ಗಕ್ಕೆ ಕಳುಹಿಸಲು ಭಗೀರಥನು ಭಾಗೀರಥೀಯನ್ನೂ ಶಂಕರನನ್ನೂ ತಪಸ್ಸಿನಿಂದ ಸಂತೋಷಪಡಿಸಿ ತಂದನು. ಅದು ಆಗ ಈ ಸರಯೂನದಿಯೊಡನೆ ಸಂಗಮವಾಯಿತು.

೯೧ ಶಂಭುವಿನ ವರದಾನದಿಂದ ಈ ಗಂಗೆಯು ಪ್ರಸಿದ್ಧಿಗೆ ಬರುತ್ತದೆ. ಇಲ್ಲಿಂದ ಮುಂದಕ್ಕೆ ಸಮುದ್ರದವರೆಗೂ ಇದನ್ನು ಗಂಗೆಯೆಂದೇ ಕರಿಯುತ್ತಾರೆ.

ತವ ಪಾದಸಮುದ್ಭೂತಾ ಯಾ ವಿಶ್ವಂ ಪಾತಿ ಜಾಹ್ನವೀ ।
ಇಯಂ ತು ನೇತ್ರಸಂಭೂತಾ ಕಿಮುದ್ಯಾಗ್ರೇ ವದಾಮ್ಯಹಂ ॥ ೯೨ ॥

ಕೋಟಿವರ್ಷಸಹಸ್ರೈಶ್ಚ ಕೋಟಿವರ್ಷಶತೈರಪಿ ।
ಮಹಿಮಾ ಸರಯೂನದ್ಯಾಃ ಕೋಽಪಿ ವಕ್ತುಂ ನ ವೈ ಕ್ಷಮಃ ॥ ೯೩ ॥

ಇತಿ ರಾಮ ಸಮಾಖ್ಯಾತಂ ಯಥಾ ಪೃಷ್ಟಂ ತ್ವಯಾ ಮಮ ।
ಮುನೇಸ್ತದ್ವಚನಂ ಶ್ರುತ್ವಾ ಲಕ್ಷ್ಮಣಂ ಪ್ರಾಹ ರಾಘವಃ ॥ ೯೪ ॥

ಸರಯೂಮಾನಯಸ್ವಾತ್ರ ಶರಂ ಮುಕ್ತ್ವಾ ಮಮಾಜ್ಞಯಾ ।
ತಥೇತಿ ರಾಮವಚನಾದ್ಧೃತ್ವಾ ಚಾಪಂ ಸ ಲಕ್ಷ್ಮಣಃ ॥ ೯೫ ॥

---

೯೨. ನಿನ್ನ ಪಾದದಿಂದ ಹುಟ್ಟಿದ ಗಂಗೆಯು ಪ್ರಪಂಚವನ್ನೇ ಪಾವನ ಮಾಡುತ್ತಿರುವಾಗ ನಿನ್ನ ಕಣ್ಣಿನಿಂದ ಹುಟ್ಟಿದ ಈ ಸರಯೂನದಿಯ ಮಹಿಮೆಯನ್ನು ಹೇಳಲು ಒಬ್ಬನಿಗೂ ಸಾಮರ್ಥ್ಯವಿಲ್ಲ.

೯೩. ನಾನು ಕೋಟಿವರ್ಷಗಳಾಗಲಿ ಕೊನೆಗೆ ಸಾವಿರಕೋಟಿ ವರ್ಷಗಳಾಗಲಿ ಈ ನದಿಯಮಹಿಮೆಯನ್ನು ವರ್ಣಿಸಲಾರೆನು.

೯೪. ಎಲೈ ರಾಮನೇ ! ನೀನು ಕೇಳಿದ ವಿಷಯವನ್ನು ಕ್ರಮವಾಗಿ ಹೇಳಿದ್ದೇನೆ. ಎನ್ನಲು ಮುನಿಯ ಈ ಮಾತನ್ನು ಕೇಳಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು.

೯೫. ಎಲೈ ಲಕ್ಷ್ಮಣನೇ ! ನನ್ನ ಆಜ್ಞೆಯಂತೆ ಬಾಣವನ್ನು ಬಿಟ್ಟು ಇಲ್ಲಿಗೆ ಸರಯೂನದಿಯು ಬರುವಂತೆ ಮಾಡು ಎಂದು ರಾಮನು ಹೇಳಲು ಲಕ್ಷ್ಮಣನು ರಾಮನ ಮಾತಿನಂತೆ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಎಳೆದು ಬಿಟ್ಟನು.

ಶರಂ ಮುಕ್ತ್ವಾ ತಟಂ ಭಿತ್ವಾ ಶರಯೂಮಾನಯತ್ ಕ್ಷಣಾತ್ ।
ಶರಯೂಸ್ಸಾ ದ್ವಿಧಾ ಭೂತ್ವಾ ಮುದ್ಗಲಾಶ್ರಮಮಾಯಯೌ ॥ ೯೬ ॥

ಜಾಹ್ನವ್ಯಾ ಮಿಲಿತಾ ಸಾಪಿ ತಾಂ ದೃಷ್ಟ್ವಾ ರಾಘವೋಽಬ್ರವೀತ್ ।
ಅತ್ರ ಸ್ಥಿತ್ವಾ ಲಕ್ಷ್ಮಣೇನ ದಾರಿತೇಯಂ ಮಹಾನದೀ ॥ ೯೭ ॥

ಅತೋ ದದ್ರೀತಿ ನಾಮ್ನಾತ್ರ ನಗರೀ ಖ್ಯಾತಿಮೇಷ್ಯತಿ ।
ದದ್ರೀಯಂ ಜಗತೀಮಧ್ಯೇ ಬದರ್ಯಾಶ್ಚ ಯವಾಧಿಕಾ ॥ ೯೮ ॥

ಭವಿಷ್ಯತಿ ನ ಸಂದೇಹಸ್ತವ ವಾಸಾದ್ವಿಶೇಷತಃ ।
ತತಸ್ಸೀತಾಂ ಸಮಾಹೂಯ ರಾಘವೋ ವಾಕ್ಯಮಬ್ರವೀತ್ ॥ ೯೯ ॥

---

೯೬. ಆ ಸರಯೂನದಿಯ ದಡವನ್ನು ಕತ್ತರಿಸಿ ಆ ಸರಯೂನದಿಯು ಕ್ಷಣಕಾಲದಲ್ಲಿ ಅಲ್ಲಿಗೆ ಬರುವಂತೆ ಮಾಡಿದನು. ಸರಯೂನದಿಯು ಎರಡಾಗಿ ಭಾಗವಾಗಿ ಬಂದು ಒಂದುಭಾಗವು ಮುದ್ಗಲನ ಆಶ್ರಮಕ್ಕೆ ಬಂದಿತು.

೯೭-೯೮. ಆ ಸರಯೂನದಿಯು ಜಾಹ್ನವಿನೊಡನೆ ಸೇರಿಕೊಂಡಿತು. ಅದನ್ನು ನೋಡಿ ರಾಮನು ಲಕ್ಷ್ಮಣನು ಇಲ್ಲಿದ್ದುಕೊಂಡೇ ಈ ನದಿಯನ್ನು ದಾರಿತವನ್ನಾಗಿ (ಕಡಿದು) ಮಾಡಿದುದರಿಂದ ಇಲ್ಲಿ ಒಂದು ಪಟ್ಟಣವು ನಿರ್ಮಿತವಾಗಿ ದದ್ರೀ ಎಂಬ ಹೆಸರಿನಿಂದ ಪ್ರಸಿದ್ಧವಾಗುತ್ತದೆ. ಈ ದದ್ರಿಯು ಪ್ರಪಂಚದಲ್ಲಿಯೇ ಅಧಿಕವಾಗಿರುವ ಬದರಿಗಿಂತಲೂ ಒಂದು ಅಕ್ಕಿಯಷ್ಟು ಪ್ರಮಾಣದಲ್ಲಿ ಅಧಿಕವಾಗಿರುವುದು.

೯೯. ಎಲೈ ಋಷಿಯೇ ! ಈ ನದಿಯು ಈ ರೀತಿಯಲ್ಲಿ ಪ್ರಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ನೀನು ವಾಸಮಾಡುವುದರಿಂದಲಂತೂ ಇನ್ನೂ ಅಧಿಕವಾಗಿ ಪ್ರಸಿದ್ಧವಾಗುತ್ತದೆ. ಎಂದನು. ಅನಂತರ ರಾಮನು ಸೀತೆಯನ್ನು ಕರೆದು ಇಂತೆಂದನು.

ಮುದ್ಗಲಸ್ಯಾಶ್ರಮೇತ್ರೈವ ಸಾ ನೀತಾ ಸರಯೂರ್ನದೀ ।
ಪಶ್ಯ ಸೌಮಿತ್ರಿಣಾ ಮುಕ್ತ್ವಾ ಶರಂ ಮನ್ನಾಮ ಚಿಹ್ನಿತಂ ॥ ೧೦೦ ॥

ನಾರೀಭಿರ್ಮಾತೃಭಿಸ್ಸೀತೇ ಪುಷ್ಪಕೇಣಾತಿ ಭಾಸ್ವತಾ ।
ವೃದ್ಧಾ ಸಾ ಸರಯೂರ್ಯತ್ರ ಸಂಗತಾಸ್ತಿ ಮಹಾನದೀ ॥ ೧೦೧ ॥

ಜಾಹ್ನವ್ಯಾ ಸಂಗಮಂ ತ್ವಂ ಹಿ ಗಚ್ಛಸ್ವ ಗುರುಣಾ ದ್ವಿಜೈಃ ।
ಪೂಜಯಿತ್ವಾ ಸವಿಸ್ತಾರಂ ಯಥೋಕ್ತಂ ವಚನಂ ಪುರಾ ॥ ೧೦೨ ॥

ಆಗಚ್ಛಸ್ವ ತತಶ್ಶೀಘ್ರಮತ್ರ ತ್ವಂ ಮಮ ಸನ್ನಿಧೌ ।
ವಿಶೇಷಾನ್ಮುದ್ಗಲಸ್ಯಾಪಿ ಸನ್ನಿಧಾವದ್ಯ ವೈ ಪುನಃ ॥ ೧೦೩ ॥

---

೧೦೦. ಎಲೈ ಸೀತೆಯೇ ! ಲಕ್ಷ್ಮಣನು ನನ್ನ ಹೆಸರಿನ ಬಾಣವನ್ನು ಬಿಟ್ಟು ಈ ಮುದ್ಗಲನ ಆಶ್ರಮಕ್ಕೆ ಸರಯೂನದಿಯನ್ನೂ ತಂದಿರುವನು.

೧೦೧. ಸೀತೆಯೇ ! ನೀನು ಪಟ್ಟಣದ ಹೆಂಗಸರೊಡನೆಯೂ ನನ್ನ ತಾಯಿಯರೊಡನೆಯೂ ಪುಷ್ಪಕದಲ್ಲಿ ಕುಳಿತು ಈ ಸರಯೂನದಿಯು ಜಾಹ್ನವಿಯೊಡನೆ ಸಂಗಮವಾಗಿರುವ ಜಾಗಕ್ಕೆ ಹೋಗು.

೧೦೨. ಅಲ್ಲಿಗೆ ಗುರುವನ್ನೂ ವಿಪ್ರರನ್ನೂ ಕರೆದುಕೊಂಡು ಹೋಗಿ ನೀನು ಮೊದಲು ವನವಾಸಕ್ಕೆ ಹೋಗುವಾಗ ಹರಕೆಮಾಡಿಕೊಂಡಿದ್ದಂತೆ ವಿಸ್ತಾರವಾಗಿ ಪೂಜಿಸು.

೧೦೩. ಪೂಜೆಯನ್ನು ಮಾಡಿಕೊಂಡು ನನ್ನ ಬಳಿಗೆ ಬೇಗನೆ ಬಾ. ಈ ಆಶ್ರಮದಲ್ಲಿ ಮುದ್ಗಲಋಷಿಯು ಇರುವುದರಿಂದ ಇದು ಬಹಳವಾಗಿ ಶ್ರೇಷ್ಠವಾಗಿರುವುದು.

ನವೀನಸರಯೂನದ್ಯಾ ಭಾಗೀರಥ್ಯಾಸ್ತು ಸಂಗಮೇ ।
ಪೂಜನಂ ತ್ವಂ ಮಯಾ ಸಾಕಂ ಕರ್ತುಮರ್ಹಸಿ ಮೈಥಿಲಿ ॥ ೧೦೪ ॥

ತಥೇತಿ ರಾಮವಚನಮಂಗೀಕೃತ್ಯ ವಿದೇಹಜಾ ।
ಪೂಜಾಸಂಭಾರಮಾದಾತುಂ ವಿವೇಶ ವಸನಂ ಗೃಹಂ ॥ ೧೦೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ಸರಯೂದ್ವಿಧಾಕರಣಂ ನಾಮ ಚತುರ್ಥಸ್ಸರ್ಗಸಮಾಪ್ತಃ

---

೧೦೪. ಅನಂತರ ಈ ಹೊಸಸರಯೂನದಿಯು ಜಾಹ್ನವಿಯೊಡನೆ ಸೇರಿದ ಜಾಗದಲ್ಲಿ ನಾನೂ ನೀನೂ ಸೇರಿಕೊಂಡು ಪೂಜೆಯನ್ನು ಮಾಡಬೇಕು. ಎಂದನು.

೧೦೫. ಸೀತೆಯು ಹಾಗೆಯೇ ಆಗಲೆಂದು ರಾಮನ ಮಾತನ್ನು ಅಂಗೀಕರಿಸಿ ಪೂಜಾಸಾಮಗ್ರಿಗಳನ್ನು ತರಲು ಬಿದಿಯ ಗುಡಾರಕ್ಕೆ ಹೋದಳು.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಸರಯೂದ್ವಿಧಾ ಕರಣವೆಂಬ ನಾಲ್ಕನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

॥ ನಾಲ್ಕನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ಬೆಳಗಿನ ವಾದ್ಯಧ್ವನಿಗಳನ್ನೂ ಸ್ತುತಿ ಪಾಠಕರ ಸ್ತುತಿಗಳನ್ನೂ ಕೇಳಿ ಎಚ್ಚೆತ್ತನು. ಬೆಳಗಿನ ನಿತ್ಯವಿಧಿಗಳೆಲ್ಲವನ್ನೂ ನೆರವೇರಿಸಿಕೊಂಡು ಅನೇಕವಾಗಿ ದಾನಗಳನ್ನು ಕೊಟ್ಟನು. ಅನಂತರ ತನಗೆ ಆಪ್ತನಾದ ಗೋಪಾಲ ನೆಂಬ ಜೋಯಿಸನನ್ನು ಕರೆದು ನಮಸ್ಕರಿಸಿ ಎಲೈ ಜೋಯಿಸನೆ! "ನಾನು ಯಾತ್ರೆಗೋಸ್ಕರ ಗಂಗಾನದಿಗೆ ಪ್ರಯಾಣಮಾಡಬೇಕಾಗಿದೆ. ಒಳ್ಳೆಯ ಮುಹೂರ್ತವನ್ನು ನೋಡಿ ಹೇಳು" ಎಂದನು.

ಆ ಗೋಪಾಲನು ಹಾಗೆಯೇ ಆಗಲೆಂದು ಹೇಳಿ ನೋಡಿ. "ಎಲೈ ರಾಮನೆ! ಇಂದಿನ ದಿನವೇ ಪೂರ್ವಯಾಮವು ಬಹು ಶ್ರೇಷ್ಠವಾಗಿದೆ. ಯಾತ್ರೆಗೆ ಪುಷ್ಯನಕ್ಷತ್ರವು ಬಹು ಒಳ್ಳೆಯವಾದುದು. ಮತ್ತಾವುದನ್ನೂ ನೋಡಬೇಕಾದುದೇ ಇಲ್ಲ" ಎಂದನು.

ರಾಮನು ಅದನ್ನು ಕೇಳಿ ಲಕ್ಷ್ಮಣನನ್ನು ಕರೆದು ಇಂದೇ ಯಾತ್ರೆಗೆ ಹೋಗಬೇಕಾಗಿರುವುದರಿಂದ ಸೇನೆಯವರು ಸಿದ್ಧರಾಗಿರಲು ಮೊದಲನೆಯ ಸೂಚನೆಯ ರೂಪವಾದ ವಾದ್ಯಗಳನ್ನು ಧ್ವನಿಮಾಡಿಸೆಂದನು. ತಾನು ಹೋಗಿ ನಾಂದೀಶ್ರಾದ್ಧವನ್ನು ಮಾಡಿದನು. ಮತ್ತು ವಸಿಷ್ಠನಿಗೆ ಅಗ್ನಿಹೋತ್ರದ ಅಗ್ನಿಗಳನ್ನು ತೆಗೆದುಕೊಂಡು ಹೆಂಗಸರೊಡನೆ ಪುಷ್ಪಕದಲ್ಲಿ ಕುಳಿತುಕೊಳ್ಳುವಂತೆ ಹೇಳಿದನು.

ಅನಂತರ ಸೀತೆಯ ಇಷ್ಟದಂತೆ ಅವಳಿಗೆ ಪ್ರಯಾಣಮಾಡಲು ಆನೆಯನ್ನು ಸಿದ್ಧಪಡಿಸಿ ಎಲ್ಲರಿಗೂ ಹೊಸಬಟ್ಟೆಗಳನ್ನೂ ಒಡವೆಗಳನ್ನೂ ಕೊಟ್ಟು ಸತ್ಕರಿಸಿದನು. ಅನಂತರ ಸಿಂಹಾಸನದಮೇಲೆ ಕುಳಿತು ಲಕ್ಷ್ಮಣನಿಗೆ ಎರಡನೆಯ ಬಾರಿಯು ಧ್ವನಿಯನ್ನು ಮಾಡಿಸುವಂತೆ ಹೇಳಿದನು. ಮತ್ತು ಸುಮಂತ್ರನನ್ನು ಪಟ್ಟಣದ

ರಕ್ಷಣೆಗೆ ಇರುವಂತೆ ಹೇಳಿದನು. ಅನಂತರ ತಮ್ಮಂದಿರೂ ತಾನೂ ಪ್ರಯಾಣ ಮಾಡಬೇಕಾದ ರೀತಿಯನ್ನು ತಿಳಿಸಿದನು. ಅನಂತರ ತಾನು ಪ್ರಯಾಣಮಾಡಲು ಆನೆಯನ್ನು ಹತ್ತಿದನು. ಅವನ ಹಿಂದೆ ಎಲ್ಲರೂ ವಾಹನಗಳನ್ನು ಹತ್ತಿ ಹೊರಟರು. ಪಟ್ಟಣಿಗರು ಸಾಲಾಗಿ ನಿಂತು ಹೂಮಳೆಯನ್ನು ಸುರಿಸಿದರು. ಶ್ರೀರಾಮನು ಅಲ್ಲಿ ನಡೆಯುತ್ತಿದ್ದ ತಮಾಷೆಗಳನ್ನು ನೋಡುತ್ತ ಹೊರಟನು.

ಪ್ರಯಾಣಮಾಡುತ್ತ ಮೊದಲನೆಯ ಮಜಲಿನ ಸ್ಥಾನವನ್ನು ಹೊಂದಿ ಅಲ್ಲಿ ಇಳಿದನು. ಅದು ಅಯೋಧ್ಯೆಯಂತೆಯೇ ಇದ್ದಿತು. ಲಕ್ಷ್ಮಣನನ್ನು ಕುರಿತು “ಎಲೈ ಸೌಮಿತ್ರಿಯೆ! ಇಲ್ಲಿಂದ ಒಂದು ಮೈಲಿಯ ದೂರದಲ್ಲಿ ಸುತ್ತಲೂ ದೂತರನ್ನಿಡು. ಮೂರು ಮೈಲಿಯ ಆಚೆ ಕುದುರೆಯ ರಾವುತರನ್ನಿಡು” ಎಂದು ಹೇಳಿದನು. ಲಕ್ಷ್ಮಣನು ಅಂತೆಯೇ ಮಾಡಿದನು. ಅನಂತರ ರಾಮನು ಅಲ್ಲಿ ಬಂಧುಮಿತ್ರರೊಡನೆ ಭೋಜನವನ್ನು ಮಾಡಿದನು. ಅನಂತರ ಅಲ್ಲಿ ಎರಡು ದಿನಗಳಿದ್ದು ಆಯಾಸವನ್ನು ಪರಿಹರಿಸಿಕೊಂಡು ಮೂರನೆಯ ದಿವಸ ಮುಂದಕ್ಕೆ ಹೊರಟನು. ಅಲ್ಲಲ್ಲೆ ಮಜಲುಗಳನ್ನು ಮಾಡುತ್ತ ಎರಡು ಮೂರುದಿನಗಳವರೆಗೆ ಇರುತ್ತ ಮುಂದು ಮುಂದಕ್ಕೆ ಹೊರಡುತ್ತಿದ್ದನು. ಹೀಗೆ ಪ್ರಯಾಣಮಾಡುತ್ತ ಒಂದು ತಿಂಗಳ ನಂತರ ಮುದ್ಗಲನ ಹಳೆಯ ಆಶ್ರಮಕ್ಕೆ ಬಂದನು. ಇದನ್ನು ತಿಳಿದು ಮುದ್ಗಲನೂ ಹೊಸ ಆಶ್ರಮದಿಂದ ಅಲ್ಲಿಗೆ ಬಂದನು. ರಾಮನು ಅವನನ್ನು ಯಥೋಚಿತವಾಗಿ ಗೌರವಿಸಿದನು. ಕುಶಲಪ್ರಶ್ನೆಗಳಾದನಂತರ ಮುದ್ಗಲನನ್ನು ಕುರಿತು “ನೀನು ಈ ಆಶ್ರಮವನ್ನು ಬಿಡಲು ಕಾರಣವೇನು” ಎಂದನು. ಅದಕ್ಕೆ ಮುದ್ಗಲನು “ಎಲೈ ರಾಮನೆ! ನಾನು ಇಲ್ಲಿ ಬಹುದಿನಗಳ ವರೆಗೆ ತಪಸ್ಸನ್ನು ಮಾಡಿದೆನು. ಅನೇಕ ಮುನಿಗಳು ಇಲ್ಲಿ ತಪಸ್ಸನ್ನು ಮಾಡಿ ಸಿದ್ಧಿಯನ್ನು ಹೊಂದಿರುವರು. ಆದರೆ ಈ ಜಾಗದಲ್ಲಿ ಗಂಗೆಯಾಗಲಿ ಸರಯೂನದಿಯಾಗಲಿ ಪುಣ್ಯತರವಾದ ಮತ್ತಾವನದಿಯಾಗಲಿ ಇಲ್ಲ. ಆದ್ದರಿಂದ ಈ ಜಾಗವನ್ನು ನಾನು ಬಿಟ್ಟುಬಿಟ್ಟೆನು.” ಎಂದನು.

ಅದಕ್ಕೆ ರಾಮನು “ಇಲ್ಲಿ ತಾವು ವಾಸಿಸಬೇಕಾದರೆ ತಮಗೆ ಯಾವ ವಿಧವಾದ ಅನುಕೂಲವಾಗಬೇಕು?” ಎಂದನು. ಅದಕ್ಕೆ ಅವನು “ಗಂಗಾ ಸರಯೂನದಿಗಳು ಇಲ್ಲಿ ಸಂಗಮವಾದರೆ ಆಗ ನಾನು ಇಲ್ಲಿ ವಾಸಿಸುವೆನು” ಎಂದನು. ಅದಕ್ಕೆ ರಾಮನು “ಸರಯೂನದಿಯು ಶ್ರೇಷ್ಠವೆಂದು ನೀನು ತಿಳಿಯಲು ಕಾರಣವೇನು?” ಎಂದು ಕೇಳಿದನು. ಆಗ ಮುದ್ಗಲನು ಇಂತೆಂದನು.

"ಎಲೈ ರಾಮನೆ! ಪೂರ್ವದಲ್ಲಿ ಶಂಖಾಸುರನೆಂಬ ಒಬ್ಬ ರಾಕ್ಷಸನು ವೇದಗಳನ್ನು ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಚೆಲ್ಲಿ ತಾನು ಸಮುದ್ರದಲ್ಲಿ ಅವಿತುಕೊಂಡನು. ಆಗ ವಿಷ್ಣುವು ಮತ್ಸ್ಯಾವತಾರವನ್ನು ತಾಳಿ ಶಂಖಾಸುರನನ್ನು ಕೊಂದು ವೇದಗಳನ್ನು ತಂದು ಬ್ರಹ್ಮನಿಗೆ ಕೊಟ್ಟನು. ಆಗ ಆ ವಿಷ್ಣುವಿನ ಕಣ್ಣುಗಳಿಂದ ಹರ್ಷದಿಂದ ನೀರು ಬಂದು ಕೆಳಗೆ ಬಿದ್ದಿತು. ಆಗ ಅದೇ ಈ ಸರಯೂನದಿಯಾಯಿತು. ಅದು ಹಿಮಾಲಯದಲ್ಲಿ ಹುಟ್ಟಿ ಬಿಂದು ಸರಸ್ಸಿಗೆ ಸೇರಿ ಅಲ್ಲಿಂದ ಹೊರಟು ಮಾನಸಸರೋವರವನ್ನು ಸೇರಿತು. ಆದ್ದರಿಂದ ಅದು ಶ್ರೇಷ್ಠವು.

ಹೀಗಿರುತ್ತಿರಲು ನಿನ್ನ ಪೂರ್ವಿಕನಾದ ವೈವಸ್ವತಮನುವು ಯಾಗಮಾಡಲು ಇಷ್ಟಪಟ್ಟು ಅಯೋಧ್ಯೆಯಲ್ಲಿಯೇ ಎಲ್ಲವನ್ನೂ ಸಿದ್ಧಪಡಿಸಿದನು. ಆಗ ಅವನ ಗುರುವು ಅವನನ್ನು ಕುರಿತು 'ಎಲೈ ದೊರೆಯೆ! ಇಲ್ಲಿ ಶ್ರೇಷ್ಠವಾದ ತೀರ್ಥವಾಗಲಿ ಮಹಾನದಿಯಾಗಲಿ ಇಲ್ಲ. ಆದ್ದರಿಂದ ಇಲ್ಲಿ ಯಾಗವನ್ನು ಮಾಡಬೇಡ. ಒಂದು ವೇಳೆ ಇಲ್ಲಿಯೇ ಮಾಡಬೇಕೆಂದು ಇಷ್ಟವಿದ್ದರೆ ಇಲ್ಲಿಗೆ ಮಹಾನದಿಯು ಬರುವಂತೆ ಮಾಡು" ಎಂದನು. ಆಗ ಮನುವು ಧನುಸ್ಸನ್ನು ಠಂಕಾರಮಾಡುತ್ತ ಬಾಣವನ್ನು ಸೇರಿಸಿ ಬಿಟ್ಟನು. ಆ ಬಾಣವು ಮಾನಸಸರೋವರದವರೆಗೂ ಜಾಗವನ್ನು ಮಾಡಿತು. ಆಗ ಆ ಸರೋವರದಿಂದ ಆ ಶರದ ದಾರಿಯಲ್ಲಿಯೇ ನದಿಯೂ ಬಂದಿತು. ಅಂತೆಯೇ ಮುಂದೆ ಹೋಗಿ ಸಮುದ್ರವನ್ನು ಸೇರಿತು. ಶರದಿಂದ ಈ ನದಿಯು ಬಂದುದರಿಂದ ಇದಕ್ಕೆ 'ಶರಯೂ' ಎಂದು ಹೆಸರಾಯಿತು. ಅನಂತರ ಭಗೀರಥನು ಗಂಗೆಯನ್ನು ತಂದು ಇದಕ್ಕೆ ಸೇರಿಸಿದನು. ಅಲ್ಲಿಂದೀಚೆಗೆ ಇದಕ್ಕೆ ಸಾಗರದವರೆಗೂ ಗಂಗೆಯೆಂಬ ಹೆಸರೇ ಬಂದಿರುತ್ತದೆ.

ಒಂದು ನದಿಯು ಆ ವಿಷ್ಣುವಿನ ಪಾದದಿಂದ ಹೊರಟು ಗಂಗೆಯೆಂದು ಹೆಸರನ್ನು ಹೊಂದಿ ಪವಿತ್ರವಾಗಿದೆ. ಮತ್ತೊಂದು ವಿಷ್ಣುವಿನ ಕಣ್ಣಿನಿಂದ ಹುಟ್ಟಿ ಶರಯೂ ಎಂದು ಪ್ರಸಿದ್ಧವಾಗಿದೆ. ಈ ರೀತಿಯಲ್ಲಿ ಎರಡೂ ಪವಿತ್ರವಾದುವು. ಶರಯೂ ನದಿಯ ಮಹಿಮೆಯನ್ನು ಬಹುದಿನಗಳವರೆಗೆ ಹೇಳಿದರೂ ಮುಗಿಯು ವುದಿಲ್ಲ ಎಂದನು.

ಇದನ್ನು ಕೇಳಿ ರಾಮನು ಲಕ್ಷ್ಮಣನನ್ನು ಕರೆದು "ಎಲೈ ಲಕ್ಷ್ಮಣನೇ! ನನ್ನ ಅಪ್ಪಣೆಯ ಪ್ರಕಾರ ಬಾಣವನ್ನು ಬಿಟ್ಟು ಇಲ್ಲಿಗೆ ಶರಯೂ ನದಿಯು ಬರುವಂತೆ ಮಾಡು" ಎನ್ನಲು ಲಕ್ಷ್ಮಣನು ಅಂತೆಯೇ ಬಾಣವನ್ನು ಬಿಟ್ಟು

ಆ ಶರಯೂ ನದಿಯು ಅಲ್ಲಿಗೆ ಬರುವಂತೆ ಮಾಡಿದನು. ಆಗ ಶರಯೂ ನದಿಯ ಎರಡು ಭಾಗವಾಗಿ ಒಂದು ಶಾಖೆಯು ಮುದ್ಗಲನ ಆಶ್ರಮಕ್ಕೆ ಬರದಿತು. ಅದೂ ಕೂಡ ಗಂಗೆಯೊಡನೆ ಸಂಗಮವಾಯಿತು. ಅಲ್ಲಿ ದದ್ರಿ ಎಂಬ ಪಟ್ಟಣವೂ ನಿರ್ಮಿತವಾಯಿತು. ಅದು ಬದರಿ ಕ್ಷೇತ್ರಕ್ಕಿಂತಲೂ ಪುಣ್ಯದಲ್ಲಿ ಒಂದು ತೂಕ ಹೆಚ್ಚಿನ ಪ್ರಮಾಣವುಳ್ಳದಾಯಿತು.

ಆಗ ರಾಮನು ಸೀತೆಯನ್ನು ಕರೆದು "ಎಲೈ ಸೀತೆಯೇ! ಈ ಮುದ್ಗಲನು ಆಶ್ರಮಕ್ಕೆ ಲಕ್ಷ್ಮಣನು ಶರಯೂ ನದಿಯು ಬರುವಂತೆ ಮಾಡಿರುವನು. ನೀನೂ ಮಿಕ್ಕ ಹೆಂಗಸರೂ ಸರಯೂ ಜಾಹ್ನವಿಗಳ ಸಂಗಮಕ್ಕೆ ಹೋಗಿ ಪೂಜಿಸಿರಿ. ಅನಂತರ ಇಲ್ಲಿಗೆ ಬಂದು ಪೂಜಿಸಿರಿ" ಎಂದನು.

ಇದನ್ನು ಕೇಳಿ ಸೀತೆಯು "ಹಾಗೆಯೇ ಆಗಲಿ" ಎಂದು ಹೇಳಿ ಪೂಜೆಯ ಸಾಮಗ್ರಿಗಳನ್ನು ತರಲು ಡೇರೆಯೊಳಕ್ಕೆ ಹೋದಳು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

|| ಪಂಚಮಸ್ಸರ್ಗಃ ||

|| ರಾಮದಾಸ ಉವಾಚ ||

ತತೋ ಗೃಹೀತ್ವಾ ಸಂಭಾರಾನ್ ಪೂಜಾರ್ಥಂ ಜಾನಕೀ ಜವಾತ್ |
ಕೌಸಲ್ಯಾದಿವಧೂಭಿಸ್ತು ಪುಷ್ಪಕಂ ಚಾರುರೋಹ ಸಾ || ೧ ||

ಕ್ಷಣೇನ ವೃದ್ಧಾಸರಯೂರ್ಯತ್ರ ಸಾ ಗಂಗಯಾ ಶುಭಾ |
ಸಂಗತಾಸ್ತಿ ಮಹಾಶ್ರೇಷ್ಠಾ ತತ್ರ ಪ್ರಾಪ ವಿದೇಹಜಾ || ೨ ||

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

ಐದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು-ಅನಂತರ ಜಾನಕಿಯು ಪೂಜೆಗೋಸ್ಕರ ಸಾಮಗ್ರಿಗಳನ್ನು ಬೇಗನೆ ತೆಗೆದುಕೊಂಡು ಕೌಸಲ್ಯೆಯೇ ಮೊದಲಾದ ಅತ್ತೆಯರೊಡನೆಯೂ ಮಾಂಡವಿಯೇ ಮುಂತಾದ ಓರಗಿತ್ತಿಯರೊಡನೆಯೂ ಪುಷ್ಪಕವನ್ನು ಹತ್ತಿದಳು.

೨. ವೃದ್ಧಸರಯೂನದಿಯು ಗಂಗಾನದಿಯೊಡನೆ ಸೇರಿಕೊಂಡಿರುವ ಜಾಗಕ್ಕೆ ಪುಷ್ಪಕದಲ್ಲಿ ಈ ಸೀತೆಯು ಕ್ಷಣಕಾಲದಲ್ಲಿ ಹೋದಳು.

ಪತಿಂ ವಿನಾಗ್ನಿನಾ ನಾರೀ ಸೀಮಾಮುಲ್ಲಂಘ್ಯ ನ ವ್ರಜೇತ್ ।
ಸ ದೋಷೋತ್ರ ನ ವಿಜ್ಞೇಯಸ್ಸಿತೋದ್ಯೋಗಂ ವಿಹಾಯಸಾ ॥ ೩ ॥

ಉತ್ತೀರ್ಯ ಸಾ ವಿಮಾನಾಗ್ರ್ಯಾನ್ನಮಸ್ಕೃತ್ವಾಥ ಸಂಗಮಂ ।
ಪುರೋಧಸಾ ಚೋದಿತಾ ಸಾ ನಾರಿಕೇಲಂ ಸಮಾಯನಂ ॥ ೪ ॥

ಭಾಗೀರಥ್ಯೈ ಸಮರ್ಪ್ಯಾಥ ಸ್ನಾತ್ವಾ ಚೈವ ಯಥಾವಿಧಿ ।
ಸಂಗಮಂ ಪೂಜಯಾಮಾಸ ಚೋಪಸ್ಕಾರೈರ್ಯಥಾವಿಧಿ ॥ ೫ ॥

ಸುರಾಮಾಂಸೋಪಹಾರೈಶ್ಚ ಪಕ್ವಾನ್ನೈರ್ಬಲಿಭಿಸ್ತಥಾ ।
ಪಟ್ಟಕೂಲಾದಿಭಿರ್ವಸ್ತ್ರೈರ್ಮುಕ್ತಾಹಾರೈಸ್ಸ ಚಂದನೈಃ ॥ ೬ ॥

ದಿವ್ಯೈರಾಭರಣೈಶ್ಚಿತ್ರೈರ್ವ್ಯಾಯನಾದ್ಯೈಸ್ಸವಿಸ್ತರಂ ।
ತತಸ್ಸುವಾಸಿನೀಃ ಪೂಜ್ಯ ಪೂಜಯಿತ್ವಾ ತ್ವರುಂಧತೀಂ ॥ ೭ ॥

---

೩. ಗಂಡನನ್ನೂ ಅಗ್ನಿಯನ್ನೂ ಬಿಟ್ಟು ಪತಿವ್ರತೆಯಾದವಳು ಸೀಮೋಲ್ಲಂಘನವನ್ನು ಮಾಡಬಾರದು. ಹಾಗೆ ಮಾಡಿದಳೆಂಬ ದೋಷವನ್ನು ಈ ಸೀತೋದ್ಯೋಗದಲ್ಲಿ ತಿಳಿದುಕೊಳ್ಳಬಾರದು. ಇವಳು ಆಕಾಶಮಾರ್ಗದಲ್ಲಿ ಹೋದುದರಿಂದ ಆ ನಿಯಮವಿಲ್ಲ.

೪. ಈ ಸೀತೆಯು ಅಂತರಿಕ್ಷಮಾರ್ಗದಲ್ಲಿ ಹೋಗಿ ಸಂಗಮದ ಸಮೀಪದಲ್ಲಿ ವಿಮಾನದಿಂದ ಇಳಿದು ನದಿಗೆ ನಮಸ್ಕರಿಸಿ ಪುರೋಹಿತನು ಹೇಳಿದಂತೆ ತೆಂಗಿನ ಕಾಯನ್ನೂ ಬಾಗಿನವನ್ನೂ ಭಾಗೀರಥಿಗೆ ಸಮರ್ಪಿಸಿದಳು.

೫. ಅನಂತರ ಕ್ರಮವಾಗಿ ಮಂತ್ರವನ್ನು ಹೇಳಿಕೊಂಡು ಸ್ನಾನಮಾಡಿ ಪೂಜೆಯ ಪದಾರ್ಥಗಳಿಂದ ಆ ಸಂಗಮವನ್ನು ಪೂಜೆಮಾಡಿದಳು.

೬-೭. ಸುರೆ, ಮಾಂಸ, ಮುಂತಾದುವುಗಳಿಂದಲೂ ಪಕ್ವಾನ್ನಗಳಿಂದಲೂ ಇನ್ನೂ ಅನೇಕ ಬಲಿಗಳಿಂದಲೂ ಪಟ್ಟೆವಸ್ತ್ರಗಳಿಂದಲೂ ಮುಕ್ತಾಹಾರಗಳಿಂದಲೂ ಚಂದನದಿಂದಲೂ ದಿವ್ಯವಾದ ಆಭರಣಗಳಿಂದಲೂ ಇನ್ನೂ ಅನೇಕವಾದ ಬಾಗಿನಗಳಿಂದಲೂ ಆ ನದಿಯನ್ನು ಪೂಜಿಸಿದಳು. ಅನಂತರ ಸುವಾಸಿನಿಯರನ್ನೂ ಅರುಂಧತಿಯನ್ನೂ ಪೂಜಿಸಿದಳು.

ವಸಿಷ್ಠಂ ಬ್ರಾಹ್ಮಣಾಂಶ್ಚಾಪಿ ಭೋಜಯಾಮಾಸ ವಿಸ್ತರೈಃ ।
ಪಟ್ಟಕೂಲಾದಿಭಿರ್ವಸ್ತ್ರೈಃ ದಿವ್ಯೈರಾಭರಣಾದಿಭಿಃ ॥ ೮ ॥

ಸುವಾಸಿನೀಃ ಬ್ರಾಹ್ಮಣಾಂಶ್ಚ ತೋಷಯಾಮಾಸ ಮೈಥಿಲೀ ।
ಸ್ವಯಂ ಕೃತ್ವೋಪಹಾರಂ ಚ ರಾಘವಾರ್ಥಮುಪೋಷಿತಾ ॥ ೯ ॥

ಯಯೌ ಯಾನೇನ ಶೀಘ್ರಂ ಸಾ ರಾಘವಸ್ಯಾಂತಿಕಂ ಮುದಾ ।
ತತಶ್ಶ್ರೀರಾಮಚಂದ್ರೋಽಪಿ ಸೀತಯಾ ಗುರುಣಾ ದ್ವಿಜೈಃ ॥ ೧೦ ॥

ಗಂಗಯೋಸ್ಸಂಗಮೇ ಚಕ್ರೇ ಪೂಜನಂ ಸ ಯಥಾವಿಧಿ ।
ಯಥಾಕೃತಂ ಚ ವೈದೇಹ್ಯಾ ತಸ್ಮಾಚ್ಚಾಪಿ ಶತಾಧಿಕಂ ॥ ೧೧ ॥

ತತಸ್ಸಹಸ್ರಶೋ ವಿಪ್ರಾನ್ ಭೋಜಯಾಮಾಸ ಸಾದರಂ ।
ದತ್ವಾ ದಾನಾನ್ಯನೇಕಾನಿ ಗೋಹಸ್ತಿರಥವಾಜಿನಾಂ ॥ ೧೨ ॥

೮–೯. ಅನಂತರ ವಸಿಷ್ಠನನ್ನೂ ಬ್ರಾಹ್ಮಣರನ್ನೂ ಪೂಜಿಸಿದಳು. ಅಲ್ಲದೆ ಅವರೆಲ್ಲರಿಗೂ ಭೋಜನವನ್ನು ಮಾಡಿಸಿದಳು. ಅನಂತರ ಬ್ರಾಹ್ಮಣ ಸುವಾಸಿಸಿಯರಿಗೆ ಪಟ್ಟೆ ವಸ್ತ್ರಗಳನ್ನು ಕೊಟ್ಟು ಸಂತೋಷಪಡಿಸಿದಳು. ಅನಂತರ ತಾನು ಸ್ವಲ್ಪ ಉಪಾಹಾರವನ್ನು ಮಾಡಿಕೊಂಡು ರಾಮನಿಗೋಸ್ಕರವಾಗಿ ಉಪವಾಸವಿದ್ದಳು.

೧೦. ಅನಂತರ ಪುಷ್ಪಕದಲ್ಲಿ ಕುಳಿತು ರಾಘವನ ಬಳಿಗೆ ಹೋದಳು. ಅಲ್ಲಿ ಶ್ರೀರಾಮಚಂದ್ರನು ಸೀತೆಯೊಡನೆಯೂ ಗುರುವಿನೊಡನೆಯೂ ಹೊಸ ಸರಯೂ ಗಂಗಾನದಿಗಳ ಸಂಗಮದಲ್ಲಿ ಪೂಜೆಯನ್ನು ಕ್ರಮವಾಗಿ ಮಾಡಿದನು. ವೈದೇಹಿಯು ಹಳೆಯಸಂಗಮದಲ್ಲಿ ಪೂಜೆಮಾಡಿದುದಕ್ಕಿಂತಲೂ ಇಲ್ಲಿ ನೂರರಷ್ಟು ಹೆಚ್ಚಾಗಿಯೂ ಅಟ್ಟಹಾಸದಿಂದಲೂ ಆ ರಾಮನು ಪೂಜೆಯನ್ನು ಮಾಡಿದನು.

೧೨. ಅನಂತರ ಸಾವಿರಾರು ಜನ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದನು. ಅವರಿಗೆಲ್ಲರಿಗೂ ಗೋವು, ಆನೆ, ಕುದುರೆ ಹಣ ಮುಂತಾದ ದಾನಗಳನ್ನು ಕೊಟ್ಟನು.

ತತೋ ಭುಕ್ತ್ವಾ ಸ್ವಯಂ ರಾಮಸ್ಸೀತಯಾ ಬಂಧುಭಿರ್ಜನೈಃ ।
ಸಿಂಹಾಸನೇ ಸಮಾಸೀನೋ ಸೌಮಿತ್ರಿಮಿದಮಬ್ರವೀತ್ ॥ ೧೩ ॥

ಜ್ಞಾತವ್ಯೋ ಮಮ ವಾಸೋತ್ರ ರಾತ್ರೀರ್ನವ ರಘೂತ್ತಮ ।
ಸೀಮಾಚಾರ್ಂ ಕುರುಷ್ವ ತ್ವಂ ಶಾಸನಂ ಯನ್ಮಯೋಚ್ಯತೇ ॥ ೧೪ ॥

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥಾಶ್ರಮೀ ಯತಿಃ ।
ಯಃ ಕಶ್ಚಿದ್ವಾ ಸಮಾಯಾತಿ ಪಥಿಕಸ್ಸ ಮಮಾಜ್ಞಯಾ ॥ ೧೫ ॥

ಮಯಾ ಸಂಪೂಜಿತೋ ನೈವ ಗಂತುಂ ದೇಯಸ್ಸಮಂತತಃ ।
ಮಯಾದೃಷ್ಟೋ ಗತಃ ಕಶ್ಚಿತ್ತದಾ ವಃ ಶಾಸನಂ ಮಮ ॥ ೧೬ ॥

---

೧೩. ಅನಂತರ ರಾಮನು ಬಂಧುಗಳೊಡನೆಯೂ ಸೀತೆಯೊಡನೆಯೂ ಭೋಜನವನ್ನು ಮಾಡಿದನು. ಅನಂತರ ಸಿಂಹಾಸನದಲ್ಲಿ ಕುಳಿತು ಸೌಮಿತ್ರಿಯನ್ನು ಕರೆದು ಇಂತೆಂದನು.

೧೪. ಎಲೈ ಲಕ್ಷ್ಮಣನೇ ! ನಾನು ಒಂಭತ್ತು ರಾತ್ರಿಗಳಕಾಲ ಇಲ್ಲಿ ವಾಸಮಾಡುತ್ತೇನೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ನೀನು ಮಾಡು. ಅಲ್ಲದೆ ನನ್ನ ಅಪ್ಪಣೆಯಂತೆ ನಡೆಯುತ್ತಿರು.

೧೫–೧೬. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ ಮತ್ತೆ ಯಾವ ರೀತಿಯವನೇ ಆಗಲಿ ಈ ದಾರಿಯಲ್ಲಿ ಬರುತ್ತ ನನ್ನ ಈ ವಾಸದಜಾಗಕ್ಕೆ ಬಾರದೆ ನನ್ನಿಂದ ಪೂಜಿಸಲ್ಪಡದೆ ಅವನು ಮುಂದಕ್ಕೆ ಹೋಗಲೇ ಕೂಡದು. ಎಲ್ಲಾ ಕಡೆಗೂ ಈ ರೀತಿಯಾಗಿ ದೂತರನ್ನು ಕಳುಹಿಸಿ ಅಪ್ಪಣೆಯನ್ನು ಮಾಡು. ಬಂದವನು ಯಾವನಾದರೂ ನನ್ನ ಕಣ್ಣಿಗೆ ಬೀಳದೆ ಹೋದ ಪಕ್ಷದಲ್ಲಿ ನನ್ನ ಅಪ್ಪಣೆಯು ನಿನ್ನ ಮೇಲಿರುವುದು. ಎಂದರೆ ಶಿಕ್ಷಿಸುತ್ತೇನೆ. ಎಂದು ತಿಳಿ.

ತದ್ರಾಮವಚನಂ ಶ್ರುತ್ವಾ ತಥಾ ಚಕ್ರೇ ಸ ಲಕ್ಷ್ಮಣಃ ।
ಚ್ಯವನೋ ಮುನಿವರ್ಯಸ್ತು ಜ್ಞಾತ್ವಾ ರಾಮಂ ಸಮಾಗತಂ ॥ ೧೭ ॥

ದರ್ಶನಾರ್ಥಂ ಯಯೌ ಶೀಘ್ರಂ ರಾಮೇಣಾಪಿ ಸುಪೂಜಿತಃ ।
ಸ್ಥಿತ್ವಾಸನೇ ವಸ್ತ್ರಗೇಹೇ ರಾಘವಂ ವಾಕ್ಯಮಬ್ರವೀತ್ ॥ ೧೮ ॥

ರಾಮ ರಾಜೀವಪತ್ರಾಕ್ಷ ಗಂಗಾಯಾ ದಕ್ಷಿಣೇ ತಟೇ ।
ಆಶ್ರಮಃ ಕೀಕಟೇ ದೇಶೇ ಮಮಾಸ್ತಿ ಪರಮಶ್ಶುಭಃ ॥ ೧೯ ॥

ಕಂದಮೂಲಫಲಾರ್ಥಂ ಹಿ ವಿಘ್ನಂ ಕುರ್ವಂತಿ ಮಾಗಧಾಃ ।
ಮಮಾಶ್ರಮೇ ರಾಮದೂತಾಸ್ತೇಭ್ಯೋ ರಕ್ಷಾ ವಿಧೀಯತಾಂ ॥ ೨೦ ॥

ಚ್ಯವನಸ್ಯ ವಚಃ ಶ್ರುತ್ವಾ ತಣತ್ಕೃತ್ಯ ಮಹದ್ಧನುಃ ।
ಬಾಣಂ ಮುಕ್ತ್ವಾಶ್ರಮಾತ್ತಸ್ಯ ಪರಿತಃ ಪರಿಖೋಪಮಾಂ ॥ ೨೧ ॥

---

೧೭. ರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ಅದೇ ರೀತಿಯಾಗಿ ಎಲ್ಲಾ ಕಡೆಗೂ ಅಪ್ಪಣೆಮಾಡಿದನು. ಹೀಗಿರುತ್ತಿರುವಾಗ ಮುನಿಶ್ರೇಷ್ಠನಾದ ಚ್ಯವನನು ರಾಮನು ಇಲ್ಲಿಗೆ ಬಂದಿರುವ ವಿಷಯವನ್ನು ತಿಳಿದನು.

೧೮. ಆ ರಾಮನ ದರ್ಶನಕ್ಕೋಸ್ಕರವಾಗಿ ಬಂದು ದರ್ಶನಮಾಡಿ ಆ ರಾಮನಿಂದ ಪೂಜಿತನಾದನು. ಅನಂತರ ಆ ಗುಡಾರದಲ್ಲಿ ಕುಳಿತುಕೊಂಡು ಆ ರಾಮನನ್ನು ಕುರಿತು ಇಂತೆಂದನು.

೧೯-೨೦. ಎಲೈ ರಾಜೀವಲೋಚನನಾದ ರಾಮನೇ! ಈ ಗಂಗೆಯ ದಕ್ಷಿಣದಡದಲ್ಲಿ ಕೀಕಟಪ್ರದೇಶದಲ್ಲಿ ನನ್ನ ಆಶ್ರಮವು ಇದೆ. ಅದು ಬಹು ಪವಿತ್ರವಾದುದು. ಗೆಡ್ಡೆ, ಗೆಣಸು, ಹಣ್ಣುಗಳಿಗೋಸ್ಕರ ಮಾಗಧರಾದ ದೂತರು ತೊಂದರೆಕೊಡುತ್ತಿರುವರು. ಅವರು ಹಾಗೆಮಾಡದಂತೆ ಕಟ್ಟುಮಾಡಬೇಕು. ಎಂದನು

೨೧. ರಾಮನು ಚ್ಯವನನ ಈ ಮಾತನ್ನು ಕೇಳಿ ಒಡನೆಯೇ ತನ್ನ ಧನುಸ್ಸನ್ನು ತೆಗೆದುಕೊಂಡು ಠಣ ಎಂದು ಶಬ್ದಮಾಡುತ್ತ ಬಾಣವನ್ನು ಬಿಟ್ಟು ಆ ಆಶ್ರಮದ ಸುತ್ತಲೂ ಒಂದು ಕಂದಕದಂತೆ ಮಾಡಿಬಿಟ್ಟನು.

ಚಕಾರ ರೇಖಾಂ ಬಾಣೇನ ದುಷ್ಟೈರ್ಗಂತುಂ ಚ ಹ್ಯಕ್ಷಮಾಂ ।
ರಾಮಬಾಣಕೃತಾ ರೇಖಾ ಯತ್ರ ತತ್ರ ಪುರೀ ಶುಭಾ ॥ ೨೨ ॥

ರಾಮರೇಖೇತಿ ನಾಮ್ನಾಸೀತ್ತಥಾ ಚೈವ ಮಹಾನದೀ ।
ಚ್ಯವನಶ್ಚ ತದಾ ಹೃಷ್ಟೋ ರಾಘವಂ ವಾಕ್ಯಮಬ್ರವೀತ್ ॥ ೨೩ ॥

ನಿಂದ್ಯಸ್ಸ ಕೀಕಟೋ ದೇಶೋ ವರ್ತತೇ ರಘುನಂದನ ।
ತವ ವಾಕ್ಯಾದ್ಭವಿಷ್ಯಂತಿ ತತ್ರ ಪುಣ್ಯಸ್ಥಲಾನಿ ಹಿ ॥ ೨೪ ॥

ತರ್ಹಿ ತ್ವಯಾದ್ಯ ವಕ್ತವ್ಯಂ ವಚನಂ ಮೇ ಸುಖಾಸ್ಪದಂ ।
ತನ್ಮುನೇರ್ವಚನಂ ಶ್ರುತ್ವಾ ವಾಕ್ಯಂ ರಾಮಸ್ತಮಬ್ರವೀತ್ ॥ ೨೫ ॥

ಕೀಕಟೇಷು ಗಯಾ ಪುಣ್ಯಾ ನದೀ ಪುಣ್ಯಾ ಪುನಃ ಪುನಃ ।
ಆಶ್ರಮಸ್ತೇ ಮಹಾಪುಣ್ಯಃ ಪುಣ್ಯಂ ರಾಜವನಂ ವರಂ ॥ ೨೬ ॥

೨೨–೨೩. ಆ ರೀತಿಯಾಗಿ ಮಾಡಿ ದುಷ್ಟರು ಒಳಗೆ ಹೋಗದ ಹಾಗೆ ಮಾಡಿದನು. ರಾಮನು ತನ್ನ ಬಾಣದಿಂದ ರೇಖೆಯನ್ನು ಮಾಡಿದ ಜಾಗದಲ್ಲಿ ರಾಮರೇಖೆಯೆಂಬ ಒಂದು ದೊಡ್ಡ ನದಿಯೇ ಆಯಿತು. ಚ್ಯವನನು ಅದರಿಂದ ಬಹು ಸಂತೋಷಪಟ್ಟು ಇಂತೆಂದನು.

೨೪. ಎಲೈ ರಾಮಚಂದ್ರನೇ ! ಈ ಕೀಕಟ ಪ್ರದೇಶವು ಬಹು ನಿಂದ್ಯವಾಗಿದೆ. ನಿನ್ನ ಮಾತಿನಂತೆ ಇಲ್ಲಿ ಪುಣ್ಯಸ್ಥಳಗಳುಂಟಾಗಲಿ.

೨೫. ಆದ್ದರಿಂದ ನನಗೆ ಸಂತೋಷವುಂಟಾಗುವಂತೆ ನೀನು ಆ ರೀತಿಯಾಗಿ ಹೇಳಬೇಕು. ಎನ್ನಲು ಇದನ್ನು ಕೇಳಿ ರಾಮನು ಇಂತೆಂದನು.

೨೬–೨೭. ಎಲೈ ಮುನೀಶ್ವರನೇ ! ಈ ಕೀಕಟಪ್ರದೇಶದಲ್ಲಿ ಗಯೆಯು ಬಹು ಪುಣ್ಯವಾದುದು. ಅದಕ್ಕಿಂತಲೂ ಈ ನದಿಯು ಪುಣ್ಯವಾದುದು. ಅದಕ್ಕಿಂತಲೂ ನಿನ್ನ ಈ ಆಶ್ರಮವು ಬಹು ಪುಣ್ಯವುಳ್ಳದ್ದಾಗಲಿ. ಅದಕ್ಕಿಂತಲೂ ಈ

ಭವಿಷ್ಯತಿ ನ ಸಂದೇಹೋ ಮಮ ವಾಕ್ಯಾನ್ಮುನೀಶ್ವರ ।
ಚ್ಯವನಸ್ತೇನ ಸಂತುಷ್ಟೋ ರಾಮಂ ಪೃಷ್ಟ್ವಾಽಽಶ್ರಮಂ ಯಯೌ ॥ ೨೭ ॥

ಏತಸ್ಮಿನ್ನಂತರೇ ತಸ್ಯ ಸತ್ರೇ ರಾಮೇಣ ನಿರ್ಮಿತೇ ।
ಪ್ರತ್ಯಹಂ ಕೋಟಿಶೋ ವಿಪ್ರಾ ಭುಂಜಂತಿ ಯತಿಭಿಸ್ಸಹ ॥ ೨೮ ॥

ಕುಂಭೋದರೋ ಮುನಿಃ ಪ್ರಾಗಾತ್ಸೀಮಾಚಾರಾಂತಿಕಂ ಮುದಾ ।
ಗಂಗಾಯಾತ್ರಾಪ್ರಸಂಗೇನ ಗಯಾಂ ಗಂತುಂ ಸಮುದ್ಯತಃ ॥ ೨೯ ॥

ಸಮಾಗತಃ ಪ್ರಯಾಗಾಚ್ಚ ದೂತಾನ್ ದೃಷ್ಟ್ವಾಬ್ರವೀದ್ವಚಃ ।
ಹೇ ದೂತಾ ಉತ್ತರಂ ದೇಯಂ ಯೂಯಂ ಕಸ್ಯಾಜ್ಞಯಾ ಸ್ಥಿತಾಃ॥೩೦॥

ರಾಜವನವು ಇನ್ನೂ ಪುಣ್ಯವುಳ್ಳದ್ದಾಗಲಿ. ಎಲೈ ಮುನೀಶ್ವರನೇ ! ಈ ರೀತಿಯಾಗಿ ನನ್ನ ಮಾತಿನಿಂದ ಉಂಟಾಗುತ್ತದೆ. ಸಂದೇಹವಿಲ್ಲ ಎಂದನು. ಇದರಿಂದ ಚ್ಯವನನು ಸಂತೋಷಪಟ್ಟು ರಾಮನಿಗೆ ಹೇಳಿ ಸಂತೋಷದಿಂದ ಹೊರಟು ಹೋದನು.

೨೮. ರಾಮನು ಇಲ್ಲಿ ಹೀಗಿರುತ್ತಿರಲು ಅಲ್ಲಿ ಅನ್ನಸತ್ರವನ್ನು ನಿರ್ಮಿಸಿದ್ದನು. ಅವನು ನಿರ್ಮಿಸಿರುವ ಅನ್ನಸತ್ರದಲ್ಲಿ ಪ್ರತಿದಿನವೂ ಬ್ರಾಹ್ಮಣರೂ ಯತಿಗಳೂ ಇತರರೂ ಕೋಟಿಗಟ್ಟಲೆಯಾಗಿ ಊಟಮಾಡುತ್ತಿದ್ದರು.

೨೯. ಹೀಗಿರುತ್ತಿರಲು ಕುಂಭೋದರನೆಂಬ ಮುನಿಯು ಗಂಗಾಯಾತ್ರೆಯನ್ನು ಮಾಡುತ್ತ ಪ್ರಯಾಗದಿಂದ ಗಯೆಗೆ ಹೋಗಲು ಪ್ರಯತ್ನಪಟ್ಟು ಈ ರಾಮನು ಇದ್ದಮಾರ್ಗದಿಂದ ಬಂದನು.

೩೦. ಅಲ್ಲಿ ದೂತರಿದ್ದುದನ್ನು ನೋಡಿ ಅವರನ್ನು ಕುರಿತು ಎಲೈ ದೂತರಿರಾ ! ನೀವು ಯಾರ ಅಪ್ಪಣೆಯಂತೆ ಇಲ್ಲದ್ದೀರಿ ? ಇದಕ್ಕೆ ಉತ್ತರವನ್ನು ಕೊಡಿರಿ.

ಆಕಾಶಚುಂಬಿನಶ್ಚಿತ್ರಾ ಇಮೇಽಗ್ರೇ ಕಸ್ಯ ವೈ ಧ್ವಜಾಃ ।
ಹನುಮತ್ಕೋವಿದಾರಾಂಡಜೇಶಬಾಣಾಂಕಿತಾಶ್ಶುಭಾಃ ॥ ೩೧ ॥

ಶ್ವೇತನೀಲಹರಿತ್ಪೀತವರ್ಣಾಃ ಪರಮಶೋಭನಾಃ ।
ದೃಶ್ಯಂತೇಽಗ್ರೇ ಪತಾಕಾಶ್ಚ ಶ್ರೂಯತೇ ಜಯನಿಸ್ವನಃ ॥ ೩೨ ॥

ತತ್ತಸ್ಯ ವಚನಂ ಶ್ರುತ್ವಾ ದೂತಾಃ ಪ್ರೋಚುಸ್ತ್ವರಾನ್ವಿತಾಃ ।
ರಾಮೋ ರಾಜೀವಪತ್ರಾಕ್ಷೋ ಯೋಧ್ಯಾಯಾಃ ಪಾಲಕಃ ಪ್ರಭುಃ॥ ೩೩ ॥

ಸೋಽಗ್ರೇ ಯಾತ್ರಾರ್ಥಮಾಯಾತೋ ವಯಂ ತಸ್ಯಾಜ್ಞಯಾ ಸ್ಥಿತಾಃ ।
ಸತ್ರಮನ್ನಸ್ಯ ರಾಮೇಣ ನಿರ್ಮಿತಂ ಚಾತ್ರ ವರ್ತತೇ ॥ ೩೪ ॥

---

೩೧. ಆಕಾಶವನ್ನು ಮುಟ್ಟುತ್ತಿರುವ ಈ ಎದುರಿಗೆ ಕಾಣುತ್ತಿರುವ, ಧ್ವಜಗಳು ಯಾರವು ? ಹನುಮ, ಕೋವಿದಾರ, ಗರುಡ, ಬಾಣರೂಪವಾದ ಚಿಹ್ನೆಗಳು ಅವುಗಳಲ್ಲಿವೆಯಲ್ಲ !

೩೨. ಬಿಳಿಯಬಣ್ಣದ, ನೀಲಿಯಬಣ್ಣದ, ಹಸರುಬಣ್ಣದ, ಅರಸಿನಬಣ್ಣದ ಪತಾಕೆಗಳು ಹಾರಾಡುತ್ತಿವೆಯಲ್ಲ ! ಅಲ್ಲದೆ ಜಯಧ್ವನಿಯು ಬೇರೆ ಕೇಳಿ ಬರುತ್ತಿದೆಯಲ್ಲ ! ಇದೇನು ? ಎಂದು ಕೇಳಿದನು.

೩೩. ಆ ಮುನಿಯ ಮಾತನ್ನು ಕೇಳಿ ದೂತರು ಸಂತೋಷದಿಂದ ಇಂತೆಂದರು. ಇಲ್ಲಿ ರಾಜೀವಪತ್ರಾಕ್ಷನಾದ ರಾಮನಿರುವನು ಅವನು ಅಯೋಧ್ಯೆಗೆ ರಾಜನು.

೩೪. ಅವನು ಯಾತ್ರೆಗೋಸ್ಕರ ಬಂದಿರುವನು. ಮುಂದೆ ಬಿಡಾರ ಮಾಡಿರುವನು ಅವನ ಅಪ್ಪಣೆಯಂತೆ ಅವನ ದೂತರಾದ ನಾವು ಇಲ್ಲಿ ನಿಂತಿರುವೆವು. ರಾಮನು ಇಲ್ಲಿ ಅನ್ನಸತ್ರವನ್ನು ನಿರ್ಮಿಸಿರುವನು.

ಕ್ಷುಧಾರ್ತಸ್ತ್ವಂ ಸುಖಂ ಗಚ್ಛ ಭುಕ್ತ್ವಾ ಪೀತ್ವಾ ಸುಖಂ ವ್ರಜ ।
ತತ್ತೇಷಾಂ ವಚನಂ ಶ್ರುತ್ವಾ ಪರಿವೃತ್ಯ ಮುನಿಃ ಪುನಃ ॥ ೩೫ ॥

ಆಗತೋ ಯೇನ ಮಾರ್ಗೇಣ ತೇನ ಮಾರ್ಗೇಣ ಸಂಯಯೌ ।
ಗಚ್ಛಂತಂ ತಂ ಮುನಿಂ ದೃಷ್ಟ್ವಾ ರಾಮದೂತಾಸ್ತ್ವರಾನ್ವಿತಾ ॥ ೩೬ ॥

ರುಧ್ವಾ ಮಾರ್ಗಂ ಮುನೇಸ್ತಸ್ಯ ವಚನಂ ಪ್ರೋಚುರಾದರಾತ್ ।
ಕಿಮರ್ಥಂ ತ್ವಂ ಪರಾವೃತ್ಯ ಮುನೇ ಗಚ್ಛಸಿ ವೈ ಪುನಃ ॥ ೩೭ ॥

ಆಗತೋಸಿ ಯಥಾ ಯೇ ನ ತೇನೈವ ತ್ವಂ ವದಸ್ವ ನಃ
ಇತಿ ತೇಷಾಂ ವಚಃ ಶ್ರುತ್ವಾ ನಿರ್ಬಂಧಾನ್ಮುನಿರವ್ಯಸೌ ॥ ೩೮ ॥

ತೂಷ್ಣೀಂ ಸ್ಥಿತ್ವಾ ಕ್ಷಣಂ ಧ್ಯಾತ್ವಾ ನಿಶ್ಚಯಂ ಕೃತವಾನ್ ಹೃದಿ ।
ಇದಾನೀಂ ರಾಘವೋಯೋಧ್ಯಾಂ ಯಾತ್ರಾಂ ಕೃತ್ವಾ ಗಮಿಷ್ಯತಿ ॥ ೩೯ ॥

೩೫-೩೬. ಹಸಿದುಕೊಂಡಿರುವ ನೀನು ಅಲ್ಲಿಗೆ ಸುಖವಾಗಿ ಹೋಗು. ಅಲ್ಲಿ ಊಟಮಾಡಿ ಬೇಕಾದಂತೆ ಪಾನಗಳನ್ನು ಕುಡಿದು ಮುಂದಕ್ಕೆ ಸುಖವಾಗಿ ಹೋಗು. ಎನ್ನಲು ಅವರ ಮಾತನ್ನು ಕೇಳಿ ಆ ಮುನಿಯು ಮತ್ತೆ ಹಿಂತಿರುಗಿ ತಾನು ಬಂದ ದಾರಿಯಿಂದಲೇ ಹಿಂದಕ್ಕೆ ಹೊರಟನು.

೩೭. ಆ ಮುನಿಯು ಹಿಂದಕ್ಕೆ ಹೋಗುತ್ತಿರಲು ರಾಮದೂತರು ಅವಸರದಿಂದ ಓಡಿಹೋಗಿ ಅವನ ದಾರಿಯನು ಅಡ್ಡಗಟ್ಟಿ ಇಂತೆಂದರು. ಎಲೈ ಮುನಿಯೆ ನೀನೇಕೆ ಹಿಂತಿರುಗಿ ಹೋಗುತ್ತಿದೀಯೆ ?

೩೮-೩೯. ನೀನು ಯಾವ ಕಾರಣದಿಂದ ಹೀಗೆ ಹಿಂತಿರುಗಿದೆ ? ಅದನ್ನು ನಮಗೆ ಹೇಳು ಎಂದು ನಿರ್ಬಂಧಪಡಿಸಲು ಅವರ ಮಾತನ್ನು ಕೇಳಿ ಆ ಮುನಿಯು ಸುಮ್ಮನೆ ನಿಂತುಕೊಂಡಿದ್ದು ಕ್ಷಣಕಾಲ ಯೋಚಿಸಿ ಮನಸ್ಸಿನಲ್ಲಿ ಇಂತೆಂದು ನಿಶ್ಚಯಿಸಿಕೊಂಡನು. ಈಗ ರಾಮನು ಯಾತ್ರೆಯನ್ನು ಮಾಡಿಕೊಂಡು ಅಯೋಧ್ಯೆಗೆ ಹೋಗುವನು.

ನಾನಾದೇಶೇಷು ಸರ್ವತ್ರ ನೃಣಾಂ ತದ್ದರ್ಶನಂ ಕಥಂ |
ಭವಿಷ್ಯತಿ ತಥಾನ್ಯತ್ರ ರಾಮತೀರ್ಥಾನಿ ಭೂತಲೇ ॥ ೪೦ ॥

ಭವಿಷ್ಯಂತಿ ಕಥಂ ನೃಣಾಂ ಮಹತ್ಪಾಪಹರಾಣಿ ಚ |
ಕಥಂ ರಾಮೇಶ್ವರಾ ಭೂಮ್ಯಾಂ ಭವಿಷ್ಯಂತಿ ಗತಿಪ್ರದಾಃ ॥ ೪೧ ॥

ಅತಃ ಕಿಂಚಿತ್ಕರೋಮ್ಯತ್ರ ಯೇನ ರಾಮಸ್ತು ಭೂತಲೇ |
ಯಾತ್ರೋದ್ದೇಶೇನ ಸರ್ವತ್ರ ಸೀತಯಾ ಸಹ ಯಾಸ್ಯತಿ ॥ ೪೨ ॥

ಅನೇನ ಲೋಕಶಿಕ್ಷಾಪಿ ಭವಿಷ್ಯತಿ ನ ಸಂಶಯಃ |
ಇತಿ ನಿಶ್ಚಿತ್ಯ ಸ ಮುನಿಃ ಪ್ರಾಹ ದೂತಾನ್ ಸ್ಮಯನ್ನಿವ ॥ ೪೩ ॥

೪೦-೪೧. ಹಾಗೆಯೇ ಹಿಂದಕ್ಕೆ ಹೋದರೆ ಬೇರೆ ಬೇರೆ ಪ್ರದೇಶಗಳಲ್ಲಿರುವ ಜನಗಳಿಗೆ ಅವನ ದರ್ಶನವು ಹೇಗಾಗಬೇಕು? ಅವರಿಗೆಲ್ಲ ಇಲ್ಲದೆ ಹೋಗುವುದು. ಅವರಿಗೆಲ್ಲ ದರ್ಶನವು ಆಗಬೇಕು. ಭೂಮಿಯಲ್ಲಿ ಅನೇಕ ಸ್ಥಳಗಳಲ್ಲಿ ರಾಮ ತೀರ್ಥವು ಆಗಬೇಕು. ಅವೆಲ್ಲದರಿಂದಲೂ ಜನಗಳ ಪಾಪವು ಹೋಗಬೇಕು. ರಾಮೇಶ್ವರರ ಸ್ಥಾನಗಳುಂಟಾಗಬೇಕು. ಅವು ಎಲ್ಲರಿಗೂ ಗತಿಯನ್ನು ಕೊಡಬೇಕು.

೪೨. ಆದ್ದರಿಂದ ಈ ರಾಮನು ಸೀತೆಯೊಡನೆ ಯಾತ್ರೆಯ ಉದ್ದೇಶದಿಂದ ಎಲ್ಲಾ ಕಡೆಗೂ ಹೋಗುವಂತೆ ಯಾವುದಾದರೂ ಒಂದು ಕೆಲಸವನ್ನು ಮಾಡಬೇಕು.

೪೩. ರಾಮನು ಹೀಗೆ ಸಂಚರಿಸುವುದರಿಂದ ಲೋಕಕ್ಕೆ ಬುದ್ಧಿಯನ್ನು ಕಲಿಸಿಕೊಟ್ಟಂತಾಗುವುದು. ಸಂಶಯವಿಲ್ಲ. ಈ ರೀತಿಯಾಗಿ ಆ ಮುನಿಯು ನಿಶ್ಚಯಿಸಿಕೊಂಡು ದೂತರನ್ನು ಕುರಿತು ನಗುತ್ತ ಇಂತೆಂದನು.

ದೂತಾಃ ಶ್ರುಣುತ ಮೇ ವಾಕ್ಯಂ ಹತೋ ಯೇನ ದಶಾನನಃ ।
ಬ್ರಹ್ಮಪುತ್ರೋ ಬಂಧುಪುತ್ರೈರ್ನ ಕೃತಂ ತೀರ್ಥಸೇವನಂ ॥ ೪೪ ॥

ತಥಾ ಯಜ್ಞಾಃ ಕೃತಾ ನೈವ ತಸ್ಯಾನ್ನಂ ನಾಹಮುಶ್ನಿಯಾಂ ।
ದೀಯತಾಂ ಮಮ ಮಾರ್ಗೋ ಹಿ ಭವದ್ಭಿರ್ಯ ವಚನಂ ಮಮ ॥ ೪೫ ॥

ಕಥನೀಯಂ ರಾಘವಾಯ ಯಾತ್ರಾ ಯಜ್ಞಾನ್ ಕರಿಷ್ಯತಿ ।
ಇತಿ ತಸ್ಯ ವಚಃ ಶ್ರುತ್ವಾ ವಿಸ್ಮಯಾವಿಷ್ಟಮಾನಸಾಃ ॥ ೪೬ ॥

ದತ್ವಾ ಮಾರ್ಗಂ ಶಾಪಭೀತ್ಯಾ ದೂತಾ ರಾಮಾಂತಿಕಂ ಯಯುಃ ।
ರಾಮಂ ನತ್ವಾ ಶನೈಸ್ತಸ್ಯ ಕರ್ಣೇ ವೃತ್ತಂ ನ್ಯವೇದಯನ್ ॥ ೪೭ ॥

---

೪೪. ಎಲೈ ದೂತರಿರಾ ! ನಾನು ಹೇಳುವುದನ್ನು ಕೇಳಿರಿ. ಆ ರಾಮನು ಬ್ರಹ್ಮನ ಮೊಮ್ಮಗನಾದ ರಾವಣನನ್ನೂ ಅವನ ತಮ್ಮಂದಿರನ್ನೂ ಮಕ್ಕಳನ್ನೂ ಕೊಂದಿರುವನು. ಇಂತಹ ಬ್ರಹ್ಮಹತ್ಯೆ ಪಾಪವನ್ನು ಮಾಡಿದರೂ ಅವನು ತೀರ್ಥ ಯಾತ್ರೆಗಳನ್ನು ಸೇವಿಸಲಿಲ್ಲ.

೪೫. ಅದೂ ಅಲ್ಲದೆ ಆ ಬ್ರಹ್ಮಹತ್ಯೆಯು ಹೋಗುವಂತಹ ಯಾಗಗಳನ್ನೂ ಮಾಡಿಲ್ಲ. ಅಂತಹವನ ಅನ್ನವನ್ನು ನಾನು ಹೇಗೆ ಊಟಮಾಡಲಿ ? ಊಟ ಮಾಡುವುದಿಲ್ಲ. ನನಗೆ ದಾರಿಯನ್ನು ಬಿಟ್ಟು ಬಿಡಿರಿ. ನಾನು ಹೋಗುತ್ತೇನೆ.

೪೬. ನೀವು ಈ ನನ್ನ ಮಾತನ್ನು ರಾಘವನಿಗೆ ಹೇಳಿರಿ ಅವನು ಯಾತ್ರೆಗಳನ್ನೂ ಯಜ್ಞಗಳನ್ನೂ ಮಾಡುತ್ತಾನೆ. ಎಂದು ಹೇಳಿದನು. ಆ ಮುನಿಯ ಈ ಮಾತನ್ನು ಕೇಳಿ ಆ ದೂತರು ಆಶ್ಚರ್ಯಗೊಂಡರು.

೪೭. ಮತ್ತು ಮುನಿಯು ಶಾಪಕೊಟ್ಟಾನೆಂಬ ಹೆದರಿಕೆಯಿಂದ ದಾರಿಯನ್ನು ಬಿಟ್ಟು ಕೊಟ್ಟರು. ಒಡನೆಯೇ ರಾಮನ ಬಳಿಗೆ ಬಂದರು. ಅವರು ರಾಮನಿಗೆ ನಮಸ್ಕರಿಸಿ ನಡೆದ ವಿಷಯವನ್ನು ಅವನ ಕಿವಿಯಲ್ಲಿ ಹೇಳಿದರು.

ರಾಘವೋಽಪಿ ಮುನೈಸ್ತಸ್ಯ ಜ್ಞಾತ್ವಾಭಿಪ್ರಾಯಮುತ್ತಮಂ ।
ಸರ್ವಂ ವೃತ್ತಂ ಸಭಾಮಧ್ಯೇ ಚಕಾರ ಸಸ್ಮಿತಃ ಸ್ಫುಟಂ ॥ ೪೮ ॥

ಮಂತ್ರಿಭಿರ್ಬಂಧುಭಿಶ್ಚೈವ ವಸಿಷ್ಠೇನ ಪುರೋಧಸಾ ।
ಮಂತ್ರಯಿತ್ವಾ ಮುನೇರ್ವಾಕ್ಯಂ ಸತ್ಯಂ ಮೇನೇ ರಮಾಪತಿಃ ॥ ೪೯ ॥

ತತೋ ನಿಶ್ಚಿತವಾರ್ತಾ ರಾಮಸ್ಸಭಾಮಧ್ಯೇ ಪುರೋಧಸಾ ।
ಆದೌ ಕಾರ್ಯಾ ತೀರ್ಥಯಾತ್ರಾ ಯಜ್ಞಾಃ ಕಾರ್ಯಾಸ್ತತಃ ಪರಂ ॥ ೫೦ ॥

ತತೋ ರಾಮಾಜ್ಞಯಾ ದೂತಾ ಗತ್ವಾಯೋಧ್ಯಾಪುರೀಂ ಪ್ರತಿ ।
ತದ್ವೃತ್ತಂ ಚ ಸವಿಸ್ತಾರಂ ಸುಮಂತ್ರಾಯ ನ್ಯವೇದಯನ್ ॥ ೫೧ ॥

ಸುಮಂತ್ರೋಽಪಿ ಚ ತದ್ವೃತ್ತಂ ಶ್ರುತ್ವಾ ವಸ್ತ್ರಧನಾನಿ ಚ ।
ಉಷ್ಟ್ರಾಶ್ವರಥನಾಗಾದ್ಯೈಃ ಪ್ರೇಷಯಾಮಾಸ ಸಾದರಂ ॥ ೫೨ ॥

---

೪೮. ರಾಘವನು ಆ ಮುನಿಯ ಉತ್ತಮವಾದ ಅಭಿಪ್ರಾಯವನ್ನು ಗ್ರಹಿಸಿದನು. ಸಭೆಯನ್ನು ಸೇರಿಸಿ ಆ ಸಭೆಯ ಮಧ್ಯದಲ್ಲಿ ಈ ವಿಷಯವನ್ನು ಎಲ್ಲರಿಗೂ ತಿಳಿಸಿದನು.

೪೯. ಮಂತ್ರಿಗಳೊಡನೆಯೂ ತಮ್ಮಂದಿರೊಡನೆಯೂ ವಸಿಷ್ಠನೊಡನೆಯೂ ಆ ಋಷಿಯ ಮಾತನ್ನು ಚರ್ಚಿಸಿ ಅವನು ಹೇಳಿದುದು ಸರಿಯಾದುದು ಎಂದು ನಿರ್ಧರಿಸಿದನು.

೫೦. ಆಗ ಆ ಸಭಾಮಧ್ಯದಲ್ಲಿ ರಾಮನು ಪುರೋಹಿತರೊಡನೆ ಚರ್ಚಿಸಿ ಮೊದಲು ತೀರ್ಥಯಾತ್ರೆಗಳನ್ನು ಮಾಡಬೇಕೆಂದೂ ಅನಂತರ ಯಜ್ಞಗಳನ್ನು ಮಾಡಬೇಕೆಂದೂ ನಿಶ್ಚಯಿಸಿದನು.

೫೧ ಅನಂತರ ದೂತರು ರಾಮನ ಅಪ್ಪಣೆಯಂತೆ ಅಯೋಧ್ಯೆಗೆ ಹೋಗಿ ಈ ವಿಷಯಗಳೆಲ್ಲವನ್ನೂ ವಿಸ್ತಾರವಾಗಿ ಸುಮಂತ್ರನಿಗೆ ಹೇಳಿದರು.

೫೨. ಸುಮಂತ್ರನು ಈ ವಿಷಯವನ್ನು ಕೇಳಿ ವಸ್ತ್ರಗಳನ್ನೂ ಇನ್ನೂ ಬೇಕಾದುದೆಲ್ಲವನ್ನೂ ಒಂಟೆಗಳಮೇಲೆಯೂ ಆನೆಗಳಮೇಲೆಯೂ ರಥಗಳಲ್ಲಿಯೂ ಕುದುರೆಗಳಮೇಲೆಯೂ ಹೇರಿ ಬೇಗನೆ ರಾಮನಿಗೆ ಕಳುಹಿಸಿಕೊಟ್ಟನು.

ಪುಷ್ಪಕಂ ಚ ತದಾ ಪ್ರಾಹ ರಾಮಃ ಶಕ್ತಿಸ್ತವಾಸ್ತಿ ಹಿ ।
ಯದ್ಯಪ್ಯದ್ಯ ಗಿರಾ ಮೇ ನ್ವೈ ಶೀಘ್ರಂ ತ್ವಂ ಮೇ ಯಥಾಬಲಂ ॥ ೫೩ ॥

ಉಷ್ಟ್ರಾಶ್ವರಥನಾಗಾದ್ಯೈರ್ನಿವಾಸಂ ಚ ತವೋದರೇ ।
ಕರಿಷ್ಯಂತಿ ಸವಿಸ್ತಾರಂ ತಥಾ ವಿಸ್ತೀರ್ಣತಾಂ ಭಜ ॥ ೫೪ ॥

ಸರ್ವೇಷಾಂ ಭಾರವಾಹಾರ್ಥೆ ಶಕ್ತಿರಸ್ತು ಯಥಾಸುಖಂ ।
ಕಸ್ಮಿನ್ಕಾಲೇ ಸೂಕ್ಷ್ಮರೂಪಂ ಮಹದ್ರೂಪಂ ಕದಾಪಿ ಚ ॥ ೫೫ ॥

ಯಥಾ ತಾವಾ ಮಯಾ ಕಾಶಕ್ತಿಸ್ತವ ದತ್ತಾ ನ ಸಂಶಯಃ ।
ತಚ್ಛ್ರುತ್ವಾ ರಾಮವಚನಂ ಪುಷ್ಪಕಂ ದಶಯೋಜನಂ ॥ ೫೬ ॥

ಸಮಂತತಸ್ತಥೋಚ್ಚಂ ಹಿ ವ್ಯವರ್ಧತ ದ್ವಿಯೋಜನಂ ।
ಶತಾಟ್ಟಾಲೈಶ್ಚ ಸೋಪಾನೈರ್ಹೇಮರತ್ನೋದ್ಭವೈಶ್ಚಿತಂ ॥ ೫೭ ॥

೫೩–೫೪. ಆಗ ರಾಮನು ಪುಷ್ಪಕವನ್ನು ಎಲೈ ಪುಷ್ಪಕವೇ! ನಿನಗೆ ಬಹುವಾದ ಶಕ್ತಿಯಿರುವುದಷ್ಟೆ. ಆದ್ದರಿಂದ ನನ್ನ ಮಾತಿನಂತೆ ನೀನು ನಿನ್ನ ಕೈಲಾದಮಟ್ಟಿಗೆ ಆನೆ, ಕುದುರೆ, ಒಂಟೆ, ರಥಗಳನ್ನು ನಿನ್ನ ಹೊಟ್ಟೆಯಲ್ಲಿ ಇಟ್ಟುಕೊಳ್ಳುವಂತೆ ಮಾಡು. ಅವು ಹಿಡಿಸುವಂತೆ ವಿಸ್ತಾರವಾಗು.

೫೫. ಎಲ್ಲರ ಭಾರವನ್ನೂ ಹೊರುವಷ್ಟು ನಿನಗೆ ಶಕ್ತಿಯು ಬರಲಿ. ನಿನಗೆ ಇಷ್ಟಬಂದಾಗ ಸೂಕ್ಷ್ಮವಾಗಿಯೂ ಬೇಕಾದಾಗ ದೊಡ್ಡದಾಗಿಯೂ ಆಗು. ನಿನಗೆ ಆ ಶಕ್ತಿಯು ಬರಲಿ.

೫೬–೫೭. ನೀನು ಇಷ್ಟಬಂದಂತೆ ಆಗುವ ಶಕ್ತಿಯನ್ನು ನಾನು ಕೊಟ್ಟಿದ್ದೇನೆ. ಸಂಶಯವಿಲ್ಲ. ಎಂದನು. ಪುಷ್ಪಕವು ರಾಮನ ಈ ಮಾತನ್ನು ಕೇಳಿ ಹತ್ತು ಯೋಜನದಗಲವಾಗಿಯೂ ಎರಡು ಯೋಜನದಷ್ಟು ಎತ್ತರವಾಗಿಯೂ ಬೆಳೆಯಿತು. ಅದರಲ್ಲಿ ನೂರು ಮಹಡಿಗಳೂ ಅವುಗಳಿಗೆ ಮೆಟ್ಟಲುಗಳೂ ಚಿನ್ನದಿಂದಲೂ ರತ್ನಗಳಿಂದಲೂ ಆದುವು.

ಕೋಟಿಸೂರ್ಯಪ್ರತೀಕಾಶಂ ನಾನಾಧಾತು ವಿಚಿತ್ರಿತಂ ।
ಕಲಶೈಶ್ಶತಸಾಹಸ್ರೈರ್ಹೇಮರತ್ನವಿಘಟ್ಟಿತೈಃ ॥ ೫೮ ॥

ಜಾಲರಂಧ್ರೈರ್ಗವಾಕ್ಷೈಶ್ಚ ಮುಕ್ತಾಹಾರೈರ್ವಿಭೂಷಿತಂ ।
ಕವಾಟೈರ್ದರ್ಪಣೋದ್ಭೂತೈರ್ಜಲಯಂತ್ರಶತೈರ್ವೃತಂ ॥ ೫೯ ॥

ಪುಷ್ಪಾಣಾಂ ವಾಟಿಕಾಭಿಶ್ಚ ನಾನಾಪಕ್ಷಿನಿನಾದಿತಂ ।
ಸರ್ಪಮಸ್ತಕಜಾ ಯತ್ರ ಶತಶೋಥ ಸಹಸ್ರಶಃ ॥ ೬೦ ॥

ನಿಶಾಯಾಂ ಮಣಯಶ್ಚಿತ್ರಾಃ ಪ್ರಭಾಂ ವಿಸ್ತಾರಯಂತಿ ಹಿ ।
ಗೋಪುರಾಣಿ ಚ ಭಾಸಂತೇ ಶತಶೋಥ ಸಹಸ್ರಶಃ ॥ ೬೧ ॥

ತತ್ರ ಪ್ರಾಥಮಿಕಾಯಾಂ ತು ಪಜ್ತ್ರೌ ಶ್ರೀರಾಘವಾಜ್ಞಯಾ ।
ಉಷ್ಟ್ರಾಶ್ವರಥನಾಗಾದೀನ್ ದೂತಾಶ್ಚಾರೋಹಂಯಂಸ್ತದಾ ॥ ೬೨ ॥

---

೫೮. ಅದು ಕೋಟಿಸೂರ್ಯರಂತೆ ಪ್ರಕಾಶಿಸಿತು. ಬಗೆ ಬಗೆಯಾದ ಧಾತುಗಳುಳ್ಳದ್ದಾಯಿತು. ಚಿನ್ನವೂ ರತ್ನವೂಉಳ್ಳ ನೂರುಸಾವಿರ ಕಲಶಗಳು ಆದರಲ್ಲಿ ಇದ್ದುವು.

೫೯. ಜಾಲರಂಧ್ರಗಳೂ ಗವಾಕ್ಷಗಳೂ ಬಹುವಾಗಿ ಉಂಟಾದುವು. ಮುತ್ತಿನಹಾರಗಳೂ ಅವುಗಳಲ್ಲಿ ನೇತಾಡುತ್ತಿದ್ದುವು. ಬಾಗಿಲುಗಳಿಗೆಲ್ಲಾ ಕನ್ನಡಿಯ ಕದಗಳಾದುವು. ಅನೇಕ ವಿಧವಾದ ಜಲಯಂತ್ರ(ನಲ್ಲಿ)ಗಳುಂಟಾದುವು.

೬೦-೬೧. ಹೂತೋಟಗಳು ಅನೇಕವಾಗಿ ಉಂಟಾದುವು. ಅಲ್ಲಿ ಅನೇಕವಾದ ಪಕ್ಷಿಗಳು ಸುಸ್ವರವಾಗಿ ಕೂಗುತ್ತಿದ್ದುವು. ಅಲ್ಲಿರುವ ಸರ್ಪಗಳು ತಮ್ಮ ತಲೆಯಮೇಲಿರುವ ರಮಣೀಯವಾದ ಮಣಿಗಳಿಂದ ರಾತ್ರಿಯಲ್ಲಿ ಬೆಳಕನ್ನು ಉಂಟುಮಾಡುತ್ತಿದ್ದುವು. ಅನೇಕವಾಗಿ ಗೋಪುರಗಳು ಅಲ್ಲಲ್ಲಿದ್ದುವು.

೬೨. ಇಂತಹ ಪುಷ್ಪಕದ ಮೊದಲನೆಯ ಭಾಗದಲ್ಲಿ ರಾಮನ ಆಜ್ಞೆಯಂತೆ ಆನೆಗಳನ್ನೂ ಕುದುರೆಗಳನ್ನೂ ಒಂಟೆಗಳನ್ನೂ ದೂತರನ್ನೂ ಹತ್ತಿಸಿದರು.

ದ್ವಿತೀಯಾಯಾಂ ಕಾಷ್ಠಚಯಾನ್ ತೃಣೋಲೂಖಲಮೂಸಲಾನ್ |
ತೃತೀಯಾಯಾಂ ಧಾನ್ಯರಾಶೀನ್ ಪಾಕಾಮತ್ರಾಣಿ ನೈ ತತಃ || ೬೩ ||

ಪಂಚಮ್ಯಾಂ ತು ಶತಘ್ನೀಶ್ಚ ತತಶ್ಶಸ್ತ್ರಾಣ್ಯನೇಕಶಃ |
ತತ ಊರ್ಧ್ವಂ ರಾಜವಾಹಾನಶ್ವೋಷ್ಟ್ರರಥವಾರಣಾನ್ || ೬೪ ||

ಅಷ್ಟಮಾಯಾಂ ರಾಜಕೋಶಾನ್ ವಸ್ತ್ರಧಾನ್ಯವಿನಿರ್ಮಿತಾನ್ |
ಹಟ್ಟಶಾಲಾಸ್ತತಶ್ಶ್ರೇಷ್ಠಾ ದಾಸೀದಾಸಾಂಸ್ತತಃ ಪರಂ || ೬೫ ||

ನಟಾದೀನಾಂ ತತಶ್ಶಾಲಾ ವಾರಸ್ತ್ರೀಣಾಂ ತತಃ ಪರಂ |
ತತೋ ವೀರಾನಂಘ್ರಿಗಾಂಶ್ಚ ತೇಭ್ಯಶ್ಶ್ರೇಷ್ಠಾಸ್ತತಃ ಪರಂ | || ೬೬ ||

ಗಚ್ಛಂತಿ ತುರಗೈರ್ಯೇ ತಾನ್ ಪಂಚದಶ್ಯರ್ಪಿತಾ ತತಿಃ |
ರಥಯೋಗ್ಯಾ ಸ್ತತೋಽಪ್ಯೂರ್ಧ್ವಂ ಗಜಾಂಶ್ಚೈವ ತತಃ ಪರಂ || ೬೭ ||

೬೩-೬೪. ಎರಡನೆಯ ಮಹಡಿಯಲ್ಲಿ ಸೌದೆಯನ್ನೂ ಹುಲ್ಲನ್ನೂ ಒರಳು ಒನಕೆ ಬೀಸುವ ಕಲ್ಲುಗಳನ್ನೂ ಹಾಕಿದರು. ಮೂರನೆಯ ಮಹಡಿಯಲ್ಲಿ ಧಾನ್ಯರಾಶಿಗಳನ್ನೂ ನಾಲ್ಕನೆಯದರಲ್ಲಿ ಅಡಿಗೆಯ ಸಾಮಾನುಗಳನ್ನೂ ಹಾಕಿದರು. ಐದನೆಯದರಲ್ಲಿ ಫಿರಂಗಿಗಳನ್ನೂ ಆರನೆಯದರಲ್ಲಿ ಅನೇಕ ಬಗೆಯಾದ ಶಸ್ತ್ರಗಳನ್ನೂ ಏಳನೆಯದರಲ್ಲಿ ರಾಜನ ವಾಹನವಾದ ಕುದುರೆ, ಒಂಟೆ, ಆನೆ, ರಥಗಳನ್ನೂ ಸೇರಿಸಿದರು.

೬೫-೬೬. ಎಂಟನೆಯದರಲ್ಲಿ ರಾಜನಿಗೆ ಬೇಕಾದ ಸಾಮಾನಿನ ಉಗ್ರಾಣವನ್ನೂ ವಸ್ತ್ರ ಧಾನ್ಯಗಳನ್ನೂ ಇಟ್ಟರು. ಒಂಭತ್ತನೆಯದರದಲ್ಲಿ ಅಂಗಡಿ ಬೀದಿಗಳನ್ನೂ ಹತ್ತನೆಯದರಲ್ಲಿ ದಾಸೀದಾಸರನ್ನೂ ಹನ್ನೊಂದನೆಯದರಲ್ಲಿ ನಟರೆ ಮುಂತಾದವರನ್ನೂ ಹನ್ನೆರಡನೆಯದರಲ್ಲಿ ಸೂಳೆಯರನ್ನೂ ಹದಿಮೂರನೆಯದರಲ್ಲಿ ವೀರರಾದ ಕಾಲಾಳುಗಳನ್ನೂ ಹದಿನಾಲ್ಕನೆಯದರಲ್ಲಿ ಅವರಿಗಿಂತ ಶ್ರೇಷ್ಠರಾದವರನ್ನೂ ಇಟ್ಟರು.

೬೭-೬೮. ಅನಂತರ ಕುದುರೆಯ ರಾಹುತರನ್ನೂ ಅನಂತರ ರಥಿಕರನ್ನೂ ಅದರಮೇಲೆ ಆನೆಗಳನ್ನೂ ಅದರಮೇಲೆ ದೂತರನ್ನೂ ಅದರಮೇಲೆ ರಾಜನ

ಆರೋಹಯಂಸ್ತತೋ ದೂತಾನ್ ರಾಜ್ಯಭೋಗ್ಯಾಧಿಕಾರಿಣಃ ।
ಸುಹೃತ್ಪುತ್ರಜನಸ್ತ್ರೀಭಿರ್ನೃಪಾನ್ಮಾಂಡಲಿಕಾಂಸ್ತತಃ ॥ ೬೮ ॥

ತತೋ ಪ್ಯೂರ್ಧ್ವಂ ರಾಘವಸ್ಯ ಸುಹೃದಶ್ಚ ಪುರೌಕಸಃ ।
ತತೋ ಭೋಜನಶಾಲಾಶ್ಚ ವಿಂಶಚ್ಚೈವ ಮನೋರಮಾಃ ॥ ೬೯ ॥

ಪಾಕಶಾಲಾಸ್ತತಃ ಪಂಚ ಸ್ತ್ರೀಣಾಂ ಭೋಕ್ತುಂ ತತೋ ದಶ ।
ತತ ಊರ್ಧ್ವಂ ಹಿ ಬಂಧೂನಾಂ ಮಾತೃಣಾಂ ಚ ಗೃಹಾಣಿ ಚ ॥ ೭೦ ॥

ತತ ಊರ್ಧ್ವಂ ರಾಘವಸ್ಯ ಸಭಾ ಸಿಂಹಾಸನಾನ್ವಿತಾ ।
ತತೋಪ್ಯೂರ್ಧ್ವಂ ಚ ಸೀತಾಯಾ ಗೇಹಂ ನಾನಾಸಖೀವೃತಂ ॥ ೭೧ ॥

ತತೋಪ್ಯೂರ್ಧ್ವಂ ರಾಘವಸ್ಯ ಕ್ರೀಡಾಸ್ಥಾನಂ ತು ಸೀತಯಾ ।
ತತೋಪ್ಯೂರ್ಧ್ವಂ ತತೋ ಷಷ್ಟಿತಮಾಯಾಂ ಸುಹೃದಾಂ ಸ್ತ್ರಿಯಃ॥ ೭೨ ॥

ಕಡೆಯ ಅಧಿಕಾರಿಗಳನ್ನೂ ಅಲ್ಲಿಂದ ಮೇಲಕ್ಕೆ ಕ್ರಮವಾಗಿ ಸ್ನೇಹಿತರು ಮಕ್ಕಳು ಹೆಂಗಸರು ಸಣ್ಣ ರಾಜರು ದೊಡ್ಡರಾಜರು ಇವರನ್ನೂ ಈ ರೀತಿಯಾಗಿಟ್ಟರು.

೬೯. ಅಲ್ಲಿಂದ ಮೇಲೆ ರಾಮನ ಸ್ನೇಹಿತರೂ ಪಟ್ಟಣಿಗರೂ ಇದ್ದರು. ಅಲ್ಲಿಂದ ಮೇಲೆ ಇಪ್ಪತ್ತು ಊಟದ ಮನೆಗಳಾದುವು.

೭೦–೭೧. ಅಲ್ಲಿಂದ ಮೇಲೆ ಐದ್ದು ಅಡಿಗೆಯ ಮನೆಗಳಾದುವು. ಅಲ್ಲಿಂದ ಮೇಲೆ ಹೆಂಗಸರು ಊಟಮಾಡುವ ಹತ್ತು ಊಟದ ಮನೆಗಳು ಆದುವು. ಅದರಮೇಲೆ ತಮ್ಮಂದಿರ ಮನೆಗಳೂ ಆದರಮೇಲೆ ತಾಯಿಯರ ಮನೆಗಳೂ ಅದರಮೇಲೆ ರಾಮನ ಸಭಾಮಂಟಪವೂ ಅದರಲ್ಲಿ ಸಿಂಹಾಸನವೂ ನಿರ್ಮಿತ ವಾದುವು. ಆದರಮೇಲೆ ಸೀತೆಯ ಮನೆಯು ಆಯಿತು. ಅಲ್ಲಿ ಸೀತೆಯ ಸಖಿಯರಿಗೂ ಸ್ಥಳಗಳು ಮಾಡಲ್ಪಟ್ಟುವು.

೭೨–೭೪. ಅದರಮೇಲೆ ರಾಮನೂ ಸೀತೆಯೂ ಕ್ರೀಡಿಸುವ ಜಾಗವು ಆಯಿತು. ಅದರಮೇಲೆ ಅರವತ್ತನೆಯ ಮಹಡಿಯಲ್ಲಿ ಸ್ನೇಹಿತರ ಹೆಂಗಸರೂ ಅವರ ಗೆಳತಿಯರೂ ಕುಳಿತುಕೊಳ್ಳುವ ಕ್ರೀಡಾಸ್ಥಾನವಾಯಿತು. ಅದರಮೇಲೆ

ತತಃ ಸ್ತ್ರೀಣಾಂ ಸಭಾರ್ಥಂ ಹಿ ಸಪ್ತಶಾಲಾಶ್ಶುಭಾವಹಾಃ ।
ಚಿತ್ರಶಾಲಾ ದ್ವಾದಶಾಥ ವಯಸಾಂ ಪಂಚ ವೈ ತತಃ ॥ ೭೩ ॥

ಪುಷ್ಪಾರಾಮಾದಿಕಾನಾಂ ಹಿ ಪಂಚಶಾಲಾಸ್ತತಶ್ಶುಭಾಃ ।
ತತೋ ಪ್ಯೂರ್ಧ್ವಂ ತು ಶಾಲಾಯಾಂ ಘಟೀಯಂತ್ರಾದಿ ಕೌತುಕಂ॥ ೭೪ ॥

ವ್ಯಾಘ್ರಾದೀನಾಂ ತತಶ್ಶಾಲಾ ತ್ವೇಕಾ ರಮ್ಯಾಽತಿವಿಸ್ತೃತಾ ।
ತತೋ ಪ್ಯೂರ್ಧ್ವಮಗ್ನಿಹೋತ್ರಶಾಲಾ ಶ್ರೀರಾಘವಸ್ಯ ಚ ॥ ೭೫ ॥

ತತಶ್ಶಿವಾರ್ಚನಸ್ಯೈಕಾ ಶಾಲಾ ಜ್ಞೇಯಾ ಶುಭಾವಹಾ ।
ವಿಪ್ರಾಣಾಂ ಚ ತತಶ್ಶಾಲಾ ಶಾಲಾ ವಿದ್ಯಾರ್ಥಿನಾಂ ತತಃ ॥ ೭೬ ॥

ಯತೀನಾಂ ಚ ತತಶ್ಶಾಲಾ ವಾದ್ಯಶಾಲಾ ತತಃ ಪರಂ ।
ಜಲಶಾಲಾ ತತಃ ಶ್ರೇಷ್ಠಾ ಜಲಯಂತ್ರಾನ್ವಿತಾ ತತಃ ॥ ೭೭ ॥

ಹೆಂಗಸರ ಸಭೆಗೋಸ್ಕರ ಏಳುಜಾಗಗಳು ನಿರ್ಮಿತವಾದುವು ಅದರಮೇಲೆ ಹನ್ನೆರಡು ಚಿತ್ರಶಾಲೆಗಳು ಮಾಡಲ್ಪಟ್ಟುವು ಅದರಮೇಲೆ ಐದುಶಾಲೆಗಳನ್ನು ಮಾಡಿ ಪಕ್ಷಿಗಳನ್ನಿಟ್ಟಿದ್ದರು. ಅದರಮೇಲೆ ಹೂತೋಟಗಳ ಐದುಶಾಲೆಗಳು ಆದುವು ಅದರಮೇಲೆ ಬಗೆ ಬಗೆಯ ಗಂಟೆಯ ಯಂತ್ರಗಳು (ಗಡಿಯಾರಗಳು) ಇಡುವ ಜಾಗವು ನಿರ್ಮಿತವಾಯಿತು.

೭೫–೭೭. ಅದರಮೇಲೆ ಹುಲಿ ಮುಂತಾದುವುಗಳನ್ನಿಡುವ ಮೃಗಶಾಲೆಯು ಒಂದು ನಿರ್ಮಿತವಾಯಿತು. ಆದರಮೇಲೆ ರಾಮನ ಅಗ್ನಿಹೋತ್ರಶಾಲೆಯು ಆಯಿತು. ಅದರಮೇಲೆ ಶಿವಪೂಜೆಯ ದೇವರಮನೆಯ ಭಾಗವು ನಿರ್ಮಿತವಾಯಿತು. ಅದರಮೇಲೆ ಬ್ರಾಹ್ಮಣರು ಇರುವ ಶಾಲೆಯು ಆಯಿತು. ಅದರಮೇಲೆ ವಿದ್ಯಾರ್ಥಿಗಳ ಶಾಲೆಯು ಆಯಿತು. ಅದರಮೇಲೆ ಯತಿಗಳಶಾಲೆಯು ಆಯಿತು. ಅದರಮೇಲೆ ವಾದ್ಯದಶಾಲೆಯು ಆಯಿತು. ಅದರಮೇಲೆ ನೀರಿನ ಶಾಲೆಯು ಆಯಿತು. ಅದರಮೇಲೆ ಜಲಯಂತ್ರದ ಶಾಲೆಯು ನಿರ್ಮಿತವಾಯಿತು.

ತತೋ ಪ್ಯೂರ್ಧ್ವಮಾದ್ರ್ರಮಸ್ತ್ರಶೋಷಣಾರ್ಥಃಮನುತ್ತಮಾ ।
ಶತಶ್ಶಾಲಾಸ್ತ್ವಿಮಾಃ ಪೂರ್ಣಾಶ್ಚಕ್ರುಸ್ತೇ ರಾಮಸೇವಕಾಃ ॥ ೭೮ ॥

ರಾಮೋಪಿ ದೃಷ್ಟ್ವಾ ತಾಸ್ಸರ್ವಾ ಆರುರೋಹ ಸ್ವಯಂ ತದಾ ।
ತತೋ ನದತ್ಸು ವಾದ್ಯೇಷು ಸ್ತುವತ್ಸು ಮಾಗಧಾದಿಷು ॥ ೭೯ ॥

ನರ್ತತ್ಸು ವಾರನಾರೀಷು ಪತಾಕಾಸು ಚಲತ್ಸು ಚ ।
ಪ್ರಕಾಶಯನ್ ದಶ ದಿಶೋ ವಿಮಾನಂ ರಾಘವಾಜ್ಞಯಾ ॥ ೮೦ ॥

ಅಗಚ್ಛತತ್ಪೂರ್ವದಿಗ್ಭಾಗಾತ್ ಪ್ರತೀಚೀಂ ತಪನೋಪಮಂ ।
ವಿಹಾಯಸಾ ವಾಯುವೇಗಂ ಕಿಂಕಿಣೀ ಜಾಲಮಾಲಿತಂ ॥ ೮೧ ॥

ಯಯೌ ಪ್ರಯಾಗಾಭಿಮುಖಂ ಶ್ರೀರಾಮಧ್ವಜಚಿಹ್ನಿತಂ ।

॥ ವಿಷ್ಣುದಾಸ ಉವಾಚ ॥

ಕಥಂ ರಾಮಸ್ಯ ಚತ್ವಾರೋ ಧ್ವಜಾಃ ಪ್ರೋಕ್ತಾಃ ಪುರಾ ತ್ವಯಾ ॥ ೮೨ ॥

---

೭೮. ಆದರಮೇಲೆ ಒದ್ದೆಯ ಬಟ್ಟೆಯನ್ನು ಒಣಗಿಸುವ ಶಾಲೆಯು ಆಯಿತು. ಈ ರೀತಿಯಾಗಿ ನೂರುಶಾಲೆಗಳನ್ನು ರಾಮನ ಸೇವಕರು ಸಿದ್ಧಪಡಿಸಿದರು.

೭೯-೮೦. ರಾಮನು ಇವೆಲ್ಲವನ್ನೂ ನೋಡಿ ಆನಂತರ ತಾನು ಪುಷ್ಪಕದಲ್ಲಿ ಹತ್ತಿ ಕುಳಿತನು. ಆಗ ವಾದ್ಯಗಳೆಲ್ಲವೂ ಧ್ವನಿಗೈದುವು ಮಾಗಧರು ಹೊಗಳಿದರು. ಸೂಳೆಯರು ಕುಣಿಯುತ್ತಿದ್ದರು. ಪತಾಕೆಗಳು ಅಲ್ಲಾಡಿದುವು ಆಗ ಪುಷ್ಪಕವು ಹತ್ತು ದಿಕ್ಕುಗಳನ್ನೂ ಬೆಳಗುತ್ತ ರಾಮಾಜ್ಞೆಯಿಂದ ಹೊರಟಿತು.

೮೧-೮೨. ಆಗ ಪುಷ್ಪಕವು ಪೂರ್ವದಿಕ್ಕಿನಿಂದ ಪಶ್ಚಿಮಕ್ಕೆ ಹೊರಟಿತು. ಅದರ ವೇಗವು ವಾಯುವೇಗವನ್ನು ಮೀರಿಸಿದ್ದಿತು. ಗೆಜ್ಜೆಗಳು ಝುಂಕಾರ ಮಾಡುತ್ತಲಿದ್ದುವು. ರಾಮನ ಧ್ವಜದಿಂದ ಗುರುತುಹೊಂದಿರುವ ಆ ಪುಷ್ಪಕವು ಪ್ರಯಾಗಕ್ಕೆ ಎದುರಾಗಿ ಹೊರಟಿತು.

ತತ್ಸರ್ವಂ ವಿಸ್ತರೇಣಾದ್ಯ ಶ್ರೋತುಮಿಚ್ಛಾಮಿ ತ್ವನ್ಮುಖಾತ್ ।

॥ ರಾಮದಾಸ ಉವಾಚ ॥

ಶೈಶವೇ ರಘುನಾಥಸ್ತು ಸ್ವಪಿತೃಸ್ಯಂದನಸ್ಥಿತಃ ॥ ೪೩ ॥

ಅತಸ್ತೋಽಪ್ಯಸ್ಯ ರಾಮಸ್ಯ ಕೋವಿದಾರಧ್ವಜಃ ಸ್ಮೃತಃ ।
ಬಾಣಧ್ವಜಾಂಕಿತ ರಥಮಾರುಹ್ಯ ತಾಟಿಕಾಂ ವನೇ ॥ ೪೪ ॥

ಜಘಾನೈಕೇನ ಬಾಣೇನ ತಸ್ಮಾದ್ಬಾಣಧ್ವಜಃ ಸ್ಮೃತಃ ।
ಛಿನ್ನಂ ವಜ್ರಧ್ವಜಂ ದೃಷ್ಟ್ವಾ ರಾವಣೇನ ತ ರಾಘವಃ ॥ ೪೫ ॥

ಧ್ವಜೇಽಕರೋದ್ವಾಯುಪುತ್ರಂ ತನ್ಮಾತ್ಪ್ರೋಕ್ತಃ ಕಪಿಧ್ವಜಃ ।
ರಣೇ ವಿಮೂರ್ಛಿತಂ ದೃಷ್ಟ್ವಾ ರಾಮೋ ಮಾತಲಿನಂ ತದಾ ॥ ೪೬ ॥

ಸ್ಥಿತಃ ಸ್ವೀಯರಥೇ ದಿವ್ಯೇ ತಸ್ಮಾಚ್ಚ ಗರುಡಧ್ವಜಃ ।
ಶುಕ್ಲಾಯಾಂ ಹಿ ಪತಾಕಾಯಾಂ ಕೋವಿದಾರೋಽಸ್ತಿ ವೈ ಶುಭಃ ॥ ೪೭ ॥

---

೪೩. ವಿಷ್ಣುದಾಸನು ಹೇಳಿದನು-ಎಲೈ ಗುರುವೇ ! ರಾಮನಿಗೆ ನಾಲ್ಕು ಧ್ವಜಗಳಿವೆ. ಎಂದು ಹಿಂದೆ ಹೇಳಿದೆಯಲ್ಲ ! ಅದಕ್ಕೆ ಕಾರಣವೇನು ? ಅವೆಲ್ಲವನ್ನೂ ಕೂಡ ಈಗ ನಿನ್ನ ಬಾಯಿಂದ ಕೇಳಬೇಕೆಂದು ಅಪೇಕ್ಷಿಸುತ್ತೇನೆ.

೪೪-೪೭. ರಾಮದಾಸನು ಹೇಳಿದನು-ರಾಮನು ಚಿಕ್ಕತನದಲ್ಲಿ ತನ್ನ ತಂದೆಯ ರಥದಲ್ಲಿ ಕುಳಿತನು. ಆದ್ದರಿಂದ ಕೋವಿದಾರ ಧ್ವಜವು ಈತನಿಗೆ ಗುಂಟಾಯಿತು ಬಾಣಧ್ವಜದಿಂದ ಗುರುತುಮಾಡಲ್ಪಟ್ಟ ರಥವನ್ನು ಹತ್ತಿ ರಾಮನು ತಾಟಕೆಯನ್ನು ಒಂದೇ ಬಾಣದಿಂದ ಕೊಂದನು. ಆದ್ದರಿಂದ ರಾಮನಿಗೆ ಬಾಣಧ್ವಜವುಂಟಾಯಿತು. ರಾವಣನು ಯುದ್ಧದಲ್ಲಿ ರಾಮನ ವಜ್ರಧ್ವಜವನ್ನು ಕತ್ತರಿಸಲು ರಾಮನು ಅದನ್ನು ನೋಡಿ ತನ್ನ ಧ್ವಜದಲ್ಲಿ ಕಪಿಯಾದ ಹನುಮಂತನನ್ನು ಕೊರಿದುದರಿಂದ ಕಪಿಧ್ವಜನಾದನು ರಣದಲ್ಲಿ ಸಾರಥಿಯಾದ ಮಾತಳಿಯು ಮೂರ್ಛೆಹೋಗಲು ಅದನ್ನು ನೋಡಿ ಗರುಡಧ್ವಜವಿರುವ ತನ್ನ ರಥದಲ್ಲಿ ಕುಳಿತುದರಿಂದ ಗರುಡಧ್ವಜನಾದನು. ಬಿಳಿಯ ಪತಾಕೆಯಲ್ಲಿ ಕೋವಿದಾರಧ್ವಜವಿದೆ.

ಬಾಣಶ್ಶುಭೋಽಸ್ತಿ ನೀಲಾಯಾಂ ಹರಿತಾಯಾಂ ತು ಮಾರುತಿಃ ।
ಪೀತಾಯಾಂ ಗರುಡೋ ಜ್ಞೇಯಃ ಶ್ರೀರಾಮಸ್ಯಂದನೋಪರಿ ॥ ೮೮ ॥

ಚತುರ್ಷು ಸ್ಯಂದನೇಷ್ವೇವಂ ಚತ್ವಾರಃ ಕೀರ್ತಿತಾ ಧ್ವಜಾಃ ।
ಕೋವಿದಾರಧ್ವಜೋ ರಾಮಃ ಶ್ರೀರಾಮೋ ಮಾರ್ಗಣಧ್ವಜಃ ॥ ೮೯ ॥

ಕಪಿಧ್ವಜೋ ರಾಘವೇಂದ್ರೋ ಭೂತೇಶೋ ಗರುಡಧ್ವಜಃ ।
ಏವಂ ನಾಮಾನ್ಯನಂತಾನಿ ಪ್ರೋಚ್ಯಂತೇ ರಾಘವಸ್ಯ ಹಿ ॥ ೯೦ ॥

ತಸ್ಮಾದ್ರಾಮಧ್ವಜಾಃ ಪ್ರೋಕ್ತಾಶ್ಚತ್ವಾರಶ್ಚ ಮಯಾ ತವ ।
ವಜ್ರಧ್ವಜಾಂಕಿತರಥೇ ಸ್ಥಿತ್ವಾ ರಾಮೇಣ ಸಂಗರಃ ॥ ೯೧ ॥

ಕೃತಸ್ತಸ್ಮಾದ್ರಾಘವೇಂದ್ರಂ ತಂ ವದಂತ್ಯಶನಿಧ್ವಜಂ ।
ಅತೋ ರಾಮಧ್ವಜಸ್ಯೈಕಮೇವ ಚಿಹ್ನಂ ನ ವಿದ್ಯತೇ ॥ ೯೨ ॥

---

೮೮. ನೀಲಧ್ವಜದಲ್ಲಿ ಬಾಣವೂ ಹಸುರಿನಧ್ವಜದಲ್ಲಿ ಮಾರುತಿಯೂ ಹಳದಿಯಧ್ವಜದಲ್ಲಿ ಗರುಡನೂ ಇದ್ದುಕೊಂಡಿದ್ದಾರೆ. ಈ ರೀತಿಯಾಗಿ ರಾಮನ ನಾಲ್ಕು ರಥಗಳಲ್ಲಿಯೂ ನಾಲ್ಕುಬಗೆಯ ಧ್ವಜಗಳಿವೆ.

೮೯–೯೦ ರಾಮನು ಕೋವಿದಾರಧ್ವಜನು. ಶ್ರೀರಾಮನು ಬಾಣಧ್ವಜನ ರಾಘವೇಂದ್ರನು ಕಪಿಧ್ವಜನು. ಭೂತೇಶನು ಗರುಡಧ್ವಜನು. ಈ ರೀತಿಯಾಗಿ ಅನೇಕ ಹೆಸರುಗಳನ್ನು ಶ್ರೀರಾಮನಿಗೆ ಹೇಳುತ್ತಾರೆ. ಈ ರೀತಿಯಾಗಿ ನಾಲ್ಕು ರಥಗಳಲ್ಲಿಯೂ ನಾಲ್ಕು ಧ್ವಜಗಳನ್ನು ಹೇಳಿದೆನು.

೯೧–೯೨. ಆದ್ದರಿಂದಲೇ ರಾಮನಿಗೆ ನಾಲ್ಕು ಧ್ವಜಗಳೆಂದು ನಾನು ಹೇಳಿದುದು. ವಜ್ರಧ್ವಜವಿರುವ ರಥದಲ್ಲಿ ರಾಮನು ಕುಳಿತು ಯುದ್ಧಮಾಡಿದನು. ಆದ್ದರಿಂದ ವಜ್ರಧ್ವಜನೆಂದು ಹೇಳುತ್ತಾರೆ. ಆದ್ದರಿಂದಲೇ ರಾಮನ ರಥಕ್ಕೆ ಒಂದೇ ಒಂದು ಬಗೆಯ ಧ್ವಜವಿಲ್ಲದಿರುವುದು.

ತಸ್ಮಾಚ್ಛಿಷ್ಯ ಮಯಾ ಪ್ರೋಕ್ತಾಶ್ಚತ್ವಾರೋ ರಾಘವಪ್ರಿಯಾಃ ।
ಕೋವಿದಾರಾಂಕಿತರಥೇ ಸುಮಂತ್ರಸ್ಸಾರಥಿಃ ಸ್ಮೃತಃ ॥ ೯೩ ॥

ಬಾಣಧ್ವಜಾಂಕಿತರಥೇ ಸೂತಶ್ಚಿತ್ರ ರಥಃ ಸ್ಮೃತಃ ।
ವಾಯುಪುತ್ರಾಂಕಿತರಥೇ ಸಾರಥಿರ್ವಿಜಯಃ ಸ್ಮೃತಃ ॥ ೯೪ ॥

ರಾಮಸ್ಯ ದಾರುಕಸ್ಸೂತಃ ಸ್ಯಂದನೇ ಗರುಡಾಂಕಿತೇ ।
ಏವಂ ಶಿಷ್ಯ ಯಥಾಪೃಷ್ಟಂ ಶ್ರೀರಾಮಧ್ವಜಕಾರಣಂ ॥ ೯೫ ॥

ತ್ವಯಾ ಪೂರ್ವಂ ಮಯಾ ತಚ್ಚ ತವಾಗ್ರೇದ್ಯ ನಿವೇದಿತಂ ॥ ೯೬ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ಕುಂಭೋದರೋಪಾಖ್ಯಾನಂ ನಾಮ ಪಂಚಮಸ್ಸರ್ಗಸಮಾಪ್ತಃ

---

೯೩. ಆದ್ದರಿಂದಲೇ ರಾಘವನು ನಾಲ್ಕು ಧ್ವಜವುಳ್ಳವನೆಂದು ನಾನು ಹೇಳಿದೆನು ಕೋವಿದಾರವಿರುವ ರಥದಲ್ಲಿ ಸುಮಂತ್ರನು ಸಾರಥಿಯಾಗಿ ನಡೆಸುವನು.

೯೪-೯೬. ಬಾಣಧ್ವಜಾಂಕಿತ ರಥವನ್ನು ಚಿತ್ರರಥನು ಸಾರಥಿಯಾಗಿ ನಡೆಸುವನು ಹನುಮಂತನಿಂದ ಚಿಹ್ನಿತವಾಗಿರುವ ರಥವನ್ನು ಸಾರಥಿಯಾಗಿ ವಿಜಯನು ನಡೆಸುವನು. ಗರುಡಧ್ವಜವಿರುವ ರಥವನ್ನು ದಾರುಕನೆಂಬ ಸಾರಥಿಯು ನಡೆಸುವನು. ಈ ರೀತಿಯಾಗಿ ಧ್ವಜಗಳ ಕಾರಣಗಳೊಡನೆ ಸಾರಥಿಗಳನ್ನು ಹೇಳಿರುವೆನು. ನೀನು ಹಿಂದೆ ಕೇಳಿದಂತೆ ಒಂದನ್ನೂ ಬಿಡದೆ ವಿಸ್ತಾರವಾಗಿ ಹೇಳಿದೆನು.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಕುಂಭೋದರೋಪಾಖ್ಯಾನವೆಂಬ ಐದನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

॥ ಐದನೆಯ ಸರ್ಗದ ಸಾರಾಂಶವು ॥

ಒಳಗೆ ಹೋಗಿ ಸೀತೆಯು ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಅತ್ತೆಯರನ್ನೂ ಓರಗಿತ್ತಿಯರನ್ನೂ ಕರೆದುಕೊಂಡು ಪುಷ್ಪಕ ವಿಮಾನವನ್ನು ಹತ್ತಿ ಕ್ಷಣಕಾಲದಲ್ಲಿಯೇ ಆ ವೃದ್ಧಸರಯೂ ಸಂಗಮಕ್ಕೆ ಹೋದಳು. ಅಲ್ಲಿ ಇಳಿದು ಸಂಗಮಕ್ಕೆ ನಮಸ್ಕರಿಸಿ ಪ್ರವಾಹಕ್ಕೆ ಫಲಗಳನ್ನೂ ಬಾಗಿನವನ್ನು ಸಮರ್ಪಿಸಿದಳು. ಅನಂತರ ಗಂಗೆಗೆ ಕ್ರಮವಾಗಿ ಪೂಜೆಮಾಡಿ ಬ್ರಾಹ್ಮಣ ಸುವಾಸಿನಿಯರನ್ನೂ ಪೂಜಿಸಿದಳು. ಅಲ್ಲಿ ಎಲ್ಲರಿಗೂ ಸಂತರ್ಪಣೆಯನ್ನು ಮಾಡಿಸಿ ತಾನು ಮಾತ್ರ ಉಪಹಾರವನ್ನು ತೆಗೆದುಕೊಂಡಳು.

ಅನಂತರ ಆ ಬಂಧುಗಳೊಡನೆ ಪುಷ್ಪಕವನ್ನು ಹತ್ತಿ ರಾಮನಿರುವ ನವೀನ ಸರಯೂ ನದಿಯ ಬಳಿಗೆ ಬಂದಳು. ಅಲ್ಲಿ ಶ್ರೀರಾಮನೂ ಸೀತೆಯೂ ಕೂಡಿ ಆ ನದಿಗೆ ಪೂಜೆಮಾಡಿದರು. ಅಲ್ಲಿ ಉತ್ತಮವಾದ ದಾನಗಳನ್ನು ಮಾಡಿ ಬ್ರಾಹ್ಮಣಸುವಾಸಿನಿಯರಿಗೆ ಸಮಾರಾಧನೆಯನ್ನು ಮಾಡಿಸಿ ತಾವೂ ಊಟ ಮಾಡಿದರು ಅಲ್ಲಿ ರಾಮನುಒಂಭತ್ತು ದಿನಗಳವರೆಗೂ ಇದ್ದನು. ಆಗ ದಾರಿಯಲ್ಲಿ ಬರುವವರೆಲ್ಲರೂ ತನ್ನ ಸತ್ರದಲ್ಲಿ ಭೋಜನಮಾಡಿಕೊಂಡು ತನ್ನಿಂದ ಬಹುಮಾನ ವನ್ನು ಪಡೆದುಕೊಂಡು ಹೋಗಬೇಕೆಂದು ಅಪ್ಪಣೆಮಾಡಿ ನಾಲ್ಕು ಮೈಲಿಗಳ ದೂರದಲ್ಲಿ ಎಲ್ಲ ಕಡೆಗೂ ಆಳುಗಳನ್ನು ನಿಲ್ಲಿಸಿದ್ದನು.

ಆಗ ಚ್ಯವನನು ಆ ರಾಮನ ಬಳಿಗೆ ಬಂದು ತನ್ನ ಆಶ್ರಮದಲ್ಲಿ ಮಾಗಧರು ತೊಂದರೆಕೊಡುವರೆಂದು ಹೇಳಿ ಅದಕ್ಕೆ ರಕ್ಷಣೆಯನ್ನು ಕೇಳಿದನು. ರಾಮನು ಬಾಣವನ್ನು ಬಿಟ್ಟು ಅವನ ಆಶ್ರಮದ ಸುತ್ತಲೂ ಕಂದಕವನ್ನು ಮಾಡಿ ಅವರ ತೊಂದರೆಯನ್ನು ತಪ್ಪಿಸಿದನು. ಮತ್ತು ಆ ಸ್ಥಳವನ್ನು ಪುಣ್ಯಸ್ಥಳವನ್ನಾಗಿ ಮಾಡಿದನು.

ಆ ರಾಮನ ಅನ್ನಸತ್ರದಲ್ಲಿ ಕೋಟಿಗಟ್ಟಲೆಯಲ್ಲಿ ಬ್ರಾಹ್ಮಣರು ಭೋಜನ ಮಾಡಿದರು. ಆಗ ಅಗಸ್ತ್ಯನು ಗಂಗಾಯಾತ್ರೆಗೋಸ್ಕರ ಪ್ರಯಾಗದಿಂದ ಹೋಗುತ್ತಿದ್ದನು. ಆಗ ದೂತರು ಅಲ್ಲಿ ಕಾವಲಿರುವುದನ್ನೂ ಅಲ್ಲಿಯ ವಿಶೇಷ ಗಳನ್ನೂ ನೋಡಿ ಇಲ್ಲಿಗೆ ಬಂದಿರುವವರಾರು ? ಎಂದು ಕೇಳಿದನು. ಆ ದೂತರು ರಾಮನ ವಿಷಯವನ್ನು ತಿಳಿಸಿ ಅಲ್ಲಿಗೆ ಹೋಗಿ ಭೋಜನಮಾಡಿಕೊಂಡು ಹೋಗುವಂತೆ ಹೇಳಿದರು.

ಆಗ ಅಗಸ್ತ್ಯನು ಈ ರಾಮನು ಈ ಯಾತ್ರೆಯನ್ನು ಮಾಡಿಕೊಂಡು ಹಿಂದಕ್ಕೆ ರಾಜಧಾನಿಗೆ ಹೋದರೆ ಲೋಕದ ಜನರಿಗೆ ರಾಮನ ದರ್ಶನವಾಗುವುದಿಲ್ಲ ಅಲ್ಲಲ್ಲಿ ತೀರ್ಥಪ್ರದೇಶಗಳಾಗಿ ಜನರ ಪಾಪವು ನಾಶವಾಗುವುದಿಲ್ಲ. ಆದ್ದರಿಂದ ರಾಮನು ಎಲ್ಲ ಕಡೆಗೂ ಹೋಗುವಂತೆ ಮಾಡುವೆನು. ಎಂದು ಯೋಚಿಸಿ ತಾನು ದೂತರು ಹೇಳಿದಂತೆ ರಾಮನೆಡೆಗೆ ಹೋಗದೆ ಹಿಂದಕ್ಕೆ ಹೊರಟನು. ಆಗ ದೂತರು ಅವನನ್ನು ತಡೆದು ಹಿಂದಕ್ಕೆ ಹೋಗಲು ಕಾರಣವೇನೆಂದು ಕೇಳಿದರು.

ಅಗಸ್ತ್ಯನು " ಎಲೈ ದೂತರಿರಾ ! ರಾಮನು ಬ್ರಹ್ಮನ ಮೊಮ್ಮಗನಾದ ದಶಾನನನನ್ನು ಕೊಂದನು. ಆದರಿಂದ ಬ್ರಹ್ಮಹತ್ಯೆಯ ಪಾಪವು ಬಂದಿತು ಅದನ್ನು ಕಳೆದುಕೊಳ್ಳಲು ಯಜ್ಞಗಳನ್ನಾಗಲಿ ಯಾತ್ರೆಗಳನ್ನಾಗಲಿ ಮಾಡಲಿಲ್ಲ. ಅಂತಹ ಪಾಪಿಯ ಅನ್ನವನ್ನು ತಿನ್ನುವುದಿಲ್ಲವೆಂದು ಹೇಳಿ ಹೊರಟುಹೋದನು. ಆಗ ದೂರತೂ ಕೂಡ ಶಾಪಭೀತಿಯಿಂದ ಅವನನ್ನು ತಡೆಯುಲಿಲ್ಲ. ಈ ವಿಷಯುವನ್ನು ದೂತರು ಬಂದು ರಾಮನಿಗೆ ತಿಳಿಸಿದರು. ರಾಮನು ಒಡನೆಯೇ ಮೊದಲು ತೀರ್ಥಯಾತ್ರೆಗಳನ್ನು ಮಾಡಲು ಉದ್ದೇಶಿಸಿ ಅಯೋಧ್ಯೆಯಿಂದಲೇ ಬೇಕಾದುದೆಲ್ಲ ವನ್ನೂ ತರಿಸಿಕೊಂಡನು.

ಪುಷ್ಪಕದಲ್ಲಿ ಒಂದುನೂರು ಅಂತಸ್ತುಗಳನ್ನು ಮಾಡಿಸಿ ಅವುಗಳಲ್ಲಿ ಯಥಾ ಯೋಗ್ಯವಾಗಿ ಪದಾರ್ಥಗಳನ್ನಿಟ್ಟು ರಾಣಿವಾಸ, ಸಭಾಪ್ರವೇಶ ಮುಂತಾದುವೆಲ್ಲ ವನ್ನೂ ವಿಭಾಗಿಸಿದನು. ಅನಂತರ ಆ ಪುಷ್ಪಕವು ರಾಮನ ಅಪ್ಪಣೆಯ ಪ್ರಕಾರ ಪ್ರಯಾಗದ ಕಡೆಗೆ ಹೊರಟಿತು.

ವಿಷ್ಣುದಾಸನು ರಾಮದಾಸನನ್ನು ಕುರಿತು ಎಲೈ ಗುರುವೇ ! ರಾಮನಿಗೆ ಅನೇಕ ಧ್ವಜಗಳಿರಲು ಕಾರಣವೇನು ? ಎಂದು ಪ್ರಶ್ನಿಸಲು ರಾಮದಾಸನು ಇಂತೆಂದನು.

ರಾಮನು ಬಾಲ್ಯದಲ್ಲಿ ಕುಳಿತುಕೊಳ್ಳುತ್ತಿದ್ದ ರಥಕ್ಕೆ ಕಂಚುವಾಳ ಧ್ವಜವಿರುವುದು. ಅದಕ್ಕೆ ಸುಮಂತ್ರನು ಸಾರಥಿಯು. ಬಾಣಧ್ವಜದ ರಥದಲ್ಲಿ ಕುಳಿತು ತಾಟಕೆಯನ್ನು ಕೊಂದನು. ಅದಕ್ಕೆ ಚಿತ್ರರಥನು ಸಾರಥಿಯು. ಯುದ್ಧ ಮಾಡುವಾಗ ತನ್ನ ರಥದ ವಜ್ರಧ್ವಜವನ್ನು ರಾವಣನು ಕತ್ತರಿಸಲು ರಾಮನು ಹನುಮಂತನನ್ನು ಧ್ವಜದಲ್ಲಿ ಕೂರಿಸಿದನು. ಅದಕ್ಕೆ ವಿಜಯನು ಸಾರಥಿಯು. ಗರುಡಧ್ವಜವಿರುವ ಸ್ವಭಾವವಾದ ಮತ್ತೊಂದು ರಥವಿರುವುದು. ಅದಕ್ಕೆ ದಾರುಕನು ಸಾರಥಿಯು. ಈ ರೀತಿಯಾಗಿ ಶ್ರೀರಾಮನಿಗೆ ಅನೇಕ ಧ್ವಜಗಳೂ ರಥಗಳೂ ಇರುವುವು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ಷಷ್ಠಸ್ಸರ್ಗಃ ॥

॥ ಶ್ರೀರಾಮದಾಸ ಉವಾಚ ॥

ತತೋ ರಾಮೋ ವಿಮಾನೇನ ಗತ್ವಾ ಕಿಂಚಿತ್ತು ಪಶ್ಚಿಮಾಂ ।
ದಿಶಂ ಯಯೌ ಪ್ರಯಾಗಂ ಚ ತ್ರಿವೇಣೀ ಯತ್ರ ವರ್ತತೇ ॥ ೧ ॥

ಕ್ರೋಶಮಾತ್ರೇ ವಿಮಾನಂ ತನ್ಮುಕ್ತ್ವಾ ರಾಮಸ್ಸಸೀತಯಾ ।
ಪದ್ಭ್ಯಾಂ ಶನೈಶ್ಶನೈರೇವ ತ್ರಿವೇಣೀಸಂಗಮಂ ಯಯೌ ॥ ೨ ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

ಆರನೆಯ ಸರ್ಗವು

೧. ರಾಮದಾಸನು ಹೇಳಿದನು–ರಾಮನು ಅನಂತರ ವಿಮಾನದಲ್ಲಿ ಹೊರಟು ಸ್ವಲ್ಪ ಪಶ್ಚಿಮದಿಕ್ಕಿಗೆ ಹೊರಟನು. ಹೊರಟು ತ್ರಿವೇಣಿಯಿರುವ ಪ್ರಯಾಗಕ್ಕೆ ಹೋದನು.

೨. ಒಂದು ಕ್ರೋಶದ ದೂರದಲ್ಲಿಯೇ ವಿಮಾನವನ್ನು ನಿಲ್ಲಿಸಿಬಿಟ್ಟನು. ಪುಷ್ಪಕದಿಂದ ಇಳಿದು ಸೀತೆಯೊಡನೆ ತ್ರಿವೇಣಿಯ ಸಂಗಮಕ್ಕೆ ಹೋದನು.

ನಾರಿಕೇಳಂ ವಾಯನೇನ ಸಮರ್ಪ್ಯ ರಘುನಂದನಃ ।
ಚತುರಂಗುಲಮಾನಂ ಹಿ ಕೇಶಬಂಧಂ ಸಭೂಷಣಂ ॥ ೩ ॥

ದದೌ ಸಂಛಿದ್ಯ ಸೀತಾಯಾಸ್ಸ್ವಯಂ ಕ್ಷೌರಮಥಾಕರೋತ್ ।
ಲಕ್ಷ್ಮಣಾದ್ಯೈರ್ಬಂಧುಭಿಶ್ಚ ವಪನಂ ರಘುನಂದನಃ ॥ ೪ ॥

ಮಾತೃಭಿಃ ಕಾರಯಾಮಾಸ ಕೃತ್ವಾ ಚೈಕಮುಪೋಷಣಂ ।
ದ್ವಿತೀಯೇ ದಿವಸೇ ಪ್ರಾಪ್ತೇ ಕೃತ್ವಾ ಶ್ರಾದ್ಧಂ ಸತರ್ಪಣಂ ॥ ೫ ॥

ಮಾಸಮಾತ್ರಂ ಮಾಘಮಾಸೇ ವಾಸಂ ಕೃತ್ವಾ ಸವಿಸ್ತರಂ ।
ಅಷ್ಟತೀರ್ಥೀಂ ತತೋ ಗತ್ವಾ ದತ್ವಾ ದಾನಾನ್ಯನೇಕಶಃ ॥ ೬ ॥

ದೃಷ್ಟ್ವಾಽಕ್ಷಯವಟಂ ರಮ್ಯಂ ನಿದ್ರಾಸ್ಥಾನಂ ನಿಜಂ ಲಯೇ ।
ಕಿಂಚಿದ್ವಿಹಸ್ಯ ಶ್ರೀರಾಮಸ್ಸೀತಯಾ ಭ್ರಾತೃಭಿಸ್ಸಹ ॥ ೭ ॥

೩–೪. ತೆಂಗಿನಕಾಯನ್ನೂ, ಬಾಗಿನವನ್ನೂ ಆ ಪ್ರವಾಹಕ್ಕೆ ಆ ಸೀತಾರಾಮರು ಅರ್ಪಿಸಿದರು. ಅನಂತರ ಸೀತೆಯ ಜಡೆಯಲ್ಲಿ ನಾಲ್ಕು ಅಂಗುಲದಷ್ಟು ಉದ್ದವನ್ನು ಆದರ ಒಡವೆಯೊಡನೆ ಕತ್ತರಿಸಿ ತ್ರಿವೇಣಿಗೆ ಅರ್ಪಿಸಿದನು. ಮತ್ತು ತಾನು ಕ್ಷೌರವನ್ನು ಮಾಡಿಸಿಕೊಂಡನು. ಲಕ್ಷ್ಮಣನೇ ಮೊದಲಾದ ತಮ್ಮಂದಿರೂ ಕ್ಷೌರವನ್ನು ಮಾಡಿಸಿಕೊಂಡರು.

೫. ತಾವೂ ತಾಯಿಯರೂ ಎಲ್ಲರೂ ಅಲ್ಲಿ ಒಂದುದಿನ ಕ್ಷೇತ್ರೋಪವಾಸವನ್ನು ಮಾಡಿದರು. ಎರಡನೆಯ ದಿವಸ ಶ್ರಾದ್ಧವನ್ನು ಮಾಡಿ ತರ್ಪಣವನ್ನು ಕೊಟ್ಟರು.

೬. ಮಾಘಮಾಸದಲ್ಲಿ ಆ ಒಂದು ತಿಂಗಳು ಪೂರ್ತಿಯಾಗಿ ಅಲ್ಲಿಯೇ ವಾಸಮಾಡಿದನು. ಅಷ್ಟತೀರ್ಥಕ್ಕೆ ಹೋಗಿ ಅಲ್ಲಿ ಬಗೆಬಗೆಯ ದಾನಗಳನ್ನು ಮಾಡಿದನು.

೭. ಪ್ರಳಯಕಾಲದಲ್ಲಿ ತನ್ನ ನಿದ್ರಾಸ್ಥಾನವಾದ ಅಕ್ಷಯವಟವ ದರ್ಶನವನ್ನು ಮಾಡಿದನು. ಅಲ್ಲಿ ಶ್ರೀರಾಮನು ಸ್ವಲ್ಪ ನಕ್ಕು ಸೀತೆಯೊಡನೆಯೂ ತಮ್ಮಂದಿರೊಡನೆಯೂ ತ್ರಿವೇಣಿ ಪೂಜೆಯನ್ನು ಮಾಡಿದನು. ಆಗ ದಿವ್ಯವಾದ ವಸ್ತ್ರಗಳನ್ನೂ, ಒಡವೆಗಳನ್ನೂ ಅರ್ಪಿಸಿದನು.

ಪೂಜಾಂ ಕೃತ್ವಾ ತ್ರಿವೇಣ್ಯಾಶ್ಚ ವಸ್ತ್ರೈರ್ದಿವ್ಯೈಸ್ಸುಭೂಷಣೈಃ ।
ಗಂಗಾಜಲೈಃ ಕಾಚಕುಂಭಾನ್ ಶತಶೋಽಥ ಸಹಸ್ರಶಃ । ॥ ೮ ॥

ಪೂರಯಿತ್ವಾ ವಿಮಾನಾಗ್ರ್ಯೇ ಸ್ಥಾಪ್ಯ ತೀರ್ಥಪುರೋಹಿತಾನ್ ।
ಪೂಜಯಿತ್ವಾ ಸವಿಸ್ತಾರಂ ನತ್ವಾ ಚೈವ ಪುನಃ ಪುನಃ ॥ ೯ ॥

ತಾನ್ ಪೃಷ್ಟ್ವಾ ಪುಷ್ಪಕೇ ಸ್ಥಿತ್ವಾ ಯಯಯಾವಾಕಾಶವರ್ತ್ಮನಾ ।
ವಿಂಧ್ಯಾಚಲಂ ಸಮಾಶ್ರಿತ್ಯ ಯತ್ರ ದುರ್ಗಾ ತು ವರ್ತತೇ ॥ ೧೦ ॥

ತತ್ರ ಸ್ನಾತ್ವಾ ತೀರ್ಥವಿಧಿಂ ಪೂರ್ವವಚ್ಚ ವಿಧಾಯ ಸಃ ।
ತಾಂ ವಿಧ್ಯವಾಸಿನೀಂ ಪೂಜ್ಯ ವಸ್ತ್ರೈರಾಭರಣಾದಿಭಿಃ ॥ ೧೧ ॥

ಕೃತ್ವಾ ದಾನಾನ್ಯನೇಕಾನಿ ತೋಷ್ಯ ತೀರ್ಥಪುರೋಹಿತಾನ್ ।
ಯಯೌ ಕಾಶೀಂ ಪುಷ್ಪಕಸ್ಥಃ ಶ್ರೀರಾಮಸ್ಸೀತಯಾ ಸುಖಂ ॥ ೧೨ ॥

೮–೯. ಅಲ್ಲಿ ಗಂಗೆಯ ಜಲವನ್ನು ನೂರಾರು ಗಾಜಿನ ಪಾತ್ರೆಗಳಿಗೆ ತುಂಬಿಕೊಂಡನು. ಅವೆಲ್ಲವನ್ನೂ ವಿಮಾನದ ಮೇಲುಭಾಗದಲ್ಲಿಟ್ಟುಕೊಂಡನು. ಅಲ್ಲಿ ತೀರ್ಥಪುರೋಹಿತರನ್ನು ಪೂಜಿಸಿ ಅವರಿಗೆ ಅನೇಕಬಾರಿ ನಮಸ್ಕರಿಸಿ ಅವರ ಅನುಜ್ಞೆಯನ್ನು ತೆಗೆದುಕೊಂಡು ಪುಷ್ಪಕದಲ್ಲಿ ಕುಳಿತು ಆಕಾಶಮಾರ್ಗ ದಿಂದ ಹೊರಟನು.

೧೦–೧೧. ಅಲ್ಲಿಂದ ಮುಂದೆ ದುರ್ಗಿಯ ಸ್ಥಾನವಾದ ವಿಂಧ್ಯಾಚಲಕ್ಕೆ ಹೋದನು. ಅಲ್ಲಿ ಸ್ನಾನಮಾಡಿ ಮೊದಲಿನಂತೆ ತೀರ್ಥದ ವಿಧಿಯನ್ನು ಮಾಡಿ ಆ ವಿಂಧ್ಯವಾಸಿನಿಯಾದ ದುರ್ಗೆಯನ್ನು ವಸ್ತ್ರ ಆಭರಣಗಳಿಂದ ಪೂಜಿಸಿದನು.

೧೨. ಅನೇಕ ಬಗೆಯಾದ ದಾನಗಳನ್ನು ಮಾಡಿ, ತೀರ್ಥಪುರೋಹಿತರನ್ನು ತೃಪ್ತಿಪಡಿಸಿದನು. ಅಲ್ಲಿಂದ ಮುಂದೆ ಪುಷ್ಪಕದಲ್ಲಿ ಕುಳಿತು ಕಾಶಿಗೆ ಹೋದನು.

ಏತಸ್ಮಿನ್ನಂತರೇ ಕಾಶ್ಯಾಂ ಕಾಶೀಸ್ಥಾಃ ಪುಷ್ಪಕಂ ತು ತತ್ ।
ಕೋಟಿಸೂರ್ಯ ಪ್ರತೀಕಾಶಂ ದೃಷ್ಟ್ವಾ ಪಶ್ಚಿಮತೋ ದಿಶಂ ॥ ೧೩ ॥

ಯತ್ಪ್ರಾಚೀಂ ಕಾಶ್ಯಭಿಮುಖಮಾಗಚ್ಛಂತಂ ಮಹೋಜ್ಜ್ವಲಂ ।
ಚಕ್ರುರ್ವಿತರ್ಕಾನ್ ವಿತರ್ಕಾನ್ ಶತಶೋಟ್ಟಾಲಸಂಸ್ಥಿತಾಃ ॥ ೧೪ ॥

ಕೇಚಿದೂಚುಶ್ಚ ದಾವಾಗ್ನಿಸ್ತ್ವಯಂ ಪರ್ವತಮಸ್ತಕೇ ।
ಸೂರ್ಯೇಣ ವಿಸ್ಮೃತಃ ಪಂಥಾ ಭ್ರಮಣಾದ್ಭ್ರಾಂತಿಮಾಪ ಸಃ ॥ ೧೫ ॥

ಇತಿ ಕೇಚಿಜ್ಜನಾಃ ಪ್ರೋಚುಃ ಕೇಚಿದೂಚುಸ್ತ್ವಯಂ ಮುನಿಃ ।
ನಾರದಸ್ತು ಸಮಾಯಾತಿ ಕೇಚಿತ್ತತ್ರ ಬಭಾಷಿರೇ ॥ ೧೬ ॥

ಪತತ್ಯಸೌ ರವಿಸ್ಸ್ವರ್ಗಾತ್ ಕೇಚಿದ್ದ್ರೋಣಾಚಲಾನ್ವಿತಃ ।
ವಾಯುಪುತ್ರೋಯಮಿತಿ ತೇ ಪ್ರೋಚುಃ ಕಾಶೀನಿವಾಸಿನಃ ॥ ೧೭ ॥

೧೩–೧೪. ಈ ಪುಷ್ಪಕವು ಕಾಶಿಯ ಕಡೆ ಹೊರಡಲು ಕಾಶಿಯ ಜನರು ಮಹಡಿಯಮೇಲೆ ಆ ಪ್ರಕಾಶಮಾನವಾದ ಪುಷ್ಪಕವನ್ನು ನೋಡಿ ನಾನಾಬಗೆಯಾದ ಊಹೆಗಳನ್ನು ಮಾಡುತ್ತಲಿದ್ದರು.

೧೫. ಕೆಲವರು ಇದು ಪರ್ವತದ ತುದಿಯಲ್ಲಿ ಉರಿಯುತ್ತಿರುವ ಕಾಳ್ಗಿಚ್ಚು ಎಂದೆನ್ನುತ್ತಿದ್ದರು. ಕೆಲವರು ಸೂರ್ಯನು ದಾರಿಯನ್ನು ಅನೇಕವಾಗಿ ಮಾಡಿಕೊಂಡಿರುವನು. ದಾರಿಯು ಅನೇಕವಾದುದರಿಂದ ಅವನಿಗೆ ಭ್ರಾಂತಿಯುಂಟಾಗಿರಬಹುದೆಂದರು.

೧೬–೨೦. ಮತ್ತೆ ಕೆಲವರು ದೇವಮುನಿಯಾದ ನಾರದನು ಬರುತ್ತಿರುವನು. ಎನ್ನುತ್ತಿದ್ದರು. ಕೆಲವರು ಸೂರ್ಯನು ಸ್ವರ್ಗದಿಂದ ಬೀಳುತ್ತಿರುವನೆಂದರು. ಕೆಲವರು ವಾಯುಪುತ್ರನಾದ ಹನುಮಂತನು ದ್ರೋಣಾಚಲದೊಡನೆ ಹೋಗುತ್ತಿರುವನು ಎನ್ನುತ್ತಿದ್ದರು. ಕೆಲವರು ಚಂದ್ರನನ್ನು ಜಿಂಕೆಯು ಕೆಡಗಿ ಬಿಟ್ಟಿದ್ದರಿಂದ ಅವನು ಬೀಳುತ್ತಿರುವನು ಎಂದರು. ಕೆಲವರು ವಿಶ್ವೇಶ್ವರನು ಕೆಳಕ್ಕೆ

ಕೇಚಿದೂಚುಶ್ಶಶೀ ಸ್ವರ್ಗಾನ್ಮೃಗೇಣ ವಿನಿಪಾತಿತಃ ।
ಕೇಚಿದೂಚುಶ್ಚ ವಿಶ್ವೇಶಂ ಕೇಚಿದೂಚುಸ್ಸುದರ್ಶನಂ ॥ ೧೮ ॥

ಕೇಚಿದೂಚುಸ್ಸುವರ್ಣಾದ್ರಿಂ ಕೇಚಿತ್ಪ್ರೋಚುರರುಂಧತೀಂ ।
ಕೇಚಿತ್ಪತತ್ರಿರಾಜಾನಂ ಕೇಚಿಚ್ಚ ಪ್ರಳಯಾನಲಂ ॥ ೧೯ ॥

ಕೇಚಿತ್ಪ್ರೋಚುರ್ಮಹಾಘೋರಂ ವಹ್ನ್ಯಸ್ತ್ರಂ ಕೇನ ನೋಚಿತಂ ।
ಕೇಚಿತ್ಪ್ರೋಚುಸ್ಸಹಸ್ರಾಸ್ಯಸ್ತ್ವಯಂ ಮಣಿವಿರಾಜಿತಃ ॥ ೨೦ ॥

ಏವಂ ವದಂತಸ್ತೇ ಯಾನಂ ದದೃಶುಃ ಪುಷ್ಪಕಂ ಮಹತ್ ।
ಮಹಾಕೋಲಾಹಲಂ ಚಕ್ರುಃ ಪ್ರೋಚುಸ್ತ್ವತ್ರ ಸಮಾಗತಃ ॥ ೨೧ ॥

ರಾಮೋಽಯೋಧ್ಯಾಪತಿಃ ಶ್ರೀಮಾನ್ ಯಾತ್ರಾಂ ಕರ್ತುಂ ಸನಾಗರಃ ।
ವಿಶ್ವನಾಥೋಽಪಿ ತಚ್ಛ್ರುತ್ವಾ ಪಾರ್ವತ್ಯಾ ವೃಷಭಸ್ಥಿತಃ ॥ ೨೨ ॥

ಬರುತ್ತಿರುವನು ಎನ್ನುತ್ತಿದ್ದರು. ಕೆಲವರು ಸುದರ್ಶನಚಕ್ರವು ಹೊಳೆಯುತ್ತ ಬರುತ್ತಿದೆ ಎನ್ನುತ್ತಿದ್ದರು. ಕೆಲವರು ಇದು ಮೇರುಪರ್ವತವಿರಬಹುದೆಂದರು. ಕೆಲವರು ಅಂತರಿಕ್ಷದಲ್ಲಿ ಅರುಂಧತಿಯು ಬರುತ್ತಿರಬಹುದು ಎನ್ನುತ್ತಿದ್ದರು. ಕೆಲವರು ಪಕ್ಷಿರಾಜನಾದ ಗರುಡನಿರಬಹುದೆಂದು ಎನ್ನುತ್ತಿದ್ದರು. ಕೆಲವರು ಇದು ಪ್ರಳಯಾಗ್ನಿಯು ಎಂದೆನುತ್ತಿದ್ದರು. ಕೆಲವರು ಇದು ಯಾವನೋ ಭಟನು ಬಿಟ್ಟಿರುವ ಆಗ್ನೇಯಾಸ್ತ್ರವಿರಬಹುದೆಂದರು. ಕೆಲವರು ಇವನು ಸಾವಿರ ಮುಖಗಳಲ್ಲಿಯೂ ಮಣಿಯನ್ನು ಹೊಂದಿರುವ ಶೇಷನಿರಬಹುದು ಎಂದೆನ್ನುತ್ತಿದ್ದರು.

೨೧. ಅವರೆಲ್ಲರೂ ಹೀಗೆ ಹೇಳುತ್ತ ಕೊನೆಗೆ ಪುಷ್ಪಕಯಾನವು ಬಂದುದನ್ನು ನೋಡಿದರು. ಆಗ ಎಲ್ಲರೂ ಗಲಭೆಮಾಡಲು ಮೊದಲುಮಾಡಿದರು.

೨೨-೨೩. ಅಯೋಧ್ಯಾಧಿಪತಿಯಾದ ಶ್ರೀರಾಮನು ಯಾತ್ರೆಯನ್ನು ಮಾಡಲು ತನ್ನ ಪಟ್ಟಣದವರೊಡನೆ ಬಂದಿರುವನು ಎಂದು ದೃಢಪಡಿಸಿಕೊಂಡರು. ಅನಂತರ ವಿಶ್ವನಾಥನೂ ಕೂಡ ಪಾರ್ವತಿಯೊಡನೆ ಬಸವನಮೇಲೆ ಕುಳಿತು

ಪ್ರತ್ಯುಜ್ಜಗಾಮ ಶ್ರೀರಾಮಂ ಕಾಶೀಸ್ಥೈಃ ಪರಿವೇಷ್ಟಿತಃ ।
ಉಪಾಯನಂ ರಾಘವಸ್ಯ ಗೃಹೀತ್ವಾ ಬಹುವಿಸ್ತರಂ ॥ ೨೩ ॥

ಏತಸ್ಮಿನ್ನಂತರೇ ರಾಮಸ್ತಂ ದೇಹಲಿವಿನಾಯಕಂ ।
ಪೂಜ್ಯ ವಿಶ್ವೇಶ್ವರಂ ದೃಷ್ಟ್ವಾ ನನಾಮ ಶಿರಸಾ ತದಾ ॥ ೨೪ ॥

ಆಲಿಂಗಿತಶ್ಶಿವೇನಾಥ ಗೃಹೀತ್ವೋಪಾಯನಂ ಶಿವಾತ್ ।
ಸ್ವಯಂ ವಸ್ತ್ರೈರಾಭರಣೈಃ ಪೂಜಯಾಮಾಸ ಶಂಕರಂ ॥ ೨೫ ॥

ವಿವೇಶ ಕಾಶೀಂ ಶಂಭೋಶ್ಚ ಧೃತ್ವಾ ಹಸ್ತೇನ ಸತ್ಕರಂ ।
ತಾವುಭೌ ವಾಹನೇ ಮುಕ್ತ್ವಾ ಜಗ್ಮತುರ್ಮಣಿಕರ್ಣಿಕಾಂ ॥ ೨೬ ॥

ತತಸ್ಸೀತಾಯುತೋ ರಾಮಶ್ಚಕ್ರಪುಷ್ಕರಣೀ ಜಲೇ ।
ಸಮರ್ಪ್ಯ ಶ್ರೀಫಲಂ ಸ್ನಾತ್ವಾ ಸಚೈಲಂ ಕ್ಷೌರಪೂರ್ವಕಂ ॥ ೨೭ ॥

ಕಾಶೀಜನರನ್ನು ಕೂಡಿಕೊಂಡು ಶ್ರೀರಾಮನನ್ನು ಎದುರುಗೊಂಡನು. ಅವರೆಲ್ಲರೂ ರಾಮನಿಗೆ ಕಾಣಿಕೆಯನ್ನು ಕೊಡಲು ಬಗೆಬಗೆಯ ಪದಾರ್ಥಗಳನ್ನು ಹಿಡಿದಿದ್ದರು.

೨೪. ಇಷ್ಟರಲ್ಲಿಯೇ ರಾಮನು ಪೂಜ್ಯನಾದ ದೆಹಲಿವಿನಾಯಕನನ್ನು ಪೂಜಿಸಿ ವಿಶ್ವೇಶ್ವರನನ್ನೂ ದರ್ಶನಮಾಡಿ ತಲೆಬಗ್ಗಿಸಿ ನಮಸ್ಕರಿಸಿದನು.

೨೫. ರಾಮನು ಅವನ ಕೈಯ್ಯಲ್ಲಿದ್ದ ಕಾಣಿಕೆಯನ್ನು ಸ್ವೀಕರಿಸಿದನು. ಶಿವನು ಶ್ರೀರಾಮನನ್ನು ಸಂತೋಷದಿಂದ ಆಲಂಗಿಸಿಕೊಂಡನು. ಆ ಶಂಕರನನ್ನು ವಸ್ತ್ರಾಲಂಕಾರಗಳಿಂದ ರಾಮನು ಪೂಜಿಸಿದನು.

೨೬. ಶಂಭುವಿನ ಕೈಯ್ಯನ್ನು ಹಿಡಿದುಕೊಂಡು ರಾಮನು ಕಾಶಿಯನ್ನು ಪ್ರವೇಶಿಸಿದನು. ಆಗ ಶಂಕರರಾಮರು ವಾಹನಗಳನ್ನು ಬಿಟ್ಟುಬಿಟ್ಟು ಮಣಿಕರ್ಣಿಕೆಗೆ ಹೋದರು.

೨೭. ಅಲ್ಲಿ ರಾಮನು ಸೀತೆಯೊಡನೆ ಬಿಲ್ವಪತ್ರಿಕಾಯವನ್ನು ಚಕ್ರಪುಷ್ಕರಣಿಯಲ್ಲಿ ಅರ್ಪಿಸಿ ಕ್ಷೌರವನ್ನು ಮಾಡಿಸಿಕೊಂಡು ಸಚೇಲಸ್ನಾನವನ್ನು ಮಾಡಿದನು.

ನಿತ್ಯಯಾತ್ರಾಂ ವಿಧಾಯಾಥ ಕೃತ್ವಾ ಚೈಕಮುಪೋಷಣಂ ।
ತೀರ್ಥಶ್ರಾದ್ಧಾನಿ ಸಂಪಾದ್ಯ ಪಂಚತೀರ್ಥೀಂ ವಿಧಾಯ ಚ ॥ ೨೮ ॥

ಅಂತರ್ಗೃಹೀಂ ಮಹಾಯಾತ್ರಾಂ ಮಾನಸದ್ವಯಮೇವ ಚ ।
ದ್ವಿಚತ್ವಾರಿಂಶಲಿಂಗಾನಿ ಹ್ಯಷ್ಟಲಿಂಗಾನಿ ವೈ ತತಃ ॥ ೨೯ ॥

ಷಟ್ಪಂಚಾಶಚ್ಚ ಗಣಪಾಂಸ್ತಥಾಷ್ಟ ಭೈರವಾನ್ ಪುನಃ ।
ಯೋಗಿನೀಶ್ಚ ಚತುಷ್ಷಷ್ಟೀಸ್ತಾ ದೇವೀಶ್ಚ ತಥಾ ನವ । ॥ ೩೦ ॥

ತಥಾಷ್ಟದಿಕ್ಪಂತೀಂಶ್ಚಾಪಿ ತಥಾ ಚೈವ ನವಗ್ರಹಾನ್ ।
ಕ್ಷೇತ್ರಪ್ರದಕ್ಷಿಣಾಂ ಪಂಚಕ್ರೋಶಯಾತ್ರಾಂ ರಘೂತ್ತಮಃ ॥ ೩೧ ॥

ಚತುರ್ದಶೇಮಾ ಯಾತ್ರಾಸ್ತು ಕೃತ್ವಾ ಚೈವ ಸವಿಸ್ತರಂ ।
ರಾಮೇಶ್ವರಂ ಮಹಾಲಿಂಗಂ ವರುಣಾಯಾಸ್ತಟೇ ಶುಭೇ ॥ ೩೨ ॥

---

೨೮. ಅಲ್ಲಿ ನಿತ್ಯಯಾತ್ರೆಯನ್ನು ಮಾಡಿ ಆ ದಿನ ಒಂದು ಉಪವಾಸವನ್ನು ಮಾಡಿದನು. ತೀರ್ಥಶ್ರಾದ್ಧವನ್ನು ಮಾಡಿ ಪಂಚತೀರ್ಥಯಾತ್ರೆಯನ್ನು ಮಾಡಿದನು.

೨೯–೩೧. ಅನಂತರ ಒಂದು ಅಂತರ್ಗೃಹಯಾತ್ರೆಯೆಂಬ ಮಹಾಯಾತ್ರೆ ಎರಡು ಮಾನಸಯಾತ್ರೆಗಳು, ನಾಲ್ವತ್ತೆರಡು ಲಿಂಗಗಳ ಯಾತ್ರೆ, ಅಷ್ಟಲಿಂಗ ಯಾತ್ರೆ, ಐವತ್ತಾರು ಗಣಪತಿಗಳ ಯಾತ್ರೆ, ಎಂಟು ಭೈರವರ ಯಾತ್ರೆ, ಅರವತ್ತ ನಾಲ್ಕು ಯೋಗಿನಿಗಳ ಯಾತ್ರೆ, ಒಂಭತ್ತು ದುರ್ಗಾದೇವಿಯರ ಯಾತ್ರೆ, ಅಷ್ಟ ದಿಕ್ಪಾಲಕರ ಯಾತ್ರೆ, ನವಗ್ರಹಗಳ ಯಾತ್ರೆ, ಕ್ಷೇತ್ರಪ್ರದಕ್ಷಿಣಯಾತ್ರೆ, ಪಂಚ ಕ್ರೋಶೀಯಾತ್ರೆ ಎಂಬುದಾಗಿ ಹದಿನಾಲ್ಕು ಯಾತ್ರೆಗಳುಂಟು.

೩೨–೩೩. ರಾಮನು ಈ ಹದಿನಾಲ್ಕು ಯಾತ್ರೆಗಳನ್ನೂ ಕ್ರಮವಾಗಿ ಮಾಡಿದನು. ಆ ಕಾಶಿಯ ವಾಯುವ್ಯದಿಗ್ಭಾಗದ ಎಲ್ಲೆಯಲ್ಲಿ ವರುಣೆಯ

ಕಾಶ್ಯಾ ವಾಯುವ್ಯದಿಗ್ಭಾಗೇ ಸೀಮಾಯಾಂ ಸ್ಥಾಪ್ಯ ಸೂತ್ರವಂ ।
ರಾಮತೀರ್ಥಂ ಸ್ವೀಯನಾಮ್ನಾ ಭಾಗೀರಥ್ಯಾಂ ಚಕಾರ ಸಃ ॥ ೩೩ ॥

ಏತಸ್ಮಿನ್ನಂತರೇ ತತ್ರ ವಾಯುಪುತ್ರಸ್ಸಮಾಗತಃ ।
ವೃತ್ತಂ ಶ್ರುತ್ವಾ ರಾಘವಸ್ಯ ಯಾತ್ರಾಂ ಕರ್ತುಂ ಗತಸ್ತ್ವಿತಿ ॥ ೩೪ ॥

ಸೀತಾರಾಮೌ ನಮಸ್ಕೃತ್ಯ ಸ್ನಾತ್ವಾ ಭಾಗೀರಥೀಜಲೇ ।
ಸ್ವನಾಮ್ನಾ ಶಂಕರಂ ತೀರ್ಥಮಕರೋಜ್ಜಾಹ್ನವೀತಟೇ ॥ ೩೫ ॥

ಘಟ್ಟಂ ಬಬಂಧ ಗಂಗಾಯಾಸ್ತಟೇ ರಮ್ಯಂ ದೃಷಣ್ಮಯಂ ।
ಕಾಶ್ಯಾಮದ್ಯಾಪಿ ತನ್ನಾಮ್ನಾ ಘಟ್ಟೋಽಸ್ತಿ ಪರಮಶ್ಶುಭಃ ॥ ೩೬ ॥

ತಥಾ ಚಕಾರ ರಾಮೋಽಪಿ ಘಟ್ಟಬಂಧನಮುತ್ತಮಂ ।
ದದರ್ಶ ಪ್ರತ್ಯಹಂ ಯಾತ್ರಾಃ ಕಾಶ್ಯಾಂ ರಾಮಸ್ಸಸೀತಯಾ ॥ ೩೭ ॥

ದಡದಲ್ಲಿ ರಾಮೇಶ್ವರವೆಂಬ ಲಿಂಗವನ್ನು ಸ್ಥಾಪಿಸಿದನು. ಭಾಗೀರಥಿಯಲ್ಲಿ ರಾಮತೀರ್ಥವೆಂಬ ತೀರ್ಥವನ್ನು ಮಾಡಿದನು.

೩೪. ಇಷ್ಟರೊಳಗೆ ಮಾರುತಿಯು ರಾಮನು ಯಾತ್ರೆಗೆ ಹೊರಟಿರುವರು. ವಿಷಯವನ್ನು ಕೇಳಿ ಅಲ್ಲಿಗೆ ಆಗ ಬಂದನು.

೩೫–೩೬. ಒಡನೆಯೇ ಸೀತಾರಾಮರಿಗೆ ನಮಸ್ಕರಿಸಿದನು. ಅನಂತರ ಭಾಗೀರಥಿಯಲ್ಲಿ ಸ್ನಾನಮಾಡಿದನು. ಅಲ್ಲಿ ಶಂಕರನನ್ನು ಆರಾಧಿಸಿ ತನ್ನ ಹೆಸರಿನ ತೀರ್ಥವನ್ನು ನಿರ್ಮಿಸಿ ಒಂದು ಘಟ್ಟವನ್ನು ಕಲ್ಲಿನಿಂದ ಕಟ್ಟಿಸಿದನು. ಈಗಲೂ ಕೂಡ ಕಾಶಿಯಲ್ಲಿ ಅವನ ಹೆಸರಿನಿಂದ ಹನುಮದ್ಘಟ್ಟವೆಂಬ ಘಟ್ಟವು ಇರುವುದು.

೩೭–೩೮. ರಾಮನೂ ಕೂಡ ಒಂದು ಘಟ್ಟವನ್ನು ಗಂಗೆಗೆ ಕಟ್ಟಿಸಿದನು. ಪ್ರತಿದಿನವೂ ರಾಮನು ಸೀತೆಯೊಡನೆ ಕಾಶಿಯಲ್ಲಿ ಯಾತ್ರೆಗಳನ್ನು

ಚಕಾರ ಪಂಚಗಂಗಾಯಾಂ ಕಾರ್ತಿಕಸ್ನಾನಮುತ್ತಮಂ ।
ಕಾಶೀವಾಸಂ ವರ್ಷಮೇಕಂ ಚಕಾರ ಧರ್ಮತತ್ಪರಃ ॥ ೩೮ ॥

ತೀರ್ಥವಾಸಾರ್ಥಿನಸ್ಸರ್ವಾನ್ ಸಂತರ್ಪ್ಯ ಚ ಪೃಥಕ್ ಪೃಥಕ್ ।
ರತ್ನೈರ್ಹಿರಣ್ಯೈರ್ವಾಸೋಭಿರಶ್ವಾಭರಣಧೇನುಭಿಃ ॥ ೩೯ ॥

ವಿಚಿತ್ರೈಶ್ಚ ತಥಾಪಾತ್ರೈಃ ಸ್ವರ್ಣರೌಪ್ಯಾದಿ ನಿರ್ಮಿತೈಃ ।
ಅಮೃತಸ್ವಾದುಪಕ್ವಾನ್ನೈಃ ಪಾಯಸೈಶ್ಚ ಸಶರ್ಕರೈಃ ॥ ೪೦ ॥

ಸಗೋರಸೈರನ್ನದಾನೈರ್ಧಾನ್ಯದಾನೈರನೇಕಧಾ ।
ಗಂಧಚಂದನಕರ್ಪೂರೈಸ್ತಾಂಬೂಲೈಶ್ಚಾರುಚಾಮರೈಃ ॥ ೪೧ ॥

ಸತೂಲೈರ್ಮೃದುಪರ್ಯಂಕೈರ್ದೀಪಿಕಾದರ್ಪಣಾಸನೈಃ
ಶಿಬಿಕಾದಾಸದಾಸೀಭಿರ್ವಾಹನೈಃ ಪಶುಭಿಃ ಗೃಹೈಃ ॥ ೪೨ ॥

ಮಾಡುತ್ತಿದ್ದನು. ಮತ್ತು ಪಂಚಗಂಗೆಯಲ್ಲಿ ಉತ್ತಮವಾದ ಕಾರ್ತಿಕಸ್ನಾನವನ್ನು ಮಾಡಿದನು. ಧರ್ಮತತ್ಪರನಾಗಿ ಕಾಶಿಯಲ್ಲಿ ಒಂದು ವರ್ಷಕಾಲ ವಾಸಮಾಡಿದನು.

೩೯–೪೧. ತೀರ್ಥವಾಸಿಗಳಿಗೆ ಬೇರೆ ಬೇರೆಯಾಗಿ ಬೇಕಾದುದನ್ನು ಕೊಟ್ಟು ಸಂತೋಷಪಡಿಸಿದನು. ಅವರಿಗೆ ರತ್ನಗಳನ್ನೂ, ಚಿನ್ನವನ್ನೂ, ಬಟ್ಟೆಗಳನ್ನೂ ಆಭರಣಗಳನ್ನೂ ಕುದುರೆಗಳನ್ನೂ ಚಿನ್ನ ಬೆಳ್ಳಿಯ ವಿಧ ವಿಧವಾದ ಪಾತ್ರೆಗಳನ್ನೂ ಗೋವುಗಳನ್ನೂ ಕೊಟ್ಟನು. ಅಮೃತದಂತೆ ರುಚಿಯಾದ ಭೋಜನವನ್ನು ಮಾಡಿಸಿದನು. ಈ ರೀತಿಯಾಗಿ ಅನ್ನದಾನಮಾಡಿಸಿದನು. ಈ ರೀತಿಯಾಗಿ ಅನ್ನದಾನವನ್ನು ಮಾಡಿ ಧಾನ್ಯದಾನಗಳನ್ನೂ ಮಾಡಿದನು. ಗಂಧ, ಚಂದನ, ಕರ್ಪೂರ, ತಾಂಬೂಲ ಚಾಮರಗಳನ್ನೂ ಕೊಟ್ಟನು.

೪೨–೪೩. ಹತ್ತಿಯಿಂದ ಕೂಡಿದ ಸುಪ್ಪತ್ತಿಗೆಯ ಹಾಸಿಗೆಯನ್ನೂ ದೀಪ, ಕನ್ನಡಿ, ಮಂಚ, ಮೇನ, ಪಲ್ಲಕ್ಕಿ, ದಾಸಿಯರು, ಪಶುಗಳು, ಮನೆಗಳು, ಧ್ವಜ, ಪತಾಕೆ, ಬೆಳ್ಳಿಗಿರುವ ಮಗ್ಗುಲುಹಾಸಿಗೆಗಳು ಮೇಲ್ಕಟ್ಟುಗಳು ದಿಂಬುಗಳು

ಚಿತ್ರಧ್ವಜಪತಾಕಾಭಿರುಲ್ಲೋಚೈಶ್ಚಂದ್ರಚಾರುಭಿಃ ।
ನಾನಾವ್ರತೈರ್ಮಹಚ್ಛ್ರೇಷ್ಠೈಃ ಸಧ್ವಜಾರೋಪಣಾದಿಭಿಃ ॥ ೪೩ ॥

ವರ್ಷಾಶನಪ್ರದಾನೈಶ್ಚ ಗೃಹೋಪಸ್ಕರಸಂಯುತೈಃ ।
ಉಪಾನತ್ಪಾದುಕಾಭಿಶ್ಚ ಯತೀಶ್ಚಾಪಿ ತಪಸ್ವಿನಃ ॥ ೪೪ ॥

ಯೋಗ್ಯೈಃ ಪಟ್ಟದುಕೂಲೈಶ್ಚ ಮೃದುಲೈಶ್ಚಿತ್ರ ಕಂಬಲೈಃ ।
ದಂಡೈಃ ಕಮಂಡಲುಯುತೈರಜಿನೈರ್ಮೃಗಸಂಭವೈಃ ॥ ೪೫ ॥

ಕೌಪೀನೈರುಚ್ಚಮಂಚೈಶ್ಚ ಪರಿಚಾರಕ ಕಾಂಚನೈಃ ।
ಮಠೈರ್ವಿದ್ಯಾರ್ಥಿನಾಮನ್ನೈರತಿಥ್ಯರ್ಥಂ ಮಹಾಧನೈಃ ॥ ೪೬ ॥

ಬಹುಧೌಷಧದಾನೈಶ್ಚ ಭಿಷಜಾಂ ಜೀವನಾದಿಭಿಃ ।
ಮಹಾಪುಸ್ತಕಸಂಭಾರೈರ್ಲೇಖಕಾನಾಂ ಚ ಜೀವನೈಃ ॥ ೪೭ ॥

ಇವೆಲ್ಲವನ್ನೂ ಕೊಟ್ಟನು. ಅನೇಕ ಬಗೆಯಾದ ವ್ರತಗಳನ್ನೂ ಧ್ವಜಾರೋಪಣಗಳನ್ನೂ ಮಾಡಿ ಎಲ್ಲರಿಗೂ ಬೇಕಾದಂತೆ ಬಹುವಾಗಿ ದಾನಮಾಡಿದನು.

೪೪–೪೬. ಅವರಿಗೆಲ್ಲಾ ವರ್ಷಾಶನವನ್ನು ಕೊಟ್ಟನು. ಮನೆಗಳನ್ನೂ ಸಂಸಾರಕ್ಕೆ ಬೇಕಾದ ಪದಾರ್ಥಗಳನ್ನೂ ಕೊಟ್ಟನು. ಯತಿಗಳಿಗೆ ಪಾದುಕೆ ಮುಂತಾದುವನ್ನೂ ಕೊಟ್ಟನು. ಯೋಗದಂಡ ದುಕೂಲಗಳು ಮೃದುವಾದ ಚಿತ್ರಕಂಬಳಿಗಳು ದಂಡ ಕಮಂಡಲು ಕೃಷ್ಣಾಜಿನ ಕೌಪೀನ ಎತ್ತರವಾದ ಮಂಚ ಪರಿಚಾರಕರು ಚಿನ್ನ ಮಠ ವಿದ್ಯಾರ್ಥಿಗಳಿಗೆ ಅನ್ನದ ಸೌಕರ್ಯ ಅತಿಥಿಗಳಿಗೆ ಅನ್ನಕ್ಕೋಸ್ಕರ ಬಹುವಾದ ಧನ ಇವೆಲ್ಲವನ್ನೂ ಕೊಟ್ಟನು.

೪೭–೪೯. ಔಷಧಿಗಳು ವೈದ್ಯರಿಗೆ ಜೀವನಕ್ಕೆ ಸಾಧಕ ಪುಸ್ತಕಭಂಡಾರ ಪುಸ್ತಕ ಬರೆಯುವವರಿಗೆ ಜೀವನವಾದ ಧನಕ್ಕೆ ಅನುಕೂಲ ಅಮೂಲ್ಯವಾದ

ರಸಾಯನೈರಮೂಲ್ಯೈಶ್ಚ ಸತ್ರದಾನೈರನೇಕಶಃ ।
ಗ್ರೀಷ್ಮೇ ಪ್ರಪಾರ್ಥದ್ರವಿಣೈಃ ಹೇಮಂತೇಗ್ನಿಷ್ಟಕೇಂಧನೈಃ ॥ ೪೮ ॥

ಛತ್ರಾಚ್ಛಾದನಕಾದ್ಯರ್ಥೈರ್ವರ್ಷಾಕಾಲೋಚಿತೈರ್ಬಹು ।
ರಾತ್ರೌ ಪಾಠಪ್ರದೀಪೈಶ್ಚ ಪಾದಾಭ್ಯಂಜನಕಾದಿಭಿಃ ॥ ೪೯ ॥

ಪುರಾಣಪಾಠಕಾಂಶ್ಚಾಪಿ ಪ್ರತಿದೇವಾಲಯಂ ಧನೈಃ ।
ದೇವಾಲಯೇ ನೃತ್ಯಗೀತಕರಣಾರ್ಥೈರನೇಕಶಃ ॥ ೫೦ ॥

ದೇವಾಲಯೇ ಸುಧಾಕಾರ್ಯೈರ್ಜೀರ್ಣೋದ್ಧಾರೈರನೇಕಶಃ ।
ಚಿತ್ರಲೇಖನಮೂಲ್ಯೈಶ್ಚ ರಂಗಮಾಲ್ಯಾದಿಮಂಡನೈಃ ॥ ೫೧ ॥

ಆರಾರ್ತಿಕೈರ್ಗುಗ್ಗುಲೈಶ್ಚ ದಶಾಂಗಾದಿಸುಧೂಪಕೈಃ ।
ಕರ್ಪೂರವರ್ತಿಕಾದ್ಯೈಶ್ಚ ದೇವಾರ್ಚಾರ್ಥೈರನೇಕಶಃ ॥ ೫೨ ॥

ರಸಾಯನ ಸತ್ರದಾನಗಳು ಗ್ರೀಷ್ಮಕಾಲದಲ್ಲಿ ಅರವಟ್ಟಿಗೆಗೋಸ್ಕರ ಹಣ ಹಿಮಂತ ಋತುವಿನಲ್ಲಿ ಬೆಂಕಿಯನ್ನು ಕಾಸಲು ಅಗ್ಗಿಷ್ಟಿಕೆ ಸೌದೆ ಧನ, ಛತ್ರಿ, ಹೊದ್ದಿಕೆ, ಮಳೆಗಾಲಕ್ಕೆ ಯೋಗ್ಯವಾದ ಪದಾರ್ಥಗಳು ರಾತ್ರಿಯಲ್ಲಿ ಓದುವುದಕ್ಕೆ ದೀಪ, ಪಾದಾಭ್ಯಂಜನಕ್ಕೆ ಬೇಕಾದ ಸೌಕರ್ಯಗಳು ಇವು ಕಲ್ಪಿಸಿದನು.

೫೦. ಪ್ರತಿಯೊಂದು ದೇವಾಲಯದಲ್ಲಿಯೂ ಪುರಾಣಪಾಠಕರನ್ನು ನಿಯಮಿಸಿದನು. ದೇವಾಲಯಗಳಿಗೆ ಪೂಜೆಗೆ ಧನವನ್ನು ಕೊಟ್ಟನು. ಆ ದೇವಾಲಯಗಳಲ್ಲಿ ನೃತ್ಯಗೀತಗಳನ್ನೂ ಏರ್ಪಡಿಸಿದನು.

೫೧-೫೨. ದೇವಸ್ಥಾನಗಳಿಗೆ ಸುಣ್ಣಬಳಿಸಿದನು ಹಳೆಯವನ್ನು ಜೀರ್ಣೋದ್ಧಾರಮಾಡಿದನು. ಚಿತ್ರಲೇಖನ ಮಾಲೆ ರಂಗವಲ್ಲಿಯನ್ನಿಡುವುದು ಆರತಿ ಬೆಳಗುವುದು ಗುಗ್ಗುಳ ಧೂಪಗಳನ್ನು ಹಾಕುವುದು ದಶಾಂಗಗಳನ್ನು ಹಚ್ಚುವುದು ಕರ್ಪೂರ, ಬತ್ತಿ, ದೇವತಾರ್ಚನೆಗೆ ಬೇಕಾದ ಪದಾರ್ಥಗಳು. ಇವುಗಳಿಗೆ ಅನುಕೂಲಪಡಿಸಿದನು.

ಪಂಚಾಮೃತಾನಾಂ ಸ್ನಪನೈಸ್ಸುಗಂಧಸ್ನಪನೈರಪಿ ।
ದೇವಾರ್ಥಮುಖವಾಸೈಶ್ಚ ದೇವೋದ್ಯಾನೈರನೇಕಶಃ ॥ ೫೩ ॥

ಮಹಾಪೂಜಾರ್ಥಮಾಲ್ಯಾದಿಗುಂಪನಾರ್ಥೈಸ್ತ್ರಿಕಾಲತಃ ।
ಶಂಖಭೇರೀ ಮೃದಂಗಾದಿವಾದ್ಯನಾದೈಶ್ಶಿವಾಲಯೇ ॥ ೫೪ ॥

ಘಂಟಾಗಂಡುಕಕುಂಭಾದಿಸ್ನಾನೋಪಸ್ಕರಭಾಜನೈಃ ।
ಶ್ವೇತೈರ್ಮಾರ್ಜನವಸ್ತ್ರೈಶ್ಚ ಸುಗಂಧೈರ್ಯಕ್ಷಕರ್ದಮೈಃ ॥ ೫೫ ॥

ಜಪಹೋಮೈಸ್ತೋತ್ರ ಪಾಠೈಶ್ಶಿವನಾಮೋಚ್ಚ ಭಾಷಣೈಃ ।
ರಾಸಕ್ರೀಡಾದಿ ಸಂಯುಕ್ತೈಶ್ಚಲನೈಸ್ಸ ಪ್ರದಕ್ಷಿಣೈಃ ॥ ೫೬ ॥

ಏವಮಾದಿಭಿರುದ್ದಂಡೈಃ ಕ್ರೀಡಾಕಾಂಡೈರನೇಕಶಃ ।
ವರ್ಷಮೇಕಮುಷಿತ್ವಾತು ತು ಕೃತ್ವಾ ತೀರ್ಥಾನ್ಯನೇಕಶಃ ॥ ೫೭ ॥

೫೩–೫೪. ಪಂಚಾಮೃತಸ್ನಾನ, ಸುಗಂಧಸ್ನಾನ, ಮುಖವಾಡ, ಮುಖವಾಸ, ಹೂತೋಟ ಮಹಾಪೂಜೆಗೆ ಹೂಮಾಲೆಕಟ್ಟಲು ಅನುಕೂಲತೆ, ಶಂಖ, ಬೇರಿ, ಮೃದಂಗಗಳನ್ನು ಬಾರಿಸುವಿಕೆ ಇವೆಲ್ಲಕ್ಕೂ ಶಿವಾಲಯದಲ್ಲಿ ಏರ್ಪಡಿಸಿದನು.

೫೫–೫೬. ಘಂಟೆ, ಗಂಡುಕ, ಬಿಂದಿಗೆ, ಚೆಂಬು, ಸ್ನಾನಕ್ಕೆ ಬೇಕಾದ ಪದಾರ್ಥಗಳು ಬಿಳಿಯದಾದ ಒರಸುವ ಬಟ್ಟೆ ಯಕ್ಷ ಕರ್ದಮವೆಂಬ ಸುಗಂಧ ಜಪಾಜಿ ಸ್ತೋತ್ರಪಾಠ ಶಿವನಾಮದ ಉಚ್ಚಭಾಷಣ ರಾಸಕ್ರೀಡಾಚಲನ ಪ್ರದಕ್ಷಿಣ ಇವನ್ನು ಮಾಡುವುದಕ್ಕೆ ಬೇಕಾದುದನ್ನು ಏರ್ಪಡಿಸಿದನು.

೫೭–೫೮. ಈ ರೀತಿಯಾಗಿ ದೇವರಿಗೆ ಕ್ರಿಯಾಕಾಂಡದಲ್ಲಿ ಹೇಳಿರುವಂತೆ ಸಮರ್ಪಿಸುತ್ತ ಒಂದು ವರ್ಷಕಾಲವನ್ನು ಅಲ್ಲಿ ಕಳೆದನು. ಅನೇಕ ತೀರ್ಥ ಗಳನ್ನು ಮಾಡಿದನು. ದೀನರನ್ನೂ ಅನಾಥರನ್ನೂ ತೃಪ್ತಿಪಡಿಸುತ್ತಿದ್ದನು.

ದೀನಾನಾಥಾಂಶ್ಚ ಸಂತರ್ಪ್ಯ ನತ್ವಾ ವಿಶ್ವೇಶ್ವರಂ ವಿಭುಂ ।
ಬ್ರಹ್ಮಚರ್ಯಾದಿನಿಯಮೈಃ ಋತುಕಾಲಾಗಮೇನ ಚ ॥ ೫೮ ॥

ಸತ್ಯಸಂಭಾಷಣೇನಾಪಿ ತೀರ್ಥಮೇವಂ ಪ್ರಸಾಧ್ಯ ಚ ।
ಪುನಃ ಪುನರ್ವಿಶ್ವನಾಥಂ ಕಾಲರಾಜಂ ಗಣಾಧಿಪಂ ॥ ೫೯ ॥

ಅನ್ನಪೂರ್ಣಾಂ ದಂಡಪಾಣಿಂ ದೃಷ್ಟ್ವಾ ಸ್ತುತ್ವಾ ಪ್ರಣಮ್ಯ ಚ ।
ಅನುಜ್ಞಾತಶ್ಶಿವೇನಾಥ ವಿಮಾನೇನ ರಘೂತ್ತಮಃ ॥ ೬೦ ॥

ಯಯಾವಾಕಾಶಮಾರ್ಗೇಣ ಗಂಗಾಯಾ ದಕ್ಷಿಣೇ ತಟೇ ।
ಕರ್ಮನಾಶಾಂ ನದೀಂ ದೃಷ್ಟ್ವಾ ಚ್ಯವನಸ್ಯಾಶ್ರಮಂ ಯಯೌ ॥ ೬೧ ॥

ರಾಮಚಂದ್ರಃ ಪುಷ್ಪಕಸ್ಥಃ ಸ್ನಾತ್ವಾ ನತ್ವಾ ಮುನೀಶ್ವರಂ ।
ರಾಮತೀರ್ಥಂ ಚ ರಾಮೇಶಂ ಚಕಾರ ತತ್ರ ರಾಘವಃ ॥ ೬೨ ॥

ವಿಶ್ವೇಶ್ವರನನ್ನು ನಮಸ್ಕರಿಸುತ್ತಿದ್ದನು. ಋತುಕಾಲದಲ್ಲಿ ಮಾತ್ರ ಸ್ತ್ರೀಸಂಗ ಮಾಡುತ್ತ ಬ್ರಹ್ಮಚರ್ಯದಿಂದ ಇದ್ದನು. ಸತ್ಯವನ್ನೇ ಆಡುತ್ತಿದ್ದನು.

೫೯–೬೦. ಈ ರೀತಿಯಾಗಿ ತೀರ್ಥಸೇವೆಯನ್ನು ಮಾಡಿದನು. ಕಾಲರಾಜ ಗಣಾಧಿಪ, ವಿಶ್ವೇಶ್ವರ, ಅನ್ನಪೂರ್ಣೆ, ದಂಡಪಾಣಿ, ಇವರನ್ನು ಮತ್ತೆ ಮತ್ತೆ ನೋಡಿದನು. ನಮಸ್ಕರಿಸಿದನು. ಸ್ತುತಿಸಿದನು. ಅನಂತರ ಆ ಶಿವನಿಂದ ಅನುಜ್ಞಾತನಾಗಿ ಪುಷ್ಪಕದಲ್ಲಿ ಕುಳಿತು ಹೊರಟನು.

೬೧. ಆಕಾಶಮಾರ್ಗದಿಂದ ಗಂಗೆಯ ದಕ್ಷಿಣದಡದಲ್ಲಿಯೇ ಹೊರಟನು. ಅಲ್ಲಿ ಕರ್ಮನಾಶಿನಿಯೆಂಬ ನದಿಯನ್ನು ನೋಡಿ ಚ್ಯವನನ ಆಶ್ರಮಕ್ಕೆ ಹೋದನು.

೬೨. ರಾಮಚಂದ್ರನು ಅಲ್ಲಿ ಸ್ನಾನಮಾಡಿ ಆ ಮುನಿಯನ್ನು ನಮಸ್ಕರಿಸಿ ಅಲ್ಲಿ ರಾಮತೀರ್ಥವನ್ನೂ ರಾಮೇಶ್ವರವನ್ನೂ ನಿರ್ಮಿಸಿದನು.

ನಿಜಬಾಣಕೃತಾಂ ರೇಖಾಂ ದರ್ಶಯಾಮಾಸ ತಾನ್ ಜನಾನ್ ।
ಕಾಶ್ಯಾ ಅಪ್ಯಧಿಕಾನ್ಯತ್ರ ಕೃತ್ವಾ ದಾನಾನ್ಯನೇಕಶಃ ॥ ೬೩ ॥

ಯಯೌ ಯಾನೇನ ದಿವ್ಯೇನ ಶೋಣಭದ್ರಸ್ಯ ಸಂಗಮಂ ।
ಯಾನಿ ಯಾನೀಹ ತೀರ್ಥಾನಿ ರಾಘವಶ್ಚ ಗಮಿಷ್ಯತಿ ॥ ೬೪ ॥

ಉತ್ತರೋತ್ತರತಸ್ತೇಷು ದಾನಾಧಿಕ್ಯಂ ಕರಿಷ್ಯತಿ ।
ಯತ್ರ ಯತ್ರ ರಘುಶ್ರೇಷ್ಠೋ ಗಮಿಷ್ಯತಿ ಸಸೀತಯಾ ॥ ೬೫ ॥

ತತ್ರ ತೀರ್ಥಾನ್ಯನೇಕಾನಿ ಭವಿಷ್ಯಂತಿ ಮಹಾಂತಿ ಚ ।
ಶೇಷೋಽಪಿ ತೇಷಾಂ ಸಂಖ್ಯಾಂ ಹಿ ವಕ್ತುಂ ನಾತ್ರ ಕ್ಷಮೋ ಭವೇತ್ ॥೬೬॥

ತೇಷು ತೀರ್ಥಾನಿ ಶ್ರೇಷ್ಠಾನಿ ಷಟ್ ಜ್ಞೇಯಾನಿ ಮನೀಷಿಭಿಃ ।
ಬಂಧೂನಾಂ ಚೈವ ಚತ್ವಾರಿ ಸೀತಾಯಾಃ ಪಂಚಮಂ ಸ್ಮೃತಂ ॥ ೬೭ ॥

೬೩–೬೬. ಅಲ್ಲಿ ತನ್ನ ಬಾಣದಿಂದ ಮಾಡಿರುವ ರೇಖೆಯನ್ನು ಅಲ್ಲಿನ ಜನರಿಗೆಲ್ಲಾ ತೋರಿಸಿದನು. ಕಾಶಿಗಿಂತಲೂ ಇಲ್ಲಿ ಹೆಚ್ಚಾಗಿ ದಾನಗಳನ್ನು ಮಾಡಿದನು. ಅಲ್ಲಿಂದ ಮುಂದಕ್ಕೆ ಹೊರಟು ಶೋಣಭದ್ರೆಯ ಸಂಗಮಕ್ಕೆ ಹೋದನು. ರಾಮನು ಮುಂದು ಮುಂದಕ್ಕೆ ಯಾವ ಯಾವ ತೀರ್ಥಗಳಿಗೆ ಹೋಗುವನೋ ಅಲ್ಲಲ್ಲಿ ಹಿಂದು ಹಿಂದುದಕ್ಕಿಂತಲೂ ಹೆಚ್ಚಾಗಿ ದಾನಗಳನ್ನು ಮಾಡುತ್ತಿದ್ದನು. ರಾಮನು ಸೀತೆಯೊಡನೆ ಎಲ್ಲೆಲ್ಲಿಗೆ ಹೋಗುವನೋ ಅಲ್ಲಲ್ಲಿ ದೊಡ್ಡ ದೊಡ್ಡ ತೀರ್ಥಗಳು ಬಹುವಾಗಿ ಆಗುತ್ತಿದ್ದುವು. ಶೇಷನೂ ಕೂಡ ಆವುಗಳನ್ನು ವರ್ಣಿಸಲಾರನು.

೬೭. ಆ ತೀರ್ಥಗಳಲ್ಲಿ ಆರು ತೀರ್ಥಗಳು ಶ್ರೇಷ್ಠಗಳೆಂದು ತಿಳಿಯಬೇಕು. ರಾಮ, ಲಕ್ಷ್ಮಣ ಭರತ ಶತ್ರುಘ್ನ ತೀರ್ಥಗಳು ಇವು ನಾಲ್ಕು, ಸೀತೆಯದೊಂದು ಐದು.

ಷಷ್ಠಮಂಜನಿಪುತ್ರಸ್ಯ ಸರ್ವತ್ರೈವಂ ವಿನಿಶ್ಚಯಃ ।
ರಾಮಃ ಸ್ನಾತ್ವಾ ಶೋಣಭದ್ರಗಂಗಯೋಸ್ಸಂಗಮೇ ಮುದಾ ॥ ೬೮ ॥

ತ್ರಿರಾತ್ರಂ ಸಮತಿಕ್ರಮ್ಯ ಗಂಡಕೀಸಂಗಮಂ ಯಯೌ ।
ತಸ್ಮಿಂಸ್ತೀರ್ಥೇ ತ್ರಿರಾತ್ರಂ ಚ ಪಂಚರಾತ್ರಮಥ ಕ್ವಚಿತ್ ॥ ೬೯ ॥

ಸಪ್ತರಾತ್ರಂ ಕ್ವಚಿಚ್ಚಾಪಿ ಪಕ್ಷಮೇಕಮಥ ಕ್ವಚಿತ್ ।
ಅಷ್ಟಾದಶೈಕವಿಂಶದ್ವಾ ತ್ರಿಮಾಸಂ ಚ ಕ್ವಚಿತ್ಪ್ರಭುಃ ॥ ೭೦ ॥

ಚಕಾರ ವಾಸಂ ತೀರ್ಥೇಷು ಧರ್ಮಾನ್ ಕುರ್ವನ್ ಯಥಾಸುಖಂ ।
ಗಂಡಕೀ ಸಂಗಮೇ ಸ್ನಾತ್ವಾ ನೇಪಾಲೇ ಜಗದೀಶ್ವರಂ ॥ ೭೧ ॥

---

೬೮. ಹನುಮಂತನ ತೀರ್ಥವು ಆರನೆಯದು. ಇವು ಎಲ್ಲ ಕಡೆಯಲ್ಲಿಯೂ ಆದುವು. ಇದು ನಿಶ್ಚಯವು. ರಾಮನು ಶೋಣಭದ್ರ ಗಂಗಾಸಂಗಮದಲ್ಲಿ ಸ್ನಾನವನ್ನು ಮಾಡಿದನು.

೬೯–೭೦. ಅಲ್ಲಿ ಮೂರು ರಾತ್ರಿಗಳಿದ್ದು ಮುಂದಕ್ಕೆ ಹೊರಟು ಗಂಡಕೀ ಸಂಗಮಕ್ಕೆ ಹೋದನು. ರಾಮನು ಒಂದೊಂದು ತೀರ್ಥಗಳಲ್ಲಿ ಮೂರುರಾತ್ರಿ, ಐದುರಾತ್ರಿ, ಏಳುರಾತ್ರಿ, ಒಂದುಪಕ್ಷ, ಹದಿನೆಂಟುದಿನ ಇಪ್ಪತ್ತೊಂದುದಿನ ಅಥವಾ ಮೂರುತಿಂಗಳು ಈ ರೀತಿಯಾಗಿ ಅವುಗಳ ಯೋಗ್ಯತೆಗೆ ತಕ್ಕಂತೆ ಇದ್ದುಕೊಂಡು ಅಲ್ಲಿ ಧರ್ಮಗಳನ್ನು ಮಾಡುತ್ತ ಧರ್ಮಗಳನ್ನು ವಿಚಾರಮಾಡುತ್ತ ಸುಖವಾಗಿರುತ್ತಿದ್ದನು.

೭೧. ಆ ಗಂಡಕಿಯ ಸಂಗಮದಲ್ಲಿ ಸ್ನಾನಮಾಡಿ ನೇಪಾಳದಲ್ಲಿ ಜಗದೀಶ್ವರನ ದರ್ಶನವನ್ನು ಮಾಡಿಕೊಂಡು ಅಲ್ಲಿಂದ ಹರಿಹರ ಕ್ಷೇತ್ರಕ್ಕೆ ಹೋದನು.

ದೃಷ್ಟ್ವಾ ಹರಿಹರಕ್ಷೇತ್ರಂ ಯಯೌ ರಘುಕುಲೋದ್ವಹಃ ।
ಏವಂ ಕುರ್ವನ್ ಸತೀರ್ಥಾನಿ ಸರ್ವಾಣಿ ರಘುನಂದನಃ ॥ ೭೨ ॥

ಪುನಃ ಪುನಸ್ಸಂಗಮಂ ಚ ಯಯೌ ಜಾಹ್ನವಿದಕ್ಷಿಣೇ ।
ವೈಕುಂಠನಗರಂ ಗತ್ವಾ ಜರಾಸಂಧಪುರಂ ಯಯೌ ॥ ೭೩ ॥

ವೈಕುಂಠಾಯಾ ಜಲೇ ಸ್ನಾತ್ವಾ ತತೋ ರಾಮೋ ಯಯೌ ಗಯಾಂ ।
ಫಲ್ಗುನದ್ಯಾಸ್ತಟೇ ಪೂರ್ವೇ ಮುಕ್ತ್ವಾ ತದ್ಯಾನಮುತ್ತಮಂ ॥ ೭೪ ॥

ನತ್ವಾ ವಿಷ್ಣುಪದಂ ದಿವ್ಯಂ ಪುನರ್ಯಾನಾಂತಿಕಂ ಯಯೌ ।
ತಾಂ ನಿಶಾಂ ಸಮತಿಕ್ರಮ್ಯ ಪ್ರಭಾತೇ ರಘುನಂದನಃ ॥ ೭೫ ॥

ಸ್ನಾತುಂ ಫಲ್ಗುನದೀತೋಯೇ ಯಯೌ ತೀರ್ಥಂ ದ್ವಿಜೈಸ್ಸಹ ।
ಏತಸ್ಮಿನ್ನಂತರೇ ಸೀತಾ ಸಖೀಭಿಃ ಪರಿವೇಷ್ಟಿತಾ ॥ ೭೬ ॥

೭೨–೭೩. ಈ ರೀತಿಯಾಗಿ ತೀರ್ಥಯಾತ್ರೆಗಳೆಲ್ಲವನ್ನೂ ಸೇವಿಸಿದನು ಜಾಹ್ನವಿಯ ಬಲಭಾಗದಲ್ಲಿರುವ ಸಂಗಮಗಳಿಗೆ ಮತ್ತೆ ಮತ್ತೆ ಹೋಗುತ್ತಿದ್ದನು. ವೈಕುಂಠನಗರಕ್ಕೆ ಹೋಗಿ ಅಲ್ಲಿಂದ ಜರಾಸಂಧಪುರಿಗೆ ಹೋದನು.

೭೪–೭೫. ವೈಕುಂಠ ತೀರ್ಥದಲ್ಲಿ ಸ್ನಾನಮಾಡಿ ರಾಮನು ಮುಂದೆ ಗಯೆಗೆ ಹೋದನು. ಅಲ್ಲಿರುವ ಫಲ್ಗುನದಿಯ ಪೂರ್ವದಡದಲ್ಲಿ ಪುಷ್ಪಕವನ್ನು ನಿಲ್ಲಿಸಿ ಅಲ್ಲಿರುವ ವಿಷ್ಣುಪದಕ್ಕೆ ನಮಸ್ಕರಿಸಿ ಮತ್ತೆ ಯಾನದ ಬಳಿಗೆ ಬಂದು ಅಲ್ಲಿ ಆ ರಾತ್ರಿಯನ್ನು ಕಳೆದನು.

೭೬–೭೭. ಬೆಳಗಾಗುತ್ತಲೂ ರಾಮನು ಫಲ್ಗು ನದಿಯ ತೀರ್ಥದಲ್ಲಿ ಸ್ನಾನಮಾಡಲು ಬ್ರಾಹ್ಮಣರೊಡನೆ ಹೋದನು. ಈ ಮಧ್ಯದಲ್ಲಿ ಸೀತೆಯು ಸಖಿಯರಿಂದ ಕೂಡಿಕೊಂಡು ತಾನು ಆ ನದಿಯಲ್ಲಿ ಸ್ನಾನಮಾಡಲು ಹೋಗಿ

ಯಯೌ ಸ್ನಾತುಂ ಫಲ್ಗುನದ್ಯಾಂ ಸ್ನಾತ್ವಾ ಪೂಜ್ಯ ಸುವಾಸಿನೀಃ ।
ಸೈಕತೇ ಸಾ ಕ್ಷಣಂ ತಸ್ಥೌ ಪೂಜನಾರ್ಥಂ ಮಹೇಶ್ವರೀಂ ॥ ೭೭ ॥

ವಾಲುಕಾಪಂಚಪಿಂಡೈಶ್ಚ ದುರ್ಗಾಂ ಕರ್ತುಂ ಸಮುದ್ಯತಾ ।
ಗೃಹೀತ್ವಾ ವಾಮಹಸ್ತೇನ ಸಾದ್ರಾಂ ಸಾ ಸಿಕತಾಂ ತದಾ ॥ ೭೮ ॥

ಸವ್ಯೇನ ಕೃತ್ವಾ ಪಿಂಡಂ ತು ಯಾವತ್ಸಾ ಪಾಣಿನಾ ಭುವಿ ।
ಸ್ಥಾಪಯಾಮಾಸ ತಾವತ್ತು ದದರ್ಶ ಜಗತೀತಲಾತ್ ॥ ೭೯ ॥

ವಿನಿರ್ಗತಂ ದಶರಥಶ್ವಶುರಸ್ಯ ಕರಂ ಶುಭಂ ।
ದಕ್ಷಿಣಂ ನಿಜಹಸ್ತಾಚ್ಚ ಗೃಹೀತ್ವಾ ಪಿಂಡಮುತ್ತಮಂ ॥ ೮೦ ॥

ಗಚ್ಛಂತಂ ಭೂತಲಂ ರಮ್ಯಂ ತದ್ದೃಷ್ಟ್ವಾ ಕೌತುಕಂ ಪುನಃ ।
ದ್ವಿತೀಯಂ ಸ್ಥಾಪಯಾಮಾಸ ಭುವಿ ಪಿಂಡಂ ತು ಸೈಕತಂ ॥ ೮೧ ॥

ಸ್ನಾನಮಾಡಿ ಸುವಾಸಿನಿಯರನ್ನು ಪೂಜಿಸಿದಳು. ಅಲ್ಲಿನ ಮರಳಿನಮೇಲೆ ಮಹೇಶ್ವರಿಯನ್ನು ಪೂಜಿಸಲು ಕ್ಷಣಕಾಲ ನಿಂತಳು.

೭೮. ದುರ್ಗೆಯನ್ನು ಮಾಡಲು ಮರಳಿನಲ್ಲಿ ಐದು ಉಂಡೆಗಳನ್ನು ಮಾಡುವುದಕ್ಕೆ ಪ್ರಯತ್ನಪಟ್ಟಳು. ಅದಕ್ಕೋಸ್ಕರವಾಗಿ ಹಸಿಯ ಮರಳನ್ನು ಎಡಗೈಯ್ಯಲ್ಲಿಟ್ಟುಕೊಂಡಳು.

೭೯–೮೧. ಎಡಗೈಯ್ಯಲ್ಲಿ ಮರಳನ್ನು ಹಿಡಿದುಕೊಂಡು ಬಲಗೈಯ್ಯಲ್ಲಿ ಉಂಡೆಗಳನ್ನು ಮಾಡಿ ನೆಲದಮೇಲೆ ಇಡುವಷ್ಟರಲ್ಲಿಯೇ ದಶರಥನ ಕೈಗಳು ನೆಲದಿಂದ ಮೇಲಕ್ಕೆ ಬಂದುದನ್ನು ನೋಡಿದಳು. ಆ ದಶರಥನ ಬಲಗೈಯು ಆ ಪಿಂಡವನ್ನು ತೆಗೆದುಕೊಂಡು ಭೂಮಿಯೊಳಕ್ಕೆ ಹೋಯಿತು. ಈ ಆಶ್ಚರ್ಯವನ್ನು ನೋಡಿ ಎರಡನೆಯ ಉಂಡೆಯನ್ನು ಮತ್ತೆ ನೆಲದಮೇಲೆ ಇಟ್ಟಳು.

ಸೋಪಿ ನೀತಃ ಪೂರ್ವವತ್ಸ ಹ್ಯೇವಮುಷ್ಟೋತ್ತರಂ ಶತಂ ।
ದದೌ ಪಿಂಡಾರ್ನ್ ಕೌತುಕೇನ ತತಶ್ಶ್ರಾಂತಾ ವಿದೇಹಜಾ ॥ ೮೨ ॥

ಮನಸಾ ಪೂಜ್ಯ ದುರ್ಗಾಂ ಸಾ ಯಯೌ ಯಾನಂ ತ್ವರಾನ್ವಿತಾ ।
ತದ್ವೃತ್ತಂ ನ ಸಖೀಭಿಸ್ತು ಜ್ಞಾತಂ ರಾಮೇಣ ವಾಪಿ ನ ॥ ೮೩ ॥

ತಯಾಪಿ ಕಥಿತಂ ನೈವ ಕಿಂ ರಾಮೋ ಮಾಂ ವದಿಷ್ಯತಿ ।
ಇತಿ ಭೀತ್ಯಾ ತತೋ ರಾಮಃ ಪಂಚತೀರ್ಥಂ ವಿಗಾಹ್ಯ ಚ ॥ ೮೪ ॥

ಪ್ರೇತಪರ್ವತಮಾಸಾದ್ಯ ಪಿಂಡದಾನಮಥಾಕರೋತ್ ।
ಕನಿಷ್ಠಿಕಾಯಾಂ ನಿಷ್ಕಾಸ್ಯ ನಿಜನಾಮಾಂಕಿತಾಂ ಶುಭಾಂ ॥ ೮೫ ॥

ಕಾಂಚನೀಂ ಮುದ್ರಿಕಾಂ ರಮ್ಯಾಂ ದಕ್ಷಿಣಾಭಿಮುಖಸ್ತದಾ ।
ಅಪಹತೇತಿ ಮಂತ್ರೇಣ ಚಕಾರ ಭುವಿ ರಾಘವಃ ॥ ೮೬ ॥

---

೮೨. ಅದೂ ಹಿಂದಿನಂತೆಯೇ ಆಯಿತು. ಈ ರೀತಿಯಾಗಿ ನೂರೆಂಟು ಉಂಡೆಗಳಾದುವು. ಆಗ ಅವಳಿಗೆ ಆಯಾಸವಾಗಲು ಮನಸ್ಸಿನಿಂದಲೇ ಗೌರಿಯನ್ನು ಪೂಜಿಸಿ ಪುಷ್ಪಕದ ಬಳಿಗೆ ಹೊರಟು ಹೋದಳು.

೮೩-೮೪. ಈ ವಿಷಯವು ಸಖಿಯರಿಗಾಗಲಿ ರಾಮನಿಗಾಗಲೀ ತಿಳಿಯಲ್ಲಿಲ್ಲ. ತಿಳಿಸಲೂ ಇಲ್ಲ. ರಾಮನು ತನ್ನನ್ನು ಏನೆನ್ನುವನೋ ಎಂಬ ಭಯದಿಂದ ತಾನೂ ಯಾರಿಗೂ ಹೇಳಲೇ ಇಲ್ಲ. ಇತ್ತ ರಾಮನು ಪಂಚತೀರ್ಥದಲ್ಲಿಯೂ ಸ್ನಾನಮಾಡಿದನು.

೮೫-೮೮. ಅನಂತರ ಪ್ರೇತಪರ್ವತಕ್ಕೆ ಹೋಗಿ ಅಲ್ಲಿ ಪಿತೃಗಳಿಗೆ ಪಿಂಡದಾನವನ್ನು ಮಾಡಲು ತನ್ನ ಕೈಯ್ಯಲ್ಲಿದ್ದ ತನ್ನ ಹೆಸರಿನ ಚಿನ್ನದ ಉಂಗುರವನ್ನು ಕಿರುಬೆರಳಿನಿಂದ ತೆಗೆದು ದಕ್ಷಿಣಾಭಿಮುಖವಾಗಿ ಕುಳಿತು ಅಪಹತ ಅಸುರಾ ಎಂಬ ಮಂತ್ರದಿಂದ ಮೊದಲುಗೊಂಡು ಕ್ರಿಯೆಗಳನ್ನು ಮಾಡಿ

ರೇಖಾತ್ರಯಂ ತದದ್ಯಾಪಿ ದೃಶ್ಯತೇ ತತ್ರ ವೈ ಸ್ಫುಟಂ ।
ಅಸ್ತೀರ್ಯ ಸ ಕುಶಾಂಸ್ತತ್ರ ಪಿಂಡಾನ್ ಸಕ್ತುಮಯಾನ್ ಶುಭಾನ್ ॥ ೮೭ ॥

ತಿಲಾಜ್ಯಮಧುಸಂಯುಕ್ತಾನ್ ದಾತುಂ ಸಮುಸ್ಸಮುದ್ಯತಃ ।
ಸವ್ಯೇನ ಪಾಣಿನಾ ಪಿಂಡಂ ಗೃಹೀತ್ವಾ ರಘುನಂದನಃ ॥ ೮೮ ॥

ಯಾವತ್ಪಶ್ಯತಿ ಭೂಮ್ಯಾಂ ತು ನ ದದರ್ಶ ಪಿತುಃ ಕರಂ ।
ತದಾಶ್ಚರ್ಯೇಣ ವಿಪ್ರಾಸ್ತೇ ರಾಮಮೂಚುಸ್ತ್ವರಾನ್ವಿತಾಃ ॥ ೮೯ ॥

ನಿಷ್ಕ್ರಾಮಂತ್ಯತ್ರ ಸರ್ವೇಷಾಂ ಪಿತೄಣಾಂ ದಕ್ಷಿಣಃ ಕರಃ ।
ನ ದೃಶ್ಯತೇ ತವ ಪಿತುಃ ಕಾರಣಂ ನಾತ್ರ ವಿದ್ಮಹೇ ॥ ೯೦ ॥

ಮೂರು ರೇಖೆಗಳನ್ನು ನೆಲದಮೇಲೆ ಗೀಚಿದನು. ಅವು ಈಗಲೂ ಚೆನ್ನಾಗಿ ಕಾಣುತ್ತಿವೆ. ಅದರಮೇಲೆ ದರ್ಭೆಗಳನ್ನು ಹರಡಿ ಅದರಮೇಲೆ ಹಿಟ್ಟಿನ ಪಿಂಡಗಳನ್ನು ಎಳ್ಳು, ತುಪ್ಪ, ಜೇನುಗಳಿಂದ ಕಲಸಿ ಕೊಡಲು ಉದ್ಯುಕ್ತನಾದನು.

೮೯. ಬಲದ ಕೈಯಿಂದ ಪಿಂಡವನ್ನು ತೆಗೆದುಕೊಂಡು ನೆಲದಮೇಲೆ ನೋಡಲು ತಂದೆಯ ಕೈಗಳು ಅಲ್ಲಿಗೆ ಬಂದಿರಲಿಲ್ಲ. ಎಂದರೆ ತಂದೆಯು ಕೈಗಳನ್ನು ಹಿಡಿಯಲಿಲ್ಲ. ಆಗ ಬ್ರಾಹ್ಮಣರು ಆಶ್ಚರ್ಯಪಡುತ್ತ ರಾಮನನ್ನು ಕುರಿತು ಇಂತೆಂದರು.

೯೦. ಎಲೈ ರಾಮನೆ! ಇಲ್ಲಿ ಯಾರು ಯಾರ ಹೆಸರನ್ನು ಹೇಳಿ ಪಿಂಡದಾನವನ್ನು ಮಾಡುವರೋ ಪಿಂಡವನ್ನು ತೆಗೆದುಕೊಳ್ಳುವವರು ಬಲಗೈಯನ್ನು ಹಿಡಿದು ಆ ಪಿಂಡವನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ ನೀನು ಪಿಂಡಕೊಟ್ಟಾಗ ಆ ನಿನ್ನ ತಂದೆಯ ಕೈಯ್ಯನ್ನು ಕಾಣಲಿಲ್ಲ. ಇದಕ್ಕೆ ಕಾರಣವು ನಮಗೆ ಗೊತ್ತಿಲ್ಲ ಎಂದರು.

ರಾಮೋಽಪಿ ಸ್ಮಯಾವಿಷ್ಟಶ್ಶಂಕಿತಃ ಪ್ರಾಹ ಲಕ್ಷ್ಮಣಂ ।
ಜಾನೀಷೇ ಕಾರಣಂ ಕಿಂಚಿತ್ತತ್ರ ತ್ವಂ ಬುದ್ಧಿಮಾನಸಿ ॥ ೯೧ ॥

ಸ ಪ್ರಾಹ ರಾಘವಾಸ್ಮಾಭಿರ್ಯದಾ ಗೋದಾವರೀಂ ಗತಂ ।
ಇಂಗುದೀಫಲಪಿಣ್ಯಾಕಪಿಂಡದಾನೇ ತದಾ ಕರಃ ॥ ೯೨ ॥

ಅಸ್ಮಾಭಿಃ ಸ್ವಪಿತುರ್ದೃಷ್ಟಸ್ಸೋಽತ್ರ ನೈವ ಪ್ರದೃಶ್ಯತೇ ।
ಮಮಾಪಿ ಜಾತಮಾಶ್ಚರ್ಯಂ ಸೀತಾಂ ತ್ವಂ ಪ್ರಷ್ಟುಮರ್ಹಸಿ ॥ ೯೩ ॥

ತಚ್ಛ್ರುತ್ವಾ ಜಾನಕೀ ಶೀಘ್ರಂ ಪ್ರಾಹ ಕಿಂಚಿದ್ಭಯಾತುರಾ ।
ಮಯಾಪರಾಧಿತಂ ಕಿಂಚಿತ್ ತತ್ ಕ್ಷಮಸ್ವ ರಘೂತ್ತಮ ॥ ೯೪ ॥

ತತ್ತಸ್ಯಾ ವಚನಂ ಶ್ರುತ್ವಾ ರಾಘವಃ ಪ್ರಾಹ ತಾಂ ಪುನಃ ।
ವದ ತಥ್ಯಂ ನ ಭೇತವ್ಯಂ ಕಾರಣಂ ಕಿಂ ಮಮಾಂತಿಕಂ ॥ ೯೫ ॥

---

೯೧. ಆಗ ರಾಮನು ಆಶ್ಚರ್ಯಪಡುತ್ತ ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ! ನೀನು ಬುದ್ಧಿವಂತನು ಇದರ ಕಾರಣವನ್ನು ಗೊತ್ತುಮಾಡು.

೯೨. ಅದನ್ನು ಕೇಳಿ ಲಕ್ಷ್ಮಣನೂ ಕೂಡ ನಾವು ಗೋದಾವರಿಗೆ ಹೋಗಿ ಇಂಗಳದ ಹಣ್ಣಿನ ಹಿಂಡಿಯಿಂದ ಪಿಂಡವನ್ನು ಕೊಟ್ಟಾಗಲೂ ನಮ್ಮ ತಂದೆಯ ಕೈ ಬಂದಿದ್ದಿತು. ಅದನ್ನು ಈಗ ಕಾಣಲಿಲ್ಲವಲ್ಲ! ಎಂದನು.

೯೩–೯೪. ಈ ವಿಷಯದಲ್ಲಿ ನನಗೆ ಆಶ್ಚರ್ಯವಾಗಿದೆ. ಸೀತೆಯನ್ನು ಕರೆದು ಕೇಳು. ಎನ್ನಲು ಅದನ್ನು ಕೇಳಿ ಜಾನಕಿಯು ಒಡನೆಯೇ ಭಯಪಡುತ್ತ ಎಲೈ ರಘೋತ್ತಮನೇ! ನಾನೂ ಸ್ವಲ್ಪ ಅಪರಾಧಮಾಡಿದ್ದೇನೆ. ಅದನ್ನು ನೀನು ಕ್ಷಮಿಸು ಎಂದಳು.

೯೫. ಆಕೆಯ ಆ ಮಾತನ್ನು ಕೇಳಿ ಆ ರಾಮನು ಸರಿಯಾಗಿ ನಿಜವಾದ ಕಾರಣವನ್ನು ನನ್ನ ಹತ್ತಿರಹೇಳು. ಭಯಪಡಬೇಡ. ಎಂದನು.

ಯಥಾವೃತ್ತಂ ತಯಾ ಸರ್ವಂ ರಾಘವಾಯ ನಿವೇದಿತಂ ।
ತಚ್ಛ್ರುತ್ವಾ ರಾಘವಃ ಪ್ರಾಹ ಕಸ್ಸಾಕ್ಷೀ ತವ ಕರ್ಮಣಿ ॥ ೯೬ ॥

ಸಾ ಪ್ರಾಹ ಚೂತವೃಕ್ಷೋಽಸ್ತಿ ಪೃಷ್ಟಸ್ಸ ನೇತ್ಯುವಾಚ ಹ ।
ತದಾ ಶಪ್ತಸ್ಸೀತಯಾ ಸ ಫಲಹೀನಸ್ಸ ಕೀಟಕಃ ॥ ೯೭ ॥

ಭವ ಮೇ ವಚನಾ ಚ್ಚೂತ ಯತೋ ಮಿಥ್ಯಾ ತ್ವಯೇರಿತಂ ।
ಪುನಸ್ಸಾ ರಾಘವಂ ಪ್ರಾಹ ಫಲ್ಗುಸ್ಸಾಕ್ಷ್ಯಂ ಪ್ರದಾಸ್ಯತಿ ॥ ೯೮ ॥

ಸಾಪಿ ರಾಮೇಣ ಪೃಷ್ಟಾಥ ನೇತ್ಯುವಾಚ ಭಯಾತುರಾ ।
ಸಾಪಿ ಶಪ್ತಾ ರಾಮಪತ್ನ್ಯಾಽಕ್ಷೋಣೀಮುಖಾ ಮಮ ವಾಕ್ಯತಃ ॥ ೯೯ ॥

---

೯೬. ಆಗ ಸೀತೆಯು ನಡೆದ ಸಮಾಚಾರವೆಲ್ಲವನ್ನೂ ರಾಮನಿಗೆ ಹೇಳಿದಳು. ಅದನ್ನು ಕೇಳಿದ ರಾಮನು ನೀನು ಹೀಗೆ ಮಾಡಿದುದರಲ್ಲಿ ಸಾಕ್ಷಿಯಾರು ? ಎಂದನು.

೯೭-೯೮. ಅದಕ್ಕೆ ಅವಳು ಈ ಮಾವಿನಮರವೇ ಸಾಕ್ಷಿಯು ಎನ್ನಲು ರಾಮನು ಅದನ್ನು ಕೇಳಿದನು. ಅದು ಇಲ್ಲವೆಂದಿತು. ಆಗ ಸೀತೆಯು ಎಲೈ ಚೂತವೃಕ್ಷವೇ ! ನೀನು ಸುಳ್ಳನ್ನು ಹೇಳಿದುದರಿಂದ ಹಣ್ಣುಗಳನ್ನು ಬಿಡದೆಯೂ ಹುಗಳಿಂದ ಕೊರೆಯಲ್ಪಟ್ಟವನಾಗಿಯೂ ಆಗು. ಎಂದು ಶಪಿಸಿದಳು ಆಕೆಯು ಈ ಫಲ್ಗುನದಿಯೇ ಸಾಕ್ಷಿಯನ್ನು ಹೇಳುತ್ತದೆ ಎಂದಳು.

೯೯-೧೦೧. ಅದನ್ನು ರಾಮನು ಕೇಳಲು ಅದೂ ಸುಳ್ಳೆಂದಿತು. ಅದನ್ನು ಕೇಳಿ ಸೀತೆಯು ಎಲೈ ಫಲ್ಗುನದಿಯೇ ! ಸತ್ಯವಾದ ಕರ್ಮದಲ್ಲಿಯೂ ಕೂಡ ನೀನು ಸುಳ್ಳನ್ನು ಹೇಳಿದುದರಿಂದ ನೀನು ಭೂಮಿಯ ಒಳಗೆ ಹರಿಯುತ್ತಿರು.

ವಹ ಯಸ್ಮಾನ್ಮೃಷಾ ಚೋಕ್ತಂ ತ್ವಯಾ ಸತ್ಯೇಪಿ ಕರ್ಮಣಿ |
ತತಸ್ಸೀತಾ ಪುನಃ ಪ್ರಾಹ ಸಾಕ್ಷ್ಯಂ ಮೇತ್ರ ನಿವಾಸಿನಃ ॥ ೧೦೦ ॥

ದಾಸ್ಯಂತೀಮೇ ದ್ವಿಜಾಸ್ಸರ್ವೇ ತದಾ ಮನ್ನಿಕಟಸ್ಥಿತಾಃ ।
ತೇಪಿ ಪೃಷ್ಟಾ ರಾಘವೇಣ ನೇತ್ಯೂಚುರ್ಭಯವಿಹ್ವಲಾಃ ॥ ೧೦೧ ॥

ದದ್ಯಸ್ಸಾಕ್ಷ್ಯಂ ತರ್ಹಿ ರಾಮಶ್ಶಾಪಂ ನಸ್ತು ಪ್ರದಾಸ್ಯತಿ ।
ನಿವಾರಿತಾ ಕಥಂ ನೇಯಂ ತದಾ ಸೀತೇತಿ ಚಿಂತ್ಯ ತೇ ॥ ೧೦೨ ॥

ತಾಂಸ್ತದಾ ಜಾನಕೀ ಶಾಪಂ ದದೌ ತೀರ್ಥನಿವಾಸಿನಃ ।
ಯುಷ್ಮಾಕಂ ನಾತ್ರ ಸಂತೃಪ್ತಿಃ ಕದಾ ದ್ರವ್ಯೈರ್ಭವಿಷ್ಯತಿ ॥ ೧೦೩ ॥

ದ್ರವ್ಯಾರ್ಥಂ ಸಕಲಾನ್ ದೇಶಾನ್ ಭ್ರಮಧ್ವಂ ದೀನರೂಪಿಣಃ ।
ತತಸ್ಸಾ ಜಾನಕೀ ಪ್ರಾಹ ಓತುಸ್ಸಾಕ್ಷ್ಯಂ ಪ್ರದಾಸ್ಯತಿ ॥ ೧೦೪ ॥

ಎಂದು ಶಪಿಸಿದಳು. ಅನಂತರ ಸೀತೆಯು ಇದರ ವಿಷಯದಲ್ಲಿ ನನ್ನ ಸಮೀಪದಲ್ಲಿದ್ದ ಬ್ರಾಹ್ಮಣರೇ ಸಾಕ್ಷ್ಯವನ್ನು ಹೇಳುವರು ಎಂದಳು. ಆಗ ರಾಮನು ಅವರನ್ನು ಕೇಳಲು ಅವರೂ ಕೂಡ ಭಯಪಟ್ಟು ಇಲ್ಲವೆಂದರು

೧೦೨. ಈ ಸೀತೆಯು ಆ ಪಿಂಡಗಳನ್ನು ಕೊಡುತ್ತಿದ್ದಾಗ ನೀವೇಕೆ ಬೇಡವೆಂದು ಹೇಳಲಿಲ್ಲ? ಎಂದು ರಾಮನು ಶಾಪವನ್ನು ಕೊಡುವನು ಎಂದು ಯೋಚಿಸಿ ಹಾಗೆ ಹೇಳಿದರು.

೧೦೩-೧೦೪. ಆಗ ಸೀತೆಯು ಆ ತೀರ್ಥನಿವಾಸಿಗಳಿಗೆ ನಿಮಗೆ ದ್ರವ್ಯದಿಂದ ತೃಪ್ತಿಯೇ ಉಂಟಾಗದಿರಲಿ. ನೀವು ದ್ರವ್ಯಕ್ಕೋಸ್ಕರ ದೀನತೆಯಿಂದ ದೇಶದೇಶಗಳನ್ನೆಲ್ಲಾ ಸುತ್ತಿರಿ. ಎಂದು ಶಪಿಸಿದಳು. ಅನಂತರ ಸೀತೆಯು ಇಲ್ಲಿರುವ ಬೆಕ್ಕನ್ನು ಸಾಕ್ಷಿಗೆ ಅಪೇಕ್ಷಿಸಿ ಕೇಳಿದಳು.

ಸಾಪಿ ಪೃಷ್ಟಾ ನೇತ್ಯುವಾಚ ರಾಮಂ ಸೀತಾ ಶಶಾಪ ತಂ ।
ಪುಚ್ಛಾಗ್ರಂ ಸ್ವಪುರಃ ಕೃತ್ವಾ ತದಾ ಮನ್ನಿಕಟೋಽಪಿ ಸ೯ ॥ ೧೦೫ ॥

ಮೃಷೇರಿತಂ ಯತಸ್ತಸ್ಮಾಶ್ಪುಚ್ಛೇ ಹ್ಯಸ್ಪೃಶ್ಯತಾಂ ಭಜ ।
ತತಸ್ಸಾ ಜಾನಕೀ ಪ್ರಾಹ ಗೌರ್ಮೇ ಸಾಕ್ಷ್ಯಂ ಪ್ರದಾಸ್ಯತಿ ॥ ೧೦೬ ॥

ಸಾಪಿ ಪೃಷ್ಟಾ ನೇತ್ಯುವಾಚ ರಾಮಂ ಸೀತಾ ಶಶಾಪ ತಾಂ ।
ಅಪವಿತ್ರಾ ಭವಾಸ್ಯೇ ತ್ವಂ ಮಮ ವಾಕ್ಯೇನ ಗೌತಮಿ ॥ ೧೦೭ ॥

ತತಸ್ಸೀತಾಶ್ವತ್ಥವೃಕ್ಷಂ ಸಾಕ್ಷ್ಯರ್ಥಂ ಪ್ರಾಹ ರಾಘವಂ ।
ಸ ಪೃಷ್ಟೋ ನೇತ್ಯುವಾಚಾಥ ತಂ ಸೀತಾಥಾಶಪತ್ಕ್ರುಧಾ ॥ ೧೦೮ ॥

ಭವಾಚಲದಲಸ್ತ್ವಂ ಹಿ ಮದ್ಗಿರಾಶ್ವತ್ಥಪಾದಪ ।
ಪುನಸ್ಸೀತಾ ಪತಿಂ ಪ್ರಾಹ ಮಮ ಸಾಕ್ಷೀ ಪ್ರಭಾಕರಃ । ॥ ೧೦೯ ॥

೧೦೫-೧೦೬. ರಾಮನು ಆ ಬೆಕ್ಕನ್ನು ಕೇಳಲು ಅದೂ ಇಲ್ಲವೆಂದಿತು. ಅದನ್ನು ಕೇಳಿ ಸೀತೆಯು ಆ ಬೆಕ್ಕನ್ನು ಕುರಿತು ಎಲೈ ಬೆಕ್ಕೇ. ನೀನು ಬಾಲವನ್ನು ಎತ್ತಿಕೊಂಡು ತಲೆಯಮೇಲೆ ಮುಂದಕ್ಕೆ ಮಾಡಿಕೊಂಡು ನನ್ನ ಬಳಿಯಲ್ಲಿದ್ದರೂ ನೀನು ಸುಳ್ಳುಹೇಳಿರುವುದರಿಂದ ನಿನ್ನ ಬಾಲವು ಮೈಲಿಗೆಯಾಗಲಿ. ಎಂದು ಶಪಿಸಿದಳು. ಅನಂತರ ಅಲ್ಲಿದ್ದ ಹಸುವು ನನಗೆ ಸಾಕ್ಷಿಯನ್ನು ಹೇಳುತ್ತದೆ ಎಂದಳು.

೧೦೭. ಅದನ್ನು ಶ್ರೀರಾಮನು ಕೇಳಲು ಅದೂ ಇಲ್ಲವೆಂದು ಹೇಳಿತು ಆಗ ಸೀತೆಯು ಎಲೈ ಹಸುವೇ! ನೀನು ಸುಳ್ಳುಹೇಳಿದುದರಿಂದ ಮುಖದ ಕಡೆಯಲ್ಲಿ ಅಪವಿತ್ರಳಾಗು ಎಂದು ಶಪಿಸಿದಳು.

೧೦೮-೧೦೯. ಅನಂತರ ಸೀತೆಯು ಅಲ್ಲಿದ್ದ ಅಶ್ವತ್ಥ ಮರವನ್ನು ಕೇಳು ಸಾಕ್ಷಿಯನ್ನು ಹೇಳುತ್ತದೆ ಎಂದಳು. ಅದೂ ಕೂಡ ಕೇಳುತ್ತಲೂ ಇಲ್ಲವೆಂದು ಹೇಳಿತು. ಅದನ್ನು ಕುರಿತು ಸೀತೆಯು ಎಲೈ ಅಶ್ವತ್ಥವೇ ನೀನು ಸುಳ್ಳು ಹೇಳಿದುದರಿಂದ ನಿನ್ನ ಎಲೆಗಳು ಯಾವಾಗಲೂ ಅಲ್ಲಾಡುತ್ತಿರಲಿ ಎಂದು ಶಪಿಸಿದಳು. ಅನಂತರ ಸೀತೆಯು ಸೂರ್ಯನೇ ನನಗೆ ಸಾಕ್ಷಿ ಎಂದಳು.

ಸ ಪೃಷ್ಟಃ ಪ್ರಾಹ ತಥ್ಯಂ ಹಿ ತುಷ್ಟಿರ್ಜಾತಾ ಪಿತುಸ್ತವ ।
ಏತಸ್ಮಿನ್ನಂತರೇ ತತ್ರ ವಿಮಾನೇನಾರ್ಕವರ್ಚಸಾ ॥ ೧೧೦ ॥

ರಾಜಾ ದಶರಥೋ ರಾಮಮಾಗತ್ಯಾಲಿಂಗ್ಯ ವೈ ದೃಢಂ ।
ಪ್ರಾಹ ತ್ವಯಾ ತಾರಿತೋಽಹಂ ನರಕಾದತಿದುಸ್ತರಾತ್ ॥ ೧೧೧ ॥

ಮೈಥಿಲ್ಯಾ ಪಿಂಡದಾನೇನ ಜಾತಾ ಮೇ ತೃಪ್ತಿರುತ್ತಮಾ ।
ತಥಾಪಿ ಲೋಕಶಿಕ್ಷಾರ್ಥಂ ಗಯಾಶ್ರಾದ್ಧಂ ತ್ವಮಾಚರ ॥ ೧೧೨ ॥

ಪಿತರಂ ಪ್ರಾಹ ರಾಮೋಽಪಿ ಕಿಮರ್ಥಂ ಹಿ ತ್ವಯಾತ್ರ ವೈ ।
ತ್ವರಯಾ ಸಿಕತಾಪಿಂಡಸ್ಸಂಗೃಹೀತೋ ವದಸ್ವ ಮಾಂ ॥ ೧೧೩ ॥

ಸ ಪ್ರಾಹಾತ್ರ ಗಯಾಯಾಂ ತು ಬಹುವಿಘ್ನಾನಿ ರಾಘವ ।
ಭವಂತಿ ಶ್ರಾದ್ಧಸಮಯೇ ಕೃತಾ ತಸ್ಮಾತ್ತ್ವರಾ ಮಯಾ ॥ ೧೧೪ ॥

೧೧೦-೧೧೧. ಆ ಸೂರ್ಯನನ್ನು ಕೇಳುತ್ತಲೂ ಅವನು ನಿಜವನ್ನು ಹೇಳಿದನು. ಎಲೈ ರಾಮನೇ! ನಿನ್ನ ತಂದೆಗೆ ತೃಪ್ತಿಯಾಗಿದೆ ಎಂದನು. ಆಗ ಆಕಾಶದಲ್ಲಿ ಸೂರ್ಯತೇಜಸ್ಸುಳ್ಳ ಒಂದು ವಿಮಾನದಲ್ಲಿ ದಶರಥನು ಬಂದು ರಾಮನನ್ನು ಆಲಂಗಿಸಿಕೊಂಡು ಇಂತೆಂದನು.

೧೧೨. ಎಲೈ ರಾಮನೇ! ನೀನು ನನ್ನನ್ನು ಅತಿದುಸ್ತರವಾದ ನರಕದಿಂದ ಬಿಡುಗಡೆಯನ್ನು ಹೊಂದುವಂತೆ ಮಾಡಿದೆ. ಮೈಥಿಲಿಯು ಪಿಂಡವನ್ನು ಕೊಟ್ಟದ್ದರಿಂದ ನನಗೆ ಬಹು ತೃಪ್ತಿಯುಂಟಾಯಿತು. ಆದರೂ ಕೂಡ ಜನಗಳಿಗೆ ನಡತೆಯನ್ನು ತೋರಿಸುವುದಕ್ಕೋಸ್ಕರ ನೀನು ಗಯಾ ಶ್ರಾದ್ಧವನ್ನು ಮಾಡು.

೧೧೩-೧೧೪. ಆಗ ರಾಮನು ಎಲೈ ತಂದೆಯೇ! ನೀನೇಕೆ ಆತುರಪಟ್ಟು ಮರಳಿನ ಪಿಂಡಗಳನ್ನು ತೆಗೆದುಕೊಂಡೆ? ಅದನ್ನು ಹೇಳು ಎಂದೆನ್ನಲು ಎಲೈ ರಾಘವನೇ! ಈ ಗಯೆಯಲ್ಲಿ ಶ್ರಾದ್ಧಸಮಯದಲ್ಲಿ ವಿಘ್ನಗಳು ಬಹಳ ಬರುತ್ತವೆ. ಆದ್ದರಿಂದ ನಾನು ಅವಸರಪಟ್ಟೆನು. ಎಂದನು.

ಇತಿ ರಾಮುಂ ಸಮಾಭಾಷ್ಯ ಗೃಹೀತ್ವಾ ರಾಘವಾದಪಿ ।
ಕಿಂಚಿತ್ಕವ್ಯಂ ವಿಮಾನೇನ ಯಯೌ ದಶರಥಸ್ತದಾ ॥ ೧೧೫ ॥

ತತೋ ರಾಮಃ ಪ್ರೇತಗಿರೌ ಪಿಂಡದಾನಂ ವಿಧಾಯ ಚ ।
ಗತ್ವಾ ಪ್ರೇತಶಿಲಾಯಾಂ ಚ ದತ್ವಾ ಕಾಕಬಲಿಂ ತತಃ ॥ ೧೧೬ ॥

ಧರ್ಮಾರಣ್ಯಂ ತತೋ ಗತ್ವಾ ಕೃತ್ವೈಕೋನಪದೇಷು ಹಿ ।
ಸಕ್ತುನಾ ಚ ತಿಲಾಜ್ಯೈಶ್ಚ ಪಾಯಸೈಶ್ಚ ಸಶರ್ಕರೈಃ ॥ ೧೧೭ ॥

ಪೃಥಗ್ವೈ ಪಿಂಡದಾನಾನಿ ವಟಶ್ರಾದ್ಧಂ ವಿಧಾಯ ಚ ।
ಅಷ್ಟತೀರ್ಥೀಂ ತತಃ ಕೃತ್ವಾ ತತಸ್ಸಂಧ್ಯಾಃ ಸ್ಥಲತ್ರಯೇ ॥ ೧೧೮ ॥

ಕೃತ್ವಾ ಯಥಾವಿಧಾನೇನ ದತ್ವಾ ದಾನಾನ್ಯನೇಕಶಃ ।
ಗದಾಧರಂ ತತಃ ಪೂಜ್ಯ ಮಹಾವಿಭವಪೂರ್ವಕಂ ॥
ಷೇಚಯಾಮಾಸ ತೋಯೈಶ್ಚ ಚೂತವೃಕ್ಷಂ ಸಕೀಟಕಂ ॥ ೧೧೯ ॥

---

೧೧೫. ಈ ರೀತಿಯಾಗಿ ರಾಮುನಿಗೆ ಸಮಾಧಾನ ಹೇಳಿ ಅವನಿಂದಲೂ ಸ್ವಲ್ಪ ಪಿಂಡವನ್ನು ತೆಗೆದುಕೊಂಡು ದಶರಥನು ವಿಮಾನದಲ್ಲಿ ಕುಳಿತು ಹೊರಟು ಹೋದನು.

೧೧೬. ಅನಂತರ ರಾಮುನು ಪ್ರೇತಪರ್ವದಲ್ಲಿ ಗಯಾಶ್ರಾದ್ಧವನ್ನು ಮಾಡಿ ಅನಂತರ ಪ್ರೇಶಶಿಲೆಗೆ ಹೋಗಿ ಕಾಕಬಲಿಯನ್ನು ಕೊಟ್ಟನು.

೧೧೭-೧೧೮. ಅನಂತರ ಧರ್ಮಾರಣ್ಯಕ್ಕೆ ಹೋಗಿ ಹಿಟ್ಟಿಗೆ ಎಳ್ಳು, ತುಪ್ಪ, ಪಾಯಸ, ಸಕ್ಕರೆ ಇವೆಲ್ಲವನ್ನೂ ಹಾಕಿ ನೂರೆಂಟು ಪಿಂಡಗಳನ್ನು ಬೇರೆಬೇರೆಯಾಗಿ ಹಾಕಿ ವಟಶ್ರಾದ್ಧವನ್ನು ಮಾಡಿದನು. ಅನಂತರ ಅಷ್ಟತೀರ್ಥಶ್ರಾದ್ಧವನ್ನು ಮಾಡಿದನು. ಅನಂತರ ಮೂರು ಜಾಗದಲ್ಲಿ ಸಂಧ್ಯಾವಂದನೆಯನ್ನು ಮಾಡಿದನು.

೧೧೯. ಅನೇಕಬಗೆಯಾಗಿ ದಾನಗಳನ್ನು ಮಾಡಿದನು. ಗದಾಧರನನ್ನು ಪೂಜಿಸಿ ಅನಂತರ ನೀರನ್ನು ತಂದು ಆ ಹುಳಿತಿದ್ದ ಚೂತವೃಕ್ಷವನ್ನು ಪ್ರೋಕ್ಷಿಸಿದನು. (ನೀರನ್ನು ಹಾಕಿದನು.)

ಏಕೋ ಮುನಿಃ ಕುಂಭಕುಶಾಗ್ರಹಸ್ತಃ
ಚೂತಸ್ಯ ಮೂಲೇ ಸಲಿಲಂ ದಧಾರ ।
ಆಮ್ರಶ್ಚ ಸಿಕ್ತಃ ಪಿತರಶ್ಚ ತೃಪ್ತಾ
ಏಕಾ ಕ್ರಿಯಾದ್ವ್ಯರ್ಥಕರೀ ಪ್ರಸಿದ್ಧಾ ॥ ೧೨೦ ॥

ಕೃತ್ವಾ ವಿಷ್ಣುಪದೇ ಪೂಜಾಂ ವಿಮಾನಾರೋಪಣಾದಿಭಿಃ ।
ಮಾಸತ್ರಯಮತಿಕ್ರಮ್ಯ ಗಯಾಯಾಂ ರಘುನಂದನಃ ॥ ೧೨೧ ॥

ವಿಮಾನೇನ ಯಯೌ ಪ್ರಾಚೀಂ ದಿಶಂ ಸಂತೋಷಯನ್ ಜನಾನ್ ।
ಫಲ್ಗುನದ್ಯಾಸ್ತಟೇ ಪೂರ್ವೇ ವಿಮಾನಂ ಯತ್ರ ಸಂಸ್ಥಿತಂ ॥ ೧೨೨ ॥

ತತ್ರ ರಾಮಗಯಾ ನಾಮ್ನೀ ಭೂಮಿರ್ವಿಪ್ರೈರುದೀರ್ಯತೇ ।
ರಾಮೇಶ್ವರೋ ರಾಮತೀರ್ಥಂ ವರ್ತತೇ ತತ್ರ ಪಾವನಂ ॥ ೧೨೩ ॥

---

೧೨೦. ಈ ರಾಮನು ನಿಯಮದಿಂದ ಆ ಚೂತವೃಕ್ಷದಪಾತಿಯಲ್ಲಿ ಬಿಂದಿಗೆಯಲ್ಲಿ ನೀರನ್ನಿಟ್ಟುಕೊಂಡು ಕೈಗೆ ದರ್ಭೆಯನ್ನು ಹಾಕಿಕೊಂಡು ತರ್ಪಣವನ್ನು ಕೊಡಲು ಮಾವಿನ ಮರಕ್ಕೆ ನೀರನ್ನು ಹಾಕಿದಂತೆಯೂ ಆಯಿತು. ಪಿತೃಗಳೂ ತೃಪ್ತರಾದರು. ತರ್ಪಣಮಾಡಿದ ಒಂದೇ ಕೆಲಸವು ಎರಡು ರೂಪವಾದ ಫಲಗಳನ್ನು ಕೊಟ್ಟಿತು.

೧೧೧. ಅನಂತರ ವಿಷ್ಣುಪದದಲ್ಲಿ ಪೂಜೆಯನ್ನು ಮಾಡಿ ವಿಮಾನವನ್ನು ಹತ್ತಿ ಸಂಚರಿಸುತ್ತ ಮೂರುತಿಂಗಳ ಕಾಲವಿದ್ದು ಆ ಗಯೆಯಲ್ಲಿ ಮಾಡಬೇಕಾದುದೆಲ್ಲವನ್ನೂ ಮಾಡಿದನು.

೧೨೨–೧೨೩. ಅನಂತರ ವಿಮಾನವನ್ನು ಹತ್ತಿ ಪೂರ್ವದಿಕ್ಕಿಗೆ ಹೊರಟನು. ಫಲ್ಗು ನದಿಯದಡದಲ್ಲಿ ರಾಮನ ಪುಷ್ಪಕವು ನಿಂತಿದ್ದ ಜಾಗವು "ರಾಮಗಯೆ" ಎಂದು ಹೆಸರನ್ನು ಹೊಂದಿತು. ಅಲ್ಲಿ ರಾಮೇಶ್ವರನೂ ರಾಮತೀರ್ಥವೂ ಪ್ರಸಿದ್ಧವಾಗಿವೆ.

ರಾಮೋಽಪಿ ಫಲ್ಗುನದ್ಯಾಶ್ಚ ಗಂಗಾಯಾಸ್ಸಂಗಮಂ ಯಯೌ ।
ಗಯಾ ಬಹಿಃ ಫಲ್ಗುರೇವ ಜ್ಞೇಯಾ ಸಾ ತು ಮಹಾನದೀ ॥ ೧೨೪ ॥

ತತೋ ಯಯೌ ಮುದ್ಗಲಸ್ಯ ನೂತನಾಶ್ರಮಮುತ್ತಮಂ ।
ಯಸ್ಮಿನ್ನುದಗ್ವಹಾ ಗಂಗಾ ಜಾಹ್ನವೀ ಪಾಪನಾಶಿನೀ ॥ ೧೨೫ ॥

ತತೋಽಗ್ರೇ ಜಾನಕೀ ಜ್ಞಾತ್ವಾ ಭೂಮ್ಯಾಂ ದಿವ್ಯಂ ಪ್ರದಾಸ್ಯತಿ ।
ತಸ್ಯಾ ದಿವ್ಯಸ್ಥಲೇ ರಾಮಃ ತೀರ್ಥಮಾದೌ ಚಕಾರ ಸಃ ॥ ೧೨೬ ॥

ಬಂಧೂನಾಂ ಚ ಪೃಥಕ್ತತ್ರ ಸಂತಿ ತೀರ್ಥಾನಿ ಸರ್ವತಃ ।
ಸೀತಯಾ ನ ಕೃತಂ ತತ್ರ ಸ್ವನಾಮ್ನಾ ತೀರ್ಥಮುತ್ತಮಂ ॥ ೧೨೭ ॥

ಜ್ಞಾತ್ವಾ ಭವಿಷ್ಯತ್ಯಗ್ರೇ ಮತ್ತೀರ್ಥಂ ಚೇತಿ ಸವಿಸ್ತರಂ ।
ಯದಾ ಭೂಮ್ಯಾಂ ಪ್ರದಾಸ್ಯಾಮಿ ದಿವ್ಯತೀರ್ಥಂ ತದಾಸ್ತು ಮೇ ॥ ೧೨೮ ॥

---

೧೨೪. ಅನಂತರ ರಾಮನು ಗಂಗೆ ಫಲ್ಗುನದಿಗಳ ಸಂಗಮಕ್ಕೆ ಹೋದನು. ಗಯೆಯಿಂದ ಹೊರಗಡೆಯಲ್ಲಿಯೇ ಆ ಫಲ್ಗುನನದಿಯು ಇರುವುದು. ಅದನ್ನು ಮಹಾನದಿಯೆಂದು ತಿಳಿಯುವುದು.

೧೨೫. ಅನಂತರ ರಾಮನು ಮುದ್ಗಲನ ಹೊಸ ಆಶ್ರಮಕ್ಕೆ ಹೋದನು. ಅಲ್ಲಿ ಗಂಗೆಯು ಉತ್ತರವಾಹಿನಿಯಾಗಿ ಹರಿಯುತ್ತದೆ.

೧೨೬. ಮುಂದೆ ಜಾನಕಿಯು ಯಾವ ಸ್ಥಳನಲ್ಲಿ ತನ್ನ ಮಹಿಮೆಯನ್ನು ತೋರಿಸುವಳೋ ಆ ಜಾಗದಲ್ಲಿ ರಾಮನು ತೀರ್ಥಗಳನ್ನು ಮಾಡಿದನು.

೧೨೭. ಇಲ್ಲಿ ತನ್ನ ಮತ್ತು ತಮ್ಮಂದಿರ ಹೆಸರಿನಿಂದ ಬೇರೆ ಬೇರೆಯಾಗಿ ತೀರ್ಥಗಳೂ ಇರುವುವು. ಇಲ್ಲಿ ಸೀತೆಯು ಮಾತ್ರ ತನ್ನ ಹೆಸರಿನಿಂದ ತೀರ್ಥವನ್ನು ಕಟ್ಟಿಸಲಿಲ್ಲ.

೧೨೮. ಅದಕ್ಕೆ ಕಾರಣವೇನೆಂದರೆ ಆಕೆಯು ನಾನು ಯಾವಾಗ ಆ ಭೂಮಿಯಲ್ಲಿ ನನ್ನ ತೇಜಸ್ಸಿನ ಮಹಿಮೆಯನ್ನು ತೋರಿಸುವೆನೋ ಆಗಲೇ ಅಲ್ಲಿ ನನ್ನ ಹೆಸರಿನ ತೀರ್ಥವಾಗುವುದು ಎಂದು ತಿಳಿದು ಸುಮ್ಮನಿದ್ದಳು.

ರಾಮಸ್ತತೋ ವಿಮಾನೇನ ಗತಶ್ಚೋತ್ತರವಾಹಿನೀಂ ।
ನಾಮ್ನಾ ಪುರೀ ತಥಾ ಗಂಗಾ ಯತ್ರಾಸ್ತಿ ಪರಮಾರ್ಥದಾ ॥ ೧೨೯ ॥

ಪರ್ವತೋ ಯತ್ರ ಗಂಗಾಯಾಮಸ್ತಿ ಬಿಲ್ವೇಶ್ವರೋಪಿ ಚ ।
ತತಃ ಶ್ರೀವೈಜನಾಥೇಶಂ ನತ್ವಾ ರಾವಣನಿರ್ಮಿತಂ ॥ ೧೩೦ ॥

ತತಶ್ಚ ನೈರ್ವಿಮಾನೇನ ಪಶ್ಯನ್ನಾನಾಸ್ಥಲಾನಿ ಸಃ ।
ಯಯೌ ಭಾಗೀರಥೀಮಧ್ಯಾದ್ಯತ್ರ ಭಿನ್ನಾ ಸಿತಾ ಪುನಃ ॥ ೧೩೧ ॥

ಪ್ರಯಾಗಾದ್ಯೋಜನಶತಮಾನೇ ದೇಶೇ ರಘೂದ್ವಹಃ ।
ತತೋ ಗಂಗಾಬ್ಧಿ ಸಂಯೋಗಸಹಸ್ರೇ ಪುಷ್ಪಕೇಣ ಸಃ ॥ ೧೩೨ ॥

---

೧೨೯. ರಾಮನು ಅನಂತರ ವಿಮಾನದಿಂದ ಉತ್ತರವಾಹಿನಿಯಾದ ಗಂಗೆಗೆ ಹೋದನು. ಅಲ್ಲಿ ಉತ್ತರವಾಹಿನಿಯಲ್ಲಿ ಪೂರಿಯೆಂಬ ಪಟ್ಟಣವೂ ಕೂಡ ಇರುವುದು. ಅಲ್ಲಿ ಆ ಉತ್ತರವಾಹಿನಿಯು ಮೋಕ್ಷವನ್ನು ಕೊಡತಕ್ಕದ್ದು.

೧೩೦. ಅಲ್ಲಿ ಆ ಗಂಗೆಯಲ್ಲಿಯೇ ಒಂದು ಪರ್ವತವೂ ಬಿಲ್ವೇಶ್ವರನೂ ಇರುವರು. ಅಲ್ಲಿ ವೈಜನಾಥೇಶ್ವರನನ್ನು ರಾವಣನು ನಿರ್ಮಿಸಿರುವನು. ರಾಮನು ಅದನ್ನೂ ಪೂಜಿಸಿದನು.

೧೩೧. ಅನಂತರ ವಿಮಾನದಲ್ಲಿ ಕುಳಿತು ಅನೇಕ ಸ್ಥಳಗಳನ್ನು ನೋಡುತ್ತ ಹೊರಟನು. ಭಾಗೀರಥಿಯ ಮಧ್ಯದಲ್ಲಿಯೇ ದಡದಲ್ಲಿ ಹೋಗುತ್ತ ಎಲ್ಲಿ ಸಿತಾನದಿಯು ಬೇರೆಯಾಗಿ ಒಡೆಯುತ್ತದೆಯೋ ಅಲ್ಲಿಗೆ ಹೋದನು.

೧೩೨. ಆ ಪ್ರದೇಶವು ಪ್ರಯಾಗಕ್ಕೆ ನೂರುಯೋಜನಗಳಷ್ಟು ದೂರ ವಿರುವುದು. ಅಲ್ಲಿ ಗಂಗೆಯು ಸಮುದ್ರಕ್ಕೆ ಸೇರುತ್ತದೆ. ಅಲ್ಲಿ ಆ ನದಿಯೂ ಸಾವಿರಾರು ಭಾಗವಾಗುತ್ತದೆ. ಅಲ್ಲಿ ಆ ರಾಮನು ಪುಷ್ಪಕದಿಂದ ಇಳಿದನು.

ಗತ್ವಾ ಸ್ನಾತ್ವಾ ತತೋ ಯತ್ರ ಕಾಲಿಂದೀ ಸಂಗತಾರ್ಣವೇ ।
ತತ್ರ ಗತ್ವಾ ರಘುಶ್ರೇಷ್ಠಸ್ತತಃ ಪಶ್ಯನ್ ಸ್ಥಲಾನಿ ಸಃ ॥ ೧೩೩ ॥

ನಾನಾಪುಣ್ಯಾನಿ ತೀರ್ಥಾನಿ ದೃಷ್ಟ್ವಾ ಶ್ರೀಪುರುಷೋತ್ತಮಂ ।
ಪೂರ್ವಸಾಗರತೀರಸ್ಥಂ ದತ್ವಾ ದಾನಾನ್ಯನೇಕಶಃ ॥ ೧೩೪ ॥

ತತಶ್ಚಾನ್ಯೈಃ ಪುಷ್ಪಕೇಣ ದೃಷ್ಟ್ವಾ ನಾನಾವಿಧಾನ್ ಸುರಾನ್ ।
ದೃಷ್ಟ್ವಾ ನಾನಾನದೀಸ್ಸರ್ವಾ ನಾನಾದೇಶಾನ್ವಿಲಂಘ್ಯ ಚ ॥ ೧೩೫ ॥

ಗೋದಾತೀರೇ ಸ್ವನಾಮ್ನಾ ತು ಕೃತ್ವಾ ಗಿರಿಮನುತ್ತಮಂ ।
ಸಪ್ತಗೋದಾವರೀ ಭೇದಸಂಗಮೇಷು ಮಹೋದಧೌ ॥ ೧೩೬ ॥

ಸ್ನಾತ್ವಾ ದಕ್ಷಿಣಮಾರ್ಗೇಣ ತತೋ ರಾಮೋ ಯಯೌ ಪುನಃ ।
ಪೂರ್ವದೇಶೇ ನೃಪತಿಭಿರ್ಮಾನಿತಃ ಪೂಜಿತೋಽಪಿ ಚ ॥ ೧೩೭ ॥

೧೩೩–೧೩೪. ಅಲ್ಲಿ ಸ್ನಾನಮಾಡಿ ಯಮುನಾನದಿಯು ಸಮುದ್ರಕ್ಕೆ ಸೇರುವಲ್ಲಿಗೆ ಹೋದನು. ರಾಮನು ಅಲ್ಲಿಗೆ ಹೋಗಿ ಪುಣ್ಯಸ್ಥಳಗಳನ್ನು ಹುಡುಕುತ್ತಾ ನಾನಾತೀರ್ಥಗಳನ್ನು ನೋಡಿ ಸೇವಿಸಿ ಪುರುಷೋತ್ತಮನ ದರ್ಶನವನ್ನು ಮಾಡಿದನು. ಆ ಪುರುಷೋತ್ತಮನು ಪೂರ್ವಸಾಗರದ ಬಳಿಯಲ್ಲಿರುವನು. ಅದನ್ನು ಸೇವಿಸಿ ಅನೇಕ ದಾನವನ್ನು ಕೊಟ್ಟನು.

೧೩೫. ಆಮೇಲೆ ಪುಷ್ಪಕದಲ್ಲಿ ಕುಳಿತು ಅನೇಕ ದೇವರುಗಳನ್ನು ನೋಡುತ್ತ ಅನೇಕ ನದಿಗಳನ್ನು ನೋಡುತ್ತ ಅನೇಕ ದೇಶಗಳನ್ನು ದಾಟುತ್ತ ಗೋದಾವರೀತೀರದಲ್ಲಿ ತನ್ನ ಹೆಸರಿನಿಂದ ತನ್ನ ಹೆಸರಿನ ಬೆಟ್ಟವನ್ನು ನಿರ್ಮಿಸಿದನು

೧೩೬. ಗೋದಾವರಿಯು ಏಳುಭಾಗವಾಗಿ ಸಮುದ್ರಕ್ಕೆ ಸೇರುವಲ್ಲಿ ಸ್ನಾನವನ್ನು ಮಾಡಿ ದಕ್ಷಿಣದಕಡೆಗೆ ಹೊರಟು ರಾಮನು ಪ್ರಯಾಣ ಬೆಳೆಸಿದನು.

೧೩೭–೧೩೯. ಆ ಪೂರ್ವದೇಶದಲ್ಲಿ ರಾಜರು ರಾಮನನ್ನು ಗೌರವಿಸಿ ಪೂಜಿಸಿದರು. ಅವರಿಂದ ತನಗೆ ಬರಬೇಕಾದ ಕಪ್ಪವನ್ನು ತೆಗೆದುಕೊಂಡು

ಗೃಹೀತ್ವಾ ಸ್ವಕರಂ ತೇಭ್ಯಸ್ತೈಸ್ಸಹೈವ ಶನೈಶ್ಶನೈಃ ।
ವಿಮಾನೇನ ಸುಖೇನೈವ ತೀರ್ಥಾನ್ಯನ್ಯಾನಿ ಸೇವಿತುಂ ॥ ೧೩೮ ॥

ಶ್ರೀರಾಮೋ ಯಾಮ್ಯದಿಗ್ಭಾನಿ ದಕ್ಷಿಣಾಭಿಮುಖೋ ಯಯೌ ।
ಏವಂ ಪ್ರೋಕ್ತಾ ಪೂರ್ವದೇಶಯಾತ್ರಾ ರಾಮೇಣ ಯಾ ಕೃತಾ ॥ ೧೩೯ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ಪೂರ್ವದೇಶಯಾತ್ರಾವರ್ಣನಂ ನಾಮ ಷಷ್ಠಸ್ಸರ್ಗಸ್ಸಮಾಪ್ತಃ

ಅವರೊಡನೆ ಮೆಲ್ಲ ಮೆಲ್ಲಗೆ ಹೊರಟು ಬೇರೆ ಬೇರೆ ದಕ್ಷಿಣದೇಶದ ತೀರ್ಥಗಳನ್ನು ಸೇವಿಸಲು ಹೊರಟನು. ಈ ರೀತಿಯಾಗಿ ರಾಮನು ಮಾಡಿದ ಪೂರ್ವದೇಶದ ಯಾತ್ರೆಗಳನ್ನು ವಿವರಿಸಿದ್ದೇನೆ.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಪೂರ್ವದೇಶಯಾತ್ರಾ ವರ್ಣನವೆಂಬ ಆರನೆಯ ಸರ್ಗವು ಸಮಾಪ್ತವು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

|| ಆರನೆಯ ಸರ್ಗದ ಸಾರಾಂಶವು ||

ಶ್ರೀರಾಮನು ಪಶ್ಚಿಮದಿಕ್ಕಿಗೆ ಹೋಗುತ್ತ ಪ್ರಯಾಗಕ್ಕೆ ಹೋಗಿ ಅಲ್ಲಿಳಿದು ತ್ರಿವೇಣಿಯ ಪೂಜೆಯನ್ನು ಮಾಡಿ ಮುಡಿಯನ್ನು ಕೊಟ್ಟನು. ಮತ್ತು ತೀರ್ಥಸೇವನೆಮಾಡಿ ತೀರ್ಥಶ್ರಾದ್ಧವನ್ನು ಮಾಡಿದನು. ಮಾಘಮಾಸ ಪೂರ್ತಿಯಾಗಿ ಆ ಪ್ರಯಾಗದಲ್ಲಿಯೇ ಇದ್ದುಬಿಟ್ಟನು. ಆಗ ಅಷ್ಟತೀರ್ಥ ಯಾತ್ರೆಯನ್ನೂ ಮಾಡಿದನು. ಅಕ್ಷಯವಟದ ದರ್ಶನವನ್ನು ಮಾಡಿದನು. ಅನಂತರ ಗಂಗಾ ಜಲವನ್ನು ಗಾಜಿನ ಪಾತ್ರೆಗಳಲ್ಲಿ ತುಂಬಿ ವಿಮಾನದಲ್ಲಿಟ್ಟನು. ವಿಂಧ್ಯಾಚಲಕ್ಕೆ ಹೋಗಿ ಅಲ್ಲಿ ದುರ್ಗೆಯನ್ನು ಪೂಜಿಸಿದನು.

ಅನಂತರ ಕಾಶಿಗೆ ಹೊರಟನು. ರಾಮನು ಬರುವುದನ್ನು ತಿಳಿತು ಶಿವನು ಅವನನ್ನು ಎದುರುಗೊಳ್ಳಲು ಬಂದನು. ಅಷ್ಟುವೇಳೆಗೆ ರಾಮನು ದೇಹಳಿ ವಿನಾಯಕನನ್ನು ಪೂಜಿಸಿ ವಿಶ್ವೇಶ್ವರನನ್ನು ನೋಡಿ ನಮಸ್ಕರಿಸಿದನು. ಶಿವನು ಅವನನ್ನು ಆಲಿಂಗಿಸಿಕೊಂಡು ಜೊತೆಯಲ್ಲಿಯೇ ಕರೆದುಕೊಂಡು ನಡೆದುಕೊಂಡೇ ಹೊರಟನು. ಅಲ್ಲಿಂದ ಹೊರಟು ಮಣಿಕರ್ಣಿಕೆಗೆ ಹೋದರು. ಅನಂತರ ರಾಮನು ಚಕ್ರಪುಷ್ಕರಣಿಯಲ್ಲಿ ಸ್ನಾನಮಾಡಿದನು. ಆದಿನ ಉಪವಾಸವಿದ್ದು ಮೂರನೆಯದಿನ ತೀರ್ಥಶ್ರಾದ್ಧವನ್ನು ಮಾಡಿದನು. ಅಂತರ್ಗೃಹಯಾತ್ರೆಗಳನ್ನು ಮಾಡಿ ಅಲ್ಲಿರುವ ಪ್ರಸಿದ್ಧ ಲಿಂಗಗಳನ್ನೂ ಗಣಪತಿಗಳನ್ನೂ ಯೋಗಿನಿಗಳನ್ನೂ ದಿಕ್ಪಾಲಕರನ್ನೂ ನವಗ್ರಹಗಳನ್ನೂ ಪೂಜಿಸಿ ಪಂಚಕ್ರೋಶ ಯಾತ್ರೆಯನ್ನೂ ಮಾಡಿದನು. ಅನಂತರ ಅಲ್ಲಿ ಒಂದು ಲಿಂಗವನ್ನು ಸ್ಥಾಪಿಸಿದನು.

ರಾಮತೀರ್ಥವೆಂಬ ತೀರ್ಥವನ್ನೂ ಮಾಡಿದನು. ಇಷ್ಟರವೇಳೆಗೆ ಅಲ್ಲಿಗೆ ಹನುಮಂತನು ಬಂದು ಸೀತಾರಾಮರಿಗೆ ನಮಸ್ಕರಿಸಿ ಶಂಕರನನ್ನು ಪೂಜಿಸಿ ಹನುಮದ್ಘಟ್ಟವೆಂಬ ಸೋಪಾನವನ್ನು ಕಟ್ಟಿಸಿದನು. ರಾಮನೂ ಒಂದು ಘಟ್ಟವನ್ನು ಕಟ್ಟಿಸಿದನು. ಅವು ಈಗಲೂ ಪ್ರಸಿದ್ಧವಾಗಿವೆ.

ರಾಮನು ಕಾಶಿಯಲ್ಲಿ ಒಂದು ವರ್ಷಕಾಲವಿದ್ದನು. ಆಗ ಅಲ್ಲಿನವರಿಗೆಲ್ಲರಿಗೂ ಮೃಷ್ಟಾನ್ನದ ಸಂತರ್ಪಣೆಯನ್ನು ಮಾಡಿಸಿ ಅನೇಕ ಬಗೆಯಾದ ದಾನಗಳನ್ನೂ ಕೊಟ್ಟನು. ದೇವಸ್ಥಾನಗಳಲ್ಲಿ ಅಖಂಡವಾಗಿ ಪೂಜೆಯು ನಡೆಯುವಂತೆ ಏರ್ಪಡಿಸಿದನು. ಅನಂತರ ಶಿವನ ಒಪ್ಪಿಗೆಯನ್ನು ಹೊಂದಿ ಮುಂದೆ ಹೊರಟನು. ಚ್ಯವನನ ಆಶ್ರಮಕ್ಕೆ ಬಂದು ಅವನಿಗೆ ನಮಸ್ಕರಿಸಿದನು. ಅಲ್ಲಿ ತಾನು ಬಾಣದಿಂದ ಮಾಡಿರುವ ರೇಖೆಯನ್ನು ಎಲ್ಲರಿಗೂ ತೋರಿಸಿದನು. ಮುಂದೆ ಮುಂದೆ ಹೋದಂತೆಲ್ಲಾ ರಾಮನು ಹೆಚ್ಚು ಹೆಚ್ಚಾಗಿ ದಾನಗಳನ್ನು ಮಾಡುತ್ತಿದ್ದನು. ರಾಮನು ತಾನು ಹೋದೆಡೆಗಳಲ್ಲಿ ಅನೇಕ ತೀರ್ಥಗಳಾದರೂ ಅವುಗಳಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನ, ಸೀತೆ, ಹನುಮಂತ ಇವರು ನಿರ್ಮಿಸಿದ ಆರುತೀರ್ಥಗಳೇ ಪ್ರಸಿದ್ಧವಾಗಿವೆ.

ಈ ರಾಮನು ತಾನು ಹೋದೆಡೆಗಳಲ್ಲಿ ಒಂದೊಂದರಲ್ಲಿಯೂ ಅಲ್ಲಿಗೆ ತಕ್ಕಂತೆ ಒಂದು ಎರಡು ಮೂರು ಐದು ಏಳು ಹದಿನೈದು ಹದಿನೆಂಟು ಇಪ್ಪತ್ತೊಂದುದಿನಗಳು ಈ ರೀತಿಯಾಗಿ ಇರುತ್ತಿದ್ದನು.

ಹೀಗೆ ಸುತ್ತುತ್ತ ಗಯೆಗೆ ಬಂದು ಸ್ನಾನಕ್ಕೆ ಹೋದನು. ಆಗ ಸೀತೆಯು ಸಖಿಯರೊಡನೆ ಫಲ್ಗುನದಿಗೆ ಹೋಗಿ ಸ್ನಾನಮಾಡಿ ಸುವಾಸಿನಿಯರ ಪೂಜೆಯನ್ನು ಮಾಡಿ ಗೌರೀಪೂಜೆಯನ್ನು ಮಾಡಲು ಹಸಿಯಮರುಳುಂಡೆಗಳನ್ನು ಮಾಡಿ ನೆಲದಮೇಲೆ ಇಡಲು ಮೊದಲು ಮಾಡಿದಳು. ಆಗ ದಶರಥನ ಕೈಗಳು ಭೂಮಿಯೊಳಗಿನಿಂದ ಬಂದು ಅವನ್ನು ತೆಗೆದುಕೊಂಡು ಹೋಗುತ್ತಿದ್ದುವು. ಹೀಗೆಯೇ ನೂರೆಂಟು ಉಂಡೆಗಳನ್ನು ಮಾಡಿಟ್ಟಳು. ಎಲ್ಲವೂ ಮಾಯವಾದುವು.

ಕೊನೆಗೆ ಸೀತೆಯು ಮನಸ್ಸಿನಲ್ಲಿಯೇ ದುರ್ಗೆಯನ್ನು ಪೂಜಿಸಿ ಮನೆಗೆ ಬಂದು ಬಿಟ್ಟಳು. ಇದನ್ನು ಯಾರಿಗೂ ಹೇಳಲೇ ಇಲ್ಲ. ಇತ್ತ ರಾಮನು ಸ್ನಾನಮಾಡಿ ಪ್ರೇತಪರ್ವತಕ್ಕೆ ಹೋಗಿ ಪಿಂಡವನ್ನು ಹಾಕಲು ದಶರಥನು ಬಂದು ಅವನ್ನು ತೆಗೆದುಕೊಂಡು ಹೋಗಲಿಲ್ಲ. ಆಗ ಇದರ ಕಾರಣವನ್ನು ತಿಳಿಯಲು ಸೀತೆಯನ್ನು ಕೇಳಿದನು. ಸೀತೆಯು ತಾನು ಮಾಡಿದ ಕೆಲಸವನ್ನು ಹೇಳಿದಳು. ರಾಮನು ಸಾಕ್ಷಿಯನ್ನು ಕೇಳಿದನು. ಸೀತೆಯು ಅಲ್ಲಿದ್ದವನ್ನು ಸಾಕ್ಷಿಯನ್ನು ಕೇಳಲು ಅವು ಹೇಳಲಿಲ್ಲ. ಅವಕ್ಕೆ ಶಾಪವನ್ನು ಕೊಟ್ಟಳು. ಕೊನೆಗೆ ಸೂರ್ಯನನ್ನು ಕೇಳಲು ಅವನು ಹೇಳಿದನು. ಆಗ ದಶರಥನೂ ಬಂದು ಸಂತೋಷಗೊಂಡೆನೆಂದು ಹೇಳಿದನು.

ಅಲ್ಲಿ ಮೂರುತಿಂಗಳಕಾಲವಿದ್ದು ಪೂರ್ವದಿಕ್ಕಿಗೆ ಹೊರಟನು. ಅಲ್ಲಿ ಪೂರಿಗೆ ಹೋಗಿ ಗಂಗೆಯಲ್ಲಿ ಸ್ನಾನವನ್ನು ಮಾಡಿದನು. ಅನಂತರ ಕಾಳಿಂದಿಯು ಸಮುದ್ರಕ್ಕೆ ಸೇರುವಲ್ಲಿಗೆ ಹೋಗಿ ಸ್ನಾನಮಾಡಿದನು. ಆಗ ಪೂರ್ವಸಾಗರದ ತೀರದಲ್ಲಿರುವ ತೀರ್ಥಗಳನ್ನೆಲ್ಲಾ ಸೇವಿಸಿದನು. ಸಪ್ತಗೋದಾವರಿಯಲ್ಲಿಯೂ ಸ್ನಾನಮಾಡಿದನು. ಪೂರ್ವದೇಶದ ರಾಜರು ಇವನು ಹೋದೆಡೆಗಳಲ್ಲಿ ಗೌರವಿಸುತ್ತಿದ್ದರು. ಈ ರೀತಿಯಾಗಿ ಪೂರ್ವದೇಶದ ಯಾತ್ರೆಯನ್ನು ಮಾಡಿ ಕೊಂಡು ಅನಂತರ ಶ್ರೀರಾಮನು ದಕ್ಷಿಣದೇಶದ ಯಾತ್ರೆಗೆ ಹೊರಟನು.

|| ಶ್ರೀಃ ||

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

|| ಸಪ್ತಮಸ್ಸರ್ಗಃ ||

|| ರಾಮದಾಸ ಉವಾಚ ||

ತತೋ ರಾಮಸ್ಸಮುಲ್ಲಂಘ್ಯ ಮತ್ಸ್ಯತೀರ್ಥಂ ಮನೋರಮಂ ।
ತೀರ್ತ್ವಾ ಮಹಾನದೀಂ ಕೃಷ್ಣಾಂ ಪಶ್ಯ ಪುಣ್ಯಸ್ಥಲಾನಿ ಸಃ || ೧ ||

ತತೋ ಯಯೌ ನಾರಸಿಂಹಂ ರಾಮೋ ಪಾನಕನಾಮಕಂ ।
ಕೃಷ್ಣಾಬ್ಧಿಸಂಗಮೇ ಸ್ನಾತ್ವಾ ದತ್ವಾ ದಾನಾನಿ ವಿಸ್ತರೈಃ || ೨ ||

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಏಳನೆಯ ಸರ್ಗವು

೧. ರಾಮದಾಸನು ಹೇಳಿದನು–ಅನಂತರ ರಾಮನು ಮತ್ಸ್ಯತೀರ್ಥವನ್ನು ದಾಟಿ ಮಹಾನದಿಯಾದ ಕೃಷ್ಣಾನದಿಯನ್ನು ದಾಟಿ ಪುಣ್ಯಸ್ಥಳಗಳನ್ನು ನೋಡುತ್ತ ಹೊರಟನು.

೨. ಅನಂತರ ಪಾನಕ ನರಸಿಂಹನ ದರ್ಶನವನ್ನು ಮಾಡಿ ಕೃಷ್ಣಾ ನದಿಯು ಸಮುದ್ರಕ್ಕೆ ಸೇರುವಲ್ಲಿಗೆ ಹೋಗಿ ಸ್ನಾನಮಾಡಿ ಅನೇಕ ದಾನಗಳನ್ನು ಕೊಟ್ಟನು.

ಪಶ್ಯನ್ನಾನಾಸ್ಥಲಾನ್ಯೇವ ಯಯೌ ಶ್ರೀಶೈಲಪರ್ವತಂ ।
ಸ್ನಾತ್ವಾ ಸ ನೀಲಗಂಗಾಯಾಂ ದೃಷ್ಟ್ವಾ ಶ್ರೀಮಲ್ಲಿಕಾರ್ಜುನಂ ॥ ೩ ॥

ತತ್ರೈವ ಕೃಷ್ಣಾ ಸಾ ಜ್ಞೇಯಾ ನೀಲಗಂಗೇತಿ ನಾಮತಃ ।
ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮನಿವಾರಕಂ ॥ ೪ ॥

ಶಿಖರೇಶ್ವರಸ್ಯ ಶಿಖರಾತ್ ಬ್ರಹ್ಮಕುಂಡೇ ವಿಗಾಹ್ಯ ಚ ।
ಭೀಮಕುಂಡೇ ತತಃ ಸ್ನಾತ್ವಾ ತಥಾ ನಿವೃತ್ತಿಸಂಗಮೇ ॥ ೫ ॥

ತುಂಗಭದ್ರಾಸಂಗಮೇಽಪಿ ಮಹಾನದೀ ಸರೋವರೇ ।
ವಿಗಾಹ್ಯ ಭವನಾಶಿನ್ಯಾಂ ತತೋ ದೃಷ್ಟ್ವಾ ಹ್ಯಹೋಬಲಂ ॥ ೬ ॥

ನಾರಸಿಂಹಂ ತತೋ ನತ್ವಾ ಕೃತ್ವಾ ಸ್ತಂಭಪ್ರದಕ್ಷಿಣಾಂ ।
ಗತ್ವಾ ಪುಷ್ಪಗಿರೌ ತತ್ರ ಪಿನಾಕೀಮವಗಾಹ್ಯ ಚ ॥ ೭ ॥

---

೩. ಮುಂದಕ್ಕೆ ಹೊರಟು ಅನೇಕ ಸ್ಥಳಗಳನ್ನು ನೋಡುತ್ತ ಶ್ರೀಶೈಲ ಪರ್ವತಕ್ಕೆ ಹೋದನು. ಅಲ್ಲಿರುವ ನೀಲಗಂಗೆಯಲ್ಲಿ ಸ್ನಾನಮಾಡಿ ಮಲ್ಲಿಕಾರ್ಜುನನ ದರ್ಶನವನ್ನು ಮಾಡಿದನು.

೪. ಅಲ್ಲಿರುವ ಕೃಷ್ಣಾನದಿಗೆ ನೀಲಗಂಗೆಯೆಂದು ಹೆಸರು ಬಂದಿದೆ. ಎಂದು ತಿಳಿಯತಕ್ಕದ್ದು. ಶ್ರೀಶೈಲದ ಶಿಖರವನ್ನು ಶಿಖರೇಶ್ವರನ ಶಿಖರದಿಂದ ನೋಡಿದರೆ ಮತ್ತೆ ಅವನು ಜನ್ಮವನ್ನೇ ಪಡೆಯುವುದಿಲ್ಲವು.

೫-೬. ಶಿಖರೇಶ್ವರನ ಶಿಖರದಲ್ಲಿರುವ ಬ್ರಹ್ಮಕುಂಡದಲ್ಲಿ ಸ್ನಾನಮಾಡಿ ಅನಂತರ ಭೀಮಕುಂಡದಲ್ಲಿ ಸ್ನಾನಮಾಡಿ ಅನಂತರ ನಿವೃತ್ತಿಸಂಗಮದಲ್ಲಿ ಸ್ನಾನಮಾಡಿ ಅನಂತರ ತುಂಗಭಧ್ರಾ ಸಂಗಮದಲ್ಲಿ ಸ್ನಾನಮಾಡಿ ಮಹಾನದಿಯ ಸರೋವರದಲ್ಲಿ ಸ್ನಾನಮಾಡಿ ಭವನಾಶಿನಿಯಲ್ಲಿ ಸ್ನಾನಮಾಡಿ ಅಲ್ಲಿ ಅಹೋಬಲಸ್ವಾಮಿಯ ದರ್ಶನವನ್ನು ಮಾಡಿದನು.

೭. ಮುಂದಿರುವ ನರಸಿಂಹಸ್ವಾಮಿಯನ್ನು ನಮಸ್ಕರಿಸಿ ಅಲ್ಲಿರುವ ಸ್ತಂಭವನ್ನು ಪ್ರದಕ್ಷಿಣೆಮಾಡಿ ಪುಷ್ಪಗಿರಿಗೆ ಹೋಗಿ ಅಲ್ಲಿರುವ ಪಿನಾಕಿನಿಯಲ್ಲಿ ಸ್ನಾನವನ್ನು ಮಾಡಿದನು.

ಪಶ್ಯನ್ ಪುಣ್ಯಸ್ಥಲಾನೀಶಾನ್ ದೃಷ್ಟ್ವಾ ಪಂಪಾಸರೋವರಂ ।
ಕಿಷ್ಕಿಂಧಾಯಾಂ ತತೋ ಗತ್ವಾ ಸುಗ್ರೀವಾದ್ಯೈಃ ಪ್ರಪೂಜಿತಃ ॥ ೮ ॥

ಸುಗ್ರೀವಾದ್ಯೈರ್ವಾನರೈಶ್ಚ ವಿಮಾನೇನ ವಿಹಾಯುಸಾ ।
ಪ್ರವರ್ಷಣಗಿರೌ ಸ್ವೀಯಗುಹಾಂ ರಮ್ಯಾಂ ಪ್ರದರ್ಶಯನ್ ॥ ೯ ॥

ವೈದೇಹೀಂ ಕೌತುಕಾದ್ರಾಮಃ ಕಿಂಚಿತ್ಕೃತ್ವಾ ಸ್ಮಿತಾನನಂ ।
ದ್ವಿತೀಯೇ ಭೀಮಕುಂಡೇಥ ಸ್ನಾತ್ವಾ ಗತ್ವಾ ಷಡಾನನಂ ॥ ೧೦ ॥

ಸ್ನಾತ್ವಾಗಸ್ತಿಕುಂಡಮಧ್ಯೇ ಪಶ್ಯನ್ ತೀರ್ಥಾನ್ಯನೇಕಶಃ ।
ಕನಕಾಗಿರಿಸ್ಥಂ ಶಂಭುಂ ನತ್ವಾ ಸಂಪೂಜ್ಯ ರಾಘವಃ ॥ ೧೧ ॥

ವೀರಭದ್ರಂ ತತೋ ದೃಷ್ಟ್ವಾ ನತ್ವಾದ್ರಿಂ ವೇಂಕಟಂ ಭುವಿ ।
ಗೋವಿಂದರಾಜಂ ತಂ ನತ್ವಾ ತೃಪ್ತಿಪತ್ತನಸಂಸ್ಥಿತಂ ॥ ೧೨ ॥

---

೮. ಪುಣ್ಯಸ್ಥಳಗಳಿಗೆ ಹೋಗುತ್ತ ಅಲ್ಲಿರುವ ಶಿವನ ದರ್ಶನವನ್ನು ಮಾಡುತ್ತ ಪಂಪಾಸರೋವರಕ್ಕೆ ಹೊರಟನು. ಅಲ್ಲಿಂದ ಕಿಷ್ಕಿಂಧೆಗೆ ಹೋಗಿ ಸುಗ್ರೀವಾದಿಗಳಿಂದ ಪೂಜೆಯನ್ನು ಹೊಂದಿದನು.

೯-೧೦. ಅಲ್ಲಿ ಸುಗ್ರೀವಾದಿಗಳನ್ನು ವಿಮಾನದಲ್ಲಿ ಕೂರಿಸಿಕೊಂಡು ಹೊರಟು ಪ್ರವರ್ಷಣಗಿರಿಯಲ್ಲಿ ತಾನಿದ್ದ ಗುಹೆಯನ್ನು ತೋರಿಸುತ್ತ ವೈದೇಹಿಗೆ ಅಲ್ಲಿರುವ ಕೌತುಕಗಳನ್ನು ಹೇಳುತ್ತ ರಾಮನು ಸ್ವಲ್ಪ ನಗುತ್ತಿದ್ದನು. ಅನಂತರ ಎರಡನೆಯ ಭೀಮಕುಂಡದಲ್ಲಿ ಸ್ನಾನಮಾಡಿ ಕುಮಾರಸ್ವಾಮಿಯ ದರ್ಶನವನ್ನು ಮಾಡಿದನು.

೧೧. ಅಗಸ್ತ್ಯಕುಂಡದಲ್ಲಿ ಸ್ನಾನಮಾಡಿ ಅಲ್ಲಿಂದ ಮುಂದೆ ತೀರ್ಥಗಳನ್ನು ದರ್ಶನಮಾಡುತ್ತ ಕನಕಗಿರಿಗೆ ಬಂದು ಅಲ್ಲ ಶಿವನನ್ನು ಪೂಜಿಸಿ ನಮಸ್ಕರಿಸಿದನು.

೧೨. ಮುಂದೆ ವೀರಭದ್ರನಿಗೆ ನಮಸ್ಕರಿಸಿ ವೆಂಕಟಗಿರಿಗೆ ನಮಸ್ಕರಿಸಿ ತಿರುಪತಿ ಪಟ್ಟಣದಲ್ಲಿರುವ ಗೋವಿಂದರಾಜನಿಗೆ ನಮಸ್ಕರಿಸಿದನು.

ಸ್ನಾತ್ವಾ ಕಪಿಲಧಾರಾಯಾಂ ತೀರ್ಥಶ್ರಾದ್ಧಂ ವಿಧಾಯ ಚ ।
ತತೋ ಶೇಷಾಚಲಂ ಗತ್ವಾ ಸ್ನಾತ್ವಾ ಪುಷ್ಕರಿಣೀ ಜಲೇ ॥ ೧೩ ॥

ವೇಂಕಟೇಶಂ ಪೂಜಯಿತ್ವಾ ಪಂಚತೀರ್ಥೀಂ ವಿಗಾಹ್ಯ ಚ ।
ಸುವರ್ಣಮುಖರೀತೀರ ಸಂಸ್ಥಂ ಶ್ರೀಕಾಲಹಸ್ತಿನಂ ॥ ೧೪ ॥

ಪೂಜಯಿತ್ವಾ ಯಯೌ ಕಾಂಚೀಂ ರಾಮಶ್ಶಿವಹರಿಪ್ರಿಯಾಂ ।
ಏಕಾಂಬರೇಶ್ವರಂ ಪೂಜ್ಯ ಸರ್ವತೀರ್ಥೇ ವಿಗಾಹ್ಯ ಚ ॥ ೧೫ ॥

ಕಾಮಾಕ್ಷಿಮಂಬಿಕಾಂ ನತ್ವಾ ಸ್ನಾತ್ವಾ ವೇಗಾವತೀ ಜಲೇ ।
ನತ್ವಾ ವರದರಾಜಂ ಚ ಪಕ್ಷಿತೀರ್ಥಂ ತತೋ ಯಯೌ ॥ ೧೬ ॥

ಪೂಷಾವಿಧಾತೃನಾಮಾನೌ ಪಕ್ಷಿಣೌ ಪೂಜ್ಯ ಸೀತಯಾ ।
ಪುಷ್ಪಕೇಣ ತತಶ್ಶೀಘ್ರಂ ಕ್ಷೀರನದ್ಯಾಂ ವಿಗಾಹ್ಯ ಸಃ ॥ ೧೭ ॥

---

೧೩. ಕಪಿಲಧಾರೆಯಲ್ಲಿ ಸ್ನಾನಮಾಡಿ ಅಲ್ಲಿ ತೀರ್ಥಶ್ರಾದ್ಧವನ್ನು ಮಾಡಿ ಅಲ್ಲಿಂದ ಶೇಷಾಚಲಕ್ಕೆ ಹೋಗಿ ಅಲ್ಲಿರುವ ಪುಷ್ಕರಣಿಯಲ್ಲಿ ಸ್ನಾನಮಾಡಿ ಆ ವೆಂಕಟೇಶನನ್ನು ಪೂಜಿಸಿದನು.

೧೪. ಪಂಚತೀರ್ಥದಲ್ಲಿ ಸ್ನಾನಮಾಡಿ ವೆಂಕಟೇಶನಿಗೆ ನಮಸ್ಕರಿಸಿ ಸುವರ್ಣಮುಖಿಯ ತೀರದಲ್ಲಿರುವ ಕಾಲಹಸ್ತೀಶ್ವರನನ್ನು ಪೂಜಿಸಿದನು.

೧೫-೧೬. ಮುಂದಕ್ಕೆ ಹೊರಟು ಕಾಂಚಿಗೆ ಹೋದನು. ಅದು ಶಿವನಿಗೂ ಹರಿಗೂ ಪ್ರೀತಿಯಾದ ಜಾಗವು. ಅಲ್ಲಿ ಸರ್ವತೀರ್ಥದಲ್ಲಿ ಸ್ನಾನಮಾಡಿ ಏಕಾಂಬರೇಶ್ವರನನ್ನು ಪೂಜಿಸಿದನು. ವೇಗಾವತಿಯ ಜಲದಲ್ಲಿ ಸ್ನಾನಮಾಡಿ ಕಾಮಾಕ್ಷಿಯನ್ನು ಪೂಜಿಸಿದನು. ಅಲ್ಲಿ ವರದರಾಜನಿಗೆ ನಮಸ್ಕರಿಸಿ ಮುಂದೆ ಪಕ್ಷಿ ತೀರ್ಥಕ್ಕೆ ಹೋದನು.

೧೭. ಅಲ್ಲಿ ಪೂಷಾ ವಿಧಾತೃ ಎಂಬ ಎರಡು ಪಕ್ಷಿಗಳನ್ನು ಪೂಜಿಸಿ ಸೀತೆಯೊಡನೆ ಪುಷ್ಪಕದಲ್ಲಿ ಕುಳಿತು ಮುಂದೆ ಹೋಗಿ ಕ್ಷೀರನದಿಯಲ್ಲಿ ಸ್ನಾನ ಮಾಡಿದನು.

ನತ್ವಾ ತ್ರಿವಿಕ್ರಮಂ ತತ್ರ ತತೋಗಾದರುಣಾಚಲಂ ।
ಮುಕ್ತಿರ್ಯತ್ಸ್ಮರಣಾದೇವ ನತ್ವಾ ತಮರುಣಾಚಲಂ ॥ ೧೮ ॥

ಮಣಿಮುಕ್ತಾನದೀತೀರೇ ವೃದ್ಧಾಚಲಮಗಾತ್ತತಃ ।
ವೃದ್ಧಾಚಲೇಶಂ ಸಂಪೂಜ್ಯ ವಟಪಾಲಂ ತತೋ ಯಯೌ ॥ ೧೯ ॥

ವಟಪಾಲೇಶ್ವರಂ ಪೂಜ್ಯ ತತಃ ಶ್ರೀಮುಷ್ಣಮಭ್ಯಗಾತ್ ।
ತತ್ರ ಯಜ್ಞವರಾಹಂ ಚ ಸಂಪೂಜ್ಯ ಜಗದೀಶ್ವರಂ ॥ ೨೦ ॥

ಚಿದಂಬರಮಥಾಗಚ್ಛದ್ದರ್ಶನಾದೇವ ಮುಕ್ತಿದಂ ।
ಲಿಖಿತಾ ಯತ್ರ ಶೇಷೇಣ ಶಿಲಾಯಾಂ ತಾಂಡವಾಕೃತಿಃ ॥ ೨೧ ॥

ಕಾವೇರೀಂ ಚ ತತಸ್ತೀರ್ತ್ವಾ ಸಿಂಹಕ್ಷೇತ್ರಂ ತತೋ ಯಯೌ ।
ಬ್ರಹ್ಮ ನತ್ವಾ ಪುರೇಶಂ ಚ ವೈಜನಾಥಂ ಪ್ರಣಮ್ಯ ಸಃ ॥ ೨೨ ॥

---

೧೮. ಅಲ್ಲಿರುವ ತ್ರಿವಿಕ್ರಮ ದೇವನನ್ನು ಪೂಜಿಸಿ ಮುಂದೆ ಅರುಣಾಚಲಕ್ಕೆ ಹೋದನು. ಯಾವ ಅರುಣಾಚಲವನ್ನು ಸ್ಮರಿಸಿಕೊಂಡರೇನೇ ಮುಕ್ತಿಯು ಸಿಕ್ಕುತ್ತದೆಯೋ ಅಂತಹ ಅರುಣಾಚಲವನ್ನು ನಮಸ್ಕರಿಸಿದನು.

೧೯. ಮುಂದೆ ಮುಕ್ತಾನದಿಯ ತೀರದಲ್ಲಿರುವ ವೃದ್ಧಾಚಲಕ್ಕೆ ಹೋದನು. ಅಲ್ಲಿ ವೃದ್ಧಾಚಲೇಶನನ್ನು ಪೂಜಿಸಿ ಮುಂದಕ್ಕೆ ವಟಪಾಲಕ್ಕೆ ಹೋದನು.

೨೦. ಅಲ್ಲಿ ವಟಪಾಲೇಶ್ವರನನ್ನು ಪೂಜಿಸಿ ಮುಂದಕ್ಕೆ ಶ್ರೀಮುಷ್ಣಿಗೆ ಹೋದನು. ಅಲ್ಲಿ ಜಗದೀಶ್ವರನಾದ ಯಜ್ಞವರಾಹನನ್ನು ಪೂಜಿಸಿದನು.

೨೧. ತನ್ನ ದರ್ಶನದಿಂದಲೇ ಎಲ್ಲರಿಗೂ ಮುಕ್ತಿಯನ್ನುಕೊಡುವ ಚಿದಂಬರಕ್ಕೆ ಹೋದನು. ಆ ಜಾಗದಲ್ಲಿ ಆದಿಶೇಷನೇ ಕಲ್ಲಿನ ಮೇಲೆ ತಾಂಡವಾಕೃತಿಯನ್ನು ಬರೆದಿರುವನು.

೨೨. ಅನಂತರ ಕಾವೇರಿಯನ್ನು ದಾಟಿ ಸಿಂಹಕ್ಷೇತ್ರಕ್ಕೆ ಹೋದನು. ಅಲ್ಲಿ ಬ್ರಹ್ಮಪುರೇಶನನ್ನೂ ವೈಜನಾಥನನ್ನೂ ನಮಸ್ಕರಿಸಿದನು.

ಶ್ವೇತಾರಣ್ಯಂ ತತೋ ಗತ್ವಾ ಶಂಖಮುಖ್ಯಾಂ ವಿಗಾಹ್ಯ ಚ ।
ಛಾಯೊವನಂ ತತೋ ದೃಷ್ಟ್ವಾ ಯಯೌ ಗೌರೀಮಯೂರಕಂ ॥ ೨೩ ॥

ವೇದಾರಣ್ಯಂ ತತೋ ಗತ್ವಾ ನತ್ವಾ ಮಧ್ಯಾರ್ಜುನಂ ಶಿವಂ ।
ಸ್ನಾತ್ವಾಥ ವೃದ್ಧಕಾವೇರಿಂ ಕುಂಭಕೋಣಂ ವಿಲೋಕ್ಯ ಚ ॥ ೨೪ ॥

ಶ್ರೀನಿವಾಸಂ ತತೋ ದೃಷ್ಟ್ವಾ ದೃಷ್ಟ್ವಾ ಬೃಂದಾವನಂ ಶುಭಂ ।
ಸಾರನಾಥಂ ತತೋ ದೃಷ್ಟ್ವಾ ಶ್ರೀವತ್ಸಂ ಚ ದದರ್ಶ ಸಃ ॥ ೨೫ ॥

ಪ್ರಯಾಗಮಾಧವಂ ನತ್ವಾ ಗತ್ವಾಭ್ರಶಿರಸಃ ಸ್ಥಲಂ ।
ಛಾನಾವಾಕಾಶನೀಲಾಭಂ ಗತ್ವಾಥ ಕಮಲಾಲಯಂ ॥ ೨೬ ॥

ತ್ಯಾಗೇಶ್ವರಂ ಸಮಭ್ಯರ್ಚ್ಯ ಗಯಾತೀರ್ಥೇ ವಿಗಾಹ್ಯ ಚ ।
ದಕ್ಷಿಣದ್ವಾರಕಾಯಾಂ ಚ ಶ್ರೀಗೋವಿಂದಂ ಪ್ರಣಮ್ಯ ಸಃ ॥ ೨೭ ॥

---

೨೩. ಮುಂದೆ ಶ್ವೇತಾರಣ್ಯಕ್ಕೆ ಹೋದನು. ಅಲ್ಲಿ ಶಂಖಮುಖಿಯಲ್ಲಿ ಸ್ನಾನಮಾಡಿದನು. ಅಲ್ಲಿರುವ ಛಾಯಾವನವನ್ನು ನೋಡಿ ಮುಂದಕ್ಕೆ ಗೌರೀ ಮಯೂರಕ್ಕೆ ಹೋದನು.

೨೪. ಮುಂದೆ ವೇದಾರಣ್ಯಕ್ಕೆ ಹೋಗಿ ಅಲ್ಲಿ ಮಧ್ಯಾರ್ಜುನೇಶ್ವರನಿಗೆ ನಮಸ್ಕರಿಸಿ ವೃದ್ಧಕಾವೇರಿಯಲ್ಲಿ ಸ್ನಾನಮಾಡಿ ಕುಂಭಕೋಣವನ್ನು ನೋಡಿದನು.

೨೫. ಅಲ್ಲಿ ಶ್ರೀನಿವಾಸನನ್ನು ನೋಡಿ ಬೃಂದಾವನ್ನು ನೋಡಿಕೊಂಡು ಸಾರನಾಥಕ್ಕೆ ಹೋಗಿ ಅವನ ದರ್ಶನವನ್ನು ಮಾಡಿ ಅಲ್ಲರುವ ಶ್ರೀವತ್ಸನನ್ನು ನೋಡಿದನು.

೨೬-೨೭. ಮುಂದೆ ಅಲ್ಲಿರುವ ಪ್ರಯಾಗ ಮಾಧವನಿಗೆ ನಮಸ್ಕರಿಸಿ ಅಭ್ರಶಿರಸ್ಥಲಕ್ಕೆ ಹೋಗಿ ಮುಂದೆ ಕಮಲಾಲಯಕ್ಕೆ ಹೋಗಿ ತ್ಯಾಗೇಶ್ವನನನ್ನು ನಮಸ್ಕರಿಸಿ ಗಯಾತೀರ್ಥದಲ್ಲ ಸ್ನಾನಮಾಡಿ ದಕ್ಷಿಣದ್ವಾರಕೆಗೆ ಹೋಗಿ ಶ್ರೀಗೋವಿಂದನಿಗೆ ನಮಸ್ಕರಿಸಿದನು.

ಜೇಪಾಲಾಖ್ಯಂ ಪುರಂ ಗತ್ವಾ ಗತ್ವಾ ಚಾಭಯದೇಶ್ವರಂ ।
ವಿಘ್ನೇಶ್ವರಂ ನಮಸ್ಕೃತ್ಯ ಪುರಾ ಸಂಸ್ಥಾಪಿತಂ ಸ್ವಯಂ ॥ ೨೮ ॥

ಸ್ನಾತ್ವಾ ವೈ ನವಪಾಷಾಣೇ ಯಯೌ ದೇವ್ಯಾಶ್ಚ ಪತ್ತನಂ ।
ಸ್ನಾತ್ವಾ ವೇತಾಲತೀರ್ಥೇ ವೈ ತೀತ್ವಾರ್ಘಂ ಸಾಗರಸ್ಯ ಚ ॥ ೨೯ ॥

ಸ ಸ್ನಾತ್ವಾ ಭೈರವೇ ತೀರ್ಥೇ ಪ್ರಾಪ್ಯೈಕಾಂತಸ್ಥಿತಂ ನಿಜಂ ।
ಅವರುಹ್ಯ ವಿಮಾನಾಗ್ರ್ಯಾತ್ಪದ್ಭ್ಯಾಂ ಸರ್ವೈರ್ಜನೈಸ್ಸಹ ॥ ೩೦ ॥

ಗತ್ವಾ ಲಕ್ಷ್ಮಣಕುಂಡೇಥ ಸ್ವಕುಂಡೇಪಿ ವಿಗಾಹ್ಯ ಚ ।
ಅಗ್ನಿತೀರ್ಥೇ ತತಃ ಸ್ನಾತ್ವಾ ಧನುಷ್ಕೋಟ್ಯಾಂ ವಿಗಾಹ್ಯ ಚ ॥ ೩೧ ॥

ಸ್ನಾತ್ವಾ ಜಟಾಯುತೀರ್ಥೇ ಹಿ ಗತ್ವಾ ತಂ ಗಂಧಮಾದನಂ ।
ಆದೌ ನತ್ವಾ ವಿಶ್ವನಾಥಂ ಪುರಾನೀತಂ ಹನೂಮತಾ ॥ ೩೨ ॥

---

೨೮. ಮುಂದೆ ಜೇಪಾಲಪುರಕ್ಕೆ ಹೋಗಿ ಅಭಯದೇಶ್ವರನ ದರ್ಶನವನ್ನು ಮಾಡಿ ತಾನೇ ಹಿಂದೆ ಪ್ರತಿಷ್ಠೆಮಾಡಿದ್ದ ವಿಘ್ನೇಶ್ವರನಿಗೆ ನಮಸ್ಕರಿಸಿದನು.

೨೯–೩೧. ನವಪಾಷಾಣದಲ್ಲಿ ಸ್ನಾನಮಾಡಿ ದೇವೀಪಟ್ಟಣಕ್ಕೆ ಹೋಗಿ ಅಲ್ಲಿ ವೇತಾಳ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ಸಮುದ್ರದ ನೀರನ್ನೂ ದಾಟಿ ಅಲ್ಲಿ ಭೈರವತೀರ್ಥದಲ್ಲಿ ಸ್ನಾನಮಾಡಿ ಅಲ್ಲಿರುವ ತನ್ನ ಏಕಾಂತಸ್ಥಳಕ್ಕೆ ಹೋಗಿ ಅಲ್ಲಿ ವಿಮಾನದಿಂದ ಇಳಿದು ಕಾಲಿನ ನಡೆಗೆಯಲ್ಲಿಯೇ ಎಲ್ಲರೊಡನೆಯೂ ಹೋಗಿ ಲಕ್ಷ್ಮಣಕುಂಡದಲ್ಲಿಯೂ ಸ್ನಾನಮಾಡಿ ಅಗ್ನಿತೀರ್ಥದಲ್ಲಿಯೂ ಸ್ನಾನಮಾಡಿ ಧನುಷ್ಕೋಟಿಯಲ್ಲಿಯೂ ಸ್ನಾನಮಾಡಿದನು.

೩೨–೩೩. ಅನಂತರ ಜಟಾಯುತೀರ್ಥದಲ್ಲಿ ಸ್ನಾನಮಾಡಿ ಗಂಧಮಾದನಕ್ಕೆ ಹೋಗಿ ಮೊದಲು ಹನುಮಂತನು ತಂದುಕೊಟ್ಟಿದ್ದ ವಿಶ್ವನಾಥನಿಗೆ

ರಾಮೇಶ್ವರಂ ತತೋ ನತ್ವಾ ಕೃತ್ವಾ ಗಂಗಾಭಿಷೇಚನಂ ।
ಕಾಚಕುಂಭಾದಿಕಂ ತ್ಯಕ್ತ್ವಾ ಧನುಷ್ಕೋಟ್ಯಾಂ ರಘೂತ್ತಮಃ ॥ ೩೩ ॥

ಕೋಟಿತೀರ್ಥಂ ಧನುಷ್ಕೋಟ್ಯಾಂ ಚಕಾರ ಕೂಪಮುತ್ತಮಂ ।
ಕ್ಷೇತ್ರಪಾಪಪ್ರಶಾಂತ್ಯರ್ಥಂ ದೃಷ್ಟ್ವಾ ಶ್ರೀಶ್ವೇತಮಾಧವಂ ॥ ೩೪ ॥

ನಾನಾದಾನಾದಿಕಂ ಕೃತ್ವಾ ಮಾಸಮೇಕಂ ವಿಲಂಘ್ಯ ಚ ।
ವಾಹನಾರೂಢದೇವಾನಾಂ ಮಹೋತ್ಸಾಹಾನ್ ವಿಧಾಯ ಚ ॥ ೩೫ ॥

ಕ್ಷೇತ್ರಪಾಪಪ್ರಶಾಂತ್ಯರ್ಥಂ ಕೋಟಿತೀರ್ಥಂ ವಿಗಾಹ್ಯ ಚ ।
ನತ್ವಾ ದ್ವಾರಸ್ಥಗಣಪಂ ತೀರ್ತ್ವಾಘಂ ಜಲಧೇಃ ಪುನಃ ॥ ೩೬ ॥

ವಿಹಾಯಸಾ ವಿಮಾನೇನ ಸ ದರ್ಭಶಯನಂ ಯಯೌ ।
ಸ್ನಾತ್ವಾ ನಿಕ್ಷೇಪಿಕಾತೋಯೇ ತಾಮ್ರಪರ್ಣ್ಯಬ್ಧಿಸಂಗಮೇ ॥ ೩೭ ॥

ನಮಸ್ಕರಿಸಿ ಅನಂತರ ರಾಮೇಶ್ವರನಿಗೆ ನಮಸ್ಕರಿಸಿ ಆ ಸ್ವಾಮಿಗೆ ಗಂಗಾಜಲದಿಂದ ಅಭಿಷೇಕವನ್ನು ಮಾಡಿದನು. ಅನಂತರ ಆ ಗಾಜಿನಗಡಿಗೆಗಳನ್ನು ಧನುಷ್ಕೋಟಿಯಲ್ಲಿ ಬಿಸುಟನು.

೩೪–೩೫. ಆ ಧನುಷ್ಕೋಟಿಯಲ್ಲಿ ಕೋಟಿತೀರ್ಥವೆಂಬ ತೀರ್ಥವನ್ನು ನಿರ್ಮಾಣಮಾಡಿದನು. ಕ್ಷೇತ್ರದಲ್ಲಿ ಮಾಡಿದ ಪಾಪಗಳ ಶಾಂತಿಗೋಸ್ಕರ ಶ್ವೇತಮಾಧವನ ದರ್ಶನವನ್ನು ಮಾಡಿ ಅಲ್ಲಿ ಅನೇಕ ಬಗೆಯ ದಾನಗಳನ್ನು ಮಾಡಿ ಒಂದು ತಿಂಗಳಕಾಲ ಅಲ್ಲಿದ್ದನು. ಮತ್ತು ವಾಹನಾರೂಢ ದೇವತೆಗಳಿಗೆ ಮಹೋತ್ಸವವನ್ನು ಮಾಡಿಸಿದನು. (ಆ ದೇವರಿಗೆಲ್ಲ ಅನೇಕ ಬಗೆಯಾದ ವಾಹನಗಳ ಉತ್ಸವವನ್ನು ಮಾಡಿಸಿದನು.)

೩೬–೩೭. ಕ್ಷೇತ್ರದಲ್ಲಿ ಮಾಡಿದ ಪಾಪದ ನಾಶಕ್ಕೋಸ್ಕರ ಕೋಟಿತೀರ್ಥದಲ್ಲಿ ಸ್ನಾನಮಾಡಿ ದ್ವಾರಗಣಪತಿಗೆ ನಮಸ್ಕರಿಸಿ ಮತ್ತೆ ಹಿಂದಕ್ಕೆ ಸಮುದ್ರದ ನೀರನ್ನು ದಾಟಿ ವಿಮಾನದಲ್ಲಿ ಕುಳಿತು ದರ್ಭಶಯನಕ್ಕೆ ಹೋದನು. ಅಲ್ಲಿ ನಿಕ್ಷೇಪಿಕಾಜಲದಲ್ಲಿ ಸ್ನಾನಮಾಡಿ ತಾಮ್ರಪರ್ಣಿಯು ಸಮುದ್ರಕ್ಕೆ ಸೇರುವಲ್ಲಿಗೆ ಹೋದನು.

ಗತ್ವಾ ಸ್ನಾತ್ವಾ ರಾಮಚಂದ್ರೋ ದದೌ ದಾನಾನ್ಯನೇಕಶಃ ।
ತತೋಽಬ್ಧೇಸ್ತೀರಸಂಸ್ಥಂ ತಂ ಸ್ಕಂದಂ ಸಂಪೂಜ್ಯ ರಾಘವಃ ॥ ೩೮ ॥

ತಾಮ್ರಪರ್ಣೀತಟೇನೈವ ಪಶ್ಯನ್ ಪುಣ್ಯಸ್ಥಲಾನಿ ಸಃ ।
ನವವೇಂಕಟನಾಥಾಂಸ್ತಾನ್ ನತ್ವಾ ತೋತಾದ್ರಿಮಾಯಯೌ ॥ ೩೯ ॥

ಕನ್ಯಾಕುಮಾರಿಕಾಂ ದೃಷ್ಟ್ವಾ ಸಿಂಧುತೀರ ನಿವಾಸಿನೀಂ ।
ಪ್ರತೀಕ್ಷಂತೀಂ ಸ್ವೀಯಮಾರ್ಗಂ ಬಿಭ್ರತೀಂ ಮಾಲಿಕಾಂ ಕರೇ ॥ ೪೦ ॥

ತಾಮಾಹ ರಘುವೀರಶ್ಚ ವರಂ ವರಯ ಸುವ್ರತೇ ।
ಸಾ ಪ್ರಾಹ ರಾಘವಂ ನತ್ವಾ ಚಿರಮಸ್ಮಿ ವ್ರತಸ್ಥಿತಾ ॥ ೪೧ ॥

ಅಹಂ ಮುನಿಸುತಾ ಪಿತ್ರಾ ಸುಸೇಂದ್ರಾಯ ವಿನಿಶ್ಚಿತಾ ।
ವಿವಾಹಾರ್ಥಂ ಸಮಾನೀತಸ್ಸುಸೇಂದ್ರೋ ಯೋಜನೇ ಸ್ಥಿತಃ ॥ ೪೨ ॥

---

೩೮. ಅಲ್ಲಿ ಸ್ನಾನಮಾಡಿ ಅನೇಕ ದಾನಗಳನ್ನು ಅಲ್ಲಿ ಮಾಡಿದನು. ಅನಂತರ ಆ ಸಮುದ್ರ ತೀರದಲ್ಲಿರುವ ಸ್ಕಂದಸ್ವಾಮಿಯನ್ನು ಪೂಜಿಸಿದನು.

೩೯. ಮುಂದೆ ತಾಮ್ರಪರ್ಣಿ ನದಿಯ ದಡದಲ್ಲಿಯೇ ಹೊರಟು ಅನೇಕ ಪುಣ್ಯಸ್ಥಳಗಳನ್ನು ನೋಡುತ್ತ ನವವೆಂಕಟನಾಥರನ್ನು ನಮಸ್ಕರಿಸಿ ತೋತಾದ್ರಿಗೆ ಬಂದನು.

೪೦-೪೧. ಸಮುದ್ರತೀರದಲ್ಲಿದ್ದುಕೊಂಡು ತನ್ನ ಕೈಯ್ಯಲ್ಲಿ ಪುಷ್ಪಮಾಲಿಕೆಯನ್ನು ಹಿಡಿದು ತನ್ನ ಬರುವಿಕೆಯನ್ನು ಎದುರುನೋಡುತ್ತಿರುವ ಕನ್ಯಾಕುಮಾರಿಕೆಯನ್ನು ನೋಡಿ ನಿನಗೆ ಬೇಕಾದವರನ್ನು ಕೇಳಿಕೋ ಎಂದನು. ಆಗ ಅವಳು ರಾಮನಿಗೆ ನಮಸ್ಕರಿಸಿ ಬಹುದಿನದಿಂದ ಈ ಕನ್ಯಕಾವ್ರತದಲ್ಲಿಯೇ ಇದ್ದೇನೆ.

೪೨-೪೩. ಸ್ವಾಮೀ, ನಾನೊಬ್ಬಳು ಮುನಿಕನ್ನಿಕೆಯು. ನನ್ನ ತಂದೆಯು ನನ್ನನ್ನು ಸುಸೇಂದ್ರನೆಂಬುವನಿಗೆ ಕೊಡಲು ನಿಶ್ಚಯಿಸಿದ್ದನು. ಅವನು ಮದುವೆಗೆ

ತವ ಯಾತ್ರೋದ್ಯಮಂ ಶ್ರುತ್ವಾ ಮಯಾ ಚಿತ್ತೇ ವಿನಿಶ್ಚಿತಂ ।
ಆಗಮಿಷ್ಯತಿ ರಾಮೋತ್ರ ವರಯಿಷ್ಯಾಮ್ಯಹಂ ತದಾ ॥ ೪೩ ॥

ಪಿತ್ರಾ ಮನ್ನಿಶ್ಚಯಂ ಜ್ಞಾತ್ವಾ ಸುಸೇಂದ್ರೋ ವಿನಿವರ್ತಿತಃ ।
ಸೋಪಿ ಮತ್ಖೇದಚಿತ್ತಸ್ತು ಯೋಜನೇದ್ಯಾಪಿ ವರ್ತತೇ ॥ ೪೬ ॥

ವಿವಾಹಸ್ಯೋಪಕರಣಾದಿ ಮನ್ಮಾತ್ರಾ ಯತ್ಕೃತಂ ಪುರಾ ।
ಪಿತ್ರಾ ತತ್ಸಾಗರೇ ಕ್ಷಿಪ್ತಂ ಕೋಧಾವಿಷ್ಟೇನ ರಾಘವ ॥ ೪೫ ॥

ಅದ್ಯಾಪಿ ದೃಶ್ಯತೇ ಪಶ್ಯ ತರಂಗೈರ್ನಿರ್ಗತಂ ಬಹಿಃ ।
ಅದ್ಯ ತ್ವಯಾ ತಾರಿತಾಹಂ ಮಾಂ ದಾಸೀಂ ಕರ್ತುಮರ್ಹಸಿ ॥ ೪೬ ॥

ಜ್ಞಾತ್ವಾ ತಸ್ಯಾ ಹ್ಯಭಿಪ್ರಾಯಂ ತಾಮಾಹ ರಘುನಂದನಃ ।
ಏಕಪತ್ನೀವ್ರತಂ ಮೇಽಸ್ತಿ ಜನ್ಮನ್ಯಸ್ಮಿ ಕುಮಾರಿಕೇ ॥ ೪೭ ॥

ಹೊರಟು ಬಂದವನು ಒಂದು ಯೋಜನದಷ್ಟು ದೂರದಲ್ಲಿಯೇ ನಿಂತನು. ನೀನು ಯಾತ್ರೆಗೆ ಬರುವುದನ್ನು ನಾನು ಕೇಳಿ, "ರಾಮನು ಯಾತ್ರೆಗೆ ಬರುವನು. ಆಗ ನಾನು ವರವನ್ನು ಬೇಡಿಕೊಳ್ಳೋಣ" ಎಂದು ನಿಶ್ಚಯಿಸಿದೆನು.

೪೪. ಈ ನನ್ನ ನಿಶ್ಚಯವನ್ನು ತಿಳಿದು ನನ್ನ ತಂದೆಯು ಆ ಸುರೇಂದ್ರನನ್ನು ಹಿಂದಕ್ಕೆ ಕಳುಹಿಸಿ ಬಿಟ್ಟನು. ಅವನೂ ಕೂಡ ನನ್ನ ಸಂಬಂಧವಾದ ದುಃಖದಿಂದ ಒಂದು ಯೋಜನದೂರದಲ್ಲಿಯೇ ಈಗಲೂ ಇದ್ದಾನೆ.

೪೫. ನನ್ನ ಮದುವೆಗೋಸ್ಕರ ಯಾವು ಯಾವುದನ್ನು ನನ್ನ ತಾಯಿಯು ಸಿದ್ಧಮಾಡಿದ್ದಳೋ ಅವೆಲ್ಲವನ್ನೂ ನನ್ನ ತಂದೆಯು ಕೋಪದಿಂದ ಸಮುದ್ರಕ್ಕೆ ಬಿಸುಟನು.

೪೬. ಅಲೆಗಳಿಂದ ಹೊಡೆದು ತರಲ್ಪಟ್ಟ ಆ ಪದಾರ್ಥಗಳು ಹೊರಗೆ ಬಂದು ಬಿದ್ದಿರುವುದು. ಈಗಲೂ ಕಾಣುತ್ತಿದೆ. ನೋಡು. ಈಗ ನಿನ್ನಿಂದ ನಾನು ಕೃತಾರ್ಥಳಾದೆನು. ನನ್ನನ್ನು ದಾಸಿಯನ್ನಾಗಿ ಮಾಡಿಕೋ.

೪೭-೪೮. ಅವಳ ಅಭಿಪ್ರಾಯವನ್ನು ರಾಮನು ತಿಳಿದುಕೊಂಡು ಎಲೈ ಕುಮಾರಿಕೆಯೇ! ಈ ಜನ್ಮದಲ್ಲಿ ನನಗೆ ಏಕಪತ್ನೀವ್ರತವು ನಿಯತವಾಗಿದೆ.

ಅಗ್ರೇ ಕೃಷ್ಣಾವತಾರೇ ತ್ವಂ ಭಜ ಮಾಂ ನಾತ್ರಸಂಶಯಃ ।
ತದ್ರಾಮವಚನಾದೇವ ಯಮೈಶ್ಚ ನಿಯಮೈರಪಿ ॥ ೪೮ ॥

ಯಾವದ್ರಾಮಃ ಸ್ಥಿತೋ ಭೂಮ್ಯಾಂ ತಾವತ್ ಧೃತ್ವಾ ಕಲೇಬರಂ ।
ತಪೋಬಲೇನ ದೇಹಾಂತೇ ಜಾಂಬವತ್ಯೋ ಜನಿಷ್ಯತಿ ॥ ೪೯ ॥

ಜಾಂಬವತೀತಿ ನಾಮ್ನಾ ಸಾ ಕೃಷ್ಣಪತ್ನೀ ಭವಿಷ್ಯತಿ ।
ರಾಮೋ ಯಯೌ ಸುಸೇಂದ್ರಂ ಚ ಪಯೋಷ್ಣೀಂ ಸಂವಿಗಾಹ್ಯ ಸಃ॥ ೫೦ ॥

ಆದ್ಯಾನಂತಂ ತತೋ ಗತ್ವಾ ತಾಮ್ರಪರ್ಣೀತಟೇ ಶುಭಂ ।
ವಿನಿದ್ರಿತಂ ಶೇಷಪೃಷ್ಠೇ ಲಕ್ಷ್ಮೀಗರುಡಸೇವಿತಂ ॥ ೫೧ ॥

ಜ್ಞಾತವ್ಯಾ ತಾಮ್ರಪರ್ಣೀ ಸಾ ತ್ವನ್ಯಾ ಪಶ್ಚಿಮವಾಹಿನೀ ।
ಅನಂತಶಯನಂ ಗತ್ವಾ ಪದ್ಮತೀರ್ಥೇ ವಿಗಾಹ್ಯ ಚ ॥ ೫೨ ॥

ಮುಂದೆ ಕೃಷ್ಣಾವತಾರದಲ್ಲಿ ನನ್ನನ್ನು ನೀನು ಮದುವೆಯಾಗುತ್ತೀಯೆ. ಸಂಶಯವಿಲ್ಲ ಎಂದನು.

೪೯–೫೦. ರಾಮನ ಆ ಮಾತಿನಂತೆ ನಿಯಮದಿಂದಲೂ ಇಂದ್ರಿಯ ನಿಗ್ರಹದಿಂದಲೂ ರಾಮನು ಭೂಮಿಯಲ್ಲಿರುವವರೆಗೂ ದೇಹವನ್ನು ಇಟ್ಟು ಕೊಂಡಿದ್ದು ಅನಂತರ ತಪೋಬಲದಿಂದ ಈ ದೇಹವನ್ನು ತ್ಯಜಿಸಿ ಜಾಂಬವಂತನ ಮಗಳಾಗಿ ಹುಟ್ಟಿ ಜಾಂಬವತಿಯೆಂಬ ಹೆಸರನ್ನು ಹೊಂದಿ ಕೃಷ್ಣನಿಗೆ ಪತ್ನಿಯಾಗುವಳು.

೫೧. ಅನಂತರ ರಾಮನು ಸುಸೇಂದ್ರನ ಬಳಿಗೆ ಹೋದನು. ಅವನನ್ನು ಸಮಾಧಾನಪಡಿಸಿ ಪಯೋಷ್ಣಿಯಲ್ಲಿ ಸ್ನಾನಮಾಡಿ ತಾಮ್ರಪರ್ಣಿಯ ದಡದಲ್ಲಿ ರುವ ಶೇಷನ ಮೈಮೇಲೆ ಮಲಗಿ ಲಕ್ಷ್ಮೀಗರುಡರಿಂದ ಸೇವಿತನಾದ ಆದ್ಯಾನಂತ ನನ್ನು ದರ್ಶನಮಾಡಿದನು.

೫೨. ಆ ತಾಮ್ರಪರ್ಣಿಯು ಅಲ್ಲಿ ಮತ್ತೊಂದು ಪಶ್ಚಿಮವಾಹಿನಿ ಎಂದು ತಿಳಿಯಬೇಕು. ಅನಂತಶಯನಕ್ಕೆ ಹೋಗಿ ಅಲ್ಲಿ ಪದ್ಮತೀರ್ಥದಲ್ಲಿ ಸ್ನಾನ ಮಾಡಿದನು.

ಶಂಖತೀರ್ಥೇ ಮತ್ಸ್ಯನದ್ಯಾಂ ವಿಗಾಹ್ಯ ಸೀತಯಾ ಪ್ರಭುಃ ।
ತತೋ ಗತ್ವಾ ವಿಮಾನೇನ ಧರ್ಮಾಧರ್ಮಸರೋವರೇ ॥ ೫೩ ॥

ಸ್ನಾತ್ವಾ ಜನಾರ್ದನಂ ಗತ್ವಾ ಪಶ್ಚಿಮೇ ಹ್ಯಬ್ಧಿರೋಧಸಿ ।
ದರ್ಶೇಥ ಪೌರ್ಣಿಮಾಯಾಂ ಚ ಗಂಗಾಧಾರಾಬ್ಧಿಸಂಗಮೇ ॥ ೫೪ ॥

ಸ್ನಾತ್ವಾ ಜನಾರ್ದನಂ ಪೂಜ್ಯ ನಾರೀರಾಜ್ಯಂ ವಿಲೋಕ್ಯ ಚ ।
ಅಗ್ರೇ ಶ್ರೀರಾಮಚಂದ್ರಸ್ತು ನ ಯಯೌ ಲೋಕಶಿಕ್ಷಯಾ ॥ ೫೫ ॥

ಪರಿವೃತ್ಯ ತತೋ ರಾಮೋ ಘೃತಮಾಲಾಂ ವಿಗಾಹ್ಯ ಚ ।
ಕೃತಮಾಲಾಂ ತತಃ ಸ್ನಾತ್ವಾ ಸಿಂಧುನದ್ಯಾಂ ವಿಗಾಹ್ಯ ಚ ॥ ೫೬ ॥

ಗತ್ವಾ ಗಜೇಂದ್ರಮೋಕ್ಷಂ ಚ ತಾಮ್ರಪರ್ಣೀ ತಟಸ್ಥಿತಂ ।
ತಾಮ್ರಪರ್ಣ್ಯುದ್ಗಮೇ ಸ್ನಾತ್ವಾ ತಥಾ ನೈರಾಳತೀರ್ಥಕಂ ॥ ೫೭ ॥

---

೫೩. ಮತ್ಸ್ಯನದಿಯಲ್ಲಿರುವ ಶಂಖತೀರ್ಥದಲ್ಲಿಯೂ ಸೀತೆಯೊಡನೆ ಆ ರಾಮನು ಸ್ನಾನಮಾಡಿದನು. ವಿಮಾನದಿಂದ ಮುಂದೆ ಹೊರಟು ಧರ್ಮಾಧರ್ಮ ಸರೋವರದಲ್ಲಿ ಸ್ನಾನಮಾಡಿದನು.

೫೪-೫೬. ಮುಂದೆ ಜನಾರ್ದನಕ್ಕೆ ಹೋದನು. ಅದು ಪಶ್ಚಿಮ ಸಮುದ್ರದ ದಡದಲ್ಲಿದೆ. ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಗಂಗಾಧಾರೆ ಸಾಗರ ಸಂಗಮದಲ್ಲಿ ಸ್ನಾನಮಾಡಿ ಜನಾರ್ದನನನ್ನು ಪೂಜಿಸಿ ಅಲ್ಲಿರುವ ನಾರೀರಾಜ್ಯವನ್ನು ನೋಡಿ ಲೋಕಶಿಕ್ಷೆಗೋಸ್ಕರ ಅದರೊಳಕ್ಕೆ ಹೋಗದೆ ಅದನ್ನು ಸುತ್ತಿಕೊಂಡು ಬಂದು ಘೃತಮಾಲೆಯಲ್ಲಿ ಸ್ನಾನಮಾಡಿದನು. ಅನಂತರ ಕೃತಮಾಲೆಯಲ್ಲಿ ಸ್ನಾನಮಾಡಿ ಸಿಂಧುನದಿಯಲ್ಲಿಯೂ ಸ್ನಾನಮಾಡಿದನು.

೫೭. ತಾಮ್ರಪರ್ಣೀನದಿಯ ತೀರದಲ್ಲಿರುವ ಗಜೇಂದ್ರಮೋಕ್ಷಕ್ಕೆ ಹೋಗಿ ತಾಮ್ರಪರ್ಣಿಯು ಹುಟ್ಟುವ ಜಾಗದಲ್ಲಿ ಸ್ನಾನಮಾಡಿ ನೈರಾಳತೀರ್ಥಕ್ಕೆ ಹೋದನು.

ಗತ್ವಾ ಚಂದ್ರಕುಮಾರಾಖ್ಯಂ ಗಿರಿಂ ಶ್ರೀ ರಘುನಂದನಃ ।
ತತೋ ಯಯೌ ವಿಮಾನೇನ ದೃಷ್ಟ್ವಾ ದಕ್ಷಿಣಕಾಶಿಕಾಂ ॥ ೫೮ ॥

ನತ್ವಾ ಕಾಶೀವಿಶ್ವನಾಥಂ ಚಂಪಕಾರಣ್ಯಮಾಯಯೌ ।
ಚಿತ್ರಗಂಗಾಜಲೇ ಸ್ನಾತ್ವಾ ನತ್ವಾ ಹರಿಹರೌ ಶುಭೌ ॥ ೫೯ ॥

ತತೋ ರಾಮೋ ವಿಮಾನೇನ ಮಧುಪುರ್ಯಾಂ ವಿವೇಶ ಸಃ ।
ವೇಗಾವತ್ಯಾ ಜಲೇ ಸ್ನಾತ್ವಾ ನತ್ವಾ ತಂ ಸೌಂದರೇಶ್ವರಂ ॥ ೬೦ ॥

ಮೀನಾಕ್ಷೀ ಮಂಬಿಕಾಂ ನತ್ವಾ ವೇಂಕಟಂ ದ್ರಾವಿಡೇ ಗಿರೌ ।
ಕಾವೇರೀಮಧ್ಯನಿಲಯಂ ಶ್ರೀರಂಗಶಯನಂ ಯಯೌ ॥ ೬೧ ॥

ಮಾತೃಭೂತೇಶ್ವರಂ ನತ್ವಾ ನತ್ವಾ ತಂ ಜಂಬುಕೇಶ್ವರಂ ।
ರಂಗನಾಥಂ ನಮಸ್ಕೃತ್ಯ ಹ್ಯವಿನಾಶೀಂ ತತೋ ಯಯೌ ॥ ೬೨ ॥

---

೫೮. ಚಂದ್ರಕುಮಾರವೆಂಬ ಪರ್ವತಕ್ಕೆ ಹೋಗಿ ಅನಂತರ ದಕ್ಷಿಣ ಕಾಶಿಯನ್ನು ನೋಡಿಕೊಂಡು ವಿಮಾನದಿಂದ ಹೊರಟನು.

೫೯. ಅಲ್ಲಿ ಕಾಶಿಯ ವಿಶ್ವನಾಥನನ್ನು ಸೇವಿಸಿ ಚಂಪಕಾರಣ್ಯಕ್ಕೆ ಬಂದನು ಚಿತ್ರಗಂಗೆಯ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ಹರಿಹರರನ್ನು ಸೇವಿಸಿದನು.

೬೦. ಅನಂತರ ರಾಮನು ವಿಮಾನದಲ್ಲಿ ಮಧುರೆಗೆ ಹೋದನು. ಅಲ್ಲಿ ವೇಗವತಿಯ ನೀರಿನಲ್ಲಿ ಸ್ನಾನಮಾಡಿ ಸುಂದರೇಶ್ವರನನ್ನು ದರ್ಶನಮಾಡಿದನು.

೬೧. ಅಲ್ಲಿದ್ದ ಮೀನಾಕ್ಷಿದೇವಿಯನ್ನು ಸೇವಿಸಿ ದ್ರವಿಡಗಿರಿಯಲ್ಲಿದ್ದ ವೆಂಕಟಮೂರ್ತಿಗೆ ನಮಸ್ಕರಿಸಿ ಕಾವೇರಿಯ ಮಧ್ಯದಲ್ಲಿರುವ ಶ್ರೀರಂಗಕ್ಕೆ ಹೋದನು.

೬೨. ಅಲ್ಲಿ ಮಾತೃಭೂತೇಶ್ವರನಿಗೆ ನಮಸ್ಕರಿಸಿ ಅನಂತರ ಜಂಬುಕೇಶ್ವರನಿಗೆ ನಮಸ್ಕರಿಸಿ ರಂಗನಾಥನಿಗೂ ನಮಸ್ಕರಿಸಿ ಅನಂತರ ಅವಿನಾಶಿಗೆ ಹೋದನು.

ಶ್ರೀರಂಗಪತ್ತನಂ ಗತ್ವಾ ಸ್ನಾತ್ವಾ ಹೈಮವತೀಜಲೇ ।
ಸಾಲಗ್ರಾಮಂ ನಮಸ್ಕೃತ್ಯ ರಾಮನಾಥಪುರಂ ಯಯೌ ॥ ೬೩ ॥

ಸ್ನಾತ್ವಾ ಕುಮಾರಿಧಾರಾಯಾಂ ಸುಬ್ರಹ್ಮಣ್ಯಂ ಪ್ರಪೂಜ್ಯ ಚ ।
ಉಡುಪ್ಯಾಖ್ಯಂ ತತಃ ಕೃಷ್ಣಂ ನತ್ವಾ ಶೃಂಗಾಶ್ರಮಂ ಯಯೌ ॥ ೬೪ ॥

ತುಂಗಾನದೀತಟೇ ಶೃಂಗಗಿರೌ ನತ್ವಾ ತು ಶಾರದಾಂ ।
ಕುಂಭಕಾಶೀಂ ತತೋ ಗತ್ವಾ ಗತ್ವಾ ಕೋಟೇಶ್ವರಂ ಶಿವಂ ॥ ೬೫ ॥

ನತ್ವಾ ಮೂಕಾಂಬಿಕಾಂ ದೇವೀಂ ನತ್ವಾ ಮುಂಡೇಶ್ವರಂ ಹರಂ ।
ಗುಣವಂತೇಶ್ವರಂ ನತ್ವಾ ನತ್ವಾ ಧಾರೇಶ್ವರಂ ತತಃ ॥ ೬೬ ॥

ಗೌರೀಶ್ವರಂ ನಮಸ್ಕೃತ್ಯ ನತ್ವಾ ಸರ್ಜೇಶ್ವರಂ ಶಿವಂ ।
ಗೋಕರ್ಣಂ ಚ ತತೋ ಗತ್ವಾ ತಂ ಪ್ರಣಮ್ಯ ಮಹಾಬಲಂ ॥ ೬೭ ॥

---

೬೩. ಅಲ್ಲಿಂದ ಶ್ರೀರಂಗಪಟ್ಟಣಕ್ಕೆ ಹೋಗಿ ರಂಗನಾಥನ ದರ್ಶನವನ್ನು ಮಾಡಿ ಅಲ್ಲಿಂದ ಹೊರಟು ಹೇಮಾವತಿಯಲ್ಲಿ ಸ್ನಾನಮಾಡಿ ಸಾಲಿಗ್ರಾಮದಲ್ಲಿರುವ ಸಾಲಿಗ್ರಾಮಕ್ಕೆ ನಮಸ್ಕಾರಮಾಡಿ ರಾಮನಾಥಪುರಕ್ಕೆ ಹೋದನು.

೬೪. ಅಲ್ಲಿ ಕುಮಾರಧಾರೆಯಲ್ಲಿ ಸ್ನಾನಮಾಡಿ ಮುಂದೆ ಹೊರಟು ಬ್ರಹ್ಮಣ್ಯದಲ್ಲಿ ಸುಬ್ರಹ್ಮಣ್ಯೇಶ್ವರನಿಗೆ ನಮಸ್ಕಾರಮಾಡಿ ಉಡುಪಿಯಲ್ಲಿ ಕೃಷ್ಣನಿಗೆ ನಮಸ್ಕರಿಸಿ ಶೃಂಗಾಶ್ರಮಕ್ಕೆ ಹೋದನು.

೬೫–೬೬. ತುಂಗಾನದಿಯ ದಡದಲ್ಲಿರುವ ಶೃಂಗೇರಿಗೆ ಬಂದು ಶಾರದೆಗೆ ನಮಸ್ಕರಿಸಿ ಕುಂಭಕಾಶಿಗೆ ಹೋಗಿ ಅನಂತರ ಕೋಟೇಶ್ವರಕ್ಕೆ ಹೋಗಿ ಶಿವನಿಗೆ ನಮಸ್ಕರಿಸಿ ಮೂಕಾಂಬೆಯ ದರ್ಶನವನ್ನು ಮಾಡಿ ಮುರಡೇಶ್ವರನಿಗೆ ನಮಸ್ಕರಿಸಿ ಗುಣವಂತೇಶ್ವರನಿಗೆ ಪೂಜಿಸಿ ಅನಂತರ ಧಾರೇಶ್ವರನಿಗೆ ನಮಸ್ಕರಿಸಿದನು.

೬೭–೬೮. ಗೌರೀಶ್ವರನಿಗೆ ನಮಸ್ಕರಿಸಿ ಸರ್ಜೇಶ್ವರನ ದರ್ಶನವನ್ನೂ ಮಾಡಿಕೊಂಡು ಗೋಕರ್ಣಕ್ಕೆ ಹೋಗಿ ಮಹಾಬಲೇಶ್ವರನಿಗೆ ನಮಸ್ಕರಿಸಿ

ಹರಿಹರೇಶ್ವರಂ ಗತ್ವಾ ಪಶ್ಯನ್ ತೀರ್ಥಾನ್ಯನೇಕಶಃ ।
ಜಾಮದಗ್ನ್ಯಂ ಮಹೇಂದ್ರಾದ್ರೌ ನತ್ವಾ ಭೀಮೇಶ್ವರಂ ಯಯೌ ॥ ೬೮ ॥

ಧೌಮಂ ಮಹಾಬಲಂ ನತ್ವಾ ಯಯೌ ಕೋಲಾಪುರಂ ತತಃ ।
ಕರವೀರಪುರಂ ಗತ್ವಾ ಕೃಷ್ಣಾವೇಣ್ಯೋಸ್ತು ಸಂಗಮೇ ॥ ೬೯ ॥

ಸ್ನಾತ್ವಾ ರಾಮೋ ವಿಮಾನೇನ ಗದಾಲಕ್ಷ್ಮೀಶ್ವರಂ ಯಯೌ ।
ಸ್ನಾತ್ವಾ ಘಟಪ್ರಭಾಯಾಂ ತು ಪಶ್ಯನ್ ಪುಣ್ಯಸ್ಥಲಾನಿ ಹಿ ॥ ೭೦ ॥

ಮಹಾದೇವಂ ನಮಸ್ಕೃತ್ಯ ನತ್ವಾ ಮಲ್ಲಾರಿವಿಶ್ವರಂ ।
ಕರಾನದೀತಟಸ್ಥಂ ತಂ ವಕ್ರತುಂಡಂ ವಿಲೋಕ್ಯ ಚ ॥ ೭೧ ॥

ನೀರಾನದೀಜಲೇ ಸ್ನಾತ್ವಾ ನಾರಸಿಂಹಂ ಪ್ರಪೂಜ್ಯ ಚ ।
ಪಾಂಡುರಂಗಂ ನಮಸ್ಕೃತ್ಯ ಚಂದ್ರಭಾಗಾಂ ವಿಗಾಹ್ಯ ಚ ॥ ೭೨ ॥

ಹರಿಹರಕ್ಕೆ ಹೋಗಿ ಹರಿಹರೇಶ್ವರನಿಗೆ ನಮಸ್ಕರಿಸಿದನು. ಮಹೇಂದ್ರಪರ್ವತದಲ್ಲಿ ಜಾಮದಗ್ನ್ಯೇಶ್ವರನಿಗೆ ನಮಸ್ಕರಿಸಿ ಭೀಮೇಶ್ವರಕ್ಕೆ ಹೋದನು.

೬೯–೭೦. ಧೌಮಮಹಾಬಲೇಶ್ವರನಿಗೆ ನಮಸ್ಕರಿಸಿ ಕೊಲ್ಲಾಪುರಕ್ಕೆ ಹೋದನು. ಕರವೀರಪುರಕ್ಕೆ ಹೋಗಿ ಕೃಷ್ಣಾವೇಣಿ ಸಂಗಮದಲ್ಲಿ ಸ್ನಾನಮಾಡಿ ಗದಾಲಕ್ಷ್ಮೀಶ್ವರಕ್ಕೆ ಹೋದನು. ಅಲ್ಲಿ ಘಟಪ್ರಭೆಯಲ್ಲಿ ಸ್ನಾನಮಾಡಿ ಪುಣ್ಯಸ್ಥಳಗಳನ್ನು ನೋಡುತ್ತ ಹೊರಟನು.

೭೧–೭೨. ಮುಂದೆ ಬಂದು ಮಹಾದೇವನಿಗೆ ನಮಸ್ಕರಿಸಿ ಮಲ್ಲಾರೀಶ್ವರನಿಗೆ ನಮಸ್ಕರಿಸಿ ಕರಾನದಿಯ ದಡದಲ್ಲಿರುವ ವಕ್ರತುಂಡನಿಗೆ ನಮಸ್ಕರಿಸಿ ನೀರಾನದಿಯಲ್ಲಿ ಸ್ನಾನಮಾಡಿ ನಾರಸಿಂಹನನ್ನು ಪೂಜಿಸಿ ಪಾಂಡುರಂಗನಿಗೆ ನಮಸ್ಕಾರಮಾಡಿ ಚಂದ್ರಭಾಗೆಗೆ ಹೋಗಿ ಅಲ್ಲಿ ಸ್ನಾನಮಾಡಿದನು.

ಯಯೌ ಭೀಮಾಸಂಗಮಂ ತು ಚಂದಲ್ಲಾಂ ಚ ತಥಾ ಯಯೌ ।
ತತೋ ಪ್ರೇಮಪುರಂ ಗತ್ವಾ ನತ್ವಾ ಮಾರ್ತಂಡಮೀಶ್ವರಂ ॥ ೭೩ ॥

ನಲದುರ್ಗಾಂ ವಿಲೋಕ್ಯಾಥ ನಾನಾ ಪಶ್ಯನ್ ಸ್ಥಲಾನಿ ಹಿ ।
ತುಲಜಾಪುರಸಂಸ್ಥಾಂ ತಾಂ ದೇವೀಂ ನತ್ವಾ ಯಯೌ ತತಃ ॥ ೭೪ ॥

ಮಾಣಿಕ್ಯಾಮಂಬಿಕಾಂ ದೃಷ್ಟ್ವಾ ಪಶ್ಯನ್ ತೀರ್ಥಾನಿ ರಾಘವಃ ।
ಯೋಗೀಶ್ವರೀಂ ವರಾಮಂಬಾಂ ದೃಷ್ಟ್ವಾ ಹ್ಯಂಬಾಪುರಸ್ಥಿತಾಂ ॥ ೭೫ ॥

ವೈಜನಾಥಂ ನಮಸ್ಕೃತ್ಯ ವಂಜರಾಸಂಗಮಂ ಯಯೌ ।
ನಾಗೇಶಂ ಚ ವಿಲೋಕ್ಯಾಥ ವಿಮಾನೇನ ಸ ರಾಘವಃ ॥ ೭೬ ॥

ಸ್ನಾತ್ವಾ ಪೂರ್ಣಾಸಂಗಮೇ ತು ಗೋದಾಯಾ ಉತ್ತರೇ ತಟೇ ।
ಸ್ವನಾಮ್ನಾಥ ಪುರೀಂ ಕೃತ್ವಾ ಮುದ್ಗಲಾಶ್ರಮಮಾಯಯೌ ॥ ೭೭ ॥

೭೩–೭೪. ಮುಂದೆ ಭೀಮಾಸಂಗಮಕ್ಕೆ ಹೋಗಿ ಚಂದಲ್ಲಿಗೆ ಹೋದನು. ಅನಂತರ ಪ್ರೇಮಪುರಿಗೆ ಹೋಗಿ ಅಲ್ಲಿ ಮಾರ್ತಂಡೇಶ್ವರನಿಗೆ ನಮಸ್ಕರಿಸಿ ನಳದುರ್ಗೆಯ ದರ್ಶನವನ್ನು ಮಾಡಿ ಮುಂದೆ ನಾನಾಸ್ಥಳಗಳನ್ನು ನೋಡುತ್ತ ತುಲಜೆಗೆ ಹೋಗಿ ಅಲ್ಲಿರುವ ತುಲಜಾ ದೇವಿಯನ್ನು ನಮಸ್ಕರಿಸಿದನು.

೭೫–೭೬. ಮಾಣಿಕಾಂಬೆಯನ್ನು ಪೂಜಿಸಿ ಅಲ್ಲಿರುವ ತೀರ್ಥಗಳನ್ನು ಸೇವಿಸುತ್ತಾ ಅಂಬಾಪುರದಲ್ಲಿರುವ ಯೋಗೀಶ್ವರಿಯಾದ ವರಾಂಬೆಯನ್ನು ಪೂಜಿಸಿ ವೈಜನಾಥನನ್ನು ನಮಸ್ಕರಿಸಿ ವಂಜರಾಸಂಗಮಕ್ಕೆ ಹೋದನು. ಅಲ್ಲಿ ನಾಗೇಶನಿಗೆ ನಮಸ್ಕರಿಸಿದನು ಅನಂತರ ವಿಮಾನದಲ್ಲಿ ಹೊರಟನು.

೭೭. ಪೂರ್ಣಾಸಂಗಮದಲ್ಲಿ ಸ್ನಾನಮಾಡಿ ಗೋದೆಯ ಉತ್ತರದಡದಲ್ಲಿ ತನ್ನ ಹೆಸರಿನ ಊರೊಂದನ್ನು ನಿರ್ಮಿಸಿ ಮುದ್ಗಲಾಶ್ರಮಕ್ಕೆ ಹೋದನು.

ಬಾಣತೀರ್ಥೇ ತತಃ ಸ್ನಾತ್ವಾ ಸಿಂಧುಫೇನಾಸುಸಂಗಮೇ ।
ಗೋದಾನಾಭಾವಬ್ಜಕೇಥ ಸ್ನಾತ್ವಾ ನತ್ವಾ ತ್ರಿವಿಕ್ರಮಂ ॥ ೭೮ ॥

ಕೃತ್ವಾ ಪರಾಂ ಸ್ವನಾಮ್ನಾ ತು ಪುರೀಂ ಗೋದಾವರೀತಟೇ ।
ಅಂಬಿಕಾಂ ತು ನಮಸ್ಕೃತ್ಯ ಚಂಡಿಕಾಂ ಪರಿಪೂಜ್ಯ ಚ ॥ ೭೯ ॥

ಆತ್ಮತೀರ್ಥೇ ತತಃ ಸ್ನಾತ್ವಾ ನತ್ವಾ ವಿಜ್ಞಾನ ಮೀಶ್ವರಂ ।
ಮಹಾಲಕ್ಷ್ಮೀಂ ವಿಲೋಕ್ಯಾಥ ಬಡಬಾಸಂಗಮಂ ಯಯೌ ॥ ೮೦ ॥

ಪ್ರತಿಷ್ಠಾನಂ ವಿಲೋಕ್ಯಾಥ ಸ್ನಾತ್ವಾ ವೃದ್ಧೈಲಸಂಗಮೇ ।
ಶಿವಾನಂದಾಸಂಗಮೇಥ ನೃಸಿಂಹಂ ಪರಿಪೂಜ್ಯ ಸಃ ॥ ೮೧ ॥

ಸ್ವೀಯನಾಮ್ನಾ ಖ್ಯಾತತೀರ್ಥಂ ಪ್ರವರಾಸಂಗಮಂ ಯಯೌ ।
ಸಿದ್ಧೇಶ್ವರಂ ನಮಸ್ಕೃತ್ಯ ನಿವಾಸಾಖ್ಯಾಂ ಪುರಂ ಯಯೌ ॥ ೮೨ ॥

೭೮-೭೯. ಅಲ್ಲಿರುವ ಮುದ್ಗಲತೀರ್ಥದಲ್ಲಿ ಸ್ನಾನಮಾಡಿ ಮುಂದೆ ಸಿಂಧುಫೇನೆಯ ಸಂಗಮದಲ್ಲಿರುವ ಬಾಣತೀರ್ಥದಲ್ಲಿ ಸ್ನಾನಮಾಡಿ ಗೋದಾ ನಾಭಿಯಲ್ಲಿರುವ ಅಬ್ಜಕದಲ್ಲಿ ಸ್ನಾನಮಾಡಿ ತ್ರಿವಿಕ್ರಮಸ್ವಾಮಿಗೆ ನಮಸ್ಕರಿಸಿ ಗೋದಾವರಿಯ ದಡದಲ್ಲಿ ತನ್ನ ಹೆಸರಿನ ಊರೊಂದನ್ನು ನಿರ್ಮಿಸಿ ಅಂಬಿಕೆಗೆ ನಮಸ್ಕರಿಸಿ ಚಂಡಿಕೆಯನ್ನು ಪೂಜಿಸಿದನು.

೮೦. ಆತ್ಮತೀರ್ಥದಲ್ಲಿ ಸ್ನಾನಮಾಡಿ ವಿಜ್ಞಾನೇಶ್ವರನಿಗೆ ನಮಸ್ಕರಿಸಿ ಮಹಾಲಕ್ಷ್ಮಿಯ ದರ್ಶನವನ್ನು ಮಾಡಿ ಬಡಬೆಯ ಸಂಗಮಕ್ಕೆ ಹೋದನು.

೮೧. ಪ್ರತಿಷ್ಠಾನವನ್ನು ನೋಡಿ ವೃದ್ಧೇಲಾಸಂಗಮದಲ್ಲಿ ಸ್ನಾನಮಾಡಿ ಮುಂದೆ ಹೊರಟು ಶಿವನಂದಾಸಂಗಮದಲ್ಲಿ ನರಸಿಂಹನನ್ನು ಪೂಜಿಸಿದನು.

೮೨. ಮುಂದೆ ಶ್ರೀರಾಮತೀರ್ಥವಿರುವ ಪ್ರವರಾಸಂಗಮಕ್ಕೆ ಬಂದನು. ಅಲ್ಲಿ ಸಿದ್ಧೇಶ್ವರನಿಗೆ ನಮಸ್ಕರಿಸಿ ನಿವಾಸಪುರಕ್ಕೆ ಹೋದನು.

ನೂಪುರಾಖ್ಯಂ ಪುರಂ ಗತ್ವಾ ಪಶ್ಯನ್ನಾನಾಸ್ಥಲಾನಿ ಸಃ ।
ಯಯೌ ಗೋದಾತಟೇನೈವ ಪುಣ್ಯಸ್ತಂಭಂ ರಘೂದ್ವಹಃ ॥ ೮೩ ॥

ಗತ್ವಾ ಕದ್ರೂಸಂಗಮೇ ತು ವಿನತಾಸಂಗಮಂ ಯಯೌ ।
ಜನಸ್ಥಾನಂ ತತೋ ಗತ್ವಾ ಯಯೌ ತ್ರ್ಯಂಬಕವಿಶ್ವರಂ ॥ ೮೪ ॥

ದಾಕ್ಷಿಣಾತ್ಯೈರ್ನೃಪತಿಭಿರ್ಮಾನಿತಃ ಪೂಜಿತೋಪಿ ಚ ।
ಗೃಹೀತ್ವಾ ಕರಭಾರಂ ಸ್ವಂ ತೇಭ್ಯಸ್ತೈಸ್ಸಹಿತೋ ಯಯೌ ॥ ೮೫ ॥

ಏವಂ ದಕ್ಷಿಣಯಾತ್ರೇಯಂ ಯಾ ಕೃತಾ ರಾಘವೇಣ ವೈ ।
ಸಾ ಮಯಾ ವಿಸ್ತರೇಣೈವ ಕಥಿತಾ ತ್ರ್ಯಂಬಕಾವಧಿ ॥ ೮೬ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ತೀರ್ಥವರ್ಣನಂ ನಾಮ ಸಪ್ತಮಸ್ಸರ್ಗಸ್ಸಮಾಪ್ತಃ

೮೩–೮೪. ನೂಪುರಪುರಕ್ಕೆ ಹೋಗಿ ಅನೇಕ ಸ್ಥಳಗಳನ್ನು ನೋಡುತ್ತ ಗೋದಾವರಿನದಿಯ ದಡದಲ್ಲಿಯೇ ಪುಣ್ಯಸ್ತಂಭಕ್ಕೆ ಹೋಗಿ ಅನಂತರ ಕದ್ರೂಸಂಗಮಕ್ಕೆ ಹೋಗಿ ಮುಂದೆ ವಿನತಾಸಂಗಮಕ್ಕೆ ಹೋದನು. ಜನಸ್ಥಾನಕ್ಕೆ ಹೋಗಿ ತ್ರ್ಯಂಬಕೇಶ್ವರನ ದರ್ಶನವನ್ನು ಮಾಡಿದನು.

೮೫. ಅಲ್ಲಿ ದಾಕ್ಷಿಣ್ಯಾತ್ಯರಾದ ರಾಜರಿಂದ ಗೌರವಿತನಾಗಿ ಅವರ ಪೂಜೆಯನ್ನು ಸ್ವೀಕರಿಸಿ ಅವರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಅಲ್ಲಿಂದ ಅವರೊಡನೆ ಹೊರಟನು.

೮೬. ರಾಘವನು ದಕ್ಷಿಣದೇಶದ ಯಾತ್ರೆಯನ್ನು ಮಾಡಿದನಷ್ಟೆ! ಅವೆಲ್ಲವನ್ನೂ ತ್ರ್ಯಂಬಕೇಶ್ವರನವರೆಗೂ ವಿಸ್ತರಿಸಿ ಹೇಳಿದ್ದೇನೆ.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ತೀರ್ಥವರ್ಣನ ಎಂಬ ಏಳನೆಯ ಸರ್ಗವು ಸಮಾಪ್ತವು.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

॥ ಏಳನೆಯ ಸರ್ಗದ ಸಾರಾಂಶವು ॥

ಶ್ರೀರಾಮನು ದಕ್ಷಿಣದೇಶದ ಯಾತ್ರೆಗೆ ಹೊರಟು ಮತ್ಸ್ಯತೀರ್ಥಕ್ಕೆ ಬಂದನು. ಅಲ್ಲಿ ಸ್ನಾನಮಾಡಿ ಕೃಷ್ಣಾನದಿಯನ್ನು ಸೇವಿಸಿ ಶ್ರೀಶೈಲಕ್ಕೆ ಬಂದನು ಅಲ್ಲಿಂದ ಮುಂದೆ ಹೊರಟು ಪಾನಕನರಸಿಂಹಸ್ವಾಮಿಯ ದರ್ಶನವನ್ನು ಮಾಡಿ ತುಂಗಭದ್ರಾನದಿಗೆ ಬಂದು ಅಲ್ಲಿ ಸ್ನಾನಮಾಡಿದನು. ಮುಂದೆ ಪಂಪಾ ಸರೋವರದಲ್ಲಿ ಸ್ನಾನಮಾಡಿ ಕಿಷ್ಕಿಂಧೆಗೆ ಹೋಗಿ ಅಲ್ಲಿ ಸುಗ್ರೀವಾದಿಗಳಿಂದ ಪೂಜಿತನಾಗಿ ಅವರನ್ನು ಕರೆದುಕೊಂಡು ಹೊರಟು ತಿರುಪತಿಗೆ ಬಂದು ಗೋವಿಂದ ರಾಜನನ್ನು ಸೇವಿಸಿದನು. ಅನಂತರ ವೆಂಕಟೇಶ್ವರಸ್ವಾಮಿಯನ್ನು ಸೇವಿಸಿ ಕಾಳಹಸ್ತಿಗೆ ಹೋದನು. ಕಂಚಿಯಲ್ಲಿ ಕಾಮಾಕ್ಷಿಯನ್ನು ಪೂಜಿಸಿ ಅರುಣಾ ಚಲಕ್ಕೂ ವೃದ್ಧಾಚಲಕ್ಕೂ ಹೋದನು. ಶ್ವೇತಾರಣ್ಯ, ವೇದಾರಣ್ಯಗಳನ್ನು ಸೇವಿಸಿ ಕುಂಭಕೋಣಕ್ಕೆ ಹೋದನು. ನವಪಾಷಾಣಕ್ಕೆ ಹೋಗಿ ವೇತಾಳ ತೀರ್ಥದಲ್ಲಿ ಸ್ನಾನಮಾಡಿ ಧನುಷ್ಕೋಟಿಗೆ ಬಂದನು. ಅಲ್ಲಿಂದ ಬಂದು ರಾಮೇಶ್ವರ ನನ್ನು ಪೂಜಿಸಿ ಅಲ್ಲಿ ಆ ಗಂಗೆಯಿಂದ ಸ್ವಾಮಿಗೆ ಅಭಿಷೇಕವನ್ನು ಮಾಡಿಸಿ ಆ ಪದಾರ್ಥಗಳನ್ನು ಸಮುದ್ರದಲ್ಲಿ ಬಿಸುಟನು.

ಅನಂತರ ಸೇತುಮಾಧವನನ್ನು ಪೂಜಿಸಿ ಅಲ್ಲಿ ಒಂದು ತಿಂಗಳಕಾಲವಿದ್ದನು. ದರ್ಭಶಯನಕ್ಕೆ ಹೋಗಿ ಅಲ್ಲಿ ಸ್ವಾಮಿಯನ್ನು ಸೇವಿಸಿದನು. ಮುಂದೆ ಹೊರಟು ಕನ್ಯಾಕುಮಾರಿಗೆ ಮುಂದಿನ ಕೃಷ್ಣಜನ್ಮದಲ್ಲಿ ನನ್ನನ್ನು ಮದುವೆಯಾಗು ಎಂದು ವರವನ್ನು ಕೊಟ್ಟು ಸುಸೇಂದ್ರನನ್ನೂ ಸಂತೈಸಿದನು.

ಅಲ್ಲಿಂದ ಅನೇಕ ತೀರ್ಥಗಳನ್ನು ಸೇವಿಸುತ್ತ ಅನಂತಶಯನಕ್ಕೆ ಬಂದನು. ಕ್ರಮೇಣ ಮಧುರೆಗೆ ಬಂದು ಶ್ರೀರಂಗಕ್ಕೂ ಬಂದನು ಮುಂದೆ ಹೊರಟು ಮಧ್ಯಶ್ರೀರಂಗಕ್ಕೂ ಬಂದನು. ಅಲ್ಲಿ ಸ್ವಾಮಿಯನ್ನು ಸೇವಿಸಿಶ್ರೀರಂಗಪಟ್ಟಣಕ್ಕೂ ಬಂದನು. ಮುಂದೆ ಹೊರಟು ಸಾಲಿಗ್ರಾಮ ರಾಮನಾಥಪುರಗಳಿಗೆ ಭೇಟಿಯನ್ನು ಕೊಟ್ಟು ಅಲ್ಲಿಂದ ಸುಬ್ರಹ್ಮಣ್ಯ ಉಡುಪಿಗಳಿಗೆ ಹೋದನು. ಮುಂದೆ ಮಹೇಂದ್ರಪರ್ವತದಲ್ಲಿರುವ ಪರಶುರಾಮನನ್ನು ಸೇವಿಸಿದನು.

ಕೃಷ್ಣಾವೇಣಿಗಳ ಸಂಗಮದಲ್ಲಿ ಸ್ನಾನಮಾಡಿ ಅಂತೆಯೇ ಹೊರಟು ಕ್ಷೇತ್ರಗಳನ್ನು ಸೇವಿಸುತ್ತ ತುಲಜಾಪುರಕ್ಕೆ ಹೋದನು. ಗೋದಾವರಿಯ ಉತ್ತರದಡದಲ್ಲಿ ರಾಮಪುರವೆಂಬ ಪಟ್ಟಣವನ್ನು ಕಟ್ಟಿಸಿದನು. ಅಲ್ಲಿಂದ ಹೊರಟು ಜನಸ್ಥಾನಕ್ಕೆ ಹೋಗಿ ಅಲ್ಲಿ ತ್ರ್ಯಂಬಕೇಶನನ್ನು ಪೂಜಿಸಿದನು. ಅಲ್ಲಿ ದಕ್ಷಿಣದೇಶದ ರಾಜರು ಬಂದು ರಾಮನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಗೌರವಿಸಿದರು. ಅಲ್ಲಿ ಅವರಿಂದ ಗೌರವವನ್ನು ಹೊಂದಿ ಅವರೊಡನೆ ಕೂಡಿಕೊಂಡು ಹೊರಟನು.

ಇಲ್ಲಿಗೆ ಶ್ರೀರಾಮನ ದಕ್ಷಿಣದೇಶದ ಯಾತ್ರೆಯು ಮುಗಿಯಿತು.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ಅಷ್ಟಮಸ್ಸರ್ಗಃ ॥

॥ ವಿಷ್ಣುದಾಸ ಉವಾಚ ॥

ಗುರೋ ಜಾತೋಽಸ್ತಿ ಸಂದೇಹೋ ಮಮ ಚಿತ್ತೇ ವದಾಮ್ಯಹಂ ।
ಸ ತ್ವಯಾ ಛಿಂದ್ಯತಾಂ ಸ್ವಾಮಿನ್ ಸಾಧವೋ ಹಿ ಕೃಪಾಳವಃ ॥ ೧ ॥

ಯಾನಾರೂಢಾ ನ ಕರ್ತವ್ಯಾ ಯಾತ್ರಾ ಚೇತಿ ಶ್ರುತಂ ಮಯಾ ।
ಕಥಂ ಯಾನೇನ ರಾಮೇಣ ಕೃತಾ ಯಾತ್ರಾ ತ್ವಯೇರಿತಾ ॥ ೨ ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ

ಎಂಟನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು–ಎಲೈ ಗುರುವೆ ನನ್ನ ಮನಸ್ಸಿನಲ್ಲಿ ಒಂದು ಸಂದೇಹವುಂಟಾಯಿತು. ಅದನ್ನು ಕೇಳುತ್ತೇನೆ. ಆ ಸಂದೇಹವನ್ನು ನಾಶ ಮಾಡು. ಸತ್ಪುರುಷರು ಕೃಪಾಳುಗಳಲ್ಲವೇ !

೨. ಯಾತ್ರೆಗಳನ್ನು ಯಾನದಮೇಲೆ ಹತ್ತಿಹೋಗಿ ಮಾಡಕೂಡದೆಂದು ನಾನು ಕೇಳಿದ್ದೇನೆ. ರಾಮನು ಯಾನದಮೇಲೆ ಕುಳಿತು ಯಾತ್ರೆಯನ್ನು ಮಾಡಿದನೆಂದು ನೀನು ಹೇಳುತ್ತೀಯೆ. ಇದು ಹೇಗೆ ? ಸರಿಯೆ ?

ಇತಿ ಜಾತೋಽಸ್ತಿ ಸಂದೇಹೋ ಮಮ ತಂ ತ್ವಂ ನಿವಾರಯ ।
ಇತಿ ಶಿಷ್ಯವಚಶ್ಶ್ರುತ್ವಾ ಗುರುಃ ಪ್ರಾಹಾಥ ತಂ ಪುನಃ ॥ ೩ ॥

॥ ರಾಮದಾಸ ಉವಾಚ ॥

ಪದಾ ಯಾತ್ರಾ ನ ಕರ್ತವ್ಯಾ ಛತ್ರಚಾಮರಧಾರಿಣಾ ।
ರಾಜ್ಞಾ ದ್ವೀಪಾಧಿಪತ್ಯೇನ ಕಾರ್ಯಾ ಮಂಡಲಿಕೇನ ತು ॥ ೪ ॥

ಪೃಥಿವೀಶಸ್ಯ ದೇವಸ್ಯ ಲಗ್ನೋದ್ಯುಕ್ತವರಸ್ಯ ಚ ।
ತಥಾ ಮಠಾಧಿಪಸ್ಯಾಪಿ ಗಮನಂ ನ ಪದಾ ಸ್ಮೃತಂ ॥ ೫ ॥

ತಸ್ಮಾನ್ನಾತ್ರ ತ್ವಯಾ ಕಾರ್ಯಃ ಸಂದೇಹೋ ರಾಘವಂ ಪ್ರತಿ ।
ಆಜ್ಞಯಾ ರಾಮಚಂದ್ರಸ್ಯ ಕೃಪಯಾಪಿ ಚ ತೈರ್ಜನೈಃ ॥ ೬ ॥

---

೩. ಈ ರೀತಿಯಾಗಿ ನನಗೆ ಸಂದೇಹವುಂಟಾಗಿದೆ. ಅದನ್ನು ನೀನು ನಿವಾರಣೆಮಾಡು. ಎನ್ನಲು ಈ ರೀತಿಯಾಗಿ ಶಿಷ್ಯನು ಹೇಳಿದುದನ್ನು ಕೇಳಿ ಶಿಷ್ಯನನ್ನು ಕುರಿತು ಗುರುವು ಹೇಳಿದನು.

೪. ರಾಮದಾಸನು ಹೇಳಿದನು-ಛತ್ರಚಾಮರಗಳನ್ನು ಧರಿಸಿಕೊಂಡು ದ್ವೀಪಾಧಿಪತಿ (ಚಕ್ರವರ್ತಿ) ಯಾದವನು ನಡೆಯುತ್ತ ಯಾತ್ರೆಗಳನ್ನು ಮಾಡಬಾರದು. ಅಧೀನದಲ್ಲಿರುವ ರಾಜನೂ ಕಾಲಿನಿಂದ ನಡೆದು ಯಾತ್ರೆಯನ್ನು ಮಾಡಬಾರದು.

೫. ಅಲ್ಲದೆ ಪೃಥಿವೀಶನು ದೇವರು ಲಗ್ನಕ್ಕೆ ಸಿದ್ಧನಾಗಿರುವವನು. ಮಠಾಧಿಪತಿ ಇವರು ಕಾಲಿನಿಂದ ತೀರ್ಥಯಾತ್ರೆಯನ್ನು ಮಾಡಬಾರದು.

೬-೭. ಎಲೈ ಶಿಷ್ಯನೆ! ಆದ್ದರಿಂದ ರಾಮನ ವಿಷಯದಲ್ಲಿ ನೀನು ಸಂದೇಹವನ್ನು ಪಡಬೇಕಾದುದೇ ಇಲ್ಲ. ರಾಮಚಂದ್ರನ ಆಜ್ಞೆಯಿಂದಲೂ ಕೃಪೆಯಿಂದಲೂ ಆ ಜನಗಳು ರಥದಲ್ಲಿ ಕುಳಿತುಕೊಂಡರು. ಸ್ವಾಮಿಯ

ಅಧಿಷ್ಠಿತಂ ಪುಷ್ಪಕಂ ತು ಕೋ ವೇದೇಶ್ವರಚೇಷ್ಟಿತಂ ।
ಇದಾನೀಂ ರಾಮಚಂದ್ರಸ್ಯ ಶ್ರುಣು ತಾಂ ಪ್ರಾಕ್ತನೀಂ ಕಥಾಂ ॥ ೭ ॥

ತ್ರ್ಯಂಬಕಾದ್ರಾಮಚಂದ್ರಸ್ಯ ಪುರಾ ಯಾತುಂ ವಿನಿರ್ಗತಃ ।
ಸೀತಯಾ ಪರ್ವತೇ ತತ್ರ ಗತ್ವಾ ಸ್ಥಿತ್ವಾ ದಿನತ್ರಯಂ ॥ ೮ ॥

ಸಪ್ತಶೃಂಗಗಿರೌ ಗತ್ವಾ ಗತ್ವಾಗಸ್ತೇಸ್ತು ಚಾಶ್ರಮಂ ।
ಸುತೀಕ್ಷ್ಣಸ್ಯಾಶ್ರಮಂ ಗತ್ವಾ ಯಯೌ ಚೈಲಪುರಂ ತತಃ ॥ ೯ ॥

ಘೃಷ್ಣೇಶ್ವರಂ ನಮಸ್ಕೃತ್ಯ ಶಿವತೀರ್ಥೇ ವಿಗಾಹ್ಯ ಚ ।
ದೃಷ್ಟ್ವಾ ರಮ್ಯಂ ದೇವಗಿರಿಂ ವಿರಜಾಕ್ಷೇತ್ರಮಾಯಯೌ ॥ ೧೦ ॥

ಚರ್ಯೆಯನ್ನು ಯಾರು ತಾನೇ ಬಲ್ಲರು ? ಈಗ ರಾಮಚಂದ್ರನ ಹಿಂದಿನ ಕಥೆಯನ್ನು ಹೇಳುತ್ತೇನೆ. ಕೇಳು.

೮. ತ್ರ್ಯಂಬಕಕ್ಷೇತ್ರದಿಂದ ರಾಮನು ಪೂರ್ವಕ್ಕೆ ಹೊರಡಲು ಸಿದ್ಧನಾದನು. ಪೂರ್ವದಲ್ಲಿ ಸೀತೆಯೂ ರಾಮನೂ ಆ ಪರ್ವತದಲ್ಲಿ ಅನೇಕ ದಿನಗಳು ಸುಖದಿಂದ ನಿದ್ರಿಸಿದ್ದರು.

೯. ಈಗ ಸೀತೆಯು ಆ ಪರ್ವತದಲ್ಲಿ ಮೂರುದಿನಗಳು ಇದ್ದಳು. ಅನಂತರ ಸಪ್ತಶೃಂಗಗಿರಿಗೆ ಹೋಗಿ ಅಲ್ಲಿಂದ ಮುಂದೆ ಅಗಸ್ತ್ಯಾಶ್ರಮಕ್ಕೆ ಹೋದರು. ಅಲ್ಲಿಂದ ಮುಂದಕ್ಕೆ ಸುತೀಕ್ಷ್ಣನ ಆಶ್ರಮಕ್ಕೆ ಹೋಗಿ ಅಲ್ಲಿಂದ ಮುಂದೆ ಚೈಲಪುರಿಗೆ ಹೋದರು.

೧೦. ಅಲ್ಲಿ ಘೃಷ್ಣೇಶ್ವರನನ್ನು ನಮಸ್ಕರಿಸಿ ಶಿವತೀರ್ಥದಲ್ಲಿ ಸ್ನಾನಮಾಡಿ ದೇವಗಿರಿಯ ದರ್ಶನವನ್ನು ಮಾಡಿ ವಿರಜಾಕ್ಷೇತ್ರಕ್ಕೆ ಹೋದರು.

ಮಾತಾಪುರಸ್ಥಾಂ ದೇವೀಂ ತಾಂ ನತ್ವಾ ಪಶ್ಯನ್ ಸ್ಥಲಾನಿ ಸಃ ।
ದೇವವಾಟೀ ನಾರಸಿಂಹಂ ನತ್ವಾ ರಾಮಶ್ಚ ಸೀತಯಾ ॥ ೧೧ ॥

ಚಕಾರ ವಿಧಿವತ್ ಸ್ನಾನಂ ಪಯೋಷ್ಣ್ಯಾಂ ಬಂಧುಭಿರ್ಜನೈಃ ।
ಸ್ನಾತ್ವಾ ತಾಪ್ಯುದ್ಗಮೇ ರಾಮಃ ಸ್ವನಾಮ್ನಾ ಪರ್ವತೋತ್ತಮಂ ॥ ೧೨ ॥

ಗತ್ವಾ ಸ್ನಾತ್ವಾಥ ರೇವಾಯಾಮೋಂಕಾರಂ ಪರಿಪೂಜ್ಯ ಚ ।
ಪಶ್ಚಿಮಾಭಿಮುಖಃ ಪಶ್ಯನ್ನಾನಾ ಪುಣ್ಯಸ್ಥಲಾನಿ ಹಿ ॥ ೧೩ ॥

ತಾಪ್ಯಾಶ್ಚ ಸಂಗಮೇ ಸ್ನಾತ್ವಾ ನರ್ಮದಾಯಾಶ್ಚ ಸಂಗಮೇ ।
ಮಹೀನದೀಜಲೇ ಸ್ನಾತ್ವಾ ಪ್ರಭಾಸಂ ಚ ತತೋ ಯಯೌ ॥ ೧೪ ॥

ಪಂಚಸರಸ್ವತೀನಾಂ ಚ ಸಂಗಮೇಷು ವಿಗಾಹ್ಯ ಚ ।
ಸೌರಾಷ್ಟ್ರಸ್ಥಂ ಸೋಮನಾಥಂ ದೃಷ್ಟ್ವಾ ಸಾಭ್ರಮತೀಂ ನದೀಂ ॥ ೧೫ ॥

---

೧೧. ತಾಯೂರಿನಲ್ಲಿರುವ ದೇವಿಯನ್ನು ನಮಸ್ಕರಿಸಿ ಇನ್ನೂ ಅನೇಕ ಸ್ಥಳಗಳನ್ನು ನೋಡಿಕೊಂಡು ರಾಮನೂ ಸೀತೆಯೂ ಅನಂತರ ದೇವಿವಾಟದಲ್ಲಿರುವ ನರಸಿಂಹನನ್ನು ಪೂಜಿಸಿದರು.

೧೨-೧೩. ಅಲ್ಲಿಂದ ಮುಂದೆ ಪಯೋಷ್ಣೀನದಿಗೆ ಹೋಗಿ ಎಲ್ಲರೊಡನೆಯೂ ಕ್ರಮವಾಗಿ ಸ್ನಾನವನ್ನು ಮಾಡಿದನು. ಅನಂತರ ತಾಪಿನದಿಯ ಮೂಲದಲ್ಲಿ ಸ್ನಾನಮಾಡಿ ಅಲ್ಲಿ ತನ್ನ ಹೆಸರಿನಿಂದ ರಾಮಗಿರಿಯೆಂದು ಹೆಸರಿಟ್ಟು ಒಂದು ಪರ್ವತವನ್ನು ಏರ್ಪಡಿಸಿ ರೇವಾನದಿಯಲ್ಲಿ ಸ್ನಾನಮಾಡಿ ಓಂಕಾರೇಶ್ವರನನ್ನು ಪೂಜಿಸಿದನು ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ನಾನಾ ಪುಣ್ಯಸ್ಥಳಗಳನ್ನು ನೋಡಿದನು.

೧೪. ತಾಪೀನದಿಯ ಸಂಗಮದಲ್ಲಿ ಸ್ನಾನಮಾಡಿ ನರ್ಮದೆಯ ಸಂಗಮದಲ್ಲಿ ಸ್ನಾನಮಾಡಿ ಮಾಹಿನದಿಯ ನೀರಿನಲ್ಲಿ ಸ್ನಾನಮಾಡಿ ಮುಂದೆ ಪ್ರಭಾಸಕ್ಕೆ ಹೋದನು.

೧೫-೧೬. ಪಂಚಸರಸ್ವತಿಗಳ ಸಂಗಮದಲ್ಲಿ ಸ್ನಾನಮಾಡಿ ಸೌರಾಷ್ಟ್ರದಲ್ಲಿರುವ ಸೋಮನಾಥನ ದರ್ಶನವನ್ನು ಮಾಡಿ ಸಾಭ್ರಮತಿಯಲ್ಲಿ

ಪಶ್ಯನ್ಸ್ನಾನಾಸ್ಥಲಾನ್ಯೇವ ಶಂಖೋದ್ಧಾರಂ ಯಯೌ ತತಃ |
ಗೋಮತ್ಯಾಂ ವಿಧಿವತ್ ಸ್ನಾತ್ವಾ ದ್ವಾರಾವತ್ಯಾಂ ವಿವೇಶ ಸಃ ‖ ೧೬ ‖

ಅನಾದಿಸಿದ್ಧಾಂ ಸಪ್ತಸು ಪುರೀಷು ಪ್ರಥಿತಾಂ ಶುಭಾಂ |
ದೃಷ್ಟ್ವಾ ಕೃತ್ವಾ ತೀರ್ಥವಿಧೀಃ ದತ್ವಾ ದಾನಸ್ಯನೇಕಶಃ ‖ ೧೭ ‖

ಪಶ್ಯನ್ ತೀರ್ಥಾನಿ ಸರ್ವಾಣಿ ಪುಣ್ಯಾನಿ ರಘುನಂದನಃ |
ಪಾಶ್ಚಿಮಾತ್ಯೈರ್ನೃಪತಿಭಿರ್ಮಾನಿತಃ ಪೂಜಿತೋಽಪಿ ಚ ‖ ೧೮ ‖

ಗೃಹೀತ್ವಾ ಕರಭಾರಂ ಸ್ವಂ ತೇಭ್ಯಸ್ತೈಸ್ಸಹಿತೋ ಯಯೌ |
ಸರಸ್ವತ್ಯಾಸ್ತಟೇನ್ಯೈವ ಪಶ್ಯನ್ ಪುಣ್ಯಾಸ್ಥಲಾನಿ ಸಃ ‖ ೧೯ ‖

ಸ್ನಾನಮಾಡಿ ಅಲ್ಲಿಂದ ಮುಂದೆ ಅನೇಕ ಪುಣ್ಯಸ್ಥಳಗಳನ್ನು ನೋಡುತ್ತ ಶಂಖೋದ್ಧಾರಕ್ಕೆ ಹೋದನು. ಗೋಮತಿಯಲ್ಲಿ ಸ್ನಾನಮಾಡಿ ಮುಂದೆ ದ್ವಾರವತಿಗೆ ಹೋದನು.

೧೭. ಅನಾದಿಸಿದ್ಧವಾಗಿರುವ ಮೋಕ್ಷವನ್ನು ಕೊಡುವ ಅಯೋಧ್ಯೆ, ಮಥುರೆ, ಮಾಯೆ, ಕಾಶಿ, ಕಾಂಚಿ, ಅವಂತಿಕೆ, ದ್ವಾರವತಿ ಎಂಬ ಏಳು ಪಟ್ಟಣಗಳೊಳಗೆ ಪ್ರಸಿದ್ಧವಾದ ಶುಭವಾದ ದ್ವಾರವತಿಯನ್ನು ನೋಡಿ ಅಲ್ಲಿ ತೀರ್ಥವಿಧಿಯನ್ನು ಮಾಡಿ ಅನೇಕ ದಾನಗಳನ್ನು ಕೊಟ್ಟನು.

೧೮. ಅಲ್ಲಿ ಪಾಶ್ಚಿಮಾತ್ಯರಾದ ರಾಜರಿಂದ ಗೌರವಿತನಾಗಿ ಪೂಜಿತವಾಗಿರುವ ಅನೇಕ ಪುಣ್ಯಸ್ಥಳಗಳನ್ನು ಅಲ್ಲಿ ರಾಮನು ನೋಡಿದನು.

೧೯. ಅಲ್ಲಿರುವ ರಾಜರಿಂದ ತನ್ನ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಆ ರಾಜರನ್ನೂ ಕರೆದುಕೊಂಡು ಮುಂದೆ ಹೊರಟನು. ಸರಸ್ವತಿಯ ದಡದಲ್ಲಿಯೇ ಪುಣ್ಯಸ್ಥಳಗಳನ್ನು ನೋಡುತ್ತ ಮುಂದೆ ಹೊರಟನು.

ಪುಷ್ಪಕಸ್ಥಶ್ಚನೈಸ್ಸೀತಾಂ ದರ್ಶಯನ್ ಕೌತುಕಾನಿ ಹಿ ।
ಯಯೌ ಪುಷ್ಕರತೀರ್ಥಂ ವೈ ನೃಪೈಸ್ಸರ್ವತ್ರ ಸಂವೃತಃ ॥ ೨೦ ॥

ವಿಮಾನೇ ಪ್ರತ್ಯಹಂ ರಾಮಃ ಕೋಟಿಶೋ ಬ್ರಾಹ್ಮಣಾನ್ ಸದಾ ।
ಭೋಜಯಾಮಾಸ ದಿವ್ಯಾನ್ನೈಃ ಪಾಯಸೈಶ್ಶರ್ಕರಾದಿಭಿಃ ॥ ೨೧ ॥

ವಿಮಾನೇ ಯೇ ಸ್ಥಿತಾಃ ಪೂರ್ವಮಯೋಧ್ಯಾಪುರವಾಸಿನಃ ।
ತಥಾ ಯೇ ಪೂರ್ವದೇಶಿಯಾ ದಾಕ್ಷಿಣಾತ್ಯಾ ನೃಪಾಶ್ಚ ಯೇ ॥ ೨೨ ॥

ಪಾಶ್ಚಿಮಾತ್ಯಾ ನೃಪಾ ಯೇ ವೈ ತೇ ಭಟೈರ್ವಾಹನೈಸ್ಸಹ ।
ರಾಮೇಣಾತಿಥಿವತ್ಸರ್ವೇ ವಸ್ತ್ರಾನ್ನಾಭರಣಾದಿಭಿಃ ॥ ೨೩ ॥

ಪೂಜಿತಾ ಮಾನಿತಾ ಆಸನ್ ಸಾದರಂ ತೇ ಯಥಾ ಸುಖಂ ।
ನ ಕಶ್ಚಿದ್ಭಿನ್ನಪಾಕಂ ಹಿ ಚಕಾರ ಪುಷ್ಪಕೇ ನರಃ ॥ ೨೪ ॥

---

೨೦. ಪುಷ್ಪಕದಲ್ಲಿ ಕುಳಿತು ಸೀತೆಗೆ ಆಶ್ಚರ್ಯಗಳನ್ನು ತೋರಿಸುತ್ತ ಹೊರಟನು. ರಾಜರಿಂದ ಕೂಡಿಕೊಂಡು ಅವರನ್ನೂ ಕರೆದುಕೊಂಡು ಪುಷ್ಕರತೀರ್ಥಕ್ಕೆ ಹೋದನು.

೨೧. ರಾಮನು ಆ ವಿಮಾನದಲ್ಲಿಯೇ ಪ್ರತಿದಿನವೂ ಕೋಟಿಗಟ್ಟಲೆಯಲ್ಲಿ ಬ್ರಾಹ್ಮಣರಿಗೆ ಪಾಯಸ, ಸಕ್ಕರೆ, ತುಪ್ಪ ಮುಂತಾದುವುಗಳಿಂದ ದಿವ್ಯಭೋಜನವನ್ನು ಮಾಡಿಸುತ್ತಿದ್ದನು.

೨೨-೨೪. ವಿಮಾನದಲ್ಲಿ ಮೊದಲಿದ್ದ ಅಯೋಧ್ಯಾನಗರದವರೂ ಅಂತೆಯೇ ಪೂರ್ವದೇಶದವರೂ ದಕ್ಷಿಣದೇಶದವರೂ ಪಶ್ಚಿಮದೇಶದವರೂ ಆದ ರಾಜರು ಅವರ ಸೈನ್ಯ ಇವರೆಲ್ಲರನ್ನೂ ರಾಮನು ಅತಿಥಿಗಳಂತೆ ವಸ್ತ್ರ, ಅನ್ನ, ಆಭರಣಗಳನ್ನು ಕೊಟ್ಟು ಪೂಜಿಸಿ ಗೌರವಿಸಿದನು. ಅವರು ಸುಖವಾಗಿರುವಂತೆ ಮಾಡಿದ್ದನು. ಆ ಪುಷ್ಪಕದಲ್ಲಿ ಒಬ್ಬನೂ ಕೂಡ ಬೇರೆಯಾಗಿ ಅಡಿಗೆ ಮಾಡಿಕೊಳ್ಳುತ್ತಿರಲಿಲ್ಲ.

ಚಿಂತಾ ಕಾಷ್ಠ ತೃಣಾದೀನಾಂ ಜಲಸ್ಯಾಪಿನ ಕಸ್ಯ ಚಿತ್ ।
ಏಕಾ ಚಿಂತಾ ತು ತತ್ರಾಸ್ತಿ ಕ್ಷುದ್ಬೋಧೋ ಮೇ ಕಥಂ ಭವೇತ್ ॥ ೨೫ ॥

ವಾಂಛಂತಿ ಸರ್ವೇ ತತ್ರೈಕಂ ಭಿಷಕ್ ಚೂರ್ಣಂ ಪ್ರದಾಸ್ಯತಿ ।
ನಿದ್ರಾಯಾಸ್ತತ್ರ ದಾರಿದ್ರ್ಯಂ ವಾದ್ಯಘೋಷೈರ್ನಿರಂತರಂ ॥ ೨೬ ॥

ತ್ರಾಸಸ್ತತ್ರ ಮಹಾನಾಸೀ ದ್ವಿಮಾನೇ ವಾರಯೋಷಿತಾಂ ।
ಗೀತೈರ್ನೇತ್ರಕಟಾಕ್ಷೈಶ್ಚ ಕ್ರೀಡಾಭಿರ್ವಚನಾದಿಭಿಃ ॥ ೨೭ ॥

ಮಣಿದೀಪೈರ್ದಿನಂ ರಾತ್ರಿಂ ನ ಜಾನಂತಿ ಸ್ಮ ತತ್ರ ವೈ ।
ಗಚ್ಛದ್ದಿನೇ ಕದಾ ಯಾನಂ ಯಾತಿ ರಾತ್ರಾವಪಿ ಕ್ವಚಿತ್ ॥ ೨೮ ॥

---

೨೫. ಒಬ್ಬನಿಗೂ ಹುಲ್ಲು, ಕಡ್ಡಿ ಸೌದೆ, ನೀರು ಇವುಗಳಾವುದೊಂದರ ಚಿಂತೆಯೂ ಅದರಲ್ಲಿರಲೇ ಇಲ್ಲ. ಆದರೆ ನನಗೆ ಹಸಿವು ಹೇಗೆ ಉಂಟಾದೀತು ? ಹಸಿವುಂಟಾಗುವ ಹಾಗೆ ಮಾಡಿಕೊಳ್ಳಬೇಕಲ್ಲ ! ಎಂಬುದೊಂದೇ ಚಿಂತೆಯು ಬಲವಾಗಿದ್ದಿತು.

೨೬. ಎಲ್ಲರೂ ಅಲ್ಲಿ ಹಸಿವಾಗುವ ಔಷಧಿ ಚೂರ್ಣವನ್ನು ಮಾತ್ರ ವೈದ್ಯನನ್ನು ಕೇಳುತ್ತಿದ್ದರು. ವೈದ್ಯನು ಆ ಔಷಧಿಯನ್ನು ಎಲ್ಲರಿಗೂ ಕೊಡುತ್ತಿದ್ದನು. ಯಾವಾಗಲೂ ವಾದ್ಯದ ಧ್ವನಿಯೇ ಮೊಳಗುತ್ತಿದ್ದುದರಿಂದ ನಿದ್ದೆಯು ಮಾತ್ರ ಅಲ್ಲಿ ಬರುತ್ತಿರಲಿಲ್ಲ. ಆ ನಿದ್ದೆಯ ದಾರಿದ್ರ್ಯವು ಬಹುವಾಗಿದ್ದಿತು.

೨೭. ಆ ವಿಮಾನದಲ್ಲಿ ಸೂಳೆಯರಿಗೆ ಮಾತ್ರ ತೊಂದರೆಯು ಬಹುವಾಗಿದ್ದಿತು. ಹಾಡಿಕೆ ಕಟಾಕ್ಷವನ್ನು ಬೀರುವುದು ಒಳ್ಳೆಯ ಮಾತು ಹಾಸ್ಯದ ಮಾತು ಇವುಗಳನ್ನು ಆಡುವುದೇ ಅವರಿಗೆ ಕಷ್ಟವಾಗಿದ್ದಿತು.

೨೮. ಆ ವಿಮಾನದಲ್ಲಿ ನಾಗಮಣಿಗಳೇ ಬೆಳಗುತ್ತಿದ್ದುದರಿಂದ ಹಗಲೂ ರಾತ್ರಿಯೂ ವ್ಯತ್ಯಾಸವಾಗಿ ತಿಳಿಯುತ್ತಲೇ ಇರಲಿಲ್ಲ. ಎರಡೂ ಒಂದೇ ರೀತಿಯಾಗಿದ್ದಿತು ಹಗಲಿನಲ್ಲಿ ವಿಮಾನವು ಪ್ರಯಾಣಮಾಡುತ್ತಿದ್ದಿತು. ರಾತ್ರಿಯಲ್ಲಿ ಸ್ವಲ್ಪಹೊತ್ತು ಮಾತ್ರ ಪ್ರಯಾಣಮಾಡುತ್ತಿದ್ದಿತು.

ಏತಸ್ಮಿನ್ನಂತರೇ ಶಿಷ್ಯಪುಷ್ಕರಸ್ಥೈರ್ಜನೈಸ್ತದಾ ।
ಮಹಾನಾದುಶ್ರುತೋ ರಮ್ಯೋ ಮಂಜುಲಶ್ರುತಿತೋಷಕೃತ್ ॥ ೨೯ ॥

ವಾರಸ್ತ್ರೀನೂಪುರೋದ್ಭೂತಃ ಕ್ವಣತ್ಕಂಕಣಜೋಪಿ ಚ ।
ಕರತಾಡನಗೀತಾದಿಮೃದಂಗಪಣವೋದ್ಭವಃ ॥ ೩೦ ॥

ನವವಾದ್ಯಸಮುದ್ಭೂತೋ ಘಂಟೀಯಂತ್ರ ಸಮುದ್ಭವಃ ।
ಯಾನಘಂಟಾಕಿಂಕಿಣೀನಾಂ ಪತಾಕಾರವಸಂಭವಃ ॥ ೩೧ ॥

ವಾರಾಂಗನಾಕಟಿತಟಕಿಂಕಿಣೀಸಂಭವೋಪಿ ಚ ।
ವಾರಣಾಶ್ವಾಯುಧೌಷ್ಟ್ರಾಮದಿಯೂರಕಪಿಸಂಭವ॥ ॥ ೩೨ ॥

ವೀರೇಭ್ಯೋ ವೇದಘೋಷೇಭ್ಯಶ್ಶಿಷ್ಯೇಭ್ಯಶ್ಚ ಸಮುತ್ಥಿತಃ ।
ನಟನಾಟಕವಂದಿಭ್ಯೋ ಮಾಗಧೇಭ್ಯಸ್ಸಮುತ್ಥಿತಃ ॥ ೩೩ ॥

---

೨೯. ಹೀಗಿರುತ್ತಿರುವಾಗ ಪುಷ್ಕರದಲ್ಲಿದ್ದವರು ರಮ್ಯವೂ ಮನೋಹರವೂ ಕಿವಿಗೆ ಸಂತೋಷಕರವೂ ಆದ ಒಂದು ದೊಡ್ಡಶಬ್ದವನ್ನು ಕೇಳಿದರು

೩೦. ಸೂಳೆಯರ ಕಾಲು ಬಳೆಯ ಶಬ್ದವೂ ಕೈಬಳೆಯ ಶಬ್ದವೂ ಕೈಯ್ಯಲ್ಲಿ ತಾಳಹಾಕುವ ಶಬ್ದವೂ ಮೃದಂಗ ಕಿಂಜರಿಗಳ ಶಬ್ದವೂ ಉಳ್ಳ ಹಾಡುವಿಕೆಯು ಅದರಲ್ಲಿದ್ದಿತು.

೩೧. ಒಂಭತ್ತು ಬಗೆಯ ವಾದ್ಯಗಳ ಧ್ವನಿಯು ಘಟೀಯಂತ್ರವೆಂಬ ವಾದ್ಯದ ಧ್ವನಿಯೂ ಕೇಳಿ ಬರುತ್ತಿದ್ದಿತು. ಅವರು ಕುಳಿತು ಬರುವ ಪುಷ್ಕರದ ಗಂಟೆಗೆಜ್ಜೆಗಳ ಶಬ್ದವೂ ಪತಾಕೆಯ ಶಬ್ದವೂ ಕೇಳಿಬರುತ್ತಿದ್ದಿತು.

೩೨. ಸೂಳೆಯರು ನಡುವಿಗೆ ಕಟ್ಟಿಕೊಂಡಿರುವ ಕಿರುಗೆಜ್ಜೆಯ ಶಬ್ದವೂ ಆನೆಗಳ ಕೂಗೂ, ಆಯುಧಗಳ ಸದ್ದು, ಒಂಟೆಗಳ ಧ್ವನಿ, ನವಿಲುಗಳ ಕೂಗು, ಕಪಿಗಳ ಕಿಲಿಕಿಲಿಧ್ವನಿಗಳು ಕೇಳಿ ಬಂದುವು.

೩೩. ವೀರಘೋಷವೂ ವೇದಗಳ ಘೋಷವೂ ಶಿಷ್ಯರಿಂದ ಕೇಳಿ ಬರುತ್ತಿದ್ದುವು ನಟರು ನಾಟಕದವರು ವಂದಿಗಳು ಮಾಗಧರು ಇವರು ಅವರವರಿಗೆ ಅನುಗುಣವಾದ ಧ್ವನಿಗಳನ್ನು ಮಾಡುತ್ತಿದ್ದರು.

ಗೋದೋಹಸಂಭವಶ್ಚಾಪಿ ಹ್ಯಜಾಮಹಿಷದೋಹಜಃ ।
ದಧಿಮಂಥನಸಂಭೂತಶ್ಶಿಶೂನಾಂ ರೋದನೋದ್ಭವಃ ॥ ೩೪ ॥

ಶಿಶುಮಂಚಕಸಂಬದ್ಧಶೃಂಖಲಾಭ್ಯಸ್ಸಮುತ್ಥಿತಃ ।
ನಾನಾತೂರ್ಯೋದ್ಭವಶ್ಚಾಪಿ ಪಿಷ್ಟಚಕ್ರಸಮುದ್ಭವಃ ॥ ೩೫ ॥

ಘೃತಪಾಚಿತಪಕ್ವಾನ್ನ ಪ್ರಕಾರಕರಣೋದ್ಭವಃ ।
ನಾರದಾದಿ ಮುನಿಶ್ರೇಷ್ಠ ಧೃತವೀಣಾದಿ ಸಂಭವಃ ॥ ೩೬ ॥

ಪುರಾಣಕಥನೋದ್ಭೂತೋ ಹರಿಕೀರ್ತನಸಂಭವಃ ।
ರಾಮನಾಮಸಹಸ್ರಾದಿಸ್ತೋತ್ರಪಾಠಸಮುದ್ಭವಃ ॥ ೩೭ ॥

ನಾರಿಪೂರಣಪೇಷಣಕಾರ್ಯೇ ಕಂಕಣಸಂಭವಃ ।
ಪಾದಪ್ರಕ್ಷಾಳನಾದ್ಯಾದಿನಾನಾಕಾರ್ಯ ಸಮುದ್ಭವಃ ॥ ೩೮ ॥

ಏವಂ ನಾನಾವಿಧಂ ಶ್ರುತ್ವಾ ಪುಷ್ಕರಸ್ಥಾ ಜನಾ ಧ್ವನಿಂ ।
ನಿಶಾಂತೇ ಪಶ್ಚಿಮಾಮಾಶಾಂ ಕಿಮೇತದಿತಿ ವಿಹ್ವಲಾಃ ॥ ೩೯ ॥

---

೩೪. ಗೋವುಗಳನ್ನು ಕರೆಯುವ ಧ್ವನಿ ಎಮ್ಮೆಗಳನ್ನು ಕರೆಯುವ ಧ್ವನಿ ಮೊಸರು ಕಡೆಯುವ ಧ್ವನಿ ಮಕ್ಕಳು ಅಳುವ ಧ್ವನಿ ಇವು ಕೇಳಿ ಬರುತ್ತಿದ್ದುವು.

೩೫-೩೮. ತೊಟ್ಟಲಿಗೆ ಕಟ್ಟಿರುವ ಸರಪಣಿಯಧ್ವನಿ ಇನ್ನು ಅನೇಕ ವಾದ್ಯಗಳ ಧ್ವನಿ ಬಿಸುವ ಕಲ್ಲಿನಸದ್ದು ತುಪ್ಪದಿಂದ ಮಾಡುವ ಅನ್ನ ಭಕ್ಷ್ಯಗಳು ಇವುಗಳನ್ನೂ ಮಾಡುವ ಪ್ರಕಾರದ ಧ್ವನಿ ಮತ್ತು ಮಾಡುವ ಧ್ವನಿ ನಾರದನೇ ಮುಂತಾದವರು ಹಿಡಿದು ಬಾರಿಸುತ್ತಿರುವ ವೀಣೆಯಧ್ವನಿ ಕಾಲನ್ನು ತೊಳೆಯುವ ಧ್ವನಿ ಇವೇ ಮುಂತಾದ ಧ್ವನಿಗಳು ಉಂಟಾಗುತ್ತಿದ್ದವು.

೩೯. ಈ ರೀತಿಯಾದ ಇನ್ನೂ ಅನೇಕ ಬಗೆಯಾದ ಧ್ವನಿಗಳನ್ನು ಆ ಪುಷ್ಕರದಲ್ಲಿದ್ದ ಜನಗಳು ಕೇಳಿದರು. ಬೆಳಗಿನ ಜಾವದಲ್ಲಿ ಪಶ್ಚಿಮದಿಕ್ಕಿನಿಂದ ಆ ಬರುತ್ತಿದ್ದ ಧ್ವನಿಯನ್ನು ಕೇಳಿದರು. ಇದೇನಿರಬಹುದೆಂದು ಆಶ್ಚರ್ಯದಿಂದ ತವಕಪಡುತ್ತಿದ್ದರು.

ಕೇಚಿದೂಚುರ್ನಂದಿಘಂಟಾಸ್ವರೋಯಂ ಶ್ರೂಯತೇ ಮುಹುಃ ।
ಕೇಚಿದೂಚುರ್ವಿಮಾನೇನ ಗಚ್ಛತೀಂದ್ರೋ ದಿವಂ ಪ್ರತಿ ॥ ೪೦ ॥

ಕೇಚಿದೂಚುಸ್ಸಮಾಯಾಂತಿ ರಂಭಾದ್ಯಪ್ಸರಸಶ್ಚಖೇ ।
ಕೇಚಿನ್ಮೇಘಧ್ವನಿಂ ಪ್ರೋಚುಃ ಕೇಚಿದೈರಾವತಂ ತ್ವಿತಿ ॥ ೪೧ ॥

ಕೇಚಿತ್ಪ್ರೋಚುಸ್ಸಮಾಯಾತಿ ಸಾಗರಃ ಕಿಂ ಲಯಂ ವಿನಾ ।
ಕೇಚಿತ್ಪ್ರೋಚುಸ್ತ್ವಿದಂ ಜ್ಞೇಯಂ ವಾಯುಪುತ್ರಸ್ಯ ಶಬ್ದಿತಂ ॥ ೪೨ ॥

ಕೇಚಿತ್ಪತತ್ರಿರಾಜಸ್ಯ ಶಬ್ದಿತಂ ಪ್ರೋಚುರುತ್ತಮಂ ।
ಕೇಚಿತ್ಪ್ರೋಚುಶ್ಚ ಗಂಧರ್ವಾ ವಿಮಾನಸ್ಥಾ ಅಟಂತಿ ಖೇ । ॥ ೪೩ ॥

ಕೇಚಿತ್ಪ್ರೋಚುರ್ನಾಗಕನ್ಯಾಃ ಕುರ್ವಂತೀದಂ ಸುಗಾಯನಂ ।
ಕುರ್ವಂತಶ್ಚೇತಿ ತರ್ಕಾಂಶ್ಚ ದದೃಶುಃ ಪುಷ್ಪಕಂ ಮಹತ್ ॥ ೪೪ ॥

---

೪೦. ಅವರಲ್ಲಿ ಕೆಲವು ಜನರು ಇದು ನಂದಿಗೆ ಕಟ್ಟಿರುವ ದಪ್ಪಗಂಟೆಯ ಶಬ್ದವು ಕೇಳಿ ಬರುತ್ತದೆ. ಎನ್ನುತ್ತಿದ್ದರು. ಕೆಲವರು ಇಂದ್ರನು ವಿಮಾನದಲ್ಲಿ ಸ್ವರ್ಗಕ್ಕೆ ಹೋಗುತ್ತಿರುವ ಶಬ್ದವು ಎನ್ನುತ್ತಿದ್ದರು.

೪೧. ರಂಭೆಯೇ ಮುಂತಾದ ಅಪ್ಸರಸ್ತ್ರೀಯರು ಆಕಾಶದಲ್ಲಿ ಹೋಗುತ್ತಿರುವರು ಎನ್ನುತ್ತಿದ್ದರು. ಕೆಲವರು ಮೇಘದ ಧ್ವನಿಯೆಂದೆನ್ನುತ್ತಿದ್ದರು. ಕೆಲವರು ಐರಾವತದ ಧ್ವನಿಯೆಂದೆನ್ನುತ್ತಿದ್ದರು.

೪೨. ಕೆಲವರು ಇದೇನು? ಪ್ರಳಯಕಾಲವು ಬಾರದಿದ್ದರೂ ಸಮುದ್ರವು ಏತಕ್ಕೆ ಬರುತ್ತಿರುವುದು ? ಎಂದೆನ್ನುತ್ತಿದ್ದರು ಕೆಲವು ಜನರು ಇದುವಾಯು ಪುತ್ರನು ಬರುತ್ತಿರುವ ಶಬ್ದವೆಂದೆನ್ನುತ್ತಿದ್ದರು.

೪೩-೪೪. ಮತ್ತೆ ಕೆಲವರು ಇದು ಗರುಡನಶಬ್ದ ಎಂದೆನ್ನುತ್ತಿದ್ದರು ಕೆಲವರು ಗಂಧರ್ವರು ವಿಮಾನದಲ್ಲಿ ಹೋಗುತ್ತಿರುವ ಶಬ್ದವು ಎಂದೆನ್ನುತ್ತಿದ್ದರು. ನಾಗಕನ್ಯೆಯರು ಈ ಗಾಯನವನ್ನು ಮಾಡುವರು ಎಂದು ಕೆಲವರು ಹೇಳುತ್ತಿದ್ದರು. ಈ ರೀತಿಯಾಗಿ ಅವರೆಲ್ಲರೂ ಊಹೆಯನ್ನು ಮಾಡುತ್ತ ಕೊನೆಗೆ ಅಲ್ಲಿಗೆ ಬರುತ್ತಿರುವ ಒಂದು ವಿಮಾನವನ್ನು ನೋಡಿದರು.

ರಾಮಮಾಗತಮಾಜ್ಞಾಯ ತೋಷಪೂರ್ಣಾ ಬಭೂವಿರೇ ।
ಉಪಾಯನಾನಿ ಸಂಗೃಹ್ಯ ಪ್ರೇಮನಿರ್ಭರಮಾನಸಾಃ । ॥ ೪೫ ॥

ಪ್ರತ್ಯುಜ್ಜಗ್ಮುಸ್ತದಾ ರಾಮಂ ದೃಷ್ಟ್ವಾ ನತ್ವಾ ರಘೂತ್ತಮಂ ।
ಮೇನಿರೇ ಜನ್ಮಸಾಫಲ್ಯಂ ರಾಘವೇಣಾತಿಮಾನಿತಾಃ ॥ ೪೬ ॥

ರಾಘವೋಽಪಿ ವಿಮಾನಾಗ್ರ್ಯಾದವರುಹ್ಯ ದ್ವಿಜೋತ್ತಮಾನ್ ।
ಪ್ರಣಿಪತ್ಯ ಸಮಾಭಾಷ್ಯ ಪ್ರತಿಪೂಜ್ಯ ಸವಿಸ್ತರಂ ॥ ೪೭ ॥

ತೈಸ್ತೀರ್ಥವಾಸಿಭಿರ್ಯುಕ್ತೋ ಯಯೌ ಪುಷ್ಕರಮುತ್ತಮಂ ।
ಸ್ನಾತ್ವಾನುಚ್ಚೈಲಂ ವಿಧಿನಾ ತೀರ್ಥಶ್ರಾದ್ಧಂ ವಿಧಾಯಚ ॥ ೪೮ ॥

ದತ್ವಾ ದಾನಾನ್ಯನೇಕಾನಿ ಕಾಶ್ಯಾಃ ಕೋಟ್ಯಧಿಕಾನಿ ಚ ।
ದ್ರವ್ಯಾಲಂಕಾರವಸ್ತ್ರಾನ್ನೈಸ್ತೋಷಯಾಮಾಸ ಭೂಸುರಾನ್ ॥ ೪೯ ॥

---

೪೫. ಕೊನೆಗೆ ಇದು ರಾಮನು ಬಂದ ಪುಷ್ಪಕದ ವಿಮಾನದ ಶಬ್ದವೆಂದು ತಿಳಿದು ಎಲ್ಲರೂ ಸಂತೋಷಪಟ್ಟರು. ಕೈಯ್ಯಲ್ಲಿ ಕಪ್ಪಕಾಣಿಕೆಗಳನ್ನು ಹಿಡಿದು ಪ್ರೇಮನಿಂದ ಎದುರು ನೋಡುತ್ತಿದ್ದರು.

೪೬. ಆಮೇಲೆ ಅವರೆಲ್ಲರೂ ಆ ರಾಮನನ್ನು ಎದುರುಗೊಂಡರು. ಅವನನ್ನು ನೋಡಿ ನಮಸ್ಕರಿಸಿದರು. ಅವರೆಲ್ಲರೂ ರಾಘವನಿಂದ ಗೌರವಿಸಲ್ಪಟ್ಟವರಾಗಿ ತಮ್ಮ ಜನ್ಮವು ಸಫಲವಾಯಿತೆಂದು ತಿಳಿದರು.

೪೭-೪೮. ರಾಮನು ವಿಮಾನದಮೇಲಿಂದ ಇಳಿದು ಆ ಬ್ರಾಹ್ಮಣರಿಗೆ ನಮಸ್ಕರಿಸಿ ಮಾತನಾಡಿಸಿ ಬಹುವಾಗಿ ಪೂಜಿಸಿದನು. ಆ ತೀರ್ಥವಾಸಿಗಳ ಮಾತಿನಂತೆ ಪುಷ್ಕರತೀರ್ಥಕ್ಕೆ ಹೋದನು ಅಲ್ಲಿ ಸಚೇಲಸ್ನಾನಮಾಡಿ ತೀರ್ಥಶ್ರಾದ್ಧಾದಿಗಳನ್ನು ಮಾಡಿದನು.

೪೯. ಅನೇಕವಾದ ದಾನಗಳನ್ನು ಕೊಟ್ಟನು ಕಾಶಿಯಲ್ಲಿ ಕೊಟ್ಟ ದಾನಕ್ಕಿಂತಲೂ ಕೋಟಿಪಾಲು ಹೆಚ್ಚಾಗಿದ್ದಿತು. ದ್ರವ್ಯ, ಅಲಂಕಾರ, ವಸ್ತ್ರ, ಅನ್ನ ಮುಂತಾದುವುಗಳಿಂದ ಆ ಬ್ರಾಹ್ಮಣರನ್ನು ಸಂತೋಷಪಡಿಸಿದನು.

ತತಸ್ತೈರಭ್ಯನುಜ್ಞಾತೋ ವಿಮಾನೇನ ಯಯೌ ಪುನಃ ।
ಏವಂ ಪಶ್ಚಿಮಯಾತ್ರಾ ತೇ ವರ್ಣಿತಾ ರಾಘವಸ್ಯ ಹಿ ॥ ೫೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ಪಶ್ಚಿಮಯಾತ್ರಾವರ್ಣನಂ ನಾಮ ಅಷ್ಟಮಸ್ಸರ್ಗಸ್ಸಮಾಪ್ತಃ

---

೫೦. ಅನಂತರ ಅವರ ಅನುಜ್ಞೆಯನ್ನು ಪಡೆದು ವಿಮಾನದಲ್ಲಿ ಹೊರಟನು ಈ ರೀತಿಯಾಗಿ ರಾಮನು ಪಶ್ಚಿಮದೇಶದ ಯಾತ್ರೆಮಾಡಿದುದನ್ನು ವರ್ಣಿಸಿದ್ದೇನೆ.

ಇಂತು ಶ್ರೀ ವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಪಶ್ಚಿಮಯಾತ್ರಾ ವರ್ಣನವೆಂಬ ಎಂಟನೆಯ ಸರ್ಗವು ಸಮಾಪ್ತವು

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ
॥ ಎಂಟನೆಯ ಸರ್ಗದ ಸಾರಾಂಶವು ॥

ಶ್ರೀರಾಮನ ಈ ಯಾತ್ರೆಯನ್ನು ಕೇಳಿದ ವಿಷ್ಣುದಾಸನು ಎಲೈ ಗುರುವೆ ! ಯಾನದಲ್ಲಿ ಕುಳಿತು ಯಾತ್ರೆಯನ್ನು ಮಾಡಕೂಡದೆಂದು ಕೇಳಿದ್ದೇನೆ. ರಾಮನು ಪುಷ್ಪಕದಲ್ಲಿ ಕುಳಿತು ಯಾತ್ರೆಯನ್ನು ಮಾಡಿದನಷ್ಟೆ. ಅದು ಸರಿಯೆ ? ಎಂದೆನಲು ರಾಮದಾಸನು ಚಕ್ರವರ್ತಿಯೂ ದ್ವೀಪಾಧಿಪತಿಯೂ ಮಾಂಡಲಿಕನೂ ದೇವರೂ ಸ್ನಾತಕನೂ ಮಠಾಧಿಪತಿಯೂ ಕಾಲಿನ ನಡಗೆಯಿಂದ ಯಾತ್ರೆಯನ್ನು ಮಾಡಬಾರದು. ಈ ವಿಷಯದಲ್ಲಿ ಸಂದೇಹವನ್ನು ಬಿಟ್ಟುಬಿಡು. ಇತರ ಜನರು ರಾಮನ ಆಜ್ಞೆಯನ್ನು ಅನುಸರಿಸಿ ಯಾನಾರೂಢರಾಗಿದ್ದುದರಿಂದ ಅವರಿಗೂ ಆ ದೋಷವಿರುವುದಿಲ್ಲ.

ರಾಮನು ಮುಂದೆ ಹೊರಟು ಸಪ್ತಶೃಂಗಗಿರಿಗೆ ಹೋಗಿ ಸುತೀಕ್ಷ್ಣಾಶ್ರಮವನ್ನು ಹೊಕ್ಕು ವಿರಜಾಕ್ಷೇತ್ರಕ್ಕೆ ಹೋದನು. ಅಲ್ಲಿಂದ ಪಶ್ಚಿಮಕ್ಕೆ ಹೊರಟು ಪುಣ್ಯಸ್ಥಳಗಳನ್ನು ನೋಡುತ್ತ ಪ್ರಭಾಸಕ್ಷೇತ್ರಕ್ಕೆ ಹೋದನು. ಅನಂತರ ಗೋಮತಿಯಲ್ಲಿ ಸ್ನಾನಮಾಡಿ ದ್ವಾರವತಿಗೆ ಹೋದನು. ಅಲ್ಲಿ ಸ್ನಾನಮಾಡಿ ಅನೇಕ ದಾನಗಳನ್ನು ಕೊಟ್ಟನು. ಅಲ್ಲಿ ಪಶ್ಚಿಮದೇಶದ ದೊರೆಗಳು ಕಪ್ಪವನ್ನು ಕೊಟ್ಟರು ಅನಂತರ ಅವರನ್ನು ಕರೆದುಕೊಂಡು ಸೀತೆಯೊಡನೆ ಹೊರಟನು.

ರಾಮನು ವಿಮಾನದಲ್ಲಿದ್ದಾಗ ಕೋಟಿಗಟ್ಟಲೆಯಲ್ಲಿ ಬ್ರಾಹ್ಮಣ ಭೋಜನವನ್ನು ಮಾಡಿಸುತ್ತಿದ್ದನು. ಅವರೆಲ್ಲರಿಗೂ ವಸ್ತ್ರಾಭರಣಗಳನ್ನು ಕೊಡುತ್ತ ಸುಖವಾಗಿರುವಂತೆ ಮಾಡಿದ್ದನು. ಅಲ್ಲಿರುವ ಜನರಿಗೆ ಯಾವ

ಚಿಂತೆಯೂ ಇಲ್ಲದಿದ್ದರೂ ನನಗೆ ಹರಿವು ಹೆಚ್ಚಾಗಿ ಉಂಟಾಗಲು ಏನುಮಾಡ ಬೇಕೆಂಬ ಒಂದು ಚಿಂತೆಯು ಮಾತ್ರ ಇದ್ದಿತು. ಇದಕ್ಕೋಸ್ಕರವಾಗಿ ಅವರು ಜೀರ್ಣಕಾರಿ ಚೂರ್ಣವನ್ನು ತಿನ್ನುತ್ತಿದ್ದರು.

ಅನಂತರ ರಾಮನು ಪುಷ್ಪಕದಲ್ಲಿ ಸಾಯಂಕಾಲಕ್ಕೆ ಬಂದನು. ಅದರಿಂದ ಅವರೆಲ್ಲರಿಗೂ ಬಹು ಸಂತೋಷವುಂಟಾಯಿತು. ರಾಮನೂ ಕೂಡ ವಿಮಾನದಿಂದ ಇಳಿದು ಆ ತೀರ್ಥದ ಬ್ರಾಹ್ಮಣರಿಗೆ ನಮಸ್ಕರಿಸಿ ಅವರಿಗೆ ಅನೇಕ ದಾನಗಳನ್ನು ಕೊಟ್ಟು ಕಾಶಿಯಲ್ಲಿ ಮಾಡಿದ ಪೂಜೆದಾನಗಳಿಗಿಂತಲೂ ಕೋಟಿಪಾಲು ಹೆಚ್ಚಾಗಿ ಮಾಡಿದನು. ಅವರ ಅಪ್ಪಣೆಯನ್ನು ಹೊಂದಿ ವಿಮಾನದಲ್ಲಿ ಕುಳಿತು ಮುಂದಕ್ಕೆ ಹೊರಟನು.

ಈ ರೀತಿಯಾಗಿ ಶ್ರೀರಾಮನ ಪಶ್ಚಿಮದೇಶದ ತೀರ್ಥಯಾತ್ರೆಯು ವರ್ಣಿತವಾಗಿದೆ.

॥ ಶ್ರೀಃ ॥

ಅಥ ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡೇ

॥ ನವಮಸ್ಸರ್ಗಃ ॥

॥ ರಾಮದಾಸ ಉವಾಚ ॥

ಉತ್ತರಾಭಿಮುಖೋ ರಾಮಸ್ತತೋ ಪಶ್ಯನ್ ಸ್ಥಲಾನಿ ಸಃ ।
ಯಯೌ ಪರ್ವತತೀರ್ಥಂ ಚ ತತೋ ಜ್ವಾಲಾಮುಖೀಂ ಯಯೌ ॥ ೧ ॥

ಪಶ್ಯನ್ ಸ್ಥಲಾನಿ ಸಂಪ್ರಾಪ ತಸ್ಮಾತ್ ಶ್ರೀಮನಕರ್ಣಿಕಾಂ ।
ಕರತೋಯಾನದೀತೀರೇ ಸ್ನಾತ್ವಾಗ್ರೇ ನ ಯಯೌ ವಿಭುಃ ॥ ೨ ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು–ರಾಮನು ಅನೇಕ ಸ್ಥಳಗಳನ್ನು ನೋಡುತ್ತ ಉತ್ತರದಿಕ್ಕಿಗೆ ಹೊರಟನು. ಮೊದಲು ಪರ್ವತ ತೀರ್ಥಕ್ಕೆ ಹೋದನು·

೨. ಅಂತೆಯೇ ಅಂತಹ ಪುಣ್ಯಸ್ಥಳಗಳನ್ನೂ ತೀರ್ಥಗಳನ್ನೂ ನೋಡುತ್ತ ಶ್ರೀಮಣಿಕರ್ಣಿಕ ತೀರ್ಥಕ್ಕೆ ಬಂದನು. ಕರತೋಯಾನದಿಯಲ್ಲಿ ಸ್ನಾನಮಾಡಿದನು. ಅದನ್ನು ದಾಟಿಹೋದರೆ ದೋಷವುಂಟೆಂಬುದನ್ನು ತಿಳಿದು ಮುಂದಕ್ಕೆ ಹೋಗದೆ ನಿಂತನು.

ತರಣೇ ದೋಷಮಾಕರ್ಣ್ಯ ಪರ್ಯವರ್ತತ ರಾಘವಃ ।
ಕರ್ಮನಾಶಾನದೀಸ್ಪರ್ಶಾತ್ಕರತೋಯಾವಿಲಂಘನಾತ್ ॥ ೩ ॥

ಗಂಡಕೀಬಾಹುತರಣಾದ್ಧರ್ಮಃ ಸ್ಖಲತಿ ಕೀರ್ತನಾತ್ ।
ಗತ್ವಾ ದೇವಪ್ರಯಾಗಂ ಚಾಲಕನಂದಾತಟೇನ ವೈ ॥ ೪ ॥

ನರನಾರಾಯಣೌ ಗತ್ವಾ ದರ್ಶನಾನ್ಮುಕ್ತಿದೌ ನೃಣಾಂ ।
ಬದರಿಕಾಶ್ರಮೇ ರಾಮಃ ಕೇದಾರೇಶಂ ವಿಲೋಕ್ಯ ಸಃ ॥ ೫ ॥

ಹೇಮಾದ್ರೌ ದೇವಗಂಧರ್ವಸೇವಿತೇ ಧಾತುಮಂಡಲೇ ।
ಮಹಾಪಥಂ ತತೋ ಗತ್ವಾ ಯಯೌ ತನ್ಮಾನಸಂ ಸರಃ ॥ ೬ ॥

ಯಸ್ಮಾದ್ವಿನಿರ್ಗತಾ ಗಂಗಾ ಶರಯೂಃ ಪಾಪನಾಶಿನೀ ।
ಕಂಜಾನಿ ಯತ್ರ ಹೈಮಾನಿ ಯತ್ರ ಹಂಸಾಸ್ಸಹಸ್ರಶಃ ॥ ೭ ॥

೩–೪. ಕರ್ಮನಾಶನದಿಯ ಸ್ಪರ್ಶದಿಂದಲಾಗಲಿ ಕರತೋಯಾನದಿಯನ್ನು ಕಾಲಿನಿಂದ ದಾಟುವುದರಿಂದಲಾಗಲಿ ಗಂಡಕಿಯನ್ನು ಈಜಿಕೊಂಡು ದಾಟುವುದರಿಂದಲಾಗಲಿ ತಾನು ಮಾಡಿದ ಧರ್ಮವನ್ನು ಬಾಯಲ್ಲಿ ಹೇಳುವುದರಿಂದಲಾಗಲಿ ತನ್ನ ಧರ್ಮವು ನಾಶವಾಗುತ್ತದೆ. ಆದ್ದರಿಂದ ರಾಮನು ಹಿಂದಕ್ಕೆ ಹೊರಟು ದೇವಪ್ರಯಾಗಕ್ಕೆ ಬಂದನು. ಅಲ್ಲಿಂದ ಅಲಕ ನಂದಾನದಿಯ ದಡದಲ್ಲಿಯೇ ಹೊರಟನು.

೫–೬. ಅನಂತರ ಬದರಿಕಾಶ್ರಮದಲ್ಲಿ ನರನಾರಾಯಣರನ್ನು ಸೇವಿಸಿ ಕೇದಾರಕ್ಕೆ ಬಂದು ಕೇದಾರೇಶ್ವರನನ್ನು ನೋಡಿದನು ದೇವ ಗಂಧರ್ವರಿಂದ ಸೇವಿತವಾದ ಹಿಮಾದ್ರಿಯಲ್ಲಿರುವ ಮಹಾಪಥವನ್ನು ಹೊಂದಿ ಮಾನಸ ಸರೋವರಕ್ಕೆ ಹೋದನು.

೭. ಆ ಮಾನಸದಿಂದಲೇ ಪಾಪಹಾರಕವಾದ ಗಂಗೆಯೂ ಮಹಾನದಿಯಾದ ಸರಯೂನದಿಯೂ ಹುಟ್ಟಿರುವುವು ಆ ಸರೋವರದಲ್ಲಿರುವ ಕಮಲಗಳೆಲ್ಲವೂ ಚಿನ್ನದವುಗಳೇ. ಅಲ್ಲಿ ಹಂಸಗಳು ಅನೇಕವಾಗಿವೆ. ಆ ಹಂಸಗಳಿಗೆ ಕೆಂಪಾದ ಕಣ್ಣೂ ಕೆಂಪಾದ ಕಾಲೂ ಇರುವುವು. ಮುತ್ತುಗಳನ್ನೇ ತಿನ್ನುತ್ತಿರುವುವು.

ರಕ್ತನೇತ್ರಾಂಘ್ರಿವದನಾ ಮುಕ್ತಾಭಕ್ಷಣತತ್ಪರಾಃ ।
ಯತ್ರ ದೇಶೇ ಚಿತ್ರಭೂಮ್ಯಾಂ ದೇವಗಂಧರ್ವಕಿನ್ನರಾಃ ॥ ೮ ॥

ಅಪ್ಸರೋಭಿಸ್ತಥಾ ಸ್ತ್ರೀಭಿಃ ಕ್ರೀಡಾಂ ಕುರ್ವಂತ್ಯಹರ್ನಿಶಂ ।
ತತ್ರ ಸ್ನಾತ್ವಾ ಮಾನಸೇಥ ಗತ್ವಾ ಬಿಂದುಸರೋವರಂ ॥ ೯ ॥

ಸ್ನಾತ್ವಾ ದಾನಾದಿಕಂ ಕೃತ್ವಾ ಹಿಮಾಲಯಗಿರಿಸ್ಥಿತಾಂ ।
ದೃಷ್ಟ್ವಾ ಬ್ರಹ್ಮಸಭಾಂ ದಿವ್ಯಾಂ ಮೇರುಸ್ಥಸದೃಶೀಂ ಪರಾಂ ॥ ೧೦ ॥

ರಾಘವಸ್ಸೀತಯಾ ಸರ್ವೈರವರುಹ್ಯ ಸ ಪುಷ್ಪಕಾತ್ ।
ಪ್ರಣಮಂತಂ ಸುರೇಂದ್ರಾದ್ಯೈರಾಲಿಂಗ್ಯ ಚತುರಾನನಂ ॥ ೧೧ ॥

ಬ್ರಹ್ಮಣಾ ಸಹಿತಾನ್ದೇವಾನ್ ಪೂಜಯಾಮಾಸ ವಿಸ್ತರೈಃ ।
ವಿಧಿಸ್ತಂ ಪೂಜಯಾಮಾಸ ಕಾಮಧೇನುಂ ನ್ಯವೇದಯತ್ ॥ ೧೨ ॥

೮–೯. ಮಾನಸಸರೋವರದ ಹತ್ತಿರವಿರುವ ಚಿತ್ರಭೂಮಿಯಲ್ಲಿ ದೇವತೆಗಳೂ ಗಂಧರ್ವರೂ ಕಿನ್ನರರೂ ಅಪ್ಸರರೊಡನೆಯೂ ತಮ್ಮ ತಮ್ಮ ಸ್ತ್ರೀಯರೊಡನೆಯೂ ಯಾವಾಗಲೂ ಕ್ರೀಡಿಸುತ್ತಿರುತ್ತಾರೆ. ರಾಮನು ಅಂತಹ ಮಾನಸಸರೋವರದಲ್ಲಿ ಸ್ನಾನಮಾಡಿ ಬಿಂದು ಸರೋವರಕ್ಕೆ ಹೋದನು.

೧೦. ಅಲ್ಲಿ ಸ್ನಾನಮಾಡಿ ದಾನಾದಿಗಳನ್ನು ಕೊಟ್ಟು ಮುಂದೆ ಹಿಮವತ್ಪರ್ವತದಲ್ಲಿರುವ ಬ್ರಹ್ಮಸಭೆಯನ್ನು ನೋಡಿದನು. ಅದು ಮೇರು ಪರ್ವತದಲ್ಲಿರುವ ಸಭೆಗೆ ಸಮಾನವಾದುದು.

೧೧. ರಾಮನು ಎಲ್ಲರೊಡನೆಯೂ ಪುಷ್ಪಕದಿಂದ ಇಳಿದನು. ಬ್ರಹ್ಮನೂ ದೇವೇಂದ್ರನೂ, ದೇವತೆಗಳೂ ಬಂದು ನಮಸ್ಕರಿಸಲು ಅವರನ್ನು ಗೌರವಿಸಿ ಬ್ರಹ್ಮನನ್ನು ರಾಮನು ಆಲಿಂಗಿಸಿಕೊಂಡನು.

೧೨. ಆ ದೇವತೆಗಳನ್ನೂ ಬ್ರಹ್ಮನನ್ನೂ ಪೂಜಿಸಿದನು. ಬ್ರಹ್ಮನೂ ಕೂಡ ರಾಮನನ್ನೂ ರಾಮನ ಕಡೆಯವರನ್ನೂ ಗೌರವಿಸಿ ರಾಮನಿಗೆ ಕಾಮಧೇನುವನ್ನು ಕೊಟ್ಟನು.

ವಿಮಾನಾಗ್ರೇ ಕಾಮಧೇನುಂ ಸಂಸ್ಥಾಪ್ಯ ರಘುನಂದನಃ |
ಸುರೈರ್ಬ್ರಹ್ಮಾದಿಭಿಸ್ಸಾಕಂ ಕೈಲಾಸಮಗಮತ್ತದಾ ॥ ೧೩ ॥

ರಾಮಮಾಗತಮಾಜ್ಞಾಯ ಕೈಲಾಸೇ ಗಿರಿಜಾಪತಿಃ |
ಪ್ರತ್ಯುಜ್ಜಗಾಮ ಪಾರ್ವತ್ಯಾ ರಾಮಚಂದ್ರಂ ವೃಷಸ್ಥಿತಃ ॥ ೧೪ ॥

ಶಂಭುಮಾಗತಮಾಜ್ಞಾಯ ರಾಘವಃ ಪುಷ್ಪಕಾಜ್ಜವಾತ್ |
ಅವರುಹ್ಯ ನಮಸ್ಕೃತ್ಯ ಶಿವೇನಾಲಿಂಗಿತಃ ಸ್ಥಿತಃ ॥ ೧೫ ॥

ಉಮಾಪಿ ಸೀತಾಮಾಲಿಂಗ್ಯ ದಿವ್ಯಾಲಂಕಾರಚಂದನೈಃ |
ಪೂಜಯಾಮಾಸ ವಸ್ತ್ರಾದ್ಯೈಸ್ಸೂರ್ಯಕೋಟಿಸಮಪ್ರಭೈಃ ॥ ೧೬ ॥

ತಾಟಂಕೇ ನೂಪುರೇ ದಿವ್ಯೇ ಕೇಯೂರೇ ಚೂಡಕದ್ವಯಂ |
ಕಿಂಕಿಣೀರವಸಂಯುಕ್ತರಶನಾಂ ಚಂದ್ರಭಾಸ್ಕರೌ ॥ ೧೭ ॥

---

೧೩. ರಾಮನು ಕಾಮಧೇನುವನ್ನು ವಿಮಾನದ ತುದಿಯ ಅಂತಸ್ತಿನಲ್ಲಿಟ್ಟು ಬ್ರಹ್ಮನೇ ಮುಂತಾದ ದೇವತೆಗಳೊಡನೆ ಕೈಲಾಸಕ್ಕೆ ಹೋದನು.

೧೪. ರಾಮನು ಕೈಲಾಸಕ್ಕೆ ಬಂದುದನ್ನು ನೋಡಿ ಶಿವನು ಪಾರ್ವತಿ ಯೊಡನೆ ಬಸವನಮೇಲೆ ಕುಳಿತುಕೊಂಡು ಆ ರಾಮನನ್ನು ಎದುರುಗೊಂಡನು.

೧೫. ಶಂಭುವು ಎದುರುಗೊಳ್ಳಲು ಬಂದುದನ್ನು ರಾಮನು ಕೇಳಿ ಪುಷ್ಪಕದಿಂದ ಇಳಿದು ಶಿವನಿಗೆ ನಮಸ್ಕರಿಸಲು ಶಿವನು ರಾಮನನ್ನು ಆಲಿಂಗಿಸಿ ಕೊಂಡನು.

೧೬. ಉಮೆಯು ಸೀತೆಯನ್ನು ಆಲಿಂಗಿಸಿಕೊಂಡು ದಿವ್ಯವಾದ ಅಲಂಕಾರಗಳಿಂದಲೂ ಚಂದನದಿಂದಲೂ ಸೂರ್ಯರಂತೆ ಪ್ರಕಾಶಮಾನವಾದ ಆಭರಣಗಳಿಂದಲೂ ವಸ್ತ್ರಗಳಿಂದಲೂ ಗೌರವಿಸಿ ಪೂಜಿಸಿದಳು.

೧೭–೧೮. ಓಲೆಗಳನ್ನೂ ಕಾಲು ಬಳೆಗಳನ್ನೂ ಭುಜಕ್ಕೆ ಹಾಕಿಕೊಳ್ಳುವ ಒಡವೆಗಳನ್ನೂ ತಲೆಗೆಹಾಕಿಕೊಳ್ಳುವ ಎರಡು ಚೂಡಕಗಳನ್ನೂ ಕಿರುಗೆಜ್ಜೆಗಳುಳ್ಳ

ಸೀಮಂತಭೂಷಣೌ ಹಾರಾನ್ಮಣಿಮುಕ್ತಾವಿಚಿತ್ರಿತಾ೯ |
ದದೌ ಜನಕನಂದಿನ್ಯೈ ಪಾರ್ವತೀತೋಷಪೂರಿತಾ || ೧೮ ||

ತತಶ್ಶಂಭುಸ್ತದಾ ಪ್ರಾಹ ರಾಘವಂ ಪೂಜ್ಯ ವೈಭವೈಃ |
ರಾಮ ತ್ವನ್ನಾಭಿಕಮಲೇ ಬ್ರಹ್ಮಾಯಂ ಚತುರಾಸನಃ || ೧೯ ||

ತತೋ ಜಾತೋ ವಿಧೇಶ್ಚಾಹಂ ರೋದನಾದ್ರುದ್ರಸಂಜ್ಞಕಃ |
ಪೌತ್ರಸ್ತವ ರಘುಶ್ರೇಷ್ಠ ತವಾಜ್ಞಾಪರಿಪಾಲಕಃ || ೨೦ ||

ಸಂಹಾರಃ ಕ್ರಿಯತೇ ರಾಮ ಆಜ್ಞಯಾ ತವ ಸಾದರಾತ್ |
ಯದಾ ಮಯಾ ತು ಪ್ರಲಯೇ ತದಾ ಪಾಪಂ ಕ್ವ ತೇ ಗತಂ || ೨೧ ||

ಯದ್ದಶಾಸ್ಯವಧಾದ್ಭೀತಸ್ತೀರ್ಥಯಾತ್ರಾಂ ಕರೋಷಿ ಹಿ |
ಕ್ರೀಡೇಯಂ ತವ ರಾಜೇಂದ್ರ ಸುಖಂ ಕ್ರೀಡಸ್ವ ಸೀತಯಾ || ೨೨ ||

ಡಾಬನ್ನೂ ಬೈತಲೆಗೆ ಹಾಕಿಕೊಳ್ಳುವ ಸೂರ್ಯಚಂದ್ರರನ್ನೂ ಮುತ್ತಿನ ಆ ಹಾರಗಳನ್ನೂ ಪಾರ್ವತಿಯು ಸಂತೋಷದಿಂದ ಸೀತೆಗೆ ಕೊಟ್ಟಳು.

೧೯–೨೦. ಶಂಭುವು ರಾಮನನ್ನು ವೈಭವದಿಂದ ಪೂಜಿಸಿ ಇಂತೆಂದನು. ಎಲೈ ರಾಮನೇ ! ನಿನ್ನ ನಾಭಿಕಮಲದಲ್ಲಿ ಈ ಬ್ರಹ್ಮನು ಹುಟ್ಟಿದನು. ಆ ವಿಧಿಯಿಂದ ನಾನು ಉತ್ಪನ್ನನಾದೆನು. ರೋದಿಸಿದುದರಿಂದ (ಅತ್ತುದರಿಂದ) ರುದ್ರನೆಂಬ ಹೆಸರು ನನಗೆ ಬಂದಿತು. ಆದ್ದರಿಂದ ನಾನು ನಿನಗೆ ಮೊಮ್ಮಗನಾಗ ಬೇಕು.

೨೧. ಎಲೈ ರಾಮನೇ ! ನಿನ್ನ ಅಪ್ಪಣೆಯಂತೆ ಪ್ರಲಯಕಾಲದಲ್ಲಿ ಸಂಹಾರಮಾಡುತ್ತೇನೆ. ನೀನು ನನಗೆ ಹೀಗೆ ಅಪ್ಪಣೆಮಾಡಿ ನಾಶ ಮಾಡಿಸುವುದರಿಂದ ನಿನಗೆ ಬಂದ ಆ ಪಾಪವು ಹೋಗುವುದು ತಾನೆ ಹೇಗೆ ?

೨೨. ನೀನು ದಶಾಸ್ಯನ ವಧೆಯಿಂದ ಹೆದರಿ ತೀರ್ಥಯಾತ್ರೆಯನ್ನು ಮಾಡುತ್ತಿರುವೆಯಲ್ಲ ! ಆದರೆ ಎಲೈ ರಾಜೇಂದ್ರನೇ ! ಇದು ನಿನ್ನ ಕ್ರೀಡೆಯು. ಆಗಲಿ. ಸೀತೆಯೊಡನೆ ಸುಖವಾಗಿ ಕ್ರೀಡಿಸು.

ಕ್ರಿಯತೇ ಲೋಕಶಿಕ್ಷಾರ್ಥಂ ಜಾನಾಮಿ ತವ ಚೇಷ್ಟಿತಂ ।
ಏವಂ ನಾನಾವಿಧೈಸ್ತಸ್ಯ ಚಾರಿತ್ರೈರೀಡ್ಯ ರಾಘವಂ ॥ ೨೩ ॥

ದದೌ ಸಿಂಹಾಸನಂ ಛತ್ರಂ ಚಾಮರೇ ಮಂಚಕೋತ್ತಮಂ ।
ಪಾನಪಾತ್ರಂ ಭೋಜನಸ್ಯ ಪಾತ್ರಂ ಹೈಮಂ ಮನೋರಮಂ ॥ ೨೪ ॥

ಕಂಕಣೇ ಕುಂಡಲೇ ಬಾಹುಭೂಷಣೇ ಮುಕುಟೋತ್ತಮಂ ।
ರಾಮಂ ಪ್ರಸ್ಥಾಪಯಾಮಾಸ ಬಧ್ವಾ ಚಿಂತಾಮಣಿಂ ಹೃದಿ ॥ ೨೫ ॥

ಹೃದಿ ಚಿಂತಾಮಣಿಂ ದೃಷ್ಟ್ವಾ ರಾಘವಸ್ಯ ವಿದೇಹಜಾ ।
ಪ್ರಾಹಾತಿಲಜ್ಜಿತಾ ರಾಮಂ ಗೌರ್ಮೇ ಚಿಂತಾಮಣಿಸ್ತವ ॥ ೨೬ ॥

---

೨೩. ನೀನು ಕ್ರೀಡೆಯೆಲ್ಲವನ್ನೂ ಲೋಕಶಿಕ್ಷೆಗೋಸ್ಕರ ಮಾಡುತ್ತಿದ್ದೀಯೆ. ನಿನ್ನ ಚೇಷ್ಟೆಯನ್ನು ನಾನು ಬಲ್ಲೆನು. ಈ ರೀತಿಯಾಗಿ ರಾಮುನನ್ನು ಅವನ ನಾನಾವಿಧವಾದ ಚರಿತ್ರೆಗಳಿಂದ ಸ್ತುತಿಸಿದನು.

೨೪. ಮತ್ತು ಶಿವನು ರಾಮುನಿಗೆ ಒಂದು ಸಿಂಹ್ಮಾಸನವನ್ನೂ ಛತ್ರಿಯನ್ನೂ ಎರಡು ಚಾಮರಗಳನ್ನೂ ಒಂದು ಮಂಚವನ್ನೂ ಒಂದು ಪಾನಪಾತ್ರೆ (ಹಾಲು ಮುಂತಾದುವನ್ನು ಕುಡಿಯುವ ಪಾತ್ರೆ)ಯನ್ನೂ ಚಿನ್ನದ ಭೋಜನ ಪಾತ್ರೆಯನ್ನೂ ಕೊಟ್ಟನು.

೨೫. ಎರಡು ಕೈಬಳೆಗಳನ್ನೂ, ಕರ್ಣಾಭರಣಗಳನ್ನೂ, ಭುಜಕೀರ್ತಿಗಳನ್ನೂ, ಒಂದು ಕಿರೀಟವನ್ನೂ ಕೊಟ್ಟು ಹೃದಯಕ್ಕೆ ಚಿಂತಾಮಣಿಯೆಂಬ ರತ್ನವನ್ನು ಕಟ್ಟಿ ರಾಮುನನ್ನು ಕಳುಹಿಸಿಕೊಟ್ಟನು.

೨೬. ಈ ಸೀತೆಯು ರಾಮುನ ಎದೆಯಲ್ಲಿ ಚಿಂತಾಮಣಿಯನ್ನು ನೋಡಿ ಲಜ್ಜೆಗೊಂಡವಳಾಗಿ ಎಲೈ ರಾಮುನೇ ! ಕಾಮುಧೇನುವು ನನಗೆ. ಚಿಂತಾಮಣಿಯು ನಿನಗೆ. ಎಂಬುದಾಗಿ ಹೇಳಿದಳು.

ತಥೇತಿ ರಾಘವೋಽಪ್ಯುಕ್ತ್ವಾ ವಿಮಾನೇನ ಜನೈಸ್ಸಹ ।
ಯಯೌ ನತ್ವಾ ಶಂಕರಂ ಹಿ ಕೃತ್ವಾ ಯಜ್ಞಾರ್ಥಸೂಚನಾಂ ॥ ೨೭ ॥

ಆಕಾರಯಿತ್ವಾಥ ವಿಧಿಂ ಮಾಸೈಕೇನಾಧ್ವರಾಯ ಹಿ ।
ಭಾಗೀರಥ್ಯಾಸ್ತಟೇನೈವ ಹರಿದ್ವಾರಂ ಯಯೌ ಜವಾತ್ ॥ ೨೮ ॥

ಕುರುಕ್ಷೇತ್ರಂ ವಿಗಾಹ್ಯಾಥ ಹೀಂದ್ರಪ್ರಸ್ಥಂ ತತೋ ಯಯೌ ।
ದೃಷ್ಟ್ವಾ ಮಧುವನಂ ರಮ್ಯಂ ಯಯೌ ಬೃಂದಾವನಂ ತತಃ ॥ ೨೯ ॥

ಗೋಕುಲಂ ವೀಕ್ಷ್ಯ ರಾಮಸ್ತು ಗೋವರ್ಧನಮಗಾಚ್ಛನೈಃ ।
ಗತ್ವಾಥಾವಂತಿಕಾಂ ಪುಣ್ಯಾಂ ಕ್ಷಿಪ್ರಾತೀರವಿರಾಜಿತಾಂ ॥ ೩೦ ॥

ಮಹಾಕಾಲಂ ನಮಸ್ಕೃತ್ಯ ಪಶ್ಯಂಸ್ತೀರ್ಥಾನ್ಯನೇಕಶಃ ।
ದೃಷ್ಟ್ವಾ ರಾಜಾಹ್ವಯಂ ಕ್ಷೇತ್ರಂ ಸಾಗರಂ ಕೂಪಮೀಕ್ಷ್ಯ ಚ ॥ ೩೧ ॥

---

೨೭. ರಾಮನು ಹಾಗೆಯೇ ಆಗಲೆಂದು ಹೇಳಿ ವಿಮಾನದಲ್ಲಿ ಕುಳಿತು ತನ್ನ ಜನರೊಡನೆ ಹೊರಟನು. ಹೊರಡುವಾಗ ಯಜ್ಞಮಾಡಬೇಕೆಂದಿದ್ದೇನೆ. ಎಂದು ಸೂಚಿಸಿ ನಮಸ್ಕರಿಸಿ ಹೊರಟನು.

೨೮. ಬ್ರಹ್ಮನನ್ನೂ ರುದ್ರನನ್ನೂ ಕುರಿತು ನಾನು ಒಂದು ತಿಂಗಳಮೇಲೆ ಯಾಗಮಾಡುತ್ತೇನೆ. ಅದಕ್ಕೆ ಬರಬೇಕು. ಎಂದು ಮತ್ತೆಯೂ ಹೇಳಿದನು ಅಲ್ಲಿಂದ ಹೊರಟು ಗಂಗಾನದಿಯ ದಡದಲ್ಲಿ ಹರಿದ್ವಾರಕ್ಕೆ ಬಂದನು.

೨೯. ಕುರುಕ್ಷೇತ್ರಕ್ಕೆ ಬಂದು ಅಲ್ಲಿಂದ ಇಂದ್ರಪ್ರಸ್ಥಕ್ಕೆ ಹೋದನು. ಅಲ್ಲಿ ರಮ್ಯವಾದ ಮಧುವನವನ್ನು ನೋಡಿ ಬೃಂದಾವನಕ್ಕೆ ಹೋದನು.

೩೦. ಗೋಕುಲದ ದರ್ಶನವನ್ನು ಮಾಡಿ ಮುಂದಕ್ಕೆ ಗೋವರ್ಧನ ಪರ್ವತಕ್ಕೆ ಹೋದನು ಅನಂತರ ಕ್ಷಿಪ್ರಾತೀರದಲ್ಲಿರುವ ಅವಂತಿಕೆಗೆ ಹೋದನು.

೩೧. ಅಲ್ಲಿ ಮಹಾಕಾಲನನ್ನು ನಮಸ್ಕರಿಸಿ ಅನೇಕ ತೀರ್ಥಗಳನು ನೋಡುತ್ತ ಹೊರಟನು. ರಾಜಕ್ಷೇತ್ರವನ್ನು ನೋಡಿ ಸಾಗರಕೂಪವನ್ನು ದರ್ಶಿಸಿದನು.

ಯಯೌ ಸ ನೈಮಿಷಾರಣ್ಯೇ ಗೋಮತ್ಯಾಂ ಸ ವಿಗಾಹ್ಯ ಚ ।
ಸೂತಂ ಪೌರಾಣಿಕಂ ದೃಷ್ಟ್ವಾ ಶೌನಕಾದೀನ್ ಪ್ರಪೂಜ್ಯ ಚ ॥ ೩೨ ॥

ಸ್ನಾತ್ವಾ ತದ್ಬ್ರಹ್ಮವೈವರ್ತಸರಸ್ಯಥ ರಘೂತ್ತಮಃ ।
ತಮಸಾಂ ತಾಂ ವಿಗಾಹ್ಯಾಥ ದದರ್ಶ ನಗರೀಂ ನಿಜಾಂ ॥ ೩೩ ॥

ರಾಮ ಮಾಗತಮಾಜ್ಞಾಯ ಸುಮಂತ್ರೋ ವೇಗವತ್ತರಃ ।
ಅಯೋಧ್ಯಾಂ ಭೂಷಯಾಮಾಸ ಪ್ರೋಚ್ಚೈರ್ನಾನಾವಿಧೈರ್ಧ್ವಜೈಃ ॥೩೪॥

ತೋರಣೈಶ್ಚ ಪತಾಕಾಭಿಃ ಪುಷ್ಪಹಾರೈರ್ಮನೋರಮೈಃ ।
ಶೋಧಯಿತ್ವಾ ರಾಜಮಾರ್ಗಾನ್ ಸೇಚಯಿತ್ವಾ ತು ಚಂದನೈಃ ॥ ೩೫ ॥

ವಿಕೀರ್ಣ ಕುಸುಮೈರ್ದಿವ್ಯೈರ್ಬಲಿದೀಪೈರ್ವಿರಾಜಿತಾನ್ ।
ವಾರಣೇಂದ್ರಂ ಪುರಸ್ಕೃತ್ಯ ಸೇನಯಾ ಪರಿವೇಷ್ಟಿತಃ ॥ ೩೬ ॥

---

೩೨. ನೈಮಿಷಾರಣ್ಯಕ್ಕೆ ಹೋಗಿ ಗೋಮತಿಯಲ್ಲಿ ಸ್ನಾನಮಾಡಿದನು. ಅಲ್ಲಿ ಪೌರಾಣಿಕನಾದ ಸೂತನನ್ನು ನೋಡಿ ಶೌನಕಾನದಿಗಳನ್ನು ಪೂಜಿಸಿದನು.

೩೩. ಬ್ರಹ್ಮವೈವರ್ತದಲ್ಲಿ ಸ್ನಾನಮಾಡಿದನು. ತಮಸಾನದಿಯಲ್ಲಿ ಸ್ನಾನ ಮಾಡಿದನು. ಅನಂತರ ತನ್ನ ಪಟ್ಟಣವಾದ ಅಯೋಧ್ಯೆಗೆ ಹೊರಟನು.

೩೪. ರಾಮನು ಬಂದುದನ್ನು ತಿಳಿದು ಸುಮಂತ್ರನು ಬೇಗನೆ ಅಯೋಧ್ಯೆಯನ್ನು ಬಗೆ ಬಗೆಯಾದ ತೋರಣಬಾವುಟಗಳಿಂದ ಅಲಂಕರಿಸಿದನು.

೩೫. ತೋರಣಗಳಿಂದಲೂ ಪತಾಕೆಗಳಿಂದಲೂ ಚೆನ್ನಾಗಿರುವ ಪುಷ್ಪ ಹಾರಗಳಿಂದಲೂ ಪಟ್ಟಣವನ್ನು ಚೆನ್ನಾಗಿ ಅಲಂಕರಿಸಿದನು. ಅಲ್ಲಿಯ ರಾಜಬೀದಿಗಳನ್ನು ಗುಡಿಸಿಸಿ ಚಂದನದ ನೀರನ್ನು ಚುಮುಕಿಸಿದನು.

೩೬-೩೭. ಎಲ್ಲಾ ಕಡೆಯಲ್ಲಿಯೂ ರಾಜಮಾರ್ಗದಲ್ಲಿ ಹೂವನ್ನೆರಚಿಸಿದನು. ದೊಡ್ಡ ದೊಡ್ಡ ದೀಪಗಳನ್ನಿಡಿಸಿದನು. ಆನೆಯನ್ನು ಮುಂದುಮಾಡಿಕೊಂಡು ಸೇನೆಯಿಂದ ಕೂಡಿಕೊಂಡು ವಾದ್ಯಗಳೊಡನೆ ಪುಷ್ಪಕದಲ್ಲಿದ್ದ ರಾಮನನ್ನು

ಪ್ರತ್ಯುಜ್ಜಗಾಮ ರಾಜೇಂದ್ರಂ ಪುಷ್ಪಕಸ್ಥಂ ತ್ವರಾನ್ವಿತಃ ।
ದಂಡವತ್ಪ್ರಣಿಪತ್ಯಾಥ ದತ್ವಾ ಚೋಪಾಯನಾನಿ ತಂ ॥ ೩೭ ॥

ಆಲಿಂಗಿತೋ ರಾಘವೇಣ ಮೇನೇ ಚ ಕೃತಕೃತ್ಯತಾಂ ।
ತತೋ ವಾದ್ಯನಿನಾದೈಶ್ಚ ನರ್ತನೈರ್ವಾರಯೋಷಿತಾಂ ॥ ೩೮ ॥

ವೇದಘೋಷೈರ್ದ್ವಿಜಾನಾಂ ಚ ರಾಮತೀರ್ಥಂ ಯಯೌ ಶನೈಃ ।
ಸ್ನಾತ್ವಾ ತತ್ಸರಯೂತೋಯೇ ಯತ್ರ ತೀರ್ಥಂ ಸುಪುಣ್ಯದಂ ॥ ೩೯ ॥

ಸ್ವಯಮೇವ ಕೃತಂ ಪೂರ್ವಂ ನಿತ್ಯಕರ್ಮಾರ್ಥಮಾದರಾತ್ ।
ವಸಿಷ್ಠೋಕ್ತವಿಧಾನೇನ ಕೃತ್ವಾ ಚೈಕಮುಪೋಷಣಂ ॥ ೪೦ ॥

ದಧಿಶ್ರಾದ್ಧಂ ವಿಧಾಯಾಥ ದತ್ವಾ ದಾನಾನ್ಯನೇಕಶಃ ।
ತೃತೀಯೇ ದಿವಸೇ ರಾಮೋ ವಿಮಾನೇನ ವಿಹಾಯಸಾ ॥ ೪೧ ॥

ಎದುರುಗೊಳ್ಳಲು ಬಂದನು. ಎದುರುಗೊಂಡು ಅನಂತರ ಧೀರ್ಘದಂಡ ನಮಸ್ಕಾರಗಳನ್ನು ಮಾಡಿ ಕಪ್ಪವನ್ನು ಒಪ್ಪಿಸಿದನು.

೩೮–೩೯. ಅನಂತರ ರಾಮನು ಸುಮಂತ್ರನನ್ನು ಆಲಿಂಗಿಸಿಕೊಳ್ಳಲು ತಾನು ಕೃತಕೃತ್ಯನಾದೆನೆಂದು ತಿಳಿದುಕೊಂಡನು. ಅನಂತರ ವಾದ್ಯಗಳು ಮೊಳಗುತ್ತಿರಲು ನರ್ತಕಿಯರು ಕುಣಿಯುತ್ತಿರಲು ದ್ವಿಜರು ವೇದಘೋಷವನ್ನು ಮಾಡುತ್ತಿರಲು ರಾಮನು ರಾಮತೀರ್ಥಕ್ಕೆ ಹೋದನು. ಅಲ್ಲಿ ಸರಯೂನದಿಯಲ್ಲಿ ಪುಣ್ಯಪ್ರದವಾದ ನೀರಿರುವ ರಾಮತೀರ್ಥದಲ್ಲಿ ಸ್ನಾನಮಾಡಿದನು.

೪೦. ಆ ರಾಮತೀರ್ಥವನ್ನು ರಾಮನೇ ತಾನು ನಿತ್ಯದ ಕರ್ಮಗಳನ್ನು ಮಾಡಲು ನಿರ್ಮಿಸಿದನು. ಅಲ್ಲಿ ವಸಿಷ್ಠನ ಮಾತಿನಂತೆ ಒಂದು ಉಪವಾಸವನ್ನೂ ಮಾಡಿದನು.

೪೧. ದಧಿಶ್ರಾದ್ಧವನ್ನು ಮಾಡಿ ದಾನಗಳನ್ನು ಕೊಟ್ಟು ಮೂರನೆಯ ದಿನದಲ್ಲಿ ವಿಮಾನದಲ್ಲಿ ಕುಳಿತು ಪಟ್ಟಣದ ಕೋಟೆಯನ್ನು ದಾಟಿದನು.

ಪುರ್ಯಾ ವಿಲೋಕ್ಯ ಪ್ರಾಕಾರಾನ್ ಹೇಮರತ್ನವಿನಿರ್ಮಿತಾನ್ ।
ಅಯೋಧ್ಯಾಂ ಶೋಭಿತಾಂ ರಮ್ಯಾಂ ಗೋಪುರಾಟ್ಟಾಲ ಮಂಡಿತಾಂ ॥೪೨॥

ವೀಥೀಹಟ್ಟಸಮಾಯುಕ್ತಾಂ ಚತುಷ್ಪಥವಿರಾಜಿತಾಂ ।
ಪಶ್ಯನ್ ಶ್ರೀಯಂ ರಾಜಸಭಾದ್ವಾರಂ ಪ್ರಾಪ ರಘೂತ್ತಮಂ ॥ ೪೩ ॥

ಯಾನಂ ಭೂಮಂಡಲಂ ಪ್ರಾಪ್ಯ ಸುಖಮಾಸೀತ್ ಸ್ಥಿರಂ ತದಾ ।
ತತಸ್ಸುಮಂತ್ರಪತ್ನೀಭಿರ್ದಧ್ಯೋದನವಿನಿರ್ಮಿತಾಃ ॥ ೪೪ ॥

ಬಲಯಃ ಕಾಂಸ್ಯಪಾತ್ರಸ್ಥಾ ಜಲತೈಲಘಟಾಸ್ತಥಾ ।
ಸೀತಾರಾಘವಯೋರ್ದೇಹಾದುತ್ತೀರ್ಯ ಶತಶಸ್ತದಾ ॥ ೪೫ ॥

ನೀತ್ವಾ ತ್ಯಕ್ತ್ವಾ ವಿದೂರೇ ತು ಸ್ನಾತ್ವಾ ರಾಮಗೃಹಂ ಯಯುಃ ।
ತತೋ ರಾಮೋ ವಿಮಾನಾಗ್ರ್ಯಾದವರುಹ್ಯ ಸ ಬಂಧುಭಿಃ ॥ ೪೬ ॥

---

೪೨. ಆ ಕೋಟೆಗಳನ್ನು ಚಿನ್ನ ಮತ್ತು ರತ್ನಗಳಿಂದ ನಿರ್ಮಿಸಿದ್ದರು. ಅಯೋಧ್ಯೆಯು ರಮ್ಯವಾಗಿ ಶೋಭಿಸುತ್ತಿದ್ದಿತು. ಗೋಪುರಗಳೂ ಮಹಡಿ ಮನೆಗಳೂ ಪ್ರಕಾಶಿಸುತ್ತಿದ್ದುವು.

೪೩. ರಾಜಬೀದಿಗಳು ರಮ್ಯವಾಗಿದ್ದುವು. ಬೀದಿಗಳು ಸೇರುವ ಚೌಕಗಳು ರಮ್ಯವಾಗಿ ಮಾಡಲ್ಪಟ್ಟದ್ದುವು. ಈ ರಮಣೀಯತೆಯನ್ನು ನೋಡುತ್ತ ರಾಮನು ರಾಜಸಭೆಯ ಬಾಗಿಲಿಗೆ ಹೋದನು.

೪೪-೪೬. ಅಲ್ಲಿ ಆ ಪುಷ್ಪಕವು ನೆಲದಮೇಲೆ ನಿಂತುಕೊಂಡಿತು. ಅಲ್ಲಿ ಸುಮಂತ್ರನ ಹೆಂಡತಿಯರು ಮೊಸರನ್ನದಿಂದಮಾಡಿದ ಬಲಿಯನ್ನು ಕಂಚಿನ ಪಾತ್ರೆಯಲ್ಲಿ ತಂದು ಅವನ್ನೂ ನೀರಿನ ಬಿಂದಿಗೆ ಎಣ್ಣೆಯ ಬಿಂದಿಗೆ ಇವನ್ನೂ ಸೀತಾರಾಮರ ದೇಹಕ್ಕೆ ಅನೇಕಬಾರಿ ನಿವಾಳಿಸಿ ದೂರಕ್ಕೆ ತೆಗೆದುಕೊಂಡು ಹೋಗಿ ಹಾಕಿದರು ಮತ್ತು ಸ್ನಾನಮಾಡಿ ರಾಮನ ಮನೆಗೆ ಹೋದರು. ಅನಂತರ ರಾಮನು ವಿಮಾನದಿಂದ ತಮ್ಮಂದಿರೊಡನೆ ಇಳಿದನು.

ನಾಗರೈಸ್ತ್ರೈರ್ನೃಪತಿಭಿಸ್ಸಭಾಯಾಂ ಸಂವಿವೇಶ ಹ ।
ತಸ್ಥೌ ಸಿಂಹಾಸನೇ ರಾಮಶ್ಚಿಂತಾಮಣಿವಿರಾಜಿತಃ ॥ ೪೭ ॥

ತಸ್ಥುಃ ನೃಪಾಸ್ಸಭಾಯಾಂ ಶ್ರೀರಾಘವೇಣಾತಿಮಾನಿತಾಃ ।
ಸೀತಾಪಿ ನಿಜಗೇಹಂ ಸಾ ವಿಚಿತ್ರರತ್ನನಿರ್ಮಿತಂ ॥ ೪೮ ॥

ಕಾಮಧೇನುಂ ಪುರಸ್ಕೃತ್ಯ ಪ್ರವಿವೇಶಾತಿಹರ್ಷಿತಾ ।
ತತೋ ರಾಮಃ ಕಾಮಧೇನುಸಂಭೂತೈಃ ಘೃತಪಾಚಿತೈಃ ॥ ೪೯ ॥

ಪರಮಾನ್ನೈಷ್ಷಡ್ರಸೈಶ್ಚ ಭೋಜಯಾಮಾಸ ಭೂಸುರಾನ್ ।
ಆಚಂಡಾಲಾಂಸ್ತರ್ಪಯಿತ್ವಾ ಸ್ವಯಂ ಕೃತ್ವಾಶನಂ ತದಾ ॥ ೫೦ ॥

ನಿದ್ರಾರ್ಥಂ ನೃಪತೀನ್ ಯಾನೇ ಸ್ಥಲಮಾಜ್ಞಾಪಯತ್ತದಾ ।
ಪಂಚರಾತ್ರಂ ನೃಪಾನ್ ಪ್ರೀತ್ಯಾ ಸ್ಥಾಪಯಿತ್ವಾ ಸ್ವಸನ್ನಿಧೌ ॥ ೫೧ ॥

---

೪೭. ಉಳಿದವರೂ ಇಳಿದರು. ಅನಂತರ ರಾಮನೊಡನೆಯೂ ಊರಿನ ಮುಖ್ಯಸ್ಥರೊಡನೆಯೂ ಸಭೆಯಲ್ಲಿ ಹೋಗಿ ಸಿಂಹಾಸನದಲ್ಲಿ ಕುಳಿತನು. ಹೃದಯ ಪ್ರದೇಶದಲ್ಲಿ ಚಿಂತಾಮಣಿಯು ಪ್ರಕಾಶಿಸುತ್ತಲಿದ್ದಿತು.

೪೮. ರಾಘವನಿಂದ ಗೌರವಿಸಲ್ಪಟ್ಟವರಾಗಿ ರಾಜರೆಲ್ಲರೂ ಸಭೆಯಲ್ಲಿ ಕುಳಿತರು. ಸೀತೆಯೂ ಕೂಡ ಕಾಮಧೇನುವನ್ನು ಹಿಡಿದುಕೊಂಡು ಮಣಿಗಳಿಂದ ಭೂಷಿತವಾದ ತನ್ನ ಮನೆಗೆ ಹೋದಳು.

೪೯-೫೦. ಅನಂತರ ರಾಮನು ಕಾಮಧೇನುವಿನಿಂದ ಉತ್ಪನ್ನವಾದ ತುಪ್ಪದಿಂದ ಮಾಡಿದ ಪದಾರ್ಥಗಳಿಂದಲೂ ಷಡ್ರಸಗಳಿಂದಲೂ ಆದರದಿಂದಲೂ ಬ್ರಾಹ್ಮಣರನ್ನು ಭೋಜನಮಾಡಿಸಿದನು. ಮೇಲುಜಾತಿಯಿಂದ ಮೊದಲುಮಾಡಿಕೊಂಡು ಕೀಳುಜಾತಿಯವರೆಗೂ ಎಲ್ಲರಿಗೂ ತೃಪ್ತಿಪಡಿಸಿದನು. ಅನಂತರ ತಾನು ಊಟಮಾಡಿದನು.

೫೧. ನಿದ್ರೆಯನ್ನು ಮಾಡಲು ಪುಷ್ಪಕಕ್ಕೆ ಹೋಗುವಂತೆ ರಾಜರಿಗೆಲ್ಲಾ ಅಪ್ಪಣೆಮಾಡಿದನು. ಐದುರಾತ್ರಿಗಳವರೆಗೂ ಆ ರಾಜರಿಗೆಲ್ಲಾ ಸ್ನಾನ ಭೋಜನಗಳನ್ನು ಮಾಡಿಸಿಕೊಂಡು ತನ್ನ ಬಳಿಯಲ್ಲಿಯೇ ಇಟ್ಟುಕೊಂಡಿದ್ದನು.

ವಸ್ತ್ರಾಲಂಕಾರ ತುರಗೈಸ್ತೋಷಯಿತ್ವಾ ಸುವಿಸ್ತರಂ ।
ತಾನ್ ಪ್ರೋವಾಚ ರಮಾನಾಥಃ ಪ್ರಬದ್ಧಕರಸಂಪುಟಾನ್ ॥ ೫೨ ॥

ಮಮ ಯಜ್ಞಾಂಗತುರಗಂ ದೃಷ್ಟ್ವಾ ತತ್ಪೃಷ್ಠಗೈಃ ಪುನಃ ।
ಆಗಂತವ್ಯಂ ಪರೀವಾರೈಃ ಸ್ವಸೈನ್ಯೈರ್ನಾಗರೈಸ್ಸಹ ॥ ೫೩ ॥

ಇತ್ಯಾಜ್ಞಾಂ ರಘುವೀರಸ್ಯ ಹ್ಯಂಗೀಕೃತ್ಯ ನೃಪೋತ್ತಮಾಃ ।
ಯಯುಃ ಸ್ವಂ ಸ್ವಂ ಪುರಂ ದೇಶಂ ಸ್ವಬಲೈಃ ಪರಿವೇಷ್ಟಿತಾಃ ॥ ೫೪ ॥

ಸುಗ್ರೀವಾದ್ಯಾನ್ ವಾನರಾಂಶ್ಚ ಪರಿವಾರಸಮನ್ವಿತಾನ್ ।
ಆಜ್ಞಾಪಯಿತ್ವಾ ಸದ್ಮಾನಿ ಸ್ಥಾಪಯಾಮಾಸ ಸ್ವಾಂತಿಕೇ ॥ ೫೫ ॥

---

೫೨. ಅನಂತರ ಅವರನ್ನು ವಸ್ತ್ರಗಳಿಂದಲೂ ಅಲಂಕಾರಗಳಿಂದಲೂ ಕುದುರೆಗಳಿಂದಲೂ ಬಹುಮಾನಿಸಿ ಸಂತೋಷಪಡಿಸಿದನು. ಅವರೆಲ್ಲರೂ ಕೈಮುಗಿದು ಕೊಂಡು ನಿಂತಿರಲು ಅವರನ್ನು ಕುರಿತು ರಾಮನು ಇಂತೆಂದನು.

೫೩. ಎಲೈ ರಾಜರಿರಾ! ನಾನು ಯಜ್ಞಮಾಡುತ್ತೇನೆ. ಆಗ ಕುದುರೆಯನ್ನು ದೇಶಗಳ ಮೇಲೆ ಬಿಡುತ್ತೇನಷ್ಟೆ. ಅದು ನಿಮ್ಮ ದೇಶಕ್ಕೆ ಬಂದಾಗ ನೀವು ಅದನ್ನು ಕಂಡು ಅದರ ಹಿಂದೆ ಬರಬೇಕು. ಆಗ ನಿಮ್ಮ ಸೈನ್ಯವನ್ನೂ ಪರಿವಾರವನ್ನೂ ಪಟ್ಟಣಿಗರನ್ನೂ ಜೊತೆಯಲ್ಲಿ ಕರೆದುಕೊಂಡು ಬರಬೇಕು.

೫೪. ಎಂದು ಆಜ್ಞೆಮಾಡಲು ರಾಮನ ಈ ಆಜ್ಞೆಯನ್ನು ಆ ರಾಜರು ಅಂಗೀಕರಿಸಿ ಅನಂತರ ಅವರೆಲ್ಲರೂ ತಮ್ಮ ತಮ್ಮ ಪರಿವಾರಗಳನ್ನು ಕರೆದುಕೊಂಡು ಅವರವರ ದೇಶಕ್ಕೆ ಹೊರಟು ಹೋದರು.

೫೫. ಸುಗ್ರೀವನೇ ಮುಂತಾದ ಕಪಿಗಳನ್ನೂ ಅವರ ಪರಿವಾರಗಳನ್ನೂ ಕುರಿತು ಅವರನ್ನು ತನ್ನ ಬಳಿಯಲ್ಲಿಯೇ ಇರುವಂತೆ ಹೇಳಿ ಅವರಿಗೆ ಮನೆಗಳನ್ನು ಕೊಟ್ಟನು.

ನಾಜಿಮೇಧಾನಂತರಂ ಹಿ ಪ್ರೇಷಯಿಷ್ಯಾಮ್ಯಹಂ ತ್ವಿತಿ ।
ತತೋ ದುಂದುಭಿನಿರ್ಘೋಷಂ ಸ್ವಪುರ್ಯಾಂ ಘೋಷಯತ್ತದಾ ॥ ೫೬ ॥

ಅದ್ಯಾರಭ್ಯ ಜನೈಸ್ಸರ್ವೈರಯೋಧ್ಯಾಂನಗರೀಂ ಸ್ಥಿತೈಃ ।
ಯೈಃ ಕೈಶ್ಚಿದತ್ರ ಪಥಿಕೈಃ ಭಿನ್ನಪಾಕೈರ್ನ ಭುಜ್ಯತಾಂ ॥ ೫೭ ॥

ಯಾವತ್ಕರೋಮ್ಯಹಂ ಭೂಮ್ಯೋಂ ರಾಜ್ಯಂ ಸೀತಾಸಮನ್ವಿತಃ ।
ನಿಜಗಾರ್ಹಸ್ಥ್ಯಮಾಲಂಬ್ಯ ಯೇ ವರ್ತಂತಿ ನರೋತ್ತಮಾಃ ॥ ೫೮ ॥

ತೇ ಕುರ್ವಂತು ಸುಖಂ ಪಾಕಂ ಸ್ವಸ್ವಗೇಹೇಷು ಭಕ್ತಿತಃ ।
ನಿರ್ಬಂಧೋ ಮಮ ನ ಜ್ಞೇಯೋ ವರ್ತಿತವ್ಯಂ ಯಥಾಸುಖಂ ॥ ೫೯ ॥

ಇತ್ಯಾಜ್ಞಾಪ್ಯ ಜನಾನ್ ರಾಮಃ ಸುಖಂ ತಸ್ಥೌ ಸ ಸೀತಯಾ ।
ಅಯೋಧ್ಯಾಯಾಂ ತು ಸರ್ವತ್ರ ವೇದಘೋಷೋ ಗೃಹೇ ಗೃಹೇ ॥ ೬೦ ॥

---

೫೬. ಅಶ್ವಮೇಧಯಾಗವನ್ನು ಮುಗಿಸಿದಮೇಲೆ ನಿಮ್ಮನ್ನು ಕಳುಹಿಸುತ್ತೇನೆ ಎಂದು ಹೇಳಿದನು. ಅನಂತರ ತನ್ನ ಪಟ್ಟಣದಲ್ಲಿ ರಮಡೋಲನ್ನು ಬಡಿಸುತ್ತ ಇಂತೆಂದು ಸಾರಿಸಿದನು.

೫೭. ಇದು ಮೊದಲುಗೊಂಡು ಈ ಅಯೋಧ್ಯಾಪಟ್ಟಣದಲ್ಲಿರುವ ಜನಗಳೂ ಅವರ ಮನೆಗೆ ಬಂದವರೂ ಮಾರ್ಗವಶದಿಂದ ಈ ಊರಿಗೆ ಬಂದವರೂ ಕೂಡ ಬೇರೆ ಅಡಿಗೆಯನ್ನು ಮಾಡಿ ಭೋಜನಮಾಡಕೂಡದು.

೫೮-೫೯. ನಾನು ಸೀತೆಯೊಡನೆ ಈ ಭೂಮಿಯಲ್ಲಿ ರಾಜ್ಯಭಾರ ಮಾಡುವವರೆವಿಗೂ ಬೇರೆ ಬೇರೆ ಅಡಿಗೆಯನ್ನು ಮಾಡದೆ ನಾನು ಮಾಡಿಸಿದ ಅಡಿಗೆಯಲ್ಲಿಯೇ ಊಟಮಾಡತಕ್ಕದ್ದು ಯಾರು ಯಾರು ತಮ್ಮ ಗೃಹಸ್ಥ ಧರ್ಮವನ್ನು ಅನುಸರಿಸಿಕೊಂಡಿರುವರೋ ಅವರು ತಮ್ಮ ತಮ್ಮ ಮನೆಗಳಲ್ಲಿ ಬೇಕಾದರೆ ಸುಖವಾಗಿ ಅಡಿಗೆಯನ್ನು ಮಾಡಿಕೊಳ್ಳಬಹುದು. ಯಾವೊಲೆಯೂ ನನ್ನ ನಿರ್ಭಂಧವಿರುವುದಿಲ್ಲ. ಸುಖವಾಗಿದ್ದುಕೊಳ್ಳಬಹುದು.

೬೦-೬೧. ರಾಮನು ಈ ರೀತಿಯಾಗಿ ಅಪ್ಪಣೆಮಾಡಿ ಸೀತೆಯೊಡನೆ ಸುಖವಾಗಿದ್ದನು. ಅಯೋಧ್ಯೆಯಲ್ಲಿ ಎಲ್ಲ ಮನೆಗಳಲ್ಲಿಯೂ ವೇದಘೋಷವು

ಮಂಗಲಾನಿ ಸಮುತ್ಸಾಹಾ ನರ್ತನಂ ವಾರಯೋಷಿತಾಂ ।
ಬಭೂವುಶ್ಚ ಪುರಾಣಾನಿ ಕೀರ್ತನಾನಿ ಹರೇಸ್ತಥಾ ॥ ೬೧ ॥
ಏವಮಾಸೀತ್ಸುಸಂತುಷ್ಟಾ ಸಾಕೇತನಗರೀ ಶುಭಾ ।
ಏವಂ ಪ್ರೋಕ್ತಂ ಮಯಾ ಶಿಷ್ಯ ಯಾತ್ರಾಕಾಂಡಮನುತ್ತಮಂ ॥ ೬೨ ॥
ಯೇ ಶೃಣಂತಿ ನರಾ ಭಕ್ತ್ಯಾ ತೇಷಾಂ ಯಾತ್ರಾಫಲಂ ಭವೇತ್ ।
ಯಾತ್ರಾ ಧನಾರ್ಜನೋದ್ಯೋಗೇ ಯಾತ್ರಾಕಾಂಡಮಿದಂ ವರಂ ॥ ೬೩ ॥
ಪಠಿತ್ವಾ ಯೇ ತು ಗಚ್ಛಂತಿ ಸುಖೇನಾಯಾಂತಿ ತೇ ಗೃಹಂ ।
ಬ್ರಹ್ಮಹತ್ಯಾದಿಪಾಪಾನಿ ಕೃತಾನಿ ಮಾನವೈಸ್ಸಕೃತ್ । ॥ ೬೪ ॥
ಯಾತ್ರಾಕಾಂಡಮಿದಂ ಜಪ್ತ್ವಾ ಶುದ್ಧಿಸ್ತೇಭ್ಯೋ ಭವಿಷ್ಯತಿ ।
ಸರ್ವತೀರ್ಥಾವಗಾಹೈಶ್ಚ ಯತ್ಫಲಂ ಪರಿಕೀರ್ತಿತಂ ॥ ೬೫ ॥
ಯಾತ್ರಾಕಾಂಡಮಿದಂ ಶ್ರುತ್ವಾ ತತ್ಫಲಂ ಪ್ರತಿಪದ್ಯತೇ ।
ಧನಾರ್ಥೀ ಧನಮಾಪ್ನೋತಿ ಕಾಮೀ ಕಾಮಾನವಾಪ್ನುಯಾತ್ ॥ ೬೬ ॥

ನಡೆಯುತ್ತಿದ್ದಿತು. ಸಂತೋಷದಿಂದ ಮಂಗಳಕಾರ್ಯಗಳನ್ನು ಮಾಡುತ್ತಿದ್ದರು. ಸೂಳೆಯರ ಕುಣಿತವು ನಡೆಯುತ್ತಿದ್ದಿತು. ಪುರಾಣಗಳೂ ಹರಿಕೀರ್ತನಗಳೂ ನಡೆಯುತ್ತಿದ್ದುವು.

೬೨-೬೩. ಅಯೋಧ್ಯೆಯು ಈ ರೀತಿಯಾಗಿ ಸಂತೋಷದಿಂದಿದ್ದಿತು. ಎಲೈ ಶಿಷ್ಯನೆ! ಈ ರೀತಿಯಾಗಿ ಯಾತ್ರಾಕಾಂಡವನ್ನು ವಿವರಿಸಿದ್ದೇನೆ. ಯಾತ್ರೆ, ಧನಾರ್ಜನೆ ಉದ್ಯೋಗ ಇವುಗಳನ್ನು ಕೊಡಲು ಈ ಕಾಂಡವು ಉತ್ತಮವಾದುದು.

೬೪-೬೬. ಇದನ್ನು ಓದಿ ಪ್ರಯಾಣ ಹೊರಟವರು ಸುಖವಾಗಿ ಮನೆಗೆ ಬಂದು ಸೇರುತ್ತಾರೆ. ಮಾನವರು ಬ್ರಹ್ಮಹತ್ಯಾದಿ ಪಾಪಗಳನ್ನು ಮಾಡಿದ್ದರೂ ಒಂದಾವರ್ತಿ ಈ ಯಾತ್ರಾಕಾಂಡವನ್ನು ಓದಿದರೆ ಆ ಪಾಪಗಳನ್ನು ಕಳೆದುಕೊಳ್ಳುತ್ತಾರೆ. ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡಿದರೆ ಯಾವ ಫಲವು ಬರುತ್ತದೆ ಎಂದು ಹೇಳದೆಯೋ ಆ ಫಲವನ್ನು ಈ ಯಾತ್ರಾಕಾಂಡವನ್ನು ಓದಿದರೆ ಹೊಂದುತ್ತಾರೆ. ಧನಾರ್ಥಿಯಾದವರು ಧನವನ್ನೂ ಇಷ್ಟಾರ್ಥಗಳನ್ನು ಅಪೇಕ್ಷಿಸುವವರು ಇಷ್ಟಗಳನ್ನೂ ಹೊಂದುತ್ತಾರೆ.

ಪಾಪೀ ಪೂತೋ ಭವೇತ್ಸದ್ಯೋ ಯಾತ್ರಾಕಾಂಡಶ್ರವಾದಿನಾ ।
ಯಃ ಕಶ್ಚಿತ್ಪ್ರಾತರುತ್ಥಾಯ ಕೃತಶೌಚವಿಧಿರ್ನರಃ ॥ ೬೭ ॥

ತೀರ್ಥಾನಾಂ ಚ ವರಂ ಕಾಂಡಮಿದಂ ಪುಣ್ಯಂ ಪಠಿಷ್ಯತಿ ।
ತಸ್ಯ ರಾಮಶ್ಚ ಸಂತುಷ್ಟಃ ಪೂರಯಿಷ್ಯತಿ ವಾಂಛಿತಂ ॥ ೬೮ ॥

ಸರ್ವತೀರ್ಥಾವಗಾಹಸ್ಯ ಫಲಂ ತಸ್ಯ ಭವೇದ್ಧ್ರುವಂ ।
ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ ॥ ೬೯ ॥

ತಾನಿ ಸರ್ವಾಣಿ ನಶ್ಯಂತಿ ಯಾತ್ರಾಕಾಂಡ ಶ್ರವಾದಿನಾ ॥ ೭೦ ॥

ಇತಿ ಶ್ರೀಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದ ರಾಮಾಯಣೇ ವಾಲ್ಮೀಕೀಯೇ ಯಾತ್ರಾಕಾಂಡೇ ರಾಮೋತ್ತರಯಾತ್ರಾ, ನಗರ ಪ್ರವೇಶಂ ನಾಮ ನವಮಸ್ಸರ್ಗಸ್ಸಮಾಪ್ತಃ

॥ ಯಾತ್ರಾಕಾಂಡಃ ದ್ವಿತೀಯಃ ಸಂಪೂರ್ಣಃ ॥

ಶ್ರೀರಾಮಚಂದ್ರಾರ್ಪಣಮಸ್ತು

೬೭–೬೮. ಯಾತ್ರಾಕಾಂಡವನ್ನು ಕೇಳಿದೊಡನೆಯೇ ಪಾಪಿಯಾದವನ್ನು ಪರಿಶುದ್ಧನಾಗುತ್ತಾನೆ. ಪ್ರಾತಃಕಾಲದಲ್ಲಿ ಎದ್ದು ಶೌಚಾದಿನಿತ್ಯಕರ್ಮಗಳನ್ನು ಮಾಡಿಕೊಂಡು ಈ ಪುಣ್ಯಕರವಾದ ಯಾತ್ರಾಕಾಂಡವನ್ನು ಪಠಿಸಿದರೆ ಅವನ ವಿಷಯದಲ್ಲಿ ರಾಮನು ಸಂತುಷ್ಟನಾಗಿ ಅವನ ಇಷ್ಟಾರ್ಥಗಳನ್ನು ಬಹುವಾಗಿ ಕೊಡುತ್ತಾನೆ.

೬೯-೭೦. ಅಲ್ಲದೆ ಎಲ್ಲ ತೀರ್ಥಗಳಲ್ಲಿಯೂ ಸ್ನಾನಮಾಡಿದ ಫಲವನ್ನು ಹೊಂದುತ್ತಾನೆ. ಜನ್ಮಾಂತರದಲ್ಲಿ ಮಾಡಿದ ಸಕಲವಿಧವಾದ ಪಾಪಗಳೂ ಈ ಯಾತ್ರಾಕಾಂಡವನ್ನು ಕೇಳಿದರೆ ಹೋಗುತ್ತವೆ.

ಇಂತು ಶ್ರೀವಾಲ್ಮೀಕಿಯು ವಿರಚಿಸಿದ ಶತಕೋಟಿ ರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ ಶ್ರೀರಾಮನ ಉತ್ತರ ದೇಶದ ಯಾತ್ರೆ, ನಗರಪ್ರವೇಶವೆಂಬ ಒಂಭತ್ತನೆಯ ಸರ್ಗವು ಸಮಾಪ್ತವು.

॥ ಎರಡನೆಯದಾದ ಯಾತ್ರಾಕಾಂಡವು ಮುಗಿದುದು ॥

ಶ್ರೀರಾಮಚಂದ್ರಾರ್ಪಣವಾಗಲಿ.

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಯಾತ್ರಾಕಾಂಡದಲ್ಲಿ
॥ ಒಂಭತ್ತನೆಯ ಸರ್ಗದ ಸಾರಾಂಶವು ॥

ಅನಂತರ ಶ್ರೀರಾಮನು ಉತ್ತರಮುಖವಾಗಿ ಹೊರಟು ಪರ್ವತತೀರ್ಥಕ್ಕೆ ಹೋದನು. ಅನಂತರ ಜ್ವಾಲಾಮುಖಿಗೆ ಹೋಗಿ ಕರತೋಯಾನದಿಯಲ್ಲಿ ಸ್ನಾನಮಾಡಿದನು. ಅನಂತರ ಮುಂದಕ್ಕೆ ಪ್ರಯಾಣ ಮಾಡಲಿಲ್ಲ. ಕರ್ಮ ಪಾಶಾನದಿಯ ನೀರನ್ನು ಮುಟ್ಟಿದರೂ ಕರತೋಯಾ ನದಿಯನ್ನು ದಾಟಿದರೂ ಗಂಡಕಿ ನದಿಯನ್ನು ಈಜಿಕೊಂಡು ದಾಟಿದರೂ ತಾನುಮಾಡಿದ ಧರ್ಮವನ್ನು ಬಾಯಲ್ಲಿ ಹೇಳಿದರೂ ಧರ್ಮವು ನಾಶವಾಗುತ್ತದೆ. ಆದ್ದರಿಂದ ಅಲ್ಲಿಂದಲೇ ಹಿಂದಿರುಗಿದನು. ಅಲ್ಲಿಂದ ದೇವಪ್ರಯಾಗಕ್ಕೆ ಹೋಗಿ ಅಲಕನಂದೆಯ ದಡದಲ್ಲಿಯೇ ಹೊರಟು ಬದರಿಗೆ ಹೋದನು. ಹಿಮವತ್ಪರ್ವದಲ್ಲಿರುವ ಮಾನಸಸರೋವರವನ್ನು ಹೊಂದಿ ಅಲ್ಲಿ ಸ್ನಾನಮಾಡಿದನು. ಅಲ್ಲಿಂದ ಹೊರಟು ಮುಂದೆ ಬಿಂದು ಸರೋವರಕ್ಕೆ ಹೋದನು. ಅಲ್ಲಿ ಸ್ನಾನಮಾಡಿ ದಾನಗಳನ್ನು ಕೊಟ್ಟು ಆ ಹಿಮವತ್ಪರ್ವತದಲ್ಲಿರುವ ಬ್ರಹ್ಮಸಭೆಗೆ ಹೋದನು. ಅಲ್ಲಿದ್ದ ಬ್ರಹ್ಮನು ದೇವತೆಗಳೊಡನೆ ಬಂದು ನಮಸ್ಕರಿಸಲು ಅವರನ್ನು ಆಲಂಗಿಸಿಕೊಂಡನು. ಬ್ರಹ್ಮನು ರಾಮನಿಗೆ ಪೂಜೆಮಾಡಿ ಕಾಮಧೇನುವನ್ನು ಒಪ್ಪಿಸಿದನು. ರಾಮನು ಆ ಕಾಮಧೇನುವನ್ನು ವಿಮಾನದ ಮೇಲುಭಾಗದಲ್ಲಿ ಸ್ಥಳವನ್ನು ಮಾಡಿ ಇಟ್ಟನು.

ಅನಂತರ ರಾಮನು ಅವರೆಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಕೈಲಾಸಕ್ಕೆ ಹೋದನು. ರಾಮನು ಬಂದುದನ್ನು ತಿಳಿದು ಶಿವನು ಅವನನ್ನು ಎದುರುಗೊಂಡನು. ಶಂಭುವು ಬಂದುದನ್ನು ನೋಡಿ ರಾಮನು ಪುಷ್ಪಕದಿಂದಿಳಿದು

ನಮಸ್ಕರಿಸಿದನು. ಪಾರ್ವತಿಯೂ ಸೀತೆಯನ್ನು ಆಲಂಗಿಸಿಕೊಂಡು ಪೂಜಿಸಿ ಅನೇಕ ಆಭರಣಗಳನ್ನು ಕೊಟ್ಟಳು. ಶಿವನೂ ಕೂಡ ಈ ರಾಮನಿಗೆ ಚಿಂತಾಮಣಿ ರತ್ನವನ್ನು ಕೊಟ್ಟು ಪೂಜಿಸಿದನು.

ಅನಂತರ ಶಿವನು ರಾಮನನ್ನು ಕುರಿತು ಎಲೈ ರಾಮನೇ ! ಬ್ರಹ್ಮನು ನಿನ್ನ ನಾಭಿಕಮಲದಲ್ಲಿ ಹುಟ್ಟಿದುದರಿಂದ ಅವನು ನಿನಗೆ ಮಗನಾದನು. ಆ ಬ್ರಹ್ಮನಿಂದ ನಾನು ಹುಟ್ಟಿದೆನು. ಆದ್ದರಿಂದ ನಾನು ನಿನಗೆ ಮೊಮ್ಮಗನಾದೆನು. ಆ ನಾನು ನಿನ್ನ ಅಪ್ಪಣೆಯನ್ನು ಪಾಲಿಸುತ್ತಾ ನಿನ್ನ ಅಪ್ಪಣೆಯನ್ನು ಹೊಂದಿ ಈ ಪ್ರಪಂಚವನ್ನೇ ಸಂಹಾರಮಾಡುತ್ತೇನೆ. ಆ ಪಾಪವು ನಿನಗೆಬರುವುದಲ್ಲಾ ! ಅದು ಎಲ್ಲಿಗೆ ಹೋಯಿತು ? ಈಗ ಮಾತ್ರ ರಾವಣನನ್ನು ಕೊಂದುದರಿಂದ ಪಾಪವು ಬಂದಿತೆಂದು ತೀರ್ಥಯಾತ್ರೆಯನ್ನು ಮಾಡುತ್ತಿದ್ದೀಯೆ. ಎಲೈ ರಾಜೇಂದ್ರನೇ ! ಇದು ನಿನ್ನದೊಂದು ಕ್ರೀಡೆಯಾಗಿರುವುದು. ಇದನ್ನು ಲೋಕಶಿಕ್ಷೆಗಾಗಿ ಮಾಡುತ್ತೀಯೆ ಎಂಬುದು ನನಗೆ ಗೊತ್ತು. ಇದು ನಿನ್ನದೊಂದು ಚೇಷ್ಟೆ. ಇವೇ ಮೊದಲಾದ ಚರಿತ್ರೆಗಳಿಂದ ಶಿವನು ರಾಮನನ್ನು ಸ್ತುತಿಸಿದನು.

ಸೀತೆಯು ರಾಮನಿಗೆ ಶಿವನು ಚಿಂತಾಮಣಿಯನ್ನು ಕೊಟ್ಟುದನ್ನು ನೋಡಿ ಎಲೈ ರಾಮನೇ ! ಚಿಂತಾಮಣಿಯು ನಿನಗೆ ಕಾಮಧೇನುವು ನನಗೆ ಎಂದಳು. ರಾಮನು ಹಾಗೆಯೇ ಆಗಲೆಂದು ಹೇಳಿ ಎಲ್ಲರೊಡನೆಯೂ ಹೊರಟನು. ಹೊರಡುವಾಗ ನಾನು ಯಾಗವನ್ನು ಮಾಡುತ್ತೇನೆ ಆಗ ನೀವು ಬರಬೇಕು ಎಂದು ಶಿವ ಬ್ರಹ್ಮರಿಗೆ ಸೂಚನೆಯನ್ನು ಕೊಟ್ಟನು. ಅಲ್ಲಿಂದ ಹೊರಟು ಹರಿದ್ವಾರಕ್ಕೆ ಬಂದನು. ಅಲ್ಲಿಂದ ಮಧುವನ, ವೃಂದಾವನ, ಗೋಕುಲಗಳಿಗೆ ಹೋಗಿ ಅಲ್ಲಿಂದ ನೈಮಿಷಾರಣ್ಯಕ್ಕೆ ಬಂದನು. ಅಲ್ಲಿ ಸೂತಶೌನಕರನ್ನು ನೋಡಿ ಅವರಿಗೆ ನಮಸ್ಕರಿಸಿದನು. ಅಲ್ಲಿಂದ ಹೊರಟು ಬ್ರಹ್ಮವೈವರ್ತದಲ್ಲಿ ಸ್ನಾನಮಾಡಿ ಮುಂದೆ ಬರಲು ತನ್ನ ಪಟ್ಟಣವು ಸಿಕ್ಕಿತು.

ರಾಮನು ಬಂದುದನ್ನು ತಿಳಿದು ಸುಮಂತ್ರನು ಬೇಗನೆ ಅಯೋಧ್ಯೆಯನ್ನು ಅಲಂಕರಿಸಿದನು. ಅನಂತರ ಸೇನೆಯೊಡನೆ ಹೋಗಿ ಆ ರಾಮನನು

ಎದರುಗೊಂಡು ನಮಸ್ಕರಿಸಿಸಲು ರಾಮನು ಆತನನ್ನು ಆಲಂಗಿಸಿ ಸತ್ಕರಿಸಿದನು. ಅಲ್ಲಿ ಸರಯೂ ನದಿಯಲ್ಲಿ ರಾಮತೀರ್ಥದಲ್ಲಿ ರಾಮನು ವಸಿಷ್ಠನ ಅಪ್ಪಣೆಯಂತೆ ಸ್ನಾನಮಾಡಿ ಉಪವಾಸವಿದ್ದನು. ತೀರ್ಥ ಶ್ರಾದ್ಧಗಳನ್ನು ಮಾಡಿದನು. ಅನಂತರ ಅಯೋಧ್ಯೆಗೆ ಹೊರಟು ಅರಮನೆಯಿಲ್ಲಿರುವ ಸಭೆಗೆ ಬಂದನು. ಆಗ ಎಲ್ಲರೂ ರಾಮನಿಗೆ ಆರತಿಯನ್ನು ಬೆಳಗಿದರು. ರಾಮನು ಸಿಂಹಾಸನದಲ್ಲಿ ಕುಳಿತನು. ರಾಜರೂ ಸಭೆಗೆ ಹೋಗಿ ಆ ರಾಮನಿಂದ ವಸ್ತ್ರಾಲಂಕಾರಗಳಿಂದ ಗೌರವಿತರಾದರು. ಸೀತೆಯು ಕಾಮಧೇನುವಿನೊಡನೆ ತನ್ನ ಮನೆಗೆ ಹೋದಳು. ಅನಂತರ ಅಲ್ಲಿನವರಿಗೆಲ್ಲ ಭೋಜನವನ್ನು ಮಾಡಿಸಿದನು.

ಅನಂತರ ರಾಜರನ್ನು ಕುರಿತು ನನ್ನ ಯಜ್ಞದ ಕುದುರೆಯು ನಿಮ್ಮ ಪಟ್ಟಣ ಗಳಿಗೆ ಬಂದಾಗ ಅದರ ಜೊತೆಯಲ್ಲಿ ನೀವು ಬರಬೇಕೆಂದು ಹೇಳಿ ಅವರೆಲ್ಲರನ್ನೂ ಅವರವರ ದೇಶಕ್ಕೆ ಕಳುಹಿಸಿದನು. ಸುಗ್ರೀವನೇ ಮುಂತಾದ ಕಪಿಗಳನ್ನು ಅಲ್ಲಿಯೇ ಇಟ್ಟುಕೊಂಡನು.

ತಾನು ಎಲ್ಲರಿಗೂ ಭೋಜನವನ್ನು ಮಾಡಿಸುತ್ತ ಇನ್ನುಮೇಲೆ ಯಾರೂ ಕಾರಣವಿಲ್ಲದೆ ತಮ್ಮ ತಮ್ಮ ಮನೆಗಳಲ್ಲಿ ಅಡಿಗೆ ಊಟಗಳನ್ನು ಮಾಡಕೂಡದು. ನಮ್ಮ ಛತ್ರದಲ್ಲಿಯೇ ಊಟಮಾಡಬೇಕು. ಎಂದು ಆಜ್ಞಾಪಿಸಿದನು. ಆಗ ಆ ಅಯೋಧ್ಯೆಯೇ ಸಂತೋಷದಿಂದಿದ್ದಿತು.

ಈ ರೀತಿಯಾಗಿ ಶ್ರೀರಾಮನ ತೀರ್ಥಯಾತ್ರೆಗಳು ಪೂರ್ಣವಾದುವು.

ಶ್ರೀಮದಾನಂದರಾಮಾಯಣೇ ಯಾತ್ರಾಕಾಂಡಃ ದ್ವಿತೀಯಃ
ಸಂಪೂರ್ಣಃ



ಶ್ರೀಮದಾನಂದರಾಮಾಯಣದಲ್ಲಿ ಎರಡನೆಯದಾದ ಯಾತ್ರಾಕಾಂಡವು
ಮುಗಿದುದು